ವೃತ್ತಿನಿರತ ವಚನಕಾರರು : ವಚನಗಳ ಅಭಿವ್ಯಕ್ತಿ ಸ್ವರೂಪ ಮತ್ತು ತಾತ್ವಿಕತೆ

ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ

ಸಂಶೋಧಕರು

ದಂಡೆ ನಂದೀಶ್ವರ

ಮಾರ್ಗದರ್ಶಕರು

ಡಾ. ಎನ್. ಅಮರೇಶ

ಪ್ರಾಧ್ಯಾಪಕರು

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩ ೨೭೬

೨೦೧೬

ವೃತ್ತಿನಿರತ ವಚನಕಾರರು :

ವಚನಗಳ ಅಭಿವ್ಯಕ್ತಿ ಸ್ವರೂಪ ಮತ್ತು ತಾತ್ವಿಕತೆ

ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ

ಸಂಶೋಧಕರು
ದಂಡೆ ನಂದೀಶ್ವರ

ಮಾರ್ಗದರ್ಶಕರು
ಡಾ. ಎನ್. ಅಮರೇಶ
ಪ್ರಾಧ್ಯಾಪಕರು
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೧೬

ಮಾರ್ಗದರ್ಶಕರ ದೃಢೀಕರಣ ಪತ್ರ

ದಂಡೆ ನಂದೀಶ್ವರ ಅವರು **'ವೃತ್ತಿನಿರತ ವಚನಕಾರರು : ವಚನಗಳ ಅಭಿವ್ಯಕ್ತಿ ಸ್ವರೂಪ ಮತ್ತು ತಾತ್ವಿಕತೆ'** ಎಂಬ ಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಅವರು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ
ದಿನಾಂಕ: 16/8/14

ಡಾ. ಎನ್. ಅಮರೇಶ
ಪ್ರಾಧ್ಯಾಪಕರು
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸಂಶೋಧಕರ ಪ್ರಮಾಣ ಪತ್ರ

'ವೃತ್ತಿನಿರತ ವಚನಕಾರರು : ವಚನಗಳ ಅಭಿವ್ಯಕ್ತಿ ಸ್ವರೂಪ ಮತ್ತು ತಾತ್ವಿಕತೆ' ಎಂಬ ಮಹಾಪ್ರಬಂಧವನ್ನು ಡಾ. ಎನ್. ಅಮರೇಶ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಪಿಎಚ್.ಡಿ. ಪದವಿಗಾಗಿ ಭಾಷಾ ನಿಕಾಯದ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಈ ಮಹಾಪ್ರಬಂಧವು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ
ದಿನಾಂಕ: 16.8.16

ದಂಡೆ ನಂದೀಶ್ವರ
ಸಂಶೋಧಕ
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಪರಿವಿಡಿ

ಅಧ್ಯಾಯ ೧

ಅಧ್ಯಯನದ ಸ್ವರೂಪ, ಮಹತ್ವ, ವ್ಯಾಪ್ತಿ ಹಾಗೂ ವೈಧಾನಿಕತೆ

- ಪ್ರವೇಶ
- ಅಧ್ಯಯನದ ಮಹತ್ವ
- ಅಧ್ಯಯನದ ವ್ಯಾಪ್ತಿ
- ಅಧ್ಯಯನದ ವೈಧಾನಿಕತೆ

ಅಧ್ಯಾಯ : ಒಂದು

ಅಧ್ಯಯನದ ಸ್ವರೂಪ, ಮಹತ್ವ, ವ್ಯಾಪ್ತಿ ಹಾಗೂ ವೈಧಾನಿಕತೆ

ಪ್ರವೇಶ

ಹನ್ನೆರಡನೇ ಶತಮಾನದ ವಚನ ಸಾಹಿತ್ಯ ಚಳುವಳಿಯು ಅನೇಕ ಹೊಸ ತಾತ್ವಿಕತೆಯನ್ನು ಹುಟ್ಟುಹಾಕಿತು. ಹಲವಾರು ಪರಿಕಲ್ಪನೆಗಳ ಮೂಲಕ ಸಾಮಾಜಿಕ ಹೋರಾಟವಾಗಿ ಬೆಳೆದು ಬಂದಿತು. ಅದರಲ್ಲೂ ಕಾಯಕ ಜೀವಿಗಳ ಪಾಲಿಗೆ ಕ್ರಾಂತಿಯಾಗಿ ಕುಲಕಸುಬುಗಳನ್ನು ಮಾಡುತ್ತಿದ್ದ ವೃತ್ತಿನಿರತರನ್ನು ಭದ್ರವಾಗಿ ಹಿಡಿದುಕೊಂಡಿದ್ದುದು ಬಲಿಷ್ಟವಾಗಿದ್ದ ಪರಂಪರೆ. ಇಂತಹ ವ್ಯವಸ್ಥೆಯ ವಿರುದ್ಧ ಪ್ರತಿಭಟನೆಗೆ ಸಿದ್ಧಗೊಂಡವರು ವೃತ್ತಿನಿರತ ವಚನಕಾರರು. ಇವರು ವಿವಿಧ ಕುಲವೃತ್ತಿಯಲ್ಲಿ ತೊಡಗಿದ್ದವರೆ ಆಗಿದ್ದಾರೆ. ಇವರ ವೃತ್ತಿಗೆ, ವೃತ್ತಿ ಮಾಡುವವರಿಗೆ ಸಮಾಜದಲ್ಲಿ ಯಾವುದೇ ಮಾನ್ಯತೆಯಾಗಲಿ, ಸೌಲಭ್ಯಗಳಾಗಲಿ ಇರಲಿಲ್ಲ. ಅಂತಹ ಸೌಲಭ್ಯಗಳೇನಿದ್ದರು ಅವು ಮೇಲ್ವರ್ಗಕ್ಕೆ ಅಥವಾ ವ್ಯವಸ್ಥೆಯನ್ನು ನಿಭಾವಣೆ ಅಥವಾ ನಿಗಾವಣೆ ಮಾಡುವವರಿಗೆ ಸೀಮಿತವಾಗಿದ್ದವು. ಇದರಿಂದ ಬಹುಸಂಖ್ಯಾತರಾಗಿದ್ದ ಕುಲಕಸುಬುದಾರರು ಧಾರುಣ ಬದುಕನ್ನು ಬದುಕಬೇಕಿತ್ತು. ಅವರ ದುಡಿಮೆಯ ಫಲ ಮಾತ್ರ ಅನ್ಯರಿಗೆ ತಲುಪಬೇಕಿತ್ತು. ಇಂತಹ ಸಮಕಾಲೀನ ಪ್ರಪಂಚದಲ್ಲಿದ್ದ ವರ್ಗ, ಚಾತುರ್ವರ್ಣ ಪದ್ಧತಿಯಿಂದಲೂ ಸಮಾಜ ಅನೇಕ ಶೋಷಣೆಗೆ ಒಳಗಾಗಿ ಬಿಟ್ಟಿತ್ತು. ಜಾತಿ ಮೂಲದಿಂದ ನಲುಗಿ ಹೋಗಿತ್ತು. ವೈದಿಕ ಧರ್ಮ ತನ್ನಲ್ಲಿ ಮತ್ತು ಸಮಾಜದ ಇನ್ನಿತರ ವರ್ಣಗಳಾದ ಶೂದ್ರ ಮತ್ತು ಪಂಚಮರನ್ನು ತನ್ನ ಅಧೀನದಲ್ಲಿಟ್ಟುಕೊಂಡು ಶೋಷಣೆ ಮಾಡುತ್ತಿತ್ತು. ಮೂಲವಾಗಿ ಅಸ್ಪಶ್ಯರು, ಕೆಳವರ್ಗದವರು ಆದ ಪಂಚಮರು ಅತ್ಯಂತ ಕೆಳಗಿನ ಸ್ಥಾನದಲ್ಲಿದ್ದರು. ಅವರನ್ನು ತಮ್ಮ ಬದುಕಿನ ಉಪಯೋಗಕ್ಕಾಗಿಯೇ ತಮ್ಮ ಸ್ವಾರ್ಥ ಸಾಧನೆಗಾಗಿಯೇ ಅಂದಿನ ಬಲಿಷ್ಠ ವರ್ಗವು ಬಳಸಿಕೊಳ್ಳುತ್ತಿತ್ತು. ಕೆಳವರ್ಗದವರಿಂದ ಸಾಕಷ್ಟು ಉಪಯೋಗವನ್ನು ಪಡೆದರೂ, ಅವರನ್ನು ಕಡೆಗಾಣಿಸಲಾಗುತ್ತಿತ್ತು. ಅವರು ಮನುಷ್ಯರು, ಅವರಿಗೂ ಒಂದು ಮನಸ್ಸು ಅನ್ನುವುದಿದೆ ಎಂಬ ಭಾವನೆಯೇ ಮೇಲ್ವರ್ಗದವರಲ್ಲಿ ಇರಲಿಲ್ಲ. ತಮಗೆ ಎಷ್ಟು ಸಾಧ್ಯವೋ ಅಷ್ಟು ಶೋಷಣೆಗೆ ಒಳಪಡಿಸುವುದು ಅವರ ಪ್ರತಿಷ್ಠೆಯಾಗಿ ಬಿಟ್ಟಿತ್ತು. ಹಾಗಾಗಿ ಶೋಷಕ ಸಮುದಾಯಕ್ಕೆ, ಸಮೂಹಕ್ಕೆ

ಸಮಾನತೆಯ ದೃಷ್ಟಿ ಕುರುಡಾಗಿ ಬಿಟ್ಟಿತ್ತು. ಆದರೆ ಇಡೀ ಮಾನವ ಸಮಾಜದ ಉಸಿರು ಪಂಚಮರಿಂದ, ಕೆಳವರ್ಗದವರಿಂದ, ಶೂದ್ರರಿಂದ ನಡೆಯುತ್ತಿತ್ತು. ಇವರ ದುಡಿಮೆಯಿಂದಲೇ ಮೇಲ್ವರ್ಗದವರ ಬದುಕು ಹಸನವಾಗಿತ್ತು. ಆದರೂ ಇದನ್ನು ಶೂದ್ರರಾಗಲಿ, ವೈಶ್ಯರಾಗಲಿ, ಕ್ಷತ್ರಿಯರಾಗಲಿ, ಬ್ರಾಹ್ಮಣರಾಗಲಿ ಪರಿಗಣಿಸುತ್ತಿರಲಿಲ್ಲ. ದೇವರು, ಧರ್ಮ, ವಿದ್ಯೆ ಇವರ ಪಾಲಿಗೆ ಇರಲೇ ಇಲ್ಲ. ಸಮಾಜದ ಕೊನೆಯ ಅಂಚಿನಲ್ಲಿ ಮೂಲೆಯಲ್ಲಿ ಮತ್ತು ಕತ್ತಲಲ್ಲಿ ಇವರ ಜೀವನ ಸಾಗುತ್ತಿತ್ತು. ಭಾರತದಲ್ಲಿ ಭಕ್ತಿ ಚಳುವಳಿ ಆರಂಭವಾದ ಮೇಲೆ ಇಂತವರು ಭಕ್ತಿಪಂಥಕ್ಕೆ ಸೇರುವ ಮೂಲಕ ಸಮಾನತೆಯನ್ನು ಕಂಡುಕೊಳ್ಳುವ ಪ್ರಯತ್ನ ಮಾಡಿದರು. ಭಕ್ತಿಪಂಥಕ್ಕೆ ಸೇರಿಕೊಂಡು ಭಕ್ತರಾದವರು ಸಮಾಜದಲ್ಲಿ ಶ್ರೇಷ್ಠ ಎಂಬ ಪರಿಕಲ್ಪನೆ ಮೂಡತೊಡಗಿತು. ಸಮಾಜದ ಬೇರೆ ಬೇರೆ ವರ್ಗಗಳಲ್ಲಿ ಭಕ್ತಿ ಚಳುವಳಿ ವಿವಿಧ ಸ್ತರಗಳಲ್ಲಿ ಜಾಗೃತಿಯನ್ನುಂಟು ಮಾಡುವ ಪ್ರಯತ್ನ ಮಾಡಿತು. ಅನಾದಿ ಕಾಲದಿಂದಲೂ ಮೇಲ್ವರ್ಗವಾಗಿ ಬೆಳೆದಿದ್ದ ಪರಂಪರೆಯ, ಸಮುದಾಯದಿಂದ ಹಿಡಿತಕ್ಕೊಳಗಾಗಿದ್ದ ಧರ್ಮ, ದೇವರು, ಕರ್ಮ, ಯಜ್ಞಯಾಗ, ಆಚರಣೆಗಳು, ಮಡಿ, ಮೈಲಿಗೆ ಮುಂತಾದ ಹೆಸರುಗಳ ಮೂಲಕ ನಡೆಸುತ್ತಿದ್ದ ಶೋಷಣೆಗೆ ಭಕ್ತಿ ಚಳುವಳಿ ಮಹಾ ಅಘಾತವನ್ನು ತಂದಿತು. ಇದಕ್ಕೆ ಘೋಷಿತವಾಗಿ ತಡೆಯನ್ನುಂಟು ಮಾಡಿತು. ಇದರ ಪರಿಣಾಮವಾಗಿ ಪಂಚಮರು, ಶೂದ್ರರು ಸಮಾಜದ ಕೆಳಸ್ತರದ ವರ್ಗ, ಜಾತಿಗಳೆಂದು ಕರೆಯಲಾಗುತ್ತಿದ್ದವರು ಭಕ್ತಿ ಚಳುವಳಿಯಲ್ಲಿ ಸೇರಿ, ತಮ್ಮ ಸ್ಥಾನಮಾನಗಳನ್ನು ಸುಧಾರಿಸಿಕೊಂಡರು. ಇದರಿಂದ ನೆಮ್ಮದಿಯ ಬದುಕಿನ ಹಾದಿ ಸಿಗತೊಡಗಿತು.

ಕಾಶ್ಮೀರದಲ್ಲಿ ಶೈವ ಪರಂಪರೆಯಿಂದ ಆರಂಭಗೊಂಡ ಭಕ್ತಿಪಂಥವು ಹಲವಾರು ಶತಮಾನಗಳ ಕಾಲದ ವಿಸ್ತಾರದ ಸಮಯದಲ್ಲಿ ಇಡೀ ದೇಶವ್ಯಾಪ್ತಿ ಸುತ್ತುವರಿಯಿತು. ಅಲ್ಲಿಯ ತನಕ ಇದ್ದ ಶೈವ ಪರಂಪರೆಯ ಘಟಕಗಳಾದ ಕಾಪಾಲಿಕ, ಕಾಳಮುಖ, ಪಾಶುಪತ, ಲಕುಲೀಶ ಮುಂತಾದ ಶೈವ ಪರಂಪರೆಗಳಿದ್ದವು. ಕಾಲಕ್ರಮೇಣ ಇವರಗಳ ಆಚರಣೆಯಲ್ಲಿ ಅತ್ಯಂತ ಹೇಯವಾದ ಆಚರಣೆಗಳು ರೂಢಿಗೆ ಬಂದಿದ್ದವು. ಇವುಗಳಿಂದ ಅನೇಕ ತೊಂದರೆಗಳು ಏರ್ಪಟ್ಟಿದ್ದವು. ಇಂತಹ ಪ್ರವೃತ್ತಿಯಿಂದ ಬೇಸತ್ತು ಹೊಸ ಶೈವ ಪರಂಪರೆಯೊಂದು ಭಕ್ತಿಪಂಥದ ಮೂಲಕ ಸಿದ್ಧಗೊಂಡಿತು. ಅದರಲ್ಲೂ ದಕ್ಷಿಣ ಭಾರತದಲ್ಲಿ ಮೊದಲಿಗೆ ತಮಿಳುನಾಡಿನಲ್ಲಿ ನಾಯನ್ಮಾರರು ಈ ಭಕ್ತಿ ಚಳುವಳಿಯ ಮೂಲಕ ಶೈವ ಧರ್ಮವನ್ನು, ಆಳ್ವಾರರು ವೈಷ್ಣವ ಧರ್ಮ ಪ್ರಚಾರ ಮಾಡತೊಡಗಿದರು. ಇದು ನೆರೆಹೊರೆಯ ರಾಜ್ಯಗಳಿಗೂ ವಿಸ್ತಾರಗೊಂಡು ಅನೇಕ ಬದಲಾವಣೆಗೆ ಕಾರಣವಾಯಿತು. ಮಹಾರಾಷ್ಟ್ರದಲ್ಲಿ ವಾರ್ಕರಿ ಪಂಥ ಹುಟ್ಟಿಕೊಂಡಿತು. ಇಂತಹ ಹೊಸ ಭಕ್ತಿ ಚಳುವಳಿಯು ಹುಟ್ಟಿಕೊಂಡುದಲ್ಲದೆ, ಅಲ್ಲಿಯವರೆಗೆ ಇದ್ದ ಮೂಲ ಶೈವ ಪರಂಪರೆಯ ಮೌಢ್ಯ ಆಚರಣೆಗಳಿಗೆ, ಅಂಧಶ್ರದ್ಧೆಗಳಿಗೆ, ಹಿಂಸಾತ್ಮಕ ಬದುಕಿಗೆ ತಡೆಯನ್ನೊಡ್ಡಿತು. ಇಂತಹ ಪರಂಪರೆಯ ಆಗಮನ ನಿರೀಕ್ಷೆಯಲ್ಲಿತ್ತೋ ಏನೋ? ಎಂಬಂತೆ ಜನಸಮುದಾಯಗಳು ವೈಚಾರಿಕ ನಿಲುವಿನ ಭಕ್ತಿಪಂಥದ ಜೊತೆ ಸೇರುವುದರ ಮೂಲಕ ಅದನ್ನು ಸ್ವೀಕರಿಸಿದರು.

ಕರ್ನಾಟಕದ ಸಂದರ್ಭದಲ್ಲಿ ವಚನಕಾರರು ಭಕ್ತಿ ಚಳುವಳಿಗೆ ಕಾರಣರಾದರು. ಚರಿತ್ರೆಯಲ್ಲಿ ಗುರುತಿಸಲಾಗಿರುವಂತೆ ಹನ್ನೆರಡನೆಯ ಶತಮಾನದಲ್ಲಿ ಅನೇಕ ವೃತ್ತಿಗಳನ್ನು ಮಾಡುತ್ತಿದ್ದ ಕಸುಬುದಾರರು ಕಾಯಕಜೀವಿಗಳಾಗಿ ವಚನಗಳನ್ನು ರಚಿಸಿ ಕಾಯಕತತ್ವ ಎಂಬ ವಿಶಿಷ್ಠ ಪರಿಕಲ್ಪನೆಯನ್ನು ಹುಟ್ಟುಹಾಕಿ ಅದರ ಮೂಲಕ ಸಮಾಜದಲ್ಲಿ ನೆಲೆಸಿದ್ದ ವೃತ್ತಿ ತಾರತಮ್ಯವನ್ನು ನಿರಾಕರಿಸಿದರು. ಅಲ್ಲದೆ ಅನೇಕ ವೈಚಾರಿಕವಾದ ತತ್ವ ಚಿಂತನೆಯಿಂದ ಕೂಡಿದ ಹಲವು ಪರಿಕಲ್ಪನೆಗಳನ್ನು ಸಿದ್ಧಪಡಿಸಿದರು. ಅವುಗಳಲ್ಲಿ ದಾಸೋಹ, ಏಕದೇವೋಪಾಸನೆ ಮುಂತಾದುವುಗಳು ಇವೆ. ಮತ್ತು ಮಾನವನ ಬದುಕಿಗೆ ಅವಶ್ಯವಾಗಿರುವ ವೃತ್ತಿಯನ್ನು ಮತ್ತು ಅದರ ಅವಶ್ಯಕತೆ ಹಾಗೂ ಮಹತ್ವವನ್ನು ತಿಳಿಸಿದರು. ಮನುಷ್ಯನ ಲೌಕಿಕ ಬದುಕಿನ ಜೊತೆಗೆ ಆಧ್ಯಾತ್ಮವನ್ನು ಸಾಧಿಸುವ ಬಗೆಯನ್ನು ಕಂಡುಕೊಂಡರು.

ಹನ್ನೆರಡನೆಯ ಶತಮಾನದಲ್ಲಿ ಬಿಜ್ಜಳನ ರಾಜ್ಯದಲ್ಲಿ ಬಸವಣ್ಣ ಉನ್ನತ ಹುದ್ದೆಯಲ್ಲಿದ್ದುಕೊಂಡು ಸಮಾಜ ಸುಧಾರಣೆಯಲ್ಲಿ ತೊಡಗಿ, ಬ್ರಾಹ್ಮಣ ಮೊದಲು, ಅಂತ್ಯಜ ಕಡೆ ಎಂಬ ನಂಬಿಕೆಯನ್ನು ಹೋಗಲಾಡಿಸಿ, ಒಂದು ಹೊಸ ಕ್ರಾಂತಿಯನ್ನು ಕಟ್ಟಿ ಬೆಳೆಸಿದನು. ಜಾತಿ ತಾರತಮ್ಯಗಳನ್ನು, ವೃತ್ತಿತಾರತಮ್ಯಗಳನ್ನು ನಿರಾಕರಿಸುವ ಮೂಲಕ, ಎಲ್ಲಾ ಜಾತಿಗಳು ಶ್ರೇಷ್ಠ, ಎಲ್ಲಾ ವೃತ್ತಿಗಳು ಶ್ರೇಷ್ಠ ಎಂಬ ಭಾವನೆಯನ್ನು ನಿರ್ಮಿಸುವ, ಬೆಳೆಸುವ ಕೆಲಸ ಮಾಡಿದನು. ಬಸವಣ್ಣ ಕಟ್ಟಿದ ಮಹಾಮನೆಗೆ ಸಮಾಜದ ವಿವಿಧ ಜಾತಿ ಮೂಲದಿಂದ, ವಿವಿಧ ವೃತ್ತಿ ಮೂಲದಿಂದ ವೃತ್ತಿನಿರತ ಕಸುಬುದಾರರು ಬಂದು ಸೇರಿಕೊಂಡು ವಿಚಾರ ಮಾಡತೊಡಗಿದರು. ಅದರ ಫಲವಾಗಿ, ವೃತ್ತಿಯ ಬಗೆಗಿನ ಅವರ ನಿಲುವುಗಳು ವೈಚಾರಿಕತೆಯ ನೆಲೆಗಟ್ಟಿನ ಮೇಲೆ ನಿಂತವು. ಇದರಿಂದ ವೃತ್ತಿಯ ಬಗೆಗೆ ಆವರೆಗೆ ಇದ್ದ ಕೀಳರಿಮೆಯ ಭಾವನೆ ದೂರವಾಗಿ, ಅದರ ಶ್ರೇಷ್ಠತೆ ಸಮಾಜಕ್ಕೆ ಮನವರಿಕೆಯಾಯಿತು. ಇದರಿಂದ ವೃತ್ತಿಗೆ ಸಾಮಾಜಿಕ ಗೌರವ ದೊರೆತಂತಾಯಿತು. ಅಲ್ಲದೆ ವೃತ್ತಿನಿರತರ ಆತ್ಮವಿಶ್ವಾಸ ಬೆಳೆದು, ನಿಷ್ಠಾಪೂರ್ಣ ಬದುಕು ಸಾಗಿಸಲು ಪ್ರೇರಣೆ ದೊರೆತು ಸಮಾಜದ ಒಳಿತಿಗೆ ದಾರಿಯಾಯಿತು. ವೃತ್ತಿನಿರತರ ಆತ್ಮಾಭಿಮಾನ ಇಮ್ಮಡಿಸಿತು. ವ್ಯಕ್ತಿಕೇಂದ್ರಿತವಾಗಿ, ಜಾತಿಕೇಂದ್ರಿತವಾಗಿ ನಡೆಯುವ ವೃತ್ತಿಗಳಿಗೆ ಗೌರವ ಸಿಕ್ಕಿತು. ಇದಕ್ಕೆ ಅವರು ಮಹತ್ವಪೂರ್ಣವಾದ 'ಕಾಯಕತತ್ವ' ಎಂಬ ಪರಿಕಲ್ಪನೆಯನ್ನು ರೂಪಿಸಿಕೊಂಡು, ವೃತ್ತಿಗೆ ಮಹತ್ವವಾದ ಸ್ಥಾನವನ್ನು ನೀಡುವುದರ ಜೊತೆಗೆ ತಮ್ಮ ಆತ್ಮಸಾಧನೆಗೆ, ಆಧ್ಯಾತ್ಮಿಕ ಬದುಕಿಗೆ ಪೂರಕ ಮಾರ್ಗವನ್ನಾಗಿ ಕಂಡುಕೊಂಡರು. ಅಲ್ಲದೆ ಸಾಮಾಜಿಕವಾಗಿ, ಧಾರ್ಮಿಕವಾಗಿ, ಆರ್ಥಿಕವಾಗಿ ಹಲವು ಸುಧಾರಣೆ, ಬದಲಾವಣೆಗೆ ಶಕ್ತಿಯಾಗಿ ನಿಂತರು. ಬಹುಶಃ ಅದು ಜಯದ ಹಾದಿಯನ್ನು ಹಿಡಿದಿತ್ತು ಎಂದೇ ಹೇಳಬಹುದು.

ವಚನಕಾರರು ಉದಯವಾಗುವ ಹೊತ್ತಿಗೆ ವೃತ್ತಿತಾರತಮ್ಯ ಬೃಹದಾಕಾರವಾಗಿ ಬೆಳೆದು ನಿಂತಿತ್ತು. ಶ್ರೇಷ್ಠ ವೃತ್ತಿ, ಕನಿಷ್ಠ ವೃತ್ತಿ ಎಂದು ವರ್ಗೀಕರಣವಾಗಿ ಬಿಟ್ಟಿತ್ತು. ಶ್ರೇಷ್ಠ ವೃತ್ತಿ ಮಾಡುವವರು ಶ್ರೇಷ್ಠ. ಕನಿಷ್ಠ ವೃತ್ತಿ ಮಾಡುವವರು ಕನಿಷ್ಠವೆಂಬ ಅವೈಚಾರಿಕ ತೀರ್ಮಾನಕ್ಕೆ

ಬರಲಾಗಿದ್ದಿತು. ಇದರ ಅರ್ಥ ಉನ್ನತ ಜನಸಮುದಾಯವೆಂದು ಕರೆಸಿಕೊಳ್ಳುತ್ತಿದ್ದವರ ವೃತ್ತಿಗಳು ಬಹುತೇಕ ಬೌದ್ಧಿಕ ವೃತ್ತಿಗಳು. ಇವು ಶ್ರೇಷ್ಠ ಮತ್ತು ಕೆಳವರ್ಗದ ಅಥವಾ ಕನಿಷ್ಠರ ವೃತ್ತಿಗಳು ದೈಹಿಕ ಶ್ರಮವನ್ನು ಅವಲಂಬಿಸಿರುವಂತಹ ವೃತ್ತಿಗಳು ಇವು ಕನಿಷ್ಠವೆಂದು ನಂಬಲಾಗಿತ್ತು. ನಂಬಿಸಲಾಗಿತ್ತು. ವಚನಕಾರರು ಇಂತಹ ಕೃತಕ ತಾರತಮ್ಯವನ್ನು ಕಂಡು ಬೇಸರಗೊಂಡರಲ್ಲದೆ, ಇಂತಹ ಸೃಷ್ಟಿಯಲ್ಲಿ ನಿರತರಾಗಿದ್ದವರ ಅಥವಾ ಸೃಷ್ಟಿಸುತ್ತಿದ್ದ ಪರಂಪರೆಯ ವಿರುದ್ಧ ಹೋರಾಟಕ್ಕೆ ಇಳಿದರು. ಅವರು ವಚನಗಳ ಮೂಲಕ ಸಮಾಜವನ್ನು ಮತ್ತು ಸಮಾಜದಲ್ಲಿರುವ ಕೆಳವರ್ಗ ಮತ್ತು ಶೂದ್ರರನ್ನು ಸುಧಾರಿಸುತ್ತ, ಎಚ್ಚರಿಸುತ್ತ, ವೈವಿಧ್ಯಮಯ ವೃತ್ತಿಗಳ ಮಧ್ಯೆ ಏಕತೆಯನ್ನು ಪ್ರತಿಷ್ಠಾಪಿಸಿದರು. ವೃತ್ತಿಗೆ ಕಾಯಕತತ್ವದ ಪರಿಕಲ್ಪನೆಯಡಿಯಲ್ಲಿ ವಿಶೇಷ ಧಾರ್ಮಿಕ ಸ್ಥಾನವನ್ನು ನಿರ್ಮಿಸಿಕೊಟ್ಟರು. ಅದಕ್ಕೆ ಒಂದು ಪವಿತ್ರವಾದ ಮನ್ನಣೆಯಿದೆ ಎಂಬುದನ್ನು ವೃತ್ತಿಜೀವಿಗಳಿಗೂ, ಸಮಾಜಕ್ಕೂ ತೋರಿಸಿಕೊಟ್ಟರು. ಆ ಮೂಲಕ ತೀರ ಸಾಮಾಜಿಕವೆನಿಸಿದಂತಹ ಸಮಸ್ಯೆಗಳಾದ ಜಾತಿಯ ಸಮಸ್ಯೆಯನ್ನು ವಿಶೇಷವಾಗಿಯೇ ಎದುರಿಸಿದರು. ಜಾತ್ಯಾತೀತವಾದ ಸಮಾಜವನ್ನು ಕಟ್ಟಿ ಬೆಳೆಸುವುದಲ್ಲದೆ, ಮಾನವನ ಮಧ್ಯದ ಅಂತರವನ್ನು ತಿಳಿಸಿ, ಅದರ ಅನಿತ್ಯತೆಯನ್ನು ಮನವರಿಕೆ ಮಾಡಿಕೊಟ್ಟರು. ಹಾಗಾಗಿ ಸಾಮಾಜಿಕ ಬದಲಾವಣೆಯನ್ನು ಮಾಡಲು ಸ್ತ್ರೀ ಸಮಾನತೆ ಬೇಕು. ವೃತ್ತಿ ಸಮಾನತೆ ಬೇಕು. ಜಾತಿ ಸಮಾನತೆ ಬೇಕು ಎಂಬ ಅಂಶಗಳನ್ನು ಅರಿತು ಅವುಗಳ ಬಗ್ಗೆ ಚಿಂತನೆಗೆ ತೊಡಗಿದರು. ಮತ್ತು ಮಾನವನು ವೃತ್ತಿಯಿಂದಲೇ ತಾನು ಮಾಡಬೇಕಿರುವ ಅಂತರಂಗದ ಸಾಧನೆಯನ್ನು ಮಾಡಬಹುದು ಎಂದು ಕಂಡುಕೊಂಡರು. ಹಾಗಾಗಿ ವೃತ್ತಿಯನ್ನೇ ತಮ್ಮ ಆಧ್ಯಾತ್ಮ ಸಾಧನೆಗೆ ಮೂಲಮಾರ್ಗ ಎಂಬುದನ್ನು ಅರಿತು, ತಮ್ಮ ವೃತ್ತಿಯಲ್ಲಿರುವ ಅವರ ನಿಷ್ಠೆಯಿಂದ ದೊರೆತ ಅನುಭವವನ್ನು ವಚನಗಳ ಮೂಲಕ ಅಭಿವ್ಯಕ್ತಿಸುವ ಜರೂರತ್ತನ್ನು ತೋರಿದರು. ಹಾಗಾಗಿ ಅವರ ಹೊಸ ಬದಲಾವಣೆಯ ಸಮಾಜದ ಕನಸಿಗೆ, ಹೊಸ ವಿಚಾರಗಳನ್ನು ಬದುಕಿನೊಂದಿಗೆ ರೂಪಿಸಿಕೊಂಡು ತಮ್ಮ ವೃತ್ತಿ ಪರಿಭಾಷೆಯಲ್ಲಿ ವಚನಗಳನ್ನು ರಚಿಸಿ, ಅದರ ಮೂಲಕ ವೃತ್ತಿಗೌರವವನ್ನು ವೃತ್ತಿಯ ಸ್ಥಾನವನ್ನು ತೋರಿಸಿದರು.

ಅಧ್ಯಯನದ ಮಹತ್ವ

ವಚನಕಾರರು ಮೂಲತಃ ಸಮಾಜವಾದಿ ಚಿಂತಕರು. ವೃತ್ತಿನಿರತತೆಯಿಂದ ಕಾಯಕ ಜೀವಿಗಳಾಗಿದ್ದಾರೆ. ಭಕ್ತರಾಗಿ, ಸಮಾಜವಾದಿಗಳಾಗಿ, ಸಮಾಜ ಸುಧಾರಕರಾಗಿ ಮತ್ತು ವೃತ್ತಿ ವಿಶಿಷ್ಟತೆಯನ್ನು, ವ್ಯಕ್ತಿ ವಿಶಿಷ್ಟತೆಯನ್ನು ಕೂಡ ಉಳ್ಳವರಾಗಿದ್ದಾರೆ. ತಮ್ಮ ತಮ್ಮ ಪಾಲಿನ ವೃತ್ತಿಗಳನ್ನು, ಕುಲಕಸುಬುಗಳನ್ನು ಮಾಡುತ್ತ, ಆ ವೃತ್ತಿಯ ಅನುಭವದ ಮೂಲಕ ಸಮಾಜ ಕೇಂದ್ರಿತ, ಧರ್ಮಾಧಾರಿತ, ವೈಚಾರಿಕ, ಆಧ್ಯಾತ್ಮಿಕ, ಆರ್ಥಿಕ, ರಾಜಕೀಯ ಚಿಂತನೆಗಳನ್ನು ಮಾಡುವ ವೃತ್ತಿನಿರತ ವಚನಕಾರರು ಒಂದು ಚಳುವಳಿಯಲ್ಲಿ ಸಕ್ರೀಯವಾಗಿ ಭಾಗವಹಿಸುವವರು. ವ್ಯಕ್ತಿ ಹಾಗೂ ವೃತ್ತಿಯಲ್ಲಿ ಭಿನ್ನತೆಯನ್ನು ಉಳಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಹಾಗಾಗಿ ವೃತ್ತಿಗೂ ಮತ್ತು ವ್ಯಕ್ತಿತ್ವಕ್ಕೂ ಅವಿನಾಭಾವತೆಯನ್ನು ಹೊಂದಿರಬೇಕಾಗುತ್ತದೆ. ನಡೆ-ನುಡಿಯಲ್ಲಿ

ಏಕವಾಗಿರಬೇಕಾಗುತ್ತದೆ. ಅಲೌಕಿಕದ ಕಡೆ ನಡೆದರೂ ಅದು ಲೌಕಿಕ ಬದುಕನ್ನು ನಿರಾಕರಿಸದೇ ಸಾಗಬೇಕಾಗುತ್ತದೆ. ಇಹದ ಜೊತೆಗೆ ಪರದ ಅನುಸಂಧಾನ ಮಾಡಬೇಕಾಗುತ್ತದೆ. ಅಲ್ಲದೆ ತಮ್ಮ ವೃತ್ತಿಯ, ಅಸ್ಮಿತೆಯನ್ನು ಕಂಡುಕೊಳ್ಳಬೇಕಾಗುತ್ತದೆ. ಮತ್ತು ಅದನ್ನು ತಿಳಿಸಬೇಕಾಗುತ್ತದೆ. ಸಮಾಜ ಕೇಂದ್ರೀತವಾಗಿ ಆಲೋಚಿಸುವಾಗ ವೃತ್ತಿಯೇ ಅವರಿಗೆ ಮೂಲ ಆಕರವಾಗಿ ನಿಲ್ಲುತ್ತದೆ. ಇಂತಹ ವೃತ್ತಿಯೇ ಆಕರವಾಗಿ ನಿಂತಾಗ, ವೃತ್ತಿಯ ಪರಿಭಾಷೆಯೇ ಅವರ ಅಭಿವ್ಯಕ್ತಿಯ ಮಾಧ್ಯಮವಾಗಿ ಮೂಡುತ್ತದೆ. ತಮ್ಮ ಮನಸ್ಥಿತಿಯನ್ನು ಹೇಳಿಕೊಳ್ಳಲು ತಾವು ಕಂಡುಕೊಂಡ ಅನುಭವವನ್ನು, ತಿಳುವಳಿಕೆಯನ್ನು ಹೇಳಲು ಅವರು ವೃತ್ತಿಯನ್ನು, ವೃತ್ತಿಭಾಷೆಯನ್ನು ಬಳಕೆ ಮಾಡಿಕೊಂಡು ವಚನಗಳನ್ನು ಕಟ್ಟಿ ಹೇಳಿದ್ದಾರೆ. ವೃತ್ತಿನಿರತ ವಚನಕಾರರು ತಮ್ಮ ವಚನಗಳಲ್ಲಿ ಕಟ್ಟಿಕೊಡುವ ಸಿದ್ಧಾಂತವನ್ನು, ಅವರ ತುಡಿತ, ಮಿಡಿತಗಳನ್ನು ಅವರ ಒಟ್ಟು ಆಶಯಗಳನ್ನು, ವೃತ್ತಿ ಬಗೆಗಿನ ಅವರ ಚಿಂತನೆಗಳನ್ನು ಶೋಧಿಸುವ ಮೂಲಕ ಅಧ್ಯಯನ ಮಾಡುವುದು ಮಹತ್ವದ್ದೆಂದು ತೋರುತ್ತದೆ.

ಅಧ್ಯಯನದ ವ್ಯಾಪ್ತಿ

ವಚನ ಚಳುವಳಿಯಲ್ಲಿ ತೊಡಗಿಕೊಂಡ ಅನೇಕ ವಚನಕಾರರು ವೃತ್ತಿನಿರತರಾಗಿದ್ದು, ಸಮಾಜದ ಸಾಮಾನ್ಯ ವರ್ಗದವರಾಗಿದ್ದಾರೆ. ಇವರು ಅಂತರಂಗದ ಮಾತುಗಳನ್ನು ತಮ್ಮಲ್ಲೇ ಹುದುಗಿಸಿಕೊಳ್ಳದೆ ಅಭಿವ್ಯಕ್ತಿಸಿದ್ದಾರೆ. ಇಂತವರಲ್ಲಿ ಅಂಬಿಗರ ಚೌಡಯ್ಯ, ಮಡಿವಾಳ ಮಾಚಯ್ಯ, ಮಾದಾರ ಚನ್ನಯ್ಯ, ಡಕ್ಕೆಯ ಬೊಮ್ಮಣ್ಣ, ತುರುಗಾಹಿ ರಾಮಣ್ಣ, ಆಯ್ದಕ್ಕಿ ಮಾರಯ್ಯ, ಕಲಕೇತ ಬ್ರಹ್ಮಯ್ಯ, ಕಿಲಾರದ ಭೀಮಣ್ಣ, ಕೂಗಿನ ಮಾರಯ್ಯ, ಗಾಣದ ಕಣ್ಣಪ್ಪ, ಜೋದರ ಮಾಯಣ್ಣ, ಬಹುರೂಪಿ ಚೌಡಯ್ಯ, ಬಾಹುರ ಬೊಮ್ಮಣ್ಣ, ಫಲಹಾರ ಕಾಯಕದ ಚಿಕ್ಕದೇವಯ್ಯ, ಒಕ್ಕಲಿಗ ಮುದ್ದಣ್ಣ, ವೀರಗೊಲ್ಲಾಳ, ವೈದ್ಯಸಂಗಣ್ಣ, ಸತ್ತಿಗೆ ಮಾರಯ್ಯ, ಸುಂಕದ ಬಂಕಣ್ಣ, ಸೂಜಿಕಾಯಕದ ರಾಮಿತಂದೆ, ಹುಂಜಿನ ಕಾಳಗದ ದಾಸಯ್ಯ, ಹೆಂಡದ ಮಾರಯ್ಯ, ಹೊಡೆಹುಲ್ಲ ಬಂಕಣ್ಣ, ಕಂಬದ ಮಾರಿತಂದೆ, ಕನ್ನಡಿ ಕಾಯಕದ ರೇವಮ್ಮ, ಕದಿರೆ ಕಾಳವ್ವೆ, ಕದಿರೆ ರೆಮ್ಮವ್ವೆ, ಕಾಲಕಣ್ಣೆಯ ಕಾಮಮ್ಮ, ಕೊಟ್ಟಣದ ಸೋಮವ್ವ, ಎಲೆಗಾರ ಕಾಮಣ್ಣ, ಎಚ್ಚರಿಕೆ ಕಾಯಕದ ಮುಕ್ತಿನಾಥಯ್ಯ, ಮೇದಾರ ಕೇತಯ್ಯ, ಉಗ್ಗಡಣೆ ಗುಬ್ಬಿದೇವಾರ್ಯ, ಸತ್ಯಕ್ಕ, ಧೂಪದ ಗೊಗ್ಗವ್ವೆ ಸೂಳೆ ಸಂಕವ್ವೆ, ಹಾದರ ಗಂಗವ್ವೆ, ಆಯ್ದಕ್ಕಿ ಲಕ್ಕಮ್ಮ ಇನ್ನು ಮುಂತಾದ ವಚನಕಾರರ ವಚನಗಳಲ್ಲಿ ಕಾಣುವ ಕಾಯಕತತ್ವ, ನಿಷ್ಠೆ, ಶ್ರಮ, ಭಾವನಾತ್ಮಕವಾದ, ನಿಷ್ಠುರತೆಯಿಂದ ಕೂಡಿದ ನಿವೇದನೆಗಳಿಂದ ತುಂಬಿದ ವಚನಗಳು ಇವರ ಚಿಂತನೆಗಳಾಗಿ ಗೋಚರಿಸುತ್ತವೆ. ಇಂತಹ ವಚನಗಳು ಭಕ್ತಿಯ ನೆಲೆಯಲ್ಲಿ, ಕಾಯಕದ ನೆಲೆಯಲ್ಲಿ, ಸಾಮಾಜಿಕ ನೆಲೆಯಲ್ಲಿ, ಪ್ರಕಟವಾಗಿವೆ. ಜೊತೆಗೆ ಬಹುಮುಖ್ಯವಾಗಿ ಕಾಯಕನಿಷ್ಠೆಯನ್ನೆ ಅಭಿವ್ಯಕ್ತಿಸುವ ಮಾಧ್ಯಮಗಳಾಗಿವೆ. ತಮ್ಮ ವೃತ್ತಿಯನ್ನು ಚಿಂತನೆಯನ್ನಾಗಿ ಪರಿವರ್ತಿಸಿಕೊಂಡ ವಚನಕಾರರ ಅಭಿವ್ಯಕ್ತಿಯನ್ನು ಮತ್ತು ತಾತ್ವಿಕತೆಯನ್ನು ಅವರ ವಚನಗಳ ಮೂಲಕ ಈ ಅಧ್ಯಯನದ ವ್ಯಾಪ್ತಿಯೊಳಗೆ ಚರ್ಚಿಸಲಾಗುವುದು.

ಅಧ್ಯಯನದ ವೈಧಾನಿಕತೆ

ಆಯ್ದುಕೊಂಡ ವಿಷಯಕ್ಕೆ ಅನುಗುಣವಾಗಿ ವಚನ ಚಳುವಳಿ ಅದರ ಮಹತ್ವ, ಅದರ ಮುಖ್ಯ ಉದ್ದೇಶಗಳಲ್ಲಿ ಒಂದಾದ ಕಾಯಕತತ್ವ ಮತ್ತು ಅದರ ಮಹತ್ವ ಆ ಚಳುವಳಿಯಲ್ಲಿ ಪಾಲ್ಗೊಂಡ ಅನೇಕ ವಚನಕಾರರು ಮತ್ತು ಅವರ ವ್ಯಕ್ತಿತ್ವವನ್ನು, ಅಭಿವ್ಯಕ್ತಿಯನ್ನು ವಚನಗಳ ಮೂಲಕ ಗ್ರಹಿಸುವ ನೆಲೆಯಲ್ಲಿ ರೂಪನಿಷ್ಠ ತತ್ವವನ್ನು ಬಳಸಿ ಅಧ್ಯಯನ ಮಾಡಲಾಗುವುದು. ಜೊತೆಗೆ ಅಧ್ಯಯನ ವ್ಯಾಪ್ತಿಯಲ್ಲಿರುವ ವಚನಗಳನ್ನು ವಸ್ತು, ಭಾಷೆ ಈ ಅಧ್ಯಯನದಲ್ಲಿ ಅಳವಡಿಸಿಕೊಂಡಿರುವ ವಿಧಾನ. ಅಭಿವ್ಯಕ್ತಿ ಸ್ವರೂಪ ಮತ್ತು ತಾತ್ವಿಕತೆ ಎಂಬ ವಿಷಯವಿದ್ದರೂ ಇದರಲ್ಲಿ ಅಪರೂಪವಾಗಿರುವ ಸಾಮಾಜಿಕತೆ, ಧಾರ್ಮಿಕತೆ, ರಾಜಕೀಯತೆ, ಕಾಯಕ ಸಂಬಂಧಿತ ನಿಲುವುಗಳು ಭಕ್ತಿ ಹೀಗೆ ವಿವಿಧ ನೆಲೆಗಳಲ್ಲಿ ಗ್ರಹಿಸುವುದು ಅಧ್ಯಯನದ ಅನುಕೂಲಕ್ಕಾಗಿ ಮಾಡಿಕೊಂಡಿದ್ದರೂ ವಚನಕಾರರ ಒಟ್ಟು ಚಿಂತನೆಯ ಸ್ವರೂಪವನ್ನು ಗ್ರಹಿಸುವುದು ಇಲ್ಲಿ ಮುಖ್ಯವಾಗಿದೆ.

ಅಧ್ಯಾಯ ೨

ಅಧ್ಯಯನದ ಪರಿಕಲ್ಪನಾತ್ಮಕ ಚರ್ಚೆ

ಅಧ್ಯಾಯ : ಎರಡು

ಅಧ್ಯಯನದ ಪರಿಕಲ್ಪನಾತ್ಮಕ ಚರ್ಚೆ

ಹನ್ನೆರಡನೇ ಶತಮಾನದಲ್ಲಿ ಘಟಿಸಿದ ವಚನ ಸಾಹಿತ್ಯ ಚಳುವಳಿಯನ್ನು, ಅದು ಉಂಟು ಮಾಡಿದ ಪರಿಣಾಮಗಳನ್ನು ಕುರಿತು ಕನ್ನಡದಲ್ಲಿ ಬಹಳಷ್ಟು ಅಧ್ಯಯನಗಳು ನಡೆದಿವೆ. ವಚನ ಚಳುವಳಿ ಸಂಭವಿಸಿದ ನಂತರ ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಅನೇಕ ಬಗೆಯಲ್ಲಿ ಪಲ್ಲಟಗಳಾದವು. ವಚನಕಾರರು ಅಥವಾ ಶರಣರು ಸಂಘಟಿಸಿದ ಚಳುವಳಿಯ ಪ್ರಭಾವ ಮುಂದಿನ ಶತಮಾನಗಳ ಉದ್ದಕ್ಕೂ ಅದು ಪ್ರಭಾವ ಬೀರಿತು. ವಚನಕಾರರು ರಚಿಸಿದ ವಚನ ಸಾಹಿತ್ಯವಂತೂ ಜೀವಂತವಾಗಿ ಉಳಿದು ಹೊಸ ಸಾಹಿತ್ಯದ ರಚನೆಗೆ ಪ್ರೇರಣೆಯಾಗಿ ಉಳಿದಿದೆಯೇ ಹೊರತು ಶಕ್ತಿ ಕಳೆದುಕೊಂಡಿಲ್ಲ. ಮೂಲ ವಚನ ಚಳುವಳಿಗಿದ್ದ ತಾತ್ವಿಕತೆ, ವೈಚಾರಿಕತೆ ಮತ್ತು ಹೋರಾಟ ಮುಂತಾದ ಹಲವು ಆಯಾಮಗಳು, ಆಳ ಅಗಲಗಳು ಮುಂದಿನ ಶತಮಾನಗಳಲ್ಲಿ ಇರಲಿಲ್ಲವಾದರೂ, ವಚನಕಾರರ ವಚನ ಸಾಹಿತ್ಯದ ಶಕ್ತಿಗೆ ಕುಂದುಂಟಾಗಿಲ್ಲ.

ಹನ್ನೆರಡನೇ ಶತಮಾನದಲ್ಲಿ ರೂಪಗೊಂಡ ವಚನ ಚಳವಳಿಗೆ ಭಾರತದಲ್ಲಿ ನಡೆದ ಭಕ್ತಿ ಚಳುವಳಿಯೇ ಪ್ರೇರಣೆ, ಅದರಲ್ಲೂ ತಮಿಳುನಾಡಿನ ಶೈವರಾದ ನಯನ್ಮಾರರ ಭಕ್ತಿ ಪಂಥವೇ ಕರ್ನಾಟಕದ ಈ ಚಳುವಳಿಗೆ ಹೆಚ್ಚು ಬಲವನ್ನು ನೀಡಿತು. ವೃತ್ತಿ ಸಮಾನತೆ, ಜಾತಿ ಸಮಾನತೆ, ಲಿಂಗ ಸಮಾನತೆ ಈ ಮೂರು ತತ್ವಗಳ ನೆಲೆಯಿಂದ ಚಳುವಳಿ ಆರಂಭವಾಯಿತು. ಸಮಾಜದ ತಳಸಮುದಾಯಗಳನ್ನು ಮುನ್ನೆಲೆಗೆ ತರಲು ಈ ಮೂರು ತತ್ವಗಳು ಬಲವನ್ನು ನೀಡಿದವು. ಈ ಮೂರು ತತ್ವಗಳೇ ಬಲಿಷ್ಠ ವೈದಿಕ ಸಮುದಾಯಗಳು ನಡೆಸುತ್ತಿದ್ದ ಅನೇಕ ಬಗೆಯ ಶೋಷಣೆಗಳಿಂದ ಬಿಡುಗಡೆ ಹೊಂದಲು ಮತ್ತು ಧರ್ಮ ಕೇಂದ್ರಿತ, ಪ್ರಭುತ್ವ ಕೇಂದ್ರಿತ ವೈಧಿಕ ಧರ್ಮವನ್ನು ಶಿಥಿಲಗೊಳಿಸಲು ಈ ಮೂರು ತತ್ವಗಳೇ ಬೆನ್ನೆಲುಬಾಗಿ ಪರಿಣಮಿಸಿದವು. ಈ ಚಳುವಳಿಯಿಂದ ಕೆಳ ಸಮುದಾಯಗಳಲ್ಲಿ ತಕ್ಕಮಟ್ಟಿಗಾದರೂ ಸ್ವತಂತ್ರವಾಗಿ ಜೀವಿಸುವ ಸ್ವಾತಂತ್ರ್ಯವನ್ನು ಪಡೆದವು. ತಮ್ಮ ದುಡಿಮೆಗೆ ಸಿಕ್ಕ ಗೌರವದಿಂದ ಸಮಾನತೆಯ ಕನಸನ್ನು ಕಂಡವು. ಆ ಮೂಲಕ ಜಾತಿಗಳ ನಡುವಿನ ಪ್ರತ್ಯೇಕತೆಯನ್ನು ಸಡಿಲಗೊಳಿಸಿಕೊಂಡು ಸಹಬಾಳ್ವೆಯ ಕನಸು ಕಂಡವು.

ಲಿಂಗ ಸಮಾನತೆಗೆ ಸಿಕ್ಕ ಮನ್ನಣೆಯಿಂದ ಮಹಿಳೆಯರೂ ತಮ್ಮ ಬಂಧನಗಳಿಂದ ಹೊರಬಂದು ಮುಖ್ಯವಾಹಿನಿಯಲ್ಲಿ ಕಾಣಿಸಿಕೊಂಡರು. ಅನೇಕ ವಿಷಯಗಳಲ್ಲಿ ಮಹಿಳೆಯರು ಪುರುಷರಿಗಿಂತ ಹೆಚ್ಚಿನ ಸಾಧನೆಯನ್ನು ಮಾಡಿರುವುದು ಕಂಡುಬರುತ್ತದೆ.

ಆದರೆ, ಶೂದ್ರ ಮತ್ತು ದಲಿತರು ಹೆಚ್ಚಿನ ಪ್ರಮಾಣದಲ್ಲಿ ಈ ಚಳುವಳಿ ಸೇರಿದನ್ನು ಸಹಿಸದ ರಾಜಪ್ರಭುತ್ವ, ಧರ್ಮಪ್ರಭುತ್ವ ಒಂದಾಗಿ ಈ ಚಳುವಳಿಯನ್ನು ಹತ್ತಿಕ್ಕಿದವು. ಆದರೂ ಈ ಚಳುವಳಿಯ ಪರಿಣಾಮಗಳು ಬೇರೆ ಬೇರೆ ರೂಪಗಳಲ್ಲಿ ಕಾಣಿಸಿಕೊಳ್ಳುತ್ತಲೇ ನಡೆದಿವೆ. ವೃತ್ತಿ, ಜಾತಿ, ಲಿಂಗ ಸಮಾನತೆಗಳ ಕನಸ್ಸು ಕನಸ್ಸಾಗೇ ಉಳಿಯಿತು. ಈ ಚಳುವಳಿಯಲ್ಲಿ ಗುರುತಿಸಿಕೊಂಡ ಸಮುದಾಯಗಳು ಜಾತಿಗಳಾದವು. ಧರ್ಮವೂ ಆಯಿತು. ಆದರೂ ವಚನ ಚಳುವಳಿ, ಅದರ ಉಪ ಉತ್ಪನ್ನವಾದ ವಚನಗಳು ಮುಂದಿನ ಶತಮಾನಗಳಲ್ಲಿ ಸಮಾಜದ ಬೇರೆ ಬೇರೆ ನೆಲೆಯಲ್ಲಿ ರೂಪಗೊಳ್ಳಲು ಕಾರಣವಾಯಿತು.

ವಚನ ಚಳುವಳಿಯ ಮೇಲೆ ನಡೆದ ಅಧ್ಯಾಯನಗಳಿಗೆ ಕೊರತೆಯಿಲ್ಲ ಎಂಬುದು ನಿಜ. ವಚನಗಳನ್ನು ಶಾಸ್ತ್ರವೆಂದು ಪರಿಗಣಿಸಿದ ಅಧ್ಯಯನಗಳು, ಧರ್ಮಕೇಂದ್ರಿತವಾಗಿ ನಡೆದ ಅಧ್ಯಯನಗಳು, ಸಾಮಾಜಿಕ, ರಾಜಕೀಯ ಗತಿಗಳನ್ನು ಬದಲಿಸಿದ ಚಳುವಳಿಯೆಂದು ಮಾಡಿದ ಅಧ್ಯಯನಗಳು, ವಚನಗಳನ್ನು ಸಾಹಿತ್ಯವೆಂದು ಪರಿಗಣಿಸಿದ ಅಧ್ಯಯನಗಳು ಬೇಕಾದಷ್ಟು ಕನ್ನಡದಲ್ಲಿ ನಡೆದಿವೆ. ಸಾಹಿತ್ಯ ಸಂಶೋಧಕರು, ಸಾಹಿತ್ಯ ವಿಮರ್ಶಕರು ಗ್ರಹಿಸಿದ ಸಮಾಜ, ಚರಿತ್ರೆ, ರಾಜಕೀಯ ಪರಿಕಲ್ಪನೆಗಳಿಂದ ವಿವರಣೆ, ವ್ಯಾಖ್ಯಾನಗಳಾಗಿವೆಯೇ ಹೊರತು ಸಮಾಜಶಾಸ್ತ್ರೀಯ, ರಾಜಕೀಯ ಶಾಸ್ತ್ರೀಯ, ಚರಿತ್ರೆ ತಜ್ಞರುಗಳಿಂದ ವಚನ ಸಾಹಿತ್ಯ ಅಧ್ಯಯನಗಳು ಭಿನ್ನವಾಗಿ ನಡೆಯಬಹುದು. ನಡೆಯಬೇಕಾಗಿದೆ. ಆದರೂ ಮಾನವಿಕ ಶಾಸ್ತ್ರಜ್ಞರು ವಚನ ಚಳುವಳಿಯನ್ನು ಗ್ರಹಿಸಿದ ವಿಧಾನವೇ ಬೇರೆ. ಸಮಾಜೋ–ಧಾರ್ಮಿಕ ಅಧ್ಯಯನಗಳನ್ನು ಸಾಹಿತ್ಯಕ ಸಂಶೋಧಕರೆ ನಡೆಸಿದ್ದು ಹೆಚ್ಚು. "ಕಾಯಕ ಜೀವಿಗಳು" ಎಂಬ ಸಿ.ವೀರಣ್ಣ ಅವರ ಬರೆಹ ಇತರರಿಗಿಂತ ಭಿನ್ನವಾದುದು. ಮಾರ್ಕ್ಸ್‌ವಾದಿ ವಿಮರ್ಶೆಯಿಂದಾಗಿ ಅದು ಆಧ್ಯಾತ್ಮಿಕ ನೆಲೆಯಿಂದ ಬಿಡಿಸಿಕೊಂಡಿದೆ. ಆರ್ಥಿಕ ನೆಲೆಯಿಂದ ಗ್ರಹಿಸಲಾಗಿದೆ. ಡಾ. ಸಿ.ವೀರಣ್ಣ ಅವರು ಬರೆದ 'ಕನ್ನಡ ಸಾಹಿತ್ಯ ಚಾರಿತ್ರಿಕ ಬೆಳವಣಿಗೆ, ಮಧ್ಯಕಾಲೀನ ಸಾಹಿತ್ಯ' ಈ ಕೃತಿ ಸಾಹಿತ್ಯ ಚರಿತ್ರೆ ಎರಡನೆಯ ಭಾಗವಾಗಿದ್ದು ವಚನ ಚಳುವಳಿಯನ್ನು ಸಾಮಾಜಿಕ, ಆರ್ಥಿಕ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಗ್ರಹಿಸಿ ರಚಿಸಲಾಗಿದೆ. ಈ ಬಗೆಯ ಅಧ್ಯಯನಗಳು ವಿಸ್ತಾರಗೊಳ್ಳಬೇಕಾಗಿದೆ. ವಚನಗಳನ್ನು ನವ್ಯ ವಿಮರ್ಶೆ ಗ್ರಹಿಸಿದ್ದು ಇನ್ನೊಂದು ಬಗೆಯಲ್ಲಿ. ಸಂಕೇತ, ಪ್ರತಿಮೆಗಳನ್ನು ವಚನಗಳ ಮೂಲಕ ಧ್ವನಿಸುವ ಕ್ರಮದ ವಿಮರ್ಶೆ ಕಾಣಿಸಿಕೊಂಡಿತು. ವಚನಗಳ ಪ್ರಾಯೋಗಿಕ ವಿಮರ್ಶೆ ಇನ್ನೊಂದು ಆಯಾಮ ಸೇರಿಸಿದೆ. ನವ್ಯ ವಿಮರ್ಶೆಯಿಂದ ವಚನಗಳನ್ನು ಅಧ್ಯಯನ ಮಾಡುವಾಗ ವಚನಗಳ ಸಂಕ್ಷಿಪ್ತತೆ ಸಂಕೇತ ಪ್ರತಿಮೆಗಳು ರೂಪಕಗಳು ಹಲವು ಅರ್ಥದ ನೆಲೆಗಳನ್ನು ಸೂಚಿಸುವಂತೆ ಕಂಡವು. ಈ ವಿಮರ್ಶೆಗೆ ವಚನಗಳ ಭಾಷೆಯೇ ಪ್ರಧಾನವಾಯಿತು. ಸಾಹಿತ್ಯಿಕ ಅಧ್ಯಯನದ ಮಾದರಿ ಇಲ್ಲಿ ಕಾಣಿಸುತ್ತದೆ.

'ವೃತ್ತಿನಿರತ ವಚನಕಾರರು: ವಚನಗಳ ಅಭಿವ್ಯಕ್ತಿ ಸ್ವರೂಪ ಮತ್ತು ತಾತ್ವಿಕತೆ' ಪ್ರಸ್ತುತ ಈ ಅಧ್ಯಯನದಲ್ಲಿ ವಚನ ಸಾಹಿತ್ಯ ಚಳುವಳಿಯನ್ನು ಸಮಾಜೋ-ಆರ್ಥಿಕ ನೆಲೆಯಿಂದ ಗ್ರಹಿಸಲು ಪ್ರಯತ್ನಿಸಲಾಗಿದೆ. ಸಮಾಜ ಮತ್ತು ಆರ್ಥಿಕತೆಗಳನ್ನು ಪರಿಕಲ್ಪನೆಗಳನ್ನಾಗಿ ಭಾವಿಸಿ ಚಾರಿತ್ರಿಕ ಸಂದರ್ಭದಲ್ಲಿಟ್ಟು ನೋಡಲಾಗಿದೆ. ಯಾಕೆಂದರೆ ವಚನ ಚಳುವಳಿಯಲ್ಲಿ ಕೆಳ ಸಮುದಾಯಗಳೇ ಹೆಚ್ಚು ಪಾಲ್ಗೊಂಡಿದ್ದವು. ಈ ಕೆಳ ಸಮುದಾಯಗಳು ದುಡಿಮೆಯನ್ನೇ ಬದುಕಿನ ಮೂಲ ಕೇಂದ್ರವನ್ನಾಗಿ ಮಾಡಿಕೊಂಡಿದ್ದವು. ಅದರಿಂದಾಗಿಯೇ ವಚನ ಚಳುವಳಿಯ ತತ್ವಗಳಲ್ಲಿ ಕಾಯಕ ತತ್ವ ಪ್ರಮುಖವಾಗಿ ಕಾಣಿಸುತ್ತದೆ. ಈ ಕಾಯಕಗಳನ್ನು ಈ ಅಧ್ಯಯನದಲ್ಲಿ ವೃತ್ತಿ ಎಂಬ ಆಧುನಿಕ ಪರಿಭಾಷೆಯಲ್ಲಿ ಬಳಸಲಾಗಿದೆಯೇ ಹೊರತು ಹೊಸದೆಂಬಂತೆ ಏನೂ ಇಲ್ಲ. ಸರಳವಾಗಿ ಹೇಳುವುದಾದರೆ ಕಾಯಕ ಪದಕ್ಕೆ ಸಮಾನ ಪದವಾಗಿ 'ವೃತ್ತಿ' ಎಂಬ ಪದವನ್ನು ಬಳಸಲಾಗಿದೆ. ವಚನಕಾರರಲ್ಲಿ ಬಹುತೇಕವಾಗಿ ತಮ್ಮ ಹೆಸರಿನ ಹಿಂದೆ ತಮ್ಮ ವೃತ್ತಿಯನ್ನು ನೇರವಾಗಿ ಸೂಚಿಸುವಂತೆ ಮಾಡಿಕೊಂಡಿದ್ದಾರೆ. ವಚನ ಚಳುವಳಿಯ ತತ್ವವಾದ ವೃತ್ತಿ ಸಮಾನತೆ, ಆ ಮೂಲಕ ಜಾತಿ ಸಮಾನತೆಯನ್ನು ತರುವ ಪ್ರಯತ್ನ ಢಾಳಾಗಿ ಕಾಣುತ್ತದೆ. ಜಾತಿ ನಾಶದ ಪರಿಕಲ್ಪನೆಯಿಂದ ವೃತ್ತಿನಾಮಗಳು ವ್ಯಕ್ತಿಗಳ ಹೆಸರಿನೊಂದಿಗೆ ಗೌರವದಿಂದ ಬಳಕೆಗೊಂಡವು.

ವಚನ ಚಳುವಳಿ ಒಂದು ದೊಡ್ಡ ಆಂದೋಲನವಾಗಿ ಬೆಳೆಯಲು ಸಮಾಜದಲ್ಲಿ ಜೀವಂತವಾಗಿದ್ದ ಕೆಳ ಸಮುದಾಯಗಳ ನಾನಾ ಬಗೆಯ ಕುಲಕಸುಬಿನವರು ಸೇರಿಕೊಂಡದ್ದರಿಂದ. ೧೧-೧೨ನೇ ಶತಮಾನದಲ್ಲಿ ರಾಜಪ್ರಭುತ್ವ ಮತ್ತು ವೈದಿಕರ ಧರ್ಮಪ್ರಭುತ್ವ ಹಾಗೂ ಶ್ರೀಮಂತ ವ್ಯಾಪಾರಿ ಪ್ರಭುತ್ವ ಈ ಮೂರು ಪ್ರಭುತ್ವಗಳು ಪ್ರಬಲವಾಗಿದ್ದವು. ಕೆಳ ಸಮುದಾಯಗಳಾದ ಶೂದ್ರ ಮತ್ತು ದಲಿತ ವರ್ಗಗಳು ಅಧೀನವಾಗಿ ಜೀವಿಸುತ್ತಿದ್ದವು. ಮೇಲು ನೋಟಕ್ಕೆ ಕಾಣುವಂತೆ ಕೆಳ ಸಮುದಾಯಗಳೇ ಉತ್ಪಾದನ ಕಾರ್ಯದಲ್ಲಿ ತೊಡಗಿದ್ದವು. ಇವುಗಳ ಉತ್ಪಾದನೆಯಿಂದ ಒಟ್ಟು ಸಮುದಾಯ ಜೀವನ ನಡೆಸುತ್ತಿತ್ತು. ಅಂದರೆ ಸಮಾಜದ ತಳಪಾಯವೇ ಈ ಉತ್ಪಾದನ ಸಮುದಾಯವಾಗಿತ್ತು. ಆದರೆ ಇದು ಅನೇಕ ಕಾರಣಗಳಿಂದ ಶೋಷಣೆಗೆ ಒಳಗಾಗಿತ್ತು. ತಮ್ಮ ಕುಲಕಸುಬಿನಿಂದ ಉತ್ಪಾದಿಸುತ್ತಿದ್ದ ಎಲ್ಲ ಬಗೆಯ ಸಂಪತ್ತಿನ ಮೇಲೆ ಕುಲಕಸುಬಿನವರ ಅಧಿಕಾರ ಇರುತ್ತಿರಲಿಲ್ಲ. ಮಧ್ಯವರ್ತಿಗಳ ಮೂಲಕ ಶೋಷಣೆಗೆ ಗುರಿಯಾಗುತ್ತಿದ್ದರು. ವಚನಕಾರರು ಅಥವಾ ಈ ವೃತ್ತಿನಿರತರು ಹುಟ್ಟಿ ಬೆಳೆದ ಪ್ರಾಂತ್ಯವನ್ನು ಗಮನಿಸಬೇಕು. ಕರ್ನಾಟಕದ ಉತ್ತರ ಭಾಗದ ಕೊನೆಯ ಜಿಲ್ಲೆಗಳಿಂದಲೇ ಬಂದವರು. ಬಯಲು ಸೀಮೆಯ ಪ್ರಾಂತ್ಯವಿದು. ರೈತರು, ನೇಕಾರರು, ಗಾಣಿಗರು, ಮೇದಾರರು ಮುಂತಾದ ವೃತ್ತಿನಿರತರು ಹೆಚ್ಚಿನ ಸಂಖ್ಯೆಯಲ್ಲಿದ್ದರು. ಇದಕ್ಕೆ ಕಾರಣ ಈ ಪ್ರಾಂತ್ಯದಲ್ಲಿ ರೈತರು ಹತ್ತಿಯನ್ನು ಹೆಚ್ಚು ಬೆಳೆಯುತ್ತಿದ್ದರು. ಎಣ್ಣೆ ಕಾಳುಗಳನ್ನು ಹೆಚ್ಚು ಬೆಳೆಯುತ್ತಿದ್ದರು. ಇಂತಹ ಹಲವು ಉದಾಹರಣೆಗಳನ್ನು ಕೊಡಬಹುದು. ನೇಕಾರರಿಗೆ, ಗಾಣಿಗರಿಗೆ, ರೈತರಿಗೆ, ಪಶುಪಾಲಕ ಮುಂತಾದ ವೃತ್ತಿಯಲ್ಲಿದ್ದ ಇವರು ಉದ್ದಿಮೆ ಅಥವಾ ಕೈಗಾರಿಕೆಗಳನ್ನು ನಡೆಸುವ ಹಕ್ಕನ್ನು ಹೊಂದಿರಲಿಲ್ಲ. ಇವರ ಉತ್ಪನ್ನಗಳನ್ನು "ಊಳಿಗಮಾನ್ಯ ಮಧ್ಯವರ್ತಿಗಳು"

ಕಸಿದುಕೊಂಡು ಬಿಡುತ್ತಿದ್ದರು. ಅಂದರೆ ಈ ಉತ್ಪಾದನೆಗಳ ಮೇಲೆ ತಮ್ಮ ಅಧಿಕಾರವನ್ನು ಸ್ಥಾಪಿಸುತ್ತಿದ್ದರು. ದೊಡ್ಡ ವ್ಯಾಪಾರಿಗಳು ಈ ಉತ್ಪನ್ನಗಳನ್ನು ಉದ್ದಿಮೆಯಂತೆ ಅಭಿವೃದ್ಧಿ ಪಡಿಸಿಕೊಂಡು ಶ್ರೀಮಂತರಾಗುತ್ತಿದ್ದರು. ಈ ಚಾರಿತ್ರಿಕ ಸಂದರ್ಭವನ್ನು ಅರಿತ ವಚನ ಚಳುವಳಿಯ ಪ್ರಮುಖ ನೇತಾರ ಬಸವಣ್ಣನು ಉತ್ಪಾದನ ಸಮುದಾಯಗಳನ್ನು, ಚಳುವಳಿಯತ್ತ ಸೆಳೆಯುವಲ್ಲಿ ಪ್ರಯತ್ನ ಮಾಡಿ ಯಶಸ್ವಿಯೂ ಆದನು. ವೃತ್ತಿನಿರತರು ವಚನ ಚಳುವಳಿಯಲ್ಲಿ ಸೇರಿಕೊಳ್ಳಲು ಕಾರಣಗಳನ್ನು ಆರ್.ಎನ್.ನಂದಿ ಅವರು, ವೀರಶೈವ ಚಳುವಳಿಯ ಹುಟ್ಟು ಲೇಖನದಲ್ಲಿ ವಿವರಿಸಿದ್ದಾರೆ: "ಊಳಿಗಮಾನ್ಯ ಮಧ್ಯವರ್ತಿಗಳ ಶೋಷಣೆಗಳಿಂದ ತಮ್ಮತಮ್ಮ ಆಸಕ್ತಿಗಳನ್ನು ರಕ್ಷಿಸಿಕೊಳ್ಳುವುದಕ್ಕಾಗಿ ವರ್ತಕ ಹಾಗೂ ಇತರ ಉತ್ಪಾದಕ ವರ್ಗಗಳನ್ನು ಒಟ್ಟಾಗಿಸಿದಂತೆ ಕಾಣುತ್ತದೆ. ಚರಿತ್ರೆಯಲ್ಲಿ ಕಾಣಿಸುವಂತೆ ಈ ಊಳಿಗಮಾನ್ಯ ಮಧ್ಯವರ್ತಿಗಳು ಪ್ರಾಥಮಿಕ ಉತ್ಪಾದಕರನ್ನು ಯಾವುದೇ ಉದ್ಯಮ ಅಥವಾ ವ್ಯಾಪಾರದಲ್ಲಿ ತೊಡಗಿಕೊಳ್ಳದಂತೆ ಶೋಷಣೆಗೆ ಒಳಪಡಿಸಿದ್ದರು. ಯಾವ ವ್ಯವಸಾಯ ಹಾಗೂ ಕೈಗಾರಿಕ ಕಾರ್ಮಿಕರನ್ನು ಹಳೆಯ ಬ್ರಾಹ್ಮಣ ವ್ಯವಸ್ಥೆಯೂ ತುಚ್ಛ ಶೂದ್ರರನ್ನಾಗಿ ಕಂಡಿತ್ತು. ಅಂತವರಿಗೆ ವೀರಶೈವ ಚಳುವಳಿ ಉಗಮವು ತಮ್ಮ ಕೆಳಮಟ್ಟದ ಸ್ಥಾನಮಾನದ ಬಿಡುಗಡೆಯ, ಉದ್ಧಾರದ ದಾರಿಯಾಗಿ ಕಂಡಿತು"[೨] ಎಂದು ಹೇಳಿದ್ದಾರೆ.

ಆರ್.ಎನ್.ನಂದಿ ಅವರು "ವೀರಶೈವ ಚಳುವಳಿಯ ಹುಟ್ಟು" ಲೇಖನದಲ್ಲಿ ವೃತ್ತಿನಿರತ ಸಮುದಾಯಗಳು ವಚನ ಚಳುವಳಿಯನ್ನು ಸೇರುವುದಕ್ಕೆ ಇರುವ ಕಾರಣಗಳನ್ನು ಆಧಾರ ಸಹಿತ ಒದಗಿಸಿ ಕೊಟ್ಟಿದ್ದಾರೆ. ವಿಜಾಪುರ, ಬೆಳಗಾವಿ, ಕಲಬುರಗಿ, ಧಾರವಾಡ, ಶಿವಮೊಗ್ಗ, ಲಿಂಗವಂತರಿರುವ ಜಿಲ್ಲೆಗಳು ಪ್ರಮುಖ ವ್ಯಾಪಾರಸ್ಥರು ಇಲ್ಲಿದ್ದರು. ಕಲ್ಯಾಣ ನಗರವೂ ಸೇರಿದಂತೆ ಹಲವು ವ್ಯಾಪಾರ ಪಟ್ಟಣಗಳು ಈ ಜಿಲ್ಲೆಗಳಲ್ಲೇ ಇದ್ದವು. ಈ ಜಿಲ್ಲೆಗಳ ವೃತ್ತಿನಿರತರು "ಊಳಿಗಮಾನ್ಯ ಮಧ್ಯವರ್ತಿಗಳಿಂದ" ತಪ್ಪಿಸಿಕೊಳ್ಳಲು ಹೆಚ್ಚಿನ ಕರವನ್ನು ಕಡಿಮೆ ಮಾಡಿಕೊಳ್ಳಲು ಅದೇ ತಾನೇ ಪ್ರವರ್ಧಮಾನಕ್ಕೆ ಬರುತ್ತಿದ್ದ ವೀರಶೈವ ಚಳುವಳಿಯನ್ನು ಸೇರಿಕೊಂಡರು. ಅದಕ್ಕಾಗಿಯೇ ಕುಲಕಸುಬಿನ ವಚನಕಾರರು ಈ ಚಳುವಳಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ ಎಂದು ಆರ್.ಎನ್.ನಂದಿ ಹೇಳುತ್ತಾರೆ. ವಚನ ಚಳುವಳಿಯನ್ನು ಚಾರಿತ್ರಿಕ ನೆಲೆಯಿಂದ ಗ್ರಹಿಸಿದ್ದರಿಂದ ಇದಕ್ಕೆ ಬೇರೆ ಆಯಾಮ ದೊರೆತಿದೆ.

ಪ್ರಸ್ತುತ ಅಧ್ಯಯನದಲ್ಲಿ "ವೃತ್ತಿನಿರತ ವಚನಕಾರರ"ನ್ನು ಎರಡು ಆಯಾಮಗಳಲ್ಲಿ ಗ್ರಹಿಸಲಾಗಿದೆ. ವಚನ ಸಾಹಿತ್ಯದಲ್ಲಿ ಕಾಣಿಸಿಕೊಂಡ ವೃತ್ತಿನಿರತ ವಚನಕಾರರನ್ನು ಮಾತ್ರ ಪರಿಗಣಿಸಲಾಗಿದೆ. ಇವರ ವೃತ್ತಿಯ ಸ್ವರೂಪವನ್ನು ವಿವರಿಸಲಾಗಿದೆ. ಅಂದರೆ ವೃತ್ತಿಯ ವಿಶೇಷವೇನು? ಇವರ ವೃತ್ತಿಯಿಂದ ಆಗುವ ಉತ್ಪನ್ನದ ಸ್ವರೂಪವೇನು? ಆ ಕಾಲದ ವೃತ್ತಿಯ ಸ್ವರೂಪಕ್ಕೂ, ಅದೇ ವೃತ್ತಿ ಈಗ ಪ್ರಸ್ತುತ ಸಮಾಜದಲ್ಲಿ ಉಳಿದುಕೊಂಡಿದೆಯೇ? ಉಳಿದುಕೊಂಡಿದ್ದರೆ ಆಗಿರುವ ಬದಲಾವಣೆಗಳೇನು? ಎಂಬುದನ್ನು ಒಬ್ಬೊಬ್ಬ ವೃತ್ತಿನಿರತ ವಚನಕಾರರನ್ನು ಬಿಡಿ ಬಿಡಿಯಾಗಿ ಈ ಅಧ್ಯಯನದಲ್ಲಿ ವಿವರಿಸಲಾಗಿದೆ. ವಚನ ಚಳುವಳಿಯ ಸಂದರ್ಭದ ವೃತ್ತಿಯ ಸ್ವರೂಪಕ್ಕೂ,

ಈ ಹೊತ್ತಿನಲ್ಲಿ ಜೀವಂತಿಕೆಯಿಂದ ಕೂಡಿದ್ದರೆ ಆಗಿರುವ ಬದಲಾವಣೆಗಳನ್ನು ಶೋಧಿಸಿ ವಿವರಿಸಲಾಗಿದೆ.

ಮುಖ್ಯವಾದ ಇನ್ನೊಂದು ಆಯಾಮವೆಂದರೆ, ವಚನಕಾರರು ವೃತ್ತಿಯಲ್ಲಿ ತೊಡಗಿಸಿಕೊಂಡು, ವಚನಗಳನ್ನು ರಚಿಸಿದ್ದಾರೆ ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರ. ಇಲ್ಲಿ ವೃತ್ತಿನಿರತರು ಅಂದಾಗ ಕಸುಬುದಾರರು ಎಂಬ ದೇಶಿ ಪದದಿಂದ ಗುರುತಿಸುವಾಗ ಈ ಕಸಬುದಾರರು ತಮ್ಮ ಕಸುಬಿಗೆ ಬಳಸುತ್ತಿದ್ದ ಉಪಕರಣಗಳು ಯಾವುವು? ಅವುಗಳ ರೂಪ, ಅವುಗಳ ಸ್ವರೂಪ, ಅವುಗಳಿಗೂ ಅವರಿಗೂ ಇರುವ ಅಂತರ್ ಸಂಬಂಧವೇನು? ತಮ್ಮ ವೃತ್ತಿಯ ಜತೆ, ಬಳಸುವ ಉಪಕರಣಗಳ ಬಗ್ಗೆ ಅವರಿಗಿರುವ ಭಾವನಾತ್ಮಕ ಸಂಬಂಧವನ್ನು ವಿವರಿಸಲಾಗಿದೆ. ವಚನಕಾರ ವೃತ್ತಿ ಮತ್ತು ಅಭಿವ್ಯಕ್ತಗೊಂಡ ವಚನಗಳೊಂದಿಗೆ ವ್ಯಾಖ್ಯಾನಿಸಲಾಗಿದೆ. ಇದು ಯಾಕೆ ವಿಶೇಷವೆಂದರೆ ವಚನ ಚಳುವಳಿಯಲ್ಲಿ ಮಾತ್ರ ವಚನಕಾರ, ವೃತ್ತಿ ಆತನ ವಚನದ ನಡುವಿನ ಸಂಬಂಧ ಬಿಡಿಸಲಾರದ್ದು ಆಗಿತ್ತು. ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಕಾಣಿಸುವ ಜೈನ ಸಾಹಿತ್ಯದಲ್ಲಾಗಲೀ, ರಗಳೆ, ಷಟ್ಪದಿ, ಸಾಂಗತ್ಯ ಕಾವ್ಯರೂಪ ಬಳಸಿ ಬರೆದ ಪುರಾಣ ಕಾವ್ಯಗಳಲ್ಲಿ ಆಗಲಿ, ಕೀರ್ತನ ಸಾಹಿತ್ಯದಲ್ಲಿ ಆಗಲಿ, ತತ್ವಪದ ಸಾಹಿತ್ಯದಲ್ಲಾಗಲಿ, ಆಧುನಿಕ ಕಾವ್ಯ ಪರಂಪರೆಯಲ್ಲಿ ಕೂಡ ಕವಿ-ಕವಿಯವೃತ್ತಿ-ಅಭಿವ್ಯಕ್ತಿಗೊಂಡ ಕಾವ್ಯ ಸಂಬಂಧವನ್ನು ವಚನ ಸಾಹಿತ್ಯದಲ್ಲಿ ಕಾಣಿಸುವಂತೆ ಕಾಣಿಸುವುದಿಲ್ಲ. ವೃತ್ತಿನಿರತರು ಕೇವಲ ವೃತ್ತಿನಿರತರಾಗಿರಲಿಲ್ಲ ಅವರೆಲ್ಲ ಭಕ್ತರಾಗಿದ್ದರು. ಭಕ್ತಿ ಪಂಥದಲ್ಲಿ ಇದ್ದವರು. ಅದರಿಂದಾಗಿ ಮನುಷ್ಯನ ಬದುಕೆ ಒಂದು ಆಧ್ಯಾತ್ಮವಾಗಿತ್ತು. ಇಲ್ಲಿ ಆಧ್ಯಾತ್ಮ ಎಂದರೆ, ಭಕ್ತಿ ಎಂದರೆ ಲೌಕಿಕ ಮತ್ತು ಅಲೌಕಿಕದ ನಡುವಿನ ಗೆರೆಯನ್ನು ಅಳಿಸಿಕೊಂಡಿರುವುದು. ಡಾ. ರಾಜೇಂದ್ರ ಚೆನ್ನಿ ಅವರು 'ಭಕ್ತಿ ಮತ್ತು ನಿತ್ಯ ಜೀವನ : ಕೆಲವು ಟಿಪ್ಪಣಿಗಳು' ಎಂಬ ಲೇಖನದಲ್ಲಿ "ವಚನ ಸಾಹಿತ್ಯವು ದಿನನಿತ್ಯದ ಬದುಕನ್ನು ಕಾಯಕವಾಗಿ ನೋಡುವುದರಿಂದ ಅದರಿಂದ ವಿಮುಖವಾಗುವ ಪ್ರಶ್ನೆಯೇ ಬರುವುದಿಲ್ಲ. 'ಕಾಯಕ'(ವೃತ್ತಿ)ವನ್ನು ಹಲವು ಬಗೆಯಲ್ಲಿ ಅರ್ಥೈಸಲಾಗಿದೆ. ನಾನು ಅದನ್ನು ದಿನನಿತ್ಯದ ಲೌಕಿಕ ಪ್ರಪಂಚವೆಂದು ವಿವರಿಸ ಬಯಸುತ್ತೇನೆ. ಅಂದರೆ ಕಾಯಕವನ್ನು ಒಂದು ತಾತ್ವಿಕ ಪರಿಕಲ್ಪನೆಯಾಗಿ ನೋಡುವ ಅವಶ್ಯಕತೆಯಿದೆ. ಅದು ಜೀವನ ವಿಮುಖತೆಗೆ ವಿರುದ್ಧವಾದ ಲೌಕಿಕ ಕೇಂದ್ರಿತವಾದ ತಾತ್ವಿಕತೆಯೊಂದರ ಪ್ರಧಾನ ರೂಪಕವಾಗಿದೆ. ಹೀಗಾಗಿ ಭಕ್ತನು ಕಾಯಕ ಮಾಡುವವನೂ ಆಗಿರುವುದರಿಂದ ದಿನನಿತ್ಯದ ಬದುಕಿನಲ್ಲಿಯೇ ಅವನ ಭಕ್ತಿ ಶರೀರ ಪಡೆಯಬೇಕು. ಇದರ ವ್ಯಾಪಕತೆಯನ್ನು ಗಮನಿಸಬೇಕು. ಕಾಯಕವೆಂದರೆ ಸಾಮಾಜಿಕ ಸಂಬಂಧಗಳ ಮೂರ್ತವಾದ ನೆಲೆಯನ್ನು ಪ್ರವೇಶಿಸುವ ಮಾರ್ಗವಾಗಿದೆ."೩ ಈ ವಿವರಣೆಯೂ ಭಕ್ತಿಯನ್ನು ಅರ್ಥಪೂರ್ಣವಾಗಿ ವ್ಯಾಖ್ಯಾನಿಸಲಾಗಿದೆ. ವೃತ್ತಿನಿರತ ವಚನಕಾರರು ತಮ್ಮ ವೃತ್ತಿಯನ್ನೇ ಆಧ್ಯಾತ್ಮ ಮಾಡಿಕೊಂಡಿದ್ದರು. ಆ ಆಧ್ಯಾತ್ಮವೇ ವಚನಗಳ ರೂಪದಲ್ಲಿ ಅಭಿವ್ಯಕ್ತಿಗೊಂಡಿವೆ. ಅನೇಕ ವೃತ್ತಿನಿರತ ವಚನಕಾರರ ವಚನಗಳನ್ನು ಅಧ್ಯಯನಕ್ಕೆ ಒಳಪಡಿಸಿದಾಗ ವೃತ್ತಿ ಸೂಚಕ ವಚನಗಳು ಅನೇಕ ವಚನಕಾರರಲ್ಲಿ ಅಭಿವ್ಯಕ್ತಗೊಂಡಿವೆ.

ಅವು ವೃತ್ತಿಗೂ ವಚನವನ್ನು ಕಾವ್ಯವೆಂದು ಭಾವಿಸಿದರೆ ಅವೆರಡರ ಮಧ್ಯೆ ಅಪೂರ್ವವಾದ ಅಂತರ್ ಸಂಬಂಧ ಕಾಣಿಸುತ್ತದೆ. ಈ ಅಧ್ಯಯನದಲ್ಲಿ ಈ ಬಗೆಯ ವಚನಗಳನ್ನು ಆ ವಚನಗಳ ರಚನಕಾರರ ವೃತ್ತಿ ಸಂಬಂಧದೊಂದಿಗೆ ವಿಶ್ಲೇಷಿಸಲಾಗಿದೆ. ಉದಾಹರಣೆಗೆ ಮಾದರ ದೂಳಯ್ಯನ ವಚನ.

ಅಟ್ಟೆಯ ಚುಚ್ಚುವ ಉಳಿಯ ಮೊನೆಯಲ್ಲಿ
ಪ್ರತ್ಯಕ್ಷನಾದ ಪರಮೇಶ್ವರನ ಕಂಡು,
ಇತ್ತಲೇಕಯ್ಯ ಕಾಯದ ತಿತ್ತಿಯ ಹೊತ್ತಾಡುವವನ ಮುಂದೆ
ನಿನ್ನ ಭಕ್ತರ ಠಾವಿನಲ್ಲಿಗೆ ಹೋಗಿ ಮುಕ್ತಿಯ ಮಾಡು
ನೀ ಹೊತ್ತ ಬಹುರೂಪ ತಪ್ಪದೆ
ರಜತದ ಬೆಟ್ಟದ ಮೇಲಕ್ಕೆ ಹೊಗು
ನಿನ್ನ ಭಕ್ತರ ಮುಕ್ತಿಯ ಮಾಡು
ಕಾಮ ಧೂಮಧೂಳೇಶ್ವರನ ಕರುಣದಿಂದ
ನೀನೆ ಬದುಕು

ವೃತ್ತಿಯಲ್ಲಿ ನಿರತನಾಗಿದ್ದವರಿಗೆ ಅದೇ ಶಿವ ಮತ್ತು ಸ್ವರೂಪ ಮತ್ತು ಮಹತ್ವವಾದದ್ದು, ಅದರ ನಂತರ ಉಳಿದುದೆಲ್ಲದು. ಈ ಬಗೆಯ ನೀತಿ ಅನೇಕ ವೃತ್ತಿನಿರತ ವಚನಕಾರರ ತಾತ್ವಿಕತೆಯಾಗಿದೆ. ಇದು ವಚನಕಾರರ ಮುಖ್ಯ ಸಿದ್ಧಾಂತವಾದ ಕಾಯಕತತ್ವದ ಪರಿಪಾಲನೆ. ಜೊತೆಗೆ ತಾವು ನೀಡುತ್ತಿದ್ದ ಶ್ರಮಗೌರವವಾಗಿದೆ. ವೃತ್ತಿ ನಿಷ್ಠೆಯಾಗಿದೆ.

ಕೊನೆಟಿಪ್ಪಣಿ

೧. ಡಾ. ಸಿ. ವೀರಣ್ಣ, ಕನ್ನಡ ಸಾಹಿತ್ಯ ಚಾರಿತ್ರಿಕ ಬೆಳವಣಿಗೆ, ಮಧ್ಯಕಾಲೀನ ಸಾಹಿತ್ಯ, ಸಂಪುಟ–೨, ನವಕರ್ನಾಟಕ ಪಬ್ಲಿಕೇಷನ್ಸ್, ಬೆಂಗಳೂರು. ೨೦೧೫.

೨. ಡಾ. ಆರ್.ಎನ್.ನಂದಿ, ವೀರಶೈವ ಚಳುವಳಿಯ ಹುಟ್ಟು (ಲೇಖನ), ಬಸವಣ್ಣನ ವಚನಗಳು: ಸಾಂಸ್ಕೃತಿಕ ಮುಖಾಮುಖಿ, ಸಂ. ಅಮರೇಶ ನುಗಡೋಣಿ, ಪು–೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೪.

೩. ಡಾ. ರಾಜೇಂದ್ರ ಚೆನ್ನಿ, ಎಂದಿಗೂ ಹೊಸದು, ಪು–೧೬, ಅಭಿರುಚಿ ಪ್ರಕಾಶನ, ಮೈಸೂರು, ೨೦೧೪.

ಅಧ್ಯಾಯ ೩

ವಚನಗಳಲ್ಲಿ ಕಾಯಕತತ್ವ(ವೃತ್ತಿ)ದ ಪರಿಕಲ್ಪನೆ

ಅಧ್ಯಾಯ : ಮೂರು

ವಚನಗಳಲ್ಲಿ ಕಾಯಕತತ್ವ(ವೃತ್ತಿ)ದ ಪರಿಕಲ್ಪನೆ

ವಚನಕಾರರು ಬದುಕಿದ್ದ ಕಾಲದಲ್ಲಿ ಪ್ರಭುತ್ವದ ಆಡಳಿತವಿತ್ತು. ವೈದಿಕಶಾಹಿತ್ವದ ಪ್ರಭಾವ ಪ್ರಭುತ್ವಕ್ಕಿದ್ದರೆ, ಸಾಮಾನ್ಯ ಜನವರ್ಗದ ಜೀವನದ ಮೇಲೆ ವೈದಿಕಶಾಹಿತ್ವ ಹಿಡಿತ ಸಾಧಿಸಿತ್ತು. ಅನಾದಿ ಕಾಲದಿಂದಲೂ ಇದು ಮುಂದುವರೆದಿತ್ತು. ಜನ ಸಮುದಾಯಗಳಲ್ಲಿ ತಮ್ಮ ತಮ್ಮ ಅನೇಕ ಜಾತಿ ಉಪಜಾತಿಗಳನ್ನು ಮಾಡಿಕೊಂಡಿದ್ದವು. ಅವುಗಳು ತಮ್ಮ ತಮ್ಮಲ್ಲೆ ತಾವು ಹೆಚ್ಚು ನಾವು ಹೆಚ್ಚು ಎನ್ನುವಂತಹ ಸ್ಥಿತಿಗೆ ತಲುಪಿದ್ದವು. ಅಲ್ಲದೇ ಪ್ರಚಲಿತವಿದ್ದ ನಾಲ್ಕು ವರ್ಗಗಳು ಮುಖ್ಯವರ್ಗವಿಂಗಡಣೆಯಾಗಿ ಮುಂದುವರೆದಿತ್ತು. ರಾಜ ಪ್ರತ್ಯಕ್ಷ ದೈವವಾದರೆ, 'ವೈದಿಕರು ಭೂಸುರರು'. ಹೀಗಾಗಿ ಇಡಿ ಜನ ಜೀವನದ ಸೂಕ್ಷ್ಮ ಸಂವೇದನೆಯಾದ ಧರ್ಮವನ್ನು ಕಾಪಾಡುವ, ಮುನ್ನೆಡೆಸುವ ಅಧಿಕಾರ ಪಡೆದಿದ್ದರು. ವ್ಯಾಪಾರ ಮಾಡುವ ವರ್ಗ ಒಂದಿದ್ದು ಇದು ಸಮಾಜದ ಮುಖ್ಯವಾಹಿನಿಯಲ್ಲಿ ಕಾರ್ಯನಿರ್ವಹಿಸುವಂತಿತ್ತು. ಇದನ್ನು ಎರಡನೇಯ ಪ್ರಭುತ್ವವಾಗಿಯೂ ಗುರುತಿಸಬಹುದು. ಸಮಾಜದ ಮುಖ್ಯವಾದ ವರ್ಗಗಳಾಗಿ ಈ ಮೂರು ವರ್ಗಗಳು ನೆಲೆ ನಿಂತಿದ್ದವು. ಅಲ್ಲದೆ ಇವರುಗಳ ಮಧ್ಯೆ ಒಳ್ಳೆಯ ಸಂಬಂಧವೂ ಇತ್ತು. ಆದರೆ ಸಮಾಜದಲ್ಲಿ ಕಷ್ಟಪಟ್ಟು ದುಡಿಯುವ ವರ್ಗವಾಗಿದ್ದ ಶೂದ್ರರು, ವೃತ್ತಿನಿರತರು, ದಲಿತರು, ಕೆಳವರ್ಗದವರು ಕೊನೆಯ ಸ್ಥಾನದಲ್ಲಿದ್ದರು. ಇವರುಗಳು ಮೇಲಿನ ವರ್ಗಗಳಾದ ರಾಜನಿಗೆ ನಿಷ್ಠೆಯ ಸೇವಕರಾಗಿ, ಸೇನಾನಿಗಳಾಗಿ, ಕಂದಾಯದಾರರಾಗಿ ಬದುಕಿದರೆ, ವೈದಿಕರ ಸೇವೆಗಾಗಿಯೂ ಸಿದ್ಧರಾಗಿರಬೇಕಿತ್ತು. ಶೂದ್ರರೆಂದು ಕರೆಸಿಕೊಂಡು ಬದುಕಿದ್ದ ಜನರು ಮೇಲ್ವರ್ಗವಾಗಿದ್ದವರ ಸೇವೆ ಮಾಡಿಕೊಂಡು ಹೆಚ್ಚಿನ ಸೌಲಭ್ಯವನ್ನೇನೂ ನಿರೀಕ್ಷಿಸದೇ ಇದ್ದಷ್ಟರಲ್ಲೇ ದುಡಿದು ಜೀವಿಸಬೇಕಾಗಿತ್ತು. ಅಲ್ಲದೆ ಈ ಶೂದ್ರರ ವರ್ಗಕ್ಕಿಂತ ಕೆಳಗೆ ಜನ ಸಮುದಾಯವಿರುವುದನ್ನು ಗುರುತುಸಲಾಗಿದ್ದು ಅದು ದಲಿತವರ್ಗ ಅಥವಾ ಪಂಚಮವರ್ಗವಾಗಿ ಇತ್ತು. ಶೂದ್ರವರ್ಗಕ್ಕಿಂತಲೂ ಕೆಳಗಿನ ಸ್ಥಾನ ಇವರದ್ದಾಗಿತ್ತು. ಇವರು ಮುಟ್ಟಿಸಿಕೊಳ್ಳಲೂ ಅರ್ಹರಾಗಿರಲಿಲ್ಲ. ಊರಲ್ಲಿ ಇವರು ಇರುವಂತಿಲ್ಲ. ಅಷ್ಟೇ ಏಕೆ ಊರಲ್ಲಿ ಬರುವಂತೆಯೂ ಇರಲಿಲ್ಲ. ಇವರ ನೆರಳು ಸಹ ಮೈಲಿಗೆಯನ್ನು ಮಾಡುತ್ತಿತ್ತು. ಹೀಗೆ

ಕೆಳವರ್ಗದ ವ್ಯಕ್ತಿ ಓರ್ವ ಊರೊಳಕ್ಕೆ ಬಂದರೂ ಅದೂ ಮೇಲ್ವರ್ಗದವರ ಸೇವೆಗಾಗಿಯೆ ಬರಬೇಕಿತ್ತು. ಅವರಲ್ಲಿ ಏನನ್ನಾದರೂ ಬೇಡುವುದಕ್ಕೋ ಅಥವಾ ಅವರ ಸೇವೆಗಾಗಿಯೋ? ಹಾಗೆ ಬರುವಾಗ ಅವನು ಕೂಗಿಕೊಂಡು ಬರಬೇಕಿತ್ತು. 'ನಾನು ಬರುತ್ತಿದ್ದೇನೆ, ದೂರ ಸರಿಯಿರಿ' ಎಂದು ವಿನಂತಿಸಿಕೊಂಡು ಬಾಳುವಂತ ಹೀನಸ್ಥಿತಿ ಕೆಳವರ್ಗದವರ ಪಂಚಮರಿಗೆ ಮಾಡಲಾಗಿತ್ತು. ದಾನ, ದತ್ತಿ, ಪ್ರಶಸ್ತಿಗಳನ್ನು ಕೊಡುವವನು ರಾಜ. ಪಡೆದು ಉಣ್ಣುವವರು ಪುರೋಹಿತ ವರ್ಗ. ಆದರೆ ನಿಜವಾಗಿ ದುಡಿಯುತ್ತಿದ್ದ ವರ್ಗಕ್ಕೆ ಇಂತಹುಗಳ ಸುಳಿವೇ ಇರುತ್ತಿರಲಿಲ್ಲ. ಇವರು ಅಕ್ಷರ ಕಲಿಯುವಂತಿರಲಿಲ್ಲ. ಇನ್ನು ಓದು ಬರಹದ ಮಾತೆಲ್ಲಿ. ದೇವರು, ಧರ್ಮ ಇಂತವುಗಳು ಇವರಿಂದ ಬಹುದೂರ. ಅದೂ ಇದ್ದರೂ, ಯಾರೋ ಸೃಷ್ಠಿ ಮಾಡಲಾಗಿದ್ದ ಕ್ಷುದ್ರ ದೇವತೆಗಳು, ಮಾರಿ, ಮಸಣಿ ಮುಂತಾದ ಅಂದಾಚರಣೆಯಲ್ಲಿ ಬೀಳಿಸುವಂತ ಬಗೆಯ ದೇವತ ಕಲ್ಪನೆಯನ್ನು ಇವರ ಮೇಲೆ ಹೇರಲಾಗಿತ್ತು. ಹಾಗಾಗಿ ಭಯದಿಂದಲೇ ಬದುಕುತ್ತಿದ್ದರು. ಹಾಗೆ ನೋಡಿದರೆ ಸಮಾಜಕ್ಕೆ ಶೂದ್ರರಿಂದ, ಶೂದ್ರರಿಗಿಂತ ಕೆಳವರ್ಗದಲ್ಲಿದ್ದ ಪಂಚಮರಿಂದ, ದಲಿತರಿಂದ ಸಾಕಷ್ಟು ಉಪಯೋಗವಾಗುತ್ತಿತ್ತು. ಇವರೆ ಸಮಾಜದ ಬುನಾದಿಯಾಗಿದ್ದರು. ಅನೇಕ ವೃತ್ತಿಯಿಂದ ಕುಲ ಕಸುಬುಗಳಿಂದ, ದುಡಿಮೆಯಿಂದ ಸಮಾಜಕ್ಕಾಗಿ ಮೀಸಲಾಗಿದ್ದರು. ಇವರು ಬಹುಸಂಖ್ಯಾತರಾಗಿದ್ದು ಶ್ರಮವನ್ನೆ ನಂಬಿ ಬದುಕುತ್ತಿದ್ದರು.

ವೃತ್ತಿ ನಿರತರ ಬದುಕಿಗೆ ಸ್ಫೂರ್ತಿಯಾಗಿ ವಚನ ಚಳುವಳಿ ಗಟ್ಟಿಗೊಳ್ಳಲು ಕಾರಣವಾಗಿದ್ದು ಭಕ್ತಿ ಪಂಥದ ಉದಯ. ಅದು ಬೆಳೆಯುತ್ತ, ಬೆಳೆಯುತ್ತ ಅನೇಕ ಬಗೆಯ ಚಳವಳಿಯಾಗಿ ಬದಲಾಯಿತು. ಈ ಬದಲಾವಣೆಯಿಂದ ಸಮಾಜದಲ್ಲಿ ಹಲವಾರು ಬಗೆಯಲ್ಲಿ ಪರಿವರ್ತನೆಗೆ ಕಾರಣವಾಯಿತು. ಭಕ್ತಿ ಚಳುವಳಿಯನ್ನು ಬೆಳೆಸಿದ್ದವರಲ್ಲಿ ಕೆಳವರ್ಗವೇ ಹೆಚ್ಚು. ಅಂದರೆ ಸಮಾಜದಲ್ಲಿ ಶೂದ್ರರು, ದಲಿತರೇ ಆಗಿದ್ದರು. ದೇವರು, ಧರ್ಮ, ಅಧಿಕಾರ, ಸಮಾನತೆ, ಎಲ್ಲವುಗಳಲ್ಲಿ ಹಿಂದುಳಿಸಲಾಗಿದ್ದ ಇವರು ತಮ್ಮ ಸ್ಥಾನಮಾನಗಳನ್ನು ಬದಲಾವಣೆ ಮಾಡಿಕೊಳ್ಳಲು ಉತ್ಸುಕತೆ ತೋರಿದರು. ಹಾಗಾಗಿ ವಚನಕಾರರು ಏರ್ಪಡಿಸಿದ ಚಳುವಳಿಯ ಪರಿಣಾಮವಾಗಿ ಬದಲಾವಣೆಯು ಏರ್ಪಟ್ಟು ಹೊಸ ವ್ಯವಸ್ಥೆಗಳು ಹುಟ್ಟಿದವು. ಶೂದ್ರರು, ದಲಿತರು, ಶಿವಭಕ್ತರಾಗಿ, ಶಿವಶರಣರಾದರು. ಆ ಮೂಲಕ ಸಾಮಾಜಿಕವಾಗಿ, ಆರ್ಥಿಕವಾಗಿ, ಧಾರ್ಮಿಕವಾಗಿ ಸಬಲರಾದರು. ಇವರ ಮೇಲಿದ್ದ ಪುರೋಹಿತಶಾಹಿಯ ಸಾಂಸ್ಕೃತಿಕ ನಿರ್ಭಂಧಗಳು ಸಡಿಲಗೊಳ್ಳತೊಡಗಿದವು. ಈ ಕಾಲಾವಧಿಯ ಉಪಯೋಗವನ್ನು ಪಡೆದುಕೊಂಡು ಅನೇಕ ಕೆಳವರ್ಗದವರು, ವೃತ್ತಿ ಮೂಲದವರು, ಕುಲಕಸುಬಿನ ವೃತ್ತಿಯನ್ನು ಅವಲಂಬಿಸಿದ್ದ ವೃತ್ತಿನಿರತರು ವಚನಗಳನ್ನು ರಚಿಸಿ ವಚನಕಾರರಾಗಿ, ಭಕ್ತರಾಗಿ, ಅನುಭಾವಿಗಳಾಗಿ ರೂಪಗೊಂಡರು.

ಬಸವಣ್ಣನು ಕಟ್ಟಿ ಬೆಳೆಸಿದ ಶರಣ ಆಂದೋಲನಕ್ಕೆ ಜೀವನಾಡಿಯಾಗಿ ಕೆಲಸ ಮಾಡಿದವರು ವೃತ್ತಿನಿರತ ವಚನಕಾರರು. ಹಲವು ಮೂಲ ಕುಲಕಸಬುಗಳನ್ನು ಮಾಡುತ್ತ ಜೀವನ ಸಾಗಿಸುತ್ತಿದ್ದ ಅನೇಕರು ಮಹಾಮನೆಯನ್ನು ಸೇರಿದರು. ಮಾನವನ ಬದುಕನ್ನು ಕುರಿತು ಚಿಂತನೆಗೆ ತೊಡಗಿ

ಅನೇಕ ಬಗೆಯ ಶೋಷಣೆಗಳನ್ನು ಪ್ರತಿಭಟಿಸುವ ಶಕ್ತಿ ಪಡೆದರು. ಅಲ್ಲದೆ ಸಮಾಜದ ಪರಿವರ್ತನೆಗೆ ಹಲವು ಮಹತ್ವದ ಚಿಂತನೆಗಳನ್ನು, ತಾತ್ವಿಕತೆಯನ್ನು ರೂಢಿಗೆ ತಂದರು. ಅದರಲ್ಲಿ ವಿಶಿಷ್ಟ ಮತ್ತು ಮಹತ್ವಪೂರ್ಣ ತತ್ವವಾದ ಕಾಯಕತತ್ವ ಬಹಳ ಮುಖ್ಯವಾದುದು. ಈ ಚಿಂತನ ಕ್ರಮವೇ ಅನೇಕ ವೃತ್ತಿ ಜೀವಿಗಳಿಗೆ ಭಾಷೆ, ಧ್ವನಿಯನ್ನು ನೀಡಿತು ಎಂದೇ ಹೇಳಬಹುದು. ಮುಖ್ಯವಾಗಿ ಧಾರ್ಮಿಕ ಚಳುವಳಿಯಾಗಿ ರೂಪಗೊಂಡ ವಚನ ಚಳುವಳಿಯು ಅನೇಕ ಆಯಾಮಗಳಲ್ಲಿ ವಿಸ್ತೃತಗೊಂಡಿರುವುದನ್ನು ನೋಡುತ್ತೇವೆ. ಇಂತಹ ಕಾಯಕ ಜೀವಿಗಳ ಚಳುವಳಿಯು ಹುಟ್ಟಿ ಬೆಳೆಯಲು ಅನೇಕ ಚಾರಿತ್ರಿಕ ಅಂಶಗಳು ಕೆಲಸ ಮಾಡಿರುವುದನ್ನು ಇಲ್ಲಿ ಗಮನಿಸಬಹುದು. ಶ್ರಮವನ್ನು ನಂಬಿ ಬುದಕುತ್ತಿದ್ದ ವೃತ್ತಿ ಜೀವಿಗಳು ಹೋರಾಟದ ಹಾದಿ ಹಿಡಿಯಲು ಅಂದಿನ ಕಾಲದ ಸ್ಥಿತಿಗತಿಗಳು ಕಾರಣವಾಗಿದ್ದವು.

ಪ್ರಭುತ್ವ ವೃತ್ತಿ ಜೀವಿಗಳನ್ನು ಬಳಸಿಕೊಳ್ಳುವ ರೀತಿಯೇ ಅವರು ಪ್ರತಿಭಟನೆಯ ಅಸ್ತ್ರವಿಡಿಯಲು ಕಾರಣಗಳಲ್ಲಿ ಒಂದಾಗಿದೆ ಎಂಬುದನ್ನು ಅರಿಯಬಹುದಾಗಿದೆ. 'ವಚನಕಾರರು ಹುಟ್ಟಿ ಬೆಳೆದ ಕರ್ನಾಟಕದ ಭಾಗದಲ್ಲಿ, ವೃತ್ತಿಗಳನ್ನು ಅವಲಂಬಿಸಿಕೊಂಡು ಬದುಕುತ್ತಿದ್ದವರ ಮೇಲೆ ಹಾಕಲಾಗಿದ್ದ ತೆರಿಗೆಗಳು, ಅವರ ಅಧಿಕಾರ ವರ್ಗ ಮತ್ತು ಮಠಗಳಿಗೆ ಮಾಡಬೇಕಿದ್ದ ಬಿಟ್ಟಿ ಕೆಲಸ-ಇವುಗಳನ್ನು ಗಮನಿಸಿದರೆ, ವಚನಕಾರರಾಗಿ ಬಂದರೆಲ್ಲರೂ ಕಾಯಕ ಜೀವಿಗಳೇ ಆಗಿದ್ದಾರೆ ಏಕೆಂಬುದು ವಿಚಾರಾರ್ಹ ಸಂಗತಿಯಾಗುತ್ತದೆ. ಈ ಕಾಲದಲ್ಲಿ ಹಾಕಲಾದ ತೆರಿಗೆಗಳನ್ನು ಗಮನಿಸಿದರೆ, ಯಾವುದರ ಮೇಲೆ ಯಾರ ಮೇಲೆ ತೆರಿಗೆಗಳಿರಲಿಲ್ಲ ಎಂದು ಕೇಳಿದರೆ ಕಷ್ಟ, ಸಮಾನ್ಯರ ಭೂಮಿ, ಅಂಗಡಿ, ಮನೆ, ತೋಟ, ಅಡಿಕೆ ಇವುಗಳ ಮೇಲೆ ವರ್ಷಕ್ಕೊಂದು ಸಲ ಕೊಡುತ್ತಿದ್ದ 'ಸಿದ್ದಾಯ' ವೊಂದನ್ನುಳಿದರೆ ಉಳಿದೆಲ್ಲಾ ತೆರಿಗೆಗಳು ಕಾಲಕಾಲಕ್ಕೆ ಕೊಡಬೇಕಾಗಿದ್ದ ತೆರಿಗೆಗಳು. ಈ ಕಾಲದ ಶಾಸನಗಳು, ಅಕ್ಕಸಾಲೆ, ನಾಯಿಂದ, ಅಂಬಿಗ, ಅಗಸ, ಕಮ್ಮಾರ, ಚಮ್ಮಾರ, ಕುಂಬಾರ ಇವರುಗಳ ಮೇಲೆ ತೆರಿಗೆಯನ್ನು ಹಾಕಿರುವುದನ್ನು ಹೇಳುತ್ತವೆ. ಇವರು ಮಾತ್ರವಲ್ಲ, ಇತರ ವೃತ್ತಿಯವರಾದ ಗಾಣ, ನೂಲು, ಮಗ್ಗ, ಬಣ್ಣ, ಕುಲುಮೆ ಕೆಲಸಗಾರರು ತೆರಿಗೆ ಕೊಡಬೇಕಾಗಿತ್ತು'[7] ಉಪ್ಪು ಮಾಡುವವರೂ ಸುಂಕ ಕೊಡಬೇಕಾಗಿತ್ತು ಎಂದು ಗುರುತಿಸಲಾಗಿದೆ. ಅಂದಿನ ಕಾಲದಲ್ಲಿ ವೃತ್ತಿ ತೆರಿಗೆಯನ್ನು ಒಳಗೊಂಡಂತೆ ಅನೇಕ ಸುಂಕಗಳನ್ನು ರಾಜರು ಜನರಿಗೆ ವಿಧಿಸುತ್ತಿದ್ದುದರ ಉಲ್ಲೇಖ ಅನೇಕ ಶಾಸನಗಳಿಂದಲೂ ತಿಳಿದುಬರುತ್ತದೆ. ಒಟ್ಟಿನಲ್ಲಿ ವೃತ್ತಿನಿರತ ವಚನಕಾರರ ಚಳುವಳಿಗೆ ಕೇವಲ ಇದುವರೆಗೆ ವಿಶ್ಲೇಷಣೆಗೆಗೊಳಪಟ್ಟಿರುವಂತೆ ಅಲ್ಲಿಯವರೆಗೆ ನೆಲೆ ನಿಂತಿದ್ದ ಒಂದು ಪರಂಪರೆಯ ವಿರುದ್ಧ ಪ್ರತಿಭಟನೆಯಲ್ಲಿ ಇದು ನೇರ ಪ್ರಭುತ್ವದ ವಿರುದ್ಧ ನಡೆದಂತಹ ಪ್ರತಿಭಟನೆ ಎಂಬ ನಿಲುವಿಗೆ ವಿದ್ವಾಂಸರಾದ ಸಿ.ವೀರಣ್ಣ ಅವರು ಬಂದು ಬಿಡುತ್ತಾರೆ. ಶ್ರಮ ಸಂಸ್ಕೃತಿಯೊಂದನ್ನು ತಾತ್ವಿಕ ನೆಲೆಯಲ್ಲಿ ಕಟ್ಟಿನಿಲ್ಲಿಸುವ ಪ್ರಯತ್ನ ವೃತ್ತಿನಿರತ ವಚನಕಾರರದ್ದು.

ವಚನಕಾರರು ಶ್ರಮದ ಮೂಲಕವೇ ದೇವರನ್ನು ಕಂಡುಕೊಂಡವರಾಗಿದ್ದಾರೆ. ಕಾಯಕ ಇವರಿಗೆ ಬದುಕಲು ಮಾತ್ರ ಸೀಮಿತವಾಗಿಲ್ಲ ಎಂಬುದನ್ನು ಅವರ ವಚನಗಳಲ್ಲಿ ಅಭಿವ್ಯಕ್ತಗೊಂಡಿರುವ

ಕಾಯಕ ಸಿದ್ಧಾಂತದಿಂದ ಅರಿಯಬಹುದು. ಇವರಿಗೆ ವೃತ್ತಿ ಅನುಭಾವಿಕ ನೆಲೆಯದ್ದು, ಆಧ್ಯಾತ್ಮದ ಸಾಧನೆಯ ದಾರಿಯಾಗಿದೆ. ಹಾಗಾಗಿಯೇ ವೃತ್ತಿನಿರತ ವಚನಕಾರರು ಶ್ರಮ ಸಿದ್ಧಾಂತದ ಮೂಲಕವೇ ತಮ್ಮನ್ನು ತಾವು ಗುರುತಿಸಿಕೊಂಡಿದ್ದಾರೆ.

ಸಮಾಜದಲ್ಲಿ ಹಲವಾರು ಸ್ತರಗಳಿದ್ದು, ನೂರಾರು ಕಸುಬುಗಳಿದ್ದು, ನೂರಾರು ಕಸಬುಗಳಲ್ಲಿ ತೊಡಿಗಿಸಿಕೊಂಡ ಸಾವಿರಾರು ಜಾತಿಗಳು ಇವೆ. ಈ ಒಂದೊಂದು ಜಾತಿ, ಜನಾಂಗವು ತಮ್ಮದೇ ಆದ ದೈವ, ತಮ್ಮದೇ ಆದ ಆಚಾರ–ವಿಚಾರ, ಆಚರಣೆ, ನಂಬಿಕೆಗಳನ್ನು ಒಳಗೊಂಡಿದ್ದವು. ಅವುಗಳು ಸಾಮಾಜಿಕವಾಗಿ ಅದರದೇ ಸ್ಥಾನಮಾನಗಳನ್ನು ಹೊಂದಿವೆ. ಆಯಾ ಜಾತಿಯ ವೃತ್ತಿಗಳು ಅವರವೇ ಆಗಿದ್ದವು. ಇಂತಹ ವೃತ್ತಿಗಳಿಂದಲೂ ಜಾತಿಗಳ ಶ್ರೇಷ್ಠತೆ, ಕನಿಷ್ಠತೆ ನಿರ್ಧಾರವಾಗುತ್ತಿತ್ತು. ಇಲ್ಲಿ ನಾವು ಮುಖ್ಯವಾಗಿ ಶ್ರಮ ವಿಭಜನೆಯನ್ನು ಗುರುತಿಸಬಹುದೇ ಹೊರತು. ವೃತ್ತಿ ಗೌರವವನ್ನಲ್ಲ. ಇಲ್ಲಿ ವೃತ್ತಿ ಸಮಾನತೆ, ಗೌರವವೆಂಬುದೇ ಇಲ್ಲ. ಇಂತಹ ಅಸಮಾನ ವೃತ್ತಿಗಳಿಂದ ಹುಟ್ಟಿದ ಜಾತಿಗಳಲ್ಲಿ ಅದೇ ಅಸಮಾನತೆಯು ಮುಂದುವರೆಯಿತು. ಅಲ್ಲದೆ ವೃತ್ತಿ, ಜಾತಿ ಸಂಕರದ ನಡುವೆ ಲಿಂಗತಾರತಮ್ಯವು ಬೆಳೆದು ಹೆಮ್ಮರವಾಗಿಬಿಟ್ಟಿತ್ತು.

ವಚನ ಚಳುವಳಿ ಮುಖ್ಯವಾಗಿ ಧಾರ್ಮಿಕ ಚಳುವಳಿ ಎಂಬುದನ್ನು ನಾವು ಒಪ್ಪಬೇಕಾಗುತ್ತದೆ. ಸಾಮಾಜಿಕ, ಧಾರ್ಮಿಕ, ರಾಜಕೀಯ, ಆರ್ಥಿಕ ಸುಧಾರಣೆಗಳೇನಿದ್ದರೂ ಮತಕ್ಕೆ, ಧರ್ಮಕ್ಕೆ ಹೊಂದಿಕೊಂಡಿರುವಂತಹ ಪರಿಕಲ್ಪನೆಗಳೇ ಆಗಿವೆ. ಹಾಗಾಗಿ ನಿಷ್ಠಾ ಪ್ರಧಾನ್ಯವಾದ ಒಂದು ಪರಿಕಲ್ಪನೆಯ ಅಗತ್ಯತೆಯನ್ನು ಅರಿತೆ ವಚನಕಾರರು ಮುನ್ನೆಡೆದಿದ್ದಾರೆ. ನಿಷ್ಠೆ ಇದ್ದರೆ ಸ್ವಾರ್ಥಭಾವನೆ ಇಲ್ಲದಿದ್ದರೆ ಮಾತ್ರ ಯಾವುದಾದರೂ ಸಂಘಟನೆ ಯಶಸ್ವಿಯ ಪಥ ಹಿಡಿಯುತ್ತದೆ. ಆದರೆ ಅದಕ್ಕೆ ಎಷ್ಟರ ಮಟ್ಟಿಗೆ ನಿಷ್ಟೆ ಇರಬೇಕು?. ಯಾವ ಬಗೆಯಲ್ಲಿರಬೇಕು? ಅಥವಾ ನಂಬಿಕೆಯೆಂಬುದು ಯಾವ ಪ್ರಮಾಣದಲ್ಲಿ ನಿಂತಿದೆ? ಎಂಬ ಪ್ರಶ್ನೆಗಳಿಗೆ ತಾತ್ವಿಕವಾದ ಪರಿಕಲ್ಪನೆಗಳನ್ನು ಉತ್ತರವಾಗಿ ಕಂಡುಕೊಳ್ಳುವ ಪ್ರಯತ್ನ ನಡೆಸಿದರು. ಇಂತಹ ನಿಷ್ಠೆ, ಪ್ರಾಮಾಣಿಕತೆ, ನಂಬಿಕೆಗಳು ಬೇರೂರಿದ್ದ ಕಾರಣವಾಗಿಯೇ ವಚನ ಚಳುವಳಿಗೆ ಒಂದು ವಿಶೇಷ ಆಯಾಮ ದೊರಕಿತು. ಅದು ಕಾಯಕ ತತ್ವದ ಪರಿಕಲ್ಪನೆಯಾಗಿ ರೂಪಧಾರಣೆ ಮಾಡಿತು. ನಿಷ್ಠೆ ಪ್ರಾಮಾಣಿಕತೆಯು ಬದುಕಿನ ಉನ್ನತಿಗೆ ಆಧಾರ ಎಂಬ ನಿಲುವು ಪ್ರಕಟವಾಯಿತು. ಅಲ್ಲದೇ ವೃತ್ತಿಯೇ ಅವರ ಅಂತರಂಗದ ಶುದ್ಧತೆಯ ದಾರಿಯಾಯಿತು. ಆಧ್ಯಾತ್ಮದ ಸಾಧನೆಗೆ ವೃತ್ತಿಯು ಮುಖ್ಯ ಮಾಧ್ಯಮವಾಗಿ ಪರಿಣಮಿಸಿತು. ಹಾಗಾಗಿ ವಚನಕಾರರ ಮುಖ್ಯ ಚಿಂತನೆಯಾಗಿ 'ಕಾಯಕತತ್ವ' ಮಹತ್ವದ ಸ್ಥಾನ ಪಡೆಯಿತು. ವಚನಕಾರರ ಅಭಿಪ್ರಾಯದಂತೆ ಪ್ರತಿಯೊಬ್ಬರು ಕಾಯಕದೊಳಗಾಗಲೇಬೇಕು. ಒಂದಲ್ಲ ಒಂದು ವೃತ್ತಿಯನ್ನು ಅನುಸರಿಸಲೇಬೇಕು. ಯಾರೂ ಕಾಯಕದಿಂದ ಹಿಂದೆ ಸರಿಯುವಂತಿರಲಿಲ್ಲ. ಅವರವರ ವೃತ್ತಿಗಳೇ ಅವರಿಗೆ ಶ್ರೇಷ್ಠ ಎಂಬ ಶ್ರಮ ಗೌರವವನ್ನು ನೆಲೆಸುವುದಷ್ಟೆ ಅಲ್ಲ. ಆ ಶ್ರಮ ಗೌರವದ ಮಹತ್ವವನ್ನು ಮೂಡಿಸುವುದು, ಯಾವ ವೃತ್ತಿಯೂ ಕನಿಷ್ಟವಲ್ಲ ಎಂಬುದನ್ನು ಇಡಿ ಸಮಾಜಕ್ಕೆ ಮನವರಿಕೆ ಮಾಡುವುದು ಅವರ ಅವಶ್ಯಕತೆಗಳೊಲ್ಲೊಂದಾಗಿದೆ. ಹಾಗಾಗಿ ಸಹಜವಾಗಿಯೇ

ಅವರ ಬದುಕಿನ ಅನನ್ಯತೆಯಾಗಿ ವೃತ್ತಿ ಮಾರ್ಪಾಡಾಯಿತು. ಅದು ಅವರ ಸ್ವರೂಪತೆಯ ಮಾದರಿಯಾಯಿತು. ಅದು ಅವರ ವಚನ ರಚನೆಗಳಲ್ಲಿ ಸ್ಥಾನ ಪಡೆದು, ಅವರ ಅಭಿವ್ಯಕ್ತಿಯ ಮೂಲ ಮಾಧ್ಯಮವಾಯಿತು.

ಜನರ ಬದುಕಿನ ಮೇಲೆ ವರ್ಗೀಕೃತ ವ್ಯವಸ್ಥೆ ಬೀರಿದ್ದ ಪರಿಣಾಮದ ಸ್ಥೂಲ ಪರಿಚಯ ವಿದ್ದ ಬಸವಣ್ಣನಿಗೆ ತನ್ನ ಜನಪರ ಚಿಂತನೆಯನ್ನೊಳಗೊಂಡಿರುವ ತಿಳುವಳಿಕೆಯನ್ನು ಸಾಮಾನ್ಯ ಜನರಿಗೆ, ಅದರಲ್ಲೂ ಹಲವಾರು ರೀತಿಯಲ್ಲಿ ಅಸಮಾನತೆಗೆ ಒಳಗಾಗಿದ್ದವರಿಗೆ ಮುಟ್ಟಿಸುವ ಜವಾಬ್ದಾರಿಯನ್ನು ಹೊತ್ತುಕೊಂಡು ಬಿಡುತ್ತಾನೆ. ಆ ದಿಸೆಯಲ್ಲಿ ಕಾರ್ಯ ಪ್ರವೃತ್ತನಾಗುತ್ತಾನೆ. ತನ್ನ ಕಲ್ಪನೆಗೆ, ಆದರ್ಶದ ಸಮಾಜ ನಿರ್ಮಾಣಕ್ಕೆ ಬೇಕಾದ ವೈಚಾರಿಕ ನಿಲುವುಗಳನ್ನು ಹಲವಾರು ಪರಿಕಲ್ಪನೆಗಳ ಮೂಲಕ ಪ್ರತಿಪಾದನೆ ಮಾಡುವ ಪ್ರಯತ್ನ ಮಾಡುತ್ತಾನೆ. ಜಾತೀಯತೆಯ ಬುಡವನ್ನು ಸಡಿಲಿಸಲು ಮತ್ತು ವೃತಿಯ ಮೂಲಕ ಸಮಾಜದ ಅಭಿವೃದ್ಧಿಯಾಗುವುದೆಂಬ ಮಹತ್ವದ ಆಶಯವನ್ನು ಬಿತ್ತುವ ಪ್ರಯತ್ನ ಪರಿಣಾಮಕಾರಿಯಾಗಿಯೇ ಮಾಡುತ್ತಾನೆ. ಇದರಿಂದ ವೃತ್ತಿ ಬದುಕಿನ ಸಮೂದಾಯಕ್ಕೆ ಜೀವ ಚೈತನ್ಯವೊಂದು ದೊರೆತಂತೆ ಆಯಿತು. ಹಾಗಾಗಿ ಈ ಪರಿಕಲ್ಪನೆ ಅಡಿಯಲ್ಲಿ, ವಚನ ಆಂದೋಲನದಲ್ಲಿ ಭಾಗವಹಿಸಿದವರ ಚಿಂತನೆಗಳಾಗಿ ಪ್ರಸಿದ್ಧಿ ಪಡೆದಿರುವುದು, ಮಹತ್ವ ಪಡೆದಿರುವುದನ್ನು ವಚನಗಳಲ್ಲಿ ಕಾಣುತ್ತೇವೆ. ಶರಣರು ಉದಯವಾಗುವ ಹೊತ್ತಿಗೆ ವೃತ್ತಿ ತಾರತಮ್ಯವೇರ್ಪಟ್ಟಿತ್ತು. ಶ್ರೇಷ್ಠವೃತ್ತಿ ಮಾಡುವವರು ಶ್ರೇಷ್ಠ, ಕನಿಷ್ಠ ವೃತ್ತಿ ಮಾಡುವವರು ಕನಿಷ್ಠವೆಂಬ ತೀರ್ಮಾನಕ್ಕೆ ಬರಲಾಗಿತ್ತು. ವಚನಕಾರರು ಈ ತಾರತಮ್ಯವನ್ನು ಅಲ್ಲಗಳೆದು, ವೃತ್ತಿಯಲ್ಲಿ ಸಮಾನತೆಯನ್ನು ಸಾರಿದರು.'

ಹೊಲೆಗಂಡಲ್ಲದೆ ಪಿಂಡದ ನೆಲೆಗಾಶ್ರಯವಿಲ್ಲ
ಜಲ-ಬಿಂದುವಿನ ವ್ಯವಹಾರ ಒಂದೇ
ಆಶೆಯಾಮಿಷ ರೋಷ ಹರುಷ ವಿಷಯಾದಿಗಳೆಲ್ಲ ಒಂದೇ
ಏನನೋದಿ, ಏನಕೇಳಿ, ಏನಫಲ?
ಕುಲಜನೆಂಬುದಕ್ಕೆ ಆವುದು ದೃಷ್ಟ?
ಸಪ್ತದಾತುಸಮಂ ಪಿಂಡಂ ಸಮಯೋಗಿ ಸಮುದ್ಭವಂ
ಆತ್ಮ-ಜೀವಸಮಾಯುಕ್ತಂ ವರ್ಣನಾಂಕಿಂ ಪ್ರಯೋಜನಂ ಎಂಬುದಾಗಿ
ಕಾಸಿಕಮ್ಮಾರನಾದ, ಬೀಸಿ ಮಡಿವಾಳನಾದ,
ಹಾಸನಿಕ್ಕಿ ಸಾಲಿಗನಾದ, ವೇದವನೋದಿ ಹಾರುವನಾದ
ಕರ್ಣದಲ್ಲಿ ಜನಿಸಿದವರುಂಟೆ ಜಗದೊಳಗೆ?
ಇದು ಕಾರಣ ಕೂಡಲಸಂಗಮದೇವಾ
ಲಿಂಗಸ್ಥಲವನರಿದವನೆ ಕುಲಜನು[೨]

ಬಸವಣ್ಣ ಈ ಮೇಲಿನ ವಚನದ ಮೂಲಕ ಕಾಯಕದ ಮೂಲಕ ಶ್ರಮವಹಿಸಿ ದುಡಿಯುವ ವರನ್ನೂ ಹೇಳುತ್ತಲೇ ಬೌದ್ಧಿಕ ಶ್ರಮದ ಮಹತ್ವವನ್ನು ಹೇಳುತ್ತಾನೆ. 'ವೇದವನೋದಿ ಹಾರುವನಾದ'

ಎನ್ನುತ್ತಾ ಬೌದ್ಧಿಕ ಶ್ರಮವನ್ನು ಆ ಸಾಲಿನಲ್ಲಿ ನಿಲ್ಲಿಸಿದುದಲ್ಲದೆ, ದೈಹಿಕ-ಬೌದ್ಧಿಕ ಶ್ರಮಗಳನ್ನು ಅದೇ ರೀತಿ ಸಾಲಿಗನ ಕೆಲಸ, ಆಧಿಕ ಶ್ರಮದ ಕಮ್ಮಾರನ ಕೆಲಸಗಳನ್ನು ಒಂದೇ ಪಾತಳಿಯಲ್ಲಿ ಪರಿಭಾವಿಸಿದರು. ಇವರೆಲ್ಲ ಕ್ರಿಯಾ ವ್ಯತ್ಯಾಸಗಳೇ ಹೊರತು, ಶ್ರೇಷ್ಠ ಕನಿಷ್ಠಗಳಲ್ಲವೆಂಬ ಅಭಿಪ್ರಾಯ ವಿಲ್ಲಿದೆ. ವೃತ್ತಿಗಳೇ ಜಾತಿಗಳಾಗಿರುವ ಕುರಿತು ಕಾಸಿಕಮ್ಮಾರನಾದ, ಬೀಸಿ ಮಡಿವಾಳನಾದ, ಹಾಸನಿಕ್ಕಿ ಸಾಲಿಗನಾದ, ವೇದವನೋದಿ ಹಾರುವನಾದ ಎಂಬ ಬಸವಣ್ಣನ ವಚನದಲ್ಲಿ ಅಭಿವ್ಯಕ್ತಿ ಗೊಂಡಿರುವ ಭಾವದಲ್ಲಿ ಗುರುತಿಸಬಹುದು. ಬಹುಶಃ ವೃತ್ತಿಯ ಬಗೆಗಿನ ತಾರತಮ್ಮಕ್ಕೂ ಈ ವಚನ ಉತ್ತರ ವಾಗಿ ನಿಲ್ಲುತ್ತದೆ. ವಚನಕಾರರ ಚಿಂತನೆಗಳೇ ಹಲವು ಆಯಾಮವನ್ನು ಪಡೆದುಕೊಂಡಿರುವಂತಹವು. ಹಾಗಾಗಿ ಬಸವಣ್ಣನಿಗೆ ಜಾತಿ ಅಸಮಾನತೆ ಹೇಗೋ ಹಾಗೇಯೇ ವೃತ್ತಿ ಅಸಮಾನತೆಯೂ ಕೂಡ. ಇದರಿಂದ ಇಂತಹ ವಚನಗಳು ಬದಲಾವಣೆಗೆ ಪ್ರೇರೇಪಿಸುವಂತೆ ರಚಿತಗೊಂಡಿವೆ.

ವಚನಕಾರರ ಮುಂದಿದ್ದ ಸಮಸ್ಯೆಗಳು ಅನೇಕ. ಅದರಲ್ಲಿ ಜಾತಿಯಷ್ಟೇ ಅಲ್ಲ ವೃತ್ತಿ ಅಸಮಾನತೆಯೂ ಕೂಡ. ಹಾಗಾಗಿ ಒಂದು ಧಾರ್ಮಿಕ ರೂಪದೊಳಗೆ ಇವರ ಒಟ್ಟು ಚಿಂತನೆಗಳು ನಿಯಮಗಳಾಗಿ ಒಡಮೂಡಿದವು. ಅಜೆಂಡವಾಗಿ ಪ್ರಕಟಗೊಂಡವು. ಸಮಸಮಾಜದ ನಿರ್ಮಾಣಕ್ಕೆ ಅವಶ್ಯವಾಗಿದ್ದವು. ಹಾಗಾಗಿ ಹಲವಾರು ಪರಿಕಲ್ಪನೆಗಳು ಸಿದ್ಧಗೊಂಡವು. ಹೀಗಾಗಿ ವೃತ್ತಿಗಳನ್ನು ಬದುಕಲಿಕ್ಕಾಗಿ ಎಂಬಂತೆ ಇದ್ದವುಗಳನ್ನು ಧಾರ್ಮಿಕ ಚೌಕಟ್ಟಿನಲ್ಲಿ ಸೇರಿಸಿಕೊಂಡು ವೃತ್ತಿಗಳನ್ನು ಉನ್ನತಿಕರಿಸಿದರು. ಮತ್ತು ಹಲವು ವಿಸ್ತಾರದ ಚಿಂತನೆಗಳಾಗಿ ಪರಿಭಾವಿಸಿಕೊಂಡರು. ಇದರ ಜೊತೆಗೆ ಶ್ರಮ ಸಂಸ್ಕೃತಿಯ ಪ್ರತಿಪಾದನೆಯು ನಡೆಯಿತು. ಹೆಚ್ಚಾಗಿ ಶ್ರಮ ಗೌರವವನ್ನು ಪ್ರತಿಷ್ಠಾಪಿಸಿದಂತಾಯ್ತು. ವೃತ್ತಿಗಳು ಅನುಭವಗಳಾಗಿಯಷ್ಟೇ ಉಳಿಯಲಿಲ್ಲ. ಅವು ಅನುಭಾವವಾಗಿ ಬದಲಾದವು. ಜೀವನಕ್ರಮಕ್ಕೂ, ಭಕ್ತಯೆಂಬುದು ನಿತ್ಯಜೀವನವಾಯಿತು. ಇದು ಆಧ್ಯಾತ್ಮಿಕ ಅನುಸಂದಾನಕ್ಕೂ ಕೊಂಡಿಯಾಗಿ ಕೆಲಸ ಮಾಡಿತು.

ಕಾಯಕ ಸಿದ್ಧಾಂತವನ್ನು ಪ್ರತಿಪಾದಿಸುವ ಮೂಲಕ ವಚನಕಾರರು ವೃತ್ತಿಗೆ ಮತ್ತು ಬದುಕಿಗೆ ಮಹತ್ವದ ಸ್ಥಾನವನ್ನು ನೀಡಿದ್ದಾರೆ. ಕಾಯಕ ಸಿದ್ಧಾಂತದ ಮುಖ್ಯಾಂಶಗಳನ್ನು ಈ ರೀತಿ ಗುರುತಿಸಲಾಗಿದೆ.

ಪ್ರತಿಯೊಬ್ಬನೂ ಉಪಜೀನಕ್ಕಾಗಿ ವೃತ್ತಿಯೊಂದನ್ನು ಅನುಸರಿಸಲೇಬೇಕು.
ವೃತ್ತಿಯನ್ನು ಅತ್ಯಂತ ಗೌರವ ಭಾವನೆಯಿಂದ ನಡೆಸಬೇಕು.
ತನ್ನ ಕೆಲಸಕ್ಕೆ ತಕ್ಕವಾದಷ್ಟು ಪ್ರತಿಫಲವನ್ನು ಮಾತ್ರ ಸ್ವೀಕರಿಸಬೇಕು.
ತನ್ನ ಸಂಪಾದನೆಯ ಹೆಚ್ಚಿನ ಧನವನ್ನು ದಾಸೋಹಕ್ಕೆ ಬಳಸಬೇಕು.
ವೃತ್ತಿಗಳೆಲ್ಲ ಸಮಾನವಾದವು[೩]

ಕಾಯಕವು ಸೈದ್ಧಾಂತಿಕವಾದ ಆರ್ಥಿಕ ತತ್ವ ಮತ್ತು ಆಧ್ಯಾತ್ಮದ ಬದುಕನ್ನು ಒಗ್ಗೂಡಿಸುವ ಪ್ರಯತ್ನವಾಗಿ ಕಾಣುತ್ತದೆ. ವಚನಕಾರರು ನುಡಿದಂತೆ ನಡೆದು ತೋರಿಸಿದರು. ಆದರೆ ಮುಂದಿನ ದಿನಗಳಲ್ಲಿ ಅದು ಅನುಷ್ಠಾನಕ್ಕೆ ಬರದೆ ಮತ್ತೆ ಹಳೆಯ ಜಾಡನ್ನೆ ಹಿಡಿದು ಸಾಗಿರುವುದನ್ನು

ಇಂದಿನ ಲಿಂಗಾಯಿತ ಪರಂಪರೆಯನ್ನು ಕಂಡು ಹೇಳಬಹುದು. ಹಾಗೆ ನೋಡಿದರೆ ವಚನಕಾರರು ವೃತ್ತಿಗಳ ಸಮಾನತೆಯನ್ನು ಸಾರಿದರು. ಜಾತಿಯತೆಯನ್ನು ವೃತ್ತಿಗಳ ಪರಿದಿಯಾಚೆಗೆ ವಿಸ್ತರಿಸಿ, ತಾರತಮ್ಯವನ್ನು ದೂರ ಸರಿಸಿದರು. ಯಾರು ಯಾವ ವೃತ್ತಿಯನ್ನು ಬೇಕಾದರೂ ಮಾಡುವಂತ ಸ್ವತಂತ್ರ್ಯವನ್ನು ಪ್ರತಿಪಾದಿಸಿದರು ಎಂದೇ ಅನೇಕ ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಇನ್ನು ಕೆಲವರು ಹೇಳುವಂತೆ ಜಾತಿ ಅಥವಾ ವೃತ್ತಿಗಳೂ ಅನುವಂಶಿಕತೆಯನ್ನೆ ಮುಂದುವರೆಸಿಕೊಂಡು ಬಂದಿರುವುದನ್ನು ನೋಡಬಹುದು. ಬಹುಶಃ ವೃತ್ತಿಗಳನ್ನು ಅನುವಂಶಿಕವಾಗಿಯೇ ತಮ್ಮ ತಮ್ಮ ಕುಲಕಸುಬುಗಳನ್ನು ಮುಂದುವರೆಸಿರುವ ಉದಾಹರಣೆ ಸಿಗುತ್ತಲೇ ಇವೆ. ಹಡಪದ ವೃತ್ತಿಯನ್ನು ಸಮಾಜದ ಯಾವ ವರ್ಗವೂ ಅನುಸರಿಸುವುದಿಲ್ಲ. ಆ ವೃತ್ತಿ ಮೂಲದವರೇ ಅದನ್ನು ಮುಂದುವರಿಸಿಕೊಂಡು ಬಂದಿದ್ದಾರೆ. ಇಂತಹ ಉದಾಹರಣೆಗಳು ಅನೇಕ ವೃತ್ತಿಯ ಅನೇಕ ಕುಲಕಸುಬುಗಳ ಅವಲಂಬಿತರಿಗೆ ಅನ್ವಯವಾಗುತ್ತದೆ. ಈ ರೀತಿಯ ಬದಲಾವಣೆಯನ್ನು ಮಾಡಿಕೊಳ್ಳದ ಉದ್ದೇಶವು ಅಸ್ಪಷ್ಟ ಮತ್ತು ವಚನಕಾರರ ನಂತರದಲ್ಲಿ ಮತ್ತೆ ಜಾತೀಯತೆಗೆ ಒಳಗಾಗಿ ಜಾತಿ ಉಪಜಾತಿಗಳೆಂಬ ವರ್ಗ ವಿಂಗಡಣೆ ಮಾಡಿಕೊಂಡು ಜನ ಬದಕುವುದು ನಡೆದೆ ಇದೆ. ಇದೊಂದು ದುರಂತವೇ ಸರಿ.

ಕಾಯಕದ ಜೊತೆ ಜೊತೆಗೆ ದಾಸೋಹದ ಪರಿಕಲ್ಪನೆ ಕಾಣಿಸಿಕೊಳ್ಳುತ್ತದೆ. ಜಂಗಮ ದಾಸೋಹಕ್ಕೆ ಎನ್ನುವ ಪದಗಳಲ್ಲಿ ವ್ಯಕ್ತವಾಗುವ ಭಾವ ಸಮಾಜ ಎಂದು ಗ್ರಹಿಸಬೇಕು. ಸಮಾಜ ಮುಖ್ಯ ಎಂದು ವಚನಕಾರರು ಭಾವಿಸಿದ್ದಾರೆ. ಅಂದರೆ ಕಾಯಕದ ಶ್ರಮ ದಾಸೋಹದಲ್ಲಿ ಸಾರ್ಥಕ್ಯವನ್ನು ಕಾಣುತ್ತದೆ ಎಂಬುದು ವೃತ್ತಿನಿರತ ವಚನಕಾರರ ಅಭಿಪ್ರಾಯ.

ಈ ವಿಚಾರದಲ್ಲಿ ಉರಿಲಿಂಗ ಪೆದ್ದಿಗಳ ಪುಣ್ಯ ಸ್ತ್ರೀ ಕಾಳವ್ವೆಯ ವಚನ ಗಮನಾರ್ಹ.

ಕೃತ್ಯಕಾಯಕ ವಿಲ್ಲದವರು ಭಕ್ತರಲ್ಲ.
ಸತ್ಯ ಶುದ್ಧವಿಲ್ಲದುದು ಕಾಯಕವಲ್ಲ.
ಅಸೆಯೆಂಬುದು ಭವದ ಬೀಜ
ನಿರಾಸೆಯೆಂಬುದು ನಿತ್ಯ ಮುಕ್ತಿ
ಉರಿಲಿಂಗ ಪೆದ್ದಿಗಳರಸನಲ್ಲಿ ಸದರವಲ್ಲ ಕಾಣವ್ವಾ

(ಶಿವಶರಣೆಯರ ವಚನ ಸಂಪುಟ, ವಚನ ಸಂಖ್ಯೆ: ೬೫೪)

ಈ ವಚನದಲ್ಲಿ ಕಾಯಕದ ಪರಿಕಲ್ಪನೆಯ ಸ್ಪಷ್ಟ ಚಿತ್ರಣ ಕಾಣುತ್ತದೆ. ಭಕ್ತನಾದವನು ಕಾಯಕ ಮಾಡುವಂತವನಾಗಿರಬೇಕು. ಅಂದರೆ ಭಕ್ತನ ಮೊದಲ ಗುಣಲಕ್ಷಣ ಕಾಯಕ ಮಾಡುವುದು ಅದು ಸತ್ಯ ಶುದ್ಧವಾಗಿರಬೇಕು. ಹಾಗಾದಲ್ಲಿ ಮಾತ್ರ ಭಕ್ತನಾಗಲು, ಮುಕ್ತನಾಗಲು ಸಾಧ್ಯ ಎಂಬ ನಿಲುವು ವಚನದ್ದು. ಕಾಯಕತತ್ವದ್ದು.

ವೃತ್ತಿಯ ರಹಿತತೆಯನ್ನು ಮತ್ತು ಸಂಗ್ರಹ ಪ್ರವೃತ್ತಿಯನ್ನು ಸಮಾಜಕ್ಕೆ ಅಂಟಿದ ರೋಗವನ್ನಾಗಿ ವಚನಕಾರರು ಕಂಡುಕೊಂಡಿದ್ದಾರೆ. ಕಾಯಕ-ದಾಸೋಹ ತತ್ವಗಳು ಸಮಾಜದ ರೋಗಗಳನ್ನು

ತೊಡೆಯಲು ಸಹಕಾರಿ ಹಾಗಾಗಿ ಅನೇಕ ವಚನಕಾರರ ಅಭಿವ್ಯಕ್ತಿಯ ಮುಖ್ಯತತ್ವ ಇದಾಗಿದೆ. ಪ್ರತಿಯೊಬ್ಬರು ಒಂದು ವೃತ್ತಿಯನ್ನು ಅನುಸರಿಸಬೇಕು ನಿಜ ಆದರೆ ವೃತ್ತಿಯ ಸ್ವರೂಪ ಹೇಗಿರಬೇಕೆಂದು ಒಂದು ಸಂವಿಧಾನವು ನಿರ್ಮಾಣವಾಗಿದೆ. ಅದು ಸತ್ಯ ಶುದ್ಧವಾದ ವೃತ್ತಿ ಮಾತ್ರ ಕಾಯಕವಾಗುತ್ತದೆ. ನಿಷ್ಠೆ, ಪ್ರಮಾಣಿಕತೆಯನ್ನೊಳಗೊಂಡ ವೃತ್ತಿ ಮಾತ್ರ ಕಾಯಕವಾಗುವುದು. ಯಾವುದೋ ಅಡ್ಡದಾರಿ ಹಿಡಿದು ಗಳಿಸಿದುದು ವಚನ ಸಂವಿಧಾನದ ವಿರುದ್ಧವಾದುದಾಗುತ್ತದೆ. ವೃತ್ತಿಗೆ ಗೌರವ, ಪ್ರಧಾನ್ಯತೆ ಬರುವುದು ಅದರಿಂದ ಬಂದ ಫಲವನ್ನು ದಾಸೋಹಕ್ಕೆ, ಜಂಗಮ ಸೇವೆಗೆ ಬಳಸಿದಾಗ ಎಂಬುದು ಕಾಣುತ್ತದೆ.

ಸತ್ಯಶುದ್ಧ ವೃತ್ತಿಯೇ ಅರ್ಪಣೆ ಎಂಬ ಭಾವದಿಂದ ಕೆಲಸ ಮಾಡಿ ಗಳಿಸಿದ ದ್ರವ್ಯದಿಂದ ಬದುಕು ಕಟ್ಟಿಕೊಳ್ಳುವುದು ವೃತ್ತಿನಿರತ ವಚನಕಾರರ ತತ್ವ, ಅಗತ್ಯತೆಯನ್ನು ಮೀರಿದ ಸಂಗ್ರಹವನ್ನು ಒಪ್ಪಿಕೊಳ್ಳದ ಮನೋಭಾವ ಇವರದು. ದಿನನಿತ್ಯ ದುಡಿಯಲೇಬೇಕು. ಅದರಿಂದ ಬಂದ ಫಲವನ್ನು ಉಪಭೋಗಿಸಬೇಕು. ಇವರಲ್ಲಿ 'ಬಂದುದು ತತ್ಕಾಲಕ್ಕುಂಟು, ಪಸರಕ್ಕನುವಿಲ್ಲ' ಎಂಬ ಬಸವಣ್ಣನ ಮಾತಿನಂತೆ ಅಸಂಗ್ರಹದಿಂದ ಸಮಾಜದ ಸ್ಥಿತಿಗತಿಯನ್ನು ಸುಧಾರಿಸುವ ಯತ್ನಕ್ಕೆ ದಾರಿಯಾಗಿದೆ. ಮತ್ತು ಹೇಗೆ ಬೇಕೋ ಹಾಗೆ ಅಡ್ಡದಾರಿ ಹಿಡಿದು ಗಳಿಸುವಂತೆಯೂ ಇಲ್ಲ ಎಂಬ ನಿರ್ಬಂಧವು ಇದೆ. ಇದೊಂದು ಸಾಮಾಜಿಕ, ನೈತಿಕ ಮೌಲ್ಯವನ್ನು ಕಟ್ಟಿ ಬೆಳೆಸುವಂತಿದೆ.

ಕಾಯಕವೆಂದು ಕಾಯವ ಬಳಲಿಸದೆ,
ತನುಕರಗದೆ, ಮನ ನೋಯದೆ.
ಬೇಡಿಕಾಡಿ ಮಾಡುವುದು ದಾಸೋಹವೆ?
ಆವಕಾಯಕವು ಪ್ರಾಣವೆ ಕಡೆಯಾಗಿ ದ್ರವ್ಯ ಮೊದಲಾಗಿ
ಚಿತ್ತಶುದ್ಧದಲಿ ಗುರುಚರಕ್ಕೆ ಮುಯ್ಯಾಂತು ಬಂದುದಕ್ಕೆ ಸರಿಗಂಡು,
ಲಿಂಗದೇಹಿಗಳನ್ನೆಲ್ಲ ಒಂದೇ ಪ್ರಮಾಣದಲ್ಲಿ ಸಂದುದು,
ಈಶಾನ್ಯಮೂರ್ತಿಮಲ್ಲಿಕಾರ್ಜುನಲಿಂಗಕ್ಕೆ ತೃಪ್ತಿ.

(ಸಂಕೀರ್ಣ ವಚನ ಸಂಪುಟ: ೪, ವಚನ ಸಂಖ್ಯೆ: ೨೬೬)

ಮಾನವನ ಉದ್ಧಾರ, ಆರ್ಥಿಕ ಭದ್ರತೆ, ಸಮಾಜದಲ್ಲಿ ತಾರತಮ್ಯಗಳ ನಿವಾರಣೆಗೆ ಬಸವಾದಿ ವಚನಕಾರರು ಕಂಡುಕೊಂಡ ವಿಶೇಷ ಮಾರ್ಗವೇ ಕಾಯಕ ಸಿದ್ಧಾಂತ. ಇದು ದೇಹ, ಮನಸ್ಸು ತೊಡಗಿ ಮಾಡುವಂತಹದ್ದು. ಕೇವಲ ಬದುಕು ನೂಕುವ ವೃತ್ತಿಯಾಗಿರದೇ ವಿಶೇಷ ಅರ್ಥ ವ್ಯಾಪ್ತಿಯನ್ನು ಹೊಂದಿದೆ. ಶ್ರಮ ಗೌರವ, ಸ್ವಾವಲಂಬನೆ, ಸ್ವಾಭಿಮಾನದ ಬದುಕು, ನಿಷ್ಠೆ, ಪ್ರಾಮಾಣಿಕತೆಯ ಜೀವನ, ಸಮಾನತೆ, ಮುಂತಾದ ವಿಷಯ ವ್ಯಾಪ್ತಿಯನ್ನು ಕಾಯಕದ ಪರಿಧಿಯಲ್ಲೇ ವಚನಕಾರರು ಅಡಗಿಸಿಟ್ಟಿದ್ದಾರೆ. ಹಾಗಾಗಿ ಕಾಯಕತತ್ವ ಮಹತ್ವದ ಪರಿಕಲ್ಪನೆಯಾಗಿ ವಚನಗಳಲ್ಲಿ ಕಾಣುತ್ತದೆ. ಅಲ್ಲದೇ ಪ್ರತಿಯೊಬ್ಬರೂ ಕಾಯಕವನ್ನು ಮಾಡಲೇಬೇಕೆಂಬ ನಿಯಮ ವಚನಕಾರರದ್ದು. ಇದನ್ನು ನುಲಿಯ ಚಂದಯ್ಯನು ಈ ವಚನದಲ್ಲಿ ಸ್ಪಷ್ಟವಾಗಿಯೇ ತಿಳಿಸುತ್ತಾನೆ.

ಗುರುವಾದಡೂ ಕಾಯಕದಿಂದಲೇ ಜೀವನ್ಮುಕ್ತಿ.
ಲಿಂಗವಾದಡೂ ಕಾಯಕದಿಂದಲೇ ಶಿಲೆಯ ಕುಲ ಹರಿವುದು.
ಜಂಗಮವಾದಡೂ ಕಾಯಕದಿಂದಲೇ ವೇಷದ ಪಾಶ ಹರಿವುದು.
ಗುರುವಾದಡೂ ಚರಸೇವೆ ಮಾಡಬೇಕು.
ಲಿಂಗವಾದಡೂ ಚರಸೇವೆ ಮಾಡಬೇಕು.
ಜಂಗಮವಾದಡೂ ಚರಸೇವೆ ಮಾಡಬೇಕು.
ಚನ್ನಬಸವಣ್ಣ, ಪ್ರಿಯ ಚಂದೇಶ್ವರಲಿಂಗದ ಅರಿವು.

(ಸಂಕೀರ್ಣ ವಚನ ಸಂಪುಟ: ೪, ವಚನ ಸಂಖ್ಯೆ: ೧೩೧೪)

ಈ ವಚನದಲ್ಲಿ 'ಗುರು ಲಿಂಗ ಜಂಗಮ'ವಾದಡೂ ಕಾಯಕದೊಳಗಾಗಲೇಬೇಕೆಂಬ ನಿಲುವು ಪ್ರಕಟಗೊಂಡಿರುವುದನ್ನು ಕಾಣುತ್ತೇವೆ. ಹಿರಿಯ-ಕಿರಿಯ, ಮೇಲು-ಕೀಲು ಎಂಬ ಬೇದಗಳಿಲ್ಲ. ಪ್ರತಿಯೊಬ್ಬ ಮನುಷ್ಯನು ಕೂಡ ಕಾಯಕವನ್ನು ಮಾಡಬೇಕೆಂಬ ನಿಲುವು ವಚನಕಾರರದು. ಪೂಜ್ಯ ಸ್ಥಾನಕ್ಕೇರಿದವನು ಕೂಡ ಕಾಯಕದಿಂದ ಬದುಕು ಸಾಗಿಸಿದಾಗ ಮಾತ್ರ ಜೀವನ್ಮುಕ್ತಿ. ಗುರುವಾದರೂ ಸರಿ, ಜಂಗಮವಾದರೂ ಸರಿ. ಅಷ್ಟೇಕೆ ಸಾಕ್ಷಾತ್ ಶಿವನಾದರೂ ಕಾಯಕದಲ್ಲಿ ತೊಡಗಿಕೊಳ್ಳಬೇಕು ಎಂಬುದು ವಚನಕಾರರು ಕಟ್ಟಿದ ಭದ್ರ ಆರ್ಥಿಕ ಸಿದ್ಧಾಂತ. ಇಂತಹ ಕಾಯಕತತ್ವವನ್ನು ಗ್ರಹಿಸಲೂ ಅನೇಕ ಕಥೆಗಳಿಂದಲೂ ಸಾಧ್ಯವಿದೆ. ಅಂತಹ ಕಥೆಗಳಲ್ಲಿ ನುಲಿಯ ಚಂದಯ್ಯನ ಕಾಯಕನಿಷ್ಠೆ ಅಥವಾ ವೃತ್ತಿ ನಿಷ್ಠೆಯನ್ನೇ ಪ್ರತಿಪಾದಿಸುವ ನಿಟ್ಟಿನಲ್ಲಿ ಪ್ರತಿಪಾದಿತಗೊಂಡ ತಾತ್ವಿಕತೆಯನ್ನು ಈ ಕಥೆಯಲ್ಲಿ ಗಮನಿಸಬಹುದು. ನುಲಿಯ ಚಂದಯ್ಯನದು ಹಗ್ಗ, ಕಣ್ಣಿ ಹೊಸೆದು ಮಾರಿ ಜೀವನ ನಡೆಸುವುದು ಆತನವೃತ್ತಿ. ಒಂದು ದಿನ ತನ್ನ ವೃತ್ತಿಯನ್ನು ನಿಷ್ಠೆಯಿಂದ ಮಾಡುತ್ತಿರುವಾಗ ಹುಲ್ಲು ಕೊಯ್ಯುವ ಸಂದರ್ಭದಲ್ಲಿ ಕಟ್ಟಿಕೊಂಡಿದ್ದ ಲಿಂಗ ಕೆಳಗೆ ಬೀಳುತ್ತದೆ. ಅದನ್ನು ಗಮನಿಸಿದರೂ, ಮತ್ತೆ ಆ ಲಿಂಗವನ್ನು ತೆಗೆದುಕೊಳ್ಳದೆ ನಡೆಯುತ್ತಾನೆ. ಅದನ್ನು ಕಂಡು ಶಿವನೆ ಮಾನವ ರೂಪವಾಗಿ ಬಂದು ಸ್ವೀಕರಿಸು ಎಂದು ಕೇಳುತ್ತಾನೆ. ಅದಕ್ಕೊಪ್ಪದೆ 'ಮೊದಲೇಕೆ ಹೋದಿರಿ, ಹೀಗೇಕೆ ಬರುವಿರಿ, ನಾನೊಲ್ಲೆ' ಎಂದು ಹೇಳುತ್ತಾನೆ. ಲಿಂಗವು ಎಷ್ಟು ಬೇಡಿಕೊಂಡರೂ ಅದನ್ನು ತಿರಸ್ಕರಿಸಿ ನಡೆಯುತ್ತಾನೆ. ಆ ಲಿಂಗವು ಮಡಿವಾಳ ಮಾಚಯ್ಯನ ಬಳಿಗೆ ಹೋಗಿ ದೂರು ಕೊಡುತ್ತದೆ. ಮಡಿವಾಳಯ್ಯನು ಚಂದಯ್ಯನನ್ನು ವಿಚಾರಿಸಿದನು. ಅದಕ್ಕೆ ಅವನು 'ಸಜ್ಜೆಯಿಂದ ಕಡೆಗೆ ಬಂದು ಆತ ಹೋದನೆಂಬ ಸಂದೇಹ ನನಗಿಲ್ಲ, ಆತ್ಮಹೋದರೆ ಘಟ ಉಳಿಯುವುದೆ?" ಎನ್ನುತ್ತಾನೆ. ಅದಕ್ಕೆ ಮಾಚಯ್ಯನು 'ದಾಸೋಹ ಉಳ್ಳನ್ನಕ್ಕ ದೇಹಧರ್ಮ ಉಳ್ಳನ್ನಕ್ಕ ಲಿಂಗಪೂಜಯಂ ಮಾಡಬೇಕು' ಎಂದು ಹೇಳಿದನು. ಲಿಂಗ ಪೂಜೆಗಿಂತ ಜಂಗಮ ಸೇವೆಯ ಶ್ರೇಷ್ಠವೆಂದು ಭಾವಿಸಿದ್ದ ಚಂದಯ್ಯನು 'ನಮಗೆ ಜಂಗಮಾರ್ಚನೆಗೆ ವೇಳೆ ಸಮ, ಲಿಂಗಪೂಜೆಗೆ ವೇಳೆಯಿಲ್ಲ' ವೆಂದು ಮುಂದೆ ಸಾಗುತ್ತಾನೆ. ಆಗ ಲಿಂಗವು ಜಂಗಮ ಸೇವೆಗೆ ನಾನು ನೆರವಾಗುತ್ತೇನೆಂದು ಹೇಳಿ ವೃತ್ತಿ ಮಾಡಲು ಒಪ್ಪಿ ಹುಲ್ಲನ್ನು ಚಂದಯ್ಯನ ಮನೆಗೆ ಒತ್ತುಕೊಂಡು ಹೋಗಿ ಹಗ್ಗ ಹೊಸೆದು

ಪೇಟೆಗೆ ಮಾರಲು ಹೊಯ್ಯುತ್ತದೆ. ಆದರೆ ಹಗ್ಗವು ಗಂಟು ಗಂಟಾಗಿರುತ್ತವೆ. ಅವನ್ನು ಯಾರು ಕೊಳ್ಳುವುದಿಲ್ಲ. ಅದನ್ನು ಬಸವಣ್ಣನ ಮನೆಗೆ ಲಿಂಗ ತೆಗೆದುಕೊಂಡು ಹೋಗುತ್ತದೆ. ಇದನ್ನೆಲ್ಲ ಅರಿತ ಬಸವಣ್ಣನು ಒಂದು ಸಾವಿರ ಹೊನ್ನನ್ನು ಕೊಟ್ಟು ಕಳಿಸುತ್ತಾನೆ. ಚಂದಯ್ಯ ಇದು ಅನ್ಯಾಯದ ಹಣವೆಂದು ಜರಿದು ಅದನ್ನು ಸ್ವೀಕರಿಸುವುದಿಲ್ಲ. ಹಗ್ಗದ ಬೆಲೆಯಾದ 'ಹಾಗದ ರೊಕ್ಕ' ತಂದರೆ ಮಾತ್ರ ಸ್ವೀಕರಿಸುವುದಾಗಿ ಹೇಳುತ್ತಾನೆ. ಲಿಂಗವು ಹಾಗೆ ಮಾಡಲಾಗಿ ನಂತರ ಸ್ವೀಕರಿಸದನಂತೆ. ವೀರಶೈವ ಪುರಾಣಗಳಲ್ಲಿ ಬರುವ ಈ ಕಥೆಯು ವೃತ್ತಿ ನಿರತತೆಯ, ಕಾಯಕತತ್ವದ ಮಹತ್ವ, ವೃತ್ತಿನಿಷ್ಠೆ, ಶ್ರಮಗೌರವವನ್ನು ಪ್ರತಿಪಾದಿಸುವ ನಿಟ್ಟಿನಲ್ಲಿಯೇ ಈ ಕಥೆಯು ರಚಿತಗೊಂಡಿದೆ ಎಂದೇ ಹೇಳಬೇಕು. ಈ ಕಥೆ, ಪವಾಡ ಅದರ ನಾಟಕೀಯತೆ ಏನೇ ಇರಲಿ. ಅದರ ನಿಲುವು ಭಾವಾರ್ಥ ಅದು ಪ್ರತಿಪಾದನೆ ಮಾಡುವ ಸಿದ್ಧಾಂತ ಮುಖ್ಯವೆನಿಸುತ್ತದೆ.

ವಚನಕಾರರಿಗೆ ವೃತ್ತಿಯೇ ಪೂಜೆಯಾಗಿತ್ತು. ಅವರಿಗೆ ಯಾವ ವೃತ್ತಿಯೂ ಸಣ್ಣದು ಎಂಬ ಭಾವವಿರಲಿಲ್ಲ. ವೃತ್ತಿಯಲ್ಲಿ ನಿರತರಾಗುವುದೆಂದರೆ ಶಿವನ ಪೂಜೆ ಮಾಡಿದಂತೆ. ಅಷ್ಟೇ ಅಲ್ಲ ಅದು ಗೌರವದ ಅಭಿಮಾನದ ಅನನ್ಯತೆಯೂ ಕೂಡ ಆಗಿದೆ. ನಿಷ್ಠೆ, ಪ್ರಾಮಾಣಿಕತೆಯ ದುಡಿಮೆಯಿಂದ ವ್ಯಕ್ತಿಯ ಮತ್ತು ಸಮಾಜದ ಉನ್ನತಿಗೆ ನೆರವಾಗುವಂತಿರಬೇಕು. ಹಾಗಾಗಿ ಕಾಯಕದ ನಿರತತೆಯಿಂದಲೇ ತಮ್ಮನ್ನು ಗುರುತಿಸಿಕೊಂಡಿದ್ದಾರೆ.

ಕಾಯಕದ ಪರಿಕಲ್ಪನೆಯಲ್ಲಿಯೇ ಅನೇಕ ವಚನಕಾರರು ಬದುಕು ಕಟ್ಟಿಕೊಂಡವರಾಗಿದ್ದಾರೆ. ಇಂತವರ ವಚನಗಳ ಅಭಿವ್ಯಕ್ತಿಯೂ ಕಾಯಕದ ಸ್ವರೂಪವನ್ನು ಹೇಳುತ್ತವೆ. ಅಲ್ಲದೆ ವೃತ್ತಿನಿರತ ಅನೇಕ ವಚನಕಾರರ ಮೇಲೆ ಮತ್ತು ಅವರ ಕಾಯಕ ನಿಷ್ಠೆಯ ಮೇಲೆ ಅನೇಕ ಕಥೆಗಳು ಹುಟ್ಟಿಕೊಂಡಿವೆ. ಅವು ವೀರಶೈವ ಪುರಾಣಗಳಲ್ಲಿ, ಶೂನ್ಯ ಸಂಪಾದನೆಗಳಲ್ಲಿ ಉದ್ದೇಶ ಪೂರ್ವಕವಾಗಿಯೇ ತಂದು, ಅಂತಹ ಪವಾಡಗಳ ಮೂಲಕ, ಕಥೆಗಳ ಮೂಲಕ ವಚನಕಾರರ ಪ್ರಾಮಾಣಿಕ ಬದುಕನ್ನು, ನಿಷ್ಠೆಯ ದುಡಿಮೆಯನ್ನು, ಶ್ರಮಗೌರವವನ್ನು ಗುರುತಿಸುವ ಸಾಧ್ಯತೆಗಳಾಗಿವೆ. ಕಲ್ಯಾಣದ ಅನುಭವ ಮಂಟಪದಲ್ಲಿ ಚರ್ಚಿತಗೊಂಡ ಕಥೆಯಂದೆ ಅನೇಕ ವೀರಶೈವ ಕಾವ್ಯಗಳಲ್ಲಿ ಶೂನ್ಯಸಂಪಾದನೆಗಳಲ್ಲಿ ಪುರಾಣಗಳಲ್ಲಿ ನಿರೂಪಿತಗೊಂಡು ಜನಪ್ರಿಯತೆಗಳಿಸಿರುವ ಕಥೆ ಆಯ್ದಕ್ಕಿ ಮಾರಯ್ಯ ಮತ್ತು ಲಕ್ಕಮ್ಮ ದಂಪತಿಗಳ ಜೀವನದ ಮೇಲೆ ಬೆಳಕು ಚೆಲ್ಲುತ್ತದೆ. ಆಯ್ದಕ್ಕಿ ಮಾರಯ್ಯ, ಲಕ್ಕಮ್ಮರದು ಬೀದಿಯಲ್ಲಿ ಬಿದ್ದಿದ್ದ ಅಕ್ಕಿಯನ್ನು ಆಯ್ದು ತಂದು ಊಟ ಮಾಡುವುದು, ದಾಸೋಹ ಮಾಡುವುದು ಅವರ ವೃತ್ತಿ, ವಿಶೇಷವಾಗಿಯೇ ಕಾಣುವ ವೃತ್ತಿ ಇದಾದರೂ, ಬಡತನದ ಚಿತ್ರಣವನ್ನು ನೀಡುತ್ತದೆ. ಉದ್ದೇಶ ಪೂರ್ವಕವಾಗಿಯೇ ಸ್ವೀಕರಿಸಿದ ವೃತ್ತಿ ಎಂಬುದನ್ನು ಲಕ್ಕಮ್ಮ ಮತ್ತು ಮಾರಯ್ಯನ ವಚನಗಳಲ್ಲಿ ಬರುವ ಅಭಿವ್ಯಕ್ತಿಯನ್ನು ನೋಡಿ ತಿಳಿಯಬಹುದು. ಬಿದ್ದಿದ್ದ ಅಕ್ಕಿಯನ್ನು ಆರಿಸಿಕೊಂಡು ತಂದು ಬದುಕುತ್ತಿದ್ದ ಮಾರಯ್ಯ ಒಮ್ಮೆ ಅನುಭವ ಮಂಟಪದಲ್ಲಿ ನಡೆಯುತ್ತಿದ್ದ ವಿಚಾರಗೋಷ್ಠಿಯಲ್ಲಿಯೇ ಮೈ ಮರೆತು ಕುಳಿತಿರುತ್ತಾನೆ. ಇದನ್ನು ಕಂಡ ಲಕ್ಕಮ್ಮ ಹೀಗೆ ಹೇಳುತ್ತಾರೆ.

ಕಾಯಕ ನಿಂದಿತ್ತು ಹೋಗಯ್ಯ ಎನ್ನಾಳ್ದನೆ
ಭಾವಶುದ್ಧವಾಗಿ ಮಹಾಶರಣರ ತಿಪ್ಪೆಯ ತಪ್ಪಲ ಅಕ್ಕಿಯ ತಂದು
ನಿಶ್ಚೈಸಿ ಮಾಡಬೇಕು ಮಾರಯ್ಯ ಪ್ರಿಯ ಅಮಲೇಶ್ವರಲಿಂಗಕ್ಕೆ,
ಬೇಗ ಹೋಗು ಮಾರಯ್ಯ

(ಶಿವಶರಣೆಯರ ವಚನ ಸಂಪುಟ, ವಚನ ಸಂಖ್ಯೆ: ೬೩೧)

ಎಂದು ಆತನ ಅಪ್ರಜ್ಞಾ ಸ್ಥಿತಿಯನ್ನು ತೋರಿಸಿ, ಎಚ್ಚರಿಸುತ್ತಾಳೆ. ಇಲ್ಲಿ ಆಕೆಯ ಕಾಯಕ ಸಮಯ ಪ್ರಜ್ಞೆಯು ಕಾಯಕ ಸಿದ್ಧಾಂತ ಪರಿಕಲ್ಪನೆಯ ಮಹತ್ವವನ್ನು ಹೇಳುತ್ತದೆ. ಒಮ್ಮೆ ಇವರನ್ನು ಅಥವಾ ಇವರ ಬಡತನವನ್ನು ಕಂಡು ಬಸವಣ್ಣ ಬೀದಿಯಲ್ಲಿ ಅಕ್ಕಿಯನ್ನು ಚಲ್ಲಿರುತ್ತಾನೆ. ಮಾರಯ್ಯ ಅಗತ್ಯಕ್ಕಿಂತ ಹೆಚ್ಚು ಅಕ್ಕಿಯನ್ನು ಆರಿಸಿಕೊಂಡು ತರುತ್ತಾನೆ. ಇದನ್ನು ಕಂಡ ಲಕ್ಕಮ್ಮನ ಸಿಡಿಮಿಡಿಗೊಳ್ಳುತ್ತಾಳೆ. ಲಕ್ಕಮ್ಮ ಈ ವಚನ ಅದರ ಚಿತ್ರಣವನ್ನು ನೀಡುತ್ತದೆ.

ಆಸೆಯೆಂಬುದು ಅರಸಂಗಲ್ಲದೆ
ಶಿವಭಕ್ತರಿಗುಂಟೆ ಅಯ್ಯಾ?
ರೋಷವೆಂಬುದು ಯಮದೂತರಿಗಲ್ಲದೆ
ಅಜಾತರಿಗುಂಟೆ ಅಯ್ಯಾ?
ಈಸಕ್ಕಿಯಾಸೆ ನಮಗೇಕೆ? ಈಶ್ವರನೊಪ್ಪ
ಮಾರಯ್ಯಪ್ರಿಯ ಅಮಲೇಶ್ವರಲಿಂಗಕ್ಕೆ ದೂರ ಮಾರಯ್ಯ

(ಶಿವಶರಣೆಯರ ವಚನ ಸಂಪುಟ, ವಚನ ಸಂಖ್ಯೆ: ೬೨೮)

ಈ ವಚನ ಕಾಯಕ-ದಾಸೋಹ ತತ್ವವನ್ನು ಸಮರ್ಥವಾಗಿಯೇ ಹಿಡಿದಿಟ್ಟಿದೆ. ಮಾನವ ತಾನು ಮಾಡಬೇಕಾದ ವೃತ್ತಿಯನ್ನು ಪ್ರಾಮಾಣಿಕವಾಗಿಯೇ ಮಾಡಬೇಕು. ಪ್ರಾಮಾಣಿಕತೆ ತಪ್ಪಿದಾಗ ಅದು ಕಾಯಕತತ್ವ, ಶರಣತತ್ವಕ್ಕೆ ವಿರೋಧ, ಅದು ಭಕ್ತರಿಗೆ ಸಲ್ಲದ ನಡೆ. ಅದೊಂದು ಭವಿತನ ಎಂದು ಸ್ಪಷ್ಟವಾಗಿಯೇ ಹೇಳುತ್ತಾಳೆ ಲಕ್ಕಮ್ಮ. ಅಲ್ಲದೆ 'ಚಿತ್ತ ಶುದ್ಧದಲ್ಲಿ ಕಾಯಕ' ಮಾಡುವಲ್ಲಿ ಬಡತನವಿಲ್ಲೆಂದು ಹೇಳುತ್ತ ನಡೆ-ನುಡಿ, ಮನ-ಚಿತ್ತ ಶುದ್ಧತೆಗೆ ನಿರ್ದೇಶನ ನೀಡುತ್ತಾಳೆ.

ಕಷ್ಟಪಟ್ಟು ದುಡಿದು ಹಣಗಳಿಸಿದಷ್ಟಕ್ಕೆ ಕಾಯಕದ ಆಚರಣೆ ಸೀಮಿತಗೊಳ್ಳುವುದಿಲ್ಲ. ನಿಷ್ಠೆ ಪ್ರಾಮಾಣಿಕತೆಯಿಂದ ದುಡಿದದ್ದನ್ನು ಸಮಾಜಕ್ಕೆ ವಿನಿಯೋಗಿಸುವುದು ಅಷ್ಟೇ ಮುಖ್ಯವಾದುದು. ತಮ್ಮ ಹಸಿವನ್ನು ನೀಗಿಸಿಕೊಳ್ಳುವುದರ ಜೊತೆಗೆ ಅಸಹಾಯಕರ ಹಸಿವಿಗೆ ಅನ್ನವನ್ನು ನೀಡುವುದು ಇದರ ಮುಖ್ಯ ತತ್ವ, ಅಂದರೆ ಲೋಕ ಹಿತಾರ್ಥವಾದ ಕಾರ್ಯವನ್ನು ಕೈಗೊಂಡಿರುವವನ ಹೊಣೆಯನ್ನೂ, ಯೋಗಕ್ಷೇಮವನ್ನು ಸಮಾಜವು ಹೊರಬೇಕಾದುದರಿಂದ ಅಂತವರಿಗೆ ಮಾತ್ರ ದಾನವೀಯಬೇಕು. ಆದರೆ ದಾಸೋಹ ನಡೆಸುವ ಚಾಪಲ್ಯದಿಂದಲೋ, ದಾನ ಶೂರನೆಂಬ ಕೀರ್ತಿಗಳಿಸಬೇಕೆಂಬ ಆಸೆಯಿಂದಲೋ ಅನ್ಯಾಯದಿಂದ ಹೆಚ್ಚು ಹಣವನ್ನು ಸಂಪಾದಿಸಬಾರದು. ದಾಸೋಹವು ವೀರಶೈವನ ಮುಖ್ಯ ಕರ್ತವ್ಯವಾದರೂ, ಹಾಗೆ ದಾಸೋಹಕ್ಕಾಗಿ ವ್ಯಹಿಸಬೇಕಾದ

ದ್ರವ್ಯವು ಸತ್ಯ ಶುದ್ಧದ ದಾರಿಯಿಂದ ಸಂಪಾದಿಸಿದುದಾಗಿರುಬೇಕು.' ಇಂತಹ ವಿಚಾರಗಳನ್ನು ಆಯ್ದಕ್ಕಿ ಮಾರಯ್ಯ ಲಕ್ಕಮ್ಮರ ವಚನಗಳಲ್ಲಿ ಕಾಣುತ್ತೇವೆ.

ಕಾಯಕದ ಪರಿಕಲ್ಪನೆಯು ಶ್ರಮ, ತೃಪ್ತಿ, ಸಂಪಾದನೆ ವಿನಿಯೋಗಗಳೆಂಬ ಸಮತೋಲನದ ಸ್ಥಿತಿಗೆ ಕರೆದೊಯ್ಯುತ್ತದೆ. ಪ್ರತಿಯೊಬ್ಬರು ವೃತ್ತಿಯನ್ನು ಅವಲಂಬಿಸಿ ಬದುಕು ಸಾಗಿಸಬೇಕು. ಹಾಗಾದಲ್ಲಿ ಮಾತ್ರ ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಸುಧಾರಣೆಗೊಳ್ಳುತ್ತದೆ. ಬಡವ, ಶ್ರೀಮಂತ ಎಂಬ ಭೇದವು ಅಳಿದು ಸಮಾನವಾಗಿ ಸಂಪತ್ತು ಹಂಚಿಕೆಯಾಗುತ್ತದೆ.

ವೃತ್ತಿಯ ಬದುಕಿಗೂ ಹಾಗೂ ಆಧ್ಯಾತ್ಮ ಸಾಧನೆಗೂ ದಾರಿಯಾಗಿರುವುದರಿಂದ ಅದರಲ್ಲಿ ತರತಮ ಭಾವನೆಯಾಗಲಿ, ಮೇಲು-ಕೀಳೆಂಬ ಭಾವನೆಯಾಗಲಿ ಬೆಳೆಯುವುದಿಲ್ಲವೆಂದು ವಚನಕಾರರು ನಂಬಿದ್ದಾರೆ. ಏಕೆಂದರೇ ಸಾಧನೆಯೇ ಅಂತಿಮ ಗುರಿಯಲ್ಲ. ಅದರ ಸಾರ್ಥಕತೆ ಇರುವುದು ಅದರಿಂದ ಬರುವ ಫಲದಿಂದಾಗಿ ಸತ್ಯಶುದ್ಧತೆಯಿಂದಲೂ, ನಿಷ್ಠೆ ಪ್ರಾಮಾಣಿಕತೆಯಿಂದಲೂ ಮಾಡಿದ ಯಾವುದೇ ವಿವಿದ ವೃತ್ತಿಗಳು ಬದುಕಿಗೆ ಮತ್ತು ಆಧ್ಯಾತ್ಮ ಸಾಧನೆಗೆ ಕಾರಣವಾಗುವುದರಿಂದ ಅವುಗಳ ಪರಿಣಾಮವು ಒಂದೇ ಆಗಿರುತ್ತದೆ. ಆದ್ದರಿಂದ ಎಲ್ಲ ವೃತ್ತಿಗಳು ಸಮಾನ ಶ್ರೇಷ್ಠವಾದವು. ಇದಕ್ಕೆ ಹಾದರ ಕಾಯಕದ ಗಂಗಮ್ಮನ ವಚನ ಶಕ್ತಿ ನೀಡುತ್ತದೆ.

ಆವ ಕಾಯಕವ ಮಾಡಿದಡೂ ಒಂದೇ ಕಾಯಕವಯ್ಯಾ.
ಆವ ವ್ರತವಾದಡೂ ಒಂದೆ ವ್ರತವಯ್ಯಾ.
ಆಯ ತಪ್ಪಿದಡೆ ಸಾವಿಲ್ಲ; ವ್ರತ ತಪ್ಪಿದಡೆ ಕೂಡಲಿಲ್ಲ.
ಕಾಕ ಪಿಕದಂತೆ ಕೂಡಲು ನಾಯಕನರಕ
ಗಂಗೇಶ್ವರಲಿಂಗದಲ್ಲಿ.

(ಶಿವಶರಣೆಯರ ವಚನ ಸಂಪುಟ, ವಚನ ಸಂಖ್ಯೆ: ೧೧೦೨)

ಯಾವುದೇ ವೃತ್ತಿಯಾಗಿರಲಿ ಆತ್ಮಜ್ಞಾನ ಅಥವಾ ಆಧ್ಯಾತ್ಮದ ಹಾಗೂ ಲೌಕಿಕ ಬದುಕಿನ ಆರ್ಥಿಕ ಸ್ಥಿತಿಗತಿಗಳನ್ನು ಸುಧಾರಿಸುವ, ಬೆಳೆಸುವ ಪ್ರಯತ್ನ ಎಂಬುದು ಈ ವಚನದ ಅಭಿಪ್ರಾಯವಾಗಿದೆ. ಆದ್ದರಿಂದ ವ್ಯಕ್ತಿಗಳು ಅನುಸರಿಸುವ ವೃತ್ತಿ ಸ್ವರೂಪವೇ ಅವರಲ್ಲಿ ತಾರತಮ್ಯ ವನ್ನುಂಟು ಮಾಡಲು ಕಾರಣವಾಗಬಾರದು. ಸತ್ಯ ಶುದ್ಧತೆಯಿಂದಲೂ, ಪ್ರಾಮಾಣಿಕತೆಯಿಂದಲೂ ಮಾಡಿದ ಎಲ್ಲ ವೃತ್ತಿಗಳು ಬದುಕಿಗೆ ಮತ್ತು ಆಧ್ಯಾತ್ಮದ ಸಾಧನೆಗೆ ಕಾರಣವಾಗುವುದರಿಂದ ಎಲ್ಲ ವೃತ್ತಿಗಳೂ ಒಂದೆಯಾಗಿವೆ. ವೃತ್ತಿಗೆ ಜಾತಿ ಎಂಬ ವಿಷಗಾಳಿ ಹೇಗೋ ಸೇರಿಕೊಂಡು ಬಿಟ್ಟಿದೆ ಅಥವಾ ಯಾರೋ ಸೇರಿಸಿ ಬಿಟ್ಟಿದ್ದಾರೆ. ಮೇಲು-ಕೀಳು ಎಂಬ ಅವೈಜ್ಞಾನಿಕ ವರ್ಗೀಕರಣ ವಚನಕಾರರಿಗೆ ತೀವ್ರ ನೋವುಂಟು ಮಾಡಿದೆ. ವ್ಯಕ್ತಿಯು ಅನುಸರಿಸುವ ವೃತ್ತಿಯೂ ಅವನಿಗೆ ಅನಿವಾರ್ಯವಾಗಿರಬಹುದು. ಆದರೆ ತನ್ನ ಇಚ್ಛೆಯಿಂದ ಅನುಸರಿಸುವ ವೃತ್ತಿಗಳು ವ್ಯಕ್ತಿಗಳ ಮನೋಭಾವ ಹಾಗೂ ಸ್ವ-ಸಾಮಾರ್ಥವನ್ನವಲಂಬಿಸಿರುವಂತಹವು. ಎಲ್ಲರೂ ಎಲ್ಲ ಬಗೆಯ ವೃತ್ತಿಗಳನ್ನು ಮಾಡಲು ಸಾಧ್ಯವಿಲ್ಲ. ಕೆಲವರು ಬೌದ್ಧಿಕ ಶ್ರಮವನ್ನವಲಂಬಿಸಿ, ಇನ್ನು ಕೆಲವರು

ದೈಹಿಕ ಶ್ರಮವನ್ನವಲಂಬಿಸಿ ವ್ಯಕ್ತಿ ಜೀವನಕ್ಕೆ ಹೇಗೆಯೋ ಹಾಗೆಯೇ ಸಮಾಜ ಜೀವನಕ್ಕೆ ಈ ಎರಡು ಬಗೆಯ ಕೆಲಸಗಳು ಅವಶ್ಯಕ. ಕೆಲವರಲ್ಲಿ ಈ ಎರಡು ಬಗೆಯಲ್ಲಿ ನಿರತತೆ ಕಾಣಾದಾದಾಗ ಒಬ್ಬರನ್ನೊಬ್ಬರೋ ಅಥವಾ ಒಂದು ಶ್ರಮವನ್ನು ಇನ್ನೊಂದು ಶ್ರಮವೋ, ಹೀಗೆ ಪರಸ್ಪರ ಅವಲಂಬಿಸಬೇಕಾಗುತ್ತದೆ. ಪರಸ್ಪರರ ಶ್ರಮವೂ ಮಾನಸಿಕ ಶ್ರಮ ಮತ್ತು ದೈಹಿಕ ಶ್ರಮದ ವಿನಿಮಯಗೊಳ್ಳಬೇಕು. ಇದು ಸಮಾಜದ ಸಾಮಾಜಿಕ, ಆರ್ಥಿಕ, ರಾಜಕೀಯ ಅಭಿವೃದ್ಧಿಗೆ ಅನಿವಾರ್ಯವಾದುದು. ಆದ್ದರಿಂದ ವಚನಕಾರರ ಕಾಯಕತತ್ವದ ಪರಿಕಲ್ಪನೆಯು ಮುಖ್ಯವಾಗಿ ಉತ್ಪಾದನೆ ಮತ್ತು ಉಪಭೋಗಗಳಲ್ಲಿ ಸಮಾನತೆ ತರುವುದನ್ನು ನೋಡುತ್ತೇವೆ.

ಕಾಯಕವು ಸಮಾನತೆಯ ತತ್ವದ ಉಪದೇಶಕ್ಕೆ ಮಾತ್ರ ಸೀಮಿತಗೊಳ್ಳುವುದಿಲ್ಲ. ಅದೊಂದು ವಾಸ್ತವ ಬದುಕಿನ ಅವಶ್ಯಕತೆಯಾಗಿ ಬರುತ್ತದೆ. ಅದರಂತೆಯೇ ಹಲವಾರು ವಚನಕಾರರು ನಡೆದು ಕೊಂಡರೆಂಬುದನ್ನು ಕಾಣುತ್ತೇವೆ. ಇಂತಹ ವಿಚಾರ ಚಿಂತನೆಗೆ ಹಚ್ಚುವಲ್ಲಿ ವಚನಕಾರರು ಕಾಯಕತತ್ವಕ್ಕೆ ನೀಡಿದ ಮಹತ್ವವನ್ನು ಹಲವಾರು ವಚನಕಾರರ ಮೇಲೆ ನಿರ್ಮಾಣಗೊಂಡಿರುವ ಕಥೆಗಳಿಂದ, ಪವಾಡಗಳು ಎಂದು ಕರೆಯಲಾಗುವ ಅಂಶಗಳಿಂದ ತಿಳಿದು ಬರುತ್ತದೆ. ಇಂತಹ ಕಥೆಗಳಲ್ಲಿ ಮಾರಯ್ಯನ ಮೇಲೆ ಇರುವ ಕಥೆ ಹೀಗಿದೆ.

ಮೋಳಿಗೆ ಮಾರಯ್ಯ ಎಂದು ಕರೆಯಲಾಗುವ ಈತ ಕಟ್ಟಿಗೆಯನ್ನು ತಂದು ಅದನ್ನು ಮಾರಿ ಜೀವನ ಮಾಡುವುದು ಈತನ ವೃತ್ತಿ. ಈತನು ಮೊದಲು ಕಾಶ್ಮೀರದ ಒಬ್ಬ ರಾಜನಾಗಿದ್ದನು. ನಂತರ ಈತ ಬಸವಣ್ಣನ ಹಿರಿಮೆ-ವರ್ಚಸ್ಸನ್ನು ಕಂಡು ಆಕರ್ಷಿತನಾಗುತ್ತಾನೆ. ತನ್ನ ದೇಶ, ಕೋಶವನ್ನು ಬಿಟ್ಟು, ಪ್ರಭುತ್ವವನ್ನು ತ್ಯಜಿಸಿ ಕಲ್ಯಾಣಕ್ಕೆ ಬರುತ್ತಾನೆ. ಕಲ್ಯಾಣದ ಅನುಭವ ಮಂಟಪದ ಸದಸ್ಯನಾಗಿ ಅನುಭಾವದಲ್ಲಿ ತೊಡಗುತ್ತಾನೆ. ವಚನಕಾರರು ಹಲವು ಪರಿಕಲ್ಪನೆಗಳನ್ನು ಆಚರಣೆಗೆ ತಂದುದಲ್ಲದೆ. ಅವುಗಳ ಪಾಲನೆಗೆ ಒತ್ತುಕೊಟ್ಟಿದ್ದರು. ಹಾಗಾಗಿ ಒಬ್ಬೊಬ್ಬರೊಂದೊಂದು ವೃತ್ತಿಯನ್ನು ಮಾಡುತ್ತಿದ್ದರು. ಅದೇ ವೃತ್ತಿ ನಿಯಮದಂತೆ ಮಾರಯ್ಯ ಮತ್ತು ಮಹಾದೇವಿ ಕಟ್ಟಿಗೆ ತಂದು ಮಾರುವ ಕಾಯಕವನ್ನು ಮಾಡುತ್ತ ಜೀವನ ಸಾಗಿಸುತ್ತ ದಾಸೋಹ ಮಾಡುತ್ತ ಅನುಭಾವದಲ್ಲಿ ತೊಡಗಿಕೊಂಡು ಆಧ್ಯಾತ್ಮ ಸಾಧನೆ ಮಾಡುತ್ತಾರೆ. ಜಂಗಮರಿಗೆ ದಾಸೋಹ ಮಾಡುವ ವ್ರತ ನಿಷ್ಠೆ ಪಾಲನೆಯಿಂದ ಜಂಗಮರಿಗೆ ಅಚ್ಚು ಮೆಚ್ಚಾಗುತ್ತಾರೆ. ಮಾರಯ್ಯನ ಮನೆಯಲ್ಲಿ ಮಜ್ಜಿಗೆಯನ್ನು ಸ್ವೀಕರಿಸಿ ಕೆಲವು ಜಂಗಮರು ಬಸವಣ್ಣನ ಮುಂದೆ ವರ್ಣಿಸಿ ಹೇಳುತ್ತಾರೆ. ಇದರಿಂದ ಸಂಪ್ರೀತನಾದ ಬಸವಣ್ಣ ಅವರ ದಾಸೋಹಕ್ಕೆ ನೆರವಾಗಲೋ, ಅವರು ಬಡವರೆಂದು ತಿಳಿದೋ ಅಥವಾ ಅವರ ನಿಷ್ಠೆಯನ್ನು ಪರೀಕ್ಷೆ ಮಾಡಲೋ ಅವರಿಗೆ ಸಹಾಯ ಮಾಡಬೇಕೆಂದು ನಿರ್ಧರಿಸುತ್ತಾನೆ. ಒಂದು ದಿನ ಮಾರಯ್ಯನ ಮನೆಗೆ ಬಂದು ಎರಡು ಚೀಲಗಳಲ್ಲಿ ಬಂಗಾರ, ಹಣವನ್ನು ಇಟ್ಟು ಬರುತ್ತಾನೆ. ಕಾಯಕ ಮುಗಿಸಿಕೊಂಡು ಬಂದ ಮಾರಯ್ಯ ಮರೆಯಲ್ಲಿದ್ದ ಚೀಲಗಳನ್ನು ನೋಡುತ್ತಾನೆ. ತಮ್ಮ ಮನೆಗೆ ಯಾರು ಬಂದಿದ್ದರೆಂದು

ಹೆಂಡತಿಯನ್ನು ವಿಚಾರಿಸುತ್ತಾನೆ. ಆಕೆ ಬಸವಣ್ಣ ಬಂದಿದ್ದನೆಂದು ಹೇಳುತ್ತಾಳೆ. ತಾವು ಬಡವರೆಂದು ಬಸವಣ್ಣ ಹಣ, ಹೊನ್ನನ್ನು ಇಟ್ಟು ಹೋಗಿದ್ದನ್ನು ಜರಿಯುತ್ತಾನೆ. ನಂತರ ತಾನು ತಂದಿದ್ದ ಕಟ್ಟಿಗೆ ಹೊರೆಯ ಮೇಲೆ ಪಾದೋದಕವನ್ನು ಚಿಮಕಿಸಿದಾಗ ಅಲ್ಲಿದ್ದ ಕಟ್ಟಿಗೆಯಲ್ಲಾ ಚಿನ್ನವಾಗುತ್ತವೆ. ಅವೆಲ್ಲವನ್ನು ಜಂಗಮರಿಗೆ ದಾಸೋಹ ಮಾಡಿ ಕೊಟ್ಟು ಕಳಿಸುತ್ತಾನೆ. ಬಸವಣ್ಣನಿಗೆ ಆ ವಿಷಯ ತಿಳಿದು ತನ್ನ ತಪ್ಪಿನ ಅರಿವಾಗಿ ಮೋಳಿಗೆ ಮಾರಯ್ಯನಲ್ಲಿಗೆ ಬಂದು ಕ್ಷಮಯಾಚನೆ ಮಾಡುತ್ತಾನೆ. ವೀರಶೈವ ಪುರಾಣಗಳಲ್ಲಿ ಬರುವ ಈ ಕಥೆಯಿಂದ ಕಾಯಕದ ನಿರತತೆಯಲ್ಲಿಯೇ ಸಾಧನೆ ಮಾಡುವುದನ್ನು, ನಿಷ್ಠೆ, ಪ್ರಾಮಾಣಿಕತೆಯ ವೃತ್ತಿಯಿಂದ ಬದುಕನ್ನು ಕಟ್ಟಿಕೊಂಡು ಆತ್ಮಾಭಿಮಾನದಿಂದ ಬದುಕುವ ರೀತಿಯನ್ನು ಗುರುತಿಸಬಹುದು. ಅಲ್ಲದೆ ವಚನಕಾರರು ಕಾಯಕತತ್ವಕ್ಕೆ ನೀಡಿದ ಮಹತ್ವವನ್ನು ಈ ಕಥೆಯ ಮೂಲಕ ಕಾಣಬಹುದು.

> ಹಾಲು ಬತ್ತಿದ ಹಸುವಿಂಗೆ ಕರುವ ಬಿಟ್ಟಡೆ
> ಒದೆವುದಲ್ಲದೆ ಉಣಲೀಸುವುದೆ?
> ಅರಿವು ನಷ್ಟವಾದವ ಕ್ರೀಯ ಬಲ್ಲನೆ?
> ಕ್ರೀಯೆಂಬುದೆ ಹಸು ಅರಿವೆಂಬುದೆ ಹಾಲು
> ಬಯಕೆಯೆಂಬುದೆ ಕರು
> ಇಂತೀ ತ್ರಿವಿಧವನರಿದಲ್ಲಿ ಸದಾಶಿವಮೂರ್ತಿ ಲಿಂಗವು ತಾನೆ
>
> (ಸಂಕೀರ್ಣ ವಚನ ಸಂಪುಟ: ೧, ವಚನ ಸಂಖ್ಯೆ: ೪೯೭)

ಇಲ್ಲಿ ಕ್ರಿಯೆ ಎಂದರೆ ಶ್ರಮ, ಅದು ಹಸುವು ಆಗಿದೆ. ಅರಿವು ಎಂಬುದು ಬುದ್ಧಿ, ಜ್ಞಾನ ಅದು ಹಾಲಾಗಿದೆ ಬಯಕೆ ಎಂದರೆ ಮನಸ್ಸು ಇಚ್ಛಾಶಕ್ತಿ ಅದು ಕರುವಾಗಿದೆ. ಅಂದರೆ ಕರು ಇಲ್ಲಿ ಬೆಳೆಯುವ ಮುಂದುವರಿಯುವ ಜೀವಸಂಕುಲದ ಸಂಕೇತ. 'ಹಾಲು ಬತ್ತಿದ ಹಸುವಿಂಗೆ... ಉಣಲೀಸುವುದೆ?' ಎಂದರೆ ಬುದ್ಧಿಯೊಂದನ್ನೇ ಬದುಕಿನ ಮಾನದಂಡವನ್ನಾಗಿಸಿಕೊಂಡ ದುಡಿಮೆ ಮಾಡದ ಸಮುದಾಯವು ತನ್ನ ಜೊತೆಗಿನ ಜೀವಸಂಕುಲವನ್ನು ಹೇಗೆ ಮುಂದುವರಿಸಬಲ್ಲುದು ಎನ್ನುವ ನೈತಿಕ ಪ್ರಜ್ಞೆಯನ್ನು ಎಚ್ಚರಿಸುತ್ತದೆ. ದುಡಿಮೆ ಮಾಡದ ವ್ಯಕ್ತಿ ಅಥವಾ ಸಮುದಾಯ ಹಾಲು ಬತ್ತಿದ ಹಸುವಿದ್ದಂತೆ. 'ಅರಿವು ನಷ್ಟವಾದವ ಕ್ರೀಯಬಲ್ಲನೆ' ಎನ್ನುವಲ್ಲಿ ಮಾಡಬೇಕಾದ ಕರ್ತವ್ಯವನ್ನು ಮಾಡುವ ಪ್ರಜ್ಞೆಯಿಲ್ಲದ ವ್ಯಕ್ತಿಯ ದುಡಿಮೆಯೂ ಅದಕ್ಕೆ ತಕ್ಕ ಫಲ ಅಥವಾ ಉತ್ಪನ್ನವನ್ನು ಪಡೆಯಲಾರದೆ ನಿರರ್ಥಕವಾಗುತ್ತದೆನ್ನುವ ಶ್ರಮದ ಮಹತ್ವವನ್ನು ತಿಳಿಸುತ್ತದೆ. ಕಾಯಕ, ಅರಿವು ಮತ್ತು ಜನಜೀವನದ ಇಚ್ಛೆಗಳ ಸಂಬಂಧದ ತಾತ್ವಿಕತೆಯನ್ನು ತ್ರಿವಿಧ ದಾಸೋಹಕ್ಕೆ ಅನ್ವಯಿಸಿ ಹಸುವಿನ ರೂಪಕದ ಮೂಲಕ ಈ ಕೆಳಗಿನ ವಚನದಲ್ಲಿ ಪ್ರತಿಪಾದಿಸಲಾಗಿದೆ.

> ಕ್ರೀಯಲ್ಲಿ ಕಾಬುದ ಕ್ರೀಯಲ್ಲಿ ಕಂಡು,
> ಅರಿಕೆಯಲ್ಲಿ ಕಾಬುದ ಅರಿವಿನಲ್ಲಿ ಕಂಡು,
> ಮುಳ್ಳುತಾಗಿದಡೆ ಮುಳ್ಳಿನ ಮೊನೆಯಿಂದ ಕಳೆವಂತೆ,

ತನ್ನಯ ಮರವೆಯ ತನ್ನ ಅರಿವಿನಿಂದ ಅರಿದು,
ಸದಾಶಿವಮೂರ್ತಿಲಿಂಗದ ಕುರುಹುಡಗಿತ್ತು

(ಸಂಕೀರ್ಣ ವಚನ ಸಂಪುಟ: ೧, ವಚನ ಸಂಖ್ಯೆ: ೪೭೧)

ಬರೀ ಬುದ್ಧಿಯೊಂದಕ್ಕೆ ಮಾನ್ಯತೆ ನೀಡುವುದಲ್ಲ. ಶ್ರಮದ ಜೊತೆಗಿರುವ ಬುದ್ಧಿಗೆ ಅಂದರೆ ಜ್ಞಾನಕ್ಕೆ ಮಿಗಿಲಾದ ಬೆಲೆಯಿದೆ. ಹಸುವಿನಿಂದ ಹಾಲು ಹೇಗೆ ಉತ್ಪಾದನೆಯಾಗುತ್ತದೋ ದುಡಿಮೆಯೊಂದಿಗಿನ ಬುದ್ಧಿ ಅಥವಾ ಜ್ಞಾನ ಶ್ರೇಷ್ಠವೆನಿಸಿಕೊಳ್ಳುತ್ತದೆ. ಹಸುವಿನ ಹಾಲು ತನ್ನ ಕರುವಿಗೆ ಹೇಗೆ ಜೀವಪೋಷಕವೋ ಶ್ರಮ ಮತ್ತು ಬುದ್ಧಿಗಳ ಸಮ್ಮಿಳಿತದ ನೈತಿಕ ಜೀವನ ಮುಂಬರುವ ಜನಸಮುದಾಯಕ್ಕೆ ಸೈದ್ಧಾಂತಿಕ ಬದುಕಿನ ಜೀವಸತ್ವವಾಗುತ್ತದೆ. ಆದ್ದರಿಂದ ಹಸುವಿನಿಂದ ಹಾಲನ್ನು ಹೇಗೆ ಬೇರ್ಪಡಿಸಲಾಗದೋ ಹಾಗೇ ಶ್ರಮದಿಂದ ಬುದ್ಧಿಯನ್ನು ಬೇರೆ ಮಾಡಲಾಗದು.

"ಶ್ರಮ ಜೀವಾಧಾರಕ ಮಾತ್ರ ಶಕ್ತಿಯಾದರೆ, ಅರಿವು ಜೀವಪೋಷಕ ಫಲ. ಈ ಎರಡು ಸಂಯುಕ್ತ ಪರಿಣಾಮವೇ ಬಯಕೆ, ಅದು ಜೀವ ಸಂಕುಲದ ಮುಂದುವರಿಕೆ. ಹೀಗೆ ಜೀವಾಧಾರಕ, ಜೀವಪೋಷಕ ಮತ್ತು ಜೀವಕುಲ ಅಭಿವೃದ್ಧಿಯ ಸಾಮಾಜಿಕ ಅರ್ಥವ್ಯವಸ್ಥೆಯ ಆರೋಗ್ಯದ ಕಡೆಗೆ ಬೆಳಕು ಚೆಲ್ಲುವ ಈ ಕಲ್ಯಾಣ ದೃಷ್ಟಿ ಅಪೂರ್ವವಾದದು. ಶ್ರಮ ಬುದ್ಧಿ ಬಯಕೆಗಳನ್ನು ಏಕತ್ರಗೊಳಿಸಿಕೊಂಡಂತೆ ಬದುಕನ್ನು ಬಾಳಿಸುವ ಬೆಳಗಿಸುವ ಅರ್ಥನೀತಿಯ ಈ ದೃಷ್ಟಿ ವಿಶಿಷ್ಟತೆಯಿಂದ ಕೂಡಿದೆ. ಬ್ರಹ್ಮನ ತಲೆಯಿಂದ ಬ್ರಾಹ್ಮಣನೂ, ಪಾದದಿಂದ ಶೂದ್ರನೂ ಹುಟ್ಟಿ ಬಂದ ಕಲ್ಪನೆಯ ಹಂದಿನ ಮೇಲುಕೀಳಿನ ಭೇದಭಾವಕ್ಕೂ ಶ್ರಮಮರೆತ ಜ್ಞಾನ ಹೀನವಾಗುವ ವಚನಕಾರರ ದೃಷ್ಟಿಗೂ ಇರುವ ವ್ಯತ್ಯಾಸವನ್ನು ಗಮನಿಸಬೇಕು. ಶರೀರವನ್ನು ಒಡೆದು ಬುದ್ಧಿ ಮತ್ತು ಶ್ರಮಗಳನ್ನು ಬೇರೆ ಬೇರೆ ಮಾಡಿ ವರ್ಗಭೇದದ ಬೀಜ ಬಿತ್ತಿ ಅಸಮಾನತೆಗಳನ್ನು ಬೆಳೆಸಿದ ಹೀನ ನೀತಿ ವೈದಿಕ ಧರ್ಮದ್ದು. ಶ್ರಮ ಮತ್ತು ಜ್ಞಾನವನ್ನು ಸಮನ್ವಯಗೊಳಿಸಿ, ಅಂದರೆ ಒಡೆದು ನೋಡದೆ ಒಂದೇ ಶರೀರದ ಉತ್ಪಾದನೆಯಾಗಿ ಕಂಡು ಸಮಾನವಾಗಿ ಗೌರವಿಸಿ ಸಮತೆಯನ್ನು ಬೆಳೆಯುವ ಆಶಯ ವಚನ ಧರ್ಮದ್ದು."[೫]

ವಚನಕಾರರ ಕಲ್ಪನೆಯ ಸಮಾಜದಲ್ಲಿ ದುಡಿಮೆಯಿಲ್ಲದೆ ಜೀವನ ನಡೆಸಲು ಯಾರಿಗೂ ಅವಕಾಶವಿಲ್ಲ. ನುಲಿಯ ಚಂದಯ್ಯನವರು ಹೇಳುವಂತೆ "ಗುರುವಾದರೂ ಕಾಯಕದಿಂದಲೇ ಜೀವನ್ಮುಕ್ತಿ ಲಿಂಗವಾದರೂ ಕಾಯಕದಿಂದಲೆ ಶಿಲಯ ಕುರುಹು ಹರಿವುದು, ಜಂಗಮವಾದರೂ ಕಾಯಕದಿಂದಲೆ ವೇಷದ ಪಾಶ ಹರಿವುದು" ದೇಹ ಸವೆಸಿ ದುಡಿದೇ ತಿನ್ನಬೇಕೆಂಬ 'ಕಾಯಕ' ಸಿದ್ಧಾಂತದ ಮೂಲಕ ವಚನಕಾರರು ಚಾತುರ್ವರ್ಣದ ಈ ಕರ್ಮ ಸಿದ್ಧಾಂತವನ್ನು ಬುಡಮೇಲು ಮಾಡಿದರು. ಚಾತುರ್ವರ್ಣದ ಈ ಕರ್ಮಸಿದ್ಧಾಂತವನ್ನು ಬುಡಮೇಲು ಮಾಡಿದರು. ಚಾತುರ್ವರ್ಣ ಸೃಷ್ಟಿಕಾರರಾದ ವೈದಿಕರು ಶಾಸ್ತ್ರೋಕ್ತ ಪೂಜೆಯನ್ನೇ ಶ್ರೇಷ್ಠ ದುಡಿಮೆಯೆಂದೋ ಪೂಜೆ ಮಾಡಲು, ಮಂತ್ರ ಹೇಳಲು ವೈದಿಕರು ಮಾತ್ರ ಅರ್ಹರೆಂದು ತಮ್ಮ ಶಾಸ್ತ್ರ ಗ್ರಂಥಗಳಲ್ಲಿ ಪ್ರತಿಪಾದಿಸಿದ್ದರು.

ಕೃಷಿ ಮತ್ತು ಜೀವನುಪಯೋಗಿ ದುಡಿಮೆಯನ್ನು ಕೀಳೆಂದು ಪರಿಗಣಿಸಿ ಶ್ರಮಜೀವಿಗಳನ್ನು ನಾಲ್ಕನೆಯ ವರ್ಗದಲ್ಲಿ ಅತಿ ಕೆಳಗೆ ಇರಿಸಿದ್ದರು. ಆದರೆ ವಚನಕಾರರು ಅವುಗಳನ್ನು ಸ್ಥಾನ ಪಲ್ಲಟಗೊಳಿಸಿ ದೈಹಿಕ ಶ್ರಮವನ್ನು ಪರಶಿವ ಪೂಜೆಯ ಉನ್ನತಿಗೆ ಏರಿಸಿದರು. ಹಾಗೆಯೇ ಕೀಳೆಂದು ಬಗೆದ ಕುಲಮೂಲ ವೃತ್ತಿಗಳನ್ನು ಕಾಯಕದ ಹಿನ್ನೆಲೆಯಲ್ಲಿ ಉನ್ನತ ಸೇವೆಯೆಂದೇ ಮಾನ್ಯ ಮಾಡಿದರು. ಈ ವಚನ ಚಳವಳಿಯಲ್ಲಿ ಮುಕ್ತವಾಗಿ ಪಾಲ್ಗೊಂಡವರೆಲ್ಲ ಕೆಳವರ್ಗದ ಕಾಯಕ ಜೀವಿಗಳೇ ಆಗಿದ್ದರು. 'ಕೆಳವರ್ಗದವರು ತಮ್ಮ ಹಿಂದಿನ ಕುಲಕಸುಬನ್ನು ಮುಕ್ತ ಮನಸ್ಸಿನಿಂದ "ಸ್ವಯಂ ಕಾಯಕ"ವೆಂದು ಮುಂದುವರಿಸುವ ಮೂಲಕ ಕಲ್ಯಾಣದ ಕ್ರಾಂತಿಗೆ ದಿಟ್ಟತನವನ್ನೂ ಕಾರ್ಯಕ್ಷಮತೆಯನ್ನೂ ಆರ್ಥಿಕ ಬುನಾದಿಯನ್ನೂ ಒದಗಿಸಿದರು.'[೬] ಇದರಿಂದಾಗಿ ದುಡಿಮೆಯೇ ದೇವಪೂಜೆ ಮಟ್ಟಕ್ಕೇರಿತು. ಅಲ್ಲದೆ ದುಡಿಮೆಯ ಮೂಲಕ ಬರುವ ಉತ್ಪನ್ನವನ್ನು ಇಂದಿಗೆ, ನಾಳೆಗೆ ಎಂದು ಆಸೆಗೆ ಒಳಗಾಗಿ ಕೂಡಿಡುವುದಲ್ಲ, ಅಂದಿಗೆ ಎಷ್ಟು ಬೇಕೊ ಅಷ್ಟು ಬಳಸಿ ಮಿಕ್ಕಿದ್ದನ್ನು ದಾಸೋಹಕ್ಕೆ ವಿನಿಯೋಗಿಸಬೇಕು. ಅಂದಾಗ ಈ ದುಡಿಮೆಯಲ್ಲಿಯೇ ದೇವಸೇವೆಯಾಗುತ್ತದೆ, ಇಂತಹ ಕಾಯಕವೇ ಕೈಲಾಸವಾಗುತ್ತದೆ ಎಂಬ ತಿಳಿವಳಿಕೆಯನ್ನು ಸಾರ್ವತ್ರಿಕಗೊಳಿಸಿದರು.

ಕಾಯ ಮತ್ತು ಕಾಯಕತತ್ವದ ಮೂಲಕ ವ್ಯಕ್ತಿಗೂ ಮತ್ತು ಆ ವ್ಯಕ್ತಿ ಶ್ರಮವಹಿಸಿ ಮಾಡುವ ದುಡಿಮೆಗೂ ಗೌರವ ತಂದುಕೊಟ್ಟರು. ಈ ತತ್ವಗಳ ಮೂಲಕವೇ ವ್ಯಕ್ತಿಗಳ ನಡುವಿರುವ ಜಾತಿ ಭೇದವನ್ನೂ ದುಡಿಯದೇ ಕರ್ಮದ ಹೆಸರಿನಲ್ಲಿ ಭೋಗ ಜೀವನ ನಡೆಸುವ ಶುಷ್ಕ ಬೌದ್ಧಿಕ ಶಕ್ತಿಗಳೆಂದು ಕರೆದುಕೊಳ್ಳುವವರನ್ನು ಅವರ ಅಸ್ತ್ರಗಳಾದ ಶಾಸ್ತ್ರಾಗಮ ಸಾಹಿತ್ಯಗಳನ್ನು ಜನರ ನಡುವೆ ಅವರು ಪ್ರಚುರಪಡಿಸಿದ್ದ ಮೂಢನಂಬಿಕೆ, ಆಚಾರಗಳೆಲ್ಲವನ್ನೂ ವಚನಕಾರರೆಲ್ಲರೂ ಬಹುವ್ಯವಸ್ಥಿತವಾಗಿ ವೈಚಾರಿಕ ನಡೆಯ ಮೂಲಕ ಜನಸಾಮಾನ್ಯರ ಮುಂದೆ ಛಿದ್ರಗೊಳಿಸಲು ಪ್ರಯತ್ನಿಸಿ ಯಶಸ್ವಿಯಾದರು.

ವೈದಿಕ ಕರ್ಮಸಿದ್ಧಾಂತದ ಫಲವಾಗಿ ಸಾವಿರಾರು ವರ್ಷಗಳಿಂದಲೂ ದುಡಿದು ಫಲಾಪೇಕ್ಷೆ ಬಯಸದಂತೆ ಬದುಕಬೇಕೆಂಬ ನೀತಿ ಪಾಠಕ್ಕೆ ಬಲಿಯಾದ ತಳಜಾತಿಗಳು ದಲಿತ ವರ್ಗವು ದುಡಿದು ಬದುಕಿದರೂ ಅನ್ಯಾಯಕ್ಕೆ ಒಳಗಾದವು. ಶ್ರಮವನ್ನು ಮೌಲ್ಯೀಕರಿಸಿದ ಮೊದಲ ಭಕ್ತಿ ಚಳವಳಿ ಈ ನಾಡಿನಲ್ಲಿ ಹನ್ನೆರಡನೆಯ ಶತಮಾನದಲ್ಲಿ ನಡೆದುಹೋಯಿತು. ಇದಕ್ಕೆ ಭಾರತದುದ್ದಕ್ಕೂ ನಡೆದ ಭಕ್ತಿ ಚಳುವಳಿ ಪ್ರೇರಕ ಶಕ್ತಿಯಾಗಿದ್ದಿತು. ನಾವು ಮಾಡುವ ಕಾಯಕವೇ ಭಕ್ತಿ. ಭಗವಂತನನ್ನು ಒಲಿಸಿಕೊಳ್ಳುವ ಪರಿ ಎಂದರು ವಚನಕಾರರು. ಕಾಯಕಕ್ಕೆ ಗೌರವವನ್ನು ತಂದುಕೊಟ್ಟವರು ವಚನಕಾರರು. ಯಾರು ಯಾವ ವೃತ್ತಿಯನ್ನಾದರೂ ಮಾಡಬಹುದು. ಕಾಯಕವೇ ಮುಕ್ತಿಮಾರ್ಗವೆಂದು ದುಡಿಯದೇ ಬದುಕಿದ್ದ ವರ್ಗವನ್ನು ನಿರಾಕರಿಸಿದರು. ರಾಜ, ಗುರು, ಶರಣ ಯಾರೇ ಆದರೂ ಕಾಯಕ ಮಾಡೇ ಬದುಕಬೇಕು. ಕಾಯಕ ಮಾಡದೆ ಉಣ್ಣಲು ಯಾರಿಗೂ ಹಕ್ಕಿಲ್ಲ.

ಕಾಯಕ ಕಡ್ಡಾಯವಾದುದು. ಪ್ರತಿಯೊಬ್ಬನೂ ಅವನ ಅನ್ನವನ್ನು ಅವನೇ ಸಂಪಾದಿಸಬೇಕು. ತಾನು ಮಾಡುವ ಕಾಯಕ ದೈವಿಕವಾದೆಂದು ತಿಳಿಯಬೇಕು. ದೇವನು ಇಂತಹವರಿಗೆ ಒಲಿಯಬೇಕು. ಮಾಡುವ ಕಾಯಕ ಯಾವುದಾದರೇನು ಅವುಗಳಲ್ಲಿ ತರತಮಗೆ ಎಂಬುದೇ ಇಲ್ಲ. ಯಾವ ಕಾಯಕವು ಮೇಲಲ್ಲ ಕೀಳಲ್ಲ ಎಂದು ವೃತ್ತಿ ಸಮತೆಯನ್ನು ಬೆವರಿನ ಮಹತ್ವವನ್ನು ಹಾಗೂ ನೈತಿಕ ಬದುಕಿಗೆ ದುಡಿಮೆಯ ಅಗತ್ಯತೆಯನ್ನು ತೋರಿಸಿಕೊಟ್ಟನು.

ದಾಸಿಮಯ್ಯನು ನೇಯ್ಗೆಯ ಕಾಯಕ ಮಾಡಿಕೊಂಡಿದ್ದನು. ಕಾಯಕದಲ್ಲಿ ಸತಿಯ ಸಹಭಾಗಿತ್ವವನ್ನು ಮನಗಂಡು 'ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ' ಕಾಯಕದ ಮೂಲಕ ಮಾಡುವ ಭಕ್ತಿ ಶಿವನಿಗೆ ಪ್ರಿಯವಾದುದು ಎಂಬಂತೆ ಬದುಕಿದವನು. ಶರಣನಾದವನು ಮಂಡೆ ಬೋಳಿಸಿಕೊಂಡು ಶರಣ, ಸನ್ಯಾಸಿ ಯಾರೇ ಆದರೂ ಅನ್ಯರನ್ನು ಬೇಡಿ ಪಡೆದು ಭಂಡ ಬಾಳನ್ನು ಬದುಕುವವನು ಭಕ್ತನಲ್ಲ. ದೇವನಿಗೆ ಇವನು ಪ್ರಿಯನೂ ಅಲ್ಲ. ಒಡಲಿಚ್ಛೆಗೆ ಅನ್ಯರನ್ನು ಪೀಡಿಸಿ ತರುವವರನ್ನು ಹೇಸಿದ ಅಮೇಧ್ಯದಂತೆ ಎಂದಿದ್ದಾನೆ. ಸಂಪಾದನೆಗೆ ಒಂದು ನೈತಿಕ ಮೌಲ್ಯವನ್ನು ತಂದುಕೊಟ್ಟ ಮೊದಲ ವಚನಕಾರ ದಾಸಿಮಯ್ಯ. ಕಾಯಕವಿಲ್ಲದ ಹಾದರದ ಸಂಪಾದನೆಯನ್ನು ವಚನಕಾರರು ಅತ್ಯಂತ ತಿರಸ್ಕೃತವಾಗಿ ಕಂಡರು.

ಎಳ್ಳಿಲ್ಲದ ಗಾಣದಲ್ಲಿ ಎಣ್ಣೆಯುಂಟೆ?
ಜಳ್ಳ ತೂರಿದಲ್ಲಿ ಬತ್ತವುಂಟೆ?
ಕಳ್ಳ ಹಾದರಿಗರ ಸಂಪಾದನೆ ಹೊಳ್ಳು ಕುಟ್ಟಿ
ಕೈ ಹೊಟ್ಟೆಯಾದಂತೆ ಕಾಣಾ ರಾಮನಾಥ

(ಸಂಕೀರ್ಣ ವಚನ ಸಂಪುಟ-೨, ವಚನ ಸಂಖ್ಯೆ-೭೫೯)

ಎಂದು ದುಡಿಯದೇ ಸಂಪಾದಿಸುವವರನ್ನು ಕಳ್ಳರೆಂದೇ ಕರೆದನು. ಅನ್ಯರ ಶ್ರಮವನ್ನು ವಂಚಿಸಿ ಸಂಪಾದಿಸಿಕೊಂಡು ಬದುಕಿದ್ದ ವೈದಿಕ ಸಂಸ್ಕೃತಿಗೆ ನೈತಿಕ ಬದುಕಿನ ಮಹತ್ವವನ್ನು ತೋರಿಸಿಕೊಟ್ಟನು. ಸಂಸಾರಿಯಾಗಿ ಹೆಂಡತಿಯೊಂದಿಗೆ ಒಡಗೂಡಿ ಮಾಡುವ ಕಾಯಕದಿಂದ ಬಂದ ಹಣದಲ್ಲಿ ಶಿವಶರಣರಿಗೆ ದಾಸೋಹ ಮಾಡುತ್ತ ಬದುಕಿನ ಸಾಕ್ಷಾತ್ಕಾರವನ್ನು ಕಂಡುಕೊಂಡ ದಾಸಿಮಯ್ಯನು ವಚನ ಚಳವಳಿಗೆ ತಳಪಾಯದ ತಾತ್ವಿಕ ಶಕ್ತಿಯಾದನು ಶರಣನಾದವನು ಸನ್ಯಾಸಿಯಾಗಬೇಕಿಲ್ಲ. ಶರಣನಾದವನು ದುಡಿದೇ ಬದುಕಬೇಕು. ದುಡಿಮೆಯ ಒಂದು ಭಾಗದಲ್ಲಿ ದಾನ, ದಾಸೋಹಗಳನ್ನು ಮಾಡಬೇಕು. ಮಾಡುವ ಕಾಯಕದಲ್ಲೇ ಪರಮಾತ್ಮನನ್ನು ಕಾಣಲು ಸಾಧ್ಯ. ಎಲ್ಲ ಜನವರ್ಗವು ದುಡಿಮೆಯಲ್ಲಿ ನಿರತರಾಗಬೇಕು. ಅಂದಾಗಲೇ ಸಮಾಜದ ಸಮೃದ್ಧಿ ಸಾಧ್ಯ.

ಮಂಡೆಯ ಬೋಳಿಸಿಕೊಂಡು
ಮಡಿದು ಗೋಸಿಯ ಕಟ್ಟಿದಡೇನು?
ಕಂಡ ಕಂಡವರಿಗೆ ಕಯ್ಯೊಡ್ಡಿ ಬೇಡುವ
ಭಂಡರನೊಲ್ಲನೆಮ್ಮ ರಾಮನಾಥ

(ಸಂಕೀರ್ಣ ವಚನ ಸಂಪುಟ-೨, ವಚನ ಸಂಖ್ಯೆ-೮೪೦)

ಎಂಬ ತಾತ್ವಿಕತೆಯ ಅಡಿ ಬದುಕಿದ ನೂರಾರು ವಚನಕಾರರ ಬದುಕಿಗೆ ದಾಸಿಮಯ್ಯನ ಪ್ರೇರಣೆ ಇಲ್ಲದಿಲ್ಲ.

ಕೊನೆಟಿಪ್ಪಣಿ

೧. ಡಾ.ಸಿ.ವೀರಣ್ಣ, ಕನ್ನಡ ಸಾಹಿತ್ಯ, ಚಾರಿತ್ರಿಕ ಬೆಳವಣಿಗೆ, ಸಂ.–೨. ಪು.ಸಂ.೪೭. ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೧೧,

೨. ಡಾ.ಎಂ.ಎಂ.ಕಲಬುರ್ಗಿ, ಬಸವಣ್ಣನವರ ವಚನ ಸಂಪುಟ–ವ.ಸಂ.೫೯೦ ಕನ್ನಡ ಮತ್ತು ಸಂಸ್ಕೃತಿ, ಇಲಾಖೆ, ಬೆಂಗಳೂರು–೧೯೯೩.

೩. ಡಾ.ಎಂ.ಎಂ.ಕಲಬುರ್ಗಿ, ಮಾರ್ಗ–೪, ಪು.ಸಂ.೧೨೫. ಸಪ್ನಬುಕ್ ಹೌಸ್, ಬೆಂಗಳೂರು, ೨೦೧೦,

೪. ಬರಗೂರು ರಾಮಚಂದ್ರಪ್ಪ (ಸಂ.), ಡಾ.ಎಸ್.ಜಿ. ಸಿದ್ಧರಾಮಯ್ಯ : ವಚನ ಸಾಹಿತ್ಯದಲ್ಲಿ ಕೆಳವರ್ಗದ ಆಶಯ ಮತ್ತು ಅಭಿವ್ಯಕ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೫. ಡಾ.ಪಿ.ವಿ.ನಾರಾಯಣ, ವಚನ ಸಮಗ್ರ, ವಸಂತ ಪ್ರಕಾಶನ, ಬೆಂಗಳೂರು, ೨೦೦೫.

೬. ಡಾ. ಪಿ.ವಿ.ನಾರಾಯಣ, ವಚನ ಸಮಗ್ರ, ವಸಂತ ಪ್ರಕಾಶನ, ಬೆಂಗಳೂರು, ೨೦೦೫.

ಅಧ್ಯಾಯ ೪

ವೃತ್ತಿನಿರತ ಮಹಿಳಾ ವಚನಕಾರರು ಮತ್ತು ಅವರ ವೃತ್ತಿಗಳ ವೈಶಿಷ್ಟ್ಯಗಳು

- ಆಯ್ದಕ್ಕಿ ಲಕ್ಕಮ್ಮ
- ಸತ್ಯಕ್ಕ
- ಅಮುಗೆ ರಾಯಮ್ಮ
- ಕದಿರ ಕಾಯಕದ ಕಾಳವ್ವೆ
- ಕಾಲಕಣ್ಣಿಯ ಕಾಮಮ್ಮ
- ಕನ್ನಡಿ ಕಾಯಕದ ರೇವಮ್ಮ
- ಕೊಟ್ಟಣದ ಸೋಮಮ್ಮ
- ಕದಿರ ರೆಮ್ಮವ್ವೆ
- ಗುಂಡಯ್ಯಗಳ ಪುಣ್ಯಸ್ತ್ರೀ ಕೇತಲದೇವಿ
- ಧೂಪದ ಗೊಗ್ಗವ್ವೆ
- ಕಾಟಕೂಟಯ್ಯಗಳ ಪುಣ್ಯಸ್ತ್ರೀ ರೇಚವ್ವೆ
- ಕೊಂಡೆ ಮಂಚಣ್ಣಗಳ ಪುಣ್ಯಸ್ತ್ರೀ ಲಕ್ಷ್ಮಮ್ಮ
- ಸೂಳೆ ಸಂಕವ್ವೆ
- ಹಾದರ ಕಾಯಕದ ಗಂಗಮ್ಮ
- ಬಾಚಿಕಾಯಕದ ಬಸವಯ್ಯಗಳ ಪುಣ್ಯಸ್ತ್ರೀ ಕಾಳವ್ವೆ
- ಉರಿಲಿಂಗಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವೆ

ಅಧ್ಯಾಯ : ನಾಲ್ಕು

ವೃತ್ತಿನಿರತ ಮಹಿಳಾ ವಚನಕಾರರು ಮತ್ತು ಅವರ ವೃತ್ತಿಗಳ ವೈಶಿಷ್ಟ್ಯಗಳು

ಪೀಠಿಕೆ

ವಚನ ಆಂದೋಲನದಲ್ಲಿ ಭಾಗವಹಿಸಿದ ವಚನಕಾರರೆಲ್ಲ ವೃತ್ತಿನಿರತರಾಗಿದ್ದವರೆ. ತಮ್ಮ ತಮ್ಮ ಕುಲಕಸುಬುಗಳನ್ನು ಮಾಡುವಂತಹ ವಚನಕಾರರೇ ಹೆಚ್ಚು ಸಂಖ್ಯೆಯಲ್ಲಿ ಆ ಆಂದೋಲನದಲ್ಲಿ ಭಾಗವಹಿಸಿದವರು. ಅವರ ಜೊತೆಗೆ ಅವರ ಪತ್ನಿಯರು ಭಾಗವಹಿಸಿರುವುದು ವಿಶೇಷ. ಅಂತಹ ವೃತ್ತಿಗಳನ್ನು ಅವಲಂಬಿಸಿರುವ ಅನೇಕ ವಚನಕಾರರ ಪತ್ನಿಯರು ತಮ್ಮ ಕುಲಕಸುಬುಗಳನ್ನು ಮಾಡುವವರೇ ಆಗಿದ್ದಾರೆ. ಅನುಭಾವಿಗಳಾದ ಪುರುಷರಂತೆ ಮಹಿಳೆಯರು ಅನುಭಾವಿಗಳಾಗಿ ವಚನ ರಚನೆ ಮಾಡಿದ್ದಾರೆ. ಪುರುಷ ವಚನಕಾರರ ಅಭಿವ್ಯಕ್ತಿಗೂ ಮಹಿಳಾ ವಚನಕಾರರ ಅಭಿವ್ಯಕ್ತಿಗೂ ಸಾಮ್ಯತೆ ಇದೆ. ಪುರುಷರಷ್ಟೆ ಪ್ರಾಶಸ್ತ್ಯ ಪಡೆವ ವಚನಗಳನ್ನು ಬರೆಯುವ ಪ್ರಯತ್ನ ಮಾಡಿದ್ದಾರೆ. ಶರಣ ಚಳುವಳಿಯ ಆಶಯದಂತೆ ಮಹಿಳೆಯರು ಕಾಯಕದಲ್ಲಿ ನಿರತರಾಗಿದ್ದಾರೆ. ಪುರುಷರ ಶ್ರಮದಲ್ಲಿ ಪಾಲು ಪಡೆದುಕೊಂಡವರಾಗಿದ್ದಾರೆ. ವೃತ್ತಿಯ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿಭಾಯಿಸುವ ವಿಶ್ವಾಸ ಹೊಂದಿರುವವರಾಗಿದ್ದಾರೆ. ಸಮಯ ಬಂದಾಗ ತಮ್ಮ ಗಂಡಂದಿರಿಗೆ ಕಾಯಕದ ಮಹತ್ವವನ್ನು ತಿಳಿಸಿ ಮಾರ್ಗದರ್ಶಕಿಯರೂ ಆಗಿದ್ದಾರೆ.

ಶ್ರೇಣೀಕೃತ ಸಮಾಜದಲ್ಲಿ ದುಡಿಮೆ ಮತ್ತು ಆದಾಯದ ಮೂಲದಿಂದ ವ್ಯಕ್ತಿಯನ್ನು ಗೌರವಿಸುವ ಸಾಮಾಜಿಕತೆಯನ್ನು ಮೊಟ್ಟಮೊದಲಿಗೆ ಪ್ರತಿಭಟಿಸಿದವರು ವಚನಕಾರರು. ಎಲ್ಲಾ ಕೆಲಸಗಳನ್ನು ಕಾಯಕದ ಪರಿಭಾಷೆಯಲ್ಲಿ ಗೌರವಿಸುವ ಮತ್ತು ದಾಸೋಹದ ಕ್ರಮದಿಂದ ಆರ್ಥಿಕ ವಿಕೇಂದ್ರಿಕರಣವನ್ನು ಸಾಧಿಸುವ ಉದ್ದೇಶ ತುಂಬಾ ಗಂಭೀರವಾದದ್ದೇ ಆಗಿದೆ. ಮಹಿಳೆಯರ ದುಡಿಮೆಯನ್ನು ಗೌರವಿಸುವ ಸಹೃದಯತೆ ಮತ್ತು ವೈಚಾರಿಕತೆಯ ಅರಿವಿನ ಕೊರತೆ ಇರುವ ಕಾಲಘಟ್ಟದಲ್ಲಿ ತಮ್ಮ ವೃತ್ತಿಯ ಗೌರವವನ್ನು ಪ್ರತಿಷ್ಠಾಪಿಸಿ, ಪ್ರತಿಪಾದಿಸುವ ಮನೋಭಾವ ಬಂದದ್ದು ಗಮನಾರ್ಹ ಮತ್ತು ಅವಶ್ಯಕ ಚಿಂತನೆಯೂ ಕೂಡ ಆಗಿದೆ.

ತಮ್ಮ ವೃತ್ತಿಯ ಪರಿಕರಗಳನ್ನು ಬಳಸಿ ವಚನಗಳನ್ನು ನಿರೂಪಿಸುವ ಮೂಲಕ ತಮ್ಮ ವೃತ್ತಿಯ ವಿಶೇಷತೆ ಮತ್ತು ಅವಶ್ಯಕತೆಯನ್ನು ನಿರೂಪಿಸಿದ್ದಾರೆ. ತಮ್ಮ ವೃತ್ತಿಗೆ ವಿಶೇಷವಾದ ಸ್ಥಾನವನ್ನು ನೀಡಿ ಅದರ ಮಹತ್ವವನ್ನು ತಿಳಿಸುವ ಮೂಲಕ ವೃತ್ತಿ ತಾರತಮ್ಯವನ್ನು ತೊಲಗಿಸುವ ಪ್ರಯತ್ನ ಮಾಡುತ್ತಾರೆ. ಅದರಿಂದ ಕುಲವೃತ್ತಿಯನ್ನೇ ಅವಲಂಬಿಸಿದ ಸಮುದಾಯಗಳು ನೆಮ್ಮದಿಯ ನಿಟ್ಟುಸಿರುಬಿಡುತ್ತ, ಪುರೋಹಿತಶಾಹಿಗಳ ಹಿಡಿತದಿಂದ ತಪ್ಪಿಸಿಕೊಂಡು ಸ್ವಾತಂತ್ರ್ಯವನ್ನು ಪಡೆಯುವಂತಾದವು ಮತ್ತು ಯಾರು ತಮ್ಮ ತಮ್ಮ ವೃತ್ತಿಗಳನ್ನು ಅವಲಂಬಿಸಿದ್ದರೋ ಅವರೆ ಶ್ರೇಷ್ಠರು, ಅವರ ಕಾಯಕವೇ ಶ್ರೇಷ್ಠ ಎಂಬ ಭಾವನೆ ಸಹಜವಾಗಿ ಮೂಡುವಂತಾಯಿತು. ಇದರಿಂದ ಸಾಮಾನ್ಯರಂತೆ ಇದ್ದ ವೃತ್ತಿ ಆಧಾರಿತ ಜನಗಳಿಗೆ ಸ್ಥಾನಮಾನ, ಗೌರವಗಳು ದೊರಕಿ, ಅವರೂ ಅನುಭಾವಿಗಳಾಗಿ ಬದಲಾಗುವಲ್ಲಿ ಸಹಕಾರಿಯಾಯಿತು. ಮತ್ತು ವೃತ್ತಿಗಳಲ್ಲಿದ್ದ ತಾರತಮ್ಯ ದೂರಾಯಿತು. ಇನ್ನು ವಚನಗಳ ರಚನೆಯಲ್ಲಿ ಲೋಕೋಕ್ತಿ, ನುಡಿಗಟ್ಟು, ಗಾದೆ, ದೃಷ್ಟಾಂತ ಹೀಗೆ ಸಾಮಾನ್ಯ ಜನರು ಬಳಸುವ ರೀತಿಯಲ್ಲಿಯೇ ಭಾಷೆಯನ್ನು ಬಳಸಿ ಅವುಗಳಿಗೆ ಗಟ್ಟಿತನವನ್ನು ತಂದು ಕೊಟ್ಟರು. ಅಲ್ಲದೇ, ವಸ್ತು ಅಂತರಂಗ ಶೋಧನೆಯ ಮಾರ್ಗವಾದರೆ ಅರ್ಥವಿಲ್ಲದ ಆಚರಣೆಗಳ, ಸಂಪ್ರದಾಯಗಳ ಟೀಕೆಯಾಯಿತು. ಇದು ಸಮಾಜದಲ್ಲಿ ನೆಲೆಸಿದ್ದ ಅಸಮಾನತೆಯ ತಳ ಅಲುಗಾಡಿಸುವ ಪ್ರಯತ್ನ ಮಾಡಿತು. ವಚನಗಳ ಹೊರ ಅರ್ಥವು ಸರಳವಾಗಿಯೂ, ಲೌಕಿಕವಾಗಿಯೂ ಇರುವಂತೆ ಕಂಡರೂ, ನೆಲ ಮೂಲದ ನುಡಿಗಟ್ಟುಗಳು ಅನುಭಾವದಲ್ಲಿ ಒಡಮೂಡಿ ಅವುಗಳ ಅರ್ಥವನ್ನು ಹಿಗ್ಗಿಸುತ್ತವೆ. ಆಧ್ಯಾತ್ಮದ ಪರಿಭಾಷೆಗಳಾಗಿ ಮೂಡುತ್ತವೆ.

ಆಯ್ದಕ್ಕಿ ಲಕ್ಕಮ್ಮ

ವಚನಕಾರರು ಕಟ್ಟಿದ ಕಾಯಕ ಮತ್ತು ದಾಸೋಹ ತತ್ವವನ್ನು ತನ್ನ ಬದುಕಿನ ಮೌಲ್ಯವಾಗಿಸಿಕೊಂಡ ಲಕ್ಕಮ್ಮ ಆಯ್ದಕ್ಕಿ ಮಾರಯ್ಯನ ಪತ್ನಿ. ಮೂಲತಃ ರಾಯಚೂರು ಜಿಲ್ಲೆಯ ಲಿಂಗಸೂಗೂರು ತಾಲೂಕಿನ ಅಮರೇಶ್ವರದವರು. ಮುಂದೆ ಶರಣ ಚಳುವಳಿಯ ಕೇಂದ್ರ ಸ್ಥಾನವಾದ ಕಲ್ಯಾಣಕ್ಕೆ ಬಂದು ಅಲ್ಲಿನ ಮಹಾಮನೆಯ ಅಂಗಳದಲ್ಲಿ ಬಿದ್ದ ಅಕ್ಕಿಯನ್ನು ಆಯ್ದು ತಂದು ಸಂಸಾರ ಸಾಗಿಸುವುದು, ದಾಸೋಹ ಮಾಡುವುದು ಇವರ ವೃತ್ತಿ ಎಂದು ಗುರುತಿಸಲಾಗಿದೆ.

ಲಕ್ಕಮ್ಮ ಮತ್ತು ಮಾರಯ್ಯ ದಂಪತಿಗಳ ವೃತ್ತಿ ವಿಚಿತ್ರವಾದದ್ದೇ. ಮಹಾಮನೆಯ ಆಸುಪಾಸು ಬಿದ್ದ ಅಕ್ಕಿಯನ್ನು ಆಯ್ದು ತಂದು ದಾಸೋಹ ಮಾಡುವುದು ಅವರ ಕಾಯಕವಾಗಿತ್ತು. ತಮ್ಮ ಹೊಟ್ಟೆಯನ್ನಷ್ಟೇ ತುಂಬಿಸಿಕೊಳ್ಳದೆ ಹಸಿದು ಬಂದ ಯೋಗ್ಯರಿಗೆ ದಾಸೋಹ ಒದಗಿಸುತ್ತಿದ್ದದ್ದು ಸಮುದಾಯದ ಒಟ್ಟು ಪ್ರಜ್ಞೆಯನ್ನು ಸೂಚಿಸುತ್ತದೆ. ಈ ರೀತಿಯ ಕಾಯಕದ ಆಂತರ್ಯದಲ್ಲಿ ಎರಡು ಬಗೆಯ ತಾತ್ವಿಕತೆಗಳು ಒಳಗೊಂಡಿರುವುದನ್ನು ನೋಡುತ್ತೇವೆ. ಒಂದು ಸ್ವಂತ ಶ್ರಮದ ಮೂಲಕವೇ ತನ್ನ ಅನ್ನವನ್ನು ಗಳಿಸಬೇಕೆಂಬುದು, ಇನ್ನೊಂದು ಗಳಿಸಿದ್ದನ್ನು 'ಸೋಹಂ' ಎನ್ನದೇ 'ದಾಸೋಹಂ' ಎಂಬ ಸಮಾಜಮುಖೀ ನಿಲುವನ್ನು ಸಾರುವಂಥದ್ದು. ಈ ನಿಟ್ಟಿನಲ್ಲಿ

ಲಕ್ಕಮ್ಮ ಮಾರಯ್ಯ ದಂಪತಿಗಳ ಮಾರ್ಗ ಅತ್ಯಂತ ನಿಷ್ಠುರವಾದದ್ದು. ಮಾರಯ್ಯನ ಪ್ರಜ್ಞೆ ಒಮ್ಮೆ ತಪ್ಪಿ ನಡೆದರೂ ಅದನ್ನು ಎಚ್ಚರಿಸಿ ತಾನೂ ಸದಾ ಜಾಗೃತಳಾಗಿರುವ ಲಕ್ಕಮ್ಮ ಅತೀಸೂಕ್ಷ್ಮಮನಸ್ಥಿತಿಯವಳೆಂಬುದಕ್ಕೆ ಆಕೆಯ ವಚನಗಳೇ ಸಾಕ್ಷಿಯಾಗಿವೆ.

ಬಸವಣ್ಣನ ಮಹಾಮನೆಯ ಸುತ್ತಮುತ್ತ ಚೆಲ್ಲಲ್ಪಟ್ಟ ತಂಡುಲವನ್ನು ಆಯ್ದು ತರುವ ಕಾಯಕ ಮಾರಯ್ಯನದು. ಈ ರೀತಿಯ ಅಕ್ಕಿಯನ್ನು ಚೆಲ್ಲುವುದಾಗಲಿ, ಅಪರಿಚತವಾದ ರೀತಿಯೇ ಇದ್ದೀತು. ಆದರೆ ಅಂಥದೊಂದು ಕಾಯಕವೂ ಆ ಕಾಲದಲ್ಲಿತ್ತೆಂಬುದೇ ಸೋಜಿಗ ಹುಟ್ಟಿಸುತ್ತೆ. ಹಾಗೆ ಚೆಲ್ಲಿಬಿದ್ದ ಅಕ್ಕಿಯನ್ನು ಆಯ್ದು ತರುವ ಕಾಯಕ ಮಾಡುತ್ತಿದ್ದುದ್ದರಿಂದಲೇ ಅವನಿಗೆ ಆಯ್ದಕ್ಕಿ ಮಾರಯ್ಯನೆಂಬ ವಿಶೇಷಣ ನಾಮವೇ ಪ್ರಾಪ್ತಿಯಾಗಿದೆ. ಆತನ ಪತ್ನಿ ಲಕ್ಕಮ್ಮ ಸಹಜವಾಗಿಯೇ ಆಯ್ದಕ್ಕಿ ಲಕ್ಕಮ್ಮನೆಂಬಂತೆ ಕರೆಸಿಕೊಳ್ಳುತ್ತಾಳೆ ಎಂಬುದು ವಿದ್ವಾಂಸರ ನಿಲುವು.

ಕಲ್ಯಾಣ ನಗರದಲ್ಲಿ ಇವರು ಸೇವಾ ವೃತ್ತಿಯನ್ನು ಕೈಗೊಂಡು ಜೀವಿಸುತ್ತಿದ್ದಿರಬಹುದು ಎಂಬುದು ಮಾರಯ್ಯನ ಕೆಲವು ವಚನಗಳ ಅಭಿವ್ಯಕ್ತಿಯನ್ನು ಗಮನಿಸಿ ಊಹಿಸಬಹುದಾಗಿದೆ. ಅಲ್ಲದೇ ಕೃಷಿ ಚಟುವಟಿಕೆಯಲ್ಲಿ ಅಂದರೆ ರೈತರು ಭತ್ತ ಕೊಯ್ದು ಒಕ್ಕಣೆ ಮಾಡುವಾಗ ಹೊಲದಲ್ಲಿ ಚೆಲ್ಲಿ ಬಿದ್ದಕಾಳುಗಳು ಅಲ್ಲಿಯೇ ಉಳಿಯುತ್ತವೆ. ಅಂತಹ ಅಳಿದುಳಿದ ಕಾಳುಗಳನ್ನು ಕೆಲವು ಕಡೆ ಪ್ರಾದೇಶಿಕ ಭಾಷೆಯಲ್ಲಿ 'ಚೂರುಕಾಳು' ಎಂದು ಕರೆಯುವುದು ಇದೆ. ಹಾಗಾಗಿ ಲಕ್ಕಮ್ಮ ಇಂತಹ ವೃತ್ತಿಯನ್ನು ಅಂದರೆ ಚಲ್ಲಿಬಿದ್ದ ಕಾಳುಗಳನ್ನು ಆಯ್ದುತರುವ ವೃತ್ತಿಯನ್ನು ಮಾಡುತ್ತಿರಬಹುದಾಗಿದೆ. ಇವರು ತಮ್ಮ ಸ್ವಸ್ಥಾನವನ್ನು ಬಿಟ್ಟು ಕಲ್ಯಾಣಕ್ಕೆ ಬಂದ ನಂತರ ಅಂತಹದ್ದೇ ವೃತ್ತಿಯಾದ ಅಕ್ಕಿಯನ್ನು ಆಯ್ದು ತರುವ, ತಂದು ಜೀವನ ಸಾಗಿಸುತ್ತಿದ್ದಿರಬಹುದಾಗಿದೆ. ಅದು ಪೇಟೆ, ಸಂತೆಯಲ್ಲೋ? ಬಸವಣ್ಣನ ಮಹಾಮನೆಯಲ್ಲೋ? ಅನುಮಾನವಿದೆ. ಇಂದಿಗೂ ಹೊಲದಲ್ಲಿ ನೆಲ್ಲು ಕಾಳುಕಡಿಯನ್ನು ಬೆಳೆಯುವ ಪ್ರದೇಶದಲ್ಲಿ ಕೆಲವು ಬಡಕುಟುಂಬಗಳು ಇಂತಹ ವೃತ್ತಿ ಮಾಡುವುದನ್ನು ನೋಡುತ್ತೇವೆ.

ವಚನ ಚಳುವಳಿಯ ಪ್ರಭಾವಕ್ಕೆ ಒಳಗಾಗಿ ಲಕ್ಕಮ್ಮ ದಂಪತಿಗಳು ಬಂದು ವಚನ ಸಂಸ್ಕೃತಿ ಯನ್ನು ಅಪ್ಪಿಕೊಂಡು ಸಾಧನೆಗೆ ತೊಡಗುತ್ತಾರೆ. ಇಬ್ಬರು ಅನುಭಾವಿಗಳಾಗಿ ಸಾಧಕರ ಸಾಲಿನಲ್ಲಿ ನಿಲ್ಲುತ್ತಾರೆ. ಆದರೆ ಲಕ್ಕಮ್ಮ ಕೇವಲ ಆಧ್ಯಾತ್ಮಕ್ಕಷ್ಟೆ ಸೀಮಿತಗೊಳ್ಳುವುದಿಲ್ಲ. ಕಾಯಕ-ದಾಸೋಹ ಪರಿಕಲ್ಪನೆಗಳನ್ನು ಬದುಕಿನ ಮುಖ್ಯ ಮೌಲ್ಯವನ್ನಾಗಿ ಮಾಡಿಕೊಳ್ಳುತ್ತಾಳೆ. ತನ್ನ ನಿತ್ಯಬದುಕಿನಲ್ಲಿ ಕಂಡ ಅನುಭವದಲ್ಲಿಯೇ ೨೫ಕ್ಕೂ ಹೆಚ್ಚು ವಚನಗಳನ್ನು ಕಟ್ಟಿದ್ದಾಳೆ. ತನ್ನ ವಚನಗಳ ಅಭಿವ್ಯಕ್ತಿಯಲ್ಲಿ ಸಾಮಾಜಿಕತೆ, ಆರ್ಥಿಕ ವಿಕೇಂದ್ರಿಕರಣ, ನೀತಿಬೋಧೆ, ವೃತ್ತಿನಿಷ್ಟೆ, ಶ್ರಮಗೌರವ ಪ್ರಾಮಾಣಿಕವಾದ ಬದುಕನ್ನು ಕುರಿತಂತೆ ವಚನಗಳನ್ನು ಅಭಿವ್ಯಕ್ತಿಸಿರುವುದು ವೈಶಿಷ್ಟಪೂರ್ಣವಾಗಿದೆ.

ಸತ್ಯಕ್ಕ

ವೃತ್ತಿನಿರತ ವಚನಕಾರರನ್ನು ಉತ್ಪಾದನ ವೃತ್ತಿ ಅವಲಂಬಿಸಿದವರು ಮತ್ತು ಸೇವಾ ವೃತ್ತಿಯನ್ನು ಅವಲಂಬಿಸಿದವರು ಎಂದು ವರ್ಗೀಕರಣ ಮಾಡಿಕೊಂಡರೆ ಸೇವಾವೃತ್ತಿ ಅವಲಂಬಿಸಿ

ದವರು ಅನೇಕ ವಚನಕಾರರಿದ್ದಾರೆ. ಅವರಲ್ಲಿ ಮಹಿಳೆಯರ ಸಂಖ್ಯೆಯೂ ಹೆಚ್ಚಿದೆ. ಅಂತಹ ಸೇವಾ ವೃತ್ತಿಯನ್ನು ಅನುಸರಿಸಿಕೊಂಡು ಬದುಕನ್ನು ಕಟ್ಟಿಕೊಂಡಿರುವವರಲ್ಲಿ ಸತ್ಯಕ್ಕ ಒಬ್ಬಳಾಗಿದ್ದಾಳೆ.

ಶಂಬುಜಕ್ಕೇಶ್ವರ ಎಂಬ ಅಂಕಿತದಲ್ಲಿ ಸತ್ಯಕ್ಕನ ಇಪ್ಪತ್ತೊಂಬತ್ತು ವಚನಗಳು ಉಪಲಬ್ದವಿವೆ. ಲಿಂಗಪತಿ ಶರಣಸತಿ ಭಾವ, ವೀರಶೈವ ಮುಖ್ಯತತ್ವವಾದ ಗುರು ಲಿಂಗ ಜಂಗಮ ತತ್ವ, ಭಕ್ತರಲ್ಲದವರನ್ನು ಭವಿಗಳೆಂದು ಕರೆದು, ಅಂಥವರ ಟೀಕೆ, ಮೌಢ್ಯ ಸಂಪ್ರದಾಯದ ವಿರುದ್ಧ ಪ್ರತಿಭಟನೆ. ವೀರಶೈವ ನಿಷ್ಠೆಯಾದ ವೀರಮಹೇಶ್ವರ ವ್ರತ, ಏಕದೇವೋಪಾಸನೆ ಕಾಯಕನಿಷ್ಠೆ, ಶ್ರಮಗೌರವದ ಪ್ರತಿಪಾದನೆ, ಸ್ವಾಭಿಮಾನದ ನಡೆ ಮುಂತಾದ ರೀತಿಯಲ್ಲಿ ಈಕೆಯ ವಚನಗಳು ಅಭಿವ್ಯಕ್ತಗೊಂಡಿರುವುದನ್ನು ನೋಡಬಹುದಾಗಿದೆ.

ಶಿವಮೊಗ್ಗ ಜಿಲ್ಲೆಯ ಶಿರಾಳಕೊಪ್ಪದ ಹಿರೇಜಂಬೂರು ಸತ್ಯಕ್ಕನದು. ಶಿವಭಕ್ತರ ಮನೆಯಂಗಳ ಕಸಗುಡಿಸುವುದು ಈಕೆಯ ವೃತ್ತಿ ಎಂದು ವಿದ್ವಾಂಸರು ಗುರುತಿಸಿದ್ದಾರೆ. ಈಕೆಯ ವೃತ್ತಿಯನ್ನು ಗುರುತಿಸುವಲ್ಲಿ ಜೀವನದ ಕುರಿತು ವಚನ ಚಳುವಳಿಯ ನಂತರದ ಅನೇಕ ಕವಿಗಳ ಕಾವ್ಯಗಳಾದ ಹರಿಹರನ ರಗಳೆ, ಭೈರವೇಶ್ವರ ಕಾವ್ಯ, ಲಕ್ಕಣ್ಣ ದಂಡೇಶನ ಶಿವತತ್ವ ಚಿಂತಾಮಣಿ, ಚೆನ್ನಬಸವ ಪುರಾಣ, ಪಾಲ್ಕುರಿಕೆ ಸೋಮನಾಥ ಪುರಾಣ, ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರ, ಸರ್ವಜ್ಞನ ತ್ರಿಪದಿ, ಮುಪ್ಪಿನ ಷಡಕ್ಷರಿಯ ತತ್ವಪದ ಅಲ್ಲದೆ ಜನಪದ ಗರತಿಯ ಹಾಡುಗಳಲ್ಲಿ ಸತ್ಯಕ್ಕನ ಕುರಿತು ಕಥೆ, ಸ್ತುತಿ, ಮಾಹಿತಿಗಳು ಇರುವುದು ಕಾಣಬರುತ್ತದೆ.

ಈಕೆ ತನ್ನ ವೃತ್ತಿಗೆ ನಿಷ್ಠಳಾಗಿರುವಂತೆ ತಾನು ನಂಬಿರುವ ದೈವಕ್ಕೆ, ಸಿದ್ಧಾಂತಕ್ಕೆ ಬದ್ಧಳಾಗಿಯೇ ಬದುಕಿರುವುದನ್ನು ಅನೇಕ ಕಥೆಗಳಲ್ಲಿ, ಈಕೆಯ ವಚನಗಳಲ್ಲಿ ನೋಡುತ್ತೇವೆ. ಅಲ್ಲದೆ, ಉಗ್ರ ಶಿವಭಕ್ತ ಶರಣರಂತೆ ಈಕೆಯು ಕೂಡ ವೀರಮಹೇಶ್ವರ ನಿಷ್ಠೆ ಉಳ್ಳವಳಾಗಿದ್ದಳು. ಏಕದೇವತಾ ನಿಷ್ಠೆ ಪ್ರಧಾನ ಪ್ರತಿಪಾದನೆಯಾಗಿ ಈಕೆಯ ವಚನಗಳಲ್ಲಿ ಕಾಣುತ್ತೇವೆ. ಆ ಕಾರಣಕ್ಕಾಗಿಯೇ ಈಕೆಯ ವೃತ್ತಿಯನ್ನು 'ಶಿವಭಕ್ತರ' ಅಂಗಳದ ಕಸವನ್ನು ಗುಡಿಸುವುದು ಎಂದು ನಿರ್ಧರಿಸಲಾಗಿದೆ ಎಂದೆನ್ನಿಸುತ್ತದೆ. ಬಹುಶಃ ಬಸವಣ್ಣನ ನೇತೃತ್ವದಲ್ಲಿ ಅಣಿಗೊಂಡ ಕಲ್ಯಾಣ ಚಳುವಳಿಗೆ ಬಂದು ಸೇರಕೊಂಡ ನಂತರವು ಈಕೆ ಅದೇ ವೃತ್ತಿಯನ್ನು ಮುಂದುವರಿಸುತ್ತಾಳೆ. ವೃತ್ತಿನಿಷ್ಠೆಯನ್ನು ಪ್ರತಿಪಾದನೆ ಮಾಡುವಲ್ಲಿ ಈಕೆಯದು ದೃಢನಿಲುವು, ಅಧಿಕಾರದ ಭಾಷೆಯನ್ನು ಮಾಡಲೇಬೇಕೆಂಬ ಹಠ ಸಾಧಿಸುವ ಶೈಲಿಯ ಪ್ರಯೋಗ ಶ್ರಮ ಸಿದ್ಧಾಂತದ ಪ್ರತಿಪಾದನೆಯಾಗಿ ಕಂಡುಬರುತ್ತದೆ. ಸತ್ಯ ಶುದ್ಧವಾದ ಜೀವನದ ಆಶಯವನ್ನು ತಿಳಿಸುವಂತೆಯೇ ಕಾಣುತ್ತವೆ.

ಅಮುಗೆ ರಾಯಮ್ಮ .

ರಾಯಮ್ಮ ನೇಕಾರ ಕುಲದ ಅಮುಗೆ ದೇವಯ್ಯನ ಪತ್ನಿ. ಈಕೆಯ ಜೀವನದ ಬಗ್ಗೆ ವಿವರಗಳು ಅಷ್ಟಾಗಿ ಸಿಕ್ಕಿಲ್ಲ. ವಚನಗಳ ಮೂಲಕ ಮತ್ತು ಪ್ರಚಲಿತವಿರುವ ಕಥೆಗಳ ಮೂಲಕ ಇವರ ಜೀವನ ಚರಿತ್ರೆ ಕಂಡುಕೊಳ್ಳಲಾಗಿದೆ. ಇವಳ ಕಾಲವನ್ನು ಸುಮಾರು ೧೧೬೦ ಎಂದು

ಹೇಳಲಾಗುತ್ತಿದೆ. ಆಮುಗೇಶ್ವರ ಲಿಂಗ ಎಂಬ ಅಂಕಿತದಲ್ಲಿ ಈಕೆಯದೇ ಎಂದು ಹೇಳಲಾಗುವ ೧೧೫ ವಚನಗಳು ದೊರಕಿವೆ. ಅಮುಗೆ ದೇವಯ್ಯ ಮತ್ತು ಅಮುಗೆ ರಾಯಮ್ಮ ಇಬ್ಬರು ನಿಷ್ಠಾವಂತ ಮಹೇಶ್ವರ ಭಕ್ತರಾಗಿದ್ದು, ಬಸವಣ್ಣನ ನೇತೃತ್ವದ ಶರಣ ಚಳವಳಿಗೆ ಸೇರಿಕೊಂಡು ಆಧ್ಯಾತ್ಮಿಕ ಸಾಧನೆಯಲ್ಲಿ ತೊಡಗುತ್ತಾರೆ.

ಅಮುಗೆ ರಾಯಮ್ಮನಿಗೆ 'ವರದಾನಿಯಮ್ಮ' ಎಂಬ ಇನ್ನೊಂದು ಹೆಸರಿದ್ದಂತೆಯೂ ತಿಳಿದು ಬರುತ್ತದೆ. ಈಕೆಯ ಗಂಡ ಅಮುಗೆ ದೇವಯ್ಯನಿಗೆ ಸಂಬಂಧಿಸಿದಂತೆ ವೀರಶೈವ ಕಾವ್ಯ ಪುರಾಣಗಳಲ್ಲಿ ಪವಾಡದ ಕಥೆಯೊಂದು ಬರುತ್ತದೆ. ಅದರ ಪ್ರಕಾರ ಇವರ ಮೂಲಸ್ಥಾನ ಸೊನ್ನಲಾಪುರ. ನಿಷ್ಠಾವಂತ ಶಿವಭಕ್ತರಾದ ಇವರು ನೇಯ್ಗೆಯ ಕಾಯಕ ಮಾಡುತ್ತಿದ್ದರು. ಒಂದು ಸಲ ಸಿದ್ಧರಾಮಯ್ಯ ಕಪಿಲಸಿದ್ಧ ಮಲ್ಲಿನಾಥನ ಪರ್ವವೆಂದು ಊರವರಿಗೆಲ್ಲ ಭತ್ತ ಕುಟ್ಟಲು ಕೊಟ್ಟಣ (ನೆಲ್ಲು) ಹಾಕಿಸಿದ. ಏಕಲಿಂಗ ನಿಷ್ಠೆಯುಳ್ಳ ಅಮುಗೆ ದೇವಯ್ಯಗಳ ದಂಪತಿಗಳು 'ಲಿಂಗವಿಲ್ಲದ ಭವಿಯ ಸೇವೆ ಮಾಡಲಾರೆವು' ಎಂದು ಅದನ್ನು ನಿರಾಕರಿಸಿದರು. ಅದರಿಂದ ಸಿದ್ಧರಾಮ ಊರು ಬಿಡಲು ಅವರಿಗೆ ಆಜ್ಞೆ ಮಾಡಿದ. ಇದರಿಂದ ಅವರು ತಮ್ಮ ವಸ್ತುಗಳೆಲ್ಲವನ್ನು ಮೂರು ಗಂಟುಗಳಲ್ಲಿ ಕಟ್ಟಿಕೊಂಡು ಎರಡನ್ನು ತಾವು ಹೊತ್ತುಕೊಂಡು, ಉಳಿದೊಂದನ್ನು ಮಲ್ಲಿನಾಥನಿಂದ ಹೊರಿಸಿಕೊಂಡು ಹೋಗುತ್ತಾರೆ. ಇದರಿಂದ ಸಿದ್ಧರಾಮ ಪಶ್ಚಾತ್ತಾಪ ಪಟ್ಟು ಆ ದಂಪತಿಗಳನ್ನು ಮರಳಿ ಕರೆದುತರಲು ಹೋಗುತ್ತಾನೆ. ಅವರು ಅದಕ್ಕೊಪ್ಪದೆ ಕಲ್ಯಾಣದತ್ತ ಸಾಗುತ್ತಾರೆ. ಅನುಭವ ಮಂಟಪಕ್ಕೆ ಸೇರಿಸಿ ಅನುಭಾವ ಗೋಷ್ಠಿಯಲ್ಲಿ ಭಾಗವಹಿಸುತ್ತಾರೆ. ತಮ್ಮ ಕಾಯಕದಲ್ಲಿ ನಿಷ್ಠೆಯಿಂದ ನಿರತರಾಗುತ್ತಾರೆ. ಈ ಮೇಲಿನ ಕಥೆಯ ಮೂಲಕ ಭಕ್ತಿ ಮತ್ತು ಕಾಯಕ ಬೇರೆ ಎಂಬುದನ್ನು ಒಪ್ಪಿಕೊಳ್ಳದ, ಅವು ನಿತ್ಯ ಬದುಕಿಗೆ ಕಾಯಕ ಮಾಡುವುದೇ ಭಕ್ತಿ ಮಾಡಿದಂತೆ ಎಂಬ ನಿಷ್ಠೆಯನ್ನು ಒಪ್ಪಿಕೊಂಡಿರುವ ಮನೋಭಾವವನ್ನು ಗುರುತಿಸಬಹುದು.

ಅಮುಗೆ ರಾಯಮ್ಮನ ವಚನಗಳನ್ನು ಓದಿದಾಗ ಈಕೆ ವ್ರತಾಚರಣೆಗೆ, ಆಚಾರಶೀಲತೆಗೆ, ಏಕದೇವನಿಷ್ಠೆಗೆ ಒತ್ತು ನೀಡಿದ್ದಾಳೆ ಎಂಬುದು ಸ್ಪಷ್ಟವಾಗುತ್ತದೆ. ಅಭಿವ್ಯಕ್ತಿ ಸ್ವರೂಪದಲ್ಲಿ ತೀಕ್ಷ್ಣತೆ, ತೀವ್ರತೆ, ಸ್ಪಷ್ಟತೆಗಳು ಕಂಡುಬರುತ್ತವೆ. ತಾನು ನಂಬಿರುವ ತತ್ವ ಸಿದ್ಧಾಂತಗಳಿಗೆ ಬದ್ಧಳಾಗಿಯೇ, ಹೇಳಬೇಕಾದ ವಿಷಯವನ್ನು ತೀವ್ರ, ತೀಕ್ಷ್ಣ ಮತ್ತು ಸ್ಪಷ್ಟಗೊಳಿಸಲು ತನ್ನ ಸುತ್ತಮುತ್ತಲ ಪರಿಸರದಲ್ಲಿ ಕಂಡು, ಅನುಭವಕ್ಕೆ ಬರುವ ವಸ್ತು, ಪ್ರಾಣಿ, ಭಾವ, ಅರಿವುಗಳನ್ನು ರೂಪಕವಾಗಿ, ಉಪಮೆಗಳಾಗಿ ಬಳಸಿ ವಚನಗಳಿಗೆ ಕಾವ್ಯಗುಣ ಬರುವಂತೆ ನಿರೂಪಿಸಿ ಕೊಟ್ಟಿದ್ದಾಳೆ. ಹೀಗಾಗಿ ವ್ರತ, ಆಚಾರಕ್ಕೆ ಸಂಬಂಧಪಟ್ಟಂತ ವಿಷಯಗಳು ತಮ್ಮ ಜಡತ್ವವನ್ನು ಕಳೆದುಕೊಂಡು, ಚಲನಶೀಲ ಅನುಭವವನ್ನು ಕಟ್ಟಿಕೊಡುತ್ತವೆ.

ಕದಿರ ಕಾಯಕದ ಕಾಳವ್ವೆ

ಕಾಳವ್ವೆ ರಾಟಿಯಿಂದ ನೂಲು ತೆಗೆಯುವ ಕಾಯಕ ಮಾಡುತ್ತಿದ್ದಳೆಂದು ತಿಳಿದು ಬರುತ್ತದೆ. ಇದಕ್ಕೆ ಆಕೆಯ ಹೆಸರಿನ ಹಿಂದೆ ಸೇರಿರುವ ವಿಶೇಷಣದಿಂದಲೇ ಗುರುತಿಸಲಾಗಿದೆ. ಗುಮ್ಮೇಶ್ವರ

ಎಂಬ ಅಂಕಿತದಿಂದ ರಚನೆಗೊಂಡಿರುವ ಒಂದು ವಚನ ದೊರೆತಿದ್ದು, ಅದು ಕಾಳವ್ವೆಯದೇ ಎಂದು ಗುರುತಿಸಲಾಗಿದೆ.

ಈಕೆಯ ಜೀವನದ ವಿವರಗಳು ಅಲಭ್ಯವಾದ ಕಾರಣ ಈಕೆಯು ಬಸವಣ್ಣನ ಸಮಾಕಾಲೀನಳು. ಅನುಭವ ಮಂಟಪಕ್ಕೆ ಬಂದು ಸೇರಿ ಅನುಭಾವದಲ್ಲಿ ತೊಡಗಿಕೊಂಡಿರ ಬಹುದೆಂದು ತಿಳಿಯಲಾಗಿದೆ. ಸುಮಾರು ೧೧೬೦ ಈಕೆಯು ಬದುಕಿದ್ದ ಕಾಲ ಎಂದು ವಿದ್ವಾಂಸರು ಗುರುತಿಸಿದ್ದಾರೆ.

ಕದಿರು ಮುರಿಯೆ ಏನೂ ಇಲ್ಲ
ವ್ರತ ಹೀನನ ನೆರೆಯಲಿಲ್ಲ ಗುಮ್ಮೇಶ್ವರಾ

(ಶಿವಶರಣೆಯರ ವಚನ ಸಂಪುಟ, ವಚನ ಸಂಖ್ಯೆ: ೬೬೧)

ಎರಡು ಸಾಲಿನ ಆಕೆಯ ಒಂದೆ ಒಂದು ವಚನವಿದು. 'ಕದಿರು' ಎಂಬ ತನ್ನ ವೃತ್ತಿಯ ಪರಿಭಾಷೆಯನ್ನು ಬಳಸಿ ಕದಿರು ಮುರಿಯುವುದೂ, ವ್ರತ ಹೀನವನ್ನು ಬೆರೆಯುವುದೂ ಎರಡು ಒಂದೇ ಬಗೆಯಲ್ಲಿ ವ್ಯರ್ಥವಾದುದು ಎಂದು ವ್ರತಹೀನರನ್ನು ಕುರಿತಂತೆ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾಳೆ. ಆಚಾರ ವಿಹೀನರನ್ನು ನಿರಾಕರಿಸುತ್ತಾ, ನಿಷ್ಠೆಯನ್ನೊಳಗೊಂಡ ಬದುಕನ್ನು ತಿಳಿಸಿದ್ದಾಳೆ.

ಕಾಲಕಣ್ಣಿಯ ಕಾಮಮ್ಮ

ಕವಿಚರಿತೆಕಾರರು ಗುರುತಿಸಿರುವಂತೆ ಬಸವಾದಿ ಶರಣರ ಸಮಾಕಾಲೀನಳಾಗಿರುವ ಸಂಭವವಿದೆ ಎಂದು ತಿಳಿಯಲಾಗಿದ್ದು, 'ಸಕಲ ಪುರಾತನರ ವಚನಗಳು' ಕಟ್ಟುಗಳಲ್ಲಿ ಈಕೆಯ ವಚನವೂ ಸೇರಿಕೊಂಡಿದ್ದರಿಂದ ಇವಳು ವಚನಕಾರರಿದ್ದ ಹನ್ನೆರಡನೇ ಶತಮಾನದಲ್ಲಿ ಇದ್ದಳು ಎಂದು ಹೇಳಲಾಗುತ್ತದೆ.

ಹಗ್ಗವನ್ನು ಹೊಸೆದು ಮಾರುವುದು ಈಕೆಯ ವೃತ್ತಿಯಾಗಿದೆ. ಸಾಮಾನ್ಯವಾಗಿ ವೃತ್ತಿನಿರತ ವಚನಕಾರರ ಹೆಸರಿನ ಹಿಂದೆ ಅವರ ವೃತ್ತಿ ವಿಶೇಷಣಗಳು ಇರುವುದು ಸಹಜ. ಇದರಿಂದ ಅವರು ಮಾಡುತ್ತಿದ್ದ ವೃತ್ತಿಯ ಬಗ್ಗೆ ತಿಳಿಯುತ್ತದೆ. ಅದರಂತೆ ಕಾಮಮ್ಮನ ಹೆಸರಿನ ಹಿಂದೆ 'ಕಾಲಕಣ್ಣಿ' ಎಂಬ ವಿಶೇಷಣವಿದ್ದು, ಇದು ವೃತ್ತಿ ಸೂಚಕ ವಿಶೇಷಣವೇ ಇರಬೇಕು. ಸಾಮಾನ್ಯವಾಗಿ ದನಕರಗಳನ್ನು ಸಾಕುವವರು ಹೀಗಲೂ ಒಂದು ಗೂಟಕ್ಕೆ ಹಗ್ಗದಿಂದ ಮಾಡಿರುವ 'ಕಣ್ಣಿ' ಎಂದು ಹಗ್ಗವನ್ನು ಕಟ್ಟಿರುತ್ತಾರೆ. ದನಕರಗಳನ್ನು ಮೇಯಲು ಹೊರಬಿಟ್ಟರೂ ಆ ಹಗ್ಗವೂ ಅಲ್ಲಿಯೇ ಇರುತ್ತದೆ. ಅಂದರೆ ಅದನ್ನು ಅಲ್ಲಿಯೆ ಕಟ್ಟಿದ್ದು. ಸಣ್ಣ ಸಣ್ಣ ಕರುಗಳಿಗೆ ಕಾಲಿಗೆ ಕಟ್ಟಿರುತ್ತಾರೆ. ದೊಡ್ಡದಾದ ದನಗಳಿಗೆ ಕೊರಳಿಗೆ ಕಟ್ಟಿರುತ್ತಾರೆ. ಮತ್ತು ಅದಕ್ಕೆ ಒಂದು ರೀತಿಯಲ್ಲಿ ಕುಣಿಕೆ ರೀತಿಯ ವಿನ್ಯಾಸಗೊಳಿಸಿರುತ್ತಾರೆ. ಕಾಮಮ್ಮ ತನ್ನ ಒಂದೆ ಒಂದು ವಚನದಲ್ಲಿ ತನ್ನ ಅನುಭಾವವನ್ನು ಹೇಳುವಾಗ ಇವುಗಳ ರೂಪಕವನ್ನೇ ಬಳಸುತ್ತಾಳೆ.

ಹಿಂದೆ ಹಗ್ಗಹೊಸೆಯುವ ಕೆಲಸವನ್ನು ಕುಂಚಿಕೊರವರು ಮಾಡುತ್ತಿದ್ದುದ್ದನ್ನು ಇಂದಿಗೂ ಕೊರವ ಸಮುದಾಯದವರು ಈ ಕೆಲಸವನ್ನು ಮುಂದುವರಿಸಿಕೊಂಡು ನಡೆದಿರುವುದನ್ನು ನೋಡಿದರೆ

ಈಕೆಯು ಕೊರವ ಜಾತಿಗೆ ಸೇರಿದ್ದು, ಕುಲಕಸಬು ಹಗ್ಗ ಹೊಸೆಯುವ ವೃತ್ತಿಯನ್ನೇ ಅವಲಂಬಿಸಿದ್ದಳು ಎಂಬುದನ್ನು ಊಹಿಸಲು ಅವಕಾಶವಿದೆ.

ಆಡುಭಾಷೆಯ ಪದಗಳಿಂದ ರಚನೆಗೊಂಡ ನಿರ್ಭೀತನಿಜಲಿಂಗ ಅಂಕಿತದಲ್ಲಿ ಈಕೆಯ ಒಂದೆ ಒಂದು ವಚನ ಸಿಕ್ಕಿದೆ. ಇತರ ಮಹಿಳಾ ವಚನಕಾರರಂತೆ ಈಕೆಯೂ ಕೂಡ ವ್ರತನಿಷ್ಠ ಮನಭಾವದವಳು ಮತ್ತು ಈಕೆ ವ್ರತಗೇಡಿಗಳನ್ನು ಸಹಿಸದ, ನಿರಾಕರಿಸುವ ಸ್ವಭಾವದವಳಾಗಿದ್ದಾಳೆ. ಇಲ್ಲಿ ಮುಖ್ಯವಾಗಿ ಪ್ರತಿಯೊಬ್ಬ ವಚನಕಾರರ ಚಿಂತನೆಗಳು, ಅಭಿವ್ಯಕ್ತಿಯು ಭಿನ್ನವಾಗಿದ್ದರೂ, ಒಂದೆ ಆಶಯದಡಿಯಲ್ಲಿ ವಿಚಾರಮಾಡಿ ಒಂದೆ ಬಗೆಯ ಆಶಯವನ್ನು ವ್ಯಕ್ತಪಡಿಸುವ ಪ್ರಯತ್ನ ಮಾಡಿರುವುದನ್ನು ಗಮನಿಸಬಹುದು. ತಮ್ಮ ವೃತ್ತಿಯಿಂದ ಒಂದು ಅನುಭವವನ್ನು, ತಮ್ಮ ಆಧ್ಯಾತ್ಮಿಕ ಸಾಧನೆಯ ಸಾಮಾಜಿಕ ಕಳಕಳಿಯ ಆಶಯವನ್ನೊಳಗೊಂಡು, ತಮ್ಮದೇ ಆದ ವೃತ್ತಿಯ ಪರಿಭಾಷೆಯನ್ನು ಬಳಸಿ ವಿಭಿನ್ನ ಬಗೆಯಲ್ಲಿ ಅಭಿವ್ಯಕ್ತಿ ಮಾಡಿರುವುದು ವಿಶೇಷ. ಇದು ಕಾಮಮ್ಮನ ವಚನಕ್ಕೂ ಅನ್ವಯವಾಗುವಂತದ್ದು. ಈಕೆ ಸ್ವಭಾವತಃ ನಿರ್ಭಿಡೆಯ ವ್ಯಕ್ತಿಯಾಗಿ ನಿರ್ಭೀತಿಯಿಂದ ಆಚಾರಹೀನರನ್ನು ವ್ರತಗೇಡಿಗಳನ್ನು ಟೀಕಿಸುತ್ತಾಳೆ. "ವ್ರತ ಭ್ರಷ್ಟರ ನಿಟ್ಟೊರಸುವೆ, ಸುಟ್ಟು ತುರತುರನೆ ತೂರವೆ" ಎಂಬ ಅವಳ ಮಾತಿನಲ್ಲಿ ಸಿಟ್ಟು, ದಂಡನೆಯ ಮನೋಭಾವ, ಡಂಬಾಚಾರದ ವಿರೋಧ, ನಿಷ್ಠೆಯ ತೀವ್ರತೆ, ತತ್ವ ಸಿದ್ಧಾಂತಗಳ ಬದ್ಧತೆಯಿದೆ. ಆಡುನುಡಿಯ ಪದಪ್ರಯೋಗ ಆಕೆಯ ಧ್ವನಿಗೆ ಪ್ರಧಾನ್ಯತೆಯನ್ನು ಹೆಚ್ಚಿಸಿದೆ. ತನ್ನ ವೃತ್ತಿ ಉಪಕರಣಗಳನ್ನು ಬಳಸಿ ವಚನ ಚಳುವಳಿಯ ಅಥವಾ ಶರಣ ಚಳುವಳಿಯ ಮೂಲತತ್ವಗಳಾದ ಗುರು, ಲಿಂಗ, ಜಂಗಮದ ಭಕ್ತಿಯನ್ನು ಸಾಧಕನ ಮನೋಭಾವ, ಅಂತಃಕರಣ, ಅಂತರಂಗ, ಬಹಿರಂಗದ ನೈಜತ್ವವನ್ನು ಚಿತ್ರಿಸುವ ಮೂಲಕ ನಿಷ್ಠತೆಯನ್ನು ಪ್ರತಿಪಾದಿಸುತ್ತಾಳೆ.

ಕನ್ನಡಿ ಕಾಯಕದ ರೇವಮ್ಮ

ರೇವಮ್ಮನದು ಕೂಡ ಒಂದೇ ಒಂದು ವಚನ ದೊರೆತಿದ್ದು, ಸದ್ಗುರಸಂಗ ನಿರಂಗಲಿಂಗ ಎಂಬ ಅಂಕಿತದಲ್ಲಿ ರಚಿಸಲ್ಪಟ್ಟಿದೆ. ಈಕೆಗೆ ರೇವಮ್ಮ, ರೆಮ್ಮವ್ವೆ ಎಂಬ ಹೆಸರುಗಳಿದ್ದು, ಈಕೆಯ ಹೆಸರಿನ ಹಿಂದೆ ಇರುವ ವಿಶೇಷಣದಿಂದ ಈಕೆಯ ವೃತ್ತಿ 'ಕ್ಷೌರಿಕ' ವೃತ್ತಿಯಾಗಿರಬಹುದು ಎಂದು ಹೇಳಲಾಗುತ್ತಿದೆ. ಕನ್ನಡಿ ಕಾಯಕದ ಅಮ್ಮಿದೇವಯ್ಯ ಎಂಬ ವಚನಕಾರನಿದ್ದು, ಈಕೆಗೆ ಅವನಿಗೂ ಏನೋ ಸಂಬಂಧವಿದೆಯೋ ಎಂದು ಕೆಲವು ವಿದ್ವಾಂಸರು ಅನುಮಾನಿಸಿದ್ದಾರೆ. ಕನ್ನಡಿ ಕಾಯಕ ಎಂದರೆ ಕ್ಷೌರಿಕ ವೃತ್ತಿ ಎಂದು ತಿಳಿಯಲು ಅಮ್ಮಿದೇವಯ್ಯನ ವಚನಗಳಲ್ಲಿ ಈ ವೃತ್ತಿಗೆ ಸಂಬಂಧಿಸಿದ ಪರಿಭಾಷೆಗಳಾದ, ಕತ್ತಿ, ಕತ್ತರಿ, ಕನ್ನಡಿ ಮೊದಲಾದ ಸಲಕರಣೆಗಳ ಪದಗಳು ಬಳಕೆಯಾಗಿರುವುದು ಕಾರಣವಾಗಿದೆ. ರೇವಮ್ಮನು ಕೂಡ ತನ್ನ ವಚನದಲ್ಲಿ ಕನ್ನಡಿಯ ಉಲ್ಲೇಖ ಮಾಡಿರುವುದನ್ನು ಗಮನಿಸಬಹುದು. ಅದರಲ್ಲಿ 'ಕೈಯಲು ಕನ್ನಡಿ ಇರಲು ತನ್ನ ತಾ ನೋಡಬಾರದೆ?' ಎಂದು ವೀರಶೈವ ಸಿದ್ಧಾಂತವನ್ನೆ ಮರೆಯುತ್ತಾಳೆ. ಇಲ್ಲಿ ಮುಖ್ಯವಾಗಿ ಲಿಂಗ, ಜಂಗಮ ಪ್ರಸಾದಕ್ಕೆ ನಿಷ್ಠವಾಗಿರಬೇಕು ಎಂಬುದನ್ನು ಪ್ರತಿಪಾದಿಸುತ್ತಾಳೆ. ಮೊದಲ ಸಾಲಿನಲ್ಲಿ

ಕೈಯಲು ಕನ್ನಡಿ ಇರಲು ಎಂಬುದು ವಚನಕಾರರು ನಿರ್ಮಿಸಿದ ಸಿದ್ಧಾಂತ, ಕಾಯಕ, ನಿಷ್ಠೆ ಮೊದಲಾದ ತಾತ್ವಿಕ ಸಿದ್ಧಾಂತಗಳಿಂದ ಮನುಷ್ಯ ಪರಿಶುದ್ಧನಾಗಿರಬೇಕು. ಇದರಿಂದ ಸಾಧಕನಿಗೆ ತಾನಾರು? ತಾನು ಮಾಡಬೇಕಾದುದೇನು? ಎಂಬುದು ಅರಿವಿಗೆ ಬರುತ್ತದೆ. ಇದು ಕೇವಲ ಜೀವನಕ್ಕೆ ಸೀಮಿತಗೊಳ್ಳದೇ ಇದರ ಮೂಲಕ ಆಧ್ಯಾತ್ಮಿಕವಾದ ಸಾಧನ ಮಾರ್ಗವು ಆಗಿ ಪರಿಣಮಿಸುತ್ತದೆ ಮತ್ತು ಸಾಮಾಜಿಕ ತೊಂದರೆಗಳಿಂದಲೂ ಮುಕ್ತಿ ಸಿಗುತ್ತದೆ ಎಂಬುದನ್ನು ಸಾದರಪಡಿಸುತ್ತದೆ.

ಕೊಟ್ಟಣದ ಸೋಮಮ್ಮ

'ಸಕಲ ಪುರಾತನರ ವಚನಗಳು', 'ಶೂನ್ಯಸಂಪಾದನೆ' ಕೃತಿಗಳಲ್ಲಿ ಈಕೆಯದೇ ಎಂದು ಹೇಳಲಾಗುವ ವಚನವಿದ್ದು, ಈಕೆ ಬಸವ ಸಮಕಾಲೀನಳಾಗಿರಬೇಕು. ಈಕೆಯ ಕಾಲವನ್ನು ಸುಮಾರು ೧೧೬೦ ಎಂದು ಕವಿ ಚರಿತಕಾರರು ಗುರುತಿಸಿದ್ದಾರೆ. ಜಗತ್ತಿಗೆ ವಿಶಿಷ್ಟವಾದ ಕಾಯಕ ತತ್ವವನ್ನು ಕೊಟ್ಟಂತಹ ಶರಣ ಸಮುದಾಯದ ಮಧ್ಯೆ ಬದುಕಿದ ಈಕೆ ಬಸವಣ್ಣ ಅಥವಾ ವಚನಕಾರರ ತತ್ವಗಳನ್ನು ಒಪ್ಪಿ ಅಪ್ಪಿಕೊಂಡು ಜೀವನ ಸಾಗಿಸುವ ಪ್ರಯತ್ನವನ್ನು ಮಾಡಿದ್ದಾಳೆ. ವೀರಶೈವ ಧರ್ಮಕ್ಕೆ ಬದ್ಧಳಾಗಿ, ವ್ರತಾಚರಣೆನಿಷ್ಠೆಯ ತತ್ವವನ್ನು ಪ್ರತಿಪಾದಿಸುವುದನ್ನು ನೋಡಿದರೆ ಈಕೆಯು ಸಹ ಕಲ್ಯಾಣದ ಅನುಭವ ಮಂಟಪದಲ್ಲಿ ನಡೆಯುತ್ತಿದ್ದ ವಿಚಾರಗೋಷ್ಠಿಯಲ್ಲಿ ಭಾಗವಹಿಸಿ, ಅಲ್ಲಿ ನಡೆಯುತ್ತಿದ್ದ ಚರ್ಚೆಗಳನ್ನು ಗಮನಿಸಿ, ಅಲ್ಲಿಯ ಆಶಯ, ಆದರ್ಶಗಳನ್ನು ಮೈಗೂಡಿಸಿಕೊಂಡು, ಅದರಂತೆ ಬಾಳಿ ಬದುಕಿರಬೇಕೆಂಬುದು ಆಕೆಯ ವಚನವನ್ನು ಓದಿದಾಗ ತಿಳಿಯುತ್ತದೆ.

ಸೋಮಮ್ಮ ಮಾಡುತ್ತಿದ್ದ ವೃತ್ತಿ ಕೊಟ್ಟಣ ಕುಟ್ಟುವುದು ಎಂದು ತಿಳಿಯಲಾಗಿದೆ. ಅದನ್ನು ಆಕೆಯ ವಚನದಲ್ಲಿ ಬಳಕೆಗೊಂಡ ಉಪಮೆ, ದೃಷ್ಟಾಂತಗಳ ಆಧಾರದಿಂದ ಗುರುತಿಸಲಾಗಿದೆ. ಮೂಲತಃ ಈ ವೃತ್ತಿಯನ್ನು ತಮ್ಮ ಕುಲ ಮೂಲದಿಂದಲೇ ಮಾಡುತ್ತ ಬಂದಿರುವುದನ್ನು ಈಕೆ ಅನುಸರಿಸಿದಳೋ? ಅಥವಾ ತನ್ನ ಉಪಜೀವನಕ್ಕಾಗಿ ಈ ವೃತ್ತಿಯನ್ನು ಮಾಡುತ್ತಿದ್ದಳೋ? ತಿಳಿದಿಲ್ಲ. ಬಹುಶಃ ಈಗ ಕೂಲಿ ಎಂದು ಕರೆಯಲಾಗುತ್ತಿದ್ದು, ಆಗಿನ ಕಾಲದ ಕೂಲಿಯ ಸ್ವರೂಪ ಬೇರೆಯದ್ದು. ಈಕೆ ತನ್ನ ಜೀವನಕ್ಕಾಗಿ ಆ ವೃತ್ತಿಯನ್ನು ಮಾಡುತ್ತಿದ್ದಿರಬಹುದು ಎಂದು ಊಹಿಸಲು ಸಾಧ್ಯವಿದೆ. ಇನ್ನೂ ಶಿವಭಕ್ತರ ಮನೆಯ ಅಕ್ಕಿಯನ್ನು ಕುಟ್ಟುವುದು, ಅದರಿಂದ ಬಂದದನ್ನು ಗುರು-ಲಿಂಗ-ಜಂಗಮಕ್ಕೆ ಸೇವೆ ಮಾಡುವುದು ಇವಳ ನಿತ್ಯಕಾಯಕ. ಇವಳ ಮೇಲೆ ಬೆಳಕು ಚೆಲ್ಲುವ ಮಾಹಿತಿ ದೊರೆಯಲಿಲ್ಲವಾದ ಕಾರಣ ಇವಳ ಕಾಯಕದ ಬಗ್ಗೆ ಅಷ್ಟಾಗಿ ವಿವರಗಳು ಸಿಗುತ್ತಿಲ್ಲ. ಇಲ್ಲಿ ಇನ್ನೊಂದು ಸಂಗತಿ ಎಂದರೆ, ಈಕೆ ಶಿವಭಕ್ತರ ಮನೆಯಲ್ಲಿನ ಅಕ್ಕಿಯನ್ನು ಕುಟ್ಟುತ್ತಿದ್ದಳೋ ಅಥವಾ ಬಸವಣ್ಣನು ಕಲ್ಯಾಣದಲ್ಲಿ ಕಟ್ಟಿದ್ದ ಮಹಾಮನೆ ಯಲ್ಲೋ ಎಂಬುದು ಅನುಮಾನದ ಸಂಗತಿ. ಯಾಕೆಂದರೆ ನಿತ್ಯ ದಾಸೋಹದ ಕಾಯಕವನ್ನು ಮಾಡುತ್ತಿದ್ದ ಸ್ಥಳ ಮಹಾಮನೆಯಾಗಿದ್ದರಿಂದ ದಾಸೋಹಕ್ಕೆ ತಂದ ಕೊಟ್ಟಣ (ನೆಲ್ಲು)ವನ್ನು

ಕುಟ್ಟುವುದನ್ನು ನೆರವೇರಿಸುತ್ತಿದ್ದಳು ಎಂಬುದು ಊಹೆಗೊಳಪಡುವಂತಹದ್ದಾಗಿದೆ. ಏನೇ ಇರಲಿ ಒಟ್ಟಿನಲ್ಲಿ ಈಕೆಯ ಕಾಯಕ ಕೊಟ್ಟಣ ಕುಟ್ಟುವುದು ಎಂಬುದು ಒಪ್ಪಿತ ವಿಷಯವಾಗಿದೆ.

ಹಲವಾರು ಮಹಿಳಾ ವಚನಕಾರರು ವೃತ್ತಿನಿಷ್ಠೆ, ವ್ರತಾಚಾರ ನಿಷ್ಠೆಯನ್ನೇ ಜೀವನದ ಮೂಲ ಗುರಿಯನ್ನಾಗಿಸಿಕೊಂಡಿದ್ದಾರೆ. ಆ ಗುಂಪಿನಲ್ಲಿ ಸೋಮಮ್ಮ ಸೇರಿಬಿಡುತ್ತಾಳೆ. ಅದನ್ನು ಆಕೆ ತನ್ನ ವಚನದಲ್ಲಿ ವೃತ್ತಿಯ ಪರಿಭಾಷೆಯನ್ನು ಬಳಸಿ ತುಂಬ ಪರಿಣಾಮಕಾರಿಯಾಗಿಯೇ ಅಭಿವ್ಯಕ್ತಿಸಿದ್ದಾಳೆ.

ಕದಿರ ರೆಮ್ಮವ್ವೆ -

ಕದಿರ ಕಾಯಕವನ್ನು ಮಾಡುವ ಮತ್ತೊರ್ವ ವಚನಕಾರ್ತಿ ರೆಮ್ಮವ್ವೆ. ಈಕೆಯನ್ನು ರೆಬ್ಬೆವ್ವೆ ಎಂಬ ಇನ್ನೊಂದು ಹೆಸರಿನಿಂದ ಕರೆಯಲಾಗುತ್ತಿತ್ತು ಎಂಬುದು ತಿಳಿದಿದೆ. ಹರಿಹರನು ಲಿಂಗಾರ್ಚನೆಯ ರಗಳೆಯಲ್ಲಿ ಇತರ ಶಿವಶರಣೆಯರ ಜೊತೆಗೆ ಈಕೆಯನ್ನು ಸ್ಮರಿಸಿದ್ದಾನೆ. ಇನ್ನೂ ಪಂಡಿತಾರಾಧ್ಯ ಚಾರಿತ್ರ್ಯದಲ್ಲಿನ ಗಣಸಹಸ್ರನಾಮದಲ್ಲಿ ಈಕೆಯ ಹೆಸರನ್ನು ಪಾಲ್ಕುರಿಕೆ ಸೋಮನಾಥನು ಸೇರಿಸಿದ್ದಾನೆ. ಕವಿಚರಿತ್ರಾಕಾರರ ಅಭಿಪ್ರಾಯದಂತೆ ಈಕೆ ಬಸವ ಸಮಕಾಲೀನಳೆಂದು ಗುರುತಿಸಲಾಗಿದೆ. ಆದರೆ ಡಾ. ಎಲ್. ಬಸವರಾಜು ಅವರು ಈಕೆಯ ವಚನಗಳಲ್ಲಿ ಬಳಕೆಯಾಗಿರುವ 'ಪರದಳ ವಿಷಾಡ', 'ಗಜವೇಂಟೆಕಾರ' ಎಂಬ ಪದಗಳನ್ನು ಗಮನಿಸಿ ಇವು ವಿಜಯನಗರದ ಅರಸರ ಕಾಲದಲ್ಲಿ ಬಂದ ಬಿರುದಾವಳಿಗಳು, ಆದ್ದರಿಂದ ಈಕೆ ಸುಮಾರು ೧೪೩೦ರಲ್ಲಿರಬೇಕು ಎಂದು ಹೇಳುತ್ತಾರೆ. ಸಕಲ ಪುರಾತನರ ವಚನಗಳು ಮತ್ತು ಸ್ಥಲ ಕಟ್ಟಿನ ಕೃತಿಗಳಲ್ಲಿ ಈಕೆಯ ವಚನಗಳು ಬಸವಾದಿ ಶರಣರ ವಚನಗಳ ಜೊತೆ ಇರುವುದರಿಂದ ಈಕೆ ಬಸವ ಸಮಕಾಲೀನಳು ಎಂಬುದಕ್ಕೆ ಆಧಾರ ಸಿಕ್ಕಂತಾಗಿದೆ ಎಂಬುದು ಅನೇಕ ವಿದ್ವಾಂಸರ ಒಮ್ಮತ.

ರೆಮ್ಮೆವ್ವೆ ಒಬ್ಬ ವೃತ್ತಿಜೀವಿ. ರಾಟೆಯಿಂದ ನೂಲು ತೆಗೆಯುವುದು ಇವಳ ವೃತ್ತಿ. ವಚನ ಕಾರರು ನಿರ್ಮಿಸಿದ ಕಾಯಕ ಸಿದ್ಧಾಂತದ ಅಡಿಯಲ್ಲಿ ಹಲವಾರು ಅನುಭಾವಿಗಳು ಪಾಲ್ಗೊಂಡು ಉನ್ನತಿಯನ್ನು ಪಡೆದವರಾಗಿದ್ದಾರೆ. ಅದರಂತೆ ಒಟ್ಟು ಚಿಂತನ ಫಲವನ್ನು ಅನುಭವಿಸುವ ವಚನಕಾರ್ತಿಯರಲ್ಲಿ ರೆಮ್ಮೆವ್ವೆ ಕೂಡ ಒಬ್ಬಳಾಗಿದ್ದಾಳೆ. ಶರಣರ ಕಾಯಕ ತತ್ವವನ್ನು ನಿಷ್ಠೆಯಿಂದ ಪಾಲಿಸಿ ಬದುಕನ್ನು ಸಾಗಿಸಿದವಳಾಗಿದ್ದಾಳೆ. ಇದುವರೆಗೆ ಈಕೆಯ ನಾಲ್ಕು ವಚನಗಳು ಲಭ್ಯವಿದ್ದು, ಕದಿರ ರೆಮ್ಮಯೊಡೆಯ ಗುಮ್ಮೇಶ್ವರ ಎಂಬ ಅಂಕಿತದಲ್ಲಿ ರಚಿತಗೊಂಡಿವೆ. ಬೆಡಗಿನ ಶೈಲಿಯ ಎರಡು ವಚನಗಳು ಸತಿ ಪತಿ ಭಾವವನ್ನು ವ್ಯಕ್ತಿಪಡಿಸಿದರೆ, ಇನ್ನೊಂದು ವಚನವನ್ನು ತನ್ನ ವೃತ್ತಿಯ ಪರಿಕರಗಳ ಮೂಲಕ ಆಧ್ಯಾತ್ಮಿಕವಾದ, ಅಲೌಕಿಕವಾದ ಕ್ರಿಯೆಯೊಂದಿಗೆ ಅನುಸಂಧಾನ ಮಾಡಿದಂತೆ ಅಭಿವ್ಯಕ್ತಗೊಂಡಿದೆ. ಮತ್ತೊಂದು ವಚನದಲ್ಲಿ ಬಸವಣ್ಣ, ಚನ್ನಬಸವಣ್ಣ, ಅಲ್ಲಮ ಪ್ರಭುವಿಗೆ ಕೃತಜ್ಞಾಭಾವದಿಂದ ತನ್ನ ಬದುಕು ಸಾರ್ಥಕವಾಯಿತೆಂದು ಧನ್ಯತೆಯನ್ನು ಅರ್ಪಿಸುತ್ತಾಳೆ.

ಗುಂಡಯ್ಯಗಳ ಪುಣ್ಯಸ್ತ್ರೀ ಕೇತಲದೇವಿ -

ಕುಂಬಾರ ವೃತ್ತಿಯನ್ನು ಮಾಡುತ್ತಿದ್ದ ಗುಂಡಯ್ಯನೆಂಬ ವಚನಕಾರನ ಸತಿ ಕೇತಲದೇವಿ. ಈಕೆ ಬಸವಣ್ಣ ಹಾಗೂ ಶರಣರ ಪ್ರಭಾವಕ್ಕೊಳಗಾಗಿ ವಚನ ರಚನೆಗೂ ಕೈಹಾಕಿದ್ದಾಳೆ. ಸದ್ಯಕ್ಕೆ

ಈಕೆಯ 'ಕುಂಬೇಶ್ವರ ಅಥವಾ ಕುಂಬೇಶ್ವರ ಲಿಂಗ' ಎಂಬ ಅಂಕಿತದಲ್ಲಿ ಎರಡು ವಚನಗಳು ಉಪಲಬ್ಧವಿವೆ. ಬೀದರ ಜಿಲ್ಲೆಯ ಭಲ್ಲುಕೆ (ಭಾಲ್ಕಿ) ಈಕೆಯ ಸ್ಥಳ ಎಂಬುದನ್ನು ವಿದ್ವಾಂಸರು ಗುರುತಿಸಿದ್ದಾರೆ. ಕೇತಲದೇವಿ ಮತ್ತು ಗುಂಡಯ್ಯ ನಿಷ್ಠಾವಂತ ಶಿವಭಕ್ತರಾಗಿದ್ದು, ಮುಂದೆ ಇವರು ಬಸವಣ್ಣನ ನೇತೃತ್ವದ ವಚನ ಚಳುವಳಿಗೆ ಸೇರಿಕೊಂಡು ಆಧ್ಯಾತ್ಮಿಕ ಸಾಧನೆಯ ಜೊತೆಗೆ ಸಾಮಾಜಿಕ ಮೌಲ್ಯವನ್ನು ಎತ್ತಿಹಿಡಿಯುವ ಕಾಯಕದಲ್ಲಿ, ಸಮಾಜದಲ್ಲಿ ಸಮಾನತೆಯ ಬೆಳೆಯನ್ನು ಬೆಳೆಸುವಲ್ಲಿ ಕೈಜೋಡಿಸಿದ್ದಾರೆ.

ಇವರ ಕುಲಕಸುಬು ಕುಂಬಾರಿಕೆ ಎಂಬುದು ತಿಳಿದುಬರುತ್ತದೆ. ಅದಕ್ಕೆ ಅವರ ವಚನಗಳು ಆಧಾರವಾಗಿ ನಿಲ್ಲುತ್ತವೆ ಮತ್ತು ಹಲವಾರು ಕಾವ್ಯಗಳಲ್ಲಿ ಹರಿಹರನ ರಗಳೆಯನ್ನೊಳಗೊಂಡು ಅನೇಕ ಕೃತಿಗಳಲ್ಲಿ ಇವರ ಉಲ್ಲೇಖವಿದೆ. ಗಂಡನು ಮಾಡುತ್ತಿದ್ದ ಕುಂಬಾರಿಕೆಯ ವೃತ್ತಿಯನ್ನೇ ಕೇತಲದೇವಿಯು ಅನುಸರಿಸಿದ್ದಳು. ಆ ಮೂಲಕ ತನ್ನ ವೃತ್ತಿಯಲ್ಲೇ, ಕಾಯಕ ತತ್ವವನ್ನು ಪಾಲಿಸುತ್ತ ನಿಷ್ಠಾಪೂರ್ಣ ಬದುಕನ್ನು ಕಟ್ಟಿಕೊಂಡಿದ್ದಳು. ಅಲ್ಲದೇ ವ್ರತ ನಿಷ್ಠೆಯ ವ್ಯಕ್ತಿತ್ವದವಳೂ ಆಗಿದ್ದಳು. ಇದಕ್ಕೆ ನಿದರ್ಶನದಂತೆ ಈ ಪವಾಡ ಕಥೆಯನ್ನು ನೋಡಬಹುದು. ಕೇತಲದೇವಿ ತನ್ನ ಲಿಂಗಕ್ಕೆ ಪಾವುಡವನ್ನು ಹಾಕುವ ವ್ರತವನ್ನು ಕೈಗೊಂಡಿದ್ದಳಂತೆ ಒಮ್ಮೆ ಅದು ದೊರೆಯದೆ ಇರಲು ತನ್ನ ಎದೆಯ ಚರ್ಮವನ್ನೆ ತೆಗೆದುಹಾಕಿದಳು. ಇದರಿಂದ ಸಂತುಷ್ಟನಾದ ಶಿವನು ಮೆಚ್ಚಿದನಂತೆ. ಈ ಪವಾಡ ಕಥೆಯ ಮೂಲಕ ಆಕೆಯ ನಿಷ್ಠೆ, ಪ್ರಮಾಣಿಕತೆಯನ್ನು ಅರಿಯಬಹುದಾಗಿದೆ.

ದೊರೆತ ಈಕೆಯ ಎರಡು ವಚನಗಳಲ್ಲಿ, ಒಂದನ್ನು ತನ್ನ ವೃತ್ತಿಯ ಪರಿಭಾಷೆಯ ಮೂಲಕ ವ್ರತಭ್ರಷ್ಟರನ್ನು ಬೆರೆಯಬಾರದೆಂದು ಹೇಳುತ್ತಾಳೆ. ಹದಮಣ್ಣು, ಮಡಿಕೆ ಎಂಬ ಕುಂಬಾರ ವೃತ್ತಿಯಲ್ಲಿ ಬಳಸುವ ವಸ್ತುಗಳನ್ನೆ ಇಲ್ಲಿ ಆಕೆ ಅಭಿವ್ಯಕ್ತಿಗೆ ಮಾಧ್ಯಮವಾಗಿ ಬಳಸಿಕೊಂಡು ನಿಷ್ಠೆಯ ತತ್ವವನ್ನು ಹೇಳುತ್ತಾಳೆ. ಮತ್ತು ಡಂಬಾಚಾರದ ಬದುಕನ್ನು ಬಾಳುವವರನ್ನು ಸೇರಲಾರೆನೆಂಬ ದಿಟದ ನಿಲುವು ಪ್ರಕಟಗೊಂಡಿರುವುದನ್ನು ಗುರುತಿಸಬಹುದು. ಇನ್ನೊಂದು ವಚನವನ್ನು ಹೇಳುವಾಗ ಸಂಸ್ಕೃತ ಶ್ಲೋಕದ ಬಳಕೆಯನ್ನು ಗಮನಿಸಿ ಈಕೆ ಕೇವಲ ಅನುಭವ ಮಂಟಪದಲ್ಲಿ ಪಾಲ್ಗೊಂಡು ಚರ್ಚೆಯಿಂದ ಬಂದ ಜ್ಞಾನವನ್ನಷ್ಟೇ ಪಡೆದವಳಾಗಿಲ್ಲ. ಶಿಕ್ಷಣವನ್ನು ಪಡೆದುಕೊಂಡಿದ್ದಳು ಎಂಬ ನಿಲುವಿಗೆ ಬರಬೇಕಾಗುತ್ತದೆ. ಅಥವಾ ಅನುಭವ ವೇದ್ಯವಾಗಿ ಇಂತಹ ಸಂಸ್ಕೃತ ಶ್ಲೋಕಗಳನ್ನು ಬಳಕೆ ಮಾಡಿರಬಹುದಾಗಿದೆ.

ಧೂಪದ ಗೊಗ್ಗವ್ವೆ

ಗೊಗ್ಗವ್ವೆಯ ಆರು ವಚನಗಳು ಉಪಲಬ್ಧ ಇವೆ. 'ನಾಸ್ತಿನಾಥ' ಎಂಬ ಅಂಕಿತದಿಂದ ರಚನೆಗೊಂಡ ವಚನಗಳು ಗೊಗ್ಗವ್ವೆಯವು ಒಪ್ಪಿತ ವಿಷಯವಾಗಿದೆ. ಈಕೆಯ ಬಗ್ಗೆ ಕೆಲವು ವಿವರಗಳು ಮಾತ್ರ ದೊರಕಿದ್ದು ಭೈರವೇಶ್ವರ ಕಾವ್ಯ, ಗುರುರಾಜ ಚಾರಿತ್ರ್ಯ, ಭೈರವೇಶ್ವರ ಕಥಾಮಣಿಸೂತ್ರ ರತ್ನಾಕರ ಮೊದಲಾದ ಕೃತಿಗಳಲ್ಲಿ ಉಲ್ಲೇಖವಿದೆ. ಅವುಗಳ ಪ್ರಕಾರ ಈಕೆಯದು ಕೇರಳದ ಅವಲೂರು. ಈಕೆ ಅಕ್ಕಮಹಾದೇವಿ, ಬೊಂತಾದೇವಿಯಂತೆ ಸಂಸಾರದಿಂದ ದೂರಸರಿದು

ವಿರಾಗಿಣಿಯಾಗಿಯೇ ಇದ್ದಳು ಎಂಬುದು ತಿಳಿದು ಬಂದಿದೆ. ಶಿವನನ್ನು ಆರಾಧಿಸುತ್ತಿದ್ದ ಈಕೆ ಪ್ರೌಢಾವಸ್ಥೆಗೆ ಬಂದಾಗ ಸಹಜವಾಗಿ ಈಕೆಯ ತಂದೆ ತಾಯಿಗಳು ಮದುವೆಯ ಪ್ರಸ್ತಾಪ ಮುಂದಿಡುತ್ತಾರೆ. ಅದನ್ನು ಒಪ್ಪಿಕೊಳ್ಳದ ಈಕೆ ಮನೆಯಿಂದ ಓಡಿಹೋಗಿ ಶಿವಾಲಯದಲ್ಲಿ ಅಡಗಿಕೊಳ್ಳುತ್ತಾಳೆ. ಸಾಂಸಾರಿಕ ಜೀವನದಿಂದ ದೂರ ಉಳಿಯುವ ಇಂಗಿತವನ್ನು ಅರಿತ ತಂದೆ ತಾಯಿಗಳು ಈಕೆಯ ನಿರ್ಧಾರಕ್ಕೆ ಅಡ್ಡಿಪಡಿಸದೆ ಸುಮ್ಮನಾಗುತ್ತಾರೆ. ಮುಂದೆ ಈಕೆ ಬಸವಣ್ಣನ ನೇತೃತ್ವದ ವಚನ ಚಳುವಳಿಯಲ್ಲಿ ಸೇರಿ ವಚನಗಳನ್ನು ರಚಿಸಿ, ವಿಶಿಷ್ಟವಾದ ಧೂಪದ ಕಾಯಕವನ್ನು ಕೈಗೊಂಡು ಕಾಯಕ ನಿರತತೆಯನ್ನು, ವ್ರತನಿಷ್ಠೆಯನ್ನು ಅಭಿವ್ಯಕ್ತಪಡಿಸುತ್ತಾಳೆ.

ಮಹಿಳಾ ವಚನಕಾರರು ಮುಖ್ಯವಾಗಿ ತಮ್ಮ ಕುಲಕಸುಬನ್ನೇ ಅವಲಂಬಿಸಿದ್ದಾರೆ. ಕೆಲವರು ತಮ್ಮ ಗಂಡಂದಿರು ಕೈಗೊಂಡಿರುವ ವೃತ್ತಿಯಲ್ಲಿಯೂ ನಿರತರಾಗಿದ್ದಾರೆ. ಗಂಡ ಬೇರೆ ವೃತ್ತಿಯನ್ನು ಅವಲಂಬಿಸಿದ್ದಾರೆ. ಹೆಂಡತಿ ಮತ್ತೊಂದು ವೃತ್ತಿಯನ್ನು ಅನುಸರಿಸುವ ಪ್ರಯತ್ನ ತುಂಬ ವಿರಳವೇ ಸರಿ. ಅದು ಅಸಾಧ್ಯದ ನಿಲುವು ಅಂತ ತಿಳಿದೋ? ಅಥವಾ ಸಾಧ್ಯವಾಗದ ಪರಿಸ್ಥಿತಿಯೋ? ಅವಕಾಶದಿಂದ ವಂಚಿತರೋ ತಿಳಿಯದು. ಕೆಲವರಲ್ಲಿ ಗುರುತಿಸಬಹುದಾದರೂ ಅದು ಕಷ್ಟದ ಕೆಲಸ. ಇನ್ನೂ ಜೀವನದಲ್ಲಿ ವೈರಾಗ್ಯವನ್ನು ತಾಳಿ ಶಿವನೇ ಪತಿಯೆಂದು ತಿಳಿದುಕೊಂಡು ಆಧ್ಯಾತ್ಮಿಕ ಸಾಧನೆಗೆ ತೊಡಗಿಕೊಂಡು ಮಹಿಳೆಯಲ್ಲಿ ವೃತ್ತಿಯನ್ನು ಗುರುತಿಸುವುದು ಕೂಡ ತುಂಬ ಕಷ್ಟ ವಾದುದು. ಇದಕ್ಕೆ ಅಕ್ಕಮಹಾದೇವಿಯನ್ನು, ಬೊಂತಾದೇವಿಯನ್ನು ನೋಡಬಹುದು. ಆದರೆ ಇವರಂತೆ ಗೊಗ್ಗವ್ವೆ ವೃತ್ತಿಯನ್ನು ನಿರಾಕರಿಸಿದವರಲ್ಲ ಅಥವಾ ಮಾಡದೆ ಇರುವವಳಲ್ಲ. ಅಕ್ಕಮಹಾದೇವಿ, ಬೊಂತಾದೇವಿಯರ ವೃತ್ತಿ ತಿಳಿದುಬಂದಿಲ್ಲವಾದ್ದರಿಂದ ಹೀಗೆ ಗ್ರಹಿಸಬಹುದೇನೋ? ಗೊಗ್ಗವ್ವೆ ಶಿವಲಿಂಗಕ್ಕೆ ಧೂಪವನ್ನು ಅರ್ಪಿಸುವ ವೃತ್ತಿಯನ್ನು ಕೈಗೊಂಡು ಅದರ ಮೂಲಕವೇ ಪರಿಚಿತಗೊಳ್ಳುತ್ತಾಳೆ. ಮತ್ತು ತನ್ನ ಆಧ್ಯಾತ್ಮಿಕ ಸಾಧನೆಗೆ ಅದೇ ಪೂರಕ ದಾರಿ ಎಂಬುದನ್ನು ಅರಿತು ಆ ವೃತ್ತಿಯನ್ನು ಮಾಡುತ್ತಾಳೆ. ಈಕೆ ಧೂಪದ ವೃತ್ತಿಯನ್ನು ಸ್ವೀಕರಿಸಿದುದ ಸಹವೋ, ಕುಲ ಮೂಲದ್ದೋ ಅಥವಾ ತನ್ನ ಹಿರಿಯರು ಅಂದರೆ ತಂದೆ ತಾಯಿಯರು ಕೈಗೊಂಡ ವೃತ್ತಿಯನ್ನು ಸ್ವೀಕರಿಸಿದಳೋ ಎಂಬುದು ತಿಳಿಯದ ಮಾಹಿತಿ ಯಾಗಿದ್ದರಿಂದ ತನ್ನ ಸಾಧನ ಬದುಕಿನಲ್ಲಿ, ಉಪಜೀವನಕ್ಕಾಗಿ ಈ ವೃತ್ತಿಯನ್ನು ಕೈಗೊಂಡಳು ಎಂಬುದಕ್ಕಿಂತ ಬೇರೆಯಾಗಿಯೇ ನೋಡಬೇಕಿದೆ. ವಚನಕಾರರ 'ಏಕದೈವೋಪಾಸನೆ', ಶಿವಭಕ್ತಿ, ಶಿವನಿಷ್ಠೆ, ಶಿವನ ಸೇವೆಯಲ್ಲದೆ ಮತ್ತೊಂದನ್ನು ಮಾಡಬಾರದೆಂದು ಶಿವವ್ರತ ನಿಷ್ಠೆ ಈಕೆಯನ್ನು ಧೂಪದ ವೃತ್ತಿಗೆ ತೊಡಗುವಂತೆ ಪ್ರೇರೇಪಿಸಿರ ಬಹುದೆಂದು ಊಹಿಸಬಹುದಾಗಿದೆ. ಶರಣರ ಆಶಯವನ್ನು ಒಪ್ಪಿಕೊಂಡ ಈಕೆ ಸಹಜವಾಗಿ ಈ ವೃತ್ತಿಯಿಂದ ತನ್ನ ಸಾಧನೆಗೆ ಮಾರ್ಗ ಇದಾಗಬಹುದೆಂಬ ನಂಬಿಕೆಯಿಂದಲೇ ಈ ವೃತ್ತಿಯನ್ನು ಅಪ್ಪಿಕೊಳ್ಳುತ್ತಾಳೆ.

ಕಾಟಕೂಟಯ್ಯಗಳ ಪುಣ್ಯಸ್ತ್ರೀ ರೇಚವ್ವೆ

ಮಹಿಳಾ ವಚನಕಾರರ ಜೀವನದ ಬಗ್ಗೆ ಸ್ಪಷ್ಟ ವಿವರಗಳು ದೊರೆಯದಿರುವುದು ಸಾಹಿತ್ಯ ಚರಿತ್ರೆ ಕಟ್ಟಲು ಹಿನ್ನೆಡೆಯೇ ಸರಿ. ಕೆಲವು ವಚನಕಾರ್ತಿಯರ ಕುರಿತು ಏನೂ ಮಾಹಿತಿ ಸಿಕ್ಕಿಲ್ಲ.

ಕೇವಲ ಒಂದೋ ಎರಡೋ ವಚನಗಳು ಉಪಲಬ್ಧವಿದೆ. ಕೆಲವು ಕಾವ್ಯಗಳಲ್ಲಿ ಅವರ ಪ್ರಸ್ತಾಪ ಬಿಟ್ಟರೆ ಜೀವಿತದ ಕುರಿತು ಮೌನವೇ ಕಾಣುತ್ತದೆ. ಇನ್ನು ವೃತ್ತಿ ಗುರುತಿಸುವುದಂತೂ ಕಷ್ಟವೇ ಸಾಧ್ಯ.

ರೇಚವ್ವೆ ವಚನಕಾರ್ತಿಯೆಂಬುದಕ್ಕೆ ಆಕೆಯ ಒಂದು ವಚನ ಲಭ್ಯವಿದೆ. ಇನ್ನುಳಿದಂತೆ ಸಿದ್ಧನಂಜೇಶನ ಗುರುರಾಜ ಚಾರಿತ್ರ್ಯದಲ್ಲಿ ಈಕೆಯ ಹೆಸರಿನ ಉಲ್ಲೇಖವಿದೆ. ಸುಮಾರು ೧೧೬೦ ಈಕೆಯ ಕಾಲ ಎಂದು ವಿದ್ವಾಂಸರು ಊಹಿಸಿದ್ದಾರೆ. ಸಕಲ ಪುರಾತನರ ವಚನಗಳು ಮತ್ತು ಶೀಲ ಸಂಪಾದನೆ ಎಂಬ ವಚನ ಸಂಕಲನಗಳಲ್ಲಿ 'ನಿಜ ಶಾಂತೇಶ್ವರ' ಎಂಬ ಅಂಕಿತದಲ್ಲಿ ರಚನೆಗೊಂಡಿರುವ ಒಂದು ವಚನ ದೊರೆತಿದ್ದು ಅದು ರೇಚವ್ವೆಯದೇ ಆಗಿದೆ ಎಂದು ಗುರುತಿಸಲಾಗಿದೆ.

ವ್ರತಾಚರಣೆಗೆ ಇತರ ವಚನಕಾರ್ತಿಯರು ಒತ್ತುಕೊಟ್ಟಂತೆ ರೇಚವ್ವೆಯು ಕೂಡ ತನ್ನ ವಚನದಲ್ಲಿ ವ್ರತಾಚರಣೆಯ ಕುರಿತು ಮಾತಾಡುತ್ತಾಳೆ. ಅಲ್ಲದೇ ತನ್ನ ದೈವವನ್ನು ಪ್ರಶ್ನಿಸುವ ಮೂಲಕ ತನ್ನ ವ್ರತನಿಷ್ಠೆಯನ್ನು ಪ್ರಕಟಪಡಿಸುತ್ತಾಳೆ. ಈ ವಚನದಲ್ಲಿ ತನ್ನ ತಿಳುವಳಿಕೆಯನ್ನು ಅಭಿವ್ಯಕ್ತಪಡಿಸುವ ವಿಧಾನವೇ ವೈಶಿಷ್ಟ್ಯಪೂರ್ಣವಾಗಿದೆ.

ಕೊಂಡೆ ಮಂಚಣ್ಣಗಳ ಪುಣ್ಯಸ್ತ್ರೀ ಲಕ್ಷ್ಮಮ್ಮ

'ಅಗಜೇಶ್ವರಲಿಂಗ' ಎಂಬ ಅಂಕಿತದಲ್ಲಿ ರಚಿತಗೊಂಡಿರುವ ಒಂದೇ ಒಂದು ವಚನ ಉಪಲಬ್ಧವಿದ್ದು ಅದು ಕೊಂಡೆ ಮಂಚಣ್ಣಗಳ ಪುಣ್ಯಸ್ತ್ರೀ ಲಕ್ಷ್ಮಮ್ಮದೆಂದು ಗುರುತಿಸಲಾಗಿದೆ. ಹೆಸರಿನ ಹಿಂದೆ ಸೇರಿರುವ ವಿಶೇಷಣೆಯಿಂದಲೇ ಈಕೆ ಕೊಂಡೆ ಮಂಚಣ್ಣಗಳ ಸತಿ ಎಂಬುದು ತಿಳಿದುಬರುತ್ತದೆ. ಕೊಂಡೆ ಮಂಚಣ್ಣ ಬಿಜ್ಜಳನ ಆಸ್ಥಾನದಲ್ಲಿ ಮಂತ್ರಿಯಾಗಿದ್ದ ಎಂದು ವೀರಶೈವ ಕಾವ್ಯ ಪುರಾಣಗಳಲ್ಲಿ ತಿಳಿದುಬರುತ್ತದೆ. ಮೂಲತಃ ಇವರು ವೈಷ್ಣವ ಭಕ್ತರಾಗಿದ್ದು ನಂತರ ಬಸವಣ್ಣನ ಪ್ರಭಾವಕ್ಕೆ ಒಳಗಾಗಿ ಶಿವಭಕ್ತಿಯನ್ನು ಮಾಡುತ್ತಿದ್ದರೆಂದು ಮತ್ತು ಅವರು ಗುಪ್ತ ಶಿವಭಕ್ತಿಯನ್ನು ಆಚರಿಸುತ್ತಿದ್ದರೆಂದು ತಿಳಿದುಬರುತ್ತದೆ. 'ಸಕಲ ಪುರಾತನರ ವಚನಗಳು' ಕಟ್ಟುಗಳಲ್ಲಿ ಈಕೆಯನ್ನು 'ಕೊಂಡೆ ಮಂಚಣ್ಣಗಳ ಪುಣ್ಯಸ್ತ್ರೀ' ಎಂದಿರುವುದನ್ನೇ ಆಧಾರವಾಗಿಟ್ಟುಕೊಂಡು ತಿಳಿಯಲಾಗಿದೆ.

ಲಕ್ಷ್ಮಮ್ಮ ತನ್ನ ಒಂದೇ ಒಂದು ವಚನದಲ್ಲಿ ವೀರಶೈವ ನಿಷ್ಠೆಯನ್ನು ಗಣಾಚಾರವನ್ನು, ವೀರಮಹೇಶ್ವರ ನಿಷ್ಠೆಯನ್ನು ತೋರಿರುವುದನ್ನು ಕಾಣುತ್ತೇವೆ. ಅಲ್ಲದೇ ಈಕೆಯು ಕೂಡ ನೇರವಾಗಿ ವ್ರತ ತಪ್ಪಿದವರನ್ನು ಕಂಡಿಸುತ್ತಾಳೆ. ವ್ರತಾಚಾರವೇ ಬದುಕಿನ ಮುಖ್ಯಮೌಲ್ಯವಾಗಿ ಕಂಡಿದ್ದಾಳೆ ಮತ್ತು ಅದನ್ನೇ ಪ್ರತಿಪಾದನೆ ಮಾಡಿರುವುದು ಕಾಣುತ್ತದೆ.

ಸೂಳೆ ಸಂಕವ್ವೆ

ಸಂಕವ್ವೆಯ ಹೆಸರಿನ ಹಿಂದೆ ಸೇರಿಕೊಂಡಿರುವ 'ಸೂಳೆ' ಎಂಬ ವಿಶೇಷಣ ಪದದಿಂದ ಈಕೆಯ ವೃತ್ತಿಯು ವೇಶ್ಯಾವೃತ್ತಿ ಇರಬಹುದಾಗಿದೆ ಎಂದು ಗುರುತಿಸಲಾಗಿದೆ. ಬಹುಶಃ ಈಕೆ ಬಸವಣ್ಣನ ನೇತೃತ್ವದ ವಚನ ಚಳುವಳಿಗೆ ಬಂದು ಸೇರುವುದಕ್ಕೆ ಮುನ್ನ ಈಕೆ ವೇಶ್ಯಾವೃತ್ತಿಯನ್ನು ಮಾಡುತ್ತಿರಬಹುದು. ನಂತರ ವಚನ ಚಳುವಳಿಯ ಪ್ರಭಾವ ವಲಯಕ್ಕೆ ಆಕರ್ಷಿತಳಾಗಿ ಈ

ಚಳುವಳಿಯಲ್ಲಿ ಪಾಲ್ಗೊಂಡು ತನ್ನ ಅರಿವಿನ ವಿಸ್ತಾರತೆಯನ್ನು ಮಾಡಿಕೊಳ್ಳುತ್ತ, ತನ್ನ ವೃತ್ತಿಯನ್ನು ಸಾತ್ವಿಕ ಬದುಕನ್ನಾಗಿ ಮಾಡಿಕೊಂಡಿರಬೇಕು ಎಂದು ತಿಳಿಯಬಹುದಾಗಿದೆ. ಸದ್ಯಕ್ಕೆ ಈಕೆಯ ಕುರಿತು ಸಿಕ್ಕ ಮಾಹಿತಿ ಏನೂ ಇಲ್ಲ ಮತ್ತು 'ನಿರ್ಲಜ್ಜೇಶ್ವರ' ಎಂಬ ಅಂಕಿತದಲ್ಲಿ ಲಭ್ಯವಿರುವ ಒಂದು ವಚನವನ್ನು ಈಕೆಯದೇ ಎಂದು ತಿಳಿಯಲಾಗಿದೆ. ಅಲ್ಲದೆ ಅದು ಆಕೆಯ ವೃತ್ತಿಸೂಚಕ ಪರಿಭಾಷೆಯಲ್ಲೇ ಬಳಕೆಗೊಂಡು ಆಧಾರವಾಗಿ ನಿಲ್ಲುತ್ತದೆ. ತನ್ನ ಬದುಕನ್ನು ಸ್ವಾಭಿಮಾನಿಯಾಗಿ, ಪ್ರಾಮಾಣಿಕವಾಗಿ ಕಟ್ಟಿಕೊಳ್ಳುವ ಹಂಬಲದ ಜೊತೆಗೆ ಸ್ತ್ರೀ ಸಹಜ ಅಭಿಪ್ರಾಯದಂತೆ ವ್ರತಾಚರಣೆಗೆ ಒತ್ತುನೀಡುವ ಪ್ರಯತ್ನ ಮಾಡಿದುದಾಗಿದೆ. ಈಕೆ ವ್ರತಹೀನರ ಸಂಗವನ್ನು ಒಪ್ಪಿಕೊಳ್ಳದೆ ತನ್ನ ನಂಬಿಕೆಯಾದ ವಚನ ಸಂಸ್ಕೃತಿಯ ತತ್ವಗಳಾದ ಕಾಯಕ ಸಿದ್ಧಾಂತಕ್ಕೆ ಬದ್ಧಳಾಗಿಯೇ ಪ್ರಮಾಣಿಕತೆಯ ಬದುಕನ್ನು ಕುರಿತು ಮಾತನಾಡುತ್ತಾಳೆ.

ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಸ್ತ್ರೀಯೊಬ್ಬಳು ಅದರಲ್ಲೂ ಕೇವಲ ಪುರುಷನ ಸೇವೆಗಾಗಿಯೇ ತನು-ಮನವನ್ನು ಮೀಸಲಿಡುವ ವೃತ್ತಿಯಲ್ಲಿದ್ದು ಪ್ರತಿಭಟನೆಯ ಅಸ್ತ್ರವಿಡಿದದ್ದು ವಿಶೇಷವೇ ಸರಿ. ಸಮಾಜ ಹೀನವೆಂದು ಕಾಣುತ್ತಿದ್ದ ವೃತ್ತಿಯನ್ನು ಉನ್ನತ ಮಟ್ಟದ ಸಾಧನೆಗೆ ಮಾಧ್ಯಮವನ್ನಾಗಿ ಮಾಡಿಕೊಂಡುದುದು ಬಲಿಷ್ಠ ಸಮುದಾಯದ ವಿರುದ್ಧದ ಪ್ರತಿಭಟನೆಯೇ ಆಗಿದೆ. ತನ್ನ ವೃತ್ತಿಯು ಕನಿಷ್ಠವಲ್ಲ. ನಾನು ಮಾಡುವ ವೃತ್ತಿಯು 'ಕಾಯಕ' ಎಂದು ಪರಿಭಾವಿಸಿಕೊಂಡು ಸೇವಾವೃತ್ತಿಯನ್ನೇ ಶಿವನ ಸಾಮೀಪ್ಯವನ್ನು ಸೇರಲು ಮೆಟ್ಟಿಲು ಮಾಡಿಕೊಂಡಿದ್ದಾಳೆ.

ಹಾದರ ಕಾಯಕದ ಗಂಗಮ್ಮ

ವಚನಕಾರ್ತಿಯರಲ್ಲಿ ಕಾಯಕ ಜೀವಿಗಳೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಸಮಾಜದ ವಿವಿಧ ಕುಲವೃತ್ತಿಗಳನ್ನು ಮಾಡುವವರು ಆಗಿದ್ದಾರೆ. ಇಂತಹವರಲ್ಲಿ ಗಂಗಮ್ಮ ಒಬ್ಬ ವಚನಕಾರ್ತಿಯಾಗಿದ್ದಾಳೆ. ಈಕೆಯದು ಎಂದು ಹೇಳಲಾಗುವ ಒಂದೇ ಒಂದು ವಚನ ಸಿಕ್ಕಿದ್ದು ಅದು 'ಗಂಗೇಶ್ವರ' ಎಂಬ ಅಂಕಿತದಲ್ಲಿಯೇ ರಚಿತಗೊಂಡಿದೆ. ಅನೇಕ ವಚನಕಾರರ ವೃತ್ತಿ ವಿಶೇಷಣವು ಅವರ ಹೆಸರಿನ ಹಿಂದೆ ಸೇರಿಕೊಂಡಂತೆ ಗಂಗಮ್ಮನ ಹೆಸರಿಗೆ 'ಹಾದರ' ಎಂಬ ವಿಶೇಷಣ ಸೇರಿಕೊಂಡಿದೆ. 'ಹಾದರ' ಎಂದು ಇರುವ ವಿಶೇಷಣವು 'ಹರದ' (ವ್ಯಾಪಾರಿ) ಎಂದು ಇದ್ದಿರಬೇಕು ಎಂದು ಎಂ. ಚಿದಾನಂದಮೂರ್ತಿಯವರು ಅಭಿಪ್ರಾಯಪಟ್ಟಿದ್ದಾರೆ. ಇನ್ನು ಈಕೆಯ ಉಪಲಬ್ಧ ಒಂದು ವಚನ ಬಿಟ್ಟರೆ ಈಕೆಯ ಜೀವನದ ಮೇಲೆ ಬೆಳಕು ಚೆಲ್ಲುವ ಮಾಹಿತಿ ಲಭ್ಯವಿಲ್ಲವೆಂಬುದೆ ಕೊರತೆ. ಇನ್ನು ಕೆಲವು ವಿದ್ವಾಂಸರು ಹಾದರ ಕಾಯಕದ ಮಾರಯ್ಯನ ಸತಿ ಎಂದು ಊಹಿಸಿದ್ದಾರೆ. ಹಾದರ ಎಂಬ ವಿಶೇಷಣವಿಡಿದು ನೋಡಿದಾಗ ಸೂಳೆ ಸಂಕವ್ವೆಯಂತೆ ಈಕೆಯು ವೇಶ್ಯಾವೃತ್ತಿಯಲ್ಲಿ ನಿರತಳಾಗಿದ್ದು. ನಂತರ ಭಕ್ತಿ ಚಳುವಳಿಯ ಪ್ರಭಾವದಿಂದ ಕಲ್ಯಾಣದ ವಚನ ಚಳುವಳಿಯಲ್ಲಿ ಪಾಲ್ಗೊಂಡು ಅನುಭಾವದಲ್ಲಿ ತೊಡಗಿದಂತೆ ಕಾಣುತ್ತದೆ. ವಚನಕಾರರ ಮುಖ್ಯ ಪರಿಕಲ್ಪನೆಯಾದ ಕಾಯಕ ಸಿದ್ಧಾಂತವನ್ನು ಮೈಗೂಡಿಸಿಕೊಂಡು ಬದುಕುವ ವೃತ್ತಿಜೀವಿಯಾಗಿದ್ದಾಳೆ. ಮುಖ್ಯವಾಗಿ ವೃತ್ತಿ ಸಮಾನತೆಯನ್ನು ಪ್ರತಿಪಾದನೆ ಮಾಡಿರುವುದನ್ನು ಈಕೆಯ ವಚನದಲ್ಲಿ ನೋಡುತ್ತೇವೆ.

ಬಾಚಿಕಾಯಕದ ಬಸವಯ್ಯಗಳ ಪುಣ್ಯಸ್ತ್ರೀ ಕಾಳವ್ವೆ .

'ಕರ್ಮಹರಾ ಕಾಳೇಶ್ವರಾ' ಎಂಬ ಅಂಕಿತದಲ್ಲಿ ರಚನೆಗೊಂಡಿರುವ ಎರಡು ವಚನಗಳಿದ್ದು ಅವು ಬಾಚಿಕಾಯಕದ ಬಸವಯ್ಯಗಳ ಪುಣ್ಯಸ್ತ್ರೀ ಕಾಳವ್ವೆಯವು ಎಂದು ತಿಳಿಯಲಾಗಿದೆ. ಸುಮಾರು ೧೧೬೦ ಎಂದು ಈಕೆಯ ಕಾಲವನ್ನು ವಿದ್ವಾಂಸರು ಗುರುತಿಸಿದ್ದಾರೆ.

ಮಹಿಳಾ ವಚನಕಾರರು ಹೆಚ್ಚಾಗಿ ತಮ್ಮ ಕಂಡಂದಿರು ಮಾಡುತ್ತಿದ್ದ ವೃತ್ತಿಯನ್ನೇ ಅವಲಂಬಿಸಿ, ಅನುಸರಿಸಿದವರು ಹೆಚ್ಚಿನ ಸಂಖ್ಯೆಯಲ್ಲಿ ಸಿಗುತ್ತಾರೆ. ಕಾಳವ್ವೆ ಕೂಡ ಬಡಿಗ ವೃತ್ತಿಯನ್ನು ಮಾಡುತ್ತಿದ್ದ ಬಸವಯ್ಯನ ವೃತ್ತಿಯನ್ನೆ ಮಾಡುತ್ತಿದ್ದಿರಬೇಕು ಎಂದು ಊಹಿಸಲು ಸಾಧ್ಯತೆಗಳಾಗಿ ಈಕೆಯ ವಚನಗಳು ಆಧಾರವಾಗಿ ನಿಲ್ಲುತ್ತವೆ. ಬಡಿಗ ವೃತ್ತಿಯಲ್ಲಿ ಬಳಕೆಗೊಳ್ಳುವ ಉಪಕರಣಗಳು ಇವರ ಕಾವ್ಯಾಭಿವ್ಯಕ್ತಿಗೆ ಮಾಧ್ಯಮಗಳಾಗಿರುವುದು ಕಂಡುಬರುತ್ತದೆ. ಮೂಲತಃ ಕುಲಕಸುಬಿನವರಾದ ಇವರು ತಮ್ಮ ಕುಲ ಮೂಲದ ವೃತ್ತಿಯನ್ನೇ ವಚನಗಳ ಅಭಿವ್ಯಕ್ತಿಗೆ ಮಾಧ್ಯಮವನ್ನಾಗಿ ಮಾಡಿಕೊಂಡಿದ್ದಾರೆ. ವಚನ ಚಳುವಳಿಯ ಮಹತ್ವದ ಚಿಂತನೆಯಾದ, ಪರಿಕಲ್ಪನೆಯಾದ ಕಾಯಕ ತತ್ವವನ್ನು ಅವಲಂಬಿಸಿಕೊಂಡು ಬದುಕನ್ನು ಕಟ್ಟಿಕೊಂಡಿದ್ದಾರೆ. ಕಾಳವ್ವೆಯು ವಚನದಲ್ಲಿ ವೃತ್ತಿ-ಮಾತು-ವ್ರತ ಇವುಗಳ ಕುರಿತು ಮಾತಾಡಿರುವುದು ಕಾಣಬರುತ್ತದೆ.

ಉರಿಲಿಂಗಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವೆ

ಸಮಾಜದ ಕಟ್ಟಕಡೆಯ ವರ್ಗದಿಂದ ಅನೇಕ ವಚನಕಾರರು ಬಂದಿದ್ದಾರೆ. ಆದರೆ ವಚನಕಾರ್ತಿಯರ ಸಂಖ್ಯೆ ಕಡಿಮೆ. ಅವರಲ್ಲಿ ಕಾಲಕಣ್ಣಿಯ ಕಾಮಮ್ಮ, ಸತ್ಯಕ್ಕ ಇದ್ದಾರೆ. ಇನ್ನು ದಲಿತ ವರ್ಗದಿಂದ ಬಂದ ವಚನಕಾರ್ತಿ ಎಂದರೇ ಉರಿಲಿಂಗ ಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವೆ 'ಉರಿಲಿಂಗ ಪೆದ್ದಿಗಳರಸ' ಎಂಬ ಅಂಕಿತದಲ್ಲಿರುವ ಹನ್ನೆರಡು ವಚನಗಳನ್ನು ಕಾಳವ್ವೆ ರಚಿಸಿದ್ದಾಳೆ.

ವಚನಕಾರರ ಕ್ರಾಂತಿ ಸಮಾಜದ ಮೂಲೆಮೂಲೆಗೆ ತಲುಪಿ ಹೊಸ ಬದಲಾವಣೆಗೆ ಪ್ರೇರೇಪಿಸಿದ್ದಂತೂ ನಿಜ. ಅದರ ಫಲವಾಗಿ ಶೋಷಿತರ, ದಮನಿತರ, ದಲಿತರಿಗೆ ಧ್ವನಿಯಾಗಿ ಶಕ್ತಿ ತುಂಬಿತು. ಆ ದಿಸೆಯಲ್ಲಿ ಶತಮಾನಗಳಿಂದ ಒಳಗೆ ಕುದಿಯುತ್ತಿದ್ದ ಪ್ರತಿಭಟನೆಯ ಜ್ವಾಲೆಗೆ ದಾರಿ ಸಿಕ್ಕು ಹೊರಹೊಮ್ಮಿ ಸನಾತನ ಪರಂಪರೆಯನ್ನು ಆವರಿಸಿತು. ಇದು ಕಾಳವ್ವೆಯ ವಚನಗಳ ಅಭಿವ್ಯಕ್ತಿಯಲ್ಲಿರುವ ಭಾವದಲ್ಲಿ ಗುರುತಿಸಬಹುದಾಗಿದೆ. ಈಕೆಯ ನಾಲ್ಕು ವಚನಗಳು ವ್ರತಾಚರಣೆಯನ್ನು ಪ್ರತಿಪಾದಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸಿದರೆ ಇನ್ನೂ ಕೆಲವು ವಚನಗಳಲ್ಲಿ ಭಕ್ತಿಯ ಬಗ್ಗೆ, ಭಕ್ತರ ಬಗ್ಗೆ ಮಾತನಾಡುತ್ತವೆ. ಗುರು-ಲಿಂಗ-ಜಂಗಮದ ಕುರಿತು, ಪ್ರಸಾದದ ಕುರಿತು ಕೆಲವು ವಚನಗಳು ಪ್ರಕಟಗೊಂಡಿವೆ. ವೃತ್ತಿನಿಷ್ಠೆ, ಕಾಯಕತತ್ವದ ಪರಿಪಾಲನೆ ವಿಶೇಷವಾಗಿಯೇ ಅಭಿವ್ಯಕ್ತಿಗೊಂಡಿದೆ. ಈಕೆ ದಲಿತ ಮೂಲದಿಂದ ಬಂದಿರುವದರಿಂದ ಜಾತಿ ಸಮಾನತೆಯನ್ನು ಬಯಸುವ ವರ್ಗ ತಾರತಮ್ಯವನ್ನು ವಿರೋಧಿಸುವ ಗುಣ ಸಹಜವಾಗಿಯೇ ಈಕೆಯ ವಚನಗಳಲ್ಲಿ ಮೂಡಿವೆ. ಕಾಯಕ ಮತ್ತು ಭಕ್ತಿ ಬೇರೆಯಲ್ಲ. ಅವೆರಡು ಒಂದೇ. ಅದು ನಿತ್ಯದ ಬದುಕು ಎಂಬ ಆಕೆಯ ನಿಲುವು ವೈಶಿಷ್ಟ್ಯತೆಯನ್ನು ಪಡೆದಿದೆ.

ಅಧ್ಯಾಯ ೫

ವೃತ್ತಿನಿರತ ಪುರುಷ ವಚನಕಾರರು ಮತ್ತು ಅವರ ವೃತ್ತಿಗಳ ವೈಶಿಷ್ಟ್ಯಗಳು

- ಅಂಬಿಗರ ಚೌಡಯ್ಯ
- ಮಾದಾರ ಧೂಳಯ್ಯ
- ಜೇಡರ ದಾಸಿಮಯ್ಯ
- ಮಾದಾರ ಚನ್ನಯ್ಯ
- ಕೀಲಾರದ ಭೀಮಣ್ಣ
- ತುರುಗಾಯಿ ರಾಮಣ್ಣ
- ಮೇದಾರ ಕೇತಯ್ಯ
- ಆಯ್ದಕ್ಕಿ ಮಾರಯ್ಯ
- ಗಾಣದ ಕಣ್ಣಪ್ಪ
- ಮಡಿವಾಳ ಮಾಚಯ್ಯ
- ಡಕ್ಕೆಯ ಬೊಮ್ಮಣ್ಣ
- ಕಂಬದ ಮಾರಿತಂದೆ
- ಕನ್ನದ ಮಾರಿತಂದೆ
- ಕನ್ನಡಿ ಕಾಯಕದ ಅಮ್ಮಿದೇವಯ್ಯ
- ಒಕ್ಕಲಿಗ ಮುದ್ದಣ್ಣ
- ಎಲೆಗಾರ ಕಾಮಣ್ಣ
- ಕಲಕೇತಯ್ಯ
- ನುಲಿಯ ಚಂದಯ್ಯ
- ಹೆಂಡದ ಮಾರಯ್ಯ
- ಹುಂಜಿನ ಕಾಳಗದ ದಾಸಯ್ಯ
- ಹೊಡೆಹುಲ್ಲ ಬಂಕಣ್ಣ
- ಕೂಗಿನ ಮಾರಯ್ಯ
- ದಾಸೋಹದ ಸಂಗಣ್ಣ
- ಸೂಜಿ ಕಾಯಕದ ರಾಮಿತಂದೆ
- ಕಾಮಾಟದ ಭೀಮಣ್ಣ
- ನಗೆಯ ಮಾರಿತಂದೆ
- ತಳವಾರ ಕಾಮಿದೇವಯ್ಯ
- ಜೋದರ ಮಾಯಣ್ಣ
- ದಸರಯ್ಯ
- ವೈದ್ಯ ಸಂಗಣ್ಣ
- ವೀರ ಗೊಲ್ಲಾಳ

ಅಧ್ಯಾಯ : ಐದು

ವೃತ್ತಿನಿರತ ಪುರುಷ ವಚನಕಾರರು ಮತ್ತು ಅವರ ವೃತ್ತಿಗಳ ವೈಶಿಷ್ಟ್ಯಗಳು

ಪೀಠಿಕೆ

ವಚನಕಾರರು ತಮ್ಮ ವೃತ್ತಿ ಮೂಲದ ಪರಿಕರಗಳನ್ನು ತನ್ನ ವಚನಗಳ ರಚನೆಯಲ್ಲಿ ಬಳಸಿಕೊಂಡು ಆಧ್ಯಾತ್ಮಿಕ ಸಾಧನೆಯ ಮಾರ್ಗವನ್ನು ವಿವರಿಸುತ್ತಾರೆ. ಕೇವಲ ಆಧ್ಯಾತ್ಮಿಕ ಸಾಧನೆಯ ವಿಷಯವನ್ನಷ್ಟೇ ಅಲ್ಲದೆ, ಸಮಾಜದಲ್ಲಿ ನೆಲೆಸಿದ್ದ ಜಾತಿ ತಾರತಮ್ಯದ ಕುರಿತು ಚಿಂತನೆಗೆ ತೊಡಗುತ್ತಾನೆ. ಕಾಯಕ ತತ್ವದ ಪ್ರತಿಪಾದನೆ ಇವರ ವಚನಗಳಲ್ಲಿ ಕಂಡುಬರುತ್ತದೆ. ಅನೇಕ ವಚನಗಳಲ್ಲಿ ಸಮಾಜವನ್ನು ವಿಡಂಬನೆ ಮಾಡುತ್ತ, ವೃತ್ತಿ ಗೌರವವನ್ನು ಸ್ಥಾಪಿಸುವ ಪ್ರಯತ್ನವನ್ನು ಗುರುತಿಸಬಹುದು. ಸಮಾಜದ ಕೆಳಸ್ಥರದಿಂದ ಬಂದ ಇವರದು ನೇರ, ನಿಷ್ಠುರ ನುಡಿ. ಡಂಬಾಚಾರ, ಆಡಂಬರದ ಜೀವನ್ನು ಕಟುವಾಗಿ ಕಂಡಿಸುತ್ತಾನೆ. ತನ್ನ ವೃತ್ತಿಗೂ, ಆಧ್ಯಾತ್ಮಿಕ ಸಾಧನೆಗೂ ಬೇರೆ ಬೇರೆ ಮಾರ್ಗವಿದೆ ಎಂದು ಒಪ್ಪಿಕೊಳ್ಳದ ಸ್ವಭಾವವು ಇವರಲ್ಲಿ ಕಾಣುತ್ತದೆ. ಆದ್ದರಿಂದ ವೃತ್ತಿನಿರತ ವಚನಕಾರರು ವೃತ್ತಿಯ ಮೂಲಕವೇ ಗುರುತಿಸಿಕೊಂಡಿದ್ದಾರೆ.

ಅಂಬಿಗರ ಚೌಡಯ್ಯ

ಕೆಳವರ್ಗದ ವಚನಕಾರರಲ್ಲಿ ಅಂಬಿಗರ ಚೌಡಯ್ಯ ಒಬ್ಬ. ಈತನದು ಅಂಬಿಗರ ವೃತ್ತಿಯಾಗಿದ್ದು ದೋಣಿ ನಡೆಸುವುದು ಈತನ ಜೀವನ. ತನ್ನ ವೃತ್ತಿ ಮೂಲದ ಪರಿಕರಗಳನ್ನು ತನ್ನ ವಚನಗಳ ರಚನೆಯಲ್ಲಿ ಬಳಸಿಕೊಂಡು ಆಧ್ಯಾತ್ಮಿಕ ಸಾಧನೆಯ ಮಾರ್ಗವನ್ನು ವಿವರಿಸುತ್ತಾನೆ. ಇತರ ವಚನಕಾರರಂತೆ ಯಾವುದೋ ದೈವದ ಹೆಸರನ್ನು ಅಂಕಿತವಾಗಿ ಬಳಸದೆ ತನ್ನ ವೃತ್ತಿ, ಕುಲವಾದ ಅಂಬಿಗ ಎಂಬುದನ್ನು ಮತ್ತು ತನ್ನ ಹೆಸರನ್ನು ಅಂಕಿತವಾಗಿಯೇ ಬಳಸುತ್ತಾನೆ. ಆದ್ದರಿಂದ ಚೌಡಯ್ಯ ವಿಭಿನ್ನ ಮತ್ತು ವಿಶಿಷ್ಟ ಸ್ವಭಾವಕ್ಕೆ ಹೆಸರಾಗಿದ್ದಾನೆ.

ವಚನಕಾರರಲ್ಲಿ ಕೆಲವರು ಮಾಡಿರುವ ವಚನ ರಚನೆಗಳು, ವೃತ್ತಿಯ ಪರಿಭಾಷೆಗಳನ್ನು ಬಳಸಿಕೊಂಡು ಕಾಯಕದ ವಿಧಿ-ವಿಧಾನಗಳನ್ನು ವಿವರಿಸುತ್ತ, ಆಧಾತ್ಮ ಚಿಂತನೆಯ ಭಾವವನ್ನು

ವ್ಯಕ್ತಪಡಿಸುತ್ತಿದ್ದರು. ಹೀಗಾಗಿ ಅವರ ಅಭಿವ್ಯಕ್ತಿ ಜನಪರವಾದುದಾಗಿತ್ತು. ಸಮಾಜವನ್ನು ಬುಡದಿಂದ ಮುಟ್ಟುವ ಪ್ರಯತ್ನವಾಗಿತ್ತು. ಇಂತಹ ಪರಂಪರೆಯ ಪಾಲುದಾರಿಕೆಯನ್ನು ಚೌಡಯ್ಯನು ಕೂಡ ಹೊತ್ತುಕೊಂಡಿದ್ದಾನೆ. ದೋಣಿ ನಡೆಸುವ ತನ್ನ ಕುಲಕಸುಬನ್ನು ಮಾಡುತ್ತ, ಬಸವಣ್ಣನ ನೇತೃತ್ವದ ಅಂದೋಲನದ ಅನುಯಾಯಿಯಾಗಿದ್ದನು. ಆದರೂ ಈತನ ವಚನಗಳು ಅಭಿವ್ಯಕ್ತಿಗೊಂಡಿರುವುದು ನೇರನುಡಿ, ನಿಷ್ಠುರತನ, ಕಾಯಕ ನಿಷ್ಠೆ, ಪ್ರಾಮಾಣಿಕತೆ. ಹೀಗೆ ಇನ್ನೂ ಈತನ ವಚನಗಳು ಸಿದ್ಧಾಂತ ರೂಪದ ಹೇಳಿಕೆಯಾಗದೇ ಸಿಟ್ಟು, ಆಕ್ರೋಶಭರಿತ ಬಂಡಾಯದ ಧ್ವನಿಯಾಗಿದೆ. ಖಂಡನೆ, ತಿರಸ್ಕಾರ, ಸಹಜವಾಗಿ ಮೂಡಿಬಂದಿವೆ. ವೃತ್ತಿಗೆ ಸಂಬಂಧಿಸಿದಂತೆ ಅಭಿಮಾನ ಸುಮ್ಮನೆ ಹೊರಗಿನಿಂದ ಬಂದಿದ್ದಲ್ಲ. ವೃತ್ತಿಯ ಶ್ರೇಷ್ಠತೆಯನ್ನು ಮೆರೆಯುವುದರ ಜತೆಗೆ ಸಮಾಜದಲ್ಲಿದ್ದ ಯಾವ ವೃತ್ತಿಯು ಕೆಳಮಟ್ಟದ್ದಲ್ಲ ಎಂಬ ಆಶಯಕ್ಕೆ ಬದ್ಧನಾಗಿಯೂ, ತನ್ನ ವೃತ್ತಿಯ ಬಗೆಗೆ ತಾನು ತಳೆದಿದ್ದ ಗೌರವ, ನಿಲುವು ಆತನ ಅಭಿಮಾನವನ್ನು ಇಮ್ಮಡಿಗೊಳಿಸಿರುವುದನ್ನು ನಾವು ಗಮನಿಸಬಹುದು.

ಮಾದಾರ ಧೂಳಯ್ಯ

'ಕಾಮಧೂಮ ಧೂಳೇಶ್ವರ' ಎಂಬ ಅಂಕಿತದಲ್ಲಿ ೧೦೬ ವಚನಗಳು ಲಭ್ಯವಿದ್ದು, ಅವು ಮಾದಾರ ಧೂಳಯ್ಯನ ರಚನೆಗಳಾಗಿವೆ. ಅಲ್ಲಮಪ್ರಭು, ಬಸವಣ್ಣ, ಸಿದ್ದರಾಮ, ಮಡಿವಾಳ ಮಾಚಯ್ಯನ ಉಲ್ಲೇಖಗಳು ಧೂಳಯ್ಯನ ವಚನಗಳಲ್ಲಿ ಕಂಡು ಬರುವುದರಿಂದ ಈತ ಬಸವ ಸಮಕಾಲೀನ ವಚನಕಾರನಾಗಿದ್ದಾನೆಂದು ಗುರುತಿಸಲಾಗಿದೆ.

ಧೂಳಯ್ಯ ಪಾದರಕ್ಷೆ ಹೊಲಿಯುವ ವೃತ್ತಿಯಲ್ಲಿ ನಿತರನಾಗಿದ್ದನು. ಈತನು ಕೆಳವರ್ಗದ ಅಸ್ಪೃಶ್ಯ ಜಾತಿಯವನು. ಕಾಯಕನಿಷ್ಠೆ ಈತನ ವಚನಗಳ ಅಭಿವ್ಯಕ್ತಿಯ ವಿಶೇಷತೆಯಲ್ಲೊಂದು. ಇದಕ್ಕೆ ಈತನ ವಚನವನ್ನೆ ನಿದರ್ಶನವಾಗಿ ನೋಡಬಹುದು. ಧೂಳಯ್ಯ ತನ್ನ ವೃತ್ತಿಯನ್ನು ಮಾಡುತ್ತಿದ್ದಾಗ, ಅಂದರೆ ಚಪ್ಪಲಿಯನ್ನು ಹೊಲಿಯುವಾಗ ಪರಮೇಶ್ವರನೇ ಅಟ್ಟೆ ಚುಚ್ಚುವ ಉಳಿಯ ಮೊನೆಯಲ್ಲಿ ಪ್ರತ್ಯಕ್ಷನಾದುದಕಂಡು ಕಾಯಕಕ್ಕೆ ಬಂಗ ತರಬೇಡ, ಇಲ್ಲೇಕೆ ಬಂದೆ? ಎಂದು ಪ್ರಶ್ನಿಸುತ್ತಾನೆ. ನಿನ್ನ ಭಕ್ತರ ಮುಕ್ತಿಯ ಮಾಡು ಎಂದು ವಿಡಂಬಿಸುತ್ತಾನೆ. ತನ್ನ ತನವನ್ನು ಅರಿತು, ತನ್ನ ವೃತ್ತಿಯಲ್ಲಿ ಶ್ರಮದ ದೇವರನ್ನು ಕಾಣುವುದನ್ನು ನೋಡಬಹುದು. ಇಲ್ಲಿ ಮುಖ್ಯವಾಗಿ ಆತನ ಶ್ರಮನಿಷ್ಠೆಯನ್ನು ಗಮನಿಸಬಹುದು. ಹಲವಾರು ವಚನಕಾರರ ಮೇಲೆ ಇದ್ದಂತೆ ಧೂಳಯ್ಯನ ಮೇಲೂ ಕಥೆ ಹುಟ್ಟಿಕೊಂಡಿದೆ. ಧೂಳಯ್ಯನ ಬಚ್ಚಲ ಕೆಸರ ನೀರಿನಲ್ಲಿ ಮಿಂದು ಬ್ರಾಹ್ಮಣನೊಬ್ಬ ತನ್ನ ರೋಗವನ್ನು ವಾಸಿ ಮಾಡಿಕೊಂಡನೆಂಬ ಕತೆ ಇದೆ. ಇಂತಹ ಕಥೆಗಳು ನಿರೂಪಿತಗೊಂಡಿರುವುದು ಮಹತ್ವದ ಸಂಗತಿಯಾಗಿದೆ. ಯಾಕೆಂದರೆ ಅಸ್ಪೃಶ್ಯತೆ, ಅಸಮಾನತೆ, ಮೇಲು-ಕೀಳು, ಕೆಳದರ್ಜೆಯ ಕೆಲಸ, ಮೇಲ್ದರ್ಜೆಯ ಕೆಲಸ ಎಂದು ವೃತ್ತಿಗೆ ಮತ್ತು ವೃತ್ತಿ ಮಾಡುತ್ತಿದ್ದ ಜನರ ಮೇಲೆ ನಿರ್ಲಕ್ಷ, ಕೀಳುಭಾವನೆ ಹೀಗೆ ವಿವಿಧ ರೀತಿಯಲ್ಲಿ ಸೀಮಿತಗೊಂಡಿದ್ದ ಕಾಲಘಟ್ಟದಲ್ಲಿ ಇಂತಹ ಕತೆಗಳು ಸಮಾನತೆಯ ಭಾವವನ್ನು, ಮಡಿ-

ಮೈಲಿಗೆಗಳ ತಾರತಮ್ಯಗಳನ್ನು ನಿವಾರಿಸುತ್ತವೆ. ಜೊತೆಗೆ ಉಚ್ಚ-ನೀಚ ಎಂಬ ತಾರತಮ್ಯ ಕಳೆದು ಸಮನ್ವಯ ಜೀವನದ ಕಲ್ಪನೆ ಮೂಡಿಸುತ್ತವೆ.

ವನಚನಕಾರರ ಮೂಲದೋರಣೆ, ಧ್ಯೇಯೋದ್ದೇಶವೇ ಅದೇ ಹಾಗಿರುವುದರಿಂದ ಹಿಂದುಳಿದ ಜನ ಸಮುದಾಯಕ್ಕೆ ಆಶಾಕಿರಣ ಮೂಡತ್ತದೆ. ವೃತ್ತಿಯನ್ನು ಮಾಡುತ್ತ ಸಮಾಜದ ಏಳಿಗೆಗಾಗಿ ತಮ್ಮನ್ನೇ ಅರ್ಪಿಸಿಕೊಂಡಿರುವಂತರಿಗೆ ಗೌರವ ಸಿಕ್ಕಂತಾಗುತ್ತದೆ. ಶ್ರಮಕ್ಕೆ ತಕ್ಕ ಗೌರವವು ಪ್ರಾಪ್ತವಾಗುತ್ತದೆ. ಅಲ್ಲದೆ. ಯಾವುದೇ ವೃತ್ತಿಯೂ ಸಮಾಜದ ಅಂಗವಾಗಿ ಕಾರ್ಯನಿರ್ವಹಿಸುತ್ತದೆ. ಮತ್ತು ಅದು ಅವಶ್ಯವು ಆಗಿರುತ್ತದೆ. ಇಂತಹ ವೃತ್ತಿಗಳಿಗೆ ಅದರದೇ ಆದ ಗೌರವ ಇರುತ್ತದೆ. ಹಾಗಾಗಿ ಮೂಲ ವೃತ್ತಿಗಳನ್ನೇ ಮಾಡುತ್ತ ಅದರ ಮೂಲಕವೇ ನಿಷ್ಠೆ, ಪ್ರಾಮಾಣಿಕತೆಯನ್ನು ಬಿಂಬಿಸುವ, ಬೆಳೆಸಿಕೊಳ್ಳುವ, ತಿಳಿಸಿ ಹೇಳುವ ಪ್ರಯತ್ನ ನಡೆದಿರುವುದನ್ನು ಕಾಣುತ್ತೇವೆ.

ಚರ್ಮವನ್ನು ಹದಮಾಡಿ ಪಾದರಕ್ಷೆಯನ್ನು ಹೊಲಿಯುವ ಕಾಯಕದಲ್ಲಿ ನಿರತನಾದ ಧೂಳಯ್ಯ ತನ್ನ ವಚನಗಳನ್ನು ವೃತ್ತಿಯಲ್ಲಿ ಬಳಸುವ ಉಪಕರಣಗಳನ್ನು, ವೃತ್ತಿ ಪರಿಭಾಷೆಯನ್ನು ಬಳಸಿಕೊಂಡು ವಚನಗಳನ್ನು ಕಟ್ಟಿರುವುದು ಗಮನ ಸೆಳೆಯುವಂತಹದ್ದು, ಕಾಯಕದಿಂದಲೇ ಶಿವನನ್ನು ಕಂಡ ಈತನು ಜ್ಞಾನ ಮೋಕ್ಷಗಳ ಸ್ವರೂಪ. ವೃತ್ತಿಯ ಸ್ಥಾನ, ನಿಷ್ಠಭಕ್ತಿ, ನಂಬಿರುವ ಸಿದ್ಧಾಂತದ ಪ್ರಸಾರ ತನ್ನತನದ ಹುಡುಕಾಟ, ತನ್ನ ನಿಲುವುಗಳನ್ನು ತನ್ನ ವೃತ್ತಿಯ ಆಧಾರದಲ್ಲೇ ವಿವರಿಸುವುದನ್ನು ಈತನ ವಚನಗಳಲ್ಲಿ ಕಾಣಬಹುದು. ಇನ್ನೂ ಕೆಲವು ವಚನಗಳು ಬೆಡಗಿನ ಶೈಲಿಯನ್ನು ಒಳಗೊಂಡಿದ್ದು, ಆಧ್ಯಾತ್ಮಿಕ ಸಾಧನೆಯ ಕುರಹುಗಳಾಗಿ ಕಾಣುತ್ತವೆ.

ಜೇಡರ ದಾಸಿಮಯ್ಯ -

ಆದ್ಯ ವಚನಕಾರನೆಂದು ಜೇಡರ ದಾಸಿಮಯ್ಯನನ್ನು ಗುರುತಿಸಲಾಗಿದೆ. ಗುಲ್ಬರ್ಗ ಜಿಲ್ಲೆಯ ಮುದನೂರು ಈತನದು. ದುಗ್ಗಳೆ ಈತನ ಹೆಂಡತಿ. ಬಟ್ಟೆ ನೇಯುವ ವೃತ್ತಿಯಾದ ನೇಕಾರಿಕೆ ಈತನದು. ಮುದನೂರಿನಲ್ಲಿ ರಾಮನಾಥನ ದೇವಾಲಯವಿದ್ದು, ಈತ ರಾಮನಾಥನ ಭಕ್ತನಾಗಿದ್ದಾನೆ. ದಾಸಿಮಯ್ಯನ ವಚನಾಂಕಿತವು ರಾಮನಾಥ ಎಂದೇ ಇದೆ.

ಬಟ್ಟೆ ನೇಯುವ ವೃತ್ತಿಯನ್ನು ಮಾಡುತ್ತ, ಆಧ್ಯಾತ್ಮಿಕ ಒಲವಿನಲ್ಲಿಯೇ ಜೀವನ ಸಾಗಿಸುವಂತಹ ಬದುಕು ಈತನದಾಗಿತ್ತು. ಜೊತೆಗೆ ಸಂಸಾರಿಕ ಜೀವನವನ್ನು ನಿರಾಕರಿಸದೇ ಸಂಸಾರದಲ್ಲಿದ್ದುಕೊಂಡೇ ಸಾಧನೆ ಮಾಡುವುದು ಶರಣರ ವಿಶೇಷಗುಣಗಳಲ್ಲೊಂದು. ಇದಕ್ಕೆ 'ಸತಿ ಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ' ಎನ್ನುವಂತಹದ್ದು ಸ್ಪಷ್ಟಪಡಿಸುತ್ತದೆ.

ದಾಸಿಮಯ್ಯ ನೇಯ್ಗೆ ವೃತ್ತಿಯನ್ನು ಅನುಸರಿಸಿಕೊಂಡು, ಬಂದಿದ್ದರಲ್ಲೇ ಜಂಗಮ ದಾಸೋಹ ಮಾಡುವ ಪ್ರವೃತ್ತಿ ಹೊಂದಿದ್ದನು. ಅದಕ್ಕೆ ಸಂಬಂಧಿಸಿದಂತೆ ಕತೆಯೂ ಹೀಗಿದೆ. ತಾನು ನೇಯ್ದಿದ್ದ ವಸ್ತ್ರವನ್ನು ಮಾರಲು ಹೋದಾಗ ಅಲ್ಲಿ ಒಬ್ಬ ಜಂಗಮ ಚಳಿಗೆ ನಡುಗುತ್ತ ಕುಂತಿದ್ದ. ಅದನ್ನು ಕಂಡ ದಾಸಿಮಯ್ಯ ಅವನಿಗೆ ತಾನು ತಂದಿದ್ದ ವಸ್ತ್ರವನ್ನು ಕೊಟ್ಟುಬಿಡುತ್ತಾನೆ. ವಸ್ತ್ರವನ್ನು

ಪಡೆದ ವ್ಯಕ್ತಿ ಈತನ ಎದುರಿನಲ್ಲೇ ಅದನ್ನು ಹರಿದು ಚಿಂದಿ ಚಿಂದಿ ಮಾಡಿ ಬಿಡುತ್ತಾನೆ. ಸ್ವಲ್ಪವು ವಿಚಲಿತನಾಗದ ದಾಸಿಮಯ್ಯನನ್ನು ಕಂಡು ಜಂಗಮ ವೇಷವನ್ನು ತೊರೆದು ಶಿವನೆ ಪ್ರತ್ಯಕ್ಷನಾಗುತ್ತಾನೆ. ಈತನಿಗೆ 'ತವನಿದಿ'(ಕೇಳಿದ್ದನ್ನು ಕೊಡುವಂತಹದ್ದು)ಯನ್ನು ಕೊಡುತ್ತಾನೆ. ಇದರಿಂದ ಜಂಗಮ ಸೇವೆ ಮಾಡುತ್ತ ದಾನ ಧರ್ಮಾದಿಗಳನ್ನು ಮಾಡುತ್ತಿರುತ್ತಾನೆ. ಒಮ್ಮೆ ಶ್ರೀಮಂತಿಕೆಯ ಅಹಂಕಾರ ಬರುತ್ತದೆ. ಶಂಕರ ದಾಸಿಮಯ್ಯ ಬಂದು ತವನಿದಿಯನ್ನು ಹೊಡೆದು ಹಾಕಿ ದಾಸಿಮಯ್ಯನ ಅಹಂಕಾರವನ್ನು ತೊಲಗಿಸುತ್ತಾನೆ. ಇದರಿಂದ ಶರಣನಾಗುತ್ತಾನೆ ಎಂಬ ಕಥೆಯಿದೆ. ಈ ಕಥೆಯ ಮೂಲಕ ಶಿವನೆ ಕೊಟ್ಟಿದ್ದರೂ ಅದು ಅಹಂಕಾರಕ್ಕೆ ಮೂಲ. ಕಾಯಕದಿಂದ ಬಂದುದೆ ನಿಜವಾದದ್ದು. ಶಿವನಿಗೆ, ಜಂಗಮಕ್ಕೂ ಅರ್ಪಿತವಾಗುವಂತಹದ್ದು. ತನ್ನತನದ ಸ್ವಂತಿಕೆ ಉಳ್ಳಂತಹದ್ದು, ವೃತ್ತಿ ಪ್ರಧಾನವಾದುದಾಗಿದೆ ಎಂಬುದನ್ನು ಗುರುತಿಸಲು ಸಾಧ್ಯವಿದೆ.

ದಾಸಿಮಯ್ಯನ ವಚನಗಳಲ್ಲಿ ತ್ರಿಪದಿಗಳೂ, ಚೌಪದಿಗಳೂ ಬರುತ್ತವೆ. ಲಯವನ್ನೊಳಗೊಂಡ ವಚನಗಳಂತೆ, ಲಯವಿಲ್ಲದ ವಚನಗಳೂ ಬರುತ್ತವೆ. 'ವಚನ'ಗಳೆಂದೇ ಹಸ್ತಪ್ರತಿಗಳಲ್ಲಿ ಉಲ್ಲೇಖ ವಿರುವುದನ್ನು ಗುರುತಿಸಲಾಗಿದೆ. ಈಗಾಗಿ ಅವನು ವಚನ ಪ್ರಕಾರವನ್ನು ರೂಪಿಸಿದನೇನೋ? ಅಥವಾ ಅಲ್ಲಲ್ಲಿ ಬಳಕೆಗೊಂಡು ತೀರ ನಗಣ್ಯವೆಂದು ಭಾವಿಸಲಾಗಿದ್ದ ಪ್ರಕಾರವನ್ನು ಬಳಸಿಕೊಂಡು ಅದಕ್ಕೆ ಹೆಚ್ಚಿನ ಮಹತ್ವ ದೊರಕಿಸಿಕೊಟ್ಟನೆಂದೇ ಕಾಣುತ್ತದೆ. ನೇಕಾರಿಕೆ ವೃತ್ತಿಯಲ್ಲಿ ಬಳಸುವ ಪರಿಕರಗಳನ್ನು ತನ್ನ ವಚನದಲ್ಲಿ ಬಳಸಿಕೊಂಡು, ಅದರ ಮೂಲಕ ತೀವ್ರವಾದ ಅನುಭವವನ್ನು ಹೇಳುವುದು ವಿಶೇಷ ರೀತಿಯದ್ದೇ ಆಗಿದೆ.

ಮಾದಾರ ಚನ್ನಯ್ಯ -

ಕಲ್ಯಾಣದಲ್ಲಿ ಪಾರದಕ್ಷೆ ಹೊಲಿಯುವ ವೃತ್ತಿಯನ್ನು ಅವಲಂಬಿಸಿರುವ, ಕೆಳವರ್ಗದ ಮೂಲದಿಂದ ಬಂದು ವಚನಗಳನ್ನು ರಚಿಸಿರುವ ಮಾದಾರ ಚನ್ನಯ್ಯ ಅನುಭಾವಿ ಶ್ರೇಷ್ಠನೆನಿಸಿ ಕೊಂಡಿದ್ದಾನೆ. ಈತನ ಕುರಿತು ಬಸವಣ್ಣನಿಂದ ಹಿಡಿದು ಅನೇಕ ವಚನಕಾರರ ವಚನಗಳಲ್ಲಿ ಈತನ ಬಗ್ಗೆ ಉಲ್ಲೇಖ ಬರುತ್ತದೆ. ಪಾದರಕ್ಷೆ ಹೊಲಿಯುವುದು ಈತನ ಮೂಲ ಕುಲ ವೃತ್ತಿಯಾಗಿದ್ದು, ಅದನ್ನೆ ಚನ್ನಯ್ಯ ಕಾಲ್ಯಾಣಕ್ಕೆ ಬಂದು ಅನುಸರಿಸಿದನು ಎಂದು ತಿಳಿಯಲಾಗಿದೆ. ಈತನು ಮೂಲತಃ ಚೋಳ ದೇಶದವನಾಗಿದ್ದು, ಅಲ್ಲಿ ಕರಿಕಾಲ ಚೋಳನಲ್ಲಿ ಕುದುರೆಗಳಿಗೆ ಹುಲ್ಲು ಹಾಕುವ ಕಾಯಕವನ್ನು ಮಾಡುತ್ತಿದ್ದನೆಂದು ಹಲವಾರು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಇದಕ್ಕೆ ಕೆಲವು ವಚನಕಾರರ ವಚನಗಳು ಬೆಂಬಲವಾಗಿ ನಿಲ್ಲುತ್ತವೆ. ಅಬ್ಬಲೂರು (ಕ್ರಿ.ಶ.೧೨೦೦) ಮತ್ತು ಕಲ್ಲೇದೇವರಪುರ ಕ್ರಿ.ಶ. ೧೨೬೯ ಶಾಸನಗಳಲ್ಲಿ "ಚನ್ನ" ಎಂಬುದು ಉಲ್ಲೇಖಿತಗೊಂಡಿದ್ದು, ಈ ಮಾದಾರ ಚನ್ನಯ್ಯನೇ ಎಂದು ಗುರುತಿಸಲಾಗಿದೆ. (ಸಂ.ವ.ಸಂ.೩) ಈತನ ವಚನಗಳಲ್ಲಿ ವೃತ್ತಿ ಪರಿಭಾಷೆಯ ಬಳಕೆ ಕಂಡು ಬರುತ್ತದೆ. ವೃತ್ತಿಗಳನ್ನು ಕೈಗೊಂಡ ಎಲ್ಲಾ ವಚನಕಾರರು ಅಥವಾ ಕುಲಮೂಲದ ವೃತ್ತಿಗಳನ್ನು ಮಾಡುತ್ತ, ಅನುಭಾವದಲ್ಲಿ ತೊಡಗಿಕೊಂಡಿದ್ದುದಲ್ಲದೆ. ಬಸವಣ್ಣನು ನಿರ್ಮಿಸಿದ ಕಲ್ಯಾಣದ ಅನುಭವ ಮಂಟಪಕ್ಕೆ ಬಂದು ಅನುಭಾವದಲ್ಲಿ ತೊಡಗಿಕೊಂಡು, ತಮ್ಮ ಕಾಯಕವನ್ನು ನಿಷ್ಠೆ, ಪ್ರಮಾಣಿಕತೆಯಿಂದ ಮಾಡಿಮ

ಬಂದಿದ್ದರಲ್ಲಿ ಜಂಗಮ ದಾಸೋಹ ಮಾಡುವ ಎಲ್ಲಾ ಕಾಯಕ ಜೀವಿಗಳು ತಾವು ಮಾಡುತ್ತಿದ್ದ ವೃತ್ತಿಯ ಪರಿಕರಗಳನ್ನು ಬಳಸಿಕೊಂಡು ತಾವು ಹೇಳಬೇಕಿರುವ ಅನುಭವವನ್ನು, ಆದರ್ಶವನ್ನು, ತತ್ವ, ಸಿದ್ಧಾಂತವನ್ನು ಹೇಳಿರುವುದು ವಿಶೇಷ. ಹೀಗೆ ಹೇಳುವ ವಚನಕಾರರು ಸಮಾಜದಲ್ಲಿ ವಿವಿಧ ಕುಲ ಮೂಲದ ವೃತ್ತಿಗಳನ್ನು ಅನುಸರಿಸಿರುವುದೇ ಹೆಚ್ಚು. ಅದರಲ್ಲೂ ಕೆಳವರ್ಗದ ವಚನಕಾರರು ತಮ್ಮ ವೃತ್ತಿಗಳನ್ನೇ ಅಭಿವ್ಯಕ್ತಿಯ ಮಾಧ್ಯಮವಾಗಿರಿಸಿಕೊಂಡಿದ್ದಾರೆ. ಇವರಲ್ಲಿ ಮಾದಾರ ಚನ್ನಯ್ಯನು ಒಬ್ಬ ವೃತ್ತಿ ಜೀವಿಯಾಗಿದ್ದಾನೆ.

ಶಿವಾನುಭಾವಿ, ವೀರ ಮಹೇಶ್ವರ ವ್ರತಾ, ಶಿವನಿಷ್ಠೆ, ಗುಪ್ತಭಕ್ತಿಯಲ್ಲಿಯೇ ಇದ್ದ ಚನ್ನಯ್ಯ 'ಕೈಯುಳಿ ಕತ್ತಿ ಅಡಿಗುಂಟಕ್ಕಡಿಯಾಗಬೇಡ ಅರಿ ನಿಜಾತ್ಮರಾಮ ರಾಮನ' ಎಂಬ ಅಂಕಿತದಲ್ಲಿ ವಚನಗಳನ್ನು ರಚಿಸಿದ್ದಾನೆ. ಈತನನ್ನು ಕುರಿತು ಹರಿಹರನು ರಗಳೆ ಬರೆದಿದ್ದಾನೆ. ಅನೇಕ ವಚನಕಾರರ ಹೆಸರಿನ ಹಿಂದೆ ಅವರ ವೃತ್ತಿಯ ವಿಶೇಷಣೆ ಇರುವುದರಿಂದಲೇ ಅವರ ವೃತ್ತಿಯನ್ನು, ಕುಲಮೂಲವನ್ನು ಕಂಡುಕೊಳ್ಳಬಹುದು. ಇನ್ನೂ ಕೆಲವು ವಚನಕಾರರ ವಚನಗಳ ಅಂಕಿತದಲ್ಲಿ ತಮ್ಮ ವೃತ್ತಿಯ ಗುರುತಿನ ಅಂಕಿತದಿಂದ ಗುರುತಿಸಬಹುದು.

ಚನ್ನಯ್ಯನ ಅಂಕಿತದಲ್ಲಿ 'ಕೈಯುಳಿ, ಕತ್ತಿ, ಅಡಿಗೂಂಟ' ಪದಗಳ ಬಳಕೆಯಿಂದಲ್ಲದೇ, ಆತನ ವೃತ್ತಿ ಮೂಲದ ಅಥವಾ ವೃತ್ತಿಯಲ್ಲಿ ಬಳಸಲಾಗುವ ಉಪಕರಣಗಳನ್ನು ವಚನಗಳ ಅಭಿವ್ಯಕ್ತಿಯಲ್ಲಿ ಬಳಸಿರುವುದರಿಂದ ಈತನ ವೃತ್ತಿಯನ್ನು ಗುರುತಿಸಬಹುದಾಗಿದೆ.

ಗುಪ್ತ ಭಕ್ತಿಯ ವೀರಮಹೇಶ್ವರ ನಿಷ್ಠನಾಗಿದ್ದ ಚೆನ್ನಯ್ಯ ಶಿವಭಕ್ತಿ ಸಂಪನ್ನತೆ ಶಿವನಿಗೆ ಮಾತ್ರ ಗೊತ್ತಿರಬೇಕು. ಎಂಬುದು ಚನ್ನಯ್ಯನ ಇಚ್ಛೆಯಾಗಿದ್ದಿತು. ಆದರೆ ಒಂದು ದಿನ ಶಿವನು ಕರಿಕಾಲ ಚೋಳನ ಮನೆಯ ಊಟ ಬಿಟ್ಟು ಚೆನ್ನಯ್ಯನೊಡನೆ ಅಂಬಲಿ ಸೇವಿಸುತ್ತಾನೆ. ಕರಿಕಾಲ ಚೋಳನು ಮಾದಾರ ಚನ್ನಯ್ಯನ ಶಿವಭಕ್ತಿಗೆ ಬೆರಗಾಗಿ, ಶಿವನೊಡನೆ ಅಂಬಲಿಯನ್ನುಂಡ ಚನ್ನಯ್ಯನ ಮನೆಗೆ ಹೋಗಿ ಅವನ ದರ್ಶನ ಮಾಡುತ್ತಾನೆ. ಇದರಿಂದ ತನ್ನ ಗುಪ್ತಭಕ್ತಿ ಬಯಲಾದುದಕ್ಕೆ ಬೇಸರಗೊಳ್ಳುತ್ತಾನೆ.

ಕುಲ ವೃತಿಯನ್ನು ಅನುಸರಿಸಿ, ಕಾಯಕದಲ್ಲಿ ಬಳಕೆಗೊಳ್ಳುವ ಉಪಕರಣಗಳನ್ನೇ ಬಳಸಿಕೊಂಡು ವಚನಗಳನ್ನು ಕಟ್ಟಿರುವುದು ಮಹತ್ವವಾದುದಾಗಿದೆ. ಇದರಿಂದ ಆತನ ವೃತ್ತಿ ನಿಷ್ಠತೆ, ಕಾಯಕ ಸಿದ್ಧಾಂತದ ಪರಿಪಾಲನೆ, ಅನುಭವ ವೇದ್ಯದ ಸಂಗತಿಗಳನ್ನು ಸಮಾಜಕ್ಕೆ ತಿಳಿಸುವುದು, ತನ್ನ ತನದ ಸಾಧನೆ, ಅರಿವಿನ ಹುಡುಕಾಟ, ಆಧ್ಯಾತ್ಮಿಕವಾಗಿ ಲೀನವಾಗಿ ಎತ್ತರದ ಸ್ಥಾನದ ಸಾಧನೆ, ಸಮಾಜದಲ್ಲಿ ಸ್ಥಾಪಿತಗೊಂಡಿದ್ದ ಮೂಢತೆಯನ್ನು ನಿರಾಕರಣೆ ಮಾಡುವಲ್ಲಿ ಶ್ರಮಿಸುತ್ತವೆ.

ಕಿಲಾರದ ಭೀಮಣ್ಣ

ಕಿಲಾರದ ಭೀಮಣ್ಣ, ದನಕಾಯುವ ವೃತ್ತಿಯವನು. ಈತನ ಬಗ್ಗೆ ಹೆಚ್ಚಿನ ಮಾಹಿತಿ ದೊರೆತಿಲ್ಲ. ಈತನ ಹತ್ತು ವಚನಗಳು ಲಭ್ಯವಿದ್ದು, ಅವುಗಳಲ್ಲಿ ಬೆಡಗಿನ ವಚನಗಳು ಇವೆ.

ಈತ ಕೇವಲ ದನ ಕಾಯುವುದಷ್ಟೇ ಅಲ್ಲದೆ. ಕ್ಷೀರಗಾರನು ಆಗಿದ್ದನೆಂದು ಆತನ ವಚನಗಳನ್ನು ನೋಡಿದಾಗ ತಿಳಿದುಬರುತ್ತದೆ.

ಈತನು ವ್ಯವಸಾಯಗಾರನಾಗಿದ್ದು, ಉಪಕಸುಬಾಗಿ ಹೈನುಗಾರಿಕೆಯನ್ನು ಮಾಡುತ್ತಿದ್ದನೇನೋ? ಎಂದು ಕಾಣುತ್ತದೆ ತನ್ನ ವೃತ್ತಿಯ ಪರಿಭಾಷೆಯಲ್ಲಿ ಅನೇಕ ವಚನಗಳನ್ನು ರಚಿಸಿದ್ದಾನೆ.

ನಾನಾ ವರ್ಣದ ಗೋವುಗಳೆಲ್ಲವೂ ಕೂಡಿ
ಒಂದೇ ಹೊಲದಲ್ಲಿ ಮೇದು,
ಆರು ಕೆರೆಯ ನೀರು ಕುಡಿದು,
ಒಂದೇ ದಾರಿಯಲ್ಲಿ ಬಂದು.
ಮೂರು ಕೊಟ್ಟಿಗೆಯ ಗೊತ್ತಿಂಗೊಳಗಾದುವು.
ಬಿಟ್ಟು ಕರೆಯಲಾಗಿ ಗೋವಿಂಗೆ ವರ್ಣ ಹಲವು,
ಹಾಲಿಗೆ ಏಕವರ್ಣ.
ಹಾಲ ತಂದು ಭಾಜನದಲ್ಲಿ ನೀಡಿ ಕಾಸುವಲ್ಲಿ
ಚಟ್ಟಿ ಹತ್ತದೆ, ಹಸುಕು ನಾರದೆ,
ಕೌರು ಏಳದೆ, ನೀರರಸ ತಪ್ಪಿ ಮದುರರಸ ತುಂಬಿ
ಕಾಸಿ ಉಣಬಲ್ಲಡೆ ಆತನೆ ಬೋಗಿ.
ಆತ ನಿರತಿಶಯಾನುಭಾವ ಶುದ್ಧಾತ್ಮನು,
ಕಾಲ ಕರ್ಮವಿರಹಿತ ತ್ರಿಪುರಾಂತಕ ಲಿಂಗ ತಾನೆ.

(ಸಂಕೀರ್ಣ ವಚನ ಸಂಪುಟ: ೨, ವಚನ ಸಂಖ್ಯೆ: ೭೩)

ಭೀಮಣ್ಣನ ವಚನಗಳಲ್ಲಿ, ಬಳಕೆಗೊಂಡಿರುವ ಗೋವುಗಳು, ಹೊಲ, ಮೇವು, ಕೊಟ್ಟಿಗೆ, ಹಾಲು, ತುಪ್ಪ ಮುಂತಾದ ಐನುಗಾರಿಕೆಯ ಪರಿಭಾಷೆಯ ಬಳಕೆಯ ವಚನದ ಮೂಲಕ ಈತನ ಕಾಯಕವನ್ನು ನಿರ್ಧರಿಸುವುದು ಕಷ್ಟವಾದರೂ ವಿದ್ವಾಂಸರು ಗುರುತಿಸಿರುವಂತೆ, ವ್ಯವಸಾಯಗಾರ ನಾಗಿದ್ದು, ಉಪಕಸುಬಾಗಿ ಕ್ಷೀರಗಾರನಾಗಿದ್ದಾನೆ. ಈತ ಗೋವುಗಳನ್ನು ಕಾಯುವ ರೂಪಕಗಳನ್ನು ಬಳಸಿ ವಚನಗಳನ್ನು ರಚಿಸಿದ್ದಾನೆ. ಕೆಲವು ಬೆಡಗಿನ ಶೈಲಿಯ ವಚನಗಳು ಆಧ್ಯಾತ್ಮಿಕ ನೆಲೆಯ ವಿವರಗಳನ್ನು ನೀಡುತ್ತವೆ.

ತುರುಗಾಯಿ ರಾಮಣ್ಣ

ವೃತ್ತಿಯ ಬಗೆಗೆ ಹೊಸ ಸಂಚಲನವನ್ನೆ ಮೂಡಿಸಿದ ವಚನಕಾರರ ಕಾಯಕ ಚಳುವಳಿ ವೃತ್ತಿಗೆ ವಿಶೇಷ ಸ್ಥಾನ–ಮಾನ, ಗೌರವವನ್ನು ದಕ್ಕಿಸಿಕೊಟ್ಟ ವಿಶಿಷ್ಟ ಚಿಂತನೆಯಾಗಿದೆ. ಕೆಲವು ವಚನಕಾರರು ಕುಲ ಮೂಲದ ವೃತ್ತಿಗಳನ್ನು ಮುಂದುವರೆಸಿದರೆ ಇನ್ನು ಕೆಲವರು ತಮ್ಮದೇ ಆದ ಹೊಸ ವೃತ್ತಿಯನ್ನು ಮಾಡಲಾರಂಭಿಸಿದರು. ಹೀಗೆ ವೃತ್ತಿಗಳನ್ನು ಮಾಡುತ್ತ ಬಂದ ಅನುಭವ ವನ್ನು, ಅರಿವಿನ ಹುಡುಕಾಟಕ್ಕೆ ತಿರುಗಿಸಿಕೊಂಡು ಆತ್ಮೋನ್ನತಿ ಸಾಧಿಸುವ, ಆಧ್ಯಾತ್ಮಿಕ ಸಾಧನೆ ಮಾಡುವ, ಅಂತರಂಗ–ಬಹಿರಂಗದಲ್ಲಿ ಏಕತೆಯನ್ನು ಕಂಡು ಕೊಳ್ಳುವ ಪ್ರಯತ್ನ ಮಾಡುತ್ತಾರೆ.

ಈ ದಿಸೆಯಲ್ಲಿ ಗೋವುಗಳನ್ನು ಕಾಯುವುದೇ ವೃತ್ತಿಯನ್ನಾಗಿ ಸ್ವೀಕರಿಸಿರುವ ರಾಮಣ್ಣ, ತುರುಗಾಯಿ ರಾಮಣ್ಣ ಎಂದೆ ಪರಿಚಿತನಾದ ವಚನಕಾರ. ಅನೇಕ ವಚನಕಾರರು ತಾವು ಮಾಡುತ್ತಿದ್ದ ವೃತ್ತಿಯ ಪರಿಭಾಷೆಯಲ್ಲಿಯೇ ತಮ್ಮ ಅನುಭವಗಳನ್ನು ರೂಪಕಗಳನ್ನಾಗಿ ಮಾಡಿಕೊಂಡು ವಚನಗಳನ್ನು ಅಭಿವ್ಯಕ್ತಿ ಮಾಡಿದ್ದಾರೆ. ಹಾಗೆಯೇ ತುರುಗಾಯಿ ರಾಮಣ್ಣನು ತಾನು ಕಂಡುಕೊಂಡದ್ದನ್ನು, ಅಥವಾ ತನ್ನ ತತ್ವವನ್ನು ಅಥವಾ ವಚನ ಚಳುವಳಿಯ ಆಶಯ, ಧೋರಣೆಯನ್ನು ತನ್ನ ವೃತ್ತಿಯ ಪರಿಭಾಷೆಯಲ್ಲಿ ವಿಶಿಷ್ಟವಾಗಿಯೇ ಹೇಳಿದ್ದಾನೆ. ಈತನ ವಚನಗಳಲ್ಲಿ ತನ್ನತನದ, ಅರಿವಿನ ನೆಲೆಯನ್ನು ಕಾಣಬಹುದು. ಜೊತೆಗೆ ವೃತ್ತಿ ಗೌರವವನ್ನು, ಶ್ರಮದ ಮಹತ್ವವನ್ನು ತಿಳಿಯಬಹುದಾಗಿದೆ. ಅಲ್ಲದೆ ತಾನು ಮಾಡುತ್ತಿದ್ದ ವೃತ್ತಿ ಕೆಳಮಟ್ಟದ್ದು ಎಂಬ ಸಣ್ಣ ಅಳುಕು ಈತನಲ್ಲಿ ಕಾಣಬರುವುದಿಲ್ಲ. ಅದೊಂದು ಪ್ರಧಾನವಾದ ವೃತ್ತಿ ಅಭಿಮಾನವಾಗಿಯೇ ಕಾಣುತ್ತದೆ.

"ಗೋಪತಿನಾಥ ವಿಶ್ವೇಶ್ವರಲಿಂಗ" ಎಂಬ ಅಂಕಿತದಲ್ಲಿ ಸುಮಾರು ನಲವತ್ತೈದು ವಚನಗಳನ್ನು ರಚಿಸಿದ್ದಾನೆ. ಈತನಿಗೆ ಗೋವುಗಳನ್ನು ಕಾಯುವುದು ಕೇವಲ ಒಂದು ವೃತ್ತಿ ಮಾತ್ರವಲ್ಲ ಅದರ ಮೂಲಕವೇ ತನ್ನ ಆತ್ಮೋನ್ನತಿ ಸಾಧಿಸುವ ಬಗೆ. ಆಧ್ಯಾತ್ಮಿಕ ಅನುಸಂದಾನದ ದಾರಿ ಮತ್ತು ಅದರ ಮೂಲಕವೇ ತನ್ನ ಅನನ್ಯತೆಯನ್ನು ಗುರುತಿಸುವಂತಹದ್ದು. ಆತನಿಗೆ ಈ ವೃತ್ತಿಯೇ ತೃಪ್ತಿತರುವಂತಹದ್ದು. ಹಾಗಾಗಿ ತುರುಗಾಹಿ ರಾಮಣ್ಣ ಶ್ರೇಷ್ಠ ಅನುಭಾವಿಗಳ ಸಾಲಿನಲ್ಲಿ ನಿಲ್ಲುತ್ತಾನೆ. ಗೋವುಗಳನ್ನು ಕರೆಯುವ ವಿಧಾನ, ಗೋವುಗಳನ್ನು ಹುಲಿ ಹಿಡಿಯವುದು. ಗೋವುಗಳ ದಶವರ್ಣ. ಅವುಗಳ ಸಂಜ್ಞೆ, ಗರ್ಜನೆ ತಾಪನೆ, ತೊಂಡುಹೋಗದಂತೆ ನೋಡಿಕೊಳ್ಳುವುದು. ಇವುಗಳ ಮೂಲಕ ಸಮಾಜಕ್ಕೆ ಏನನ್ನೋ ಹೇಳಲು ಹೊರಟಿರುವಂತೆ ಕಾಣುತ್ತದೆ. ಇನ್ನು ಕೆಲವು ಬೆಡಗಿನ ವಚನಗಳಾಗಿದ್ದು, ಅವುಗಳು ಈತನ ತಾತ್ವಿಕ ವಿವೇಚನೆಯ ಅರವುಗಳಾಗಿವೆ. ಮುಖ್ಯವಾಗಿ ವೃತ್ತಿ ಪರಿಭಾಷೆಯಲ್ಲಿಯೇ ಆಧ್ಯಾತ್ಮವನ್ನು ತಿಳಿಯಪಡಿಸುವ ಕಾಯಕವನ್ನು ಈತನ ವಚನಗಳು ನಿರ್ವಹಿಸುತ್ತವೆ.

ಮೇದಾರ ಕೇತಯ್ಯ .

ಕೇತಯ್ಯ ತನ್ನ ವೃತ್ತಿಯಿಂದ ಪಡೆದುಕೊಂಡ ಅನುಭವದ ಮೂಲಕವೇ ವಚನಗಳನ್ನು ಕಟ್ಟಿದ್ದಾನೆ. ಇಡೀ ವಚನಕಾರರು ಕಟ್ಟಿಕೊಂಡ ಪರಿಕಲ್ಪನೆಗಳನ್ನು ಪಾಲನೆ ಮಾಡುವ, ತಿಳಿಸುವ ಪ್ರಯತ್ನ ಮಾಡಿರುವುದನ್ನು ಈತನ ವಚನಗಳಲ್ಲಿ ಪ್ರಕಟಗೊಂಡಿರುವುದನ್ನು ನೋಡುತ್ತೇವೆ. ಕಾಯಕತತ್ವದ ಪರಿಕಲ್ಪನೆಯ ಅಡಿಯಲ್ಲಿಯೇ ಅಭಿವ್ಯಕ್ತಿಗೊಳ್ಳುವ ಈತನ ವಚನಗಳು ಬಿದಿರಿನ ವೃತ್ತಿಯ ಉಪಕರಣಗಳ ಮೂಲಕ ಇಡೀ ವಚನಕಾರರ ತತ್ವ, ಚಿಂತನೆಗಳನ್ನು ತಿಳಿಸುವ ಕೆಲಸ ಮಾಡುತ್ತವೆ. ತಾನು ಮಾಡುವ ಕಾಯಕ, ಅದರ ರೀತಿ-ನೀತಿಗಳನ್ನು, ಅದರ ವೈಶಿಷ್ಟ್ಯ, ಮಹತ್ವವನ್ನು ಹೇಳುವ ಮೂಲಕ ಇಡೀ ಸಮಾಜಕ್ಕೆ ಮನವರಿಕೆ ಮಾಡುವುದನ್ನು ನೋಡುತ್ತೇವೆ. ವೃತ್ತಿನಿರತರ ಮುಖ್ಯ ಧೋರಣೆಗಳು ವೃತ್ತಿ ಸಮಾನತೆ, ಶ್ರಮ ತತ್ವ, ದಾಸೋಹ ಗುಣ

ಮುಂತಾದವುಗಳು ಕೇತಯ್ಯನ ವಚನಗಳಲ್ಲಿ ಇರುವುದನ್ನು ನೋಡುತ್ತೇವೆ. ಈತನ ಅನೇಕ ವಚನಗಳಲ್ಲಿ ಅದುವರೆಗೂ ಶೋಷಣೆಗೆ ಮಾಡುತ್ತಿದ್ದ ಪರಂಪರೆಯನ್ನು ಟೀಕಿಸುವ, ಖಂಡಿಸುವ ನಿಷ್ಠುರತೆ ಇರುವುದನ್ನು ನೋಡುತ್ತೇವೆ. ವೀರಶೈವ ನಿಷ್ಠೆ, ಏಕದೇವೋಪಾಸನೆ, ಗುರು, ಲಿಂಗ, ಜಂಗಮ ಭಕ್ತಿ, ನಡೆ-ನುಡಿಯಲ್ಲಿ ಏಕತೆಯನ್ನು ತಿಳಿಸುವ, ಪಾಲನೆ ಮಾಡುವ ವ್ಯಕ್ತಿತ್ವವಾಗಿ ಕೇತಯ್ಯ ನಿಲ್ಲುತ್ತಾನೆ.

ಗವರೇಶ್ವರ ಎಂಬ ಅಂಕಿತದಲ್ಲಿ ವಚನಗಳನ್ನು ರಚಿಸಿದ್ದು. ಅವುಗಳು ಶಿವಭಕ್ತನ ಅರಿವಿನ ಆಚರಣೆ, ಕಾಯಕ ನಿಷ್ಠೆ, ಶಿವಾನುಭವ ಮುಂತಾದ ಚಿಂತನೆಗಳನ್ನು ಅಭಿವ್ಯಕ್ತಿಸಿರುವುದನ್ನು ನೋಡುತ್ತೇವೆ.

ಆಯ್ದಕ್ಕಿ ಮಾರಯ್ಯ

ಮಾರಯ್ಯ ಮತ್ತು ಲಕ್ಕಮ್ಮ ದಂಪತಿಗಳು ಕಲ್ಯಾಣದ ವಚನಕಾರರ ಸಮೂಹವನ್ನು ಸೇರಿಕೊಂಡು ವಚನ ರಚನೆ ಮಾಡಿದವರಾಗಿದ್ದಾರೆ. ವಚನಕಾರರ ಮುಖ್ಯ ಪ್ರಣಾಳಿಕೆಯಾದ 'ಕಾಯಕತತ್ವ' ವನ್ನು ಪ್ರಾಮಾಣಿಕತೆಯಿಂದ ಅನುಸರಿಸಿದವರಾಗಿದ್ದಾರೆ. ಕಲ್ಯಾಣದ ಮಹಾಮನೆಗೆ ಬಂದು ಅನುಭಾವದಲ್ಲಿ ತೊಡಗಿದ ಎಲ್ಲಾ ವಚನಕಾರರು ಒಂದಲ್ಲ ಒಂದು ವೃತ್ತಿಯನ್ನು ಅನುಸರಿಸಿ ದವರೇ ಆಗಿದ್ದಾರೆ. ಕೆಲವರು ತಮ್ಮ ಕುಲ ವೃತ್ತಿಯನ್ನು ಮುಂದುವರೆಸಿಕೊಂಡು ಬಂದರೇ ಇನ್ನು ಕೆಲವರು ತಮಗೆ ಸಾಧ್ಯವಾಗುವ ವೃತ್ತಿಯನ್ನು ಹಿಡಿದು ಜೀವನ ಸಾಗಿಸಿದವರಾಗಿದ್ದಾರೆ.

ಮಾರಯ್ಯ ಕೈಗೊಂಡಿದ್ದ ವೃತ್ತಿ ಬಿದ್ದಿದ್ದ ಅಕ್ಕಿಯನ್ನು ಆರಿಸಿಕೊಂಡು ತಂದು ಜೀವನ ಮಾಡುವುದು ಮತ್ತು ದಾಸೋಹ ಮಾಡುವುದು. ಬಹುಶಃ ಬಡತನದ ಜೀವನವಿದ್ದರೂ, ಆಸೆಯನ್ನು ಅರಿದುಕೊಂಡು ಜೀವನ ಮಾಡುವುದು ಇವರ ಪ್ರಮಾಣಿಕತೆಯ ಸಂಕೇತವಾಗಿದೆ. ಇದಕ್ಕೆ ಮಾರಯ್ಯನ ಹೆಂಡತಿ ಲಕ್ಕಮ್ಮನ 'ಆಸೆಯೆಂಬುದು ಅರಸಂಗಲ್ಲದೆ ಶಿವ ಭಕ್ತರಿಗುಂಟೆ?' ಎಂಬ ವಚನವೇ ಆಧಾರವಾಗಿ ನಿಲ್ಲಬಲ್ಲುದು. ಮಾರಯ್ಯ ಬಸವಣ್ಣನ ಮಹಾಮನೆಯಲ್ಲಿ ಬಿದ್ದದ್ದ ಅಕ್ಕಿಯನ್ನು ಆಯ್ದು ತಂದು ಜಂಗಮ ದಾಸೋಹ ಮತ್ತು ಜೀವನ ಮಾಡುತ್ತಿದ್ದನೆಂದು ತಿಳಿಯಲಾಗಿದೆ. ಕೆಲವು ವಿದ್ವಾಂಸರ ಅಭಿಪ್ರಾಯದಂತೆ ಕಲ್ಯಾಣದ ಬೀದಿಯಲ್ಲಿ ಬಿದ್ದಿರುವ ಅಕ್ಕಿಯನ್ನು ಆರಿಸಿಕೊಂಡು ಬಂದು ಜೀವನ ಮಾಡುತ್ತಿದ್ದನಂತೆ. ಮಾರಯ್ಯ ಅಕ್ಕಿಯನ್ನು ಆಯ್ದು ತಂದು ಪ್ರತಿದಿನ ಜೀವನ ಮಾಡುವುದರ ಜೊತೆಗೆ ಸೇವಾ ವೃತ್ತಿಯನ್ನು ಕೈಗೊಂಡಿದ್ದನೆಂದು ಕಾಣುತ್ತದೆ. ಅದಕ್ಕೆ ಆತನ ಈ ವಚನ ಆಧಾರವಾಗಿ ನಿಲ್ಲುತ್ತದೆ.

> ಕಟ್ಟಿಗೆ ಕಸ ನೀರು ತಂದು,
> ಸತ್ಯರ ಮನೆಯಲ್ಲಿ ಒಕ್ಕುದನೀಸಿಕೊಂಡು,
> ತನ್ನ ಕೃತ್ಯ ತಪ್ಪದೆ ಒಕ್ಕುದ ಕೊಂಡು,
> ಸತ್ಯನಾಗಿಪ್ಪ ಭಕ್ತನಂಗವೆ ಅದು ಅಮರೇಶ್ವರ ಲಿಂಗದ ಸಂಗ

(ಸಂಕೀರ್ಣ ವಚನ ಸಂಪುಟ: ೧, ವಚನ ಸಂಖ್ಯೆ: ೧೧೭೦)

ಯಾವುದೇ ಕಾರಣಕ್ಕೂ, ಅಂದರೆ ಬಡತನವಿದ್ದರೂ ಪ್ರಾಮಾಣಿಕತೆಯನ್ನು ಬಿಡದೆ ನಡೆಸುವ ಬದುಕಿನ ಚಿತ್ರಣದ ಜೊತೆಗೆ ಆತ ಮಾಡುತ್ತಿದ್ದ ಸೇವಾ ವೃತ್ತಿಯ ಪರಿಚಯವು ದೊರೆಯುತ್ತದೆ. ಇನ್ನೊಂದು ವಚನದಲ್ಲಿ 'ತಪ್ಪಲಕ್ಕಿಯನಾಯ್ದು' ಎಂಬ ಪ್ರಯೋಗ ಬರುವುದರಿಂದ ಮಹಾಮನೆಯಲ್ಲಿ ಅಥವಾ ಶಿವಭಕ್ತರ(ಸತ್ಯರ) ಮನೆಯಲ್ಲಿ ಬಿದ್ದದ್ದ ಅಕ್ಕಿಯನ್ನು ಆಯ್ದು ತಂದು ಜೀವನ ಮಾಡುತ್ತಿರ ಬಹುದು. ಇದಕ್ಕೆ ಅನೇಕ ಶರಣರ ಮೇಲೆ ಇರುವ ಹಾಗೆ ಈತನ ಮೇಲು ಕಥೆಯಿದೆ. ಒಮ್ಮೆ ಬಸವಣ್ಣ ಹೆಚ್ಚು ಅಕ್ಕಿಯನ್ನು ಚೆಲ್ಲಿದ್ದ. ಮಾರಯ್ಯ ಆ ಎಲ್ಲಾ ಅಕ್ಕಿಯನ್ನು ಆರಿಸಿಕೊಂಡು ಮನೆಗೆ ಒಯ್ಯುತ್ತಾನೆ. ಇದನ್ನು ಕಂಡ ಲಕ್ಕಮ್ಮ ಗಂಡನಿಗೆ ಬುದ್ಧಿ ಹೇಳಿ 'ಅಸಂಗ್ರಹತತ್ವ' ವನ್ನು ವಿವರಿಸಿ ಅದನ್ನು ಹಿಂದಕ್ಕೆ ಕಳಿಸುತ್ತಾಳೆ. ಆಕೆಯ ಮಾತಿನಿಂದ ತನ್ನ ತಪ್ಪಿನ ಅರಿವಾಗಿ ಮಾರಯ್ಯ ಆ ಎಲ್ಲಾ ಅಕ್ಕಿಯನ್ನು ಹಿಂದಕ್ಕೆ ತಂದು ಹಾಕುತ್ತಾನೆ. ಈ ಕಥೆಯ ಮೂಲಕ ಮಾರಯ್ಯ, ಲಕ್ಕಮ್ಮರ ವೃತ್ತಿಯ ನಂಬಿಕೆ, ದುಡಿದಷ್ಟಕ್ಕೆ ಫಲ ಪಡೆಯಬೇಕೆಂಬ ಪ್ರಾಮಾಣಿಕತೆ, ಶ್ರಮದ ಗೌರವ, ಕಾಯಕನಿಷ್ಠೆಯನ್ನು ಅಸಂಗ್ರಹ ನೀತಿಯನ್ನು ಒಳಗೊಂಡ ಚಿಂತನೆಯಾಗಿದೆ. ಹಾಗಾಗಿ ವಚನಕಾರರ ಸಮೂಹದಲ್ಲಿಯೇ ಅನನ್ಯ ವ್ಯಕ್ತಿತ್ವ ಉಳ್ಳವರಾಗಿ ಕಾಣುತ್ತಾರೆ.

ಗಾಣದ ಕಣ್ಣಪ್ಪ -

ಕಣ್ಣಪ್ಪನ ವಚನಗಳಲ್ಲಿ ಮೀನುಗಾರಿಕೆ ವೃತ್ತಿಯ ಬಗ್ಗೆ ಮಾಹಿತಿ ಲಭಿಸುತ್ತದೆ. ಗಾಣದ ಕಣ್ಣಪ್ಪ ವೃತ್ತಿಯಲ್ಲಿ ಮೀನುಗಾರನಾಗಿದ್ದಾನೆ. ಕಲ್ಯಾಣದ ತ್ರಿಪುರಾಂತಕೇಶ್ವರನ ಕೆರೆಯಲ್ಲಿ ಮೀನು ಹಿಡಿಯುವುದು ಇವನ ನಿತ್ಯದ ಬದುಕು. ರೇಚವ್ವೆ ಈತನ ಪತ್ನಿ ಎಂದು ತಿಳಿದು ಬಂದಿದ್ದು, ಇಬ್ಬರೂ ಬಸವಣ್ಣನ ಮಹಾಮನೆಯ ಅನುಭವ ಗೋಷ್ಠಿಯಲ್ಲಿ ಪಾಲ್ಗೊಂಡು ತಮ್ಮ ಅನುಭಗಳನ್ನು ಅನುಭಾವವಾಗಿಸಿಕೊಂಡು ವಚನ ಚಳುವಳಿಯ ಆಶಯಗಳಂತೆ ಬದುಕುವುದು, ಭಕ್ತಿಯನ್ನು ಪ್ರಸಾರ ಮಾಡುವುದಲ್ಲದೆ, ಆತ್ಮೋನ್ನತಿಯನ್ನು ಸಾಧಿಸುವ ಪ್ರಯತ್ನದಲ್ಲಿ ತೊಡಗುತ್ತಿದ್ದರು.

ಗಾಣದ ಕಣ್ಣಪ್ಪನಿಗೆ ಅಲ್ಲಮ ಮಹಾಗುರುವಾಗಿದ್ದಾನೆ. ಹಾಗಾಗಿ 'ಕಣ್ಣಯ್ಯ ಪ್ರಿಯ ಗುಹೇಶ್ವರನ ಶರಣ ಅಲ್ಲಮ' ಎಂಬ ಅಂಕಿತದಲ್ಲಿಯೆ ವಚನಗಳನ್ನು ರಚಿಸಿದ್ದಾನೆ.

ಮಡಿವಾಳ ಮಾಚಯ್ಯ

ಮಾಚಯ್ಯನದು ಬಟ್ಟೆ ಒಗೆಯುವ, ಮಡಿಮಾಡುವ ವೃತ್ತಿ. ಈತ 'ಕಲಿದೇವರ ದೇವಾ' ಅಂಕಿತದಲ್ಲಿ ವಚನಗಳನ್ನು ರಚಿಸಿದ್ದಾನೆ. ೩೪೫ಕ್ಕೂ ಹೆಚ್ಚು ಈತನ ವಚನಗಳು ದೊರೆತಿವೆ. ವೀರ ಮಹೇಶ್ವರ ವ್ರತನಿಷ್ಠೆ ಈತನದು. ಸಮಯ ಬಂದಾಗಲೆಲ್ಲ ಕತ್ತಿ ಹಿಡಿದು ಹೋರಾಟಕ್ಕೂ ಸಿದ್ದನಾಗಿರುತ್ತಿದ್ದ. ಶರಣರ ಸೈನ್ಯದ ದಂಡನಾಯಕನೇ ಆಗಿದ್ದನೆಂದು ತಿಳಿದುಬರುತ್ತದೆ. ನೇರ ನಡೆ-ನುಡಿ ಸ್ವಭಾವದ ಈತ ಯಾವ ಮುಚ್ಚು ಮರೆಯಿಲ್ಲದೆ ನುಡಿಯ ಬಲ್ಲವನಾಗಿದ್ದು, ಸ್ವಾಭಿಮಾನ, ಪ್ರಮಾಣಿಕತೆ ಈತನ ವಚನಗಳ ಅಧ್ಯಯನದಿಂದ ತಿಳಿದುಬರುತ್ತದೆ.

ವಿಜಯಪುರದ ಹಿಪ್ಪರಿಗೆ ಈತನದು. ಕಲ್ಲಿನಾಥ ದೇವರ ಭಕ್ತನಾಗಿದ್ದನೆಂದು, ಈತನ ಗುರು ಮಲ್ಲಿಕಾರ್ಜುನ ಎಂದು ವಿದ್ವಾಂಸರು ಈತನ ಜೀವಿತದ ವಿವರಗಳನ್ನು ಗುರುತಿಸಿದ್ದಾರೆ.

ಕಲ್ಯಾಣವನ್ನು ಕಾರ್ಯಕ್ಷೇತ್ರ ಮಾಡಿಕೊಂಡು, ಅನುಭವ ಮಂಟಪದಲ್ಲಿ ಭಾಗವಹಿಸಿ ಬಸವಣ್ಣ, ಅಲ್ಲಮ, ಚನ್ನಬಸವಣ್ಣ, ಸಿದ್ದರಾಮ, ಅಕ್ಕಮಹಾದೇವಿ ಹೀಗೆ ಮುಂತಾದ ವಚನಕಾರರಿಂದ ಸ್ತುತಿಸಲ್ಪಟ್ಟಿದ್ದಾನೆ. ಕಲ್ಯಾಣ ಕ್ರಾಂತಿಯ ನಂತರ ಚನ್ನಬಸವಣ್ಣನ ನೇತೃತ್ವದ ಶರಣರ ಗುಂಪನ್ನು ದಂಡನಾಯಕನಾಗಿ ಕತ್ತಿ ಹಿಡಿದು ಬಿಜ್ಜಳನ ಸೈನ್ಯದ ವಿರುದ್ಧ ಹೋರಾಡಿ, ಶರಣರನ್ನು ಮತ್ತು ಅವರ ವಚನಗಳನ್ನು ರಕ್ಷಿಸಿದನೆಂದು ತಿಳಿದು ಬರುತ್ತದೆ. ಆದ್ದರಿಂದಲೇ ಈತನನ್ನು ವೀರಭದ್ರನ ಅವತಾರವೆಂದೇ ಜನ ನಂಬಿದ್ದರು. ವೀರಗಂಟೆಯ ಮಾಚಿದೇವನೆಂದೂ ಕರೆಯುತ್ತಿದ್ದರು.

ಮಾಚಯ್ಯನ ವಚನಗಳಲ್ಲಿ ಕಾವ್ಯಗುಣವನ್ನು ಹುಡುಕಬಹುದು. ಅದಕ್ಕೂ ಹೆಚ್ಚಾಗಿ ಸ್ವಾಭಿಮಾನ, ಪ್ರತಿಭಟನೆ, ಸಿಟ್ಟು, ಹೇಳಬೇಕಾದುದನ್ನು ಖಾರವಾದರೂ ಸರಿ ಹೇಳುವ ಪ್ರಾಮಾಣಿಕ ಗುಣ, ಒಪ್ಪಿತವಲ್ಲದ್ದರ ನಿರಾಕರಣೆ, ಟೀಕೆ ಇವೆಲ್ಲವು ನಿರ್ಬಿಡೆಯಿಂದಲೇ ಹೊರ ಬರುತ್ತದೆ. ಕೆಳವರ್ಗದಿಂದ ಬಂದ ಅಥವಾ ಮೇಲ್ವರ್ಗದವರ ಶೋಷಣೆಗೆ ಬಲಿಯಾಗಿ ಅವಮಾನ, ಅಪಮಾನ, ತಿರಸ್ಕಾರಕ್ಕೆ ಹೊಳಗಾಗಿ ಶೋಷಿತರಾಗಿದ್ದ ವೃತ್ತಿಮೂಲ, ಕುಲಮೂಲದ ಜನತೆಗೆ ಮೃದು ಧೋರಣೆ ದೂರದ ಮಾತೇ ಸರಿ. ಅವರು ತಮ್ಮತನದ ಇರುವಿಕೆಯ ಅರಿವಿಗಾಗಿ ತಡಕಾಡುತ್ತಾರೆ. ಅಂತಹ ಅವಕಾಶ ಸಿಕ್ಕ ತಕ್ಷಣವೇ ಎಚ್ಚೆತ್ತುಕೊಂಡು ಪ್ರತಿಕ್ರಿಯೆ ಮಾಡುತ್ತಾರೆ. ಅಂತಹ ಪ್ರತಿಕ್ರಿಯೆಯೂ ಮೃದುವಾಗಿರಲು ಸಾಧ್ಯವಿಲ್ಲ, ಬದುಕನ್ನು ಕಟ್ಟಿಕೊಳ್ಳುವ ಹಂಬಲದಲ್ಲಿ, ತಮ್ಮ ಬದುಕನ್ನು ಕಿತ್ತುಕೊಂಡವರ ವಿರುದ್ಧ ಹೋರಾಟಕ್ಕೆ ಇಳಿಯುತ್ತಾರೆ. ಈ ಸ್ವಭಾವವನ್ನು ಮಾಚಯ್ಯನ ವಚನಗಳಲ್ಲಿ ಕಾಣುತ್ತೇವೆ.

ಮಾಚಯ್ಯನ ಕುರಿತಾಗಿ ವೀರಶೈವ ಪುರಾಣ ಕಾವ್ಯಗಳಲ್ಲಿ ವೀರ ವ್ಯಕ್ತಿತ್ವದ ಕಥೆಗಳ ನಿರೂಪಣೆಗಳು ಇವೆ. ಬಟ್ಟೆ ಒಗೆಯುವ ಮಡಿವಾಳ ವೃತ್ತಿ ಮಾಡುತ್ತಿದ್ದ ಈತ ಶಿವಭಕ್ತರ ಬಟ್ಟೆಗಳನ್ನು ಮಾತ್ರ ಮಡಿಮಾಡುವುದು ಈತನ ಪ್ರತಿಜ್ಞೆಯಾಗಿತ್ತು. ಬಿಜ್ಜಳ ರಾಜನ ಬಟ್ಟೆಗಳನ್ನು ಒಗೆಯುವುದಿಲ್ಲವೆಂದು ಹೇಳಿ ಪ್ರಭುತ್ವವನ್ನೆ ಎದುರು ಹಾಕಿಕೊಂಡು ಬದುಕಿದ ವ್ಯಕ್ತಿತ್ವದ ಭಕ್ತನಾಗಿದ್ದಾನೆ. ಇಂತಹ ಕಥೆಗಳ ಮೂಲಕ ನಾವು ವೃತ್ತಿಯ ಪ್ರಾಮಾಣಿಕತೆ, ವೃತ್ತಿಯ ಮೇಲಿನ ಗೌರವ, ಶ್ರಮದ ಬದುಕನ್ನು ಗುರುತಿಸುವ ಸಾಧ್ಯತೆ ಇದೆ ಎಂದೇ ಅನ್ನಿಸುತ್ತದೆ.

ಡಕ್ಕೆಯ ಬೊಮ್ಮಣ್ಣ ·

ಜೀವನಕ್ಕಾಗಿ ಜನಪದ ಕಲೆಯನ್ನೆ ಅವಲಂಬಿಸಿ, ಅದನ್ನೇ ವೃತ್ತಿಯನ್ನು ಮಾಡಿಕೊಂಡವರು ಕೆಲವು ವಚನಕಾರರಿದ್ದಾರೆ. ಅವರಲ್ಲಿ ಡಕ್ಕೆಯ ಬೊಮ್ಮಣ್ಣನು ಒಬ್ಬ. ಈತ ಡಕ್ಕೆ (ಸಣ್ಣದಾದ ಡೊಳ್ಳು, ಅಥವಾ ಜರ್‌ಬುರ್ ಸದ್ದು ಮಾಡುವ ವಾದ್ಯ)ಯನ್ನು ಬಾರಿಸುತ್ತ, ಕುಣಿಯುತ್ತ ಕೈಯಲ್ಲಿ ಮೊರವಿಡಿದು ಅದರಲ್ಲಿ ಮಾರಿಯನ್ನು ಹಿಡಿದುಕೊಂಡು ಬಂದು, ಮನೆ ಮನೆಗೆ ಹೋಗಿ ಬೇಡುವುದು ಈತನ ವೃತ್ತಿಯಾಗಿತ್ತು ಎಂಬುದು ತಿಳಿದುಬರುತ್ತದೆ. ಈತನ ಹೆಸರಿನ ಹಿಂದೆ ಡಕ್ಕೆ ವಿಶೇಷಣೆಯನ್ನು ಗಮನಿಸಿ ಮತ್ತು ಈತನ ವಚನಗಳಲ್ಲಿ ಬಳಕೆಗೊಂಡಿರುವ ವೃತ್ತಿ ಉಪಕರಣಗಳ ಮೂಲಕವಷ್ಟೆ ಅಲ್ಲದೆ ಸ್ವತಃ ಆತನ ವಚನದಲ್ಲಿ ವೃತ್ತಿಯ ಬಗ್ಗೆ ಹೇಳಿರುವುದನ್ನು ಗಮನಿಸಬಹುದು.

ಡಕ್ಕೆಯ ಬೊಮ್ಮಣ್ಣ ಹಾಗೂ ಡಕ್ಕೆಯ ಮಾರಯ್ಯ ಎಂಬ ಎರಡು ಹೆಸರುಗಳಿದ್ದು, ಅವರೆಡು ಒಬ್ಬ ವಚನಕಾರನವೆ ಎಂದು ಈಗ ವಿದ್ವಾಸಂಸರು ಖಚಿತಪಡಿಸಿದ್ದಾರೆ. ವಚನಕಾರರ ಆಂದೋಲನಕ್ಕೆ ಬಂದು ಸೇರಿಕೊಳ್ಳುವ ಮುನ್ನ ಮೊರದಲ್ಲಿ ಮಾರಿಯನ್ನಿಟ್ಟುಕೊಂಡು ಕೈಯಲ್ಲಿ ಬಳೆ ಧರಿಸಿ, ಕತ್ತಿ, ಬಟ್ಟಲು ಹಿಡಿದು ಮನೆ ಮನೆಗೆ ಡಕ್ಕೆ ಬಾರಿಸುತ್ತ ಹೋಗಿ ಬೇಡಿ ಜೀವನ ಸಾಗಿಸುತ್ತಿದ್ದ. ಆದರೆ ಮುಂದೆ ಕಲ್ಯಾಣದ ಶರಣ ಚಳವಳಿಗೆ ಬಂದು ಸೇರಿಕೊಂಡಾಗಲೂ ಇದೇ ವೃತ್ತಿಯನ್ನು ಮುಂದುವರಿಸಿದನೆಂದು ಹಲವಾರು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ.

'ಮಾರಿ' 'ಮಸಣಿ', 'ಕಲ್ಲು', 'ಮೊರ' ಮುಂತಾದ ಕ್ಷುದ್ರ ದೇವತಾರಾಧನೆಯನ್ನು ನಿರಾಕರಿಸಿ ಸಾತ್ವಿಕ ದೈವವಾದ ಶಿವನನ್ನು ಅಂದರೆ ಇಷ್ಟಲಿಂಗ ಅಥವಾ ಏಕದೋವೊಪಾಸನೆಯನ್ನೇ ಅಂಗೀಕರಿಸಿಕೊಂಡು ಕ್ಷುದ್ರದೇವತಾರಾದನೆಯಂತ ಮೂಡ ಸಂಪ್ರಾದಾಯಕ್ಕೆ ಸೆಡ್ಡು ಹೊಡೆದು ನಿಂತಿದ್ದ ವಚನಕಾರರ ಚಳುವಳಿಗೆ ಬೊಮ್ಮಣ್ಣನ 'ಮಾರಿ' ವಿರೋಧದಂತೆಯೇ ಕಾಣುತ್ತದೆ. ಮೊದಲು ಮಾರಿಯ ಆರಾಧಕನಾಗಿದ್ದು ವೀರಶೈವ ಧರ್ಮದ ಪ್ರಭಾವಕ್ಕೆ ಬಂದಮೇಲೆ ಅವನು ಆ ದೈವವನ್ನು ತಿರಸ್ಕರಿಸಬೇಕಿದ್ದಿತು. 'ಹೆಂಡತಿ ಮಾರಿ ಮಸಣಿಯ ಭಕ್ತೆ' ಎಂದು ಬಸವಣ್ಣ ಮಾರಿಯ ಆರಾಧಕರನ್ನು ಕಡೆಗಣ್ಣಿಂದ ನೋಡಿದ್ದಾನೆ. ಬೊಮ್ಮಣ್ಣ ಮಾತ್ರ ತನ್ನ ಹಿಂದಿನ ಕಾಯಕವನ್ನೇ ಮುಂದುವರೆಸಿದ ಇಷ್ಟೆ ವ್ಯತ್ಯಾಸ – ಮೊದಲು ಮಾರಿ ಪೂಜೆಯ ದೈವವಾಗಿದ್ದಿತು ಈಗ ಮಾಯೆಯ ಸಂಕೇತವಾಯಿತು. ಮಾರಿಯನ್ನು-ಮಾಯೆಯನ್ನು ತಾನು ಕುಣಿಸುವವನೆಂದು ಹೇಳಿ ತನ್ನ ಕಸುಬನ್ನು ಮುಂದುವರಿಸಿದನೆಂದು ಕಾಣುತ್ತದೆ' ಎಂದು ಎಂ. ಚಿದಾನಂದಮೂರ್ತಿ ಅವರು ಅಭಿಪ್ರಾಯಪಡುತ್ತಾರೆ.[೧] ಅಲ್ಲದೆ ವಚನಗಳ ರಚನೆಗೆ ತೊಡಗಿ, ಆಧ್ಯಾತ್ಮ ಸಾಧನೆಯನ್ನು ಮಾಡಿದ್ದಾನೆ.

ಕಂಬದ ಮಾರಿತಂದೆ

ವಚನ ಚಳುವಳಿಯ ಅಲೆ ಸಮಾಜದ ಕಟ್ಟಕಡೆಯಲ್ಲಿದ್ದವರನ್ನು ಮುಟ್ಟಿ ಬಂದಿರುವುದು ವಿಶೇಷ. ಯಾರ ಕಣ್ಣಿಗೂ ಬೀಳದಂತೆ ತಮ್ಮ ಪಾಡಿಗೆ ತಾವು ಮುಳಿಗಿದ್ದವರನ್ನು ಎಚ್ಚರಿಸಿದುದಲ್ಲದೆ, ಅರಿವಿನ ದಾರಿಯನ್ನು ತೋರಿ, ಅವರಲ್ಲಿ ಸುಪ್ತ ಭಾವನೆಯನ್ನು ಜಾಗೃತಗೊಳಿಸಿತು. ಇಂತಹ ಆಂದೋಲನದ ನಿರೀಕ್ಷೆ ಇದ್ದುದೇನೋ ಸಹಜವಾಗಿತ್ತು. ಏಕೆಂದರೆ ಪ್ರಕ್ಷುಪ್ತಗೊಂಡಿದ್ದ ಬದುಕನ್ನು, ನಿರರ್ಥಕವಾದ ಜೀವನವನ್ನು, ಪುನಃ ಕಟ್ಟಿಕೊಳ್ಳಬೇಕೆಂಬ ಹಂಬಲ ಇಂತಹದಕ್ಕಾಗಿಯೇ ಸಮುದಾಯ, ಜನರ ಬದುಕು ಹಪಾಹಪಿಸುತ್ತಿತೆಂದೇ ಕಾಣುತ್ತದೆ. ಇದಕ್ಕೆ ವಚನ ಚಳುವಳಿಯ ಅಲೆ ಅನೇಕ ಅನುಭಾವಿಗಳು ತಮ್ಮ ಅನುಭವಗಳನ್ನು ಹೊತ್ತು ತಂದೇ ಅಭಿವ್ಯಕ್ತಪಡಿಸಲು ಒಟ್ಟು ಗೂಡಿಸಿತು. ಅಲ್ಲದೆ ಆತ್ಮೋನ್ನತಿಯ ಮಾರ್ಗ ತಿಳಿಸಿ ನಡೆನುಡಿಯಲ್ಲಿ ಏಕತೆಯನ್ನು ತಂದುಕೊಟ್ಟು ಅಂತರಂಗ ಪ್ರವೇಶಿಕೆಯನ್ನು ಮಾಡಲು ಸುಲಭ ಸಾಧನ ಮಾರ್ಗವನ್ನು ತೋರಿಸಿಕೊಟ್ಟಿತು.

ಭಕ್ತಿ, ಜ್ಞಾನ, ಅರಿವು, ಇವುಗಳನ್ನು ತಿಳಿಸಿಕೊಡುವುದಲ್ಲದೇ, ಸಮಾಜದಲ್ಲಿ ಅನೇಕ ಸ್ತರಗಳಲ್ಲಿ ನೆಲೆಸಿದ್ದ ಅಸಮಾನತೆಯನ್ನು ತೊಲಗಿಸಿತು. ಅದರಲ್ಲೂ ಇಡಿ ಪ್ರಪಂಚಕ್ಕೆ ಮಹತ್ವವಾದ 'ಕಾಯಕ' ಸಿದ್ದಾಂತವನ್ನು ಕೊಟ್ಟಿತು.

ವೃತ್ತಿಯಲ್ಲಿ ನಿರತರಾಗಿದ್ದ ಅನೇಕ ವಚನಕಾರರು ವಚನಗಳನ್ನು ರಚಿಸಿ, ವಚನ ಆಂದೋಲನದ ಭಾಗಿಗಳಾಗಿದ್ದಾರೆ. ಇವರಲ್ಲಿ ಅನೇಕರು ಕುಲ ಮೂಲದ ವೃತ್ತಿಯನ್ನೇ ಮಾಡುತ್ತ. ಆ ವೃತ್ತಿಯಿಂದ ಬಂದ ಅನುಭವವನ್ನು ಸ್ವೀಕರಿಸಿ ಅದರ ಮೂಲಕ ಬದುಕು ಕಟ್ಟಿಕೊಂಡವ ರಾಗಿದ್ದಾರೆ. ಹೀಗೆ ಬಂದ ಅನುಭಾವವನ್ನು ತಮ್ಮ ವಚನಗಳಲ್ಲಿ ಅಭಿವ್ಯಕ್ತಿಸಿದ್ದಾರೆ. ಅದೂ ಕೂಡ ತಮ್ಮ ವೃತ್ತಿಯಲ್ಲಿ ಬಳಕೆಗೊಂಡ ಪರಿಕರಗಳು, ಉಪಕರಣಗಳನ್ನೆ ರೂಪಕಗಳನ್ನಾಗಿ ಮಾಡಿಕೊಂಡು ವಚನಗಳನ್ನು ಕಟ್ಟಿದ್ದಾರೆ. ಇಂತಹ ವಚನಗಳು ಚಾರಿತ್ರಿಕ ಸಂಗತಿಗಳಾಗಿ ನಿಲ್ಲುವುದರ ಜೊತೆಗೆ ಕಾಯಕದ ಮಹತ್ವವನ್ನು, ವೃತ್ತಿ ಗೌರವವನ್ನು ಎತ್ತಿ ಹಿಡಿಯುತ್ತವೆ. ಹೀಗೆ ವೃತ್ತಿಯನ್ನು ಮಾಡುತ್ತಿದ್ದ ವಚನಕಾರರಲ್ಲಿ ಕಂಬದ ಮಾರಿತಂದೆ ಒಬ್ಬ.

ಕಂಬದ ಮಾರಿತಂದೆಯ ಜೀವನದ ಕುರಿತು ಮಾಹಿತಿ ಅಷ್ಟಾಗಿ ತಿಳಿದು ಬಂದಿಲ್ಲ. 'ಕದಂಬಲಿಂಗಾ' ಎಂಬ ಅಂಕಿತದಲ್ಲಿ ರಚನೆಗೊಂಡಿರುವ ಹನ್ನೊಂದು ವಚನಗಳು ದೊರಕಿದ್ದು, ಅವು ಕಂಬದ ಮಾರಿತಂದೆಯ ರಚನೆಗಳಾಗಿವೆ ಎಂದು ಗುರುತಿಸಲಾಗಿದೆ. ವಚನಗಳ ಮೂಲಕವೇ ಈತನ ವೃತ್ತಿ ಮೀನುಗಾರಿಕೆ, ಮೀನುಗಾರನಾಗಿದ್ದಾನೆ ಎಂದು ಗುರುತಿಸಲಾಗಿದೆ. ಅದಕ್ಕೆ ನಿದರ್ಶನಗಳಾಗಿ ಈತ ತನ್ನ ವಚನಗಳಲ್ಲಿ ಬಳಸಿರುವ ಕಲ್ಲಿ, ಬಲೆ, ಮತ್ಸ್ಯ, ಸೆಳೆಗೋಲಿನ ಗಾಳದಕೀಟಕ, ಅಂಬುದಿ ಹೀಗೆ ಮುಂತಾದ ಮೀನುಗಾರರ ಪರಿಭಾಷೆಗಳನ್ನು ಬಳಸಿರುವುದರಿಂದ ಈತನ ವೃತ್ತಿಯನ್ನು ನಿರ್ಧರಿಸಲಾಗಿದೆ. ವೃತ್ತಿ ಪರಿಭಾಷೆಗಳ ಮೂಲಕ ಆಧ್ಯಾತ್ಮದ ಜೊತೆ ಅನುಸಂದಾನ ನಡೆಸಿರುವುದನ್ನು ಗಮನಿಸಬಹುದು.

ಕನ್ನದ ಮಾರಿತಂದೆ

ಮೊದಲಿಗೆ ಕಳ್ಳತನ ಮಾಡುತ್ತಿದ್ದ ಮಾರಯ್ಯ (ಮಾರಿತಂದೆ) ಬಸವಣ್ಣನ ನೇತೃತ್ವದ ಅನುಭವ ಮಂಟಪಕ್ಕೆ ಬಂದು ಅಲ್ಲಿ ಸಾಧನೆ ಮಾಡತೊಡಗಿದ ಮೇಲೆ ತನ್ನ ವೃತ್ತಿಯಲ್ಲಿ ಬದಲಾವಣೆ ತಂದುಕೊಂಡು ಕಳ್ಳತನ ಮಾಡುವುದನ್ನು ಬಿಟ್ಟಿರಬಹುದು ಎಂದು ತಿಳಿಯಲಾಗಿದೆ. ಮುಂದೆ ಈತನು ಶಿವಭಕ್ತನಾಗಿದ್ದು ಯಾವ ವೃತ್ತಿಯನ್ನು ಕೈಗೊಂಡನು ಎಂಬುದರ ಬಗ್ಗೆ ಮಾಹಿತಿ ಅಲಭ್ಯವಾಗಿದ್ದು, ಈತನ ಮುಂಚಿನ ವೃತ್ತಿಯನ್ನೇ ಈತನು ವಚನಗಳಲ್ಲಿ ಬಳಸಿರುವ ರೂಪಕಗಳಿಂದ ಗುರುತಿಸಬಹುದಾಗಿದೆ.

ಕನ್ನಡ ಮಾರಯ್ಯನ ಹೆಸರಿನ ಜೊತೆಗೆ ಕನ್ನದ ಬ್ರಹ್ಮಯ್ಯನ ಹೆಸರೂ ಕಂಡು ಬಂದಿದ್ದು, ಕನ್ನದ ಮಾರಯ್ಯನ ಹೆಸರು ಲಕ್ಕಣ್ಣ ದಂಡೇಶನ 'ಶಿವತತ್ವ ಚಿಂತಾಮಣಿ'ಯಲ್ಲಿ ಬರುತ್ತದೆ. ಬಸವ ಪುರಾಣ, ಬೈರವೇಶ್ವರ ಕಾವ್ಯ ಕಥಾಮಣಿ ಸೂತ್ರರತ್ನಾಕರ ಮುಂತಾದ ಕೃತಿಯಲ್ಲಿ ಕನ್ನದ ಬ್ರಹ್ಮಯ್ಯನ ಉಲ್ಲೇಖ ಬರುತ್ತದೆ. ಶಿವತತ್ವ ಚಿಂತಾಮಣಿಯಲ್ಲಿ ಬರುವ ವಚನಕಾರ ಕನ್ನದ ಮಾರಿತಂದೆಯೆ? ಎಂದು ವಿದ್ವಾಂಸರು ಅನುಮಾನಿಸಿದ್ದಾರೆ.

ಶಿವಭಕ್ತರಲ್ಲದವರ ಮನೆಗೆ ಕನ್ನ ಹಾಕುವುದು ಇವನ ವೃತ್ತಿಯಾಗಿದ್ದಿತು. ತನ್ನ ವೃತ್ತಿಗೆ ವಿರೋದವಾದ ಹೇಳಿಕೆಯನ್ನು ವಚನಗಳಲ್ಲಿ ವ್ಯಕ್ತ ಪಡಿಸಿರುವ ಈತ ತಾನು ಮಾಡುತ್ತಿದ್ದ

ಕಳ್ಳತನದ ವೃತ್ತಿಯ ಪರಿಕರ, ಅಥವಾ ಪರಿಭಾಷೆಯಲ್ಲಿ ವಚನಗಳನ್ನು ರಚಿಸಿದ್ದು, ಅವುಗಳ ಮೂಲಕ ಆಧ್ಯಾತ್ಮಿಕ ಅನುಸಂದಾನ ಮಾಡುತ್ತಾನೆ.

ಕತ್ತಲೆಯಲ್ಲಿ ಕನ್ನವನಿಕ್ಕಿದಡೆ
ಎನಗೆ ಕತ್ತಿಯ ಕೊಟ್ಟ ಕರ್ತುವಿಂಗೆ ಭಂಗ.
ಅವರು ಮರದಿರ್ದಲ್ಲಿ ಮನೆಯ ಹೊಕ್ಕಡೆ
ಎನ್ನ ಚೋರತನದ ಅರಿಕೆಗೆ ಭಂಗ.
ಮರದಿರ್ದವರ ಎಬ್ಬಿಸಿ ಅವರಿಗೆ ಅವರೊಡವೆಯ ತೋರಿ
ಎನ್ನೊಡವೆಯ ತಂದೆ ಮಾರನ ವೈರಿ ಮಾರೇಶ್ವರಾ.

(ಸಂಕೀರ್ಣ ವಚನ ಸಂಪುಟ: ೨, ವಚನ ಸಂಖ್ಯೆ: ೨೮)

ಈ ವಚನ ಮಾರಿತಂದೆ ವೃತ್ತಿ ಹಾಗೂ ಆತನ ಅನುಭಾವಿಕ ನೆಲೆಯ ನಿದರ್ಶನದಂತಿದೆ.

ಕನ್ನಡಿ ಕಾಯಕದ ಅಮ್ಮಿದೇವಯ್ಯ

ಅಮ್ಮಿದೇವಯ್ಯನದು ಕ್ಷೌರಿಕ ವೃತ್ತಿ ಎಂದು ಗುರುತಿಸಲಾಗಿದ್ದು, ಇದಕ್ಕೆ ಆತನ ವಚನಗಳೇ ಆಧಾರವಾಗಿ ನಿಲ್ಲುತ್ತವೆ. ಕ್ಷೌರಿಕನು ಹಿಂದೆ ವೃತ್ತಿ ನಿರತನಷ್ಟೇ ಅಲ್ಲದೆ ತಕ್ಕಮಟ್ಟಿಗೆ ವೈದ್ಯನು ಕೂಡ ಆಗಿರುತ್ತಿದ್ದ. ಹೀಗೆ ಅಮ್ಮಿದೇವಯ್ಯ ತನ್ನ ವಚನದಲ್ಲಿ ವ್ಯಕ್ತಪಡಿಸಿರುವ ವೈದ್ಯಕೀಯ ಗುಣದಿಂದ ಅರಿಯಬಹುದು. ಈತ ಕಾಯಕ್ಕೆ ಶ್ರದ್ಧಾಳು ಎಂಬುದಕ್ಕೆ ಆತನ ಈ ವಚನವೇ ಸಾಕ್ಷಿಯಾಗಿ ನಿಲ್ಲುತ್ತದೆ.

ಆವಾವ ಜಾತಿಗೋತ್ರದಲ್ಲಿ ಬಂದಡೂ
ತಮ್ಮ ತಮ್ಮ ಕಾಯಕಕ್ಕೆ, ಭಕ್ತಿಗೆ ಸೂತಕ ವಿಲ್ಲದಿರಬೇಕು.
ಆವಾವ ವ್ರತವ ಹಿಡಿದಡೂ, ಇದಿರ ದಾಕ್ಷಿಣ್ಯವ ಮರೆದು
ತನ್ನಯ ತ್ರಿಕರಣ ಶುದ್ಧವಾಗಿ ನಡೆಯಬೇಕು.
ಪರ ಪುರಷಾರ್ಥಕ್ಕೆ ಅರಿಯಿಸಿಕೊಂಬಡೆ ಮೂಗ
ಅರು ಹಿರಿಯರು ಹೇಳಿದರೆಂದು ಕಲಸಬಹುದೆ ಅಮಂಗಲವ.
ಇಂತೀ ಕ್ರೀಯಲ್ಲಿ ಭಾವ ಶುದ್ಧವಾಗಿ
ಭಾವದಲ್ಲಿ ದಿವ್ಯಜ್ಞಾನ ಪರಿಪೂರ್ಣವಾಗಿಪ್ಪ ಗುರುಚರ ಭಕ್ತಂಗೆ
ಚನ್ನ ಬಸವಣ್ಣ ಸಾಕ್ಷಿಯಾಗಿ
ಕಮಳೇಶ್ವರಲಿಂಗವು ತಾನೆಯೆಂದು ಭಾವಿಸುವನು.

(ಸಂಕೀರ್ಣ ವಚನ ಸಂಪುಟ: ೩, ವಚನ ಸಂಖ್ಯೆ: ೧೩)

ಜಾತಿ, ಗೋತ್ರಕ್ಕಿಂತ ವೃತ್ತಿಯೇ ಮುಖ್ಯವಾದುದು. ಮಾಡುವ ವೃತ್ತಿಯನ್ನು ಶ್ರದ್ಧೆ, ಪ್ರಾಮಾಣಿಕತೆಯಿಂದಲೇ ಮಾಡಿದಾಗ ವೃತ್ತಿಗೆ ನ್ಯಾಯ ಮತ್ತು ಗೌರವ ಸಿಗುತ್ತದೆ. ಇದೆ ಕಾಯಕ ಸಿದ್ಧಾಂತದ ಮಹತ್ವವಾಗಿದೆ.

ಈತನ ವಚನಗಳಲ್ಲಿ ಬಳಕೆಯಾಗಿರುವ ವೃತ್ತಿ ಸಂಬಂಧಿತ ಪರಿಕರಗಳು, ಹಡಪ, ಕತ್ತರಿ, ಕತ್ತಿ, ಕನ್ನಡಿ, ಚಿಮ್ಮುಟ, ಹಣಿಗೆ, ಕಡಿಚಣ, ಅಂಗುಲಸಂಗಿ ಮುಂತಾದವುಗಳು ಬಳಕೆಗೊಂಡಿದ್ದು,

ಇವುಗಳ ಮೂಲಕ ವಚನಗಳು ಅಭಿವ್ಯಕ್ತಗೊಂಡಿದ್ದು, ಆಧ್ಯಾತ್ಮಿಕ ಸಾಧನೆಯ ಒಳವುಗಳನ್ನು ನೀಡುತ್ತವೆ.

ಒಕ್ಕಲಿಗ ಮುದ್ದಣ್ಣ

ಶತಶತಮಾನಗಳ ಇತಿಹಾಸವನ್ನು ನೋಡಿದರೂ ಕೃಷಿಯೇ ಪ್ರಧಾನ ಜೀವನದ ವೃತ್ತಿಯಾಗಿರುವುದು ತಿಳಿದುಬರುತ್ತದೆ. ಸಾಮಾನ್ಯವಾಗಿ ಬಹುಸಂಖ್ಯಾತರಾಗಿದ್ದ ಶೂದ್ರವರ್ಗವೇ ಇದರಲ್ಲಿ ನಿರತರಾಗಿರುತ್ತಾರೆ. ಇನ್ನುಳಿದಂತಹ ವರ್ಗಗಳು ವ್ಯಾಪಾರ, ಶಾಸ್ತ್ರ ಪುರಾಣ ಪಠಣ, ಪುರೋಹಿತದಂತ ಕೆಲಸ, ಆಳ್ವಿಕೆ ಮಾಡುವಂತ ವರ್ಗಗಳಾಗಿರುವುದು ಅಲ್ಪಸಂಖ್ಯಾತರಾಗಿರುವಂತವರೆ. ಆದರೆ ದಲಿತರು ಸೇವಾ ವೃತ್ತಿಗಳನ್ನು ಮಾಡುವ ಕುಲಕಸುಬಿನವರಾಗಿದ್ದಾರೆ. ಇಂತಹ ಕೆಳವರ್ಗದವರು ಕೃಷಿ ಕಾಯಕದಲ್ಲಿ ನಿರತರಾಗಿರುವುದು ಸಾಮಾನ್ಯ. ಆದರೆ ಭೂಮಾಲಿಕತ್ವವು ಸಣ್ಣಪ್ರಮಾಣದಲ್ಲಿ ಮಧ್ಯಮ ವರ್ಗದ ಅಂದರೇ ಕೆಳವರ್ಗದವರೂ ಅಲ್ಲ, ಮೇಲ್ವರ್ಗದವರೂ ಅಲ್ಲ. ಇಂತವರು ಕೃಷಿಯನ್ನು ಅವಲಂಬಿಸಿರುವಂತಹದ್ದನ್ನು ನೋಡುತ್ತೇವೆ.

ಹನ್ನೆರಡನೆಯ ಶತಮಾನದ ವಚನ ಚಳುವಳಿಗೆ ಕೃಷಿ ಸಮುದಾಯದಿಂದ ಏಲೇಶಕೇತಯ್ಯ, ಕಿಲಾರದ ಭೀಮಣ್ಣ, ತುರುಗಾಹಿ ರಾಮಣ್ಣ ಮತ್ತು ಒಕ್ಕಲಿಗ ಮುದ್ದಣ್ಣ, ಇಳಿಹಾಳ ಬೊಮ್ಮಣ್ಣ ಬಂದು ಸೇರಿಕೊಂಡು ವಚನಕಾರರಾಗಿದ್ದಾರೆ. ಇವರಲ್ಲಿ ತುರುಗಾಹಿ ರಾಮಣ್ಣ ಮತ್ತು ಕಿಲಾರದ ಭೀಮಣ್ಣ ಪಶುಸಂಗೋಪನೆಯನ್ನೆ ಹೆಚ್ಚಿನ ಆದ್ಯತೆಯ ವೃತ್ತಿಯನ್ನಾಗಿ ಮಾಡಿಕೊಂಡಿದ್ದಾರೆ. ಇದಕ್ಕೆ ಅವರ ವಚನಗಳೇ ಆಧಾರವಾಗಿ ನಿಲ್ಲುತ್ತವೆ.

ರೈತಾಪಿ ವರ್ಗದ ಅಥವಾ ಕೃಷಿ ಉಪಕರಣಗಳ ಮೂಲಕವೇ ತಮ್ಮ ವಚನಗಳನ್ನು ಅಭಿವ್ಯಕ್ತಿಸುವ ಮೂಲಕ ವೈಶಿಷ್ಟ್ಯತೆಯನ್ನು ಹೊಂದಿರುವವರಲ್ಲಿ ವೃತ್ತಿಜೀವಿಗಳಲ್ಲಿ ಒಕ್ಕಲಿಗ ಮುದ್ದಣ್ಣ ಒಬ್ಬ. ಈತನ ಹನ್ನೆರಡು ವಚನಗಳು ಸಿಕ್ಕಿದ್ದು, ಅವುಗಳು 'ಕಾಮ ಬೀಮ ಜೀವ ಧನದೊಡೆಯ' ಎಂಬ ಅಂಕಿತದಲ್ಲಿ ರಚಿಸಲ್ಪಟ್ಟಿವೆ. ಈತನ ಜೀವಿತದ ವಿವರಗಳು ಅಷ್ಟಾಗಿ ಲಭ್ಯವಿಲ್ಲ. ಈತನದು ಜೋಳದ ಹಾಳೆಂಬ ಗ್ರಾಮ ಎಂದು ವಿದ್ವಾಂಸರು ತೀರ್ಮಾನಿಸಿದ್ದಾರೆ. ಕೃಷಿ ಕಾಯಕವನ್ನು ಮಾಡಿ ಜೀವನ ಸಾಗಿಸುವುದು ಅದರಿಂದ ಬಂದದ್ದರಲ್ಲಿ ಗುರು ಲಿಂಗ ಜಂಗಮದ ಸೇವೆ ಮಾಡುವುದು ಈತನ ವ್ರತವಾಗಿದೆ. ಈತನನ್ನು ಒಕ್ಕಲು ಮುಗ್ಧಯ್ಯ, ಒಕ್ಕಲು ಮುದ್ದಯ್ಯ, ಒಕ್ಕಲಿಗ ಮುದ್ದೇಗೌಡ ಎಂತಲು ಕರೆಯುತ್ತಿದ್ದು, ಈತನ ಹೆಸರಿನ ಹಿಂದಿರುವ ವೃತ್ತಿ ವಿಶೇಷಣದಿಂದಲೇ ಈತನ ವೃತ್ತಿಯನ್ನು ಗುರುತಿಸಲಾಗಿದೆ. ಈತನ ವಚನಗಳಲ್ಲಿ ಕೃಷಿ ಉಪಕರಣಗಳೇ ಹೆಚ್ಚಿನ ಪ್ರಮಾಣದಲ್ಲಿ ಬಳಕೆಗೊಂಡಿದೆ. ಆ ಮೂಲಕ ಈತನ ವೃತ್ತಿ ಕೃಷಿ ವೃತ್ತಿ ಎಂದು ನಿರ್ಧರಿಸುವಲ್ಲಿ ಪ್ರಧಾನವಾದ ಸಾಕ್ಷ್ಯಗಳಾಗಿವೆ. ಅಲ್ಲದೆ ಈತನು ಹೊಲದಲ್ಲಿ ಉಳುಮೆ ಮಾಡುವಾಗ ನೇಗಿಲಿಗೆ ಸಿಕ್ಕಿ ಹಾಕಿಕೊಂಡ ಲಿಂಗವನ್ನು ಹೊರತೆಗೆದು ಪೂಜಿಸಿ, ಲಿಂಗದೀಕ್ಷೆ ಪಡೆದ ಎಂಬ ಪ್ರತೀತಿಯೂ ಇದೆ.

ವಚನ ಸಮುದಾಯವೇ ಪ್ರತಿಭಟನಕಾರರ ಸಮೂಹವಾಗಿದ್ದಂತೂ ನಿಜ. ಸಮಾಜದ ಮೇಲೆ ನಡೆಯುವ ದಬ್ಬಾಳಿಕೆಗೆ ಬೇಸತ್ತು ವಚನಕಾರರು ಪ್ರತಿಭಟನೆಯ ಅಸ್ತ್ರವನ್ನೇ ಹಿಡಿದಿದ್ದಾರೆ. ಅಂದಿನ ಸಂದರ್ಭದಲ್ಲಿ ಪ್ರಭುತ್ವ ಹೇರುತ್ತಿದ್ದ ಕಂದಾಯವು ಜನಜೀವನವನ್ನು ಕುಗ್ಗಿಸಿ ಬಿಡುತ್ತಿತ್ತು. ಅಂತಹ ಪ್ರಭುತ್ವದ ವಿರುದ್ಧ ಸಿಡಿದೆದ್ದವರು ವೃತ್ತಿಜೀವಿಗಳು. ಕುಲ ಕಸುಬುದಾರರು ರೈತರು, ಸಾಮಾನ್ಯ ಬಡಕೂಲಿಕಾರರು. ಹಾಗಾಗಿಯೇ ಇವರು ಬಸವಣ್ಣನ ನೇತೃತ್ವದ ವಚನ ಚಳುವಳಿಗೆ ಸೇರಿಕೊಂಡು ಸಾಮಾಜಿಕ ಭದ್ರತೆಯನ್ನು ಕಂಡುಕೊಳ್ಳುವ ಪ್ರಯತ್ನ ಮಾಡುತ್ತಾರೆ. ಒಕ್ಕಲಿಗ ಮುದ್ದಣ್ಣನು ಕೂಡ ಪ್ರಭುತ್ವ ಹೇರಿದ್ದ ಸುಂಕವನ್ನು ಒಪ್ಪಿಕೊಳ್ಳದೆ ಅದರ ವಿರುದ್ಧ ಪ್ರತಿಭಟನೆ ಮಾಡಿ ಅದನ್ನು ಜಂಗಮಕ್ಕೆ ಅಂದರೆ ಸಮಾಜಕ್ಕೆ ವಿನಿಯೋಗಿಸುವ ಮೂಲಕ ಪ್ರತಿಭಟನೆಯ ತೀವ್ರತೆಯನ್ನು ಹೆಚ್ಚುಗೊಳಿಸುತ್ತಾನೆ.

ಎಲೆಗಾರ ಕಾಮಣ್ಣ

'ಆತುರೇಶ್ವರ ಲಿಂಗ' ಎಂಬ ಅಂಕಿತದಲ್ಲಿ ಸಿಕ್ಕಿರುವ ಒಂದು ವಚನವನ್ನು ಎಲೆಗಾರ ಕಾಮಣ್ಣನದು ಎಂದು ಗುರುತಿಸಲಾಗಿದೆ. ಈತನ ಹೆಸರಿನ ಹಿಂದಿರುವ 'ಎಲೆಗಾರ' ಎಂಬ ವಿಶೇಷಣದಿಂದಲೇ ಈತನ ವೃತ್ತಿಯನ್ನು ಗುರುತಿಸಬಹುದಾಗಿದೆ. ಕಾಮಣ್ಣನು ನಡೆ ಮತ್ತು ನುಡಿಯಲ್ಲಿ ಏಕತೆಯನ್ನು ಹೊಂದಬೇಕೆಂಬ ಅಭಿಪ್ರಾಯ ಉಳ್ಳವನು. ವ್ರತಾಚಾರವೇ ಪ್ರಾಣ ಎಂಬ ನಿಷ್ಠಾಪೂರ್ಣ ಭಕ್ತನ ಸ್ವಭಾವದವನು. ಆತನ ವಚನದಲ್ಲಿ ವೀರಶೈವ ವ್ರತ ನಿಷ್ಠೆಯೇ ಅಭಿವ್ಯಕ್ತಗೊಳ್ಳುತ್ತದೆ. ವಚನಕಾರರ ತತ್ವ ಸಿದ್ಧಾಂತಗಳೇ ಇಲ್ಲಿ ವ್ರತ ಎಂದು ನೋಡುವುದಾದರೆ ಅವುಗಳ ಪಾಲನೆಯೇ ವ್ರತವಾಗಿದೆ. ಆ ಪರಿಕಲ್ಪನೆಗಳಡಿಯಲ್ಲಿಯೇ ಬದುಕನ್ನು ಕಟ್ಟಿಕೊಳ್ಳುವುದನ್ನು ನೋಡುತ್ತೇವೆ. 'ವ್ರತನಷ್ಟವಾಗಲಾಕ್ಷಣ ಮರಣಮಯ್ಯಾ' ಎಂಬ ಸಾಲಿನ ಭಾವಾರ್ಥವೇ ವೀರಮಹೇಶ್ವರ ನಿಷ್ಠೆಯುಳ್ಳದ್ದು, ತತ್ವಗಳಿಗೆ ಬದ್ಧವಾಗಿರುವಂತಹದ್ದು ಎಂದು ಸೂಚಿಸುತ್ತದೆ.

ಎಲೆಗಾರ ಎಂಬುದು ವೃತ್ತಿ ಸೂಚಕ ಪದವೇ ಆಗಿದೆ. ಕಾಮಣ್ಣನು ಎಲೆಯ ಬೆಳೆಗಾರನಾಗಿದ್ದು, ಅದರಿಂದ ಜೀವನ ಸಾಗಿಸುತ್ತಿದ್ದಿರಬಹುದಾಗಿದೆ ಅಥವಾ ಎಲೆಯ ಮಾರಾಟಗಾರನಾಗಿ ಬದುಕುತ್ತಿದ್ದಿರ ಬಹುದಾಗಿದೆ. ಇದಕ್ಕೆ ಆಧಾರವಾಗಿ ಆತನ ವಚನದಲ್ಲಿರುವ ಎಲೆ ಮತ್ತು ಬಳ್ಳಿ ಸಂಪೂರ್ಣವಾಗಿ ಬೆಳೆದು ಹದಕ್ಕೆ ಬರುವ ಚಿತ್ರಣವನ್ನು ಬಳಸಿರುವುದನ್ನು ನೋಡಿಯೇ ತಿಳಿಯಬಹುದಾಗಿದೆ.

ಕಲಕೇತಯ್ಯ

ವಚನ ಚಳುವಳಿಯ ಆಶಯವನ್ನು, ತತ್ವವನ್ನು ಜನತೆಗೆ ಮುಟ್ಟಿಸುವಲ್ಲಿ ಜನಪದ ಕಲಾವಿದರ ಶ್ರಮ ಅಧಿಕವಾಗಿದೆ. ಈ ನಿಟ್ಟಿನಲ್ಲಿ ಬಹುರೂಪಿ ಚೌಡಯ್ಯ, ಡಕ್ಕೆಯ ಬೊಮ್ಮಣ್ಣ, ನಗೆಯ ಮಾರಿತಂದೆ ಹೀಗೆ ಮುಂತಾದ ವಚನಕಾರರು ಜನರ ಬಳಿಗೆ ನೇರವಾಗಿ ಹೋಗಿ, ಮನೆ ಮನೆಗೆ ತಲುಪಿಸುವ ಪ್ರಯತ್ನ ಮಾಡಿರುವುದು ಬಹಳ ಮಹತ್ವವಾಗಿದ್ದುದಾಗಿದೆ.

ಕಲಕೇತ ಬೊಮ್ಮಯ್ಯ ಕಿಳ್ಳೆಕ್ಯಾತರ ಸಮುದಾಯಕ್ಕೆ ಸೇರಿದ್ದು, ಕಿಳ್ಳೆಕೇತರ ಆಟವೆಂಬ ಜನಪದ ಕಲೆಯನ್ನು ಪ್ರದರ್ಶಿಸುವುದೇ ಇವನ ವೃತ್ತಿಯಾಗಿದೆ. ಈತನ ಬಗ್ಗೆ ಹರಿಹರ ಉಲ್ಲೇಖಿಸಿದ್ದಾನೆ.

ಪಾಲ್ಕುರಿಕೆ ಸೋಮನಾಥನ ಬಸವ ಪುರಾಣದಲ್ಲಿ ಈತನ ವರ್ಣನೆ ಮಾಡಿರುವುದನ್ನು ನೋಡಬಹುದು. 'ಮುಂದಲೆಯಲ್ಲಿ ಎತ್ತಿಕಟ್ಟಿದ ಮುಡಿ, ನೊಸಲಲ್ಲಿ ವಿಭೂತಿ, ಕಿವಿಯಲ್ಲಿ ಚಿಗುರು, ಎಡಗಾಲಲ್ಲಿ ಅಂದುಗೆ, ಬಲಗಾಲಲ್ಲಿ ಗೆಜ್ಜೆ, ಎಡಗೈಯಲ್ಲಿ ಟಗರಿನಕೋಡು, ಬಲಕೈಯಲ್ಲಿ ಬೆತ್ತ, ಕಾಗಿನ ಕಪ್ಪಡ' ಹೀಗೆ ಕಲಕೇತ ಬ್ರಹ್ಮಯ್ಯನ ವರ್ಣನೆಯನ್ನು ಭೀಮಕವಿಯ ಬಸವ ಪುರಾಣದಲ್ಲಿ ಬಂದಿರುವುದಾಗಿದೆ.

ಶಿವಭಕ್ತರ ಮನೆಯಂಗಳಕ್ಕೆ ಹೋಗಿ, ಸಂದರ್ಭಕ್ಕೆ ತಕ್ಕಂತೆ ವೇಷ ಹಾಕಿಕೊಂಡು, ವಿವಿಧ ಪಾತ್ರಗಳನ್ನು ಅಭಿನಯಿಸುತ್ತ, ಕುಣಿಯುತ್ತ, ಹಾಡುತ್ತ ಭಕ್ತರನ್ನು ರಂಜಿಸುತ್ತಿದ್ದನು. ಈ ವೃತ್ತಿಯಿಂದ ಬಂದುದನ್ನು ದಾಸೋಹ, ಅಥವಾ ಬಡಭಕ್ತರಿಗೆ ಹಂಚಿಬಿಡುತ್ತಿದ್ದನು. ಇತರ ಶರಣರಂತೆ ಈತನ ಮೇಲೆ ಪವಾಡ ಕಥೆಯೊಂದು ಬಂದಿದೆ. ಬಡ ಭಕ್ತನೊಬ್ಬ ಕಿನ್ನರಯ್ಯ ಪಡಿಕೊಡುತ್ತಾನೆಂದು ಕೇಳಿ ಅಲ್ಲಿಗೆ ಹೊರಟಿದ್ದನು. ಅದನ್ನು ಕಂಡ ಕಲಕೇತಯ್ಯನು ತನ್ನ ಪಾದವನ್ನು ಮುಟ್ಟಿಸಿ ಕಲ್ಲುಗಳನ್ನು ಚಿನ್ನ ಮಾಡಿಕೊಟ್ಟನು. ತನಗೆ ಸಾಧ್ಯವಾದಷ್ಟನ್ನು ತೆಗೆದುಕೊಂಡು, ಉಳಿದದ್ದನ್ನು ಅಲ್ಲಿಯೆ ಬಿಟ್ಟು ಹೋದನು. ಅದನ್ನು ತಿಳಿದ ಬಸವಣ್ಣ ಕಲಕೇತಯ್ಯನನ್ನು ಹೊಗಳಿ ಉಳಿದ ಚಿನ್ನವನ್ನು ತರಿಸಿಕೊಟ್ಟನು. ಇದನ್ನು ತಿಳಿದ ಕಿನ್ನರಯ್ಯನು ಕೂಡ ಕಲಕೇತಯ್ಯನನ್ನು ಸ್ಮರಿಸುತ್ತಾನೆ.

ಕಲಕೇತ ಬೊಮ್ಮಯ್ಯನು ಶ್ರೇಷ್ಠ ಅನುಭಾವಿಗಳ ಸಾಲಿನಲ್ಲಿ ನಿಲ್ಲುತ್ತಾನೆ. ಈತನು ವೃತ್ತಿನಿರತ ವಚನಕಾರರಂತೆ ತನ್ನ ವೃತ್ತಿಯ ಪರಿಭಾಷೆಯನ್ನು ಬಳಸಿ, ತಾನು ಕಂಡುಂಡ ಅನುಭವದಿಂದ ಬಂದ ಜ್ಞಾನವನ್ನು ವಚನಗಳಲ್ಲಿ ರಚಿಸಿ, ಜನಸಾಮಾನ್ಯರ ಮನೆಮನಗಳಿಗೆ ಮುಟ್ಟಿಸುವ ಪ್ರಯತ್ನ ಮಾಡಿರುವುದು ವಿಶೇಷವೇ ಸರಿ. ಈತನದು ಧರ್ಮ ಪ್ರಸಾರ ಕಾಯಕವಾಗಿ ವೈಶಿಷ್ಟ್ಯತೆಯನ್ನು ಪಡೆದಿದೆ.

ನುಲಿಯ ಚಂದಯ್ಯ

ಚಂದಯ್ಯನ ವಚನಗಳಲ್ಲಿ, ಕಣ್ಣಿ, ಹೊಡಕೆಹುಲ್ಲು ಮುಂತಾದ ಹಗ್ಗ ಹೊಸೆಯುವ ಅಥವಾ ಕಣ್ಣಿ ಮಾಡುವ ಉಲ್ಲೇಖಗಳು ಬರುವುದರ ಜೊತೆಗೆ ಅವುಗಳ ಮೂಲಕವೇ ಕೆಲವು ವಚನಗಳು ಅಭಿವ್ಯಕ್ತಗೊಂಡಿವೆ.

ಹೊಡೆಕೆಯ ಹುಲ್ಲು ತಂದು ಹಗ್ಗ ಮಾಡಿ ಮಾರಿ ಜೀವನ ಮಾಡುವುದು ಚಂದಯ್ಯನ ವೃತ್ತಿ. "ಚಂದೇಶ್ವರಲಿಂಗ" ಎಂಬ ಅಂಕಿತದ ೪೪ ವಚನಗಳು ನುಲಿಯ ಚಂದಯ್ಯನವು ಎಂದು ಗುರುತಿಸಲಾಗಿದೆ. ಈತನ ಜೀವಿತದ ಬಗ್ಗೆ ವೀರಶೈವ ಪುರಾಣಗಳಲ್ಲಿ ಕೆಲವು ಸಂಗತಿಗಳು ತಿಳಿದುಬರುತ್ತದೆ. ಬಹುಶಃ ಈತ ಕೊರವ ಜಾತಿಗೆ ಸೇರಿದವನಾಗಿರಬೇಕೆಂದು ಊಹಿಸಬಹುದಾಗಿದೆ. ಏಕೆಂದರೆ ಇಂದಿಗೂ ಹಗ್ಗ, ಕಣ್ಣಿ ಹೊಸೆದು ಮಾರುವ ವೃತ್ತಿಯನ್ನು ಕೊರವ ಸಮುದಾಯದವರೇ ಮಾಡುತ್ತಿದ್ದಾರೆ. ಈತನದು ವಿಜಾಪುರದ ಶಿವಣಗಿ ಎಂದು ಫ.ಗು.ಹಳಕಟ್ಟಿಯವರು ಗುರುತಿಸಿದ್ದಾರೆ. ನುಲೇನೂರಿನಲ್ಲಿ ಪದ್ಮಾವತಿ ಎಂಬುವವಳು ಒಂದು ಕೆರೆಯನ್ನು ಕಟ್ಟಿಸಿದ್ದು ಅದರ ದಂಡೆಯ ಮೇಲಿನ ಒಂದು ಮಠದಲ್ಲಿಯೇ ಐಕ್ಯನಾದನು ಎಂಬ ಅಭಿಪ್ರಾಯವು ಇದೆ.

ವಚನಕಾರರು 'ಕಾಯಕ'ಕ್ಕೆ ಮಹತ್ವವಾದ ಸ್ಥಾನವನ್ನು ನೀಡಿದ್ದಾರೆ. ಅದರಂತೆಯೇ ಕಾಯಕ ತತ್ವದಡಿಯಲ್ಲಿ ಜೀವಿಸುವ ವಚನಕಾರರ ಕಾಯಕ ನಿಷ್ಠೆ, ಅಥವಾ ವೃತ್ತಿನಿಷ್ಠೆಯನ್ನು ತಿಳಿಸಲೋ ಎಂಬಂತೆ ಕಥೆಗಳು ಹುಟ್ಟಿಕೊಂಡು ಬಿಟ್ಟಿರುತ್ತವೆ. ಹಾಗೆಯೇ ನುಲಿಯ ಚಂದಯ್ಯನ ಮೇಲೂ ಕಥೆಯೊಂದು ಬೆಳಕು ಚಲುತ್ತದೆ. ಹಗ್ಗ ತಯಾರಿಸಲು ಮೆದೆ ಅಥವಾ ಹೊಡೆ ಹುಲ್ಲು ಕೊಯ್ಯುತ್ತಿದ್ದಾಗ ಕೊರಳಲ್ಲಿ ಕಟ್ಟಿಕೊಂಡಿದ್ದ ಲಿಂಗ ಬೇಕಂತಲೇ ಕೆಳಗೆ ಬೀಳುತ್ತದೆ. ಚಂದಯ್ಯ ಅದನ್ನು ನೋಡದೆ ತನ್ನ ಕೆಲಸದಲ್ಲಿಯೇ ಮಗ್ನನಾಗಿರುತ್ತಾನೆ. ತನ್ನ ಕೆಲಸ ಮುಗಿಸಿಕೊಂಡು ಹೊರಡುತ್ತಾನೆ. ಆಗ ಆ ಲಿಂಗವೇ ತನ್ನನ್ನು ಕರೆದುಕೊಂಡು ಹೋಗು ಎಂದು ಕೇಳಿಕೊಳ್ಳುತ್ತದೆ. ಅದಕ್ಕೆ 'ಹೋದದ್ದು ನೀನು, ಬರ್ತಿನಂಥಿರೋದು ನೀನು. ನನ್ನಿಂದಾಗದು' ಎಂದು ಹೊರಟು ಬಿಡುತ್ತಾನೆ. ಲಿಂಗವು ಮಡಿವಾಳ ಮಾಚಯ್ಯನ ಬಳಿ ಹೇಳಿಕೊಂಡಿತು. ಆಗ ಮಾಚಯ್ಯ ವಿಚಾರಿಸಿದಾಗ. ನನಗೆ ಲಿಂಗ ಪೂಜೆಗಿಂತ, ಜಂಗಮ ದಾಸೋಹ, ಕಾಯಕವೇ ಮಿಗಿಲು ಎಂದು ಉತ್ತರಿಸುತ್ತಾನೆ. ಇದರಿಂದ ಆ ಲಿಂಗವು ಕಾಯಕ ಮಾಡುವುದಾಗಿ ಒಪ್ಪಿಕೊಂಡು ಚಂದಯ್ಯನ ಹಿಂದೆ ಬರುತ್ತದೆ. ಚಂದಯ್ಯನ ಪರವಾಗಿ ಹಗ್ಗ ಹೊಸೆದು ಮಾರಲು ಹೋಗುತ್ತದೆ. ಅದನ್ನು ಕೊಳ್ಳುವವರಿಲ್ಲದೆ ಬಸವಣ್ಣನ ಮನೆಗೆ ತೆಗೆದುಕೊಂಡು ಹೋಗುತ್ತದೆ. ಬಸವಣ್ಣ ಅದಕ್ಕೆ ಒಂದು ಸಾವಿರ ಹೊನ್ನನ್ನು ಕೊಟ್ಟು ಕಳಿಸುತ್ತಾನೆ. ಅದು ನ್ಯಾಯವಾದ ಬೆಲೆಯಲ್ಲ ಎಂದು ಚಂದಯ್ಯ ಸಿಟ್ಟಿಗೇಳುತ್ತಾನೆ. ಹಾಗದ ರೊಕ್ಕ ತಂದರೆ ಮಾತ್ರ ಸ್ವೀಕರಿಸುವುದಾಗಿ ಹೇಳುತ್ತಾನೆ. ಇಂತಹ ಕಥೆಗಳು ವೃತ್ತಿಯನ್ನು, 'ಕಾಯಕ' ತತ್ವವನ್ನು ಬಲಿಷ್ಠಗೊಳಿಸಲು ಹುಟ್ಟಿದಂತಹವುಗಳಾಗಿವೆ. ಇಲ್ಲಿ ನಾವು ಮುಖ್ಯವಾಗಿ ಗಮನಿಸಬೇಕಾದುದು ವೃತ್ತಿಯಲ್ಲಿ ನಿರತನಾದ ವ್ಯಕ್ತಿಗೆ ತನ್ನ ವೃತ್ತಿಯೇ ಮುಖ್ಯ. ಅದು ನ್ಯಾಯ ಸಮ್ಮತ ದುಡಿಮೆ. ಅದು ಶ್ರಮ ಮೂಲವಾಗಿರಬೇಕು. ನಿಷ್ಠೆ, ಪ್ರಾಮಾಣೀಕತೆಯಿಂದಲೇ ರೂಪಗೊಂಡಿರಬೇಕು ಎನ್ನುವಂತಹದ್ದು. ಈತನ ವಚನಗಳು ಬೆಡಗು ಬಿನ್ನಾಣವಿಲ್ಲದೆ ಸರಳವಾದ ಭಾಷೆಯಲ್ಲಿ ರಚಿತಗೊಂಡಿವೆ. ವೃತ್ತಿಯ ಪರಿಭಾಷೆಯನ್ನು ಬಳಕೆ ಮಾಡಿಕೊಂಡು ತನ್ನ ಅನುಭವವನ್ನು ಹಿಡಿದಿಡುವ ಪ್ರಯತ್ನವನ್ನು ಮಾಡಿದ್ದಾನೆ.

ಹೆಂಡದ ಮಾರಯ್ಯ

ಮಾರಯ್ಯ ಹೆಂಡ ತಯಾರಿಕೆಯ ವಿಧಾನವನ್ನು ತನ್ನ ವಚನಗಳಲ್ಲಿ ಬಳಕೆ ಮಾಡಿಕೊಂಡು ಅದರ ಮೂಲಕ ಹನ್ನೆರಡನೆಯ ಶತಮಾನದ ವಚನ ಸಂಸ್ಕೃತಿಯ ಚಿಂತನೆಗಳನ್ನು ಹೇಳಿರುವುದನ್ನು ನೋಡುತ್ತೇವೆ. ಮಾರಯ್ಯನ ಹೆಸರಿನ ಜೊತೆಗಿರುವ 'ಹೆಂಡದ' ವಿಶೇಷಣ ಪದವು ಆತನ ವೃತ್ತಿಸೂಚಕ ಪದವೇ ಆಗಿದೆ. ಅಂದಿನ ಪ್ರಭುತ್ವಗಳಾದ, ರಾಜ ಪ್ರಭುತ್ವ, ಧರ್ಮ ಪ್ರಭುತ್ವ, ವ್ಯಾಪಾರಿ ಪ್ರಭುತ್ವಗಳ ಹಿಡಿತದಿಂದ ನರಳುತ್ತಿದ್ದ ಕಸುಬುದಾರರು ಒಂದೆಡೆ ಸೇರಿ, ಇವುಗಳ ವಿರುದ್ಧ ಮಾತನಾಡಲು ಶುರು ಮಾಡಿದ್ದೆ ತಮ್ಮ ವೃತ್ತಿಗಳ ಮೂಲಕ ಎಂದು ಹೇಳಲು ಆಧಾರವಾಗಿ ವಚನಕಾರರ ವೃತ್ತಿ ಉಪಕರಣಗಳ ಮೂಲಕ ಹೇಳುವ, ಅಭಿವ್ಯಕ್ತಗೊಳ್ಳುವ ಭಾವಾರ್ಥದಿಂದಲೇ ಗುರುತಿಸಬಹುದು. ಅಂದಿನ ವಾಸ್ತವದ ಪರಿಸ್ಥಿತಿಯನ್ನು ಅವಲೋಕಿಸಿದಾಗ

ವೃತ್ತಿನಿರತರ ಈ ರೀತಿಯ ಅಂದರೆ ವೃತ್ತಿಯ ಮೂಲಕ ಚಳುವಳಿಯನ್ನು ಪ್ರತಿಭಟನೆ ಮಾಡುವುದನ್ನು ನೋಡುತ್ತೇವೆ. ಇಂತಹ ಪ್ರತಿಭಟನೆಯಲ್ಲಿ ಹೆಂಡದ ಕಾಯಕವನ್ನು ಮಾಡುವ ಮಾರಯ್ಯನು ಸೇರಿಕೊಂಡು ಆ ಮೂಲಕ ಸಮಕಾಲೀನ ಸಮಾಜವನ್ನು ಮುನ್ನೆಡೆಸುವ, ಜಾಗೃತಿ ಮೂಡಿಸುವ ಪ್ರಯತ್ನ ಮಾಡುತ್ತಾನೆ.

ಮಾರಯ್ಯ ಈಡಿಗ ಅಥವಾ ಈಳಿಗ ಸಮುದಾಯದಿಂದ ಬಂದವನಾಗಿದ್ದಾನೆ. ಬಹುಶಃ ಈಳಿಗ ಸಮುದಾಯವು ಆಂಧ್ರ ಮೂಲದಿಂದ ಬಂದದ್ದು ಎಂಬ ವಾದವು ಇದೆ. ಈ ಕುರಿತು ಅಧ್ಯಯನದ ಹೊಸ ಸಾಧ್ಯತೆಗಳು ಬೇಕು. ಅಲ್ಲದೆ ಶಿವಮೊಗ್ಗ ಪರಿಸರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಈಡಿಗ ಸಮುದಾಯದ ಜನ ಇರುವುದರಿಂದ ಮತ್ತು ಅಲ್ಲಿನ ಪ್ರದೇಶದಿಂದ ಪ್ರಭಾವಿ ವಚನಕಾರರು ಬಂದಿರುವುದರಿಂದ ಮಾರಯ್ಯನು ಆ ಪ್ರದೇಶದವನಿರಬಹುದಾಗಿದೆ ಎಂದು ಅಂದಾಜಿಸಬಹುದಷ್ಟೇ. 'ಧರ್ಮೇಶ್ವರ ಲಿಂಗ' ಎಂಬ ಅಂಕಿತದಲ್ಲಿ ಹನ್ನೆರಡು ವಚನಗಳನ್ನು ಮಾರಯ್ಯ ರಚಿಸಿದ್ದಾನೆ. ಈ ವಚನಗಳು ಈತನ ವೃತ್ತಿ ಉಪಕರಣಗಳ ಮೂಲಕವೇ ಅಭಿವ್ಯಕ್ತಗೊಂಡಿವೆ ಮತ್ತು ವಚನಕಾರರ ಒಟ್ಟು ಸಿದ್ಧಾಂತಗಳು ಇಲ್ಲಿ ಪ್ರತಿಪಾದನೆಗೊಂಡಿರುವುದನ್ನು ನೋಡುತ್ತೇವೆ. ಹೆಂಡದ ಮಾರಾಟಕ್ಕೆ ಸಂಬಂಧಿಸಿದ ದೃಷ್ಟಾಂತ, ಉಪಮೆ, ರೂಪಕಗಳು ಬಳಕೆಗೊಂಡು ಕಾವ್ಯಾತ್ಮಕತೆಯನ್ನು ತಂದುಕೊಟ್ಟಿವೆ. ಲಿಂಗವಂತರಲ್ಲದ ಭವಿಗಳ ವಿಡಂಬನೆ ಲಿಂಗನಿಷ್ಟೆ ಒಳ್ಳೆಯ ಬದುಕನ್ನು ಬದುಕಬೇಕೆಂಬ ನೀತಿಬೋಧೆ ಇಲ್ಲದಿಲ್ಲ. ಈತನ ವಚನಗಳು ಸರಳವಾಗಿದ್ದು ಸಾಂಸ್ಕೃತಿಕವಾಗಿ ವೈಶಿಷ್ಟ್ಯವನ್ನು ಒಳಗೊಂಡಿವೆ.

ಹುಂಜಿನ ಕಾಳಗದ ದಾಸಯ್ಯ

ದಾಸಯ್ಯ ಹೆಸರಿನ ಜತೆ ಸೇರಿಕೊಂಡಿರುವ ವಿಶೇಷಣ ಪದದಿಂದಲೇ ಈತನ ವೃತ್ತಿಯನ್ನು ಗುರುತಿಸಲಾಗಿದೆ. ಅಲ್ಲದೆ ಈತನದೆಂದು ಹೇಳಲಾಗುವ ಒಂದೇ ಒಂದು ವಚನ ಲಭ್ಯವಿದ್ದು, ಅದರಲ್ಲಿ 'ಹುಂಜ ಸೋತಡೆ ಹಿಡಿವೆ' ಎಂಬ ಸಾಲು ಬರುತ್ತದೆ. ಇದೇ ಆತನ ವೃತ್ತಿ. ಹುಂಜದ ಕಾಳಗದಲ್ಲಿ ಪಾಲ್ಗೊಂಡು ಅಲ್ಲಿ ಬಂದದ್ದರಲ್ಲಿ ಜೀವನ ಸಾಗಿಸುವುದು. ಈತನು ವ್ರತನಿಷ್ಟ ಭಕ್ತನೆಂಬುದಕ್ಕೆ ವ್ರತಾಚರಣೆಯ ಕುರಿತು ಮಾತಾಡಿರುವುದೇ ಸಾಕ್ಷ್ಯವಾಗುತ್ತದೆ. ಇನ್ನುಳಿದಂತೆ ಈತನ ಜೀವನದ ಕುರಿತು ಮಾಹಿತಿ ಹುಡುಕುವುದು ಕಷ್ಟ ಸಾಧ್ಯ. 'ಚಂದ್ರ ಚೂಡೇಶ್ವರಲಿಂಗ' ಎಂಬುದು ಈತನ ವಚನದ ಅಂಕಿತವಾಗಿದೆ.

ಹೊಡೆಹುಲ್ಲ ಬಂಕಣ್ಣ

ಭಕ್ತಿ ಚಳುವಳಿ ತನ್ನತ್ತ ಆಕರ್ಷಿಸಿದ್ದು ಸಣ್ಣಪುಟ್ಟ ವೃತ್ತಿಗಳನ್ನು ಮಾಡುತ್ತ, ಅನುಭಾವದಲ್ಲಿ ತೊಡಗಿರುವಂತವರನ್ನು ಎಂಬುದನ್ನು ವಚನಕಾರರ ವೃತ್ತಿಗಳನ್ನು ನೋಡಿ ತಿಳಿಯಬಹುದು ಅಥವಾ ವೃತ್ತಿನಿರತರು ಭಕ್ತಿ ಚಳುವಳಿಯನ್ನು ಇಷ್ಟಪಟ್ಟು ಒಪ್ಪಿಕೊಂಡು ತಮ್ಮತನವನ್ನು ಕಂಡುಕೊಳ್ಳುವ ಪ್ರಯತ್ನ ಮಾಡಿರಬಹುದು. ಕರ್ನಾಟಕದ ಮಟ್ಟಿಗಂತೂ ಇದೊಂದು ದೊಡ್ಡ ಅಸ್ತಿತ್ವವಾದಿ

ಚಳುವಳಿ ಎಂದೇ ಹೇಳಬಹುದು. ಇದರ ಸಂಘಟಕ ಶಕ್ತಿಯಾಗಿ ಕೆಲಸ ಮಾಡಿದ ಜಮೆ ಬಸವಣ್ಣನಿಗೆ ಸಲ್ಲುತ್ತದೆ.

ಕುಲ ಮೂಲದ ಕಸುಬುದಾರರು ಈ ವಚನ ಚಳುವಳಿಗೆ ಬಂದಂತೆ ಕೃಷಿಕಾರರು, ಕೂಲಿಕಾರರು ಬಂದು ಸಾಧನೆಗೆ ತೊಡಗುವುದಲ್ಲದೆ, ಸಮಾಜದ ನಂಬಿಕೆಗಳಿಗೆ ತಾತ್ವಿಕತೆಯನ್ನು ಕೊಡುವ ಪ್ರಯತ್ನ ಮಾಡುತ್ತಾರೆ. ಗಟ್ಟಿಯಾಗಿದ್ದ ಪರಂಪರೆಯನ್ನು ಅಲ್ಲಾಡಿಸಿಬಿಡುತ್ತಾರೆ. ಅದು ವಚನಕಾರರ ಪರಿಕಲ್ಪನೆಯಾದ 'ಕಾಯಕತತ್ವ' ಅಥವಾ ವೃತ್ತಿನಿರತತೆಯಿಂದ. ಹೀಗೆ ಬಂದ ವಚನಕಾರರಲ್ಲಿ ಹೊಡೆಹುಲ್ಲ ಬಂಕಣ್ಣ ಒಬ್ಬ ಅನುಭಾವಿ ವಚನಕಾರ. ಈತನು ಬಸವಣ್ಣನ ಆಪ್ತನಾಗಿದ್ದನೆಂಬುದು ತಿಳಿದುಬರುತ್ತದೆ.

ಹುಲ್ಲು ಮಾರುತ್ತ ಜೀವನ ಮಾಡುತ್ತಿದ್ದ ಬಂಕಣ್ಣ ಬಹುಶಃ ಕೃಷಿ ಹಿನ್ನೆಲೆಯಿಂದ ಬಂದವನು. ಅಂದರೆ ಭೂಮಾಲೀಕನಾಗಿರಬೇಕೆಂತೇನು ಇಲ್ಲ. ಕೃಷಿ ಕೂಲಿಕಾರನಾಗಿರಬಹುದಾಗಿದೆ ಎಂದು ತಿಳಿಯಬಹುದು. ಈತನು ವಚನ ರಚನೆಗೆ 'ಕುಂಬೇಶ್ವರ ಲಿಂಗ', 'ಜಗನ್ನಾಥ ಸಾಕ್ಷಿಯಾಗಿ ಕುಂಬೇಶ್ವರ ಲಿಂಗ' ಎಂಬ ಅಂಕಿತವನ್ನು ಇಟ್ಟುಕೊಟ್ಟಿದ್ದಾನೆ. ಹತ್ತು ವಚನಗಳು ಲಭ್ಯವಿದ್ದು, ಅವು ಓದುಗರಿಗೆ ಸುಲಭವಾಗಿ ಅರ್ಥವಾಗುವಂತಿವೆ. ವೃತ್ತಿನಿಷ್ಠೆಯಿಂದಲೆ ಬದುಕುವ ಭಾವಜೀವಿಯಾಗಿ ಬಂಕಣ್ಣ ವಚನಗಳಲ್ಲಿ ಚಿತ್ರಿತಗೊಳ್ಳುತ್ತಾನೆ. ಈತ ಸಾಮಾಜಿಕವಾದ ವಚನಗಳ ಜತೆಗೆ ಗುರು, ಲಿಂಗ, ಜಂಗಮತತ್ವ, ವೀರಶೈವ ನಿಷ್ಠೆ ಮುಂತಾದ ವಚನಕಾರರ ಆಶಯಗಳನ್ನೊಳಗೊಂಡಿವೆ. ಆದರೂ ವೃತ್ತಿನಿಷ್ಠೆಗೆ ಹೆಚ್ಚು ಒತ್ತುಕೊಟ್ಟಿರುವುದು, ಭಕ್ತಿ ಮತ್ತು ವೃತ್ತಿಯನ್ನು ಒಂದೇರೇಖೆಯಲ್ಲಿ ನೋಡುವುದು ವೈಶಿಷ್ಟ್ಯವಾಗಿದೆ.

ಕೂಗಿನ ಮಾರಯ್ಯ

ವಚನ ಆಂದೋಲನದ ಮುಂದೆ ಅನೇಕ ಸವಾಲುಗಳು ಇದ್ದುದ್ದು ಸಾಮಾನ್ಯವಾಗಿತ್ತು. ಅದಕ್ಕೆ ಕಾಲಘಟ್ಟವು ಕೂಡ ಒಂದಾಗಿರಬಹುದು. ವಚನಕಾರರು ಕೇವಲ ತಮ್ಮನ್ನು ತಾವು ಅರಿತುಕೊಳ್ಳುವ, ಆತ್ಮೋನ್ನತಿಯ ಸಾಧನೆಯಲ್ಲಿ ತೊಡಗಿಕೊಂಡರಷ್ಟೇ ಅಲ್ಲ. ಅವರು ಬದಲಾವಣೆಯ ಬಾವುಟ ಹಿಡಿದು ಹೋರಾಟ ಮಾಡಿದವರು ಆಗಿದ್ದಾರೆ. ಮುಖ್ಯವಾಗಿ ಅವರಿಗೆ ಸನಾತನ ಪರಂಪರೆಯ ವಿರೋಧ ಒಂದು ಕಡೆ ಇದ್ದರೆ, ಪ್ರಭುತ್ವದ ವಿರೋಧ ಮತ್ತೊಂದು ಕಡೆ. ಸಾಮಾಜಿಕವಾಗಿ ಬದಲಾವಣೆಗೆ ದಾರಿ ಕಂಡುಕೊಳ್ಳುವುದರ ಜೊತೆಗೆ ಪ್ರಭುತ್ವದ ವಿರುದ್ಧವು ಕೆಲಸ ಮಾಡಬೇಕಾಗಿತ್ತು. ಹೀಗೆ ಪ್ರಭುತ್ವವನ್ನು ಎದುರು ಹಾಕಿಕೊಂಡಿರುವುದು ಅಂದಿನ ಶರಣ ಸಂಕುಲಕ್ಕೆ ಅಪಾಯವನ್ನು ತಂದೊಡ್ಡುವ ಮಟ್ಟಿಗೆ ಇರುತ್ತಿತ್ತು. ಪ್ರಭುತ್ವದ ಬಗ್ಗೆ ಮಾತಾಡದ ಅನೇಕ ವಚನಕಾರರು ಬರುತ್ತಾರೆ. ಇನ್ನೂ ಕೆಲವು ವಚನಕಾರರು ಪ್ರಭುತ್ವವನ್ನು ನಿರಾಕರಿಸಿ, ಧಿಕ್ಕರಿಸಿಯೇ ನುಡಿಯುತ್ತಾರೆ. ಕೆಲವು ವಚನಕಾರರಂತು ಮೃದು ಧೋರಣೆಯನ್ನು ತಾಳಿರುವುದನ್ನು ಗುರಿತಿಸಬಹುದು. ರಾಜ ಪ್ರಭುತ್ವದ ವ್ಯವಸ್ಥೆಯಲ್ಲಿ, ಸನಾತನ ಪರಂಪರೆಯ ಹೇರಿಕೆಯಲ್ಲಿ ಜನ ನಲುಗಿ ಬಿಟ್ಟಿದ್ದರು. ಇಂತಹ ಸಂದರ್ಭದಲ್ಲಿ ವಚನ ಚಳುವಳಿ ಹೊಸ ಚೈತನ್ಯ ತುಂಬುವ ಕೆಲಸ ಮಾಡುತ್ತಿತ್ತು.

ಇದನ್ನು ಸಹಿಸದ ಮೂಲಭೂತ ಪರಂಪರೆ ಮತ್ತು ಪ್ರಭುತ್ವವು ವಚನಕಾರರ ಮೇಲೆ ದಾಳಿ ನಡೆಸಲಾರಂಭಿಸಿತು. ಇಂತಹ ದಾಳಿಯಿಂದ ತಪ್ಪಿಸಿಕೊಳ್ಳಲು ಅಥವಾ ತಮ್ಮನ್ನು ತಾವು ಕಾಪಾಡಿಕೊಳ್ಳಲು ಯುದ್ಧ ಅನಿವಾರ್ಯವಾಗಿತ್ತು. ಆದ್ದರಿಂದಲೇ ಕೆಲವು ವಚನಕಾರರು ಕತ್ತಿ ಹಿಡಿದು ಹೋರಾಟವನ್ನು, ಯದ್ಧವನ್ನು ಮಾಡುತ್ತಿದ್ದರು. ಇದು ಅನಿವಾರ್ಯವು ಆಗಿತ್ತು. ಇದಕ್ಕಾಗಿ ಒಂದು ಸೈನ್ಯವು ಸಿದ್ಧಗೊಂಡಿರಬೇಕೆಂದು ವಿದ್ವಾಂಸರು ಗುರುತಿಸಿದ್ದಾರೆ. ಇದಕ್ಕೆ ಮಡಿವಾಳ ಮಾಚಯ್ಯನನ್ನು ಉದಾಹರಿಸಬಹುದಾಗಿದೆ. ಅಲ್ಲದೇ ಅನೇಕ ವಚನಕಾರರು ಈ ಸೈನ್ಯದಲ್ಲಿದ್ದರೆಂದು ಕಾಣುತ್ತದೆ. ಎದುರಾಳಿ ಸೈನ್ಯ ದಾಳಿ ಮಾಡಿದ ಸುದ್ಧಿ ತಲುಪಿಸುವ ಕಾವಲುಗಾರರು ಬೇಕಾಗಿದ್ದರು. ವಚನಕಾರರಲ್ಲಿ ಆ ಕಾಯಕವನ್ನು ಮಾಡುವವರು ಇದ್ದರೆಂದು ಕಂಡು ಬರುತ್ತದೆ.

'ಮಹಾಮಹೀಮಾ ಮಾರೇಶ್ವರಾ' ಎಂಬ ಅಂಕಿತದಲ್ಲಿ ವಚನಗಳನ್ನು ರಚಿಸಿರುವ ಮಾರಯ್ಯ ಸೈನ್ಯವನ್ನು ಎಚ್ಚರಿಸಿ ಎದುರಾಳಿಗಳು ಬರುವ ಸೂಚನೆಯನ್ನು ನೀಡುತ್ತಿದ್ದನೆಂದು, ಹಾಗಾಗಿ ಈತನಿಗೆ ಕೂಗಿನ ಮಾರಯ್ಯ ಎಂಬ ಹೆಸರು ಬಂದಿರಬಹುದೆಂದು ನಿರ್ಣಯಿಸಲಾಗಿದೆ.

ಕಲ್ಯಾಣದ ಅನುಭವ ಮಂಟಪದಲ್ಲಿ ನಡೆಯುತ್ತಿದ್ದ ಗೋಷ್ಠಿಯಲ್ಲಿ ಈತ ಭಾಗವಹಿಸುತ್ತಿದ್ದನೆಂದು, ಪರ್ವತೇಶನ 'ಚತುರಾಚಾರ್ಯ ಪುರಾಣ'ದಲ್ಲಿವುದರಿಂದ ತಿಳಿದು ಬರುತ್ತದೆಂದು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಅನುಭಾವಿಯಾಗಿರುವ ಈತನ ವಚನಗಳಲ್ಲಿ ಆಧ್ಯಾತ್ಮಿಕ ಅಂಶಗಳನ್ನು, ಸಾಮಾಜಿಕ ಕಳಕಳಿಯನ್ನು, ವೃತ್ತಿ ನಿರತ ಮನೋಭಾವವನ್ನು, ಕಾಯಕದ ಶ್ರೇಷ್ಠತೆಯನ್ನು ಗುರುತಿಸಲು ಸಾಧ್ಯವಿದೆ.

ದಾಸೋಹದ ಸಂಗಣ್ಣ

ಮಾತುಳಂಗ ಮಧುಕೇಶ್ವರ ಎಂಬ ಅಂಕಿತನಾಮದಲ್ಲಿ ೧೦೨ ವಚನಗಳು ಸಿಕ್ಕಿದ್ದು ಅವು ದಾಸೋಹದ ಸಂಗಣ್ಣನ ರಚನೆಗಳು ಎಂದು ಹೇಳಲಾಗುತ್ತದೆ. ಈತನು ಬನವಾಸಿಯ ಮಧುಕೇಶ್ವರನ ಭಕ್ತನಾಗಿದ್ದನು. ಈತನ ಜೀವಿತದ ಬಗೆಗೆ ಹೆಚ್ಚಿನ ವಿವರಗಳೇನು ಸಿಗದ ಕಾರಣ ಈತನ ವೃತ್ತಿ ದಾಸೋಹ ಮಾಡುವುದು. ಅನ್ನ ಸಂತರ್ಪಣೆ ಮಾಡುವುದು ಈತನ ಕಾಯಕ ಎಂದು ಕವಿಚರಿತೆಕಾರರು ಗುರುತಿಸಿದ್ದಾರೆ. ದಾಸೋಹದ ವೃತ್ತಿ ಎಂದಾದರೆ ಬಹುಶಃ ಸಂಗಣ್ಣ ಕಲ್ಯಾಣದ ಮಹಾಮನೆಯಲ್ಲಿ ದಾಸೋಹದ ಉಸ್ತುವಾರಿಯಾಗಿಯೋ? ಮೇಲ್ವಿಚಾರಕ ಅಥವಾ ಸಿಬ್ಬಂದಿಯಾಗಿಯೋ? ವೃತ್ತಿಯನ್ನು ಮಾಡುತ್ತಿದ್ದಿರಬೇಕೆನಿಸುತ್ತದೆ. ದಾಸೋಹ ಎಂದರೆ ಹಂಚಿಕೆಯೇ ಆಗಿದೆ. ಈ ಅಂಚಿಕೆಯು ವೃತ್ತಿಯಾಗುವುದಕ್ಕಿಂತ ಮುಂಚೆ ಆದಾಯದ, ವರಮಾನದ, ಕಾಯಕ ಅಥವಾ ವೃತ್ತಿ ಹೊಂದಿರಬೇಕು. ಏಕೆಂದರೆ ಕಾಯಕದಿಂದ ಬಂದುದು ಲಿಂಗಕ್ಕರ್ಪಿತ, ಜಂಗಮಕ್ಕರ್ಪಿತ ಎಂಬ ನಿಲುವು ವಚನಕಾರರದ್ದು. ಈ ದಿಸೆಯಲ್ಲಿ ಹೆಚ್ಚಿನ ಅಧ್ಯಯನ ಸಾಧ್ಯತೆಗಳು ಕಂಡುಬರುತ್ತವೆ ಮತ್ತು ಚರಿತ್ರೆ ಒದಗಿಸುವ ವಿವರಣೆಯ ಕೊರತೆ ಸಂಗಣ್ಣನ ಜೀವಿತ ವಿವರಗಳ ಬಗ್ಗೆ, ಆತನ ವೃತ್ತಿಯ ಬಗ್ಗೆ ಮೌನಿಯಾಗಿಸಿಬಿಡುತ್ತದೆ.

ಈತನ ವಚನಗಳಲ್ಲಿ ಗುರು, ಲಿಂಗ, ಜಂಗಮ ಸೇವೆ, ಕಾಯಕತತ್ವ ಸಿದ್ಧಾಂತ, ವೀರಶೈವ ನಿಷ್ಠೆ, ಪ್ರಾಮಾಣಿಕತೆ, ಸತ್ಯ ಶುದ್ಧಜೀವನ ಮುಂತಾದ ತಾತ್ವಿಕ ಆಶಯಗಳು ಹೆಚ್ಚಿನ ಮಟ್ಟದಲ್ಲಿಯೇ ಪ್ರತಿಪಾದನೆಗೊಂಡಿವೆ. ಹೋಲಿಕೆ, ರೂಪಕ, ಉಪಮೆಗಳು ವಚನಗಳ ಶಕ್ತಿಯನ್ನು ಹೆಚ್ಚಿಸಿ ವೈಶಿಷ್ಟ್ಯಪೂರ್ಣ ಅಭಿವ್ಯಕ್ತತೆಯನ್ನು ತಂದಿವೆ. ಅರಿವಿನ ಆಳಕ್ಕೆ ಇಳಿಯುವ ಈತನ ವಚನಗಳ ಭಾವಾರ್ಥವು ಸಾಮಾನ್ಯ ಗ್ರಹಿಕೆಗೆ ನಿಲುಕುವುದು ಕಠಿಣವಾಗಿವೆ. ಅಲೌಕಿಕದ ಜಾಡನ್ನು ತೋರಿಸುತ್ತವೆ.

ಸೂಜಿ ಕಾಯಕದ ರಾಮಿತಂದೆ

ವೃತ್ತಿಸೂಚಕ ಪರಿಭಾಷೆಯಲ್ಲಿ ವಚನಗಳನ್ನು ಕಟ್ಟಿರುವ ಅನೇಕ ವಚನಕಾರರ ವೃತ್ತಿಗಳನ್ನು ಅವರ ಜೀವಿತದ ವಿವರಗಳನ್ನು ಅವರ ವಚನಗಳ ಮೂಲಕವೇ ಕಟ್ಟುವುದು ತುಂಬ ಕಷ್ಟಕರ ಸಂಗತಿ. ಕೆಲವು ವಚನಕಾರರ ಕುರಿತು ಅವರ ಇತಿವೃತ್ತದ ಕುರಿತು ಸಾಮಾನ್ಯ ಮಾಹಿತಿಯು ಅಲಭ್ಯವಾಗಿರುವುದನ್ನು ನೋಡುತ್ತೇವೆ. ಹಾಗಾಗಿ ಅಧ್ಯಯನಕಾರರು ವಿಷಾದಕಾರರಾಗಿಯೇ ಉಳಿದಿದ್ದಾರೆ.

ರಾಮಿತಂದೆಯ ಹತ್ತು ವಚನಗಳು ಉಪಲಬ್ಧವಿವೆ. ಈತನ ವಚನಗಳಲ್ಲಿ ಬಟ್ಟೆ ಹೊಲಿಯುವ ಉಪಕರಣಗಳು ಹೆಚ್ಚಾಗಿ ಬಳಕೆಗೊಂಡಿರುವುದರಿಂದ ಈತನದು ಬಟ್ಟೆ ಹೊಲಿಯುವ ವೃತ್ತಿಯವನು ಎಂದು ನಿರ್ಧರಿಸಬಹುದಾಗಿದೆ. 'ಪ್ರಸನ್ನ ಕಪಿಲಸಿದ್ಧ ಮಲ್ಲಿಕಾರ್ಜುನ ಲಿಂಗ' ಎಂಬ ಅಂಕಿತದಲ್ಲಿ ವಚನಗಳು ರಚಿತಗೊಂಡಿವೆ. ತನ್ನ ತಿಳಿವಳಿಕೆಯನ್ನು ಬೆಡಗಿನ ಭಾಷೆಯಲ್ಲಿ ಅಭಿವ್ಯಕ್ತಿಸುವ ಈತನ ವಚನಗಳು ಹಲವು ಆಯಾಮದ ಅಭಿವ್ಯಕ್ತಿಯ ಸ್ವರೂಪವನ್ನು ಪಡೆದುಕೊಂಡಿವೆ. ತನ್ನ ವೃತ್ತಿನಿರತತೆಯಿಂದಲೇ ವಚನಗಳನ್ನು ಬೆಳಗಿಸುವ ಕೆಲಸ ಮಾಡಿರುವುದನ್ನು ಕಾಣುತ್ತೇವೆ. 'ಕಾಲು ಕುಪ್ಪಸವ ಮೇಲಾಗಿ ಹೊಲಿದೆ, ಅಂಗದ ಕುಪ್ಪಸವ ಮಂಡೆಗೆ ಹೊಲಿದೆ' ಎಂಬ ಸಾಲಿನ ವಚನದಿಂದಲೇ ಈತನ ಬಟ್ಟೆ ಹೊಲಿಯುವ ವೃತ್ತಿಯನ್ನು ಗುರುತಿಸಬಹುದಾಗಿದೆ. ಹತ್ತು ವಚನಗಳು ವೃತ್ತಿಸೂಚಕ ಪದಗಳಿಂದಲೇ ಸೂಜಿ, ದಾರ, ಕುಪ್ಪಸ, ಚಿಪ್ಪು, ಅಲ್ಲದೆ ತಾನು ವೃತ್ತಿ ಮಾಡುವ ವಿಧಾನವನ್ನೇ ರೂಪಕ, ಉಪಮೆಯಾಗಿ ಬಳಕೆ ಮಾಡಿಕೊಂಡು ಶಿವತತ್ವವನ್ನು ಹೇಳುತ್ತಾನೆ. ಈ ವಚನಗಳಲ್ಲಿ ಅಭಿವ್ಯಕ್ತಿಗೊಳ್ಳುವ ವೃತ್ತಿತತ್ವ ಅಥವ ಕಾಯಕತತ್ವ ವೃತ್ತಿ ಪರಿಭಾಷೆಯಲ್ಲಿ ಸಾಂಕೇತಿಕವಾಗಿ ಬಳಕೆಗೊಂಡಿರುವುದು ವೃತ್ತಿನಿಷ್ಠೆಯ ಅನನ್ಯತೆಯನ್ನು ತಿಳಿಸುತ್ತದೆ.

ಕಾಮಾಟದ ಭೀಮಣ್ಣ

ವಚನಗಳ ಅಭಿವ್ಯಕ್ತಿಯಲ್ಲಿ ಬಳಕೆಗೊಂಡಿರುವ ವೃತ್ತಿಯ ಪರಿಕರಗಳ ಪರಿಭಾಷೆಯ ಆಧಾರದ ಮೇಲೆಯೇ ಅನೇಕ ವಚನಕಾರರ ವೃತ್ತಿಗಳನ್ನು, ಅವರ ಸಮುದಾಯ, ಜಾತಿಯನ್ನು ಗುರುತಿಸುವುದು ಸಾಮಾನ್ಯ. ಇನ್ನೂ ಕೆಲವು ವಚನಕಾರರಲ್ಲಿ ಅನೇಕ ವಚನಕಾರರ ಬಗೆಗೆ, ವಚನ ಚಳುವಳಿಯ ನಂತರದ ಕವಿಗಳ, ಅನುಭಾವಿಗಳ ಕೃತಿ, ಕಾವ್ಯ, ಪುರಾಣಗಳಲ್ಲಿ ಉಲ್ಲೇಖಗೊಂಡಿರುವ ಕಥೆ, ಅಥವಾ ಮಾಹಿತಿ ಈ ಬಗೆಯ ಗುರುತಿಸುವಿಕೆಯ ಮೂಲ ಆಧಾರಗಳಾಗಿ ನಿಲ್ಲುತ್ತವೆ.

ಹೆಚ್ಚು ವಚನಗಳನ್ನು ರಚಿಸದ ಅಥವಾ ದೊರೆಯದ ವಚನಕಾರರನ್ನು ಮತ್ತು ಅವರ ಜೀವನದ ಕುರಿತು ಮಾಹಿತಿಯನ್ನು ಹುಡುಕುವುದು ತುಂಬ ಕಷ್ಟಕರವಾದುದಾಗಿದೆ. ಅಲ್ಲದೆ ಅವರ ಬಗೆಗಿನ ಉಲ್ಲೇಖಗಳು, ಶಾಸನಗಳು, ಕೃತಿ, ಪುರಾಣ, ಕಥೆಗಳು ದೊರಕದೇ ಇರುವುದು, ಅಥವಾ ಅಂತವರ ಬಗ್ಗೆ ಮಾಹಿತಿ ಸಿಗದಿದ್ದರೇ ಅಂತವರನ್ನು ನಿರ್ಲಕ್ಷ್ಯಕ್ಕೊಳಗಾದವರೆಂದು ಕರೆಯಬಹುದೆ? ಹೀಗೆ ನಗಣ್ಯವೆಂದು, ಪ್ರಮುಖವಲ್ಲದ ಕವಿಗಳನ್ನು, ವಚನಕಾರರನ್ನು ಉದ್ದೇಶ ಪೂರ್ವಕವಾಗಿ ಬಿಡಲಾಗಿದೆಯೋ? ತಿಳಿಯದು. ಇರಲಿ. ಹೀಗೆ ಅನೇಕ ವಚನಕಾರರ ಬಗ್ಗೆ ಪೂರ್ಣ ಮಾಹಿತಿಯೇ ಸಿಗದೆ ಅಂತವರ ಜೀವನ, ಸಾಧನೆ ಮೇಲೆ ಬೆಳಕು ಚಲ್ಲುವುದು ಕಠಿಣ. ಈ ರೀತಿಯಲ್ಲಿ ಅನೇಕ ವಚನಕಾರರು ಸಿಗುತ್ತಾರೆ. ಇಂತವರಲ್ಲಿ ಕಾಮಾಟದ ಭೀಮಣ್ಣ ಒಬ್ಬ ವಚನಕಾರನಾಗಿದ್ದಾನೆ.

"ಧಾರೇಶ್ವರ" ಎಂಬ ಅಂಕಿತದಲ್ಲಿ ನಾಲ್ಕು ವಚನಗಳು ಲಭ್ಯವಿದ್ದು, ಇವು ಕಾಮಾಟದ ಭೀಮಣ್ಣನ ವಚನಗಳಾಗಿವೆ. ಅನುಭವ ಮಂಟಪಕ್ಕೆ ವಿವಿದ ಕುಲ ಮೂಲಗಳಿಂದ, ಜಾತಿ ಮೂಲದಿಂದ, ವೃತ್ತಿ ಮೂಲದಿಂದ ಅನುಭಾವಿಗಳು ಹರಿದು ಬಂದು, ತಮ್ಮ ಅನುಭವಗಳಿಗೆ ವಿಶಿಷ್ಠ ಶಕ್ತಿಯಾದ ವಚನ ಚಳುವಳಿಯ ಮೂಲ ಆಶಯಗಳಾದ ಕಾಯಕ, ದಾಸೋಹ, ಶಿವನಿಷ್ಠೆ ಮುಂತಾದ ಸಿದ್ಧಾಂತಗಳನ್ನು ಮೈಗೂಡಿಸಿಕೊಂಡು ಕಾರ್ಯ ಪ್ರವೃತ್ತರಾಗುತ್ತಿದ್ದರು. ಅನುಭವ ಮಂಟಪಕ್ಕೆ ಬಂದು ಭೀಮಣ್ಣನು ಕೂಡ ಅನುಭಾವಿಯಾಗಿದ್ದಾನೆ. ಈತನ ವಚನಗಳು ಬೆಡಗಿನ ಶೈಲಿಯನ್ನು ಹೊಂದಿದ್ದು, ಆಧ್ಯಾತ್ಮಿಕ ಸಾಧನೆಯ ದಾರಿಗಳಾಗಿವೆ.

ಮನೆ ಕಟ್ಟುವುದು ಈತನ ವೃತ್ತಿ ಎಂದು ಗುರುತಿಸಲಾಗಿದೆ. ಈತನ ವಚನಗಳಲ್ಲಿ ಬಳಕೆಗೊಂಡಿರುವ ಮನೆಯ ಅಥವಾ ಮನೆ ಕಟ್ಟುವ ಸಾಮಾಗ್ರಿಗಳಿಂದ ಈತನ ವೃತ್ತಿಯನ್ನು ನಿರ್ಧರಿಸಲಾಗಿದೆ. ಕಂಬ, ತೊಲೆ, ಮನೆ, ಆಯ, ಅಳತೆಕೋಲು ಮುಂತಾದ ವೃತ್ತಿ ಪಾರಿಭಾಷಿಕ ಪದಗಳು ವಚನಗಳಲ್ಲಿ ಬಳಕೆಗೊಂಡಿವೆ.

ನಗೆಯ ಮಾರಿತಂದೆ

ಜನಪದ ಕಲಾ ಪ್ರಕಾರದಲ್ಲಿ ಕಾಣಬಹುದಾದ ನಗೆಯ ಕಾಯಕ ಜನಪ್ರಿಯತೆಯ ಜತೆಗೆ ಧರ್ಮ ಪ್ರಸಾರದ ಸ್ಥಾನವನ್ನು ಗಳಿಸಿಕೊಂಡಿದೆ. ಯಾವುದೇ ಧರ್ಮದ ಸ್ಥಾಪನೆಯ ನಂತರದ ಕೆಲಸವೆಂದರೇ ಆ ಧರ್ಮದ ಅನನ್ಯತೆಯನ್ನು ಉಳಿಸಿಕೊಳ್ಳುವುದು, ಬೆಳೆಸುವುದು ಜವಾಬ್ದಾರಿಯಾಗಿರುತ್ತದೆ. ಅದನ್ನು ಜನತೆಯ ಹತ್ತಿರಕ್ಕೆ ಕೊಂಡೊಯ್ದು ಮುಟ್ಟಿಸುವ ಕೆಲಸ ನಡೆಸಬೇಕಾಗುತ್ತದೆ. ಆ ಸಂದರ್ಭದಲ್ಲಿ ಪಟ್ಟಭದ್ರ ಪರಂಪರೆಯ ವಿರುದ್ಧ ವಾದಕ್ಕೆ, ಸಮರ್ತನೆಗೆ ಇಳಿಯಬೇಕಾಗುತ್ತದೆ. ಹಾಗಾಗಿ ವೀರಶೈವ ಪರಂಪರೆಯು ಪ್ರಾರಂಭದ ಬಳಿಕ ಈ ರೀತಿಯ ಧರ್ಮ ಪ್ರತಿಪಾದಕರಾಗಿ, ಪ್ರಚಾರಕರಾಗಿ ಅನೇಕ ವಚನಕಾರರು ಇದ್ದುದನ್ನು ನೋಡುತ್ತೇವೆ. ಅನೇಕ ಕಾವ್ಯ ಪುರಾಣಗಳಲ್ಲಿ ಈ ಬಗ್ಗೆ ಪ್ರಸ್ತಾಪ ಸಿಗುತ್ತದೆ. ಈ ದಿಸೆಯಲ್ಲಿ ಮಾರಿತಂದೆಯು

ನಗೆಯ ಕಾಯಕದ ಮೂಲಕ ಜನತೆಗೆ ಅರಿವು ಮೂಡಿಸುವ ವೃತ್ತಿಯನ್ನು ಮಾಡುತ್ತಿರಬೇಕು. ಇದಕ್ಕೆ 'ಗುರು ವಿರೂಪಾಕ್ಷ' ಎಂಬ ಅಂಕಿತದ ರಗಳೆಯಲ್ಲಿ ಜನರನ್ನು ನಗಿಸುವುದು ಈತನ ಕಾಯಕ ಎಂದಿದೆ. ತನ್ನ ಹಾಸ್ಯಪ್ರವೃತ್ತಿಯಿಂದಲೇ ಶಿವನನ್ನು ಒಲಿಸಿಕೊಂಡು ಕೈಲಾಸಕ್ಕೆ ಹೋಗಿ ಗಣಪದವಿಯನ್ನು ಪಡೆದನು ಎಂದು ತಿಳಿಯುತ್ತದೆ. ವಚನಕಾರನಾದ ಈತನು ತನ್ನ ಅನೇಕ ವಚನಗಳಲ್ಲಿ ತನ್ನ ಹಾಸ್ಯಪ್ರವೃತ್ತಿಯನ್ನು ತೋರಿಸಿರುವುದನ್ನು ನೋಡುತ್ತೇವೆ. 'ನಗೆಯ ಚಿತ್ತದ ಕಾಯಕ', 'ಎನ್ನ ಚಿತ್ತದಲ್ಲಿ ತಲೆದೋರಿ ನೀನಾಡಿಸಿದಂತೆ ಆಡಿದೆ' ಮುಂತಾಗಿ ವಚನಗಳಲ್ಲಿ ಬರುವ ಸಾಲುಗಳಿಂದ ಈತನ ವೃತ್ತಿಯನ್ನು ಗುರುತಿಸಬಹುದಾಗಿದೆ.

'ಆತುರ ವೈರಿ ಮಾರೇಶ್ವರಾ' ಎಂಬ ಅಂಕಿತದಲ್ಲಿ ೧೦೧ ವಚನಗಳು ಉಪಲಬ್ಧವಿವೆ. ತೀರಾ ಸಾಮಾಜಿಕವೆನಿಸುವಂತ ವಚನಗಳೇ ಹೆಚ್ಚು ಇದ್ದು ಸರಳ ಓದಿಗೆ ನಿಲುಕುವಂತಿವೆ. ವೀರಶೈವ ತತ್ವ ಸಿದ್ಧಾಂತಗಳ ಪ್ರತಿಪಾದನೆ, ಭಕ್ತನ ಗುಣ ವಿಶೇಷತೆಗಳನ್ನು ವಿವರಿಸುವಂತ ಕೆಲವು ವಚನಗಳು ಇವೆ. ಈತ ತನ್ನ ವೃತ್ತಿಯ ಪರಿಕರಗಳನ್ನು ಅಂದರೆ ಕಲೆಯ ಪ್ರಕಾರದ ಕುರಿತು ನೀಡಿರುವ ಗುರುತಿನಿಂದಲೇ ಈತನ ವೃತ್ತಿಯ ವೈಶಿಷ್ಟ್ಯತೆಯನ್ನು ಗುರುತಿಸಬಹುದಾಗಿದೆ.

ತಳವಾರ ಕಾಮಿದೇವಯ್ಯ

ಈತನ ಹೆಸರಿನ ಹಿಂದಿರುವ ವಿಶ್ಲೇಷಣ ಪದದಿಂದಲೇ ಈತನ ವೃತ್ತಿಯನ್ನು ನಿರ್ಧರಿಸುವ ಅನಿವಾರ್ಯತೆ ಈತನ ಜೀವನದ ವಿವರಗಳು ಅಲಭ್ಯತೆಯಿಂದಾಗಿದೆ. 'ಕಾಮಹರ ಪ್ರಿಯ ರಾಮನಾಥ' ಎಂಬ ಅಂಕಿತದಲ್ಲಿ ಹತ್ತು ವಚನಗಳು ಲಭ್ಯವಿವೆ. ಅವು ತಳವಾರ ಕಾಮಿದೇವಯ್ಯನದೆಂದು ತಿಳಿಯಲಾಗಿದೆ. ವಚನಕಾರರ ಜತೆಗೆ ಅನುಭವ ಮಂಟಪದಲ್ಲಿ ಪಾಲ್ಗೊಂಡು ಜ್ಞಾನ ವಿಸ್ತರಣೆಯನ್ನು ಮಾಡಿಕೊಂಡು ವಚನಗಳ ರಚನೆಯ ಮೂಲಕ ತನ್ನ ತಿಳುವಳಿಕೆಯನ್ನು ಪ್ರಕಟಿಸುವ ಪ್ರಯತ್ನ ಮಾಡಿದ್ದಾನೆ. ಈತನ ವಚನಗಳು ಸರಳವಾಗಿ, ಸಹಜವಾಗಿ ಮೂಡಿಬಂದಿರುವುದನ್ನು ನೋಡುತ್ತೇವೆ. ಕೆಲವು ವಚನಗಳಲ್ಲಿ ತನ್ನ ಅನುಭವವನ್ನು ಕಟ್ಟಿಕೊಡುವ ಪ್ರಯತ್ನ ಮಾಡಿದ್ದಾನೆ. ಈತನ ವೃತ್ತಿಯು ಅಥವಾ ವೃತ್ತಿಯ ಉಪಕರಣಗಳು ವಚನಗಳಲ್ಲಿ ಕಾಣದೆ ಸಾಮಾಜಿಕವಾಗಿ ಅಭಿವ್ಯಕ್ತಿಗೊಳ್ಳುವುದನ್ನು ಕಾಣುತ್ತೇವೆ. ಆದರೆ ವಚನಕಾರರ ಮುಖ್ಯ ಸಿದ್ಧಾಂತವಾದ ಕಾಯಕತತ್ವದ ಪಾಲನೆ, ಪ್ರತಿಪಾದನೆಯನ್ನು ಗುರುತಿಸಬಹುದಾಗಿದೆ. ಇನ್ನುಳಿದಂತೆ, ನೀತಿ ಬೋಧನೆ, ಸಮಾಜದ ಟೀಕೆ, ಗುರು, ಲಿಂಗ, ಜಂಗಮ ನಿಷ್ಠೆ ವಚನಗಳಲ್ಲಿ ಮುಖ್ಯ ಚಿಂತನೆಗಳಾಗಿವೆ.

ಜೋದರ ಮಾಯಣ್ಣ

'ಶಂಭು ಸೋಮನಾಥಲಿಂಗ' ಅಂಕಿತದಲ್ಲಿ ರಚಿಸಲ್ಪಟ್ಟಿರುವ ಐದು ವಚನಗಳು ಸಿಕ್ಕಿದ್ದು ಅವು ಜೋದರ ಮಾಯಣ್ಣನ ರಚನೆಗಳು ಎಂದು ಗುರುತಿಸಲಾಗಿದೆ. ಮಾಯಣ್ಣ ಬಿಜ್ಜಳನ ಆಸ್ಥಾನದಲ್ಲಿ ಆನೆಯ ಪಡೆಯ ಮೇಲಾಧಿಕಾರಿಯಾಗಿದ್ದನೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ.

ಮಾಯಣ್ಣ ಪ್ರಭುತ್ವದ ಆಡಳಿತಾಂಗದ ಹುದ್ದೆಗಳ ಚಿತ್ರಣಗಳ ಮೂಲಕವೇ ವಚನಗಳನ್ನು ಕಟ್ಟಿದ್ದು, ಅದರ ಮೂಲಕ ಈತ ಪ್ರಭುತ್ವದ ಅಧೀನದಲ್ಲಿ ಅಂದರೆ ಬಿಜ್ಜಳನ ಆಸ್ಥಾನದಲ್ಲಿ ಕೆಲಸವನ್ನು ಮಾಡುವವನಾಗಿದ್ದನೆಂದು ಊಹಿಸಬಹುದಾಗಿದೆ. ಅದಕ್ಕೆ ಪೂರಕವಾಗಿ ಆನೆ ಪಡೆಯ ಮೇಲಾಧಿಕಾರಿಯಾಗಿ ವೃತ್ತಿ ಮಾಡುತ್ತಿದ್ದನೆಂದು ತಿಳಿಯಬಹುದಾಗಿದೆ. ಅಲ್ಲದೇ ಈತನ ಮೇಲಿರುವ ಐತಿಹ್ಯದ ಕಥೆಯು ಬಲವನ್ನು ನೀಡುತ್ತದೆ. ಒಮ್ಮೆ ವೇಶ್ಯೆಯೊಬ್ಬಳು ತನ್ನ ವಿಟನಲ್ಲಿ ಆನೆಯನ್ನು ತರಲು ಕೇಳುತ್ತಾಳೆ. ಆಗ ವಿಟನು ಬಸವಣ್ಣನಲ್ಲಿಗೆ ಹೊರಟನು. ಅದೇ ಮಾರ್ಗವಾಗಿ ಮಾಯಣ್ಣ ಬರುತ್ತಿದ್ದನು. ಮಾಯಣ್ಣ ಅವನನ್ನು ವಿಚಾರಿಸಲಾಗಿ ತಾನೇ ಬಿಜ್ಜಳನ ಪಟ್ಟದಾನೆಯನ್ನು ಕೊಡಲು ಒಪ್ಪಿ ಕೊಟ್ಟು ಕಳಿಸುತ್ತಾನೆ. ಈ ವಿಷಯ ತಿಳಿದ ಬಿಜ್ಜಳ ಇವರನ್ನು ವಿಚಾರಿಸಲಾಗಿ ಪಟ್ಟದಾನೆ ಆಸ್ಥಾನದಲ್ಲೇ ಇರುವುದಾಗಿ ಮಾಯಣ್ಣ ತಿಳಿಸುತ್ತಾನೆ. ಅದನ್ನು ಪರೀಕ್ಷಿಸಿದಾಗ ಆನೆ ಅಲ್ಲೇ ಇದ್ದುದು ಕಂಡುಬರುತ್ತದೆ. ಅಲ್ಲದೆ ಆ ವೇಶ್ಯೆಯ ಮನೆಯ ಮುಂದೆ ಅಂತಹದ್ದೇ ಆನೆ ಇರುತ್ತದೆ. ನಂತರ ಬಿಜ್ಜಳ ಮಾಯಣ್ಣನ ಪವಾಡವನ್ನು ಕಂಡು ಬೆರಗಾಗಿ ಆತನನ್ನು ಗೌರವಿಸುತ್ತಾನೆ. ಇಂತಹ ಪವಾಡದ ಕತೆ ಏನೇ ಇರಲಿ. ಈ ಕತೆಯ ಮೂಲಕ ಆತನ ಜಂಗಮಸೇವೆ, ದಾಸೋಹ ಗುಣ, ಕಾಯಕ ನಿಷ್ಠೆ, ಸತ್ಯಶುದ್ಧ ಭಕ್ತಿ ಜೀವನವನ್ನು ಗುರುತಿಸುವ ಪ್ರಯತ್ನ ಮಾಡಬಹುದಾಗಿದೆ.

ದಸರಯ್ಯ

ಸಮಾಜದ ನಿರ್ಮಾಣಕ್ಕೆ ಅನೇಕ ಮೌಲ್ಯಗಳು ಬೇಕಾಗುತ್ತವೆ. ಧರ್ಮದ ಸ್ಥಾಪನೆ, ಪ್ರತಿಪಾದನೆಗೆ ಮಾನವೀಯಗುಣಗಳ ಮಿಶ್ರಣಬೇಕಾಗುತ್ತದೆ. ಯಾವುದೇ ಧರ್ಮವನ್ನು ಕಟ್ಟಲು ಅಥವಾ ಬೆಳೆಸಲು ಆ ಸಮಾಜದಲ್ಲಿರುವಂತ ಜನಸಮುದಾಯಗಳ ಆಶೋತ್ತರಗಳಿಗೆ ಅನುಗುಣವಾದ ಅಥವಾ ಸಮಾಜದಲ್ಲಿರುವ ಜನತೆಯ ಏಳ್ಗೆಯನ್ನೇ ಕಾಣುವಂತಹ ಪರಿಕಲ್ಪನೆಗಳು ಅವಶ್ಯಕ. ಯಾವುದೇ ಧರ್ಮದ ಸಿದ್ಧಾಂತಗಳನ್ನು ನೋಡಿದರು ಅಲ್ಲಿ ಬಾಹ್ಯ ಆಚರಣೆಗಳಿಗಿಂತ, ಅಂತರಂಗದ ಒಳಗೆ ನಡೆಯುವಂತ ಆಚಾರಕ್ಕೆ ಒತ್ತು ನೀಡಲಾಗಿದೆ. ಮನುಷ್ಯನ ಒಳಗನ್ನು ಅರಿವಿನ ಮೂಲಕ ಜಾಗೃತಗೊಳಿಸುವಂತ ಕೆಲಸ ನಡೆಯುತ್ತಿರುತ್ತದೆ. ಇದನ್ನು ಭಕ್ತಿ ಚಳುವಳಿಯು ಕೂಡ ಮಾಡಿತು. ಅನೇಕ ಬಗೆಯಲ್ಲಿ ಮಾನವನ ಉದ್ಧಾರವೇ ಪ್ರಧಾನ ವಸ್ತುವಾಗಿತ್ತು. ಆ ಮೂಲಕ ಒಂದು ಹೊಸ ಮನುಷ್ಯ ಮತ, ಧರ್ಮವನ್ನು ಕಟ್ಟಿ ಬೆಳೆಸಲು ಪ್ರೇರೇಪಿಸಿತು. ತೀರ ಸಾಮಾನ್ಯ ಜನರಲ್ಲಿನ ಗುಣಗಳ ಪರಿವರ್ತನೆಗೆ ಒತ್ತುನೀಡಿತು. ಹಾಗಾಗಿ ಮನುಷ್ಯನಿಗೆ ಬೇಕೇ ಬೇಕಾಗುವಂತ ಮೌಲ್ಯಗಳಾದ ಸತ್ಯ, ಅಹಿಂಸೆ, ನಿಷ್ಠೆ ಮುಂತಾದ ವಿಷಯಗಳನ್ನು ತಲುಪಿಸುವ ಕೆಲಸ ಭಕ್ತಿ ಚಳುವಳಿ ಮಾಡಿತು. ಕರ್ನಾಟಕದಲ್ಲಿ ಅದು ವಚನಕಾರರಿಂದ ನಡೆಯಿತು.

ಅಹಿಂಸೆಯನ್ನೇ ಮೌಲ್ಯವಾಗಿಸಿಕೊಂಡು ಬದುಕಿ ವಚನಕಾರನಾದವನು ದಸರಯ್ಯ. ದಿನನಿತ್ಯವು ತೋಟದಿಂದ ಹೂವುಗಳನ್ನು ಕಿತ್ತು ತಂದು ಶಿವನಿಗರ್ಪಿಸುವುದು, ಶಿವ ಪೂಜೆಗರ್ಪಿಸುವುದು ಈತನ ವೃತ್ತಿ. ಈತನ ಊರು ರಾಮಗೊಂಡೆ ಗ್ರಾಮ. ವೀರಮ್ಮ ಈತನ ಹೆಂಡತಿ ಎಂದು

ಗುರುತಿಸಲಾಗಿದೆ. ವೀರಶೈವ ಪುರಾಣ ಕಾವ್ಯಗಳಲ್ಲಿ ಈತನ ಬಗೆಗೆ ಕೆಲವು ವಿವರಗಳು ಲಭಿಸುತ್ತವೆ. ಬಹುಶಃ ದಸರಯ್ಯ ಶಿವಭಕ್ತರ ಮನೆಗೆ ಶಿವಪೂಜೆಗೆ ಹೂವು ತಂದು ಕೊಡುವ ಕಾಯಕ ಮಾಡುತ್ತಿರಬೇಕೆನಿಸುತ್ತದೆ. ಅಥವಾ ಕಲ್ಯಾಣದ ಮಹಾಮನೆಯು ಜಂಗಮರ ದಾಸೋಹ ಕೇಂದ್ರವು ಆಗಿದ್ದರಿಂದ ಅಲ್ಲಿಗೆ ಬರುವ ಜಂಗಮರ ಲಿಂಗಪೂಜೆಗೆ ಹೂ ತಂದು ಕೊಡುತ್ತಿರಬಹುದಾಗಿದೆ. ಈ ಆಧುನಿಕ ಕಾಲದ ಪೊಲೀಸ್ ಪಡೆಯಂತ ಪಡೆಯನ್ನು ಸಮಾಜದ ಕಣ್ಗಾವಲು ಪಡೆಯಾಗಿ ಚರಜಂಗಮ ಪಡೆಯೊಂದು ಇದ್ದು, ಅದು ಸಮಾಜದಲ್ಲಿರುವ ಅವ್ಯವಸ್ಥೆಗಳನ್ನು ತಿಳಿಸುವ ಕೆಲಸದ ಜೊತೆಗೆ ಲಿಂಗಾರಾದಕರ ಕಣ್ಗಾವಲನ್ನು ಮಾಡುತ್ತಿತ್ತು. ಲಿಂಗವಂತರಾದ ಮೇಲೆ ಅವರು ಆ ತತ್ವ ಸಿದ್ಧಾಂತಗಳಡಿಯಲ್ಲಿಯೇ ಬದುಕಬೇಕು. ತಪ್ಪಿದ್ದಲ್ಲಿ ಅಥವಾ ಸಮಾಜ ಬಾಹಿರ ಕೆಲಸಗಳನ್ನು ಮಾಡಿದ್ದಲ್ಲಿ ಈ ಜಂಗಮರು ಅಂತವರನ್ನು ಸರಿದಾರಿಗೆ ತರುವ ಕೆಲಸವನ್ನು ಮಾಡುತ್ತಿತ್ತು. ಇಂತಹ ವ್ಯವಸ್ಥೆಯಡಿಯಲ್ಲಿ ಶಿವಭಕ್ತರ ಮನೆಗೆ ಹೂವು, ಪತ್ರೆ ತಂದುಕೊಡುವ ಕಾಯಕ ಮಾಡುವವರನ್ನು ಕಾಣುತ್ತೇವೆ. ಅಂತಹ ವೃತ್ತಿಯು ದಸರಯ್ಯನದಾಗಿರಬಹುದೆನಿಸುತ್ತದೆ. ಇದಕ್ಕೆ ಆಧಾರವಾಗಿ ಆತನ ಮೇಲಿರುವ ಕಥೆಯು ಆತನ ಮನೋವೃತ್ತಿ ತಿಳಿಸುವ ಪ್ರಯತ್ನ ಮಾಡುತ್ತದೆ. ಕೆಲವು ಕುಹಕಿಗಳು ಒಮ್ಮೆ ಮೋಟುಮಲ್ಲನೆಂಬುವವನನ್ನು ಜಂಗಮವೇಷದಲ್ಲಿ ದಸರಯ್ಯನನ್ನು ಪೀಡಿಸಲು ಕಳಿಸುತ್ತಾರೆ. ಆ ಮಲ್ಲನು ತನ್ನ ಮೊಂಡು ಕೈಗಳಿಂದ ದಸರಯ್ಯನನ್ನು ಗುದ್ದಿಗುದ್ದಿ ಹಿಂಸೆಗೊಳಪಡಿಸುತ್ತಾನೆ. ಕೊನೆಗೆ ಮೋಟು ಮಲ್ಲನಿಗೆ ಬಳಲಿಕೆಯಾಗುತ್ತದೆ. ದಸರಯ್ಯ ಶಾಂತಚಿತ್ತನಾಗಿ ಅವನನ್ನು ಉಪಚರಿಸುತ್ತಾನೆ. ನಿಮ್ಮ ಹಸ್ತಗಳು ನೊಂದವೆ? ಎಂದು ಸಂತೈಸುತ್ತಾನೆ. ಆಗ ಆ ಮೋಟುಮಲ್ಲನ ಕೈಗಳು ಚಿಗುರುತ್ತವೆ. ಇದರಿಂದ ಪಶ್ಚಾತ್ತಾಪ ಪಟ್ಟ ಮಲ್ಲ ಹುಸಿ ಜಂಗಮತ್ವದಿಂದ ನಿಜ ಜಂಗಮನಾಗುತ್ತಾನೆ.

ಅಹಿಂಸೆಯಿಂದಲೇ ಸಮಾಜದ ಓರೆಕೋರೆಗಳನ್ನು ತಿದ್ದುವ ಕೆಲಸ ಮಾಡಿದವರು ವಚನಕಾರರು. ಆದ್ದರಿಂದ ದಸರಯ್ಯ ಅಹಿಂಸೆಯ ತತ್ವದಿಂದಲೇ ಸೂಕ್ಷ್ಮಮನಸ್ಸಿನ ಸಂವೇದನಾಶೀಲ ವಚನಗಳನ್ನು ರಚಿಸಿರುವುದು ವಿಶಿಷ್ಟವಾಗಿ ಕಾಣುತ್ತದೆ.

ವೈದ್ಯ ಸಂಗಣ್ಣ

ಬದುಕಿನ ಅನುಭವಗಳೇ ಅರಿವಿನ ದಾರಿಯನ್ನು ತೋರುತ್ತವೆ. ಹೊರಜಗತ್ತಿನ ಬದುಕನ್ನು, ಒಳಜಗತ್ತಿನ ಬದುಕನ್ನು ಭಿನ್ನವಾಗಿಸುವುದಕ್ಕೆ ಬಿಡುವುದಿಲ್ಲ. ಅವೆರಡರ ಮಧ್ಯೆ ಏಕತೆಯನ್ನು ತರುತ್ತದೆ. ಭಕ್ತಿಯೆನ್ನುವುದು ನಿತ್ಯದ ಜೀವನ ಎಂಬುದಾಗಿ ಚಿಂತನೆ ಮಾಡಿದವರು ವಚನಕಾರರು. ಭಕ್ತಿ ಮತ್ತು ಆಧ್ಯಾತ್ಮ ಒಂದಕ್ಕೊಂದು ಪೂರಕವಾಗಿರುವಂತಹದ್ದು. ಅದರ ಜತೆ ಜತೆಗೆ ನಡೆಯು ವಂತಹದ್ದು ವೃತ್ತಿ. ಈ ವೃತ್ತಿಯೇ ಭಕ್ತಿ, ಆಧ್ಯಾತ್ಮ, ದೇವರು ಮುಂತಾದುದಾಗಿರುವುದು ವೃತ್ತಿನಿರತ ವಚನಕಾರರ ವಚನಗಳಲ್ಲಿರುವ ಸಿದ್ಧಾಂತವಾಗಿರುವುದನ್ನು ಕಾಣುತ್ತೇವೆ. ಹೀಗೆ ನಿತ್ಯ ಬದುಕನ್ನು ವೃತ್ತಿಯನ್ನು ಮಾಡುತ್ತ ಅಂತರಂಗ ಮತ್ತು ಬಹಿರಂಗದಲ್ಲಿ ಪ್ರಾಮಾಣಿಕತೆಯನ್ನು ಸಾಧಿಸುವ ಮೂಲಕ ಆಧ್ಯಾತ್ಮ ಸಾಧನೆಗೆ ತೊಡಗಿದವರಲ್ಲಿ ವೈದ್ಯ ಸಂಗಣ್ಣನು ಪ್ರಮುಖನಾಗಿ ಕಾಣುತ್ತಾನೆ.

ವೈದ್ಯಕೀಯ ಪರಿಭಾಷೆಯನ್ನು ಬಳಸಿ, ವೈದ್ಯಕೀಯ ಉಪಕರಣಗಳ ಮೂಲಕ ವಚನಗಳನ್ನು ರಚಿಸಿದವನು ವೈದ್ಯ ಸಂಗಣ್ಣ. ಈತನ ಕುರಿತು ಭೈರವೇಶ್ವರ ಕಾವ್ಯಗಳಲ್ಲಿ ಉಲ್ಲೇಖವಿರುವುದನ್ನು ನೋಡುತ್ತೇವೆ. ವೈದ್ಯಕೀಯ ವೃತ್ತಿಯಲ್ಲಿ ನಿರತನಾಗಿದ್ದ ಈತನ ವಚನಗಳಲ್ಲಿ ಕಾಯಕ ತತ್ವವೇ ಪ್ರಧಾನ ಅಭಿವ್ಯಕ್ತಿಯ ವಿಷಯವಾದರೂ, ಆಧ್ಯಾತ್ಮದ ಸಾಧಕನೊಬ್ಬನ ತೊಳಲಾಟ, ತುಡಿತಗಳಿರುವುದನ್ನು ಕಾಣುತ್ತೇವೆ. ನಡೆ-ನುಡಿ ಕುರಿತು, ಆಚಾರ-ವಿಚಾರಗಳ ಪರಿಶುದ್ಧತೆಯ ಕುರಿತು ಚಿಂತನೆ ಮಾಡಿರುವುದನ್ನು ಈತನ ವಚನಗಳಲ್ಲಿ ಗುರುತಿಸುತ್ತೇವೆ. ವೀರಶೈವ ನಿಷ್ಠೆ, ಲಿಂಗವಂತ ಧರ್ಮದ ವಿವರಣೆಯು ಸಾಮಾನ್ಯವಾಗಿಯೇ ಗುರುತಿಸಬಹುದು. ಆದರೂ ಈತನ ಅನೇಕ ವಚನಗಳು ಕಾಯಕತತ್ವವನ್ನು, ವೃತ್ತಿನಿಷ್ಠೆಯನ್ನು ಪ್ರತಿಪಾದನೆ ಮಾಡುವುದನ್ನು ನೋಡುತ್ತೇವೆ.

ವೀರ ಗೊಲ್ಲಾಳ

ವೀರ ಗೊಲ್ಲಾಳನ ಬಗ್ಗೆ ಹಲವು ಕಾವ್ಯಗಳಲ್ಲಿ ಪ್ರಸ್ತಾಪ ಬರುತ್ತದೆ. ಹರಿಹರ, ಪಾಲ್ಕುರಿಕೆ ಸೋಮನಾಥ, ಭೀಮಕವಿ ಗುಬ್ಬಿಯಮಲ್ಲಣಾರ್ಯ, ಅದೃಶ್ಯಕವಿ ವಿರೂಪಾಕ್ಷ ಪಂಡಿತ, ಲಕ್ಕಣ್ಣ ದಂಡೇಶ, ಸಿದ್ಧನಂಜೇಶ, ಶಾಂತಲಿಂಗದೇಶಿಕ ಮುಂತಾದ ವೀರಶೈವ ಕವಿಗಳು ಬರೆದಿರುವ ಕೃತಿಗಳಲ್ಲಿ ಗೊಲ್ಲಾಳನ ಬಗೆಗೆ ಪ್ರಾಸಂಗಿಕವಾಗಿ ಪ್ರಸ್ತಾಪಿಸಲಾಗಿದೆ. ಇದಕ್ಕಿಂತ ವಿಶೇಷವೆಂದರೆ, ಗೊಲ್ಲಾಳನು ಬದುಕಿದ ಪ್ರದೇಶದಲ್ಲಿ ಇಂದಿಗೂ ಅವನನ್ನು ಕುರಿತಂತೆ ಜನಪದರು ಕಥೆ ಹೇಳುತ್ತಾರೆ ಪದ ಹಾಡುತ್ತಾರೆ. ಹೀಗಾಗಿ ವೀರ ಗೊಲ್ಲಾಳ ಶರಣರ ಸಮುದಾಯದಲ್ಲಿ ಒಬ್ಬ ಪ್ರಭಾವಿ ವ್ಯಕ್ತಿಯಾಗಿದ್ದನೆಂಬುದು ನಿರ್ವಿವಾದ ಸಂಗತಿ. ಅವನ ಬದುಕಿನ ವಿವರಗಳನ್ನು ಕೇಳಿದರೆ, ಅವನೊಬ್ಬ ಹೋರಾಟಗಾರನಾಗಿದ್ದನೆಂಬುದು ವಿಶೇಷವಾಗಿ ಗಮನಿಸಬೇಕಾದ ವಿಚಾರ. ವಚನ ಚಳುವಳಿಯೇ ಸಾಮಾಜಿಕ ನ್ಯಾಯಕ್ಕಾಗಿ ಸಂಘಟಿತವಾದ ಹೋರಾಟದ ಚಳುವಳಿ. ಆ ಚಳುವಳಿಯ ಉಪ ಉತ್ಪನ್ನಗಳಾಗಿರುವ ವಚನಗಳಲ್ಲಿ ಆ ಹೋರಾಟದ ಆಶಯಗಳು ನೇರವಾಗಿ, ಕಾವ್ಯಾತ್ಮಕವಾಗಿ ಪ್ರಕಟವಾಗಿರುವುದು ಸತ್ಯ.

ವೀರ ಗೊಲ್ಲಾಳನು ಕುರುಬ ಜಾತಿಗೆ ಸೇರಿದವನು ಎಂಬುದಕ್ಕೆ ಹೊರಗಿನ ಸಾಕ್ಷ್ಯಾಧಾರಗಳ ಅಗತ್ಯವಿಲ್ಲ. ಅವನ ವಚನಗಳೇ ಇದನ್ನು ಪ್ರಮಾಣೀಕರಿಸುತ್ತಿವೆ. ವಿಜಾಪುರ ಜಿಲ್ಲೆಯ ಸಿಂದಗಿ ತಾಲ್ಲೂಕಿನ ಗೊಲಗೇರಿ ಗ್ರಾಮದ ಹತ್ತಿರವಿರುವ ಢವಲಾರ ಎಂಬ ಹಳ್ಳಿಯು ವೀರ ಗೊಲ್ಲಾಳನದು ಎಂಬುದು ತಿಳಿದುಬರುತ್ತದೆ. ಕುರುಬ ಜನಾಂಗದಲ್ಲಿ ಹುಟ್ಟಿದ ಇವನು ಸ್ಥಿತಿವಂತ ಕುಟುಂಬಕ್ಕೆ ಸೇರಿದವನಾಗಿದ್ದ. ಇವನ ತಂದೆ ಕಾಟಕೋಟ. ಇವನ ಇನ್ನೊಂದು ಹೆಸರು ಬಲ್ಲುಗ. ಗೊಲ್ಲಾಳನ ತಾಯಿ ದುಗ್ಗಳವ್ವಾ, ಗೊಲ್ಲಾಳನ ಬದುಕಿನಲ್ಲಿ ನಡೆದ ಮಹತ್ವದ ಘಟನೆಯೊಂದು ಅವನ ಜೀವನದ ಬದಲಾವಣೆಗೆ ಕಾರಣವಾಗಿದೆ ಎಂಬುದು ಚರಿತ್ರೆಯಿಂದ ತಿಳಿದುಬರುತ್ತದೆ. ಗೊಲ್ಲಾಳನು ಕುರಿ ಮೇಯಿಸುತ್ತಿದ್ದ ಅಡವಿಯ ಮಾರ್ಗದಲ್ಲಿ ಶ್ರೀಶೈಲದ ಕಡೆಗೆ ಹೊರಟ ಯಾತ್ರಿಗಳ ಗುಂಪೊಂದು ಬರುತ್ತದೆ. ಆ ಗುಂಪಿನಲ್ಲಿದ್ದವರು ಶ್ರೀಶೈಲ ಮಲ್ಲಿಕಾರ್ಜುನ ದೈವದ ಹೆಸರಿಡಿದು ಉಘೇ ಎಂದು ಕೂಗುತ್ತಾ ನಡೆದಿರುತ್ತಾರೆ. ಆಗ ಗೊಲ್ಲಾಳನು ಗುಂಪಿನಲ್ಲಿದ್ದ ನಂದಯ್ಯ ಎಂಬುವನನ್ನು ಮಾತನಾಡಿಸಿ,

ಯಾತ್ರೆಯ ವಿವರ ತಿಳಿದುಕೊಳ್ಳುತ್ತಾನೆ. ನಂದಯ್ಯನು ಮಲ್ಲಿಕಾರ್ಜುನ ದೈವದ ಬಗ್ಗೆ ಹೇಳಿದ ಮಾತುಗಳಿಂದ ಪ್ರಭಾವಿತನಾಗುವ ಗೊಲ್ಲಾಳನು ಶ್ರೀಶೈಲ ಯಾತ್ರೆಗೆ ಹೊರಡುವ ಮನಸ್ಕನಾಗುತ್ತಾನೆ. ಆದರೆ ಕುರಿ ಕಾಯುವ ಕರ್ತವ್ಯದಿಂದಾಗಿ ಹೋಗಲಾರದವನಾಗಿ ನಂದಯ್ಯನನ್ನು ಹಿಂತಿರುಗಿ ಬರುವಾಗ ತನಗೂ ಶ್ರೀಶೈಲದಿಂದ ಲಿಂಗವೊಂದನ್ನು ತಂದು ಕೊಡಲು ಕಳುಹಿಸುತ್ತಾನೆ. ಆದರೆ, ಹಿಂದಿರುಗಿ ಬರುವಾಗ ನಂದಯ್ಯ ಲಿಂಗ ತರುವುದನ್ನು ಮರೆತಿರುತ್ತಾನೆ. ದೂರದಿಂದಲೇ ತನಗಾಗಿ ಕಾಯುತ್ತಾ ನಿಂತಿದ್ದ ಗೊಲ್ಲಾಳನನ್ನು ನೋಡಿದ ನಂದಯ್ಯನಿಗೆ ಕಸಿವಿಸಿಯಾಗುತ್ತದೆ. ಕೊನೆಗೆ ಉಪಾಯವೊಂದು ಹೊಳೆಯುತ್ತದೆ. ಅದರಂತೆ ಕುರಿಯ ಹಿಕೆಯೊಂದನ್ನು ಹಿಡಿದುಕೊಂಡು ಅದನ್ನೇ ಲಿಂಗವೆಂದು ನಂಬಿಸಿ ಗೊಲ್ಲಾಳನಿಗೆ ಕೊಡುತ್ತಾನೆ. ಅಲ್ಲದೆ, ಆ ಲಿಂಗವನ್ನು ಒಂದು ಕಡೆ ಸ್ಥಾಪಿಸಿ, ೨೧ ದಿನ ಕುರಿಯ ಹಾಲಿನಲ್ಲಿ ಅಭಿಷೇಕ ಮಾಡುವಂತೆಯೂ ದಿನವೂ ಪ್ರಸಾದವಾಗಿ ನೀಡಿ ಪೂಜಿಸುವಂತೆಯೂ ಬೋಧಿಸಿ ಹೋಗುತ್ತಾನೆ. ಹೀಗೆ ಹೇಳಲು ಕಾರಣ ೨೧ ದಿನಗಳ ಅವಧಿಯಲ್ಲಿ ತಮ್ಮ ಸ್ವಸ್ಥಳಕ್ಕೆ ಹೋಗಿ ಸೇರಿಕೊಳ್ಳಬಹುದು, ಇದರಿಂದ ತಮ್ಮ ಮೋಸಕ್ಕೆ ಗೊಲ್ಲಾಳನು ಬೆನ್ನತ್ತಿ ಬಂದು ಪ್ರತೀಕಾರ ಮಾಡುವುದರಿಂದ ತಪ್ಪಿಸಿಕೊಳ್ಳಬಹುದು ಎಂಬ ಆಲೋಚನೆ ಆ ನಂದಯ್ಯನದಾಗಿರುತ್ತದೆ. ಆದರೆ, ಗೊಲ್ಲಾಳನ ಮುಗ್ಧ ಭಕ್ತಿ ನಂದಯ್ಯನ ಮಾತನ್ನು ನಂಬಿಕೆಯ ನೆಲೆಯಲ್ಲಿ ನಿಜದ ವಿಚಾರವಾಗಿ ಸ್ವೀಕರಿಸುತ್ತದೆ. ಅದರಂತೆ ಆ ಕುರಿಯ ಪಿಚಿಕೆಯನ್ನು ತಮ್ಮ ಕುರಿಯ ಕಳ್ಳೆಯಲ್ಲಿ ಪ್ರತಿಷ್ಠಾಪಿಸಿ, ನಿತ್ಯ ಕುರಿಯ ಹಾಲಿನಿಂದ ಅಭಿಷೇಕ ಮಾಡಲು ಪ್ರಾರಂಭಿಸುತ್ತಾನೆ. ತನಗೆ ಬಂದ ಬೋನವನ್ನು ಪ್ರಸಾದವಾಗಿ ಅರ್ಪಿಸಿ, ಪೂಜೆಗೈಯುತ್ತಾನೆ. ಈ ಪೂಜೆ ಹೀಗೆ ನಿತ್ಯವಿಧಿಯಾಗಿ ನಡೆಯುತ್ತಿರುವಾಗ ಗೊಲ್ಲಾಳನು ಕುರಿಯ ಹಾಲನ್ನು ಮನೆಗೆ ಕಳಿಸದೆ ಇರುವುದು ತಂದೆಗೆ ಗೊತ್ತಾಗಿ ವಿಚಾರಿಸುವ ಸಲುವಾಗಿ ಕುರಿಯ ರೊಪ್ಪಕ್ಕೆ ಬರುತ್ತಾನೆ. ಬಂದು ನೋಡಲಾಗಿ ಹಾಲಿನ ಹಳ್ಳ ಹರಿಯುತ್ತಿದೆ. ಗೊಲ್ಲಾಳ ಭಕ್ತಿಭಾವದಲ್ಲಿ ಪರವಶನಾಗಿ ಪೂಜೆಯಲ್ಲಿ ನಿರತನಾಗಿದ್ದಾನೆ. ಅವನ ಭಕ್ತಿಯ ಹುಚ್ಚನ್ನು ನೋಡಿದ ತಂದೆಗೆ ಅದೊಂದು ಅವಿವೇಕದ ವರ್ತನೆಯಂತೆ ಕಾಣುತ್ತದೆ. ಮಗನನ್ನು ಆ ಹುಚ್ಚಿನಿಂದ ಹೊರಗೆ ತರಲು ಲಿಂಗವೆಂದು ಪೂಜಿಸುತ್ತಿದ್ದ ಕುರಿ ಪಿಚಿಕೆಯ ಸ್ಥಾಪಿತ ಭಾಗವನ್ನು ಕಾಲಿನಿಂದ ತುಳಿದು ನಾಶಮಾಡುತ್ತಾನೆ. ಎಚ್ಚತ್ತ ಗೊಲ್ಲಾಳ ಆವೇಶದಿಂದ ಸಿಟ್ಟುಗೊಂಡು ತಂದೆಯನ್ನು ಕೊಂದುಬಿಡುತ್ತಾನೆ. ಅವನ ವೀರಭಕ್ತಿಗೆ ಮೆಚ್ಚಿ ಹರಸುತ್ತಾನೆ. ಗೊಲ್ಲಾಳನ ತಂದೆಯನ್ನು ಬದುಕಿಸುತ್ತಾನೆ. ಗೊಲ್ಲಾಳನು ಹೀಗೆ ವೀರಭಾವದ ಭಕ್ತಿ ಮೆರೆದು ಶಿವನನ್ನು ಸಾಕ್ಷಾತ್ಕರಿಸಿಕೊಂಡು ಭಕ್ತನಾದ, ಶಿವಶರಣನಾದ. ಅಂದಿನಿಂದ ಜನತೆ ವೀರಗೊಲ್ಲಾಳನೆಂದು ಕರೆಯತೊಡಗುವರು. ಅವನು ಆನಂತರದಲ್ಲಿ ವಚನಗಳನ್ನು ಹಾಡಿದ್ದಾನೆ. ಇದಿಷ್ಟು ಅವನ ಬಗ್ಗೆ ಜನತೆಯಲ್ಲಿ ಜನಜನಿತವಾಗಿರುವ ಜೀವನ ಕಥೆ.

ಅಧ್ಯಾಯ ೬

ವಚನಕಾರ್ತಿಯರು : ವೃತ್ತಿ ಮತ್ತು ವಚನಾಭಿವ್ಯಕ್ತಿ ಅಂತರ್‌ಸಂಬಂಧ

- ಕದಿರ ಕಾಯಕದ ಕಾಳವ್ವೆ
- ಕದಿರ ರೆಮ್ಮವ್ವೆ
- ಕನ್ನಡಿ ಕಾಯಕದ ರೇವಮ್ಮ
- ಕಾಲಕಣ್ಣಿಯ ಕಾಮಮ್ಮ
- ಕಾಟಕೂಟಯ್ಯಗಳ ಪುಣ್ಯಸ್ತ್ರೀ ರೇಚವ್ವೆ
- ಕೊಂಡೆ ಮಂಚಣ್ಣಗಳ ಪುಣ್ಯಸ್ತ್ರೀ ಲಕ್ಷ್ಮಮ್ಮ
- ಕೊಟ್ಟಣದ ಸೋಮಮ್ಮ
- ಗುಂಡಯ್ಯಗಳ ಪುಣ್ಯಸ್ತ್ರೀ ಕೇತಲದೇವಿ.
- ಸೂಳೆ ಸಂಕವ್ವೆ
- ಹಾದರ ಕಾಯಕದ ಗಂಗಮ್ಮ
- ಆಯ್ದಕ್ಕಿ ಲಕ್ಕಮ್ಮ
- ಸತ್ಯಕ್ಕ
- ಧೂಪದ ಗೊಗ್ಗವ್ವೆ
- ಬಾಚಿಕಾಯಕದ ಬಸವಯ್ಯಗಳ ಪುಣ್ಯಸ್ತ್ರೀ ಕಾಳವ್ವೆ
- ಉರಿಲಿಂಗ ಪೆದ್ದಿಗಳ ಪುಣ್ಯ ಸ್ತ್ರೀ ಕಾಳವ್ವೆ

ಅಧ್ಯಾಯ : ಆರು

ವಚನಕಾರ್ತಿಯರು : ವೃತ್ತಿ ಮತ್ತು ವಚನಾಭಿವ್ಯಕ್ತಿ ಅಂತರ್‌ಸಂಬಂಧ

ಪೀಠಿಕೆ

ಹನ್ನೆರಡನೇಯ ಶತಮಾನದಲ್ಲಿ ಬೆಳೆದು ಬಂದ ವಚನ ಸಾಹಿತ್ಯ ಮಹತ್ವದ ತಾತ್ವಿಕತೆಯನ್ನು ಹೊಂದಿರುವುದಾಗಿದೆ. ಶರಣ ಚಳುವಳಿಯ ತಾತ್ವಿಕ ಸಿದ್ಧಾಂತವನ್ನು ಸ್ವೀಕಾರ ಮಾಡಿಕೊಂಡೆ ವಚನಕಾರರು ವಚನಗಳನ್ನು ರಚಿಸಿದ್ದಾರೆ. ಆದರೆ ಇಂತಹ ತಾತ್ವಿಕತೆಯನ್ನು ನಂಬಿಕೊಂಡಿದ್ದ ಅನೇಕ ವಚನಕಾರರು ತಮ್ಮತನವನ್ನು, ತಮ್ಮ ಅಸ್ಮಿತೆಯನ್ನು ವಚನಗಳಲ್ಲಿ ನಿರೂಪಿಸಿದ್ದಾರೆ. ಮುಖ್ಯವಾಗಿ ವಿವಿದ ವೃತ್ತಿಯನ್ನು ಮಾಡುತ್ತ, ಆಧ್ಯಾತ್ಮದ ಸಾಧನೆಗೆ ತೊಡಗಿದವರು ವೃತ್ತಿ ನಿರತರು. ಇವರು ತಮ್ಮ ವಚನಗಳ ಅಭಿವ್ಯಕ್ತಿ ಕ್ರಮವನ್ನೇ ವಿಶಿಷ್ಟವಾಗಿಸಿದ್ದಾರೆ. ತಾವು ಕಂಡುಕೊಂಡ ಸತ್ಯವನ್ನು, ತಮ್ಮ ತಿಳುವಳಿಕೆಯನ್ನು ವೃತ್ತಿಯ ಪರಿಕರಗಳ ಪದ ಪ್ರಯೋಗದ ಮೂಲಕವೇ ಅಭಿವ್ಯಕ್ತಿಸುತ್ತಾರೆ. ಇದು ಅವರ ಅರಿವಿನ ವಿಸ್ತಾರದ ಕುರುಹಾಗಿ ಕೆಲಸ ಮಾಡದೆ ಇರದಾಗಿದೆ. ಇಂತಹ ವಚನಕಾರರಲ್ಲಿ ಮಹಿಳೆಯರು ತಮ್ಮ ವೃತ್ತಿಯನ್ನೇ ಮಾಧ್ಯಮವನ್ನಾಗಿ ಬಳಸಿಕೊಂಡಿದ್ದಾರೆ.

ಕದಿರ ಕಾಯಕದ ಕಾಳವ್ವೆ

ರಾಟಿಯಿಂದ ನೂಲು ತೆಗೆಯುವ ವೃತಿಯನ್ನು ಮಾಡುತ್ತಿದ್ದ ಕಾಳವ್ವೆ ಅನುಭಾವಿಯಾಗಿ ಶರಣ ಸಮೂಹದಲ್ಲಿ ಗುರುತಿಸಿಕೊಂಡಿದ್ದಾಳೆ. ಈಕೆ ತನ್ನ ಅನುಭವವನ್ನು ವಚನದಲ್ಲಿ ಕಟ್ಟಿಕೊಡುವ ಪ್ರಯತ್ನ ಮಾಡಿದ್ದಾಳೆ.

> ಕದಿರು ಮುರಿಯೆ ಏನೂ ಇಲ್ಲ
> ವ್ರತಹೀನನ ನೆರೆಯಲಿಲ್ಲ ಗುಮ್ಮೇಶ್ವರಾ.
>
> (ಶಿವಶರಣೆಯರ ವಚನ ಸಂಪುಟ, ವಚನ ಸಂಖ್ಯೆ: ೬೬೧)

ಕಾಳವ್ವೆ ಈ ವಚನದಲ್ಲಿ ತಾನು ಹೇಳಬೇಕಿರುವುದನ್ನು ಎರಡು ಸಾಲುಗಳಲ್ಲಿ ಹೇಳುತ್ತಾಳೆ. ಮಹಿಳಾ ವಚನಕಾರರಲ್ಲಿ ಅನೇಕರು ವ್ರತದ ಬಗ್ಗೆಯೇ ಹೆಚ್ಚು ಮಾತನಾಡಿದ್ದಾರೆ. ಬದುಕಿಗೆ

ನಿಷ್ಠೆ ಪ್ರಾಮಾಣಿಕತೆಯೇ ಮೂಲ ನೆಲೆಯಾಗಿದ್ದು, ಅದರಿಂದಲೇ ಆತ್ಮನ್ನೋತಿ ಎಂಬ ತತ್ವ ಪ್ರತಿಪಾದನೆ ನಡೆಯುತ್ತದೆ. ಕಾಳವ್ವೆಯ ಈ ವಚನದಲ್ಲಿ ಕದಿರು ರೂಪಕವಾಗಿ ಬರುತ್ತದೆ. ನಿಷ್ಠೆ, ಪ್ರಾಮಾಣಿಕತೆ, ಶಿವಭಕ್ತರಲ್ಲದವರನ್ನು ವಿರೋದದಿಂದ ಕಾಣುವುದು ಇಲ್ಲಿ ಕಾಣುತ್ತದೆ. 'ಕದಿರು' ತನ್ನ ವೃತ್ತಿಯ ಉಪಕರಣವಾಗಿದೆ. ಇದು ಆಕೆಗೆ ಎಲ್ಲವೂ ಅಗಿದೆ ಆಚಾರ ಹೀನರನ್ನು ಅನುಕಂಪದಿಂದಲೇ ನೋಡುತ್ತಾಳೆ. ಅಂತವರನ್ನು ಕಂಡು ಮರುಗುತ್ತಾಳೆ. ತನ್ನ ತಿಳುವಳಿಕೆಯನ್ನು ಎರಡೇ ಎರಡು ಸಾಲಿನಲ್ಲಿ ಕಟ್ಟಿಕೊಡುವ ಪ್ರಯತ್ನ ಕಾಳವ್ವೆ ಮಾಡಿದ್ದಾಳೆ.

ಕದಿರ ರೆಮ್ಮವ್ವೆ

ಮನುಷ್ಯನ ಬದುಕನ್ನು ವ್ಯಾಖ್ಯಾನಿಸುತ್ತ ತಾತ್ವಿಕತೆಯನ್ನು ಕಟ್ಟಿಕೊಟ್ಟವರು ವಚನಕಾರರು. ಅದರಲ್ಲೂ ಮಹಿಳಾ ವಚನಕಾರರು ತಮ್ಮ ಅನುಭವದ ಒಡಲಿನಿಂದಲೇ ವಚನಗಳನ್ನು ಕಟ್ಟಿದ್ದಾರೆ. ವೃತ್ತಿಯ ಪ್ರಾದೇಶಿಕತೆಯನ್ನು ಬಳಸಿಕೊಂಡು ಅನುಭವವನ್ನು ಅಭಿವ್ಯಕ್ತಿಸಿರುವುದು ವಿಶೇಷವಾಗಿ ಕಾಣುತ್ತದೆ. ವಚನಕಾರರು ಕಾಯಕ ಸಿದ್ಧಾಂತಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. ವೃತ್ತಿ ನಿರತತೆಯ ಅನನ್ಯತೆಯನ್ನು ಇವರ ವಚನಗಳಲ್ಲಿ ಗುರುತಿಸಬಹುದು. ಇಂತಹ ವಚನಕಾರ್ತಿಯರಲ್ಲಿ ರೆಮ್ಮವ್ವೆ ಕಾಣುತ್ತಾಳೆ. ರೆಮ್ಮವ್ವೆ ತಾನು ನಂಬಿದ್ದ ಸಿದ್ಧಾಂತವನ್ನು ಹೇಳುವಲ್ಲಿ ಸ್ಪಷ್ಟತೆಯನ್ನು ಅನುಸರಿಸಿದ್ದಾಳೆ. ರಾಟಿಯಿಂದ ನೂಲು ತೆಗೆಯುವ ಕಾಯಕವನ್ನು ಅವಲಂಬಿಸಿದ್ದ ಈಕೆ ತನ್ನ ವೃತ್ತಿಯನ್ನೇ ಆಧ್ಯಾತ್ಮಿಕರಿಸಿ ನುಡಿಯುತ್ತಾಳೆ. ಇಂತಹ ವಚನಗಳಲ್ಲಿ ರೆಮ್ಮವ್ವೆಯ ಲೋಕದೃಷ್ಠಿ ಎದ್ದು ಕಾಣುತ್ತದೆ.

ನಾ ತಿರುಹುವ ರಾಟೆಯ ಕುಲಜಾತಿಯ ಕೇಳಿರಣ್ಣಾ;
ಅಡಿಯ ಹಲಗೆ ಬ್ರಹ್ಮ; ತೋರಣ ವಿಷ್ಣು;
ನಿಂದ ಬೊಂಬೆ ಮಹಾರುದ್ರ;
ರುದ್ರನ ಬೆಂಬಳಿಯವೆರಡು ಸೂತ್ರಕರ್ಣ;
ಅರಿವೆಂಬ ಕದಿರು, ಭಕ್ತಿಯೆಂಬ ಕೈಯಲ್ಲಿ ತಿರುಹಲಾಗಿ,
ಸುತ್ತಿತ್ತು ನೂಲು; ಕದಿರು ತುಂಬಿತ್ತು.
ರಾಟೆಯ ತಿರುಹಲಾರೆ, ಎನ್ನ ಗಂಡ ಕುಟ್ಟಿಹ;
ಇನ್ನೇವೆ ಕದಿರರೆಮ್ಮಿಯೊಡೆಯ ಗುಮ್ಮೇಶ್ವರಾ?

(ಶಿವಶರಣೆಯರ ವಚನ ಸಂಪುಟ, ವಚನ ಸಂಖ್ಯೆ: ೬೬೫)

ರೆಮ್ಮವ್ವೆ ಈ ವಚನವನ್ನು ಕಟ್ಟಿರುವ ರೀತಿಯೇ ಅನನ್ಯವಾಗಿದೆ. ಅಭ್ಯಾಸಯೋಗ್ಯವೆನಿಸಿದೆ. ವಚನದ ಮೊದಲನೇ ಸಾಲಿನಲ್ಲಿ ಪ್ರಶ್ನೆಯಿದೆ. ಮುಂದೆ ಸಾಗುತ್ತ ಉತ್ತರವನ್ನು ನೀಡುವ ಪ್ರಯತ್ನವೊಂದಿದೆ. ನಂತರ 'ಕದಿರು' ವೃತ್ತಿ ಸ್ವರೂಪಕ್ಕಿಂತ ಭಿನ್ನವಾಗಿ ಅಭಿವ್ಯಕ್ತಗೊಳ್ಳುತ್ತದೆ. ಮತ್ತು ಭಕ್ತಿಯೆಂಬುದು ಕೈಯಾಗಿ, ಸಾಧನದ ರೂಪ ಪಡೆದುಕೊಂಡಿದೆ. ವಚನದ ಕೊನೆಗೆ ಅರಿವಿನ ಹುಡುಕಾಟದ ನೆಲೆಯಾಗಿ ಪ್ರಶ್ನೆಯೊಂದು ಬರುತ್ತದೆ. ವೃತ್ತಿ ಮತ್ತು ಅರಿವಿನ ಸಂಬಂಧವನ್ನು ಹೇಳುವಂತಿದೆ. ತನ್ನ ಬದುಕಿನ ವೃತ್ತಿಯನ್ನು ಆಧ್ಯಾತ್ಮದ ಅನುಭವಕ್ಕೆ ಹೋಲಿಸಿ

ರೆಮ್ಮವ್ವೆ ಹೇಳುತ್ತಾಳೆ, ತನ್ನ ವೃತ್ತಿಯ ರಾಟೆಯ ಭಾಗಗಳನ್ನು ಬ್ರಹ್ಮ, ವಿಷ್ಣು, ರುದ್ರರು ಕೈಗೊಳ್ಳುತ್ತಾರೆಂದು ನಂಬಿರುವ ಸೃಷ್ಟಿ, ಸ್ಥಿತಿ, ಲಯದ ಕ್ರಿಯೆಗಳನ್ನು ರಾಟೆಯ ಭಾಗವಾಗಿಸಿ ಆಧ್ಯಾತ್ಮಕ್ಕೆ ಸಮ್ಮಿಳಿತಗೊಳಿಸಿ ಅನುಭಾವವನ್ನು ಹೇಳುತ್ತಾಳೆ. ವೃತ್ತಿ ಮತ್ತು ಅರಿವಿನ ಪ್ರಜ್ಞೆಯನ್ನು ಅಭಿವ್ಯಕ್ತಿಸುತ್ತಾಳೆ. ದೊರೆತಿರುವ ನಾಲ್ಕು ವಚನಗಳಲ್ಲಿ ತನ್ನ ತಿಳುವಳಿಕೆಯನ್ನು, ನಿಷ್ಠೆ, ಪ್ರಾಮಾಣಿಕತೆಯನ್ನು ಅಭಿವ್ಯಕ್ತಿಸುವ ಪ್ರಯತ್ನ ಮಾಡಿದ್ದಾಳೆ. ಬೆಡಗಿನ ರೂಪವನ್ನು ಬಳಸಿ, ಭಾಷೆಯ ಮೇಲೆ ಹಿಡಿತವನ್ನು ಸಾಧಿಸಿದ್ದಾಳೆ. ಈಕೆಯ ವಚನಗಳ ರಚನೆಯಲ್ಲಿ ಪದ ರಚನಾಕ್ರಮದಲ್ಲಿ ಒಂದು ಆತ್ಮೀಯತೆನ್ನು ತರುತ್ತಾಳೆ. ತಾನು ಹೇಳಬೇಕಾಗಿರುವ ತತ್ವ ಸಿದ್ಧಾಂತವನ್ನು ತನ್ನ ವೃತ್ತಿಯ ಪರಿಭಾಷೆಯನ್ನೇ ರೂಪಕ ಉಪಮೆ ಮಾಡಿಕೊಂಡು ಆ ಮೂಲಕ ಹೇಳುತ್ತಾಳೆ. ತನ್ನ ಕೃತಜ್ಞಾಭಾವವನ್ನು ಹೇಳುತ್ತ, ಬಸವಣ್ಣ, ಚನ್ನಬಸವಣ್ಣ, ಅಲ್ಲಮನನ್ನು ಸ್ಮರಿಸುತ್ತಾ ಶರಣ ಸಮೂಹದ, ಶರಣ ಚಿಂತನೆಯ ನಿಷ್ಠತೆಯ ಪ್ರತಿಪಾದಕಳಾಗಿದ್ದಾಳೆ.

ಕನ್ನಡಿ ಕಾಯಕದ ರೇವಮ್ಮ

ವಚನಕಾರರಿಗೆ ಅನುಭಾವ ಎಂಬುದು ಅಂತರಂಗದ ರತ್ನವಾಗಿದೆ. ಅಂತಹ ಅನುಭಾವಕ್ಕೆ ಮೂಲ ಅವರ ಅನುಭವವಾಗಿದೆ. ಅದೂ ವೃತ್ತಿಯಿಂದ ಕಂಡುಕೊಂಡದ್ದಾಗಿದೆ. ಬದುಕನ್ನೂ ನೂಕಲು ವೃತ್ತಿಯನ್ನು ಮಾಡುವ ಮನಸ್ಥಿತಿ ವಚನಕಾರರದಲ್ಲ. ಅವರಿಗೆ ವೃತ್ತಿಯೇ ಶಿವ. ವೃತ್ತಿಯಲ್ಲಿ ತೊಡಿಗಿಕೊಳ್ಳುವುದೆಂದರೆ ಶಿವಪೂಜೆಯಲ್ಲಿ ತೊಡಗಿಕೊಂಡಂತೆ. ವೃತ್ತಿಯನ್ನು ಶರಣರ ಕಾಯಕತತ್ವದ ಪರಿಕಲ್ಪನೆಯಡಿಯಲ್ಲಿ ಮಾಡುವುದು ಅವರಿಗೆ ಪ್ರೀತಿಯ ಕೆಲಸ. ವಚನಕಾರರಿಗೆ ವೃತ್ತಿಯು ಎಲ್ಲವೂ ಆಗಿ ಬದಲಾಗಿದೆ. ಅಂತಹ ಮನಸ್ಥಿತಿಯನ್ನು ಮಾನವನ ಬದುಕಿಗೆ ತಂದು ಪರಿಪೂರ್ಣದೆಡೆಗೆ ಸಾಗಿಸಲು ಶ್ರಮಪಟ್ಟವರಾಗಿದ್ದಾರೆ. ಲೋಕವನ್ನು 'ಕರ್ತಾರನ ಕಮ್ಮಟ' ವಾಗಿಸಲು ಯತ್ನಿಸಿದರು. ಹಾಗಾಗಿ ಸಮಾಜದಲ್ಲಿ ನೆಲೆಸಿದ್ದ ವೃತ್ತಿ ತಾರತಮ್ಯದ ವಿರುದ್ಧ ಪ್ರತಿಭಟನೆ ಮಾಡಿದರು. ಶ್ರಮಸಿದ್ಧಾಂತವನ್ನು, ಶ್ರಮಗೌರವವನ್ನು ಪ್ರತಿಪಾದಿಸಿರು. ಇಂತಹ ಹೋರಾಟ ವೃತ್ತಿನಿರತರ ಬದುಕನ್ನು ಸುಧಾರಿಸಿ ಸಮಾಜ ಮಾನ್ಯ ಮಾಡುವಲ್ಲಿ ಭಾಗಶಃ ಯಶಸ್ವಿಯಾಯಿತೆಂದೆ ಹೇಳಬಹುದು. ಸ್ತ್ರೀ ಪುರುಷರಲ್ಲೇ ಅಸಮಾನತೆಯಿತ್ತು. ಅದರ ಮುಷ್ಠಿಯಿಂದ ಪಾರಗಿದ್ದಲ್ಲದೆ, ವೃತ್ತಿ ಅಸಮಾನತೆಯಿಂದ ಸಮಾಜದಲ್ಲಿ ವೃತ್ತಿನಿರತರು ನಲುಗಿದರೆ, ಸ್ತ್ರೀಯರನ್ನಂತೂ ಇನ್ನೂ ಕೆಳಸ್ತರಕ್ಕೆ ದೂಡಿ ಬಿಟ್ಟಿದ್ದರು. ಇಂತಹ ಸಂದರ್ಭದಲ್ಲಿ ಸ್ತ್ರೀಯರು ವಚನಕಾರರ ಆಂದೋಲನದ ಭಾಗವಾಗಿ ಸೇರಿಕೊಂಡು ನಿರುಮ್ಮಳತೆಯಿಂದ ವೃತ್ತಿಯನ್ನು ಮಾಡತೊಡಗಿದರು. ತಮ್ಮ ವೃತ್ತಿಯ ಅನುಭವವನ್ನು, ಹೇಳುವ ಮೂಲಕ ಅನುಭಾವಿಗಳಾಗಿದ್ದಾರೆ. ದೇವರು, ಧರ್ಮ, ಆಧ್ಯಾತ್ಮ ಅರಿವು ಎಂಬ ಜಿಜ್ಞಾಸೆಗೆ ಒಳಗಾಗಿ, ಲಿಂಗ ಬೇದವನೆಣಿಸದೆ ಮಾನವ ಧರ್ಮದ ಚಿಂತನೆಗೆ ಅನುವಾಗಿದ್ದಾರೆ. ಶರಣರ ಆತ್ಮದ ಪರಿಕಲ್ಪನೆಯನ್ನು, ಅರಿವಿನ ಪ್ರಜ್ಞೆಯನ್ನು ಕಂಡುಕೊಂಡವರಾಗಿದ್ದಾರೆ. ಹೀಗೆ ಬಂದ ಮಹಿಳಾ ವಚನಕಾರ್ತಿಯರಲ್ಲಿ ರೇವಮ್ಮ ಒಬ್ಬ ವಚನಕಾರ್ತಿ. ಈಕೆ ತನ್ನ ಕ್ಷೌರಿಕ ವೃತ್ತಿಯ ಪರಿಕರಗಳನ್ನೇ ಬಳಸಿ ಒಂದು ವಚನವನ್ನು ರಚಿಸಿದ್ದಾಳೆ. ಈ ವಚನದ ಹಲವು ಆಯಾಮಗಳಲ್ಲಿ ಅಭಿವ್ಯಕ್ತಗೊಂಡಿದೆ. ಮುಖ್ಯವಾಗಿ ವೃತ್ತಿ ಮತ್ತು ಆಧ್ಯಾತ್ಮವನ್ನು ಹೇಳುತ್ತದೆ.

ಕೈಯಲ್ಲಿ ಕನ್ನಡಿಯಿರಲು ತನ್ನ ತಾ ನೋಡಬಾರದೆ?
ಲಿಂಗ ಜಂಗಮ ಪ್ರಸಾದಕ್ಕೆ ತಪ್ಪಿದಲ್ಲಿ ಕೊಲ್ಲಬಾರದೆ?
ಕೊಂದಡೆ ಮುಕ್ತಿಯಿಲ್ಲವೆಂಬವರ ಬಾಯಲ್ಲಿ
ಪಡಿಹಾರನ ಪಾದರಕ್ಷೆಯನಿಕ್ಕುವೆ.
ಮುಂಡಿಗೆಯ ನೆತ್ತಿರೊ ಭ್ರಷ್ಟ ಭವಿಗಳಿರಾ;
ಎತ್ತಲಾರದಡೆ ಸತ್ತ ಕುನ್ನಿ ನಾಯಿ ಬಾಲವ,
ನಾಲಿಗೆ ಮುರುಟಿರೋ ಸದ್ಗುರುಸಂಗ ನಿರಂಗ ಲಿಂಗದಲ್ಲಿ

(ಶಿವಶರಣೆಯರ ವಚನ ಸಂಪುಟ, ವಚನ ಸಂಖ್ಯೆ: ೬೬೬)

ಈ ವಚನದಲ್ಲಿ ಒಂದು ಬಿಗುವಿನ ವಾತವರಣವಿರುವುದನ್ನು ಕಾಣಬಹುದು. ನಿಷ್ಠೆ, ಪ್ರಾಮಾಣಿಕತೆಯ ಪ್ರತಿಪಾದನೆ ಇಲ್ಲಿ ಬಲವಾಗಿಯೇ ಮೂಡಿದೆ. ವಚನದ ಮೊದಲ ಸಾಲಿನಿಂದಲೂ ಪ್ರಶ್ನೆಗಳ ಮೇಲೆ ಪ್ರಶ್ನೆ ಬರುತ್ತವೆ. ಆಕೆಯು ಸ್ಪಷ್ಟವಾಗಿಯೇ ಭವಿಗಳನ್ನೇ ಕೇಳುತ್ತಾಳೆ. ಇಲ್ಲಿ ಮುಖ್ಯವಾಗಿ ಲಿಂಗ ಜಂಗಮ ಪ್ರಸಾದದಂತ ಶಿವಾಚಾರ ನಿಷ್ಠೆಯ ವ್ಯಕ್ತಿತ್ವ ಕಾಣುತ್ತದೆ.

ಸ್ತ್ರೀಗೆ ವಚನಕಾರ ಆಂದೋಲನದಲ್ಲಿ ಸಿಕ್ಕ ಅವಕಾಶವನ್ನು ಸರಿಯಾಗಿಯೇ ಅರಿತು ಕೊಂಡಿದ್ದಾಳೆ. ಶೋಷಿತ ಬದುಕಿನಿಂದ ಮುಕ್ತಿ ಪಡೆಯಲು, ಶೋಷಿತರಾದವರಿಗೆ ಪ್ರತಿಭಟನೆ ಅನಿವಾರ್ಯ ಅದರ ಸ್ವರೂಪ ಹೀಗೆ ಇರುತ್ತದೆಂದು ಹೇಳಲು ಸಾಧ್ಯವಿಲ್ಲ. ಸಿಟ್ಟು, ಹಿಂಸೆ, ಅಸಹಕಾರ ಯಾವ ಸ್ವರೂಪದಲ್ಲಾದರೂ ರೂಪ ಪಡೆಯಬಹುದು. ರೇವಮ್ಮ ಕೆಳಜಾತಿಯ ಮೂಲದ ವೃತ್ತಿಯವಳಾದ ಕಾರಣ ಸಹಜವಾಗಿ ಭಾಷೆಗೆ ಪ್ರತಿಭಟನಾತ್ಮಕ ಶಕ್ತಿ ದೊರೆತಿದೆ. ಇನ್ನೂ ಮಹಿಳೆಯರು ಜನಪದ ಸಂಸ್ಕೃತಿಗೆ ಮುಖಾಮುಖಿಗೊಳ್ಳುವುದರಿಂದ ಅವರ ಭಾಷೆಯಲ್ಲಿ ಒರಟುತನ, ಸಿಟ್ಟು, ಆಕ್ರೋಶ, ಸಾಚಾತನ ಒಡಮೂಡುವುದನ್ನು ಕಾಣುತ್ತೇವೆ.

ರೇವಮ್ಮನ ವೃತ್ತಿಯ ಪದವಾದ 'ಕನ್ನಡಿ' ಅರಿವಿನ ರೂಪಕವಾಗಿ ಬರುತ್ತದೆ. ಲಿಂಗಾಚಾರ, ಶಿವಾಚಾರ ನಿಷ್ಠೆಯ ಪ್ರತಿಪಾದನೆ 'ಲಿಂಗ ಜಂಗಮದ ಪ್ರಸಾದಕ್ಕೆ ತಪ್ಪಿದಲ್ಲಿ ಕೊಲಬಾರದೆ?' ಎಂಬ ಪ್ರಶ್ನೆಯಲ್ಲಿ, ಉತ್ತರವಾಗಿ ಕಾಣಬಹುದು. ಇನ್ನೂ 'ಪಾದರಕ್ಷೆಯನಿಕ್ಕುವೆ' ಎಂಬ ಸಾಲು ಅಂಬಿಗರ ಚೌಡಯ್ಯನ ವಚನವನ್ನೇ ನೆನಪಿಗೆ ತರುತ್ತದೆ. ಇಲ್ಲಿ ನಿಷ್ಠಾರಹಿರತನ್ನು ಶಿಕ್ಷಿಸುವ ತೀವ್ರತೆ ಕಂಡುಬರುತ್ತದೆ. ಭ್ರಷ್ಠ ಭವಿಗಳನ್ನು ವಿಡಂಬನೆ ಮಾಡುತ್ತ, ನಿಷ್ಠಾರಹಿತ ಜೀವನವನ್ನು ವಿರೋಧಿಸುತ್ತಾಳೆ. ಇಂತವರನ್ನು ಕಂಡು ಸವಾಲನ್ನು ಹಾಕುವ ದಿಟ್ಟತನವನ್ನು ತೋರುತ್ತಾಳೆ. ವಚನಕಾರರು ನಡೆ-ನುಡಿಯಲ್ಲಿ ಏಕತೆಯನ್ನು ಹೊಂದಬೇಕು. ಆಚಾರ ವಿಹೀನರನ್ನು ಕುರಿತೆ ಕಠಿಣ ಪದ ಪ್ರಯೋಗ ಮಾಡಿದ್ದಾಳೆ. ಶರಣತತ್ವದ ಪ್ರತಿಪಾದನೆಯ ತೀವ್ರತೆಯಿಂದ ಕೂಡಿದ ಅಭಿವ್ಯಕ್ತಿಯಾಗಿದೆ.

ಕಾಲಕಣ್ಣಿಯ ಕಾಮಮ್ಮ

ಹನ್ನೆರಡನೇ ಶತಮಾನದ ವಚನಕಾರರ ಕ್ರಾಂತಿ ಸಮಾಜದ ಮೂಲೆ ಮೂಲೆಗೆ ತಲುಪಿ ಜಾಗೃತಿಯನ್ನುಂಟು ಮಾಡಿದ್ದು ಚರಿತ್ರೆಯ ಪುಟದಲ್ಲಿದೆ. ಇಂತಹ ಕ್ರಾಂತಿಗೆ ಬಲ ತಂದು ಕೊಟ್ಟವರು ವೃತ್ತಿನಿರತರು. ಅದರಲ್ಲಿ ಮಹಿಳಾ ವಚನಕಾರರ ಶ್ರಮ ಮಹತ್ವದ ಸ್ಥಾನವನ್ನು ಪಡೆದಿದೆ.

ವಚನಕಾರ್ತಿಯರು ಹೆಣ್ಣು ಎಂಬ ಕುಬ್ಜ ಮನೋಭಾವಬಿಟ್ಟು, ಸ್ವಾತಂತ್ರ್ಯತೆ ಮೆರೆದಿರುವುದು ಇಡಿ ವಿಶ್ವದ ಮಹಿಳಾ ಸಮೂಹಕ್ಕೆ ಧ್ವನಿ ಬಂದಂತಾಗಿದೆ. ತಮ್ಮದೇ ಆದ ಅಭಿವ್ಯಕ್ತಿಯನ್ನುಳ್ಳ ವಚನಗಳನ್ನು ರಚಿಸಿ, ವೃತ್ತಿ ನಿಷ್ಠೆಯನ್ನು ಮೆರೆದಿರುವುದನ್ನು ಕಾಣುತ್ತೇವೆ. ಅಲ್ಲದೆ ಅನೇಕ ಮಹಿಳಾ ವಚನಕಾರರು ವ್ರತಾಚಾರದ ಬಗ್ಗೆ ಮಾತನಾಡಿದ್ದಾರೆ. ಮಹಿಳೆಯನ್ನು ವ್ರತಾಚಾರದ ಹೊರಗಿನಿಂದ ನೋಡಲು ಸಾಧ್ಯವಿಲ್ಲದ ಕಾಲಘಟ್ಟದಲ್ಲಿ ವಚನಕಾರರು ಹಲವು ವೈಚಾರಿಕ ಚಿಂತನೆ ಮಾಡಿದರೂ ಇವರು ಮಾತ್ರ ವ್ರತಾಚಾರವನ್ನೆ ಪ್ರತಿಪಾದನೆ ಮಾಡುವ ಪ್ರಯತ್ನ ಮಾಡಿದ್ದಾರೆ. ಇಂತಹ ಪರಂಪರೆಯ ಸ್ಥಾನದಲ್ಲಿ ಕಾಲಕಣ್ಣಿಯ ಕಾಮಮ್ಮ ಒಬ್ಬಳಾಗಿ ನಿಲ್ಲುತ್ತಾಳೆ. ದೊರೆತ ಈಕೆಯ ಒಂದು ವಚನದಲ್ಲಿ ವ್ರತಾಚಾರ, ನಿಷ್ಠೆಯನ್ನು ಕುರಿತಂತೆ ತನ್ನ ವಿಚಾರವನ್ನು ಹೇಳುತ್ತಾಳೆ.

ಎನ್ನ ಕರಣಂಗಳ ಲಿಂಗದಲ್ಲಿ ಕಟ್ಟುವೆ:
ಗುರುಲಿಂಗ ಜಂಗಮದ ಕಾಲಕಟ್ಟುವೆ:
ವ್ರತಭ್ರಷ್ಟರ ನಿಟ್ಟೊರಸುವೆ, ಸುಟ್ಟು ತುರುತುರನೆ ತೂರುವೆ,
ನಿರ್ಭೀತ ನಿಜಲಿಂಗದಲ್ಲಿ!

(ಶಿವಶರಣೆಯರ ವಚನ ಸಂಪುಟ, ವಚನ ಸಂಖ್ಯೆ: ೬೬೮)

ಈ ವಚನದಲ್ಲಿ ಮೊದಲೆರಡು ಸಾಲಿನಲ್ಲಿ ಶರಣತತ್ವದ ನಿಷ್ಠೆ ಇದೆ. ಮೂರನೆ ಸಾಲಿನಲ್ಲಿ ವ್ರತ ನಿಷ್ಠೆ ಇಲ್ಲದವರನ್ನು, ಭಕ್ತರಲ್ಲದ ಭವಿಗಳನ್ನು ವ್ರತಭ್ರಷ್ಟರೆಂದು ಪರಿಗಣಿಸಲಾಗಿದೆ.

ಅಂತವರನ್ನು ನಿರಾಕರಿಸುವ, ಶಿಕ್ಷಿಸುವ ಭಾವವನ್ನೊಳಗೊಂಡಿದೆ. ವಚನ ಕಟ್ಟಿರುವ ವಿಧಾನವೆಂದರೆ ಭಕ್ತಿಯ ತೀವ್ರತೆ, ಪ್ರಾಮಾಣಿಕತೆ, ನಿಷ್ಠಾ ಪೂರ್ಣ ಬದುಕು ತತ್ವ ಪಾಲನೆಯ ಹಂಬಲದಿಂದ ಕೂಡಿದೆ. 'ನಿಟ್ಟೊರಸುವೆ, ಸುಟ್ಟು ತರುತುರನೆ ತೂರವೆ' ಎಂಬಂತ ಆಡು ಭಾಷೆಯ ಪದ ಪ್ರಯೋಗ ವಚನಕ್ಕೆ ಜನಪದ ಹಾಡಿನ ಸೊಗಡನ್ನು ತಂದುಕೊಟ್ಟಿದೆ. ತನ್ನ ತಿಳುವಳಿಕೆಯನ್ನು ನಿರ್ಭೀತಿಯಿಂದ ಅಭಿವ್ಯಕ್ತಿಸುವ ಪ್ರಯತ್ನ ಕಾಮಮ್ಮನದಾಗಿದೆ.

ಕಾಟಕೂಟಯ್ಯಗಳ ಪುಣ್ಯಸ್ತ್ರೀ ರೇಚವ್ವೆ.

ಅನೇಕ ವಚನಕಾರ್ತಿಯರು ವ್ರತಾಚಾರ ನಿಷ್ಠೆಯನ್ನೆ ಪ್ರತಿಪಾದಿಸಿದ್ದಾರೆ. ವ್ರತ ಎನ್ನುವುದು ಆಚರಣೆಯ ಪರಿದಿಯಾಚೆಗೆ ನಡೆಯುಂತಹದ್ದು. ಹಿಂದಿನ ಪರಂಪರೆಯಿಂದಲೂ ನಂಬಿಕೊಂಡು ಬಂದಿರುವಂತಹ ಸ್ತ್ರೀ ಕೇಂದ್ರಿತವಾಗಿ ನಡೆಯುವ ಚಿಂತನೆಯಾಗಿದೆ. ನಿಷ್ಠೆ ಇದಕ್ಕೆ ಮುಖ್ಯ. ಇಂತಹ ತತ್ವ ಪ್ರತಿಪಾದನೆ ಮಾಡುವ ವಚನಕಾತಿರ್ಯರಲ್ಲಿ ರೇಚವ್ವೆ ಒಬ್ಬಳಾಗಿದ್ದಾಳೆ. ಈಕೆಯ ಒಂದು ವಚನ.

ಬಂಜೆಯಾವಿಂಗೆ ಕ್ಷೀರವುಂಟೆ?
ವ್ರತಹೀನನ ಬೆರೆಯಲುಂಟೆ
ನೀ ಬೆರೆದಡೂ ಬೆರೆ; ನಾನೊಲ್ಲೆ ನಿಜ ಶಾಂತೇಶ್ವರಾ.

(ಶಿವಶರಣೆಯರ ವಚನ ಸಂಪುಟ, ವಚನ ಸಂಖ್ಯೆ: ೬೬೭)

ಈ ವಚನದಲ್ಲಿ ರೇಚವ್ವೆ ತನ್ನ ನಿಲುವು ನಿರ್ಧಾರಗಳನ್ನು ಪ್ರಕಟಿಸುತ್ತಾಳೆ.

ಬಂಜೆ ಆಕಳಿನ ರೂಪಕದ ಮೂಲಕ ನಿಷ್ಠಾರಹಿತರನ್ನು ಪ್ರಶ್ನಿಸುತ್ತಾಳೆ. ಭಕ್ತನಾದವನಿಗೆ ನಡೆ-ನುಡಿಯ ಆಚರಣೆಯಲ್ಲಿ ನಂಬಿಕೆಯಿದ್ದು, ಅದನ್ನೆ ಬದುಕನ್ನಾಗಿ ಮಾಡಿಕೊಳ್ಳಬೇಕು. ಆಚಾರ ನಿಷ್ಠರಲ್ಲದವರನ್ನು ಕುರಿತೆ ಮಾತಾಡುತ್ತಾಳೆ. ಅಂತವರ ಸಂಗವು ಸಲ್ಲದು ಎಂದು ಆದೇಶವನ್ನು ನೀಡುತ್ತಾಳೆ. ನಿಷ್ಠಾರಹಿತರನ್ನು ನೀ ಬೇಕಾದರೆ ಸೇರು ಎಂದು ತನ್ನ ದೈವವನ್ನೆ ಪ್ರಶ್ನಿಸುತ್ತಾಳೆ. ವ್ಯರ್ಥ ಬದುಕಿಗೆ ರೂಪಕವಾಗಿ ಆಕಳು ಹೋಲಿಕೆಗೊಳ್ಳುತ್ತದೆ. ಪ್ರಶ್ನೆಗಳ ಮೂಲಕ ತತ್ವ ನಿಷ್ಠೆಯನ್ನು, ಧರ್ಮ ಮತ್ತು ಸ್ತ್ರೀ ಧರ್ಮ ಪರಿಪಾಲನೆಯನ್ನು ಪ್ರತಿಪಾದಿಸುತ್ತಾಳೆ. ದೈವವನ್ನೆ, ಪ್ರಣೀತ ವಿಚಾರವನ್ನೆ ಪ್ರಶ್ನಿಸುವ ತಾತ್ವಿಕ ನಿಲುವು ವಚನಕಾರರ ಆಂದೋಲನ ಪ್ರತಿಫಲವಾಗಿಯೇ ಮೂಡಿದೆ. ರೇಚವ್ವೆ ತನ್ನ ನಂಬಿಕೆಯನ್ನು ನಿರ್ಧಾರವನ್ನು ಅಭಿವ್ಯಕ್ತಿಸಿದ್ದಾಳೆ.

ಕೊಂಡೆ ಮಂಚಣ್ಣಗಳ ಪುಣ್ಯಸ್ತ್ರೀ ಲಕ್ಕಮ್ಮ

ವಚನಕಾರರ ಆಂದೋಲನಕ್ಕೆ ಬಂದು ಸೇರಿಕೊಂಡು ಶರಣರಾಗಿ ಸಾಧನೆಯಲ್ಲಿ ತೊಡಗಿಕೊಂಡವರು ಹಲವಾರು ಜನ. ಒಂದು ಸಾಮಾಜಿಕ ಕ್ರಾಂತಿಯಾಗಿ ಬೆಳೆದು ಬಂದ ಈ ಚಳುವಳಿಯನ್ನು ಹಲವು ಆಯಾಮಗಳಲ್ಲಿ ಗುರುತಿಸಲಾಗಿದೆ. ಮಾನವನ ಬದುಕನ್ನು ಉನ್ನತ ಮಟ್ಟಕ್ಕೇರಿಸುವ ಚಿಂತನೆಗಳು ನಡೆದಿವೆ. ಕಾಯಕ-ದಾಸೋಹ ಪರಿಕಲ್ಪನೆಯ ವಿಶಿಷ್ಟ ಮತ್ತು ಮಹತ್ವದ ಸಿದ್ಧಾಂತವನ್ನು ಕಟ್ಟಿಬೆಳೆಸಿದ್ದಾರೆ. ಹೆಣ್ಣು-ಗಂಡು ಎಂಬ ಬೇದಭಾವ ಅಳಿಸಿ ಸಮಾನತೆ ಯನ್ನು ಸಾರಿದ್ದಾರೆ. ಲಿಂಗವಂತರಾಗಿ ಆಧ್ಯಾತ್ಮದ ಜ್ಞಾನವನ್ನು ಸಂಪಾದಿಸಲು ಮುಖ್ಯ ಧಾರ್ಮಿಕ ವೇದಿಕೆಯಾಗಿ ಅನುಭವ ಮಂಟಪ ನಿರ್ಮಾಣಗೊಂಡಿದ್ದಾಗಿದೆ. ಇಂತಹ ಸಿದ್ಧಾಂತಗಳನ್ನು ಗಟ್ಟಿಗೊಳಿಸುವ ನಿಟ್ಟಿನಲ್ಲಿ ಅನೇಕ ವಚನಕಾರರು ತತ್ವ ಸಿದ್ಧಾಂತದ ಪ್ರತಿಪಾದನೆಯ ಜತೆಗೆ ಪ್ರಸಾರ ಮಾಡುವ ಕೆಲಸವನ್ನು ನಿರ್ವಹಿಸಿದ್ದಾರೆ. ಹೀಗೆ ನಿರ್ವಹಿಸಿದವರಲ್ಲಿ ಅನೇಕ ಮಹಿಳೆಯರು ಇದ್ದಾರೆ. ವ್ರತದ ಪರಿಕಲ್ಪನೆಯನ್ನು ರೂಢಿಸಿಕೊಂಡು ಅದನ್ನು ಪ್ರತಿಪಾದನೆ ಮಾಡಿದ್ದಾರೆ. ಇಂತವರ ಸಾಲಿನಲ್ಲಿ ಲಕ್ಕಮ್ಮ ಕೂಡ ನಿಲ್ಲುತ್ತಾಳೆ. ಈಕೆಯು ಒಂದು ವಚನದಲ್ಲಿ ವ್ರತನಿಷ್ಠೆಯನ್ನೆ ನಿರ್ವಚಿಸುತ್ತಾಳೆ.

ಆಯುಷ್ಯ ತೀರಲು ಮರಣ.
ವ್ರತ ತಪ್ಪಲು ಶರೀರ ಕಡೆ.
ಮೇಲು ವ್ರತವೆಂಬ ತೂತರ ಮೆಚ್ಚ
ನಮ್ಮ ಅಗಜೇಶ್ವರ ಲಿಂಗವು.

(ಶಿವಶರಣೆಯರ ವಚನ ಸಂಪುಟ, ವಚನ ಸಂಖ್ಯೆ: ೬೬೯)

ಸರಳವಾಗಿಯೇ ಅಭಿವ್ಯಕ್ತಗೊಂಡಿರುವ ಈ ವಚನದಲ್ಲಿ ವ್ರತಾಚಾರ ನಿಷ್ಠೆ, ಸಮಾಜದಲ್ಲಿ ಬೇರೂರಿದ್ದ, ಡಂಬಾಚಾರದ, ವೇಷದಾರಿಗಳ ವಿಡಂಬನೆಯನ್ನು ಹೇಳುತ್ತದೆ. ಗಣಚಾರ ನಿಷ್ಠೆಯುಳ್ಳ ಮನೋಭಾವ ಲಕ್ಕಮ್ಮನದು. ನಡೆ-ನುಡಿ ತಪ್ಪಿ ಮತ್ತೆ ಅದನ್ನು ಸಾಧಿಸಬಹುದೆಂದು ಹೇಳುವಂತವರನ್ನು ಕಂಡಿಸುತ್ತಾಳೆ. ಜೀವ ಹೋದರು ವ್ರತ ತಪ್ಪಬಾರದು ಎಂದು ಅಭಿಪ್ರಾಯ ಪಡುತ್ತಾಳೆ. ಸರಳವಾದ ಭಾಷೆಯ ಬಳಕೆ ಈ ವಚನದಲ್ಲಿದ್ದು ವಿಷಾದದಿಂದ ಕೂಡಿದ ರಚನೆಯಲ್ಲಿ ಅಭಿವ್ಯಕ್ತಗೊಳ್ಳುತ್ತದೆ. ಈ ವಚನದ ಮೂಲಕ ಆಕೆಯ ವ್ರತಾಚಾರ ನಿಷ್ಠೆ, ಪ್ರಾಮಾಣಿಕ ಬದುಕನ್ನು ಅರಿಯಬಹುದು.

ಕೊಟ್ಟಣದ ಸೋಮಮ್ಮ

ಶ್ರಮದ ಅನುಭವದ ಮೂಲಕ ಆಧ್ಯಾತ್ಮದ ಕುರುಹು ಪಡೆದವರು ವೃತ್ತಿನಿರತ ವಚನಕಾರರು. ಶ್ರಮದ ದೇವರ ಮೂಲಕ ಅನುಭಾವದ ನೆಲೆ ಕಂಡುಕೊಂಡವರಾಗಿದ್ದಾರೆ. ಬದುಕಿನ ಮೌಲ್ಯಗಳನ್ನು ವೃತ್ತಿ ಸಿದ್ಧಾಂತದ ಮೂಲಕ ಪ್ರತಿಪಾದಿಸಿ ಪ್ರಚಾರಕ್ಕೆ ತಂದರು. ವೃತ್ತಿಯ ಪ್ರಸ್ತುತತೆಯನ್ನು ತಿಳಿಸಿ, ಅದಕ್ಕೆ ಗೌರವವನ್ನು ನೆಲೆಗೊಳಿಸಿದವರು ವೃತ್ತಿನಿರತ ವಚನಕಾರರು. ಇವರಲ್ಲಿ ತನ್ನ ವೃತ್ತಿಯೊಂದಿಗಿನ ಅನನ್ಯತೆಯನ್ನು ಕಂಡುಕೊಂಡವಳು ಸೋಮಮ್ಮ. ಈಕೆ ಕೊಟ್ಟಣ ಕುಟ್ಟುವ ವೃತ್ತಿಯನ್ನು ಅನುಸರಿಸಿದವಳು. ತನ್ನದೇ ಆದ ತಿಳುವಳಿಕೆಯಲ್ಲಿ ಒಂದು ವಚನವನ್ನು ಕಟ್ಟಿಕೊಟ್ಟಿದ್ದಾಳೆ.

ಹದ ತಪ್ಪಿಕುಟ್ಟಲು ನುಚ್ಚಲ್ಲದೆ ಅಕ್ಕಿಯಿಲ್ಲ.
ವ್ರತಹೀನನ ನೆರೆಯೆ ನರಕವಲ್ಲದೆ ಮುಕ್ತಿಯಿಲ್ಲ.
ಅರಿಯದುದು ಹೋಗಲಿ, ಅರಿದು ಬೆರೆದೆನಾದಡೆ,
ಕಾದ ಕತ್ತಿಯಲ್ಲಿ ಕಿವಿಯ ಕೊಯ್ವರಯ್ಯಾ,
ಒಲ್ಲೆ ಬಲ್ಲೆನಾಗಿ, ನಿಮ್ಮಾಣೆ ನಿರ್ಲಜ್ಜೇಶ್ವರಾ.

(ಶಿವಶರಣೆಯರ ವಚನ ಸಂಪುಟ, ವಚನ ಸಂಖ್ಯೆ: ೬೭೦)

ಸೋಮಮ್ಮ ತನ್ನ ವೃತ್ತಿಯ ದುಷ್ಟಾಂತವನ್ನು ಬಳಸಿಕೊಂಡು ತನ್ನ ನಿಲುವನ್ನು ಧ್ವನಿಪೂರ್ಣವಾಗಿಯೇ ಹೇಳುವ ಪ್ರಯತ್ನ ಮಾಡಿದ್ದಾಳೆ. ವಚನಕಾರರಿಗೆ ಸ್ವರ್ಗ, ನರಕವೆಂಬುದು ಬೇರೆಲ್ಲೋ ಇಲ್ಲ. ಅದು 'ಆಚಾರವೇ ಸ್ವರ್ಗ ಅನಾಚಾರವೆ ನರಕ' ಎಂದು ಬಸವಣ್ಣನ ವಚನದಲ್ಲಿ ಇದರ ಸ್ಪಷ್ಟ ಕಲ್ಪನೆಯಿದೆ. ಮಾನವ ಮುಕ್ತಿಯನ್ನು ಪಡೆಯಲು ಭಕ್ತನಾಗಿರಬೇಕು. ಭವಿತನವನ್ನು ಬಿಟ್ಟಿರಬೇಕು. ವ್ರತನಿಷ್ಠೆಯಲ್ಲಿ ಬದುಕಬೇಕು. ನಡೆ-ನುಡಿಯಲ್ಲಿ ಏಕತೆಯನ್ನು ಹೊಂದಿರಬೇಕು. ಬದುಕು ಮತ್ತು ಅವನ ಸಾಧನೆ ಒಂದೆ ಆಗಿರಬೇಕು. ಅಂತರಂಗ ಮತ್ತು ಬಹಿರಂಗದಲ್ಲಿ ಶುದ್ಧನಾಗಿರಬೇಕು. ಆಗಾದಲ್ಲಿ ಮಾತ್ರ ಅವನಿಗೆ ಮುಕ್ತಿ ಎಂಬುದು ವಚನಕಾರರ ನಂಬಿಕೆ. ಯಾರೂ ಆಚಾರವಂತರಲ್ಲೋ ಅವರು ಇಲ್ಲಿಯೂ ಸಲ್ಲುವರಲ್ಲ ಅಲ್ಲಿಯೂ ಸಲ್ಲುವರಲ್ಲಾ ಎಂಬುದು ಮಹತ್ವದವಾದ. ಹಾಗಾಗಿ ಸೋಮಮ್ಮ ವ್ರತಹೀನರನ್ನು ಖಂಡಿಸುತ್ತಾಳೆ. ಅಂತವರಿಗೆ ಮುಕ್ತಿ ಅಸಾಧ್ಯದ ಮಾತು ಎಂದೇ ಹೇಳುತ್ತಾಳೆ. ತಪ್ಪು ಮಾಡಿ ನರಕಕ್ಕೆ ಹೋದವರನ್ನು ಅಲ್ಲಿ ಶಿಕ್ಷಿಸಲಾಗುತ್ತದೆ ಎಂಬ ಧಾರ್ಶನಿಕರ ನಂಬಿಕೆಯನ್ನು ಬದುಕಿನ ಲೋಕಕ್ಕೆ ಸಮಾಹಿತಗೊಳಿಸುವಂತೆ 'ಕಾದ ಕತ್ತಿಯಲ್ಲಿ ಕಿವಿಯ ಕೊಯ್ವರಯ್ಯಾ' ಎಂಬ ಸಾಲು ಬಂದಿದೆ. ಶಿವಭಕ್ತಿಯನ್ನು ಅರಿತು, ಭವಿಗಳನ್ನು ಬೆರೆದರೆ ಅದು ಮಹಾಪರಾದ. ಸೋಮಮ್ಮನ ಗಣಾಚಾರ ನಿಷ್ಠೆ ಪ್ರಾಮಾಣಿಕತೆ ಇಲ್ಲಿ ಅಭಿವ್ಯಕ್ತಗೊಳ್ಳುತ್ತದೆ. ಅರಿವಿನ ಸಾಧನೆಗೆ ತೊಡಗಿ ಅನುಭಾವಿಯಾಗಿ ತಾತ್ವಿಕ ನಿಲುವನ್ನು ಕಂಡು ಕೊಂಡಿದ್ದು, ಅದನ್ನು ಬೋಧಿಸುವ, ತಿಳಿಸುವ ಪ್ರಯತ್ನ ಈ ವಚನದಲ್ಲಿದೆ.

ವಚನದ ಭಾಷೆಯ ಬಳಕೆ ಜನಪದ ಹಿನ್ನೆಲೆಯಿಂದಲೇ ಮೂಡಿದೆ. ತನ್ನ ವೃತ್ತಿಯ ಪರಿಭಾಷೆ ಬಳಸಿ ತನ್ನ ನಿಲುವನ್ನು ಪ್ರಕಟಿಸುತ್ತಾಳೆ. ಬೇಡವಾದುದರ ನಿರಾಕರಣೆಯ ಜತೆಗೆ

ಅವಶ್ಯವಾಗಿ ಮಾಡಬೇಕಾದುದರ ಅರಿವು ಇದೆ. ಅದನ್ನೆ ಹೇಳುತ್ತಾಳೆ. ಈ ವಚನ ವ್ರತಾಚಾರ ನಿಷ್ಠೆಯೇ ಪ್ರಧಾನ ಆಶಯದೊಂದಿಗೆ ಅಭಿವ್ಯಕ್ತಗೊಳ್ಳುತ್ತದೆ.

ಗುಂಡಯ್ಯಗಳ ಪುಣ್ಯಸ್ತ್ರೀ ಕೇತಲದೇವಿ

ಶಿವಭಕ್ತಿಗೆ ಹೆಸರಾದವರು ಗುಂಡಯ್ಯ ಮತ್ತು ಈತನ ಸತಿ ಕೇತಲದೇವಿ. ಇವರು ಕುಂಬಾರ ಕುಲದವರಾಗಿದ್ದು, ಗಡಿಗೆ ತಯಾರಿಕೆಯ ವೃತ್ತಿಯವರು. ಶಿವನಿಷ್ಠೆ, ಭಕ್ತಿನಿಷ್ಠೆ ಇವರ ವ್ರತವಾಗಿದೆ. ವೃತ್ತಿ ನಿಷ್ಠೆಯಿಂದಲೇ ಶಿವನ ಸಾಕ್ಷಾತ್ಕಾರವನ್ನು ಪಡೆದ ಶರಣರೆನಿಸಿದ್ದಾರೆ. ಅದಕ್ಕೆ ಇವರ ಮೇಲಿನ ಕಥೆಯೇ ನಿರೂಪಿಸುತ್ತದೆ. ಕೇತಲದೇವಿ ತನ್ನ ಪತಿಗೆ ಗಡಿಗೆಯನ್ನು ತಯಾರಿಸುವಲ್ಲಿ ಸಹಾಯಕಿಯಾಗಿ ವೃತ್ತಿಯಲ್ಲಿ ನಿರತಳಾಗಿರುತ್ತಾಳೆ. ತನ್ನ ಮಡಿಕೆಯ ಗತಿಗೆ ಶಿವನನ್ನು ಕುಣಿಯುವಂತೆ ಗುಂಡಯ್ಯ ಮಾಡಿದ್ದಾನೆಂಬ ದಂತಕತೆಯಿದೆ. ಹಾಗೇಯೇ ಕೇತಲದೇವಿಯ ಮೇಲೆ ಒಂದು ಕತೆಯಿದೆ. ಶಿವಲಿಂಗಕ್ಕೆ ದಿನನಿತ್ಯವು ಪಾವುಡ ಹಾಕುವ ವ್ರತ ಕೈಗೊಂಡಿರುತ್ತಾಳೆ. ಒಂದು ದಿನ ಸಿಗದಿರಲು ತನ್ನ ಎದೆಯ ಚರ್ಮವನ್ನೆ ಕಿತ್ತು ಅರ್ಪಿಸುತ್ತಾಳೆ. ಇಂತಹ ಕಥೆಗಳಿಂದ ಕೇತಲದೇವಿ ಭಕ್ತಿಯ ಜೀವನವನ್ನು, ಪ್ರಾಮಾಣಿಕ ಬದುಕನ್ನು ತಿಳಿಯಬಹುದಾಗಿದೆ. ಈಕೆ ವಚನಗಳನ್ನು ರಚಿಸಿದ್ದು, ಎರಡು ವಚನಗಳು ದೊರೆತಿವೆ. ಅವುಗಳ ಮುಖ್ಯ ಆಯಶ ವ್ರತಧರ್ಮ ಪರಿಪಾಲನೆಯೇ ಆಗಿದೆ.

ಹದ ಮಣ್ಣಲ್ಲದೆ ಮಡಿಕೆಯಾಗಲಾರದು.
ವ್ರತಹೀನನ ಬೆರೆಯಲಾಗದು.
ಬೆರೆದಡೆ ನರಕ ತಪ್ಪದು;
ನಾನೊಲ್ಲೆ ಬಲ್ಲೆನಾಗಿ, ಕುಂಬೇಶ್ವರಾ.
(ಶಿವಶರಣೆಯರ ವಚನ ಸಂಪುಟ, ವಚನ ಸಂಖ್ಯೆ: ೬೮೯)

ತನ್ನ ವೃತ್ತಿಯ ಹದಮಣ್ಣು, ಮಡಿಕೆ ಮುಂತಾದ ಪರಿಕರಗಳನ್ನು ಬಳಸಿಕೊಂಡು ಅನುಭವವನ್ನು ಹೇಳುವ ಪ್ರಯತ್ನ ಕೇತಲದೇವಿಯ ಈ ವಚನದ ಮೊದಲ ಸಾಲಿನಲ್ಲಿದೆ. ವ್ರತನಿಷ್ಠೆಯ ಮನೋಭಾವವು ಈ ವಚನದಲ್ಲಿದೆ. ಮಾನವನು ಬದುಕನ್ನು ಹದವರಿತು ಮಾಡಬೇಕೆಂದು ನಿರ್ದೇಶನವೊಂದು 'ಹದಮಣ್ಣಲ್ಲದೆ ಮಡಿಕೆಯಾಗದು' ಎಂಬ ಸಾಲಿನಲ್ಲಿ ಮಂಡನೆಗೊಳ್ಳುತ್ತದೆ. 'ಮಡಿಕೆ' ರೂಪಗೊಂಡ ವಸ್ತು. ಸಾಧನೆಯಿಂದ ವ್ರತದಿಂದ ಮನುಷ್ಯ ರೂಪಗೊಳ್ಳಬೇಕೆಂಬ ಹೋಲಿಕೆ ಬರುತ್ತದೆ. ಸೋಮಮ್ಮನ ವಚನದಂತೆ ಈ ವಚನದ ನಿರೂಪಣೆಗೊಂಡಿದೆ. ವ್ರತತಪ್ಪಿ ನಡೆಯುವರನ್ನು ನರಕಕ್ಕೆ ಭಾಜನರಾಗುತ್ತಾರೆ. ಅಂತವರ ಸಂಗವು ಸಲ್ಲ ಎಂದು ಹೇಳುತ್ತಾಳೆ. ಈ ವಚನದ ಮೂಲಕ ಕೇತಲದೇವಿಯ ವ್ರತನಿಷ್ಠೆ ಪ್ರಾಮಾಣಿಕತೆ ವೃತ್ತಿ ಮತ್ತು ಬದುಕನ್ನು ಏಕೀಭವಿಸಿಕೊಂಡಿರುವ ರೀತಿಯನ್ನು ಕಂಡುಕೊಳ್ಳಬಹುದು.

ಈಕೆಯ ಇನ್ನೊಂದು ವಚನದಲ್ಲಿ ಲಿಂಗವಂತಿಕೆಯನ್ನು ಪ್ರತಿಪಾದಿಸುತ್ತಾಳೆ. ಶಿವನಿಷ್ಠೆಯನ್ನು ಹೇಳುತ್ತಾಳೆ. ತನ್ನ ತಿಳುವಳಿಕೆಯನ್ನು ಸಾದರಪಡಿಸುತ್ತಾಳೆ. ಆಧ್ಯಾತ್ಮದ ಸಾಧನೆಯನ್ನು ಮಾಡುವವರು

ನಡೆ-ನುಡಿಯಲ್ಲಿ ಏಕತೆಯಿರಬೇಕು. ಹಾಗಾದಲ್ಲಿ ಅರಿವನ್ನು ಪಡೆಯಲು ಸಾಧ್ಯ ಎನ್ನುತ್ತಾಳೆ. ಭವಿತನವನ್ನು ನಿರಾಕರಿಸಿ ಭಕ್ತನಾಗಿ ಸಾಧನೆ ಮಾಡಿ ಶರಣರಾದವರನ್ನು ಶಿವನೆಂದೆ ಕಾಣುತ್ತಾಳೆ.

ಸೂಳೆ ಸಂಕವ್ವೆ

ಹನ್ನೆರಡನೇಯ ಶತಮಾನದ ವಚನಕಾರರ ಚಿಂತನೆ ಸಮಾಜದ ಕಟ್ಟಕಡೆಯ ವ್ಯಕ್ತಿ, ಸಮುದಾಯ, ವೃತ್ತಿಯನ್ನು ತಲುಪಿ, ಹೊಸ ಬದಲಾವಣೆಗೆ ಪ್ರೇರಕ ಶಕ್ತಿಯಾಗಿ ನಿಂತಿತು. ಮಾನವೀಯ ಮೌಲ್ಯಗಳ ವಿಚಾರಗಳು ನೊಂದು, ಬೆಂದು ಬಸವಳಿದಿದ್ದ ಜನರಿಗೆ ಆಶಾಕಿರಣ ವಾಯಿತು. ಹಾಗಾಗಿ ಸಮಾಜದಲ್ಲಿ ಶೋಷಣೆಯ ಬದುಕಿಗೆ ಬೇಸತ್ತಿದ್ದವರು ಬಂದು ಈ ಚಳುವಳಿಗೆ ಸೇರಿ ಉನ್ನತ ಸ್ಥಾನಕ್ಕೇರಿದರು. ದೇವರು, ಧರ್ಮವನ್ನು ಅಂಗೈಗೆ ತಂದುಕೊಟ್ಟು ಇದ್ದಲ್ಲಿಯೇ ಸಾಧನೆಗೆ ತೊಡಗಿಕೊಳ್ಳುವಂತೆ ಮಾಡಲಾಯಿತು. ಇದರ ಅವಕಾಶವನ್ನು ಪಡೆದು ಜೀವನಮಟ್ಟವನ್ನು ಸುಧಾರಿಸಿಕೊಳ್ಳಲು ಪುರುಷರು, ಮಹಿಳೆಯರು, ವೃತ್ತಿ ಆಧಾರಿತ ಜನ ಸಮುದಾಯವು ಸೇರಿಕೊಂಡಿತು. ಇದರಿಂದ ಅನೇಕ ತಾರತಮ್ಯಗಳು ದೂರವಾದವು. ಅದರಲ್ಲೂ ವೃತ್ತಿನಿರತರಲ್ಲಿ ಆತ್ಮಾಭಿಮಾನವನ್ನು ಜಾಗೃತಿಗೊಳಿಸಿ, ಒಂದು ಪ್ರತಿಭಟನಾತ್ಮಕ ಧ್ವನಿಯನ್ನಾಗಿ ರೂಪಿಸಿತು. ಲಿಂಗಭೇದ ಮರೆತು ಮಹಿಳೆಯರು ಪಾಲ್ಗೊಂಡು ಅನುಭಾವಿಕ ನೆಲೆಯನ್ನು ಕಂಡುಕೊಂಡರು.

ವೃತ್ತಿ ಮುಖೇನ ಧರ್ಮವನ್ನು ಕಾಣತೊಡಗಿದರು. ಅವರಲ್ಲಿ ಚಿಂತನ ಮೂಲವಾದ ಅಭಿವ್ಯಕ್ತಿಯೊಂದನ್ನು ಕಂಡುಕೊಂಡರು. ಅವರಲ್ಲಿ ವೇಶ್ಯೆಯಾಗಿ ಬದುಕನ್ನು ಸಾಗಿಸುತ್ತಿದ್ದ ಸಂಕವ್ವೆ ಒಬ್ಬ ಅನುಭಾವಿಯಾಗಿದ್ದಾಳೆ. ಈಕೆಯು ಶರಣರ ಅನುಭವ ಮಂಟಪದಲ್ಲಿ ರೂಪ ಪಡೆದು ಲಿಂಗವಂತಳಾಗಿ ಆಧ್ಯಾತ್ಮ ಸಾಧನೆಯನ್ನು ಮಾಡಿದ್ದಾಳೆ. ಸಂಕವ್ವೆ ಒಂದು ವಚನವನ್ನು ರಚಿಸಿದ್ದು, ತನ್ನ ವೃತ್ತಿಯ ಪರಿಭಾಷೆಯಲ್ಲಿ ಅಭಿವ್ಯಕ್ತಿಸಿದ್ದಾಳೆ.

ಒತ್ತೆಯ ಹಿಡಿದು ಮತ್ತೊತ್ತೆಯ ಹಿಡಿಯೆ.
ಹಿಡಿದಡೆ ಬತ್ತಲೆ ನಿಲಿಸಿ ಕೊಲುವರಯ್ಯಾ.
ವ್ರತಹೀನನನರಿದು ಬೆರೆದಡೆ
ಕಾದ ಕತ್ತಿಯಲಿ ಕೈ ಕಿವಿ ಮೂಗ ಕೊಯ್ವರಯ್ಯಾ
ಒಲ್ಲೆನೊಲ್ಲೆ ಬಲ್ಲೆನಾಗಿ, ನಿಮ್ಮಾಣೆ ನಿರ್ಲಜ್ಜೇಶ್ವರಾ

(ಶಿವಶರಣೆಯರ ವಚನ ಸಂಪುಟ, ವಚನ ಸಂಖ್ಯೆ: ೯೮೮)

ಸಂಕವ್ವೆಯ ಈ ವಚನದಲ್ಲಿ ತನ್ನ ವೃತ್ತಿಯ ಪರಿಭಾಷೆಯನ್ನು ಬಳಸಿ ತನ್ನ ವೃತ್ತಿ ನಿಷ್ಠೆಯನ್ನು ತಿಳಿಸುತ್ತಾಳೆ. ಆಕೆಯ ಕಾಯಕನಿಷ್ಠೆ, ಪ್ರಾಮಾಣಿಕತೆಯು 'ವ್ರತಹೀನನ ಬೆರೆದಡೆ ಕಾದ ಕತ್ತಿಯಲಿ ಕೈ ಕಿವಿ ಮೂಗ ಕೊಯ್ವರಯ್ಯ.' ಎಂಬ ಸಾಲಿನಲ್ಲಿ ವ್ಯಕ್ತವಾಗುತ್ತದೆ. ಇದರಲ್ಲಿ ವ್ರತ ತಪ್ಪಿ ನಡೆದವರನ್ನು ಶಿಕ್ಷಿಸುವ ಸ್ವರೂಪ, ನಿಷ್ಠೆಯನ್ನು ತೋರಿಸುತ್ತದೆ. ಈ ವಚನದ ತಿರುಳು ವ್ರತಹೀನರನ್ನು ಟೀಕಿಸುವ ವಸ್ತುವನ್ನು ಒಳಗೊಂಡಿದೆ. ಇಷ್ಟಕ್ಕೆ ಈ ವಚನ ಸೀಮಿತಗೊಳ್ಳದೆ

ಆತ್ಮಾಭಿಮಾನದ ಅನನ್ಯತೆಯನ್ನು ಅಭಿವ್ಯಕ್ತಿಸುತ್ತದೆ. ವೃತ್ತಿ ನಿರತರಿಗೆ ತಮ್ಮ ವೃತ್ತಿಯು ಯಾವುದೇ ಇರಲಿ. ಅದು ಶಿವನಿಗೆ ಅರ್ಪಿತವಾದದ್ದು. ಹಾಗಾಗಿ ನಿಷ್ಠೆ, ಪ್ರಾಮಾಣಿಕತೆಯಿಂದ, ಶ್ರದ್ಧಾಪೂರ್ಣವಾಗಿಯೇ ಕೈಗೊಳ್ಳಬೇಕು ಎಂಬ ನಿಲುವು ಸಂಕವ್ವೆಯದು. ಹನ್ನೆರಡನೆ ಶತಮಾನದಂತಹ ಕಾಲಘಟ್ಟದಲ್ಲಿ ಸಮಾಜ ಕಡೆಗಣ್ಣಿನಿಂದ ನೋಡುತ್ತಿದ್ದ ವೃತ್ತಿ, ವ್ಯಕ್ತಿಯಾಗಿದ್ದರೂ, ಈಕೆ ಶರಣ ಸಮೂದಾಯಕ್ಕೆ ಬಂದು ಸೇರಿ, ಶರಣ ಸಂಸ್ಕೃತಿಯನ್ನು ಸ್ವೀಕರಿಸಿ ಹೊಸ ಬದುಕನ್ನು, ಬದುಕಿಗೆ ತಾತ್ವಿಕತೆಯನ್ನು ಕಂಡಿರುವ ಕುರುಹು ಈ ವಚನದಲ್ಲಿ ಸಿಗುತ್ತದೆ. ಹಾಗಾಗಿ ತನ್ನ ವೃತ್ತಿ ಕುರಿತಂತೆ ಆಕೆಗೆ ಹಿಂಜರಿಕೆ, ಅವಮಾನ, ಆತ್ಮ ವಂಚನೆಯೂ ಇಲ್ಲದ ಸಹಜವಾದ ಭಾವವು ಈ ವಚನದ ವಿಶಿಷ್ಟತೆಗೆ ಕಾರಣವಾಗಿದೆ. 'ಒತ್ತೆಯ ಹಿಡಿದು ಮತ್ತೊತ್ತೆಯ ಹಿಡಿಯೆ' ಎಂಬ ಸಾಲು ಆಕೆಯ ಇಡಿ ಬದುಕಿನ ಚಿತ್ರಣವನ್ನೆ ಕಟ್ಟಿಕೊಡುತ್ತದೆ. ಮುಂದಿನ ಸಾಲು ಸಮಾಜಕ್ಕೆ ಜಾರುತ್ತದೆ ಅಂದೆನುಸುತ್ತದೆ. ಸಮಾಜ ನೋಡುತ್ತಿದ್ದ ಬಗೆಯನ್ನು ತಿಳಿಸಿದರೂ ವ್ರತಹೀನರ ಸಂಗವನ್ನು ನಿರಾಕರಿಸುವ ಸಾಲಿನಲ್ಲಿ ಶರಣತತ್ವದ ಪ್ರತಿಪಾದನೆ ಕಾಣುತ್ತದೆ. ನಂತರ ಮತ್ತೊಂದು ಶಿಕ್ಷೆಯ ಪ್ರಮಾಣದ ವಿವರಣೆಯ ಸಾಲು ಬಂದು ತಾತ್ವಿಕತೆಯನ್ನು ಗಟ್ಟಿಗೊಳಿಸುವ ಪ್ರಯತ್ನ ಮಾಡುತ್ತದೆ. ನಂತರ ನಿರಾಕರಣೆಯ ಅಂದರೇ ಬೇಡವಾದುದರ ನಿರಾಕರಣೆ, ಅವಶ್ಯವಾಗಿರುವುದರ ಸ್ವೀಕರಣೆ ಬರುತ್ತದೆ. ನಿರಾಕರಣೆಯಲ್ಲಿ ಸ್ಪಷ್ಟತೆಯಿದ್ದು. ಅದು ಶಿವ ಸಾಕ್ಷಿಯಾಗಿಯೇ ನಡೆಯುತ್ತದೆ. ಸ್ವೀಕರಣೆಯಲ್ಲಿ ತಾತ್ವಿಕ ನಿಷ್ಠೆಯಿದ್ದ ವಚನಕಾರರ ಆಶಯದಲ್ಲಿ ನಿಷ್ಠೆಯ ಬದುಕನ್ನ ಕಟ್ಟಿಕೊಳ್ಳುವ ಸ್ವರೂಪದ ಚಿತ್ರಣ ಬರುತ್ತದೆ. ಮಹತ್ವದ ವಚನಕಾರ್ತಿಯಾಗಿ ಸಂಕವ್ವೆ ಕಾಣುತ್ತಾಳೆ. 'ಹನ್ನೆರಡನೆಯ ಶತಮಾನದಲ್ಲಿ ಸಂಘಟಿಸಿದ ಆಂಧೋಲನದ ಸಾಧ್ಯತೆಯನ್ನು ವಿಸ್ತರಿಸಿದಂತ ಶರಣೆಯಾಗಿ ಈಕೆ ಗುರುತಾಗುತ್ತಾಳೆ.'[೧]

ಈಕೆಯ ದಿಟ್ಟತನ, ಆತ್ಮವಿಶ್ವಾಸದ ಅಭಿವ್ಯಕ್ತಿಯಾಗಿದೆ. 'ತನ್ನ ಆಲೋಚನೆಯನ್ನು, ತನ್ನ ವೃತ್ತಿಯಲ್ಲೇ ತಾನು ಅನುಸರಿಸುತ್ತಿದ್ದ ನೀತಿಯನ್ನು ಹೇಳಿಕೊಳ್ಳಲು ಅವಳಿಗೆ ಯಾವುದೇ ನಾಚಿಕೆಯೂ ಇಲ್ಲ. ಒಬ್ಬ ವೇಶ್ಯೆ (ಅಥವಾ ವೇಶ್ಯೆಯಾಗಿದ್ದವಳು?) ತನಗೆ ಅನಿಸಿದ್ದನ್ನು ಭಾಷೆಯಲ್ಲಿ ಹೇಳಿಕೊಳ್ಳುವಂತಹ ವಾತಾವರಣ ಸೃಷ್ಟಿಯಾಗಿತ್ತು ಎಂಬುದರ ಸೂಚಕವಾಗಿ ಮೇಲಿನಂತಹ ವಚನಗಳಿಗೆ ಮಹತ್ವವಿದೆ. ಅಂತಹ ನಿದರ್ಶನ ಭಾರತದಲ್ಲಿ ಮತ್ತೊಂದಿಲ್ಲ.'[೨] ಹಾಗಾಗಿ ಸಂಕವ್ವೆ ಮಹಿಳಾ ವಚನಕಾರರಲ್ಲಿ ಉನ್ನತ ಮಟ್ಟದ ಚಿಂತಕಿಯಾಗಿ, ವೃತ್ತಿಯಾಧಾರಿತ ಬದುಕಲ್ಲಿ ಮಹತ್ವದ ಸ್ಥಾನ ಪಡೆದಿದ್ದಾಳೆ.

ಹಾದರ ಕಾಯಕದ ಗಂಗಮ್ಮ

ಕಾಯಕತತ್ವವನ್ನೆ ಉಸಿರಾಗಿಸಿಕೊಂಡಿದ್ದವರು ವೃತ್ತಿನಿರತ ವಚನಕಾರರು. ಇವರು ಕಾಯಕದ ಕುರಿತು ಮಾತಾಡಿದಷ್ಟು ಬೇರೆ ವಿಷಯದಲ್ಲಿ ಮಾತಾಡಿರುವುದು ಕಡಿಮೆ. ಏಕೆಂದರೆ ವೃತ್ತಿಯನ್ನು ಕೇವಲ ಜೀವನ ಮಾಡಲಷ್ಟೇ ಬಳಸಿಕೊಂಡಿಲ್ಲ. ಆಧ್ಯಾತ್ಮ ಸಾಧನೆಯ ಮಾರ್ಗವನ್ನಾಗಿ ಮಾಡಿಕೊಂಡಿದ್ದಾರೆ. ತಮ್ಮ ತಮ್ಮ ವೃತ್ತಿಯೇ ಅವರಿಗೆ ಶಿವ ಸ್ವರೂಪ. ವೃತ್ತಿಯ ಮೂಲಕವೆ

ತಮ್ಮನ್ನು ತಮ್ಮ ಜೀವನವನ್ನು ಕಟ್ಟಿಕೊಳ್ಳುವ ಪ್ರಯತ್ನ ಅವರದು. ಹೀಗೆ ವೃತ್ತಿನಿರತರಾದವರಲ್ಲಿ ಅನೇಕ ವೃತ್ತಿ ಮೂಲದಿಂದ, ಜಾತಿ ಮೂಲದಿಂದ ಬಂದವರಾಗಿದ್ದಾರೆ. ಕಲ್ಯಾಣದ ವಚನಕಾರರ ಆಂದೋಲನಕ್ಕೆ ಸೇರಿ ಅದರ ಸ್ವರೂಪವನ್ನು, ಸಾಧ್ಯತೆಗಳನ್ನು ಹಿಗ್ಗಿಸುವಂತೆ ಕಾಣುತ್ತಾರೆ. ಮಹಿಳಾ ವಚನಕಾರ್ತಿಯರಲ್ಲಿ ವ್ರತಾಚಾರ ನಿಷ್ಠೆಯೇ ಮುಖ್ಯ ತತ್ವವಾಗಿ ಬರುತ್ತದೆ. ಅದರ ಜರೂರತ್ತುನ್ನು ಕಂಡುಕೊಂಡೆ ಆ ವಿಷಯದ ಬಗ್ಗೆ ಹೆಚ್ಚು ಹೊತ್ತುಕೊಟ್ಟಿದ್ದಾರೆಂದು ಕಾಣುತ್ತದೆ. ಈ ರೀತಿಯ ವ್ರತಾಚಾರ ನಿಷ್ಠೆಯ ವಚನವನ್ನು ಗಂಗಮ್ಮ ರಚಿಸಿದ್ದಾಳೆ. ಈಕೆಯ ವಚನ ಹೀಗಿದೆ.

ಆವ ಕಾಯಕವ ಮಾಡಿದಡೂ ಒಂದೆ ಕಾಯಕವಯ್ಯಾ.
ಆವ ವ್ರತವಾದಡೂ ಒಂದೆ ವ್ರತವಯ್ಯಾ.
ಆಯ ತಪ್ಪಿದಡೆ ಸಾವಿಲ್ಲ: ವ್ರತ ತಪ್ಪಿದಡೆ ಕೂಡಲಿಲ್ಲ.
ಕಾಕಪಿಕದಂತೆ ಕೂಡಲು ನಾಯಕ ನರಕ
ಗಂಗೇಶ್ವರಲಿಂಗದಲ್ಲಿ.

(ಶಿವಶರಣೆಯರ ವಚನ ಸಂಪುಟ, ವಚನ ಸಂಖ್ಯೆ: ೧೧೦೨)

ವಚನದ ಮೊದಲಿನ ಸಾಲಿನಲ್ಲಿ ಕಾಯಕತತ್ವದ ಪ್ರತಿಪಾದನೆಯಿದೆ. ಅದು ತನ್ನ ವೃತ್ತಿ ನಿಷ್ಠೆಯ ಸ್ವರೂಪವನ್ನೊಳಗೊಂಡಂತೆ ಕಾಣುತ್ತದೆ. ಮಾನವ ಯಾವ ಕಾಯಕದಲ್ಲಿ ನಿರತನಾದಡೂ ಒಂದೆ ಎಂಬ ನಿಲುವು ಆಕೆಯದು. ಇಲ್ಲಿ ಯಾವ ಕಾಯಕವೂ ಕನಿಷ್ಠವಲ್ಲ. ಯಾವ ಕಾಯಕವು ನಿಕೃಷ್ಟವಲ್ಲ. ಶಿವನ ಒಲುಮೆಗಾಗಿ ಅರಿವಿನ ದಾರಿ ತೋರುವ ವೃತ್ತಿಯೇ ಶ್ರೇಷ್ಠ ಎಂಬ ತಿರುಳನ್ನು ಹೊಂದಿದೆ. ಇದರಿಂದ ವೃತ್ತಿ ಸಮಾನತೆಯನ್ನು ಅರಿಯಬಹುದು. ಇನ್ನು ವ್ರತನಿಷ್ಠೆಯ ಮನೋಭಾವ ಹೊಂದಿರುವ ಈಕೆಗೆ ವ್ರತಚಾರ ಮುಖ್ಯವೆನಿಸುತ್ತದೆ. ಸ್ತ್ರೀಗಾಗಿಯೇ ನಿರ್ಮಿಸಲಾಗಿರುವಂತಹ ಕಟ್ಟುಪಾಡು. ಅದನ್ನು ವ್ರತ ಎಂದು ನಂಬಲಾಗಿದ್ದು ಅಥವಾ ನಂಬಿಸಲಾಗಿದ್ದು ಅದು ಆಚರಣ ಪ್ರಣೀತತೆಗಿಂತ, ನಿಷ್ಠಾಪೂರ್ಣ ಆಚರಣೆಯೇ ವ್ರತ ಮತ್ತು ಅದರ ಪಾಲನೆ ಇವರಿಗೆ ಅವಶ್ಯವೆನಿಸುತ್ತದೆ. ಸಾವು ಬರುವುದು ವ್ರತತಪ್ಪಿ ನಡೆದಾಗ ಎಂಬ ನಿಲುವು ಇಲ್ಲಿದೆ. ಅಂತಹ ವ್ರತಗೇಡಿಗಳ ಸಂಗವನ್ನು ನಿರಾಕರಿಸುತ್ತಾಳೆ. ಕಾಗೆ ಕೋಗಿಲೆಯ ಕೂಟಕ್ಕೆ ಹೋಲಿಸುತ್ತಾಳೆ. ವ್ರತಧರ್ಮ ಪಾಲನೆಯನ್ನೆ ಪ್ರತಿಪಾದಿಸುತ್ತಾಳೆ. ಪ್ರಮಾಣಿಕತೆಯ ಬದುಕಿಗೆ ನಡೆ-ನುಡಿಯಲ್ಲಿ ಏಕತೆ, ಕಾಯಕ ಸಮಾನತೆ ಮತ್ತು ನಂಬಿರುವ ತತ್ವ ಸಿದ್ಧಾಂತಗಳ ಪಾಲನೆ ಈಕೆಯ ವಚನದ ಮುಖ್ಯ ಅಭಿವ್ಯಕ್ತಿಯಾಗಿದೆ.

ಆಯ್ದಕ್ಕಿ ಲಕ್ಕಮ್ಮ

ಆಯ್ದಕ್ಕಿ ಲಕ್ಕಮ್ಮ ತನ್ನ ಈ ಕಾಯಕಕ್ಕೆ ನಿಷ್ಠವಾಗಿರುವಂತೆಯೇ ಅಧ್ಯಾತ್ಮದ ಸಾಧಕಿಯಾಗಿಯೂ ಕಂಡುಬರುತ್ತಾಳೆ. ಇದಕ್ಕೆ ಇಂಬುಕೊಟ್ಟಂತೆ ವಚನ ಚಳುವಳಿಯು ಲಿಂಗ ಸಮಾನತೆಯನ್ನೂ ತನ್ನ ಪ್ರಮುಖ ಪ್ರಣಾಳಿಕೆಯಾಗಿಸಿಕೊಂಡಿತು. ಇಷ್ಟೇ ಅಲ್ಲ ಗಂಡ ಹೆಂಡತಿ ಇಬ್ಬರೂ ಸಮಾನರೆಂಬಂತೆ ರೂಪಿಸಿದ ಕುಟುಂಬ ವ್ಯವಸ್ಥೆಯೂ ಅದರೊಟ್ಟಿಗೆ ಇತ್ತು. ಗಂಡಿಗೆ ಎಷ್ಟು ಅಧಿಕೃತ ಅಧಿಕಾರದ ವ್ಯಾಪ್ತಿ

ಇರಬಲ್ಲದೋ ಅಷ್ಟೇ ವ್ಯಾಪ್ತಿ ಹೆಣ್ಣಿಗೂ ಇರಬೇಕು ಎಂದು ಬಯಸಿ ಅದನ್ನು ಈ ಚಳುವಳಿ ಆಗು ಮಾಡುತ್ತದಲ್ಲಾ ಅದು ಅತೀವ ಮೆಚ್ಚುಗೆಗೆ ಪಾತ್ರವಾಗುತ್ತದೆ. 'ಮೊಲೆ ಮುಡಿ ಬಂದರೆ ಹೆಣ್ಣೆಂಬರು, ಗಡ್ಡ ಮೀಸೆ ಬಂದರೆ ಗಂಡೆಂಬರು, ನಡುವೆ ಸುಳಿವಾತ್ಮ ಹೆಣ್ಣೂ ಅಲ್ಲ, ಗಂಡೂ ಅಲ್ಲ' ಎಂಬ ತಾತ್ವಿಕ ಧೋರಣೆ ಈ ಎಲ್ಲಾ ವಚನಕಾರರದ್ದು. ಜಾತಿ ಪದ್ಧತಿಯ ಕ್ರೂರ ವ್ಯವಸ್ಥೆಯಲ್ಲಿ ಜಾತಿ ಜಾತಿಗಳು ಬೇರೆ ಬೇರೆಯಾಗಿದ್ದರೂ ಹೆಣ್ಣಿಗೆ ಮಾತ್ರ ಯಾವ ಜಾತಿಯಲ್ಲಿದ್ದರೂ ಒಂದೇ ರೀತಿಯ ಶೋಷಣೆ. ಹೀಗಾಗಿ ವಚನಕಾರರು ಹೆಣ್ಣನ್ನು ನೊಂದವಳು ಎಂಬ ದೃಷ್ಟಿಕೋನದಿಂದಲೇ ಉಪಚರಿಸು ತ್ತಾರೆ. ಈ ದೃಷ್ಟಿಯಿಂದಲೇ ಆಕೆಗೆ ಮುಕ್ತ ವಾತಾವರಣವನ್ನು ಕಲ್ಪಿಸಿ ಪ್ರಜ್ಞೆ ವಿಕಾಸಗೊಳ್ಳುವಂತೆ ನೋಡಿಕೊಳ್ಳುತ್ತಾರೆ. ಈ ನಿಟ್ಟಿನಲ್ಲಿ ಆಯ್ದಕ್ಕಿ ಲಕ್ಕಮ್ಮನನ್ನು ಒಳಗೊಂಡಂತೆ ಅನೇಕ ಶರಣ ಸಾಧಕಿಯರು ಶೋಷಣೆಯಿಂದ ಬಿಡುಗಡೆ ಪಡೆದು ಮುಕ್ತತೆಯನ್ನು ಸಾಧಿಸುವವರಾಗಿದ್ದಾರೆ.

ಲಕ್ಕಮ್ಮನಿಗೆ 'ಕಾಯಕ'ವೆಂದರೆ ಮಾಡುವ ಕೆಲಸ. ಇಷ್ಟೇ ಆದರೆ ಅದು 'ಕಾಯಕ'ದ ಸರಳೀಕೃತ ವ್ಯಾಖ್ಯಾನ. ಕಾಯಕವೆಂದರೆ ಅದೊಂದು ಪವಿತ್ರವಾದ ಶ್ರಮ, ಅದೊಂದು ನೈತಿಕ ಸೂಕ್ಷ್ಮತೆ, ಅರ್ಥಶಾಸ್ತ್ರೀಯ ಒಳನೋಟ. ಕಾಯಕ ಎಂಬುದು ಇವುಗಳ ಒಕ್ಕೂಟವಾಗಿ ಅನುಷ್ಠಾನಕ್ಕೆ ಬರಬೇಕು. ಆಗಲೇ ಅದಕ್ಕೊಂದು ವ್ರತದ, ನೇಮದ ಎತ್ತರ ಲಭಿಸುತ್ತದೆ. ಸಾಮಾನ್ಯವಾಗಿ ಎಲ್ಲ ಶರಣರೂ ಒಂದಲ್ಲಾ ಒಂದು ಕಾಯಕದಲ್ಲಿ ನಿಷ್ಠೆಯಿಂದ ತೊಡಗಿಸಿಕೊಂಡವರೇ. ಕಾಯಕದೊಳಗಾದ ರೆಂದರೆ ಲಿಂಗ ಜಂಗಮ ಪೂಜೆಯನ್ನೂ ಈ ಶರಣರು ಮರೆಯಬಲ್ಲಂಥವರು. ಕಾಯಕಕ್ಕೆ ಅವರೆಲ್ಲಾ ಅಷ್ಟು ಮಹತ್ವವನ್ನು ನೀಡಿದ್ದರು.

ಅರಿವರತ ಅರುವೆಯ ಅಂಗದಲ್ಲಿ ಕಟ್ಟಿ
ಬಯಕೆಯರತ ಕೈಯಲ್ಲಿ ತಂಡುಲವನಾಯ್ದುಕೊಂಡು
ಸಂದ ಪ್ರಮಥರ ಅಂಗಳಕ್ಕೆ ಬೇಗ ಹೋಗಿ, ಕೊಂಡು ಬಾರಯ್ಯ
ಮಾರಯ್ಯ ಪ್ರಿಯ ಅಮರೇಶ್ವರಲಿಂಗಕ್ಕೆ ಮಾರಯ್ಯ

(ಶಿವಶರಣೆಯರ ವಚನ ಸಂಪುಟ, ವಚನ ಸಂಖ್ಯೆ: ೭೨೪)

ಹೀಗಾಗಿ ಒಂದು ದಿನ ಅವಶ್ಯಕತೆಗಿಂತ ಹೆಚ್ಚಿನ ಅಕ್ಕಿಯನ್ನು ಸಂಗ್ರಹಿಸಿ ತಂದಿರುವುದು. 'ಹೊನ್ನಿನೊಳಗೊಂದೊರೆಯ, ಸೀರೆಯೊಳಗೊಂದೆಳೆಯ ಇಂದಿಂಗೆ ನಾಳಿಂಗೆ ಬೇಕೆಂದೆನಾದೊಡೆ ನಿಮ್ಮಾಣೆ ನಿಮ್ಮ ಪ್ರಮಥರಾಣೆ' ಎಂಬ ಜಾಯಮಾನದ ವಚನಕಾರರಿಗೆ 'ಅಸಂಗ್ರಹ'ವೆಂಬ ತಾತ್ವಿಕತೆ ಬದ್ಧತೆಯುಳ್ಳದ್ದು. ಇದನ್ನು ಮಾರಯ್ಯನು ಪಾಲಿಸಿಕೊಂಡು ಬಂದವನೇ ಆದರೂ ಅವನ ಚಿತ್ತ ಸ್ಥಿಮಿತ ಕಳೆದುಕೊಂಡಂತೆ ಕಾಣುತ್ತದೆ. ಅದಕ್ಕೆ ಆತ ಹೆಚ್ಚು ಅಕ್ಕಿಯನ್ನು ತಂದಿದ್ದಾನೆ. ಆದರೆ ಲಕ್ಕಮ್ಮ ಅತ್ಯಂತ ಪ್ರಜ್ಞಾವಂತ ಮಹಿಳೆಯಾಗಿ, ಸೂಕ್ಷ್ಮಮತಿಯಾಗಿ ತನ್ನ ಗಂಡನ ಈ ಕೃತ್ಯಕ್ಕೆ ವಿರೋಧ ವ್ಯಕ್ತಪಡಿಸುತ್ತಾಳೆ. ಆಕೆ ತನ್ನ ಪತಿಯನ್ನು ಎಚ್ಚರಿಸುವ ರೀತಿಯೂ ವಿಶಿಷ್ಟವಾದ ಮತ್ತು ಸರ್ವಕಾಲಿಕವಾದದ್ದು.

ಆಸೆಯೆಂಬುದು ಅರಸಿಂಗಲ್ಲದೆ
ಶಿವಭಕ್ತರಿಗುಂಟೇ ಅಯ್ಯಾ

ರೋಷವೆಂಬುದು ಯಮದೂತರಿಗಲ್ಲದೇ
ಅಜಾತರಿಗುಂಟೆ ಅಯ್ಯಾ
ಈಸಕ್ಕಿಯಾಸೆ ನಿಮಗೇಕೆ ಈಶ್ವರನೊಪ್ಪ
ಮಾರಯ್ಯ ಪ್ರಿಯ ಮಲೇಶ್ವರಲಿಂಗಕ್ಕೆ ದೂರ ಮಾರಯ್ಯ
(ಶಿವಶರಣೆಯರ ವಚನ ಸಂಪುಟ, ವಚನ ಸಂಖ್ಯೆ: ೬೨೮)

'ಆಸೆ', 'ರೋಷ'ಗಳ ಭಾವ ಅರಸ ಮತ್ತು ಯಮಧೂತರಿಗೆ ಮಾತ್ರ ಇರುವ ಲಕ್ಷಣಗಳೆಂಬ ಆಕೆಯ ಸಮೀಕರಣ ರೂಪಕದಂತಿದೆ. ಅರಸಗೆ ಆಸೆ ಎಂದರೆ ಪ್ರಭುತ್ವ ಲೋಬಿತನವನ್ನು ಬಿಂಬಿಸುತ್ತದೆ. ಶಿವಭಕ್ತನಾದ ಅನೈತಿಕತೆಗೆ ದೂಡುವ ಈ ಆಸೆ, ರೋಷಗಳು ಭಕ್ತರಿಗೆ ಇರಲು ಸಾಧ್ಯವೇ? ಶರಣನಾದ ಮಾರಯ್ಯನನ್ನು ಆಕೆ ತಿವಿಯುವಂತೆ ಪ್ರಶ್ನಿಸುವ ರೀತಿಯೇ ತುಂಬಾ ಸೂಕ್ಷ್ಮವಾದ್ದುದು. ಇಂತ ನಿಜ ಶರಣ ಮಾರಯ್ಯನನ್ನೂ ಆಸೆ ಎಂಬುದು ಮುಸುಕಿಬಿಟ್ಟಿತ್ತಲ್ಲಾ ಹೇಗೆ? ಎಂಬ ಅಚ್ಚರಿಯೂ ಆಕೆಯಲ್ಲಿರುವಂತೆ ಕಾಣುತ್ತದೆ. ಆಸೆಯ ಮಂಕು ಮಾರಯ್ಯನಿಗೇನೋ ಕವಿದದ್ದು ಸತ್ಯವಾದರೂ ಅದನ್ನು ದೈವದ ಸಾಕ್ಷಿಗೆ ಒಪ್ಪಿಸುವುದು ಹೇಗೆ? ಆತ್ಮಸಾಕ್ಷಿಯೆಂಬುದು ಏನನ್ನು ಹೇಳುತ್ತದೆ? ಆದ್ದರಿಂದಲೇ ಅದು 'ಲಿಂಗಕ್ಕೆ ದೂರ', ಇಂಥ ಸ್ಥಿತಿ ಮಾರಯ್ಯನಿಗೆ ಆಗಿದ್ದು ಪ್ರಾಯಶಃ ಆತನ ಮಾನಸಿಕ ದೌರ್ಬಲ್ಯದ ಕ್ಷಣ. ಅದೊಂದು ಇಮ್ಮನದ ಸ್ಥಿತಿ. ಈ ಇಮ್ಮನದಲ್ಲಿ ಉಂಟಾದ ಆಸೆಯಿಂದ ನೀವೇನೋ ಹೆಚ್ಚಿನ ಅಕ್ಕಿಯನ್ನು ತಂದಿರಬಹುದು ಆದರೆ ಇದು ನಿಮ್ಮದೇ ಮನವೇ? ಹೀಗೆ ವರ್ತಿಸಿದ್ದು ನಿಮ್ಮ ಮನಸ್ಸೇ? ಇದು ಬಗೆಹರಿಯದ ಸಮಸ್ಯೆ. ಇಷ್ಟೇ ಆಗಿದ್ದರೆ ಸಾಧಾರಣ ಮಟ್ಟವನ್ನು ಮೀರದ ಒಂದು ಶಂಕೆಯಾಗಿರುತ್ತದೆ. ಆದರೆ ಲಕ್ಕಮ್ಮನಿಗಿರುವ ಅನುಮಾನ ಅದನ್ನು ಮೀರಿದ್ದು. ಆಕೆ ಎಷ್ಟು ಪ್ರಜ್ಞಾಶೀಲಳು ಎಂಬುದಕ್ಕೆ ಸಾಕ್ಷಿಯಾಗಿ ಆಕೆಯ ಈ ಮಾತುಗಳನ್ನು ಗಮನಿಸಬೇಕು.

ಒಮ್ಮನವ ಮೀರಿ ಇಮ್ಮನದಲ್ಲಿ ತಂದಿರಿ
ಇದು ನಿಮ್ಮ ಮನವೋ ಬಸವಣ್ಣನ ಅನುಮಾನದ ಚಿತ್ತವೋ?
ಈ ಮಾತು ಮಾರಯ್ಯ ಪ್ರಿಯ ಅಮಲೇಶ್ವರ ಲಿಂಕ್ಕೆ ಸಲ್ಲದಬೋನ
ಅಲ್ಲಿಯೇ ಸುರಿದು ಬನ್ನಿ ಮಾರಯ್ಯ
(ಶಿವಶರಣೆಯರ ವಚನ ಸಂಪುಟ,, ವಚನ ಸಂಖ್ಯೆ: ೬೩೦)

ಸಂದಣಿಗೊಂಡು ಮನ ಹರುಷದಿಂದ ಬಸವಣ್ಣನ ಅಂಗಳಕ್ಕೆ ಹೋಗಿ
ತಿಪ್ಪೆಯ ತಪ್ಪಲಲ್ಲಿ ಬಿದ್ದಿದ್ದ ತಂಡುಲವ ಕಟ್ಟಿಕೊಂಡು
ಎಯಿದಾಗಿ ತರಲು ಎಯಿದಾಗಿ ಬಂದಿತ್ತಲ್ಲ ನಮಗೆ ಎಂದಿನಂದವೇ ಸಾಕು
ಮತ್ತೆ ಕೊಂಡು ಹೋಗಿ ಅಲ್ಲಿಯೆ ಸುರಿ,
ಮಾರಯ್ಯ ಪ್ರಿಯ ಅಮರೇಶ್ವರಲಿಂಗ ಕೊಟ್ಟ
ಕಾಯಕವೇ ಸಾಕು ಮಾರಯ್ಯ
(ಶಿವಶರಣೆಯರ ವಚನ ಸಂಪುಟ, ವಚನ ಸಂಖ್ಯೆ: ೬೪೬)

ಈ ಮೇಲಿನ ವಚನಗಳಲ್ಲಿ ಮೊದಲನೆಯದರಲ್ಲಿ ನೈತಿಕ ನಿಷ್ಠುರತೆಯನ್ನು ಕಾಣಬಹುದು. ಈ ನಿಷ್ಠುರತೆಯೇ ಬಸವಣ್ಣನಂಥ ಬಸವಣ್ಣನನ್ನು ಅನುಮಾನಿಸುವಷ್ಟು ದೂರಕ್ಕೆ ಹೋಗಬಲ್ಲದು. ಲಕ್ಕಮ್ಮನ ಆಲೋಚನೆ ಎಂಥದೆಂದರೆ ಈ ಮಾರಯ್ಯ ಲಕ್ಕಮ್ಮ ದಂಪತಿಗಳ 'ದೃಢ' ಹೇಗಿರಬಹುದು ಎಂದು ಪರೀಕ್ಷಿಸುವುದಕ್ಕೆ ಬಸವಣ್ಣ ಬೇಕಂತಲೇ ಒಂದಿಷ್ಟು ಅಕ್ಕಿಯನ್ನು ಜಾಸ್ತಿ ಸುರಿಸಿರಬಹುದೇ? ಹಾಗೇ ಸುರಿಸಿದ್ದರೂ ಅದು ಬಸವಣ್ಣಗೆ ಸರಿಯಾದ ನಡೆಯೇ? ಎಂಬ ಒಳಪ್ರಶ್ನೆಯು ಇಲ್ಲಿ ಅಡಗಿರುವಂತಿದೆ. ಇಡೀ ಕಲ್ಯಾಣದಲ್ಲಿ ಬಸವಣ್ಣನ ಬಗ್ಗೆ ಸಂದೇಹಿಸುವುದು ಅಸಾಧ್ಯವೆಂದಾಗ ಲಕ್ಕಮ್ಮನ ನೈತಿಕ ಧೈರ್ಯ ಅಸಾಧಾರಣವಾದದ್ದಾದ್ದರಿಂದಲೇ ಹೀಗೆ ಆಕೆ ಪ್ರಶ್ನಿಸಲು ಸಾಧ್ಯ. ಎಲ್ಲಕ್ಕಿಂತ ಹೆಚ್ಚಾಗಿ ಆಕೆ ತನ್ನ ಪತಿಯ ಅಂದಿನ ವರ್ತನೆಯನ್ನೇ ನೋಡಿ ಹೆಚ್ಚಾಗಿ ತಳಮಳಗೊಂಡವಳಾಗಿದ್ದಾಳೆ. ಅದನ್ನು ತಿದ್ದಿಕೊಳ್ಳುವ ಅವಕಾಶವನ್ನೂ ಆಕೆ ತನ್ನ ಪತಿಗೆ ನೀಡುತ್ತಾಳೆ. 'ಸಂದಣಿಗೊಂಡು' ಮನಹರುಷದಿಂದ 'ಎಯಿದಾಗಿ' ತಂದ ತಂಡುಲವನ್ನು ಮತ್ತೆ ಅಲ್ಲಿಯೇ ಹೋಗಿ ಸುರಿದು ಬರುವಂತೆ ಹೇಳುತ್ತಾಳೆ. ಹಾಗೆ ಹೇಳುವಾಗ ಅವಳು ಬಳಸುವ ಪದಗಳು ನಾಟಕೀಕರಿಸಿದಂತಿವೆ. 'ಎಯಿದಾಗಿ' ಎಂಬ ಪದವೇ ಹಾಗೆ ಅಣಕಿಸುವ ರೀತಿಯಂತೆ ಕಂಡುಬರುತ್ತದೆ. ಹಾಗೆ ಹೇಳುತ್ತಲೇ 'ನಮಗೆ ಎಂದಿನಂದವೇ ಸಾಕು' ಎಂದು ಹೇಳುವಾಗ 'ಆಸೆ ಎಂಬುದು ಅರಸಿಂಗೆ' ಎಂಬ ದನಿ ಪುನರಾವರ್ತಿತವಾದಂತಿದೆ. ಇಲ್ಲಿ ನೆಮ್ಮದಿಯ ಬದುಕಿನ ಹಂಬಲ ಇದೆ. ಸುಖವನ್ನರಸುವವನು ನೆಮ್ಮದಿಯಾಗಿರಲು ಸಾಧ್ಯವಿಲ್ಲ ಎಂಬ ಒಳನೋಟವೂ ಇದೆ. ಹೀಗೆ ಅಕ್ಕಿಯನ್ನು ಸುರಿದು ಬರಲು ಹೇಳುತ್ತಾಳೆ.

ಸೋಮಾರಿತನವನ್ನು ಸಹಿಸದ ಲಕ್ಕಮ್ಮ 'ಕಾಯಕ ನಿಂದಿತ್ತು, ಹೋಗಯ್ಯಾ ಎನ್ನಾಳ್ದನೆ' ಎಂಬ ಮಾತು ಆಕೆಯ ಬಾಯಿಂದ ಬರುತ್ತದೆಂದರೆ ಪ್ರಾಯಶಃ ಮಾರಯ್ಯ ಅನುಭಾವದ ಅನುಸಂಧಾನದಲ್ಲಿ ಕರಗಿಹೋಗಿರಬಹುದು. ಅದನ್ನು ಕಂಡು ಆಕೆಗೆ ಕಸಿವಿಸಿಯೂ ಆಗಿರಬಹುದು. ಆಕೆಗೆ ಅನುಭಾವ ಎಷ್ಟು ಮುಖ್ಯವೋ ಕಾಯಕ ದಾಸೋಹವೂ ಅಷ್ಟೇ ಮುಖ್ಯ. ಇದೆಲ್ಲದರ ಉದ್ದೇಶ ನೈತಿಕತೆ ಮತ್ತು ಕಾಯಕ ಧರ್ಮದ ಪರಸ್ಪರಾವಲಂಬಿತ ಚಿಂತನಕ್ರಮ. ಧರ್ಮವು ನೈತಿಕವಾಗಿಲ್ಲದೇ ಹೋದರೆ ಅದೊಂದು ಒಣ ಆಚರಣೆಗಳ ಮೊತ್ತವಾಗುತ್ತದೆ. ನಿಜವಾದ ಧರ್ಮ ಯಾವತ್ತೂ ನೈತಿಕತೆಯ ನರನಾಡಿಗಳನ್ನು ಹೊಂದಿಯೇ ಇರುತ್ತದೆ. ಈ ಸತ್ಯ ಹನ್ನೆರಡನೆಯ ಶತಮಾನದ ವಚನಕಾರರ ಚಿಂತನೆಯಲ್ಲಿ ಹಾಸುಹೊಕ್ಕಾಗಿರುವಂಥದ್ದು. ಇದಕ್ಕೆ ಲಕ್ಕಮ್ಮನೂ ಹೊರತಾದವಳಲ್ಲ.

ಸತ್ಯಕ್ಕ

ಹನ್ನೆರಡನೆಯ ಶತಮಾನದ ಚಳುವಳಿಯಲ್ಲಿ ಪಾಲ್ಗೊಂಡ ಮಹಿಳಾ ವಚನಕಾರ್ತಿಯರಲ್ಲಿ ಸತ್ಯಕ್ಕ ಒಬ್ಬ ಅನುಭಾವಿ ವಚನಕಾರ್ತಿ. ಈಕೆಯ ವೃತ್ತಿ ಬೀದಿಯ ಕಸ ಗುಡಿಸುವುದು. ಕೆಳವರ್ಗದ ಹಿನ್ನೆಲೆಯುಳ್ಳ ವಚನಕಾರರು ವಚನ ಚಳುವಳಿಯಲ್ಲಿ ಭಾಗವಹಿಸಿ, ಧಾರ್ಮಿಕವಾಗಿ, ಸಾಮಾಜಿಕವಾಗಿ, ಸಾಹಿತ್ಯಿಕವಾಗಿ ಸಾಧನೆ ಮಾಡಿದವರು ಅನೇಕರು. ಪುರುಷರು ಬಹಳ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರೆ ಮಹಿಳೆಯರ ಸಂಖ್ಯೆ ಕಡಿಮೆ. ಆದರೆ ಕೆಳವರ್ಗದವರಿಗೆ ಧರ್ಮ, ದೇವರು,

ಆಧ್ಯಾತ್ಮ, ಸಾಹಿತ್ಯ, ಹೀಗೆ ಮೇಲ್ವರ್ಗದವರ ಅಧಿಕಾರಶಾಹಿತ್ವದಲ್ಲಿ ಪ್ರವೇಶವೇ ಸಿಗದ ಕಾಲದಲ್ಲಿ ಕೆಳವರ್ಗದ ಜನ ಧಾರ್ಮಿಕವಾಗಿ ಮಾತನಾಡುವ ಮಟ್ಟಿಗೆ ಪ್ರೋತ್ಸಾಹ ಸಿಕ್ಕಿದ್ದು ವಚನ ಆಂದೋಲನ ದಲ್ಲಿ. ಅದರಲ್ಲೂ ಸಮಾಜದಲ್ಲಿ, ಸಾಮಾನ್ಯ ವೃತ್ತಿಗಳೆಂದು ಘೋಷಿಸಲ್ಪಟ್ಟಿದ್ದ ಕುಲಕಸುಬುಗಳು ಮತ್ತು ಅವುಗಳನ್ನು ಮಾಡುತ್ತಿದ್ದ ವೃತ್ತಿಕಾರರನ್ನು ಹೀನಾಯವಾಗಿ ಕಾಣುವ ಧೋರಣೆಗೆ ವಿರುದ್ಧವಾಗಿ ವೃತ್ತಿಗೆ ಕಾಯಕದ ಪರಿಕಲ್ಪನೆಯಲ್ಲಿ ಗೌರವವನ್ನು ಸ್ಥಾಪಿಸಿಕೊಟ್ಟ ಅದರ ಮೂಲಕ ಸಮಾಜದಲ್ಲಿ ಅವಶ್ಯಕವಿರುವಂತ ವೃತ್ತಿಯನ್ನು ಅನುಸರಿಸಿದವರು ಸಮಾಜಕ್ಕೆ ದುಡಿಯುವ ವರ್ಗದ ಜನರಿಗೆ ಒಂದು ಆಶಾದಾಯಕ ಸ್ವಾಭಿಮಾನವನ್ನು ತಂದುಕೊಡುವಲ್ಲಿ ಆಂದೋಲನ ಸಿದ್ಧಗೊಂಡಿತು. ಅಂತಹ ಸಂದರ್ಭದಲ್ಲಿ ಪುರುಷ ಪ್ರಧಾನ ಸಮಾಜದಲ್ಲಿ ಮೇಲ್ವರ್ಗದ ಮಹಿಳೆಯರಿಗೆ ಅನೇಕ ಬಗೆಯಲ್ಲಿ ನಿಷಿದ್ಧ ಹೇರಿದ್ದ ಕಾಲದಲ್ಲಿ ಕೆಳವರ್ಗದ ಮಹಿಳೆಯರು ಒಂದೆಡೆ ಸೇರಿ ಆಧ್ಯಾತ್ಮದ ಬಗ್ಗೆ ಧರ್ಮ, ದೇವರ ಬಗ್ಗೆ, ನ್ಯಾಯ, ಸಮಾನತೆಗಳ ಬಗ್ಗೆ ಮಾತನಾಡುವ ಧೈರ್ಯ ಮಾಡಿದ್ದು ಕಂಡರೆ ಅಚ್ಚರಿಯೆನಿಸುತ್ತದೆ. ಮತ್ತು ವೃತ್ತಿಯ ಮೇಲ್ಮೆಯನ್ನು ಅವಶ್ಯಕತೆಯನ್ನು ಸಾರುವ ಮೂಲಕ ಕುಲಕಸುಬುಗಳಿಗೆ ಚೈತನ್ಯ ತುಂಬಿ, ಸಮಾನತೆಯ ಸಾಲಿನಲ್ಲಿ ಕೂಡಿಸುವ ಪ್ರಯತ್ನ ಮಾಡಿದ್ದಂತು ವಿಶೇಷವೇ ಸರಿ. ಹೀಗೆ ತಮ್ಮ ತಮ್ಮ ವೃತ್ತಿಗಳನ್ನು ಮಾಡುತ್ತ ಅರಿವಿನ ಬಲ ಬೆಳೆಸಿಕೊಂಡು, ತಮ್ಮ ಅನುಭವಕ್ಕೆ ದಕ್ಕಿದ್ದನ್ನು ಅನುಭಾವವಾಗಿಸಿಕೊಂಡು ವೃತ್ತಿಗೆ ಸ್ಥಾನಮಾನ ವನ್ನು ತಂದು ಕೊಡುವಲ್ಲಿ ಅನೇಕ ಮಹಿಳಾ ವಚನಕಾರ್ತಿಯರ ಶ್ರಮ ಅಧಿಕವಾದದ್ದು. ಹೀಗೆ ತಮ್ಮ ವೃತ್ತಿಯನ್ನೆ ಕೈಗೊಂಡ ಮಹಿಳಾ ವಚನಕಾರ್ತಿಯರಲ್ಲಿ ಸತ್ಯಕ್ಕ ಒಬ್ಬಳು. ತನ್ನ ಕಾಯಕವನ್ನು ಕಡಿಮೆಯ ಮಟ್ಟದೆಂದು, ಕೀಳು ಎಂದು ಭಾವಿಸದೆ ಕೆಲಸಕ್ಕೆ ಮಹತ್ವವಾದ ಸ್ಥಾನವನ್ನು ಒದಗಿಸಿ ಕೊಡುತ್ತಾಳೆ. ತನ್ನ ವೃತ್ತಿಯ ಬಗ್ಗೆ ಅವಳಿಗೆ ಅವಮಾನವಾಗಲಿ ತಿರಸ್ಕಾರ ಭಾವವಾಗಲಿ ಇರಲಿಲ್ಲ. ಅದಕ್ಕಿಂತ ಅಭಿಮಾನ, ನಿಷ್ಠೆ, ಗೌರವಗಳು ನೆಲೆಗೊಂಡಿದ್ದವು. ತನ್ನ ವೃತ್ತಿ ಸತ್ಯವಾದದ್ದು, ಕಾಯಕ ಎಂಬ ವಿಶಿಷ್ಠ ಅನುಭಾವಿಕ ನೆಲೆಗೆ ಕೂಡಿಕೊಂಡಿದ್ದುದಾಗಿದೆ ಎಂದೆ ಭಾವಿಸುತ್ತಾಳೆ. ಅದರಂತೆ ನಡೆ-ನುಡಿಯಲ್ಲಿ ಏಕವಾಗಿ ನಡೆಗೂ-ನುಡಿಗೂ ಮಧ್ಯದ ಪರದೆಯ ಸರಿಸಿ, ಜೀವನಾದರ್ಶವಾಗಿಸಿ ಕೊಂಡು ಜೀವನ ಮಾಡುತ್ತಾಳೆ. ಇದನ್ನು ಆಕೆಯ ವಚನದ ಮೂಲಕ ಗಮನಿಸಬಹುದು.

ಬಟ್ಟೆಯಲ್ಲಿ ಹೊನ್ನ ವಸ್ತ್ರ ಬಿದ್ದಿದ್ದರೆ
ನಾನು ಕೈ ಮುಟ್ಟಿ ಎತ್ತಿದೆನಾದರೆ
ನಿಮ್ಮಾಣೆ ನಿಮ್ಮ ಪ್ರಮಥರಾಣೆ
ಅದೇನು ಕಾರಣವೆಂದರೆ
ನೀವಿಕ್ಕಿದ ಭಿಕ್ಷದಲ್ಲಿಪ್ಪೆನಾಗಿ
ಇಂತಲ್ಲದೆ ನಾನು ಅಳಿಮನವ ಮಾಡಿ
ಪರದ್ರವ್ಯಕ್ಕೆ ಆಸೆ ಮಾಡಿದೆನಾದರೆ
ನೀನಾಗಲೇ ಎನ್ನ ನರಕದಲ್ಲಿ ಅದ್ದಿ
ನೀನೆದ್ದು ಹೋಗಾ ಶಂಬುಜಕ್ಕೇಶ್ವರಾ

(ಶಿವಶರಣೆಯರ ವಚನ ಸಂಪುಟ, ವಚನ ಸಂಖ್ಯೆ: ೯೭೬)

ಅರಿವಿನಪ್ರಜ್ಞೆ, ನೈತಿಕಮೌಲ್ಯ, ಆತ್ಮಗೌರವದ ನಡೆ, ಕಾಯಕನಿಷ್ಠೆ, ಶ್ರಮಕ್ಕೆ ತಕ್ಕಷ್ಟೆ ಪ್ರತಿಫಲ ಬಯಸುವ ಮನೋಭಾವ, ಅಸಂಗ್ರಹದಿಂದ ಹಂಚಿಕೆ, ನೀತಿ ನಿಯಮಗಳ ವೃತ್ತಿನಿಷ್ಠೆ ವಚನಕಾರರ ಒಟ್ಟು ಆಶಯಗಳಿಗೆ ಗೌರವ ಮತ್ತು ಪಾಲನೆ ಮಾಡುವ ನಿಯಮಾವಳಿಯನ್ನು ಈ ಮೇಲಿನ ವಚನದ ಮೂಲಕ ಅಭಿವ್ಯಕ್ತಿಗೊಂಡಿರುವುದನ್ನು ಕಾಣಬಹುದು.

ಧೂಪದ ಗೊಗ್ಗವ್ವೆ

ಮಹಿಳಾ ವಚನಕಾರರ ವೃತ್ತಿಗಳು ವಿಭಿನ್ನ ಮತ್ತು ವಿವಿಧ ನೆಲೆಗಳನ್ನೊಳಗೊಂಡಿರುವಂತಹವು. ಕೆಲವರು ತಮ್ಮ ಮೂಲಕಸಬುಗಳನ್ನೇ ಮಾಡಿದರೆ, ಅನುಸರಿಸಿದರೆ ಅನೇಕರು ತಮ್ಮದೆ ಆದ ಹೊಸ ವೃತ್ತಿಗಳನ್ನು ಕೈಗೊಳ್ಳುತ್ತಾ ಅಂದರೆ ತಮ್ಮ ಕುಲ ಮೂಲದ ವೃತ್ತಿಗಳನ್ನು ಬಿಟ್ಟು ತಮ್ಮ ಇಷ್ಟದ ವೃತ್ತಿಯನ್ನು ಅವಲಂಬಿಸುತ್ತಾರೆ. ಇಲ್ಲಿ ವಚನಕಾರರ ಕಾಯಕ ಸಿದ್ಧಾಂತದ ತತ್ವದ ಅಡಿಯಲ್ಲಿ ಕೆಲಸ ಮಾಡುತ್ತಾರೆ. ಹೀಗೆ ಅವಲಂಬಿಸುವ ವೃತ್ತಿಯೂ ಅವರ ಸಾಧಕ ಜೀವನಕ್ಕೆ ಪೂರಕವಾದ ಕೆಲಸವನ್ನು ಮಾಡಬೇಕೆಂಬುದು ಅವರ ಇಚ್ಛೆ. ಇದರಂತೆ ತನ್ನ ಆಧ್ಯಾತ್ಮಿಕ ಸಾಧನೆಗೆ ದಾರಿ ತೋರುತ್ತದೆಂದು ಭರವಸೆಯಿಂದಲೇ ಗೊಗ್ಗವ್ವೆ ಧೂಪದ ಕಾಯಕವನ್ನು ಸ್ವೀಕರಿಸುತ್ತಾಳೆ. ಅದರ ಮೂಲಕವೇ ಅನುಭಾವವನ್ನು ಅಭಿವ್ಯಕ್ತಿಸುತ್ತಾಳೆ.

ಮುಂದೆ ಈಕೆ ಬಸವಣ್ಣನ ನೇತೃತ್ವದ ವಚನ ಚಳುವಳಿಯಲ್ಲಿ ಸೇರಿ ವಚನಗಳನ್ನು ರಚಿಸಿ, ವಿಶಿಷ್ಟವಾದ ಧೂಪದ ಕಾಯಕವನ್ನು ಕೈಗೊಂಡು ಕಾಯಕ ನಿರತತೆಯನ್ನು, ವ್ರತನಿಷ್ಠೆಯನ್ನು ಅಭಿವ್ಯಕ್ತಪಡಿಸುತ್ತಾಳೆ. ಅಲ್ಲದೇ ಹೆಣ್ಣು ಗಂಡಿನ ಮಧ್ಯದ ಅಸಮಾನತೆಯನ್ನು ದೂರತಳ್ಳುವ, ಸಮಾನತೆಯ ಆಶಯವನ್ನು ವ್ಯಕ್ತಪಡಿಸುವ ಎರಡು ವಚನಗಳಿಂದ ಸಮಾನತೆಯ ಚಿಂತನೆ ಮಾಡಿರುವುದನ್ನು ನಾವು ಗುರುತಿಸಬಹುದು.

ಶಿವಭಕ್ತರಿಗೆ ಧೂಪವನ್ನು ಅರ್ಪಿಸುವ ಕಾಯಕವನ್ನು ಕೈಗೊಂಡ ಈಕೆಯ ಮೇಲೂ ಕಥೆ ಹುಟ್ಟಿಕೊಂಡಿವೆ. ಶಿವ ಈಕೆಯ ನಿಷ್ಠೆಯನ್ನು ಪರೀಕ್ಷಿಸಲು ಸುಂದರವಾದ ಯುವಕನ ವೇಷದಲ್ಲಿ ಬಂದು ತನ್ನನ್ನು ಮದುವೆಯಾಗುವಂತೆ ಒತ್ತಾಯಿಸುತ್ತಾನೆ. ಆಕ ಅದಕ್ಕೊಪ್ಪದೆ ತನ್ನ ನಿಷ್ಠೆಯನ್ನು ಮೆರೆಯುತ್ತಾಳೆ. ಅದಕ್ಕೆ ಶಿವನು ಮೆಚ್ಚಿ ಆಕೆಗೆ ವೀರಶೈವೋಪದೇಶ ಮಾಡಿ ಶಿವಭಕ್ತರಿಗೆ ಧೂಪವನ್ನು ಅರ್ಪಿಸುವ ಜೀವನ ಸಾಗಿಸು ಎಂದು ಹೇಳುತ್ತಾನೆ. ಅಂದಿನಿಂದ ಆಕೆ ಧೂಪದ ಕಾಯಕವನ್ನು ನಿಷ್ಠೆ, ಪ್ರಮಾಣಿಕತೆಯಿಂದ ಮಾಡುತ್ತ ಜೀವನ ಸಾಗಿಸುತ್ತಾಳೆ. ಬಸವಣ್ಣ, ಅಕ್ಕಮಹಾದೇವಿ, ಲಕ್ಕಮ್ಮ ಹೀಗೆ ಎಲ್ಲ ವಚನಕಾರರ ಮೇಲೆ ಬಂದಂತೆ ಈಕೆಯ ಮೇಲು ಪವಾಡ ಕಥೆ ಬಂದಿರುವುದು ಸಹಜ. ಇದರಿಂದ ಈಕೆಯ ನಿಷ್ಠೆಯನ್ನು ಪ್ರಸ್ತುತಪಡಿಸುವ ಪ್ರಯತ್ನ ಮಾಡಿರುವುದನ್ನು ಗುರುತಿಸಬಹುದು. ಇದು ಎಲ್ಲಾ ವಚನಕಾರರ ಮೇಲೆ ಬಂದಿರುವ ಕಥೆಗಳಿಗೂ ಅನ್ವಯಿಸಬಹುದು. ಅದರಂತೆ ಒಮ್ಮೆ ಕೂಡುಗಲೂರು ದೊರೆ ಚೇರಮರಾಯ ಕೈಲಾಸದಾರಿ ಹುಡುಕುತ್ತ ಹೊರಟಾಗ, ಅವನಿಗೆ ಧೂಪದ ಹೊಗೆಯ ಮೂಲಕ ಕೈಲಾಸದ ದಾರಿ ತೋರಿಸುತ್ತಾಳೆ. ಇಂತಹ ಕಥೆಯಿಂದ ಗೊಗ್ಗವ್ವೆಯ ವೃತ್ತಿನಿಷ್ಠತೆ, ಪ್ರಭುತ್ವದಂತ ವ್ಯವಸ್ಥೆಗೆ

ಮಾರ್ಗದರ್ಶನ ಮಾಡುವುದನ್ನು ನಾವು ಗುರುತಿಸಬಹುದು. ಅಲ್ಲದೇ ತನ್ನ ಸಾಧನೆಯ ಮಾರ್ಗವಾಗಿ ಕೈಗೊಂಡ ವೃತ್ತಿಯೂ ಪರಮಶ್ರೇಷ್ಠ ಎಂಬ ಭಾವನೆಯನ್ನು ಅಲ್ಲಗಳೆಯುವುದಿಲ್ಲ. ತನ್ನ ಸಾಮಾಜಿಕ ಜವಾಬ್ದಾರಿಯನ್ನು ತನ್ನ ವೃತ್ತಿಯ ಮೂಲಕವೇ ಅಲ್ಲಗಳೆಯುವುದಿಲ್ಲ. ತನ್ನ ಸಾಮಾಜಿಕ ಜವಾಬ್ದಾರಿಯನ್ನು ತನ್ನ ವೃತ್ತಿಯ ಮೂಲಕವೇ ನಿಭಾಯಿಸುವುದನ್ನು ಇಲ್ಲಿ ನೋಡಬಹುದು. ಇದನ್ನು ಸಿದ್ಧನಂಜೇಶ "ಭವರಹಿತೆ ಧೂಪದಾ ಗೊಗ್ಗವ್ವೆ ಯಂಬಾಕೆ ಶಿವಗೆ ಧೂಪವನೀಡಿ ಕೈಲಾಸ ಪಡೆದವನು ಶಿವಭಕ್ತರಿಗೆ ತೋರಿ ಶಂಕರನ ಕೃಪೆ ಪಡೆದಳ್" ಎಂದು ಹೇಳುತ್ತ ಆಕೆಯನ್ನು ಮಾರ್ಗದರ್ಶಕ ಸ್ಥಾನದಲ್ಲಿ ಕೂಡಿಸುತ್ತಾನೆ.

ಧೂಪ ಅರ್ಪಿಸುವ ವೃತ್ತಿಯಿಂದಲೇ ಆತ್ಮಜ್ಞಾನದ ಅರಿವನ್ನು ಪಡೆದು ವಚನಗಳನ್ನು ಬರೆದು ತನ್ನ ಅನುಭವವನ್ನು ಅಭಿವ್ಯಕ್ತಿಸಿರುವುದು ಗೊಗ್ಗವ್ವೆಯ ವಿಶೇಷತೆಗಳ್ಲೊಂದು. ತನ್ನ ವೃತ್ತಿಯ ಉಪಕರಣಗಳ ಮೂಲಕವೇ ವಚನವನ್ನು ಅಭಿವ್ಯಕ್ತಿಸಿರುವ ಬಗೆ ಅನನ್ಯವಾದುದು.

ಭಕ್ತರು ಜಂಗಮದಲ್ಲಿ ಕಟ್ಟಿ ಹೊರಲೇಕೆ?
ಧೂಪದ ಹೊಗೆ ಎತ್ತ ಹೋದರೂ ಸರಿ
ಇದು ಸತ್ಯವೆಂದೆ ನಾಸ್ತಿನಾಥಾ

(ಶಿವಶರಣೆಯರ ವಚನ ಸಂಪುಟ ೨, ವಚನ ಸಂಖ್ಯೆ: ೬೫೪)

ತಾನು ಹೇಳಬೇಕಿರುವುದನ್ನು ಮೂರು ಸಾಲುಗಳಲ್ಲಿ ತನ್ನ ವೃತ್ತಿಯ ಪರಿಭಾಷೆಯಲ್ಲಿಯೇ ಈ ವಚನವನ್ನು ಕಟ್ಟಿದ್ದಾಳೆ. ವಚನದ ಮೊದಲಿನ ಜಂಗಮದ ನಡುವೆ ಇರುವ ತೊಳಲಾಟವನ್ನು ಪ್ರಶ್ನಿಸುತ್ತಿದ್ದಾಳೆ. ಭಕ್ತಿ ಮತ್ತು ಜೀವನ ಬೇರೆಯಲ್ಲ. ಅದು ನಿತ್ಯ ಜೀವನದ ಬದುಕು ಎಂಬುದು ಸತ್ಯವಾಗಿ ಇಲ್ಲಿ ಕಂಡಿರಿಸಲಾಗಿದೆ. ಅದು 'ಧೂಪದ ಹೊಗೆ ಎತ್ತ ಹೋದರು ಸರಿ' ಎಂಬ ಸಾಲಿನಲ್ಲಿ ರೂಪಕದ ಮೂಲಕ ಪ್ರಕಟಗೊಂಡಿದೆ. ಭಕ್ತನೂ ಧೂಪದ ಹಾಗೆ ಕರಗಬೇಕೆಂಬ ನಿಲುವು ಕಾಣುವುದಲ್ಲದೆ, ಸತ್ಯ ಶುದ್ಧತೆಯ ಸುಗಂಧವನ್ನು ಬೀರುವಂತಾಗಬೇಕೆಂಬ ಆಶಯ ಇಲ್ಲಿ ಅಭಿವ್ಯಕ್ತಗೊಳ್ಳುತ್ತದೆ.

ಮಾರುತನಲ್ಲಿ ಬೆರೆದ ಗಂಧದಂತೆ
ಸುರತದಲ್ಲಿ ಬೆರೆದ ಸುಖದಂತೆ
ಮಚ್ಚಿದಲ್ಲಿ ಕೊಡುವ ಉಚಿತದಂತೆ
ಭಕ್ತರಿಗದೆ ಹಾದಿ ಎಂದೆ ನಾಸ್ತಿನಾಥಾ

(ಶಿವಶರಣೆಯರ ವಚನ ಸಂಪುಟ ೨, ವಚನ ಸಂಖ್ಯೆ: ೬೫೫)

ಆದಿ ಮತ್ತು ಅಂತ್ಯ ಪ್ರಾಸಗಳಿಂದ ರಚಿತಗೊಂಡ ಈ ವಚನವು ಮಧುರ ಭಾವದ ಕಾವ್ಯಗುಣ ಹೊಂದಿದೆ. ಇಲ್ಲಿ ಗಾಳಿ ಮತ್ತು ಗಂಧ ಸೇರುವ ರೂಪಕ ಓದುಗನ ಮನಕ್ಕೆ ಪಥ್ಯವನ್ನು ತಟ್ಟನೆ ತಲುಪಿಸಿ ಬಿಡುತ್ತದೆ. ಒಳಗಿರುವ ಭಾವಾರ್ಥವು ಭಕ್ತ ಮತ್ತು ಭಗವಂತ ಎಂಬ ಭೇದವನ್ನಳಿಸಿ ಎರಡನ್ನು ಕೂಡಿಸಿಬಿಡುತ್ತದೆ. ಅದನ್ನು ವಚನಕಾರರು ಹೇಳುವ ಲಿಂಗಾಂಗ

ಸಾಮರಸ್ಯವೆಂದೇ ತಿಳಿಯಬಹುದು. ಸಮಾಜದ ಓರೆಕೋರೆಗಳಿಗೆ ಸರಳವಾಗಿಯೇ ನೀತಿ ಬೋಧಿಸುವ, ಸಮಾನತೆಯ ಆಶಯದ ವಚನಗಳೇ ಆಗಿವೆ. ತನ್ನ ವೃತ್ತಿಯ ಮೂಲಕ ಕೆಲವು ವಚನಕಾರರು ಅನುಸಂಧಾನ ಮಾಡಿ ಅದರ ಮೂಲಕವೇ, ತಮ್ಮ ವೃತ್ತಿಯ ಪರಿಕರಗಳ ಮೂಲಕವೇ ಅಭಿವ್ಯಕ್ತಪಡಿಸಿರುವ ವಚನಗಳ ಸಂಖ್ಯೆ ಹೆಚ್ಚಿದೆ. ಆದರೆ ಗೊಗ್ಗವ್ವೆಯವು ಎಂದು ಹೇಳಲಾಗುವ ವಚನಗಳ ಸಂಖ್ಯೆ ಕೇವಲ ಆರು ಮಾತ್ರ. ಅವುಗಳಲ್ಲಿ ಒಂದೆರಡು ವಚನಗಳಲ್ಲಿ ಮಾತ್ರ ಈಕೆ ತನ್ನ ವೃತ್ತಿಗೆ ಸಂಬಂಧಿಸಿದ ಉಪಕರಣಗಳನ್ನು ಬಳಸಿರುವುದು ಕಾಣುತ್ತೇವೆ.

ಬಾಚಿಕಾಯಕದ ಬಸವಯ್ಯಗಳ ಪುಣ್ಯಸ್ತ್ರೀ ಕಾಳವ್ವೆ

ವೃತ್ತಿನಿರತ ಮಹಿಳೆಯರು ವೃತ್ತಿಗಳಲ್ಲಷ್ಟೆ ವಿಶಿಷ್ಟತೆಯನ್ನು ಪಡೆದುಕೊಂಡಿಲ್ಲ. ಅಭಿವ್ಯಕ್ತಿಯಲ್ಲೂ ವಿಶಿಷ್ಟತೆಯನ್ನು ಹೊಂದಿದ್ದಾರೆ. ತಾವು ಕಂಡು ಅನುಭವಿಸಿದ ಸಮಸ್ಯೆಗಳನ್ನು ವಿಷಯಗಳನ್ನು ಯಾವ ಮುಲಾಜಿಗೂ ಒಳಗಾಗದೆ ಮಾತನಾಡಿದ್ದಾರೆ. ಇಂತಹ ಮಹಿಳಾ ವಚನಕಾರರಿಗೆ ಬದುಕು ಮತ್ತು ವೃತ್ತಿ ಹಾಗೂ ಅನುಭಾವ ಇವುಗಳಲ್ಲಿ ಬೇದವೆಣಿಸಲು ಸಾಧ್ಯವಾಗದ ಸಹಜ ನಿಷ್ಠಾ ಪ್ರವೃತ್ತಿಯನ್ನು ಒಳಗೊಂಡವರಾಗಿದ್ದಾರೆ. ವಚನ ಆಂದೋಲನದ ಪ್ರಭಾವ ಇವರನ್ನು ಆತ್ಮಾಭಿಮಾನಿಗಳನ್ನಾಗಿಸಿದೆ. ಇವರಿಗೆ ಧ್ವನಿಯನ್ನು ನೀಡಿ ಇವರ ಅಂತಃ ಶಕ್ತಿಯನ್ನು ಜಾಗೃತಗೊಳಿಸಿದೆ ಎಂದೇ ಹೇಳಬಹುದು. ತಾವು ಕಂಡಕೊಂಡದ್ದನ್ನು, ತಮ್ಮ ತಿಳವಳಿಕೆಯನ್ನು ಹೇಳಲು ಹಿಂಜರಿಯದಂತೆ ಸಿದ್ಧಗೊಂಡಿದ್ದಾರೆ. ಇಂತವರಲ್ಲಿ ಬಾಜಿಕಾಯಕದ ಬಸವಯ್ಯಗಳ ಸತಿ ಕಾಳವ್ವೆ ವಚನಕಾರ್ತಿಯಾಗಿ, ಕಾಯಕ ಸಿದ್ಧಾಂತದ ಪ್ರತಿಪಾದಕಳಾಗಿ ನಿಲ್ಲುತ್ತಾಳೆ. ಈಕೆಯಲ್ಲೂ ವ್ರತಾಚರಣೆಯೇ ಮುಖ್ಯ ಆಶಯವಾಗಿ ಕಾಣುತ್ತವೆ. ವ್ರತವನ್ನು ಕಾಯಕ ಮತ್ತು ನುಡಿಗಳೊಂದಿಗೆ ಮಹತ್ವವಾದ ನೆಲೆಯಲ್ಲಿ ಗುರುತಿಸಿರುವುದನ್ನು ನೋಡಬಹುದು.

ಕಾಯಕ ತಪ್ಪಿದಡೆ ಸೈರಿಸಬಾರದು;
ವ್ರತ ತಪ್ಪಲೆಂತೂ ಸೈರಿಸಬಾರದು.
ಕರ್ಮಹರಾ ಕಾಳೇಶ್ವರಾ.

(ಶಿವಶರಣೆಯರ ವಚನ ಸಂಪುಟ, ವಚನ ಸಂಖ್ಯೆ: ೮೪೪)

ಕಾಯಕದ ಪ್ರತಿಪಾದನೆಯ ಜತೆಗೆ ವ್ರತನಿಷ್ಠೆಯ ಬದುಕನ್ನು ಕಾಳವ್ವೆ ಈ ವಚನದಲ್ಲಿ ಹೇಳುತ್ತಾಳೆ. ಮನುಷ್ಯನ ಬದುಕಿಗೆ ಬೆಲೆ ಬರಬೇಕಾದರೆ ವ್ರತನಿಷ್ಠೆಯೇ ಮುಖ್ಯ ಎನ್ನುತ್ತಾಳೆ. ಇದರ ಜೊತೆಗೆ ನಿಷ್ಠೆ. ಪ್ರಾಮಾಣಿಕತೆಯಿಂದ ಕೂಡಿದ ಕಾಯಕದಿಂದಲೇ ಭಕ್ತಿ, ಶಕ್ತಿ ಎಲ್ಲವು ಆಗಿದೆ. ಕಾಯಕ ತಪ್ಪಿ ನಡೆದವರನ್ನು ಸಹಿಸದ ಮನೋಭಾವ ಈಕೆಯದು.

ತನ್ನ ವೃತ್ತಿಯ ಅಥವಾ ತನ್ನ ಗಂಡನ ವೃತ್ತಿಯ ಪರಿಕರಗಳ ಮೂಲಕ ಈ ವಚನ ಮೂಡಿ ಕಾಯಕತತ್ವದ ಚಿಂತನ ಕ್ರಮವಾಗಿದೆ.

ಕೈತಪ್ಪಿ ಕೆತ್ತಲು ಕಾಲಿಗೆ ಮೂಲ.
ಮಾತು ತಪ್ಪಿ ನುಡಿಯಲು ಬಾಯಿಗೆ ಮೂಲ.

ವ್ರತ ಹೀನನ ನೆರೆಯಲು ನರಕಕ್ಕೆ ಮೂಲ.
ಕರ್ಮಹರಕಾಳೇಶ್ವರಾ.

(ಶಿವಶರಣೆಯರ ವಚನ ಸಂಪುಟ, ವಚನ ಸಂಖ್ಯೆ: ೮೪೫)

ಈ ವಚನದಲ್ಲಿ ಬಡಿಗ ವೃತ್ತಿಯ ಪದ ಬಳಕೆಯಲ್ಲಿ ಕಾಯಕದ ನಿಷ್ಠೆಯನ್ನೆ ಹೇಳುತ್ತಾಳೆ. ವಚನಕಾರರು ನಡೆ-ನುಡಿಯನ್ನು ನಂಬಿದ್ದವರಾಗಿದ್ದಾರೆ. ನಡೆ-ನುಡಿಯಲ್ಲಿ ಏಕತೆಯನ್ನು ಸಾಧಿಸಿ ದಾಗಲೆ ಬದುಕಿಗೆ ಒಂದು ಬೆಲೆ. ಅದು ಆತ್ಮ ಜ್ಞಾನವನ್ನು ಪಡೆಯುವ ಮಾರ್ಗ ಎಂದಿದ್ದಾರೆ. ಅದನ್ನೆ ಕಾಳವ್ವೆ ತನ್ನ ಈ ವಚನದಲ್ಲೂ ನುಡಿಯ ಮಹತ್ವವನ್ನು ಹೇಳುತ್ತಾಳೆ. ಆದರೂ. ಕಾಯಕ್ಕಿಂತಲೂ ವ್ರತಕ್ಕೆ ಹೆಚ್ಚಿನ ಆಧ್ಯತೆ ನೀಡಿರುವುದನ್ನು ಈ ವಚನದಲ್ಲಿ ಗುರುತಿಸಬಹುದು. ತನ್ನ ಗಂಡನ ವೃತ್ತಿಯ ಉಪಕರಣವೇ ರೂಪಕವಾಗಿ ಬಂದಿದೆ. 'ಕೈತಪ್ಪಿ ಕೆತ್ತಲು ಕಾಲಿಗೆ ಮೂಲ;' ಎಂಬುದು. ಮುಖ್ಯವಾಗಿ ಇಲ್ಲಿ ವೃತ್ತಿ ನಿಷ್ಠೆಯನ್ನು ಹೇಳುತ್ತಿರುವುದನ್ನು ನೋಡುತ್ತೇವೆ. ಕಾಳವ್ವೆ ನಡೆ-ನುಡಿಗೆ ಹೆಚ್ಚು ಗಮನ ನೀಡಿದ್ದಾಳೆ. ಹಾಗಾಗಿ ಆಕೆ ತನ್ನ ತಿಳುವಳಿಕೆಯನ್ನು ಹೀಗೆ ಕಟ್ಟಿ ಕೊಡುವ ಪ್ರಯತ್ನ ಮಾಡಿದ್ದಾಳೆ. ವಚನಕ್ಕೆ 'ಮೂಲ' ಎಂಬ ಪದವು ಮೂರು ಸಾರಿ ಬಳಕೆಗೊಂಡು ಅಂತ್ಯ ಪ್ರಾಸವಾಗಿದೆ. ಓದುಗರಿಗೆ ಒಂದು ಆತ್ಮಿಯತೆಯನ್ನು ಉಂಟು ಮಾಡುತ್ತದೆ. ಪದಗಳ ಪುನಾರಾವರ್ತನೆ ಒಂದು ಬಂದವನ್ನು ಕಟ್ಟಿಕೊಡುತ್ತದೆ. ಮತ್ತು ವ್ರತನಿಷ್ಠೆಯ ವಚನಕಾರ್ತಿಯರ ಸಾಲಿಗೆ ಸೇರುವ ಕಾಳವ್ವೆ ವ್ರತವನ್ನು ಬಿಟ್ಟವರನ್ನು ಸೇರಿದರೆ ನರಕಕ್ಕೆ ಮೂಲವಾಗುತ್ತದೆ ಎಂದೆ ಎಚ್ಚರಿಸುತ್ತಾಳೆ. ಈ ವಚನ ಸರಳವಾಗಿಯೇ ಹೇಳುವ ಸ್ವರೂಪದ್ದಾಗಿದೆ. ಮುಖ್ಯವಾಗಿ ವಚನದ ತಿರುಳು, ಪ್ರತಿಪಾದನೆ ನಡೆ-ನುಡಿ ಮತ್ತು ಕಾಯಕನಿಷ್ಠೆ, ವ್ರತಾಚರಣೆಯ ಮೂಲ ಅಭಿವ್ಯಕ್ತಿಯಾಗಿದೆ.

ಉರಿಲಿಂಗ ಪೆದ್ದಿಗಳ ಪುಣ್ಯ ಸ್ತ್ರೀ ಕಾಳವ್ವೆ

ಕೆಳಸಮುದಾಯದಿಂದ ಅನೇಕ ವಚನಕಾರರನ್ನು ಹನ್ನೆರಡನೆಯ ಶತಮಾನದ ವಚನ ಚಳುವಳಿ ಕೊಟ್ಟಿದೆ. ಮಹಿಳೆಯರ ಸಂಖ್ಯೆ ಅಲ್ಪ ಪ್ರಮಾಣದಲ್ಲಿದೆ. ಇಂತಹ ಕೆಳವರ್ಗದ ಮೂಲದಿಂದ ಬಂದು ಶರಣೆಯಾಗಿ. ವಚನಕಾರ್ತಿಯಾದವಳು ಕಾಳವ್ವೆ. ಈಕೆಯ ಪತಿ ಉರಿಲಿಂಗಪೆದ್ದಿ. ಈತನು ಕೂಡ ವಚನಕಾರನಾಗಿ ಮಹತ್ವದ ಸ್ಥಾನವನ್ನು ಸತಿ-ಪತಿಗಳಿಬ್ಬರು ಪಡೆದಿದ್ದಾರೆ. ಕಾಳವ್ವೆಯ ವಚನಗಳ ಅಭಿವ್ಯಕ್ತಿ ಅವಳ ಬದುಕಿನ, ವ್ಯಕ್ತಿತ್ವದ ಒಂದು ಭಾಗವೇ ಆಗಿದೆ. ಶಿವನಿಷ್ಠೆಯ ಹೆಸರಿನಲ್ಲಿ ಡಾಂಬಿಕತನವನ್ನು ತೋರುವವರನ್ನು, ನಡೆ-ನುಡಿಯಲ್ಲಿ ತಪ್ಪಿ ಬದುಕುವವರನ್ನು ನಿಷ್ಠುರವಾಗಿಯೇ ವಿಡಂಬನೆಗೊಳಪಡಿಸುತ್ತಾಳೆ. ಇತರ ಮಹಿಳಾ ವಚನಕಾರರ ಮುಖ್ಯ ನಿಲುವು, ಒಲವು ಆದ ವ್ರತಾಚರಣೆಯನ್ನೆ ಈಕೆ ಪ್ರತಿಪಾದಿಸುತ್ತಾಳೆ. ಈಕೆಯ ಹನ್ನೆರಡು ವಚನಗಳಿವೆ. ಬಹಳಷ್ಟು ವಚನಗಳಲ್ಲಿ ವ್ರತನಿಷ್ಠೆಯನ್ನೇ ಕುರಿತು ಮಾತಾಡುತ್ತಾಳೆ. ಅಲ್ಲದೆ ಸಮಾನತೆಯ ತತ್ವಚಿಂತನೆ ಜಾತಿಗಳ ಮದ್ಯದ ಅಂತರವನ್ನು ಗುರುತಿಸಿ, ಸಮಾನತೆಯ ತತ್ವವನ್ನು ಹೇಳುವ ಪ್ರಯತ್ನ ಕೆಲವು ವಚನಗಳಲ್ಲಿ ಕಾಣುತ್ತೇವೆ. ಗುರು-ಲಿಂಗ-ಜಂಗಮ ತತ್ವವನ್ನು ಸರಿಯಾಗಿ ಗ್ರಹಿಸಿರುವ ಈಕೆ ವೇಷಾದಾರಿಗಳನ್ನು ಕಟುವಾಗಿ ಟೀಕಿಸುತ್ತಾಳೆ. ಸಮಾಜದ ವಿಡಂಬನೆ ನಡೆದಿರುವುದನ್ನು ಕೆಲವು ವಚನಗಳನ್ನು ಓದಿದಾಗ ತಿಳಿಯುತ್ತದೆ. ಕೆಳವರ್ಗದ ವಚನಕಾರರ

ಮುಖ್ಯ ಅನನ್ಯತೆಯೆಂದರೆ ಕಾಯಕದಲ್ಲಿ ನಿರತರಾಗಿರುವುದು. ವೃತ್ತಿನಿಷ್ಠೆಯೇ ಬದುಕಿನ ಮುಖ್ಯ ಅಂಗ ಮತ್ತು ಅವರ ಒಟ್ಟು ಚಿಂತನೆ, ನಿಲುವು. ಕಾಯಕ ಕುರಿತಾದ ಆಕೆಯ ನಿಲುವು, ತಿಳುವಳಿಕೆ ಈ ಕೆಳಗಿನ ವಚನದಲ್ಲಿ ಗುರುತಿಸಬಹುದು.

> ಕೃತ್ಯಕಾಯಕವಿಲ್ಲದವರು ಭಕ್ತರಲ್ಲ
> ಸತ್ಯಶುದ್ಧವಿಲ್ಲದುದು ಕಾಯಕವಲ್ಲ
> ಆಸೆಯೆಂಬುದು ಭವದ ಬೀಜ
> ನಿರಾಸೆಯೆಂಬುದು ನಿತ್ಯ ಮುಕ್ತಿ
> ಉರಿಲಿಂಗಪೆದ್ದಿಗಳರಸನಲ್ಲಿ ಸದರವಲ್ಲ ಕಾಣವ್ವಾ
>
> (ಶಿವಶರಣೆಯರ ವಚನ ಸಂಪುಟ, ವಚನ ಸಂಖ್ಯೆ: ೬೫೪)

ಈ ವಚನದಲ್ಲಿ ನಿರೂಪಣೆಗೊಂಡಿರುವಂತೆ ಎರಡು ವರ್ಗವಿದೆ. ಒಂದು ಭಕ್ತವರ್ಗ ಇನ್ನೊಂದು ಭವಿವರ್ಗ. ಇದು ವಚನದ ಮೊದಲನೇಯ ಸಾಲಿನಲ್ಲಿ ಸ್ಪಷ್ಟವಾಗಿ ಮೂಡಿದೆ. ನಿಷ್ಠೆಯುಳ್ಳ ಕಾಯಕ ಯಾರಿಗೆ ಇಲ್ಲವೋ ಅವನು ಭಕ್ತನಾಗಲು ಸಾಧ್ಯವಿಲ್ಲ ಎನ್ನವುದು ಕಾಳವ್ವೆಯ ನಿಲುವು. ವೃತ್ತಿ ಕೇವಲ ಬದುಕಿಗಾಗಿ ನಡೆಯುವಂತಹದಲ್ಲ. ನಿರ್ದಿಷ್ಟತತ್ವ, ಪ್ರಣಾಳಿಕೆಯ ಅಡಿಯಲ್ಲಿ ನಡೆಯುವಂತಿರಬೇಕು. ಅದು ಸತ್ಯ, ನಿಷ್ಠೆ, ಪ್ರಾಮಾಣಿಕತೆಯಿಂದ ಮಾಡಿದ ವೃತ್ತಿಯಾಗಿರಬೇಕು. ಮತ್ತು ವೃತ್ತಿಯಿಂದ ಬಂದದ್ದು ಜಂಗಮಕ್ಕೆ ಅರ್ಪಿತವಾಗಬೇಕು. ವಚನದ ಎರಡನೆ ಸಾಲಿನಲ್ಲಿ 'ಸತ್ಯ ಶುದ್ಧವಿಲ್ಲದುದು ಕಾಯಕವಲ್ಲ' ಎಂದು ಕಾಯಕವಿಲ್ಲದ ಭಕ್ತರವನ್ನು, ನಿಷ್ಠೆಯಿಲ್ಲದ ವೃತ್ತಿಯನ್ನು ನಿರಾಕರಿಸುವುದು ಇಲ್ಲಿದೆ. ಮಾನವನಿಗೆ ಮುಕ್ತಿಪಥ ದೊರೆಯಲು ಅವನು ಭವವನ್ನು ಗೆಲ್ಲಬೇಕು. ಜೀವನದ ಜಂಜಡಗಳಿಂದ ದೂರ ಸರಿಯಬೇಕು. ಅಂದರೇ ಇದ್ದು ಇಲ್ಲದಂತಿರಬೇಕು. ಯಾರು ಮನದೊಳಗೆ ವಿಷಯದ ಆಸೆಯನ್ನು ಇಟ್ಟುಕೊಂಡಿರುತ್ತಾರೋ ಅವರಿಗೆ ಮುಕ್ತಿ ಲಭಿಸುವುದಿಲ್ಲ ಎಂಬ ತಿರುಳು ಸ್ಪಷ್ಟವಾಗುತ್ತದೆ.

ಮನುಷ್ಯನಿಗೆ ಆಸೆಯೆಂಬುದು ಭವದಲ್ಲಿಯೇ ಉಳಿಸುವಂತಹದ್ದು. ಅದು ಬೀಜ, ಅದು ಮೊಳಕೆಯೊಡೆದು ಬೆಳೆದರೂ, ಆಸೆಯ ಮರವಾಗುತ್ತದೆ. ಹಾಗಾಗಿ ನಿರಾಸೆಯೇ ಮುಕ್ತಿಗೆ ದಾರಿ. ಎಂಬ ನಿರಾಕರಣೆಯ ಎಚ್ಚರಿಕೆಯೊಂದು ಇಲ್ಲಿದೆ. ಮುಖ್ಯವಾಗಿ ಕಾಯಕ ಸಿದ್ಧಾಂತವನ್ನು ನಂಬಿಯೇ ಬದುಕುವ ಭಾವಜೀವಿಯೊಂದು, ನಿಷ್ಠೆ ಇಲ್ಲದವರನ್ನು ಕಂಡು ಬೇಸರಗೊಂಡಂತಿದೆ. ನಿಷ್ಠೆ ಇಲ್ಲದ, ವೃತ್ತಿ ರಹಿತರನ್ನು ನಿರಾಕರಿಸುವ ಸ್ವಭಾವ ಕಾಳವ್ವೆಯದು.

ಕೊನೆಟಿಪ್ಪಣಿ

೧. ಎಂ.ಎಸ್.ವೇದಾ: ವಚನಕಾರ್ತಿಯರು, ಪು.ಸಂ.-೮೩, ಜಗದ್ಗುರು ಶ್ರೀಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು, ೨೦೧೧.

೨. ಎಂ.ಚಿದಾನಂದಮೂರ್ತಿ: ವಚನಸಾಹಿತ್ಯ, ಪು.ಸಂ.-೧೧೯, ಸಪ್ನ ಬುಕ್‌ಹೌಸ್, ಬೆಂಗಳೂರು, ೨೦೧೦.

ಅಧ್ಯಾಯ ೭

ವಚನಕಾರರು : ವೃತ್ತಿ ಮತ್ತು ವಚನಾಭಿವ್ಯಕ್ತಿ ಅಂತರ್‌ಸಂಬಂಧ

- ಅಂಬಿಗರ ಚೌಡಯ್ಯ
- ಮಾದಾರ ಧೂಳಯ್ಯ
- ಜೇಡರ ದಾಸಿಮಯ್ಯ
- ಮಾದಾರ ಚನ್ನಯ್ಯ
- ಕೀಲಾರದ ಭೀಮಣ್ಣ
- ತುರುಗಾಯಿ ರಾಮಣ್ಣ
- ಮೇದಾರ ಕೇತಯ್ಯ
- ಆಯ್ದಕ್ಕಿ ಮಾರಯ್ಯ
- ಗಾಣದ ಕಣ್ಣಪ್ಪ
- ಮಡಿವಾಳ ಮಾಚಯ್ಯ
- ಡಕ್ಕೆಯ ಬೊಮ್ಮಣ್ಣ
- ಕಂಬದ ಮಾರಿತಂದೆ
- ಕನ್ನದ ಮಾರಿತಂದೆ
- ಕನ್ನಡಿ ಕಾಯಕದ ಅಮ್ಮಿದೇವಯ್ಯ
- ಒಕ್ಕಲಿಗ ಮುದ್ದಣ್ಣ
- ಎಲೆಗಾರ ಕಾಮಣ್ಣ
- ಕಲಕೇತಯ್ಯ
- ನುಲಿಯ ಚಂದಯ್ಯ
- ಹೆಂಡದ ಮಾರಯ್ಯ
- ಹುಂಜಿನ ಕಾಳಗದ ದಾಸಯ್ಯ
- ಹೊಡೆಹುಲ್ಲ ಬಂಕಣ್ಣ
- ಕೂಗಿನ ಮಾರಯ್ಯ
- ದಾಸೋಹದ ಸಂಗಣ್ಣ
- ಸೂಜಿ ಕಾಯಕದ ರಾಮಿತಂದೆ
- ಕಾಮಾಟದ ಭೀಮಣ್ಣ
- ನಗೆಯ ಮಾರಿತಂದೆ
- ತಳವಾರ ಕಾಮಿದೇವಯ್ಯ
- ಜೋದರ ಮಾಯಣ್ಣ
- ದಸರಯ್ಯ
- ವೈದ್ಯ ಸಂಗಣ್ಣ
- ವೀರ ಗೊಲ್ಲಾಳ

ಅಧ್ಯಾಯ : ಏಳು

ವಚನಕಾರರು : ವೃತ್ತಿ ಮತ್ತು ವಚನಾಭಿವ್ಯಕ್ತಿ ಅಂತರ್‌ಸಂಬಂಧ

ಪೀಠಿಕೆ

ಹನ್ನೆರಡನೇ ಶತಮಾನ ಒಂದು ವಿಶಿಷ್ಟತೆಯನ್ನು ಒಳಗೊಂಡಂತಹ ಯುಗವಾಗಿದೆ. ಜನಸಾಮಾನ್ಯರ ಬದುಕು ಬದಲಾವಣೆ ದಿಕ್ಕನ್ನು ಕಂಡಂತಹ ಕಾಲವಾಗಿದೆ. ಈ ಎಲ್ಲಾ ಕಾರಣಗಳಿಗೆ ಕಾರಣವಾದ ಅಂಶ ಬಸವಣ್ಣ ನೇತ್ರತ್ವದಲ್ಲಿ ನಡೆದ ಶರಣ ಚಳುವಳಿ. ಇದು ವಚನ ಆಂದೋಲನಕ್ಕೆ ಕಾರಣವಾಗಿದೆ. ಇಂತಹ ವಚನ ಕ್ರಾಂತಿ, ಸಾಮಾಜಿಕ ಬದಲಾವಣೆ, ಸಮಾನತೆಯ ಆಂದೋಲನ, ಆಧ್ಯಾತ್ಮಿಕ ಜಾಗೃತಿಯಂಥ ಕಾರ್ಯಗಳು ಸಮಾಜದ ದಿಕ್ಕನ್ನು ಬದಲಾಯಿಸಿದವು. ಅಲ್ಲದೆ ಹೊಸ ದಿಕ್ಕಿನೆಡೆಗೆ ಜನತೆಯನ್ನು ನಡೆಸುವ ಪ್ರಯತ್ನ ಮಾಡಿದವು.

ಸನಾತನ ಕಾಲದಿಂದ ಒಂದು ಪದ್ಧತಿಯನ್ನು ರೂಢಿಸಂಪ್ರದಾಯವನ್ನು ನಂಬಿಕೊಂಡು ಬಂದಿದ್ದ ಸಮಾಜವನ್ನು, ವರ್ಣಾಶ್ರಮ ಪದ್ಧತಿಯ ವಿರುದ್ಧ ಎದ್ದುನಿಂತು ಮಾನವೀಯ ಮೌಲ್ಯಗಳೊಂದಿಗೆ ಮನುಷ್ಯ ಸಂಬಂಧಗಳನ್ನು ಗೌರವಿಸಿ ಬದಲಾವಣೆಗೆ ಮೂಲವಾದದ್ದು ಈ ಚಳುವಳಿ. ವಚನ ಚಳುವಳಿ ತನ್ನ ಹೊಟ್ಟೆಯಲ್ಲಿ ಅನೇಕ ಗೊಂದಲ, ವೈರುಧ್ಯ, ವಿಶಿಷ್ಟವಾದ, ವಿಭಿನ್ನವಾದ ಅನೇಕ ವಿಚಾರಗಳನ್ನೊಳಗೊಂಡಿದ್ದರೂ, ಪ್ರತಿಯೊಬ್ಬ ವಚನಕಾರರ ಆಶಯವು ಒಂದೇ. ಚಿಂತನೆಗಳು ವಿಭಿನ್ನ ನೆಲೆಯನ್ನು ಹೊಂದಿದಂತವುಗಳಾದರೂ, ಕೆಲವು ವಚನಕಾರರು ಇತರ ವಚನಕಾರರ ಆಶಯದಂತೆ ನಡೆದರು. ಅವರಲ್ಲಿ ವೃತ್ತಿನಿರತರು ವೈಶಿಷ್ಟ್ಯಪೂರ್ಣ ನಿಲುವು, ತಾತ್ವಿಕ ಚಿಂತನೆಗೆ ಹೆಸರಾಗಿದ್ದಾರೆ. ಮುಖ್ಯ ವಚನಕಾರರಾಗಿ ಕಾಣುವ ವಚನಕಾರರು. ಇನ್ನು, ತಮ್ಮದೇ ಆದ ವೈಶಿಷ್ಟ್ಯಪೂರ್ಣ ನಿಲುವು, ತಾತ್ವಿಕ ಚಿಂತನಗೆ ಹೆಸರಾಗಿದ್ದಾರೆ. ಅಂತವರಲ್ಲಿ ಅಕ್ಕ, ಚನ್ನಬಸವಣ್ಣ, ಅಲ್ಲಮಪ್ರಭು, ಸಿದ್ಧರಾಮ, ಬಸವಣ್ಣ, ಮುಕ್ತಾಯಕ್ಕ ಮುಂತಾದ ಶರಣರು ಈ ವಿಶಿಷ್ಟ ವ್ಯಕ್ತಿತ್ವವನ್ನು ಹೊಂದಿರುವಂತಹ ಸಾಲಿನಲ್ಲಿ ನಿಲ್ಲುತ್ತಾರೆ. ಇಂತವರಲ್ಲಿ ವೃತ್ತಿನಿರತ ವಚನಕಾರರು ಪ್ರಮುಖ ವಚನಕಾರರಾಗಿದ್ದಾರೆ. ಜೊತೆಗೆ ತಮ್ಮದೇ ಆದ ತಾತ್ವಿಕ ಚಿಂತನೆಯಿಂದ,

ಕಾಯಕ ನಿಷ್ಠೆಯಿಂದ ತಮ್ಮ ಆಶಯಕ್ಕೆ ಸಮನ್ವಯತೆಯಿಂದ ಕಂಡರೂ ತಮ್ಮದೆ ಆದ ಸ್ಪಷ್ಟ ನಿಲುವಿನಿಂದ ಸ್ವಂತ ಆಶಯದಲ್ಲಿ ಚಿಂತನೆಯನ್ನು ಮಾಡುವ ಲೋಕನೀತಿಯನ್ನು ಹಾಗೂ ಸಮಾಜವನ್ನು ವಿಭಿನ್ನ ದೃಷ್ಟಿಕೋನದಿಂದ ನೋಡುವ ಸಮಾಜದ ಓರಕೋರೆಗಳನ್ನು ಟೀಕಿಸುವ, ತಿದ್ದುವ ಈ ಕಾರಣಕ್ಕಾಗಿ ಹಾಗೂ ಇತರರ ವ್ಯಕ್ತಿತ್ವವನ್ನು ಸೂಕ್ಷ್ಮವಾಗಿ ಗ್ರಹಿಸುವ ಸಂವೇದನಾತ್ಮಕ ದೃಷ್ಟಿ ವೃತ್ತಿನಿರತ ವಚನಕಾರರದಾಗಿದೆ. ಇವರು ವಿಭಿನ್ನ, ವಿಶಿಷ್ಟ ವ್ಯಕ್ತಿತ್ವವನ್ನು ಹೊಂದಿದವರಾಗಿದ್ದಾರೆ. ಇವರು ಕಾಯಕಜೀವಿಗಳಾಗಿ ತಮ್ಮ ವೃತ್ತಿ ನಿಷ್ಠೆಯನ್ನು ವಚನಗಳಲ್ಲಿ ಕಟ್ಟಿಕೊಟ್ಟಿದ್ದಾರೆ. ಅಂತಹ ವಚನಗಳು ವೈಶಿಷ್ಟ್ಯಪೂರ್ಣ ಅಭಿವ್ಯಕ್ತಿಯಾಗಿ ಕಾಣುತ್ತವೆ.

ಅಂಬಿಗರ ಚೌಡಯ್ಯ

ಕೆಳವರ್ಗದ ವಚನಕಾರರಲ್ಲಿ ಅಂಬಿಗರ ಚೌಡಯ್ಯ ಒಬ್ಬ. ತಾವು ಮಾಡುತ್ತಿದ್ದ ಕಾಯಕವನ್ನೇ ತಮ್ಮ ಅಭಿವ್ಯಕ್ತಿಗೆ ಮಾಧ್ಯಮವಾಗಿರಿಸಿಕೊಂಡಿರುವುದು ಕೆಳವರ್ಗದ ವಚನಕಾರರ ಒಂದು ವಿಶೇಷವಾದ ಅಂಶವಾಗಿದೆ. ಈ ಅಭಿವ್ಯಕ್ತಿಯು ಆಚರಣೆಯ ಮೂಲಕ, ಕಾಯಕದ ಮೂಲಕ ಅಂದರೆ ವಚನಕಾರರು ಸಾರಿದ 'ಕಾಯಕವೇ ಕೈಲಾಸ' ಎಂಬ ತತ್ವದಲ್ಲಿ ಜೀವನ ಹುದುಗಿರಿಸಿ ಅದನ್ನೇ ತಮ್ಮ ಬಾಳಾಗಿಸಿ ತೋರಿಸಿವುದರ ಮೂಲಕ ಹೀಗೆ ಬದುಕಿದ್ದರಿಂದ ಅವರ ನಿರ್ಮಲ ಭಕ್ತಿ ಎಲೆಮರೆಯ ಕಾಯಿಯಂತೆ ಗುಪ್ತವಾಗಿದ್ದುದೆ ಹೆಚ್ಚು. ತಮ್ಮ ಶ್ರದ್ಧೆ, ಭಕ್ತಿ, ಪ್ರಾಮಾಣಿಕತೆಯಿಂದ ಅಂತರಂಗ ಹಾಗೂ ಬಹಿರಂಗವನ್ನು ಶುದ್ಧವಾಗಿಟ್ಟುಕೊಂಡು ತಮ್ಮ ವ್ಯಕ್ತಿತ್ವ ವಿಕಸನ ಮಾಡಿಕೊಳ್ಳುತ್ತಿದ್ದರು. ಇದರಲ್ಲಿ ಅವರ ಕಾಯಕದ ಪಾತ್ರ ಹಿರಿದಾದುದಾಗಿದೆ. ಕಾಯಕ ಯಾವುದಾದರೂ ಸರಿ ಅದು ಮಾನವ ಕಲ್ಯಾಣಕ್ಕೆ ಸಾಧಕವಾದದ್ದು. ಶ್ರದ್ಧೆ, ಭಕ್ತಿ, ಪ್ರಮಾಣಿಕತೆಗಳನ್ನು ಒಳಗೊಂಡಿರ ಬೇಕಾದದ್ದು ಆಗಿರಬೇಕು. ಇದರಿಂದಾಗಿ ಕಾಯಕದಿಂದ ಬದುಕುವವರ ವ್ಯಕ್ತಿತ್ವದ ಹಿರಿಮೆ ಗರಿಮೆಗಳು ಮೆರೆಯುತ್ತಿದ್ದವು. ಮೊದಲಿನ ಕಾಲಘಟ್ಟದಲ್ಲಿದ್ದ ಭಕ್ತರು ಭಕ್ತಿಯಿಂದ ಮೆರೆದರೆ, ವಚನಾಕಾರರು ಕಾಯಕದಿಂದ ಭಕ್ತಿಯನ್ನು ಬೆಳಗಿಸಿದ್ದುದು ವಿಶಿಷ್ಟವಾದುದಾಗಿದೆ ಎಂದೇ ಹೇಳಬಹುದು.

ದೋಣಿ ನಡೆಸುವ ತನ್ನ ವೃತ್ತಿ ಮೂಲದ ಪರಿಕರಗಳನ್ನು ತನ್ನ ವಚನಗಳ ರಚನೆಯಲ್ಲಿ ಬಳಸಿಕೊಂಡು ಆಧ್ಯಾತ್ಮಿಕ ಸಾಧನೆಯ ಮಾರ್ಗವನ್ನು ವಿವರಿಸುತ್ತಾನೆ. ಕೇವಲ ಆಧ್ಯಾತ್ಮಿಕ ಸಾಧನೆಯ ವಿಷಯವನ್ನಷ್ಟೆ ಅಲ್ಲದೆ ಸಮಾಜದಲ್ಲಿ ನೆಲೆಸಿದ್ದ ಜಾತಿ ತಾರತಮ್ಯದ ಕುರಿತು ಚಿಂತನೆಗೆ ತೊಡಗುತ್ತಾನೆ. ಮುಖ್ಯವಾಗಿ ಕಾಯಕತತ್ವದ ಪ್ರತಿಪಾದನೆಯನ್ನು ಮಾಡುತ್ತಾನೆ. ವೃತ್ತಿಯ ಗೌರವವನ್ನು ಸ್ಥಾಪಿಸುವ ಪ್ರಯತ್ನ ಈತನ ವಚನಗಳಲ್ಲಿ ನಡೆದೆ ಇದೆ. ಸಮಾಜದ ಕೆಳಸ್ಥರದ ವರ್ಗದಿಂದ ಬಂದ ಚೌಡಯ್ಯನದು ನೇರನುಡಿ. ಹೇಳಬೇಕಿರುವುದನ್ನು ಅವಸರವಾಗಿಯಾದರೂ ಸರಿ, ಹೇಳಿಬಿಡುವ ಆತುರತೆ ಇರುವುದನ್ನು ಗುರುತಿಸಬಹುದು. ಅನೇಕ ವಚನಗಳಲ್ಲಿ ಸಮಾಜದ ವಿಡಂಬನೆ ಮಾಡುತ್ತ ಸಮಾಜದ ಶುದ್ಧಿಗೆ ಪ್ರಯತ್ನಿಸುವ ಕೆಲಸ ಮಾಡುತ್ತಾನೆ. ಡಂಭಾಚಾರ,

ಆಡಂಬರದ ಜೀವನ್ನು ತೋರಿಕೆಯ ಭಕ್ತಿಯನ್ನು ಕಟುವಾಗಿಯೇ ಟೀಕಿಸುತ್ತಾನೆ. ತನ್ನ ವೃತ್ತಿಗೆ ಆಧ್ಯಾತ್ಮಿಕ ಸಾಧನೆಗೆ ಬೇರೆ ಬೇರೆ ಮಾರ್ಗ ಇದೆ ಎಂದು ಒಪ್ಪಿಕೊಳ್ಳದ ಸ್ವಭಾವವು ಕಾಣುತ್ತದೆ. ಆದ್ದರಿಂದ ವೃತ್ತಿಯ ಮೂಲಕವೇ ತನ್ನನ್ನು ಗುರುತಿಸಿಕೊಳ್ಳುತ್ತಾನೆ.

ಶರಣರಲ್ಲಿ ಕೆಲವರು ಮಾಡಿರುವ ವಚನ ರಚನೆಗಳು, ಕಾಯಕದ ಪರಿಭಾಷೆಗಳನ್ನು ಬಳಸಿಕೊಂಡು ಕಾಯಕದ ವಿಧಿ-ವಿಧಾನಗಳನ್ನು ವಿವರಿಸುತ್ತ, ಆಧ್ಯಾತ್ಮ ಚಿಂತನೆಯ ಭಾವವನ್ನು ಅಭಿವ್ಯಕ್ತಪಡಿಸುತ್ತಿದ್ದರು. ಕಾಯಕವನ್ನು ಪೂಜೆಯಾಗಿಸಿಕೊಂಡಿರುವ ಕಾಯಕಕ್ಕೆ ಗೌರವ ಭಾವ ಪ್ರಧಾನವಾಗಿ ಕಾಣುತ್ತದೆಯೇ ಹೊರತು ಕಾಯಕದಿಂದ ಆಚೆಗೆ ಹೋದಂತೆ ಆ ಚಿಂತನೆ ಉಳಿಯುವುದಿಲ್ಲ. ಹಾಗಾಗಿ ಅವರ ಅಭಿವ್ಯಕ್ತಿ ಜನಪರವಾದುದು, ಸಮಾಜದ ನೆಲೆಯದ್ದು, ಈ ಅಭಿವ್ಯಕ್ತಿ ವಿಧಾನ ವಿಶಿಷ್ಟವಾದದ್ದಾಗಿದೆ. ಅಂಬಿಗರ ಚೌಡಯ್ಯ ಇಂತಹ ಅಭಿವ್ಯಕ್ತಿ ಪರಂಪರೆಯನ್ನು ಬಳಸಿದ ಶರಣರಲ್ಲಿ ಪ್ರಮುಖ. ದೋಣಿ ನಡೆಸುವ ತನ್ನ ಕುಲಕಸುಬನ್ನು ಮುಂದುವರಿಸುತ್ತಿದ್ದ ಈತ ಬಸವಣ್ಣನವರ ನೇತೃತ್ವದ ಲಿಂಗಾಯತ ಧರ್ಮದ ಅನುಯಾಯಿಯಾಗಿದ್ದನು. ನೇರನುಡಿಯ ನಿಷ್ಠುರವಾದಿ, ಕಾಯಕನಿಷ್ಠೆ, ಪ್ರಾಮಾಣಿಕತೆಯ ವ್ಯಕ್ತಿತ್ವ ಹೊಂದಿದವನಾಗಿದ್ದನು. ಈತನ ವಚನಗಳು ಸಿದ್ಧಾಂತ ರೂಪದ ಹೇಳಿಕೆಯಾಗದೇ ಸಿಟ್ಟು, ಆಕ್ರೋಶಭರಿತ ಬಂಡಾಯದ ಧ್ವನಿಯಾಗಿವೆ. ಅಲ್ಲದೆ ಖಂಡನೆ, ತಿರಸ್ಕಾರ, ಆತ್ಮವಿಮರ್ಶೆಯ ಪ್ರತೀಕವಾಗಿ ಚೌಡಯ್ಯನ ವಚನಗಳು ಆತ್ಮಾಭಿಮಾನದಿಂದ ಹೊರಹೊಮ್ಮಿವೆ.

ಸನಾತನವಾದಿಗಳ ಸಂಪ್ರದಾಯ ಮತ್ತು ಅಂದಿನ ವರ್ಣಾಶ್ರಮ ಪದ್ಧತಿಯಲ್ಲಿ ಕೆಳಸ್ಥರದ ಜನರ ಮೇಲೆ ನಡೆಯುತ್ತಿದ್ದ ಶೋಷಣೆಗಳನ್ನು, ನೋವನ್ನು ಅನುಭವಿಸಿದಂತ ವರ್ಗಕ್ಕೆ ಸೇರಿದವ ನಾದ್ದರಿಂದ ಅಂದಿನ ಸಮಾಜವು ಈತನನ್ನು ಕಾಯಕದ ಅಥವಾ ವೃತ್ತಿಯನ್ನು ಮೂಲವಾಗಿಟ್ಟು ಕೊಂಡು ಹಂಗಿಸಿ, ತಾತ್ಸರದ ಮನೋಭಾವದಿಂದ ಕಾಣುತ್ತಿದ್ದರು. ಆದ್ದರಿಂದಲೇ ಈತ ತನ್ನ ಕಾಯಕದ ಶ್ರೇಷ್ಠತೆ ಮೆರೆಯುವುದರ ಜೊತೆಗೆ ಸಮಾಜದ ಯಾವ ಕಾಯಕವು ಕನಿಷ್ಠವಾದುದಲ್ಲ ಎಂಬ ನಿರ್ಧಾರಕ್ಕೆ ಬರುವುದಲ್ಲದೆ ತನ್ನ ಆತ್ಮಾಭಿಮಾನವನ್ನು ಇಮ್ಮಡಿಗೊಳಿಸಿಕೊಂಡು ಈ ರೀತಿಯಾಗಿ ಹೇಳುತ್ತಾನೆ. ಅಲ್ಲದೆ ಈ ವಚನವನ್ನು ಬರೀ ಲೌಕಿಕ ಬದುಕಿನೊಂದಿಗೆ ಸಮ್ಮಿಳಿತ ಗೊಳಿಸುವ ಹಾಗಿಲ್ಲ ಎಂಬುದಂತು ನಿಜ. ಆಧ್ಯಾತ್ಮದ ಸಾಧನೆಯ, ಅಲೌಕಿಕ ಚಿಂತನೆಯ ಹೊಳವುಗಳಿರುವುದನ್ನು ನೋಡುತ್ತೇವೆ.

ಅಂಬಿಗ ಅಂಬಿಗ ಎಂದು ಕುಂದು ನುಡಿಯದಿರು
ನಂಬಿದರೆ ಒಂದೇ ಹುಟ್ಟಲಿ ಕಡೆಯ
ಹಾಯಿಸುವನಂಬಿಗರ ಚೌಡಯ್ಯ

(ಸಂಕೀರ್ಣ ವಚನ ಸಂಪುಟ: ೧, ವಚನ ಸಂಖ್ಯೆ: ೧೭)

ಚೌಡಯ್ಯ ಹೀಗೆ ಆತ್ಮಾಭಿಮಾನದಿಂದ ಲೋಕದ ಕುಹಕ ಜನರ ಮಾತಿಗೆ ಸ್ಪಷ್ಟ, ದಿಟ್ಟ ಉತ್ತರವನ್ನು ಈ ರೀತಿಯಲ್ಲಿ ಧೈರ್ಯದಿಂದ ನೀಡುತ್ತಾನೆ. ಇದು ಆತನ ಅಹಂಕಾರದ ನುಡಿಯಾಗದೆ ಆತ್ಮಪ್ರತಿಷ್ಠೆಯ ಮಾತಿನಂತಾಗಿದೆ. ತನ್ನ ಹೆಗ್ಗಳಿಕೆಯ ಅಭಿಮಾನದ ಧ್ವನಿಯಾಗಿದೆ.

ಅಂದಿನ ಸಮಾಜದ ಇತರರು ಈತನನ್ನು ವ್ಯಂಗ್ಯ ಮಾಡಿದರೆ ಈತ ಸುಮ್ಮನೆ ಕುಳಿತು ಕೇಳುವಂತವನಲ್ಲ. ಅಂತವರಿಗೆ ತಕ್ಕ ಪಾಠ ಕಲಿಸಲು ಮಾತಿನ ಚಾಟಿ ಏಟು ನೀಡಲು ಹಿಂಜರಿಯದೇ ಆತ್ಮಾಭಿಮಾನದಿಂದ ಇದು ಒಂದು ಸವಾಲು ಎಂಬ ರೀತಿಯಲ್ಲಿ ಸ್ವೀಕರಿಸಿ ವ್ಯಕ್ತಿತ್ವದ ಉನ್ನತಿಯನ್ನು ಕಾಯಕದಲ್ಲಿರುವ ತನ್ನ ಪರಿಣಿತಿಯನ್ನು ಇಂತಹ ಮಾತುಗಳಲ್ಲಿ ಬಿಂಬಿಸುತ್ತಾನೆ. ಜೊತೆಗೆ ಆತನ ಆತ್ಮಾವಿಶ್ವಾಸದ ಅದಮ್ಯ ಶಕ್ತಿಯನ್ನು ನಾವು ಈ ವಚನದಲ್ಲಿ ಕಾಣಬಹುದಾಗಿದೆ.

ತಡಿನೆಲೆಯಿಲ್ಲದ ಮಹಾನದಿಯಲ್ಲಿ
ಒಡಲಿಲ್ಲದ ಅಂಬಿಗ ಬಂದೈದಾನೆ
ಹಿಡಿವ ಬಿಡುವ ಮನವ ಬೆಲೆಗೊಟ್ಟಡೆ
ಗಡಣವಿಲ್ಲದೆ ಹಾಯಿಸುವೆ ಹೊಳೆಯ
ನುಡಿಯಿಲ್ಲದ ನಿಸ್ಸೀಮ ಗ್ರಾಮದಲ್ಲಿರಿಸುವೆನೆಂದಾತನಂಬಿಗ ಚೌಡಯ್ಯ

(ಸಂಕೀರ್ಣ ವಚನ ಸಂಪುಟ: ೧, ವಚನ ಸಂಖ್ಯೆ: .೧೫೬)

ಈ ವಚನದಲ್ಲಿ ಕಂಡುಬರುವುದು ಚೌಡಯ್ಯನವರ ಪ್ರತಿಷ್ಠೆ ಅಲ್ಲ ಅಥವಾ ಅಹಂಕಾರವಲ್ಲ. ಒಬ್ಬ ಬಂಡಾಯದ ಧ್ವನಿಯಲ್ಲಿ ಮಾತನಾಡುವವನು ಬದಲಾವಣೆಯನ್ನು ನಿರೀಕ್ಷಿಸುವಲ್ಲಿ ಆವೇಶ ಭರಿತವಾಗಿ ಅಥವಾ ತಾನು ಇಟ್ಟಿರುವ ನಂಬಿಕೆಯಿಂದ, ಆತ್ಮವಿಶ್ವಾಸದಿಂದ ತನ್ನ ತಾನರಿತುಕೊಂಡು ಪರಿಪಕ್ವಗೊಂಡ ಭಾವದಿಂದ ಮಾತನಾಡುವ ಬಗೆ ಇದು.

ಕಂಗಳ ನಾಮ ಹರುಗುಲವಾಗಿ
ನೋಡುವ ದೃಷ್ಟಿ ಅಂಬಿಗನಾಗಿ
ಕರಣೆಂದ್ರೀಯವೆಂಬ ಬಹುಜನಂಗಳ ಕೂಡಿ
ಆಸೆಯೆಂಬ ಹೊಳೆಯ ದಾಡುವುದಕ್ಕೆ ಹುಟ್ಟು ಕಾಣದೆ
ಹರಗುಲು ಈಚೆ ಉಳಿಯುತ್ತೆಂದನಂಬಿಗ ಚೌಡಯ್ಯ

(ಸಂಕೀರ್ಣ ವಚನ ಸಂಪುಟ: ೧, ವಚನ ಸಂಖ್ಯೆ: ೮೮)

ಈ ವಚನದಲ್ಲಿ ಕಾಯಕದ ವಿವರಣೆಗಳನ್ನು ಬದುಕಿನೊಡನೆ ತಿರುಗಿಸುವ ಚಿಂತನೆಗೆ ಸೇರಿಕೊಂಡಿರುವುದು ವಿಶಿಷ್ಟ ಸ್ವರೂಪದ್ದಾಗಿದೆ. ಇದು ಆಸೆಯ ಆವೇಶದಲ್ಲಿ ಇರುವ ಜನರನ್ನು ಕುರಿತು ಆಡಿರುವ ಮಾತಾಗಿದೆ. ಆತ್ಮಾಭಿಮಾನದ ಪ್ರತೀಕದಂತೆ ಕಾಣುತ್ತವೆ.

ಅಂಬಿಗನು ಜಗದೊಳಗೆ ಇಂಬಿಲೋಲಾಡುವನು
ತುಂಬಿದ ಸಾಗರದೊಳಗೆ ನೋಡಯ್ಯ
ನಿಂದ ದೋಣಿಯನೇರಿದಂದಿನ ಹುಟ್ಟ
ಕಂಡವರಂದವನರಿದಾತ ತೊಳಸುತ್ತಿದ್ದನು
ಛಂದಗೆಟ್ಟವರೆಲ್ಲಾ ಬಂದೇರಿ ದೋಣಿಯನು,
ಶಿವನೊಂದೆ ಠಾವಿಗೊಯ್ದಿಳುಹುವೆನೆಂದನಂಬಿಗಚೌಡಯ್ಯ

(ಸಂಕೀರ್ಣ ವಚನ ಸಂಪುಟ: ೧, ವಚನ ಸಂಖ್ಯೆ: ೧೮)

ಚೌಡಯ್ಯನು ಮೂಲತಃ ಕೆಳವರ್ಗದ ವಚನಕಾರನಾಗಿದ್ದರಿಂದ ಇವನಿಗೆ ಆತ್ಮವಿಮರ್ಶೆ ಮಾಡಿಕೊಳ್ಳುವಂತಹ ಪ್ರಮೇಯ ಅತೀ ಕಡಿಮೆಯಾಗಿ ಕಾಣುತ್ತದೆ. ಬಸವಣ್ಣನವರು ತಮ್ಮ ಮನಸ್ಸು ಅರಿದ ರೀತಿಯನ್ನು ನಾಯಿ, ನರಿ ಮುಂತಾದ ಹಲವು ಪ್ರಾಣಿಪಕ್ಷಿ, ಕ್ರಿಮಿಕೀಟಗಳಿಗೆ, ಹಣ್ಣುಕಾಯಿಗಳಿಗೆ ಹೋಲಿಸಿಕೊಂಡು ತಮ್ಮ ಆತ್ಮವಿಮರ್ಶೆಯನ್ನು ಮಾಡಿಕೊಳ್ಳುತ್ತಾರೆ. ಕಾರಣ ಅವರು ಮೇಲ್ಜಾತಿಯಲ್ಲಿ ಹುಟ್ಟಿ ಬಿಜ್ಜಳನ ಆಸ್ಥಾನದಲ್ಲಿ ಮಂತ್ರಿಯಾಗಿದ್ದು ಒಂದು ಚಳುವಳಿಯ ನಾಯಕನಾಗಿ ಬಸವಣ್ಣ ತನ್ನನ್ನು ಮೇಲಿರಿಮೆ, ಹುಸಿಭಾವ ಕಾಡದಿರಲೆಂದು ಅಥವಾ ಇಂಥ ಪ್ರಸಂಗ ಎದುರಾದಾಗ ಬಸವಣ್ಣನಂತವರು ಆತ್ಮ ಪ್ರತ್ಯೆಯ ಮಾಡಿಕೊಳ್ಳುತ್ತಾರೆ. ಆದರೆ ಚೌಡಯ್ಯನಂತ ಕೆಳಸ್ಥರದ ವಚನಕಾರರು ಸಮಾಜದಲ್ಲಿ ಇದ್ದ ಅಂಧಕಾರಕ್ಕೆ ಬಲಿಯಾಗಿ, ಶೋಷಣೆಗೆ ಒಳಗಾಗಿ ತಮ್ಮತನವನ್ನೇ ಕಳೆದುಕೊಂಡು ಈ ವ್ಯವಸ್ಥೆಯ ವಿರುದ್ಧ ತಿರುಗಿ ಬೀಳಲು ಆಕ್ರೋಶ, ಸಿಟ್ಟು, ಸೇಡವುಗಳು ತುಂಬಿ ಒಳ್ಳೆಯ ಕಾಲಕ್ಕೆ ಕಾಯುತ್ತಿದ್ದಾಗ ಈ ಸಂದರ್ಭ ಬಂದೊದಗಿದ್ದರಿಂದ ಅವರಲ್ಲಿದ್ದ ಆತ್ಮಾಭಿಮಾನವು ಅವರು ಅನುಭವಿಸಿದ ಅಪಮಾನ, ಹಸಿವು ಅದೋಗತಿಯ ಪರಿಸ್ಥಿತಿಯಿಂದ ಬಂದ ಯಾವ ಕೆಳಜಾತಿಯ ವಚನಕಾರನೂ ಬಸವಣ್ಣನ ರೀತಿ ಆತ್ಮಪ್ರತ್ಯೇಯ, ಆತ್ಮವಿಮರ್ಶೆ ಅವರಿಗೆ ಅಷ್ಟು ಅನಿವಾರ್ಯ ಎಂದು ಅನಿಸಿಲ್ಲ ಎಂದೇ ಕಾಣುತ್ತದೆ. ಅಂತವರಲ್ಲಿ ಅಂಬಿಗರ ಚೌಡಯ್ಯನದು ಇದೇ ಸ್ಥಿತಿ. ಇವನ ಅನೇಕ ವಚನಗಳಲ್ಲಿ ಸಿಟ್ಟು ಆಕ್ರೋಶ ನಿಷ್ಠುರವಾದ ಮಾತುಗಳು ಸಮಾಜದ ಒಡಲಾಳದಲ್ಲಿ ಅಡಗಿದ್ದ ಶೋಷಣೆ, ದೌರ್ಜನ್ಯ ಇತ್ಯಾದಿ ಕೀಳರಿಮೆ ಭಾವನೆ, ಅಸಮಾನತೆ ಮುಂತಾದ ನೋವುಗಳನ್ನು ಅನುಭವಿಸಿದ್ದರಿಂದ ಸಹಜವಾಗಿ ಮೂಡಿಬಂದದ್ದರ ಜೊತೆಗೆ ಆತ್ಮಾಭಿಮಾನದ ಪ್ರತೀಕವೆಂಬಂತೆ ನೈತಿಕ ನಿಷ್ಠುರತೆ, ಸಮಾಜ ವಿಮರ್ಶೆ ಪ್ರಕಟಗೊಂಡಿದೆ. ಇಲ್ಲಿ ಸಮಾಜಕ್ಕಿಡಿದ ರೋಗಕ್ಕೆ ಔಷಧಿ ಕೊಡುವ ವೈದ್ಯಕೀಯಕ್ಕೆ ಇಳಿದಂತೆ ಕಾಣುತ್ತಾನೆ. ಅದಕ್ಕೆ ನಿದರ್ಶನವೆಂಬಂತೆ ತೀರಾ ಸಾಮಾಜಿಕವಾದ ಈ ವಚನವನ್ನು ಉದಾಹರಿಸಬಹುದಾಗಿದೆ.

ಕುರಿ, ಕೋಳಿ, ಕಿರುಮೀನ ತಿಂಬವರ
ಊರೊಳಗೆ ಇರು ಎಂಬರು
ಅಮೃತಾನ್ನವ ಕರೆವಗೋವ ತಿಂಬವರ
ಊರಿಂದ ಹೊರಗಿರು ಎಂಬರು
ಆ ತನು ಹರಗೋಲಾಯಿತ್ತು
ಬೊಕ್ಕಣ ಸಿದಿಕೆ ಬಾರುಕೋಲು ಪಾದರಕ್ಷೆ
ದೇವರ ಮುಂದೆ ಬಾರಿಸಲಿಕ್ಕೆ ಮದ್ದಳೆಯಾಯಿತ್ತು
ಈ ಬುದ್ದಲಿಕೆಯೊಳಗಣ ತುಪ್ಪವ ಶುದ್ಧಮಾಡಿ
ತಿಂಬ ಗುಜ್ಜ-ಹೊಲೆಯರ ಕಂಡಡೆ
ಉದ್ದನ ಚಮ್ಮಾಳಿಗೆಯ ತಕ್ಕೊಂಡು
ಬಾಯ ಕೊಯ್ಯುವೆನು ಎಂದಾತ ನಮ್ಮ ಅಂಬಿಗರ ಚೌಡಯ್ಯ

(ಸಂಕೀರ್ಣ ವಚನ ಸಂಪುಟ: ೨, ವಚನ ಸಂಖ್ಯೆ: ೧೧೭)

ಚೌಡಯ್ಯನು ಮೇಲ್ವರ್ಗದ ಜನರಿಂದ ಪುರಾತನ ಕಾಲದಿಂದ ನಡೆದುಬರುತ್ತಿದ್ದು ಶೋಷಣೆಯನ್ನು ಅತ್ಯಂತ ಸಮೀಪದಿಂದ ಗಮನಿಸಿದವರು. ಸ್ವತಃ ಅನುಭವಿಸಿದಂತವನಾಗಿದ್ದಾನೆ. ಹಾಗಾಗಿ ಈ ತರದ ಆವೇಶ ಆಕ್ರೋಶ ಭರಿತವಾದ ಮಾತುಗಳು ಹೊರಬರುತ್ತವೆ. "ಬುದ್ದಲಿಕೆಯೊಳಗಣ ತುಪ್ಪವ ಶುದ್ಧಮಾಡಿ ತಿಂಬ ಗುಜ್ಜ ಹೊಲೆಯರ ಕಂಡಡೆ" ಎಂಬ ಮಾತನ್ನು ಗಮನಿಸಿದಾಗ ಕೆಳಸ್ಥರ ವರ್ಗದ ಜನರನ್ನು ಶೋಷಣೆ ಮಾಡುತ್ತಿದ್ದ ಸನಾತನಿಗಳನ್ನು ಹೊಲೆಯನಾಗಿ ಹೋಲಿಸಿ ಅವನ ಅಮಾನವೀಯತೆಯ ನಡವಳಿಕೆಯನ್ನು ಖಂಡಿಸುತ್ತಾನೆ. ವರ್ಣಾಶ್ರಮ ಪದ್ಧತಿಗಳು ನಂಬಿದ್ದ ಆಚರಣೆಗಳನ್ನು ಬುಡಮೇಲು ಮಾಡುವ ಚಿಂತನೆ ಮಾಡುತ್ತಾನೆ. ಸಿಟ್ಟು, ಆಕ್ರೋಶ, ಬೇಸರ, ವ್ಯಂಗ್ಯ, ವಿಡಂಬನೆ ಸಹಜವೆಂಬಂತೆ ಈತನ ಅಭಿವ್ಯಕ್ತಿಯಲ್ಲಿ ಸೇರಿ ಒಬ್ಬ ಬಂಡಾಯಗಾರನನ್ನಾಗಿಯೇ ನಿರ್ಮಿಸಿವೆ. ಹೀಗೆ ಸನಾತನ ವಾದಿಗಳನ್ನು ಖಂಡಿಸಿದವರಲ್ಲಿ ಮುಖ್ಯ ಹೆಸರು ಚೌಡಯ್ಯನದೇ. ಎಲ್ಲಾ ವಚನಕಾರರು ಈ ರೀತಿ ವ್ಯಕ್ತಪಡಿಸಲು ಸಾಧ್ಯವಾಗಿಲ್ಲ. ಆತ್ಮಸ್ಥೈರ್ಯದಿಂದ ಪ್ರತಿಭಟನೆಯನ್ನು ಮಾಡುವ ಬಗೆಯಾಗಿ ಈ ರೀತಿಯಾಗಿ ಪ್ರತಿಕ್ರಿಯಿಸುತ್ತಾನೆ. ಸಮಾಜದಲ್ಲಿ ನೋವುಂಡ ವರ್ಗದವರಲ್ಲಿ ಅಂಬಿಗರ ಚೌಡಯ್ಯ ಅಪಾರ ಅನುಭವ ಪಡೆದ ಕಾಯಕನಿಷ್ಠೆಯ ಸಮಾಜಮುಖಿ ಚಿಂತನೆಯ ವ್ಯಕ್ತಿತ್ವವನ್ನು ತನ್ನದಾಗಿಸಿಕೊಂಡಿದ್ದಾನೆ.

ಮಾದಾರ ಧೂಳಯ್ಯ

ಬಸವಣ್ಣ ಕಟ್ಟಿದ ಶರಣ ಸಮುದಾಯಕ್ಕೆ ಸಮಾಜದ ನಾನಾ ಜಾತಿ ಮೂಲಗಳಿಂದ ಬಂದು ಶರಣರಾದವರು ಅನೇಕರು. ಸಮಾಜದಲ್ಲಿ ಕುಲ ಮೂಲದ ವೃತ್ತಿಗಳನ್ನು ಮಾಡುತ್ತಿದ್ದ ವೃತ್ತಿಕಾರರು ಬಂದು ಸೇರಿದರು. ಶರಣರಾದರು. ಜೊತೆಗೆ ವಚನಗಳನ್ನು ಬರೆದು ಸಾಮಾಜಿಕ ಹೋರಾಟದಂತೆ ಬೆಳೆಯುತ್ತಿದ್ದ ವಚನ ಆಂದೋಲನದಲ್ಲಿ ಭಾಗವಹಿಸಿದರು. ಸಮಾಜೋ-ಧಾರ್ಮಿಕ ಸುಧಾರಣೆಗೆ ತೊಡಗಿಕೊಂಡರು. ಹೀಗೆ ಬಂದವರು ತಮ್ಮ ವೃತ್ತಿಯಲ್ಲಿ ಬಳಕೆಗೊಳ್ಳುವ ವಸ್ತುಗಳನ್ನೆ ಬಳಸಿಕೊಂಡು ವಚನಗಳನ್ನು ರಚಿಸಿ ಹೇಳಿರುವುದು ವಿಶೇಷ. ಹೀಗೆ ವೃತ್ತಿಯ ಪರಿಕರಗಳೇ ಅವರಿಗೆ ಸಂವಹನ ಮಾಧ್ಯಮಗಳಾಗಿವೆ. ವೃತ್ತಿಯ ಶ್ರೇಷ್ಠತೆಯನ್ನು ಮಹತ್ವವನ್ನು ವಚನ ಮಾದ್ಯಮದ ಮೂಲಕ ಹೇಳುವುದು ವೃತ್ತಿ ಗೌರವವನ್ನು ಬೆಳೆಸುವಂತಹದ್ದೆ ಆಗಿದೆ. ಮತ್ತು ತಮ್ಮ ಶ್ರಮದ ಮೂಲಕವೇ ಅನುಭಾವವನ್ನು ಮಾಡುವುದು. ಅಂತರಂಗದ ಪ್ರವೇಶಿಕೆಯನ್ನು ಸಾಧಿಸುವುದು ಕೂಡ ಆಗಿದೆ. ವೃತ್ತಿಯಲ್ಲಿ ಪಡೆದ ಅನುಭವದ ಮೂಲಕ ಆಧ್ಯಾತ್ಮಿಕ ಸಾಧನೆಯನ್ನು ಮಾಡುವುದು ನಡೆದೆ ಇರುತ್ತದೆ.

ತಳಸಮುದಾಯದಿಂದ ಬಂದ ಧೂಳಯ್ಯ ಪಾದರಕ್ಷೆ ಹೊಲಿಯುವ ವೃತ್ತಿ ಮಾಡುತ್ತಿದ್ದ. ಈತನ ವಚನಗಳು ಕಾವ್ಯಗುಣ, ಆಧ್ಯಾತ್ಮ, ಕಾಯಕದ ಶ್ರೇಷ್ಠತೆ, ಸಮಾಜಿಕ ಸುಧಾರಣೆ, ಧಾರ್ಮಿಕ ಭಕ್ತಿ ಪ್ರಸಾರ, ಅರಿವಿನ ಹುಡಕಾಟ, ತನ್ನತನದ ಕುರುಹುಗಳಾಗಿ ಕಾಣುತ್ತವೆ. ಇನ್ನು ವೃತ್ತಿಯನ್ನೆ ಶ್ರೇಷ್ಠವೆಂದು ನಂಬಿ, ಪ್ರಮಾಣಿಕವಾಗಿ ತನ್ನನ್ನೆ ಮೀಸಲಿರಿಸಿಕೊಂಡು, ಅದರ ಮೂಲಕವೇ ತನ್ನತನವನ್ನು ಕಟ್ಟಿಕೊಳ್ಳುವ ಪ್ರಯತ್ನವನ್ನು ಮಾಡುವುದು ಈತನ ವಚನಗಳಲ್ಲಿ

ಕಾಣುತ್ತೇವೆ. ವಚನಗಳಲ್ಲಿ ಬಳಕೆಗೊಂಡಿರುವ ವೃತ್ತಿ ಪರಿಕರಗಳ ಪರಿಭಾಷೆ ವೃತ್ತಿಗೆ ನೀಡುವ ಗೌರವ ಸಂಕೇತಗಳಾಗಿಯೇ ಪರಿಣಮಿಸಿವೆ.

ಅಟ್ಟೆಯ ಚುಚ್ಚುವ ಉಳಿಯ ಮೊನೆಯಲ್ಲಿ
ಪ್ರತ್ಯಕ್ಷನಾದ ಪರಮೇಶ್ವರನ ಕಂಡು,
ಇತ್ತಲೇಕಯ್ಯ ಕಾಯದ ತಿತ್ತಿಯ ಹೊತ್ತಾಡುವವನ ಮುಂದೆ
ನಿನ್ನ ಭಕ್ತರ ಠಾವಿನಲ್ಲಿಗೆ ಹೋಗಿ ಮುಕ್ತಿಯ ಮಾಡು
ನೀ ಹೊತ್ತ ಬಹುರೂಪ ತಪ್ಪದೆ
ರಜತದ ಬೆಟ್ಟದ ಮೇಲಕ್ಕೆ ಹೋಗು.
ನಿನ್ನ ಭಕ್ತರ ಮುಕ್ತಿಯ ಮಾಡು.
ಕಾಮ ಧೂಮಧೂಳೇಶ್ವರನ ಕರಣದಿಂದ
ನೀನೆ ಬದುಕು.

(ಸಂಕೀರ್ಣ ವಚನ ಸಂಪುಟ: ೩, ವಚನ ಸಂಖ್ಯೆ: ೧೧೭೩)

ಪಾರದಕ್ಷೆಯನ್ನು ಮಾಡುವ ವೃತ್ತಿಯಲ್ಲಿ ನಿರತನಾಗಿರುವ ಸಂದರ್ಭದಲ್ಲಿ ಶಿವನೇ ಸಾಕ್ಷಾತ್ ಪ್ರತ್ಯಕ್ಷನಾಗಿರುವ ಚಿತ್ರ ಈ ಮೇಲಿನ ವಚನದಲ್ಲಿ ಕಾಣುತ್ತದೆ. ಇಲ್ಲಿ ನಾವು ಗಮನಿಸಬೇಕಾದುದು ವೃತ್ತಿ ನಿಷ್ಠೆಯನ್ನು. ಇದೇ ವಚನದಲ್ಲಿ "ಇತ್ತಲೇಕಯ್ಯ ಕಾಯದ ತಿತ್ತಿಯ ಹೊತ್ತಾಡುವವನ ಮುಂದೆ" ಎಂದು ಪ್ರಶ್ನಿಸುವುದನ್ನು ಕಾಣಬಹುದು. ಯಾರೇ ಆದರೂ ಸರಿ, ಶಿವನೇ ಆದರೂ ಸರಿ ಪ್ರಶ್ನಿಸುವ ನೈತಿಕತೆ, ಸ್ವಾಭಿಮಾನ ವಚನಕಾರರದು. ಅದಕ್ಕೆ ಮೂಲ ಕಾರಣ ಅವರ ವೃತ್ತಿ ಪರತೆಯಾಗಿದೆ. "ತನ್ನ ವೃತ್ತಿಯಲ್ಲಿ ನಿರತನಾಗಿರುವಾಗ, ಶಿವನೇ ಸಾಕ್ಷಾತ್ತಾಗಿ ಬಂದರೂ ಕಣ್ಣೆತ್ತಿಯೂ ನೋಡದೆ ಉದಾಸೀನ ಮಾಡಿದನಂತೆ. ತನ್ನ ನಿಷ್ಠೆಯ ಬಗ್ಗೆ ನಂಬಿಕೆಯಿದ್ದ ಅವನಿಗೆ ಶಿವ ಬರದೆ ಏನು ಮಾಡಿಯಾನು ಎಂಬ ವಿಶ್ವಾಸ"[೧]

ವೃತ್ತಿಯಲ್ಲಿ ನಿರತನಾಗಿದ್ದವನಿಗೆ ಅದೇ ಶಿವ ಸ್ವರೂಪ ಮತ್ತು ಮಹತ್ವವಾದದ್ದು. ಅದರ ನಂತರ ಉಳಿದುದೆಲ್ಲದು. ಈ ಬಗೆಯ ನೀತಿ ಅನೇಕ ವೃತ್ತಿನಿರತ ವಚನಕಾರರ ತಾತ್ವಿಕತೆಯಾಗಿದೆ. ಇದು ವಚನಕಾರರ ಮುಖ್ಯ ಸಿದ್ಧಾಂತವಾದ ಕಾಯಕತತ್ವದ ಪರಿಪಾಲನೆ. ಜೊತೆಗೆ ತಾವು ನೀಡುತ್ತಿದ್ದ ಶ್ರಮಗೌರವಾಗಿದೆ. ವೃತ್ತಿ ನಿಷ್ಠೆಯಾಗಿದೆ.

ಧೂಳಯ್ಯನ ವೃತ್ತಿ ನಿಷ್ಠೆಯನ್ನು ಮೆಚ್ಚಿದ ಶಿವನು ಅವನು ಚುಚ್ಚಿದ ಉಳಿಯ ಮೊನೆಯಲ್ಲಿ ಕಾಣಿಸಿಕೊಳ್ಳುತ್ತಾನೆ. ಹೀಗೆ ಪ್ರತ್ಯಕ್ಷನಾದ ಪರಮೇಶ್ವರನನ್ನು ಪ್ರಶ್ನಿಸುವ "ಇತ್ತಲೇಕಯ್ಯ" ಎಂಬ ಮಾತು ಕಾಯಕವೇ ಪರಮೇಶ್ವರ ಪೂಜೆಯಾದಾಗ, ಶ್ರಮವೇ ಬದುಕಿನ ದಾರಿಯಾದಾಗ ಕಾಯಕಕ್ಕೆ ಅಡೆ ತಡೆಯೊಡ್ಡುವ ಯಾವ ಶಕ್ತಿಯೇ ಇರಲಿ ಅದನ್ನು ಪ್ರಶ್ನಿಸುವ ಗುಣವನ್ನು ಇಲ್ಲಿ ಗುರುತಿಸುತ್ತೇವೆ. ಶ್ರಮವನ್ನೆ ನಂಬಿಕೊಂಡಿರುವವರಿಗೆ, ನಿಷ್ಠೆ, ಪ್ರಾಮಾಣಿಕವಾದ ವೃತ್ತಿ ವ್ರತಧಾರಿಗಳಿಗೆ ಶಿವನ ಹಂಗು ಬೇಕಿಲ್ಲ ಎಂಬ ನಿರಾಕರಣೆಯನ್ನು ಗುರುತಿಸಬಹುದು.

ಬಡತನದ ಜೀವನವನ್ನು ಅನುಭವಿಸುವ ವಚನಕಾರನು ಆಗಿರುವ ಧೂಳಯ್ಯ ಪಾದರಕ್ಷೆಯನ್ನು ಹೊಲಿಯುವ ವೃತ್ತಿಗೆ ಸಂಬಂಧಿಸಿದ ಪರಿಕರಗಳನ್ನು, ಸಾಮಾನುಗಳು ತುಂಬಿರುವ ಚೀಲವನ್ನು(ತಿತ್ತಿ)ಯನ್ನು ಹೊತ್ತು ಅಥವಾ ಹಾಕಿಕೊಂಡು ತಿರುಗಾಡುವ ಅಂದರೆ ಬಹುಶಃ ಬೀದಿಯಲ್ಲಿ, ಓಣಿ, ಊರುಗಳಲ್ಲಿರಬಹುದು ತಿರುಗುತ್ತ ತನ್ನ ವೃತ್ತಿಯನ್ನು ಮಾಡುತ್ತಿರಬಹುದು. ಮೇಲ್ಜಾತಿಯವರ ಮನೆಗಳಿಗೆ ಹೋಗಿ ಅವರ ಪಾದರಕ್ಷೆಗಳನ್ನು ದುರಸ್ತಿನೋ ಅಥವಾ ಇನ್ನೇನನ್ನೋ ಮಾಡಿಕೊಡುತ್ತಿರ ಬಹುದು. ಇದಕ್ಕೆ ಕಾಯದ ತಿತ್ತಿಯ ಹೊತ್ತಾಡುವವನ ಮುಂದೆ ಎಂಬ ಪದ ಪ್ರಯೋಗ ಬರುತ್ತದೆ. ಮುಂದುವರೆದು 'ತಪ್ಪದೆ ರಜತದ ಬೆಟ್ಟದ ಮೇಲಕ್ಕೆ ಹೋಗು. ನಿನ್ನ ಭಕ್ತರ ಮುಕ್ತಿಯ ಮಾಡು'. "ಕಾಮದೂಮ ಧೂಳೇಶ್ವರನ ಕರುಣದಿಂದ ನೀನೆ ಬದುಕು." ಎಂಬ ಆದೇಶ, ಆಜ್ಞೆ ಮಾಡುವುದನ್ನು ನೋಡಬಹುದು. ಈ ರೀತಿಯ ಭಾಷೆಯ ಬಳಕೆಯನ್ನು ಗಮನಿಸಿದರೆ ಇಲ್ಲಿ ಒಂದು ತಿಳುವಳಿಕೆಯಿದೆ. ಆ ತಿಳುವಳಿಕೆಯನ್ನು ಧೂಳಯ್ಯ ಶಿವನಿಗೆ ನೀಡುತ್ತಿದ್ದಾನೆ. ಅದು ವಚನಕಾರರ ದೊಡ್ಡ ಸಿದ್ಧಾಂತವಾದ ಕಾಯಕ ತತ್ವದ ಪ್ರೇರಣೆ ಎಂತಲೂ ತಿಳಿಯಬಹುದು. ಅಷ್ಟೆ ಅಲ್ಲ ಅದರ ಹಿಂದಿನ ಶ್ರಮ ಸಿದ್ಧಾಂತ, ಕಾಯಕ ನಿಷ್ಠೆ ವೃತ್ತಿಯನ್ನು ಮಾಡುತ್ತ ಬದುಕು ಕಟ್ಟಿಕೊಂಡು ಜೀವನವನ್ನು ಮಾಡುವ ವ್ಯಕ್ತಿ ಹಾಗೂ ಇಂತಹ ವೃತ್ತಿಗಳಿಂದ ಉಪಯೋಗ ಪಡೆದುಕೊಂಡು ಸನಾತನತೆಯಲ್ಲೇ ಜೀವನ ನೂಕುವ ವರ್ಗದ ಚಿತ್ರಣ ಕಾಣುತ್ತದೆ. ಹಾಗೇ ಕಾಣುವ ಸನಾತನ ವರ್ಗದ ಜನರನ್ನು ಸೂಕ್ಷವಾಗಿ ವಿಡಂಬಿಸುವ ಪ್ರಯತ್ನವು ನಡೆದೆ ಇರುತ್ತದೆ. ಹಾಗಾಗಿ ವೃತ್ತಿಯನ್ನು ನಂಬಿಕೊಂಡು ಪ್ರಾಮಾಣಿಕ ಜೀವನ ಮಾಡುವ ನನಗೆ ನಿನ್ನ ಅವಶ್ಯಕತೆ ಇಲ್ಲ ನಿನ್ನ ಅವಶ್ಯಕತೆ ಇರುವುದು ಢಾಂಬಿಕ ಭಕ್ತರಿಗೆ, ಅಂತವರು ನಿನ್ನ ಹೆಸರನ್ನು ಹೇಳಿಕೊಂಡು ಜೀವನ ನೂಕುತ್ತಾರೆ ಅಲ್ಲಿಗೆ ಹೋಗಿ ಅವರಿಗೆ ಅರಿವು ಮೂಡಿಸು ಎಂದು ಆದೇಶವನ್ನೇ ಹೊರಡಿಸುತ್ತಾನೆ. ಅದರಂತೆಯೆ ನನ್ನದು ಶ್ರಮದ ದೇವರು. ನೀನು ನನ್ನ ಕಾಯಕಕ್ಕೆ, ವ್ರತಕ್ಕೆ ಅಡ್ಡಿಪಡಿಸಲು ಬಂದವನು. ಹಾಗಾಗಿ ನನ್ನಲ್ಲಿಗೆ ಬರುವ ಕೆಲಸ ನಿನಗೆ ಬೇಕಿಲ್ಲ. ನನ್ನ ಈ ವೃತ್ತಿದೇವರ, ಶ್ರಮದ ದೇವರ ಕರುಣೆಯಿಂದ ನೀನು ಕಲಿತುಕೋ, ತಿಳಿದಿಕೋ, ಅಥವಾ ಬದುಕು ಎಂದು ಹೇಳುತ್ತಾನೆ.

ಅರಿದು ಚಚ್ಚುವರೆಲ್ಲರೂ ದನದಟ್ಟೆ,
ಮರೆದು ಚುಚ್ಚುವರೆಲ್ಲರೂ ದನದಟ್ಟೆ,
ನಾಚುಚ್ಚುವುದೆಲ್ಲ ಸತ್ತ ಜೀವದನದಟ್ಟೆ.
ಅಟ್ಟೆಯ ಕೊಯ್ದು ಮೆಟ್ಟಿಸಿದೆ ಸತ್ಯರಿಗೆಲ್ಲಕ್ಕೂ
ಎನಗೆ ಬಟ್ಟೆ ಬಯಲು ತೋರಬೇಕೆಂದು.
ನಿಮ್ಮ ಬಟ್ಟೆಯಲ್ಲಿ ನೀವೆ ಹೋಗಿ,
ಎನ್ನ ಬಟ್ಟೆ ಕಾಮಧೂಮ ಧೂಳೇಶ್ವರನ ಬಟ್ಟೆಯೆ ಸಾಕು.

(ಸಂಕೀರ್ಣ ವಚನ ಸಂಪುಟ: ೩. ವಚನ ಸಂಖ್ಯೆ: ೧೧೭೭)

ಈ ವಚನದಲ್ಲಿ ವ್ಯಕ್ತವಾಗುತ್ತಿರುವುದು ಕೇವಲ ಇವನ ಸ್ವಾಭಿಮಾನದ ಮಾತಲ್ಲ ಅಚಲ ವೃತ್ತಿನಿಷ್ಠೆ, ಗೌರವ. ಇಡಿ ವಚನ ಸಂಸ್ಕೃತಿಯನ್ನೇ ಅರ್ಥ ಮಾಡಿಸಿ ಬಿಡುವ ಶಕ್ತಿ ಇಂತಹ ವಚನಗಳಿಗೆ ಬಂದಿದೆ.

ತನ್ನ ವೃತ್ತಿಯಲ್ಲಿ ಪಡೆದ ಅನುಭವದಿಂದಲೇ ಅವನು ವಚನಗಳನ್ನು ಅಭಿವ್ಯಕ್ತಿಸುತ್ತಾನೆ. ತಾನು ನಂಬಿರುವ ತತ್ವಸಿದ್ಧಾಂತವನ್ನು ತನ್ನ ವೃತ್ತಿಯಲ್ಲಿ ಬಳಸಲಾಗುವ ವಸ್ತುಗಳ ಮೂಲಕವೇ ವಚನಗಳನ್ನು ಕಟ್ಟುತ್ತಾನೆ. ಮತ್ತು ಹೀಗೆ ಕಟ್ಟಿದ ವಚನಗಳ ಮೂಲಕವೇ ತನ್ನತನವನ್ನು ಗುರುತಿಸುವ ಯತ್ನ ಮಾಡುತ್ತಾನೆ. ಅಲ್ಲಿಯವರೆಗೆ ನಂಬಿಕೊಂಡು ಬಂದಿದ್ದ ಸನಾತನ ಪರಂಪರೆಯ ವಿರುದ್ಧವಾಗಿಯೇ ಮಾತಾಡುತ್ತಾನೆ. ಇಲ್ಲಿ ಪರ್ಯಾಯವಾದ ಬದುಕನ್ನು ಕಟ್ಟಿಕೊಳ್ಳುತ್ತ, ಹಿಂದೆ ಇದ್ದ ಪರಂಪರೆಯನ್ನು ವಿರೋಧಿಸುತ್ತ ಪ್ರತಿರೋದ ಒಡ್ಡುತ್ತ ಇದೊಂದು ಇಡಿ ಸಂಸ್ಕೃತಿಯನ್ನು ಹೊಸ ಸಂಸ್ಕೃತಿಗೆ ಬದಲಾಯಿಸುವ ಪ್ರಯತ್ನವಾಗಿದೆ.

ದೇವಸ್ಥಾನವನ್ನು ಪವಿತ್ರವೆಂದು ಕರೆಯಲಾಗುತ್ತಿದ್ದ ಸಂದರ್ಭದಲ್ಲಿ ಯಾವುದನ್ನು ಅಪವಿತ್ರವೆಂದು ಕರೆಯಲಾಗುತ್ತಿತ್ತೋ ಅಂತಹ ಜಾಗದಲ್ಲಿ ದೇವರನ್ನು ತಂದು ಕೂಡಿಸುವ ಮೂಲಕ ಪವಿತ್ರವೆಂದು ನಂಬಿರುವುದಷ್ಟೆ ಪವಿತ್ರವಲ್ಲ ವೃತ್ತಿ ನಿರತನಿಗೆ ತನ್ನ ವೃತ್ತಿಯೇ ಪವಿತ್ರ ಅಲ್ಲಿಯೇ ಕೈಲಾಸ ಎಂಬ ಬಗೆಯ ಕಲ್ಪನೆಯನ್ನು ತರುತ್ತಾನೆ.

ವಚನಗಳು ಅಭಿವ್ಯಕ್ತಿಗೊಳ್ಳುವುದು ವೃತ್ತಿಯ ಪರಿಭಾಷೆಯಲ್ಲಿಯೇ. ತಮ್ಮ ವೃತ್ತಿಯಲ್ಲಿ ಬಳಸುವ ಪರಿಕರಗಳ ಮೂಲಕ ತಮ್ಮ ಅನುಭವವನ್ನು ಪ್ರಸ್ತುತಪಡಿಸುವುದು ಸಮಾಜದಲ್ಲಿ ಕುಲಕಸಬುಗಳನ್ನು, ವೃತ್ತಿಗಳನ್ನು ಮಾಡುವ ವರ್ಗದ ವಚನಕಾರರ ವಿಶೇಷತೆ. ಧೂಳಯ್ಯ ತನ್ನ ವಚನಗಳಲ್ಲಿ ತನ್ನ ತಾತ್ವಿಕ ನಿಲುವನ್ನು, ಆಧ್ಯಾತ್ಮಿಕ ಅನುಭವವನ್ನು, ವಿರೋಧ, ಪ್ರತಿರೋಧವನ್ನು, ತನ್ನತನದ ಅನನ್ಯತೆಯನ್ನು, ವೃತ್ತಿ ನಿಷ್ಠೆಯನ್ನು ಪ್ರತಿಪಾದಿಸಲು ವೃತ್ತಿ ಪದಗಳನ್ನು ರೂಪಕ, ಉಪಮೆಗಳಾಗಿ ಬಳಸಿಕೊಳ್ಳುತ್ತಾನೆ. ಚಪ್ಪಲಿ ಹೊಲಿಯುವ ವೃತ್ತಿಯ ಪರಿಕರಗಳಾದ ಅಟ್ಟೆ, ಚುಚ್ಚುವ ಉಳಿ, ಕಾಯದ ತಿತ್ತಿ, ದನದಟ್ಟೆ, ಮುಂತಾದ ಪದಗಳ ಮೂಲಕ ವಚನಗಳನ್ನು ಅಭಿವ್ಯಕ್ತಿಸಿದ್ದಾನೆ. ಇಂತ ಪರಿಕರಗಳ ಮೂಲಕವೇ ಅನುಭವವನ್ನು ಕೊಟ್ಟಿದ್ದಾನೆ.

ಜೇಡರ ದಾಸಿಮಯ್ಯ

ಹನ್ನೆರಡನೇ ಶತಮಾನದಲ್ಲಿ ಜೇಡರ ದಾಸಿಮಯ್ಯ ಜೀವಿಸಿದ್ದಷ್ಟೇ ಅಲ್ಲದೆ ಮೊದಲು ವಚನಗಳನ್ನು ರಚಿಸಿದವನಾಗಿದ್ದಾನೆ. ಈತ ವೃತ್ತಿಯಲ್ಲಿ ನೇಕಾರನಾಗಿದ್ದು, ಆತನ ವಚನಗಳ ಮೂಲಕ ಆಧಾರ ಸಿಗುತ್ತದೆ. ಅಲ್ಲದೆ ಆತನ ಬದುಕಿಗೆ ಸಂಬಂಧಿಸಿದ ಚರಿತ್ರೆಯಲ್ಲಿನ ಘಟನೆಗಳಿಂದಲೂ ನೇಕಾರ ವೃತ್ತಿ ಮಾಡುತ್ತಿದ್ದನೆಂದು ದೃಢಪಟ್ಟಿದೆ. ಈತ ಸುಮಾರು ೧೦೬೦ ರಲ್ಲಿ ಜನ್ಮ ತಳೆದು, ಸುಮಾರು ೧೧೫೦ರ ವರೆಗೆ ಜೀವಿಸಿದ್ದಿರಬಹುದೆಂದು ಸದ್ಯಕ್ಕೆ ತಿಳಿಯಲಾಗಿದೆ.

ಈತನವು ೧೭೫ ವಚನಗಳು ಉಪಲಭ್ಯವಿದೆ. ಈತನ ವಚನಗಳನ್ನು ಅಭ್ಯಾಸಿಸಿದಾಗ ಸಾಮಾಜಿಕ ಕಳಕಳಿ, ಜೀವನ ಮೌಲ್ಯಗಳ ಬಗ್ಗೆ ಇದ್ದ ಕಾಳಜಿ ಅಭಿವ್ಯಕ್ತಗೊಂಡಿರುವುದನ್ನು ಗುರುತಿಸಬಹುದಾಗಿದೆ.

ಕಾಯಕ ಜೀವಿಯಾದ ದಾಸಿಮಯ್ಯ ದುಡಿಮೆಯನ್ನು ಎತ್ತಿಹಿಡಿದ ಮೊದಲ ವಚನಕಾರ. ಕಾಯಕದ ಮೂಲಕವೇ ಭಕ್ತಿಯನ್ನು ಕಂಡವನು. ದುಡಿಮೆ ಇಲ್ಲದ ಪೂಜೆ ಶಿವನಿಗೆ ಅರ್ಪಿತವಾಗದು. ಮಾಡುವ ಕಾಯಕದಲ್ಲಿ ನಿಷ್ಠೆ ಇದ್ದರೆ ಅದೇ ಭಕ್ತಿ ಎಂದನು. ಶ್ರಮದಲ್ಲೇ ದೇವರನ್ನು ಕಾಣಬೇಕೆಂಬ ಈ ಹೊಸ ವಿಚಾರ ವಚನ ಚಳುವಳಿಗೆ ಬುನಾದಿಯನ್ನಾಕಿಕೊಟ್ಟಿತು. ನೈತಿಕ ದುಡಿಮೆಗೆ ಮಹತ್ವ ನೀಡಿದ ದಾಸಿಮಯ್ಯನು ದುಡಿಮೆಯಲ್ಲಿ ಹೆಂಡತಿಯ ಸಹಭಾಗಿತ್ವವನ್ನು ಬಯಸಿದನು. ಸಾಮಾಜಿಕ ವ್ಯವಸ್ಥೆಯಲ್ಲಿ ಹೆಣ್ಣನ್ನು ಅನುಭೋಗದ ವಸ್ತುವೆಂದು ಪರಿಭಾವಿಸಿರುವುದರಿಂದ ಅವಳನ್ನು ದುಡಿಮೆಯಲ್ಲಿ ಸಹಭಾಗಿಯಾಗಿಸಿಕೊಂಡ ಸಂದರ್ಭಗಳು ವಿರಳ. ಪುರುಷನ ದುಡಿಮೆಯಲ್ಲಿ ಹೆಣ್ಣು ಸಹಭಾಗಿಯಾಗಬೇಕೆಂಬ ದಾಸಿಯಮ್ಮನ ವಿಚಾರ ಕ್ರಾಂತಿಕಾರಕವಾದದು. ಸತಿಪತಿಗಳೊಂದಾಗಿ ಮಾಡುವ ಕಾಯಕ ಸ್ವಾವಲಂಬನೆ ಕೂಡ ಸಾಧ್ಯ. ಇದರಿಂದ ಮಹಿಳೆಯರನ್ನು ಶೋಷಣೆಯಿಂದ ಮುಕ್ತ ಮಾಡಲು ಸಾಧ್ಯ ಎಂಬುದು ದಾಸಿಮಯ್ಯನ ತಿಳುವಳಿಕೆಯಾಗಿದೆ. ಹಣದ ಅಹಂಕಾರದಿಂದ ಮಾಡುವ ಭಕ್ತಿ ನಿಜಭಕ್ತಿ ಎನಿಸದು. ಅದರ ಅಪಾಯದ ಬಗ್ಗೆ ಎಚ್ಚರಿಕೆ ಮಾತುಗಳನ್ನಾಡಿದ್ದಾನೆ.

ಅರ್ಥವುಂಟೆಂದು ಅಹಂಕರಿಸಿ ಮಾಡುವನ ಭಕ್ತಿ
ತೊತ್ತಿನ ಕೂಟ, ತೊರೆಯನ ಮೇಳದಂತೆ,
ತನು ಮನ ಧನದಲ್ಲಿ ವಂಚನೆಯುಳ್ಳ
ಪ್ರಪಂಚಿಯ ಮನೆಯ ಕೂಳು
ಶುಕನದ ಬಾಯ ಎಲುವ ಪ್ರತಿ ಶುನಕ ತಿಂದಂತೆ ಕಾಣಾ ರಾಮನಾಥ

(ಸಂಕೀರ್ಣ ವಚನ ಸಂಪುಟ: ೨, ವಚನ ಸಂಖ್ಯೆ: ೭೨೮)

ಅಹಂಕಾರದಿಂದ ಮಾಡುವ ಭಕ್ತಿ ತೊತ್ತಿನೊಡತಣ ರತಿಯಂತೆ ಹೀನ. ತನುಮನಧನದಲ್ಲಿ ವಂಚನೆಯುಳ್ಳವನ ಮನೆಯ ಅನ್ನವನ್ನು ಭಕ್ತರೆನಿಸಿಕೊಂಡವರು ಯಾರೂ ತಿನ್ನಬಾರದು. ತಿಂದರೆ ಅದು ನಾಯ ಬಾಯ ಮೂಳೆಯನ್ನು ಮತ್ತೊಂದು ನಾಯಿ ಕಸಿದು ತಿಂದಂತೆ. ಹಣದ ಅಹಂಕಾರದಿಂದ ಮಾಡುವ ಭಕ್ತಿ ಶಿವನಿಗೂ ಪ್ರಿಯವಾಗದು. ಕಾಯಕಕ್ಕೆ ಮಹತ್ವ ನೀಡಿದ ದಾಸಿಮಯ್ಯನು ದುಡಿಮೆಯ ಬಹುಭಾಗವನ್ನು ದಾಸೋಹಕ್ಕೆ ವಿನಿಯೋಗಿಸಿದ.

ಇಂದಿಂಗೆಂತು ನಾಳಿಗೆಂತೆಂದು ಚಿಂತಿಸಲೇಕೆ?
ತಂದಿಕ್ಕುವ ಶಿವಂಗೆ ಬತನವೆ? ರಾಮನಾಥ

(ಸಂಕೀರ್ಣ ವಚನ ಸಂಪುಟ: ೨, ವಚನ ಸಂಖ್ಯೆ: ೭೩೯)

ದುಡಿಮೆಯಿಂದ ಮಾಡುವ ಭಕ್ತಿ ಶಿವನಿಗೆ ಒಪ್ಪಿತವಾದುದು ಎಂದು ಶ್ರಮದ ಮಹತ್ವವನ್ನು ಎತ್ತಿಹಿಡಿದ ದಾಸಿಮಯ್ಯನು ಸಂಪತ್ತಿನ ಕ್ರೋಢೀಕರಣವನ್ನು ನಿರಾಕರಿಸುತ್ತಾನೆ. ಇಂದು ನಾಳೆಗೆಂದು

ಚಿಂತೆ ಏಕೆ? ತಂದಿಕ್ಕುವ ಶಿವನಿರಬೇಕಾದರೆ ಭಕ್ತನಾದವನಿಗೆ ಬಡತನವಿಲ್ಲ ಎನ್ನುತ್ತಾನೆ. ಸಾಮಾಜಿಕ ತರತಮತೆಗಳಿಗೆ, ಅನ್ಯಾಯಗಳಿಗೆ ಕಾರಣವಾದ ಸಂಪತ್ತನ್ನು ನಿರಾಕರಿಸುವುದರ ಮೂಲಕ ಸಾಮಾಜಿಕ ಅಸಮಾನತೆಗಳನ್ನು ಹೋಗಲಾಡಿಸುವುದು ಅವನ ಉದ್ದೇಶವಾಗಿರಬಹುದು. ಅಂದಂದಿಗೆ ಅಗತ್ಯ ವಾದದನ್ನು ಉಳಿಸಿಕೊಂಡು ಉಳಿದದ್ದನ್ನು ನಾಳಿಗೆಂದು ಇರಿಸಿಕೊಳ್ಳುವ ದಾಸೋಹಕ್ಕೆ ವಿನಿಯೋಗಿಸ ಬೇಕೆಂಬುದು ವಚನಕಾರರಲ್ಲಿ ಒಂದು ಮೌಲ್ಯವಾಗಿ ಪರಿಣಾಮಿಸಿದ್ದನ್ನು ನೋಡಬಹುದು.

ಎಳ್ಳಿಲ್ಲದ ಗಾಣದಲ್ಲಿ ಎಣ್ಣೆಯುಂಟೆ?
ಜಳ್ಳು ತೂರಿದಲ್ಲಿ ಬತ್ತವುಂಟೆ?
ಕಳ್ಳ ಹಾದರಿಗರ ಸಂಪಾದನೆ
ಹೊಳ್ಳ ಕುಟ್ಟಿ ಕೈ ಹೊಟ್ಟೆಯಾದಂತೆ ಕಾಣಾ ರಾಮನಾಥ

(ಸಂಕೀರ್ಣ ವಚನ ಸಂಪುಟ: ೨, ವಚನ ಸಂಖ್ಯೆ: ೭೫೦)

ಆರ್ಥಿಕ ವಿಚಾರವನ್ನು ಇಟ್ಟುಕೊಂಡು ಸಾಮಾಜಿಕ ವಿಮರ್ಶೆ ಮಾಡುವ ದಾಸಿಮಯ್ಯನು ನೈತಿಕ ತಳಹದಿಯ ಸಮಾಜವನ್ನು ಕಟ್ಟಬಯಸಿದ. ಎಳ್ಳೆ ಇಲ್ಲದ ಗಾಣದಲ್ಲಿ ಎಣ್ಣೆ ಹರಿಸಿದಂತೆ. ಜೊಳ್ಳ ತುಂಬಿ ಒನೆಕೆಯಲ್ಲಿ ಎಷ್ಟೆ ಕುಟ್ಟಿದರೂ ಒಂದು ಅಕ್ಕಿ ಕಾಣದ ಹಾಗೆ ಅಂತಸ್ಸತ್ವವಿಲ್ಲದ ವಿಚಾರಗೋಷ್ಠಿಗಳಿಂದ ಏನೂ ಪ್ರಯೋಜನವಿಲ್ಲ. ನೈತಿಕ ದುಡಿಮೆಗೆ ಮಹತ್ವ ನೀಡಿದ ದಾಸಿಮಯ್ಯನು ದಾಸೋಹದ ಅಗತ್ಯತೆ ಮತ್ತು ಅದರ ಮೌಲ್ಯವನ್ನು ಪ್ರಚುರಪಡಿಸಿದ.

ಅನೈತಿಕ ದುಡಿಮೆಯನ್ನು ಬಯಸದ ದಾಸಿಮಯ್ಯ ನೈತಿಕವಾದ ಆರ್ಥಿಕ ಮೀಮಾಂಸೆ ಯೊಂದನ್ನು ಪ್ರತಿಪಾದಿಸಿರುವುದು ಅವನ ವಚನಗಳಿಂದ ತಿಳಿಯಬಹುದು. ದುಡಿಮೆಯಿಂದ ಗಳಿಸಿದ್ದು ಅಂದಂದಿಗೆ ವಿನಃ ನಾಳೆಗಲ್ಲ. ದುಡಿಮೆಯಲ್ಲಿ ಹೆಣ್ಣಿನ ಪಾತ್ರ ಮಹತ್ವತೆಯನ್ನು ಅರಿತು ಸಹಭಾಗಿತ್ವದ ದುಡಿಮೆಗೆ ಭಕ್ತಿ, ಧಾರ್ಮಿಕ ಆಯಾಮ ನೀಡಿದ್ದು ಮುಂದೆ ಒಂದು ಮೌಲ್ಯವಾಗಿ ಪ್ರವಹಿಸಿದ್ದನ್ನು ವಚನ ಚಳುವಳಿಯ ಸಂದರ್ಭದಲ್ಲಿ ಕಾಣಬಹುದು.

ತನ್ನ ಜೀವನದಲ್ಲಿ ಕಂಡುಂಡ ಅನುಭವಗಳನ್ನು ತನ್ನ ವಚನಗಳಲ್ಲಿ ವ್ಯಕ್ತಪಡಿಸಿದ್ದಾನೆ ಅದರಲ್ಲೂ ವೃತ್ತಿ ಜೀವಿಯಾದ ಈತನು ತನ್ನ ವೃತ್ತಿಯ ಪರಿಕಗಳ ಮೂಲಕ ರಚಿಸಿರುವ ವಚನವೊಂದು ಬಹಳ ಮಹತ್ವ ಪಡೆದಿದೆ. ಇದನ್ನು ಆಧ್ಯಾತ್ಮಿಕ ಮತ್ತು ಸಾಹಿತ್ಯಿಕವಾಗಿ ವಿಚಾರ ಮಾಡಬಹುದಾಗಿದೆ.

ಉಂಕೆಯ ನಿಗುಚಿ, ಸರಿಗೆಯ ಸಮಗೊಳಿಸಿ
ಸಮಗಾಲನಿಕ್ಕಿ ಅಣಿಯೇಳ ಮೆಟ್ಟಿದೆ.
ಹಿಡಿದ ಲಾಳಿಯ ಮುಳ್ಳು ಕಂಡಿಕೆಯನುಂಗಿತ್ತು.
ಈ ಸೀರೆ ನೇಯ್ದುವ ನಾನೊ ನೀನೋ ರಾಮನಾಥ?

(ಸಂಕೀರ್ಣ ವಚನ ಸಂಪುಟ: ೨, ವಚನ ಸಂಖ್ಯೆ: ೭೧೬)

ದಾಸಿಮಯ್ಯನ ವೃತ್ತಿಯ ಸೂಚಕ ವಚನ ಹನ್ನೆರಡನೇ ಶತಮಾನದಲ್ಲಿ ಮೂಲ ವೃತ್ತಿಗಳನ್ನು ಮಾಡುತ್ತ, ವಚನ ರಚನೆಗೆ ತೊಡಗಿಕೊಂಡ ಎಲ್ಲಾ ಕಾಯಕ ಜೀವಿಗಳ ಮೇಲೆ ಪ್ರೇರಣ

ಶಕ್ತಿಯಾಗಿ ಪ್ರಭಾವ ಬೀರಿರಬಹುದಾದ ವಚನ ಇದಾಗಿದೆ. ಇಂತಹ ಪ್ರಭಾವ ವಲಯಕ್ಕೆ ಒಳಗಾಗಿ ಹಲವಾರು ವಚನಕಾರರು ತಮ್ಮ ತಮ್ಮ ವೃತ್ತಿಯ ಆಧಾರದ ವಚನಗಳನ್ನು ಬರೆದಿರುವುದನ್ನು ವಚನ ಸಾಹಿತ್ಯದಲ್ಲಿ ಗಮನಿಸುತ್ತೇವೆ.

ದಾಸಿಮಯ್ಯ ಬಟ್ಟೆ ನೇಯುವ ಕಾಯಕದಲ್ಲಿ ತೊಡಗಿಕೊಂಡು, ಮಗ್ಗದ ಮುಂದೆ ಕುಳಿತು, ಅದರ ಕ್ರಿಯೆಯನ್ನು, ಚಲನೆ, ಕೆಲಸವನ್ನು ಮತ್ತು ಅದರಿಂದ ತಯಾರಾಗಿ ಬರುವ ಬಟ್ಟೆಯನ್ನು ಕಂಡು ತಾನೇ ಬೆರಗಾಗಿದ್ದಾನೆ. ವೃತ್ತಿಯನ್ನು ಮಾಡುತ್ತ ದೈವವನ್ನು ಕಾಣುವ, ಮತ್ತು ಆ ವೃತ್ತಿ, ಕಾಯಕವನ್ನು ಇಷ್ಟ ದೈವ, ಶಿವನೊಂದಿಗೆ ಮಾಡುವ, ಶಿವನೊಳಗೊಂದಾಗಿ ರುವುದನ್ನು ಇಲ್ಲಿ ನೋಡುತ್ತೇವೆ. ಬದುಕನ್ನು ಸಮಗ್ರ ದೃಷ್ಟಿಯಿಂದ ನೋಡಿದ ದಾಸಿಮಯ್ಯನು ಹಸಿವಿನ ಮೂಲ ಮತ್ತು ಹಸಿವಿನ ಪರಿಣಾಮಗಳನ್ನು ಬಲ್ಲವನಾದುದರಿಂದಲೇ ಕಾಯಕಕ್ಕೆ ಮಹತ್ವ ನೀಡಿದನು.

ಹಸಿವೆಂಬ ಹೆಬ್ಬಾವು ಬಸುರ ಬಂದು ಹಿಡಿದರೆ
ವಿಷವೇರಿತ್ತಯ್ಯಾ ಅಪಾದಮಸ್ತಕಕ್ಕೆ
ಹಸಿವಿಗನ್ನವನಿಕ್ಕಿ ವಿಷವನಿಳುಹಬಲ್ಲಡೆ
ವಸುಧೆಯೊಳಗೆ ಆತನೆ ಗಾರುಡಿಗ ಕಾಣಾ ರಾಮನಾಥ

(ಸಂಕೀರ್ಣ ವಚನ ಸಂಪುಟ: ೨, ವಚನ ಸಂಖ್ಯೆ: ೮೮೪)

ವೈದಿಕ ಪರಂಪರೆ ಬಿತ್ತಿದ ವರ್ಣಪದ್ಧತಿಯಿಂದಾಗಿ ಶೂದ್ರ ಜಾತಿಗಳು ಹಸಿವಿನಿಂದಲೇ ಸತ್ತು ಬದುಕಿದವು. ಬಡತನ ಹಸಿವನ್ನು ಹೆಬ್ಬಾವಿಗೆ ಹೋಲಿಸಿದ್ದಾನೆ. ಹಸಿವೆಂಬ ಹೆಬ್ಬಾವು ಬಡತನವನ್ನು ಹಿಡಿದು ಹಿಪ್ಪೆ ಮಾಡಿದೆ. ಹೆಬ್ಬಾವಿನ ಬಾಯಿಗೆ ಸಿಕ್ಕ ಬಡವ ಪ್ರಜ್ಞಾಹೀನ ಸ್ಥಿತಿಯಲ್ಲಿದ್ದಾನೆ. ಅವನನ್ನು ಹಸಿವಿನ ಹೆಬ್ಬಾವಿನ ಬಾಯಿಂದ ಬಿಡಸಬೇಕಾದರೆ ಅವನಿಗೆ ತುರ್ತಾಗಿ ಅನ್ನ ನೀಡಬೇಕಾಗಿದೆ. ಈ ಅನ್ನವನ್ನು ದುಡಿದೇ ಸಂಪಾದಿಸಬೇಕು. ದುಡಿಯುವ ವರ್ಗದ ಜನ ಹಸಿವಿನಿಂದ ಸಾಯುತ್ತಿದ್ದ ಸ್ಥಿತಿಯನ್ನು ದಾಸಿಮಯ್ಯನು ಮನಗಂಡು ದುಡಿಮೆಯ ಮಹತ್ವವನ್ನು ಪ್ರತಿಪಾದಿಸಿದ. ದುಡಿಯದೇ ಬದುಕಿದ್ದ ಹುಸಿ ಸಂಸ್ಕೃತಿಯ ಪ್ರತಿಪಾದಕರು ಅನ್ಯರ ದುಡಿಮೆಯನ್ನು ಕಬಳಿಸದಂತೆ ಮಾಡುವುದು ಸರಳ ಸಾಧ್ಯವೇನಲ್ಲ. ಪರಮಾತ್ಮನ ಸಾಕ್ಷಾತ್ಕಾರ ಕಾಯಕದ ಮೂಲಕ ಸಾಧ್ಯವೆಂದು ಎಲ್ಲ ವರ್ಗದ ಜನರನ್ನು ದುಡಿಯುವಂತೆ ಮಾಡಿದ ದಾಸಿಮಯ್ಯನ ಹೋರಾಟ ಮಹತ್ವಪೂರ್ಣವಾದುದು.

ದಾಸಿಮಯ್ಯನ ವಚನಗಳಲ್ಲಿ ವೀರಶೈವ ಧರ್ಮಾಚರಣೆಯೇ ಪ್ರಧಾನ ಅಭಿವ್ಯಕ್ತಿಯಾಗಿ ರುವುದನ್ನು ನೋಡುತ್ತೇವೆ. ಅಲ್ಲದೆ ಅನೇಕ ವಚನಗಳಲ್ಲಿ ಸಾಮಾಜಿಕ ಬದುಕಿನ ಕುರಿತ ಚಿಂತನೆಗಳು ಸ್ಪಷ್ಟವಾಗಿ ಮೂಡಿವೆ. ಜನ ಭಾಷೆಯನ್ನು ನೇರವಾಗಿ ತನ್ನ ವಚನಗಳ ಅಭಿವ್ಯಕ್ತಿಗೆ ಮಾಧ್ಯಮವಾಗಿ ಬಳಸಿಕೊಂಡಿರುವುದರಿಂದ ನೇರ ನಿರೂಪಣೆ, ನಿಷ್ಠುರ, ಸ್ಪಷ್ಟ ಹೇಳಿಕೆಗಳು, ಸಮಾಜ ಸುಧಾರಕ ವೈಚಾರಿಕ ನಿಲುಗಳು ದಾಸಿಮಯ್ಯನ ವಚನಗಳಲ್ಲಿ ಕಂಡುಬರುತ್ತವೆ.

ಅಲ್ಲದೆ, ಇಡಿ ವಚನಕಾರರ ಸಮೂಹಕ್ಕೆ ಮೊದಲು ಕಾಯಕತತ್ವದ ಪರಿಕಲ್ಪನೆಯನ್ನು ನೀಡಿದ್ದಾನೆ ಎಂದೇ ಹೇಳಬಹುದು. ತನ್ನ ನಿತ್ಯಜೀವನದ ಬದುಕು ಬೇರೆ, ಕಾಯಕ ಬೇರೆ, ಭಕ್ತಿ ಬೇರೆ ಎಂದು ಭಾವಿಸದೇ, ನಿತ್ಯದ ನಿಷ್ಠಾಪೂರ್ಣ ವೃತ್ತಿಪಾಲನೆಯೇ ಭಕ್ತಿ ಎಂಬುದನ್ನು ಅರಿತು ಕಾಯಕನಿರತ ವಚನಕಾರನಾಗಿ ದಾಸಿಮಯ್ಯ ಕಾಣುತ್ತಾನೆ.

ಮಾದಾರ ಚನ್ನಯ್ಯ

ವಚನಕಾರರು ತಮ್ಮ ವೃತ್ತಿಗಳಿಂದಲೇ ಗುರುತಿಸಿಕೊಂಡವರು. ಅವರು ತಮ್ಮ ಕಸುಬನ್ನು, ಕಾಯಕವನ್ನು ವಚನಗಳಲ್ಲಿ ಪ್ರತಿಷ್ಠಾಪಿಸುವುದನ್ನು ಕಾಣಬಹುದು. ಇದನ್ನು ಎಲ್ಲಾ ವೃತ್ತಿನಿರತ ವಚನಕಾರರ ವಚನಗಳಲ್ಲೂ ಗುರುತಿಸಬಹುದು. ಅನುಭಾವ, ಆಧ್ಯಾತ್ಮ, ಸಾಮಾಜಿಕ ವಿಡಂಬನೆ, ವಚನಕಾರರ ಶಿಸ್ತು. ವಚನ ಚಳುವಳಿಯ ಸಿದ್ಧಾಂತ, ಆಶಯವನ್ನು ಹಲವಾರು ಬಗೆಯ ವೃತ್ತಿಗಳನ್ನು ಮಾಡುತ್ತ ಬಂದವರು, ತಮ್ಮ ವೃತ್ತಿಯಲ್ಲಿ ಬಳಕೆಗೊಳ್ಳುವ ಪರಿಕರಗಳ ಪರಿಭಾಷೆಯನ್ನೇ ಬಳಕೆ ಮಾಡಿ ಅನುಭಾವವನ್ನು ತಿಳಿಸುವ ಕಾರ್ಯದಲ್ಲಿ ಯಶಸ್ವಿಯಾಗಿದ್ದಾರೆ ಎಂಬುದನ್ನು ಗಮನಿಸಬಹುದು. ಮತ್ತು ಕೆಳವರ್ಗದ ವಚನಕಾರರ ಮುಖ್ಯ ಅಭಿವ್ಯಕ್ತಿಯಾಗಿಯೇ ವೃತ್ತಿ ಮತ್ತು ವೃತ್ತಿಯಲ್ಲಿ ಬಳಕೆಗೊಳ್ಳುವ ಪರಿಕರಗಳು ಅಭಿವ್ಯಕ್ತಿಯ ಮಾಧ್ಯಮಗಳಾಗಿವೆ. ಹೀಗೆ ಕೆಳವರ್ಗದಿಂದ ಬಂದ ಅನೇಕ ವಚನಕಾರರಲ್ಲಿ ಮಾದಾರ ಚನ್ನಯ್ಯನು ಒಬ್ಬನಾಗಿದ್ದು, ಈತನ ಅನೇಕ ವಚನಗಳಲ್ಲಿ ತಾನು ಮಾಡುತ್ತಿದ್ದ ವೃತ್ತಿಯ ಉಪಕರಣಗಳು ಬಳಕೆಗೊಳ್ಳುತ್ತವೆ.

ಸ್ಥೂಲ ಸೂಕ್ಷ್ಮ ಕಾರಣವೆಂಬ
ಮೂರು ಕಂಬವ ನೆಟ್ಟು
ಆಗುವೇಗೆಯೆಂಬ ಅಡಿಗೋಲಿನಲ್ಲಿ
ಆಗಡದ ಎಮ್ಮೆಯ ಚರ್ಮವ ತೆಗೆದು
ಉಭಯ ನಾಮವೆಂಬ ನಾರಿನಲ್ಲಿ
ತಿತ್ತಿಯನೊಪ್ಪವ ಮಾಡಿ,
ಭಾವವೆಂಬ ತಿಗುಡಿನಲ್ಲಿ
ಸರ್ವಸಾರವೆಂಬ ಖಾರದ ನೀರ ಹೊಯಿದು
ಅಟ್ಟೆಯ ದುರ್ಗುಣ ಕೆಟ್ಟು
ಮೆಟ್ಟಡಿಯವರಿಗೆ ಮುಟ್ಟಸಬಂದೆ
ಮೆಟ್ಟಡಿಯ ಬಟ್ಟೆಯ ನೋಡಿಕೊಳ್ಳಿ
ಕೈಯುಳಿಕತ್ತಿ ಅಡಿಗುಂಟಕ್ಕಡಿಯಾಗಬೇಡ
ಅರಿ ನಿಜಾತ್ಮ ರಾಮರಾಮನಾ.

(ಸಂಕೀರ್ಣ ವಚನ ಸಂಪುಟ: ೩, ವಚನ ಸಂಖ್ಯೆ: ೧೧೬೫)

ಈ ವಚನದಲ್ಲಿ ಚರ್ಮವನ್ನು ಹದ ಮಾಡುತ್ತಿರುವ ಚಿತ್ರ ಸ್ಪಷ್ಟವಾಗುತ್ತದೆ. ಚನ್ನಯ್ಯನ ವೃತ್ತಿಯ ಪರಿಚಯವು ಈ ವಚನದ ಮೂಲಕ ಸ್ಪಷ್ಟವಾಗುತ್ತದೆ. ಜೊತೆಗೆ ಆಧ್ಯಾತ್ಮ ಸಾಧಕನ

ಮನೋವೃತ್ತಿಯು ಇಲ್ಲಿ ಇಂಬು ಕಾಣುತ್ತದೆ. ಮೇಲ್ವರ್ಗದ ವಚನಕಾರರಂತೆ ಅಂತರಂಗದ ಶೋಧದ ಕಡೆಗೆ ಸಾಗದಿದ್ದರೂ, ಅಂತರಂಗದ ಶುದ್ಧತೆಯ ಹುಡುಕಾಟ ನಡೆಸುತ್ತಲೇ ಇದೆ. ಜೊತೆಗೆ, ತನ್ನೊಳಗಿದ್ದ, ತನಗಂಟಿದ ಅನಿಷ್ಟತೆಯನ್ನು, ಕನಿಷ್ಠತೆಯನ್ನು ದೂರ ಸರಿಸಿ ನಡೆಯುವ ಪ್ರಯತ್ನವು ನಡೆದಿದೆ.

ಚನ್ನಯ್ಯನ ಈ ವಚನ ವೃತ್ತಿಯ ಮೂಲದಲ್ಲಿಯೇ ರೂಪ ಪಡೆದಿರುವುದನ್ನು ಗಮನಿಸುತ್ತೇವೆ. ಚಪ್ಪಲಿ ಹೊಲಿಯುವ ವೃತ್ತಿಯನ್ನು ಮಾಡುತ್ತಿರುವ ವೃತ್ತಿನಿರತರು ಬಳಸುವ ಉಪಕರಣಗಳೇ ಇಲ್ಲಿ ವಚನದ ಅಭಿವ್ಯಕ್ತಿಯ ವಸ್ತು, ರೂಪಕ, ಪ್ರತಿಮೆಗಳು "ಕಂಬ, ಅಡಿಗೋಲು, ಎಮ್ಮೆ ಚರ್ಮ, ನಾರು, ತಿತ್ತಿ (ಚೀಲ) ತಿಗುಡು, ಅಟ್ಟೆ, ಮೆಟ್ಟಡಿ, ಕೈಯುಳಿ, ಅಡಿಗುಂಟ, ಮುಂತಾದ ಪದಗಳ ಬಳಕೆಯಿಂದಲೇ ವಚನಗಳು ರಚಿತಗೊಂಡಿವೆ. ಚಪ್ಪಲಿಯನ್ನು ಹೊಲಿಯುವ ವೃತ್ತಿಯನ್ನು ಮಾಡುತ್ತ ಬದುಕು ಸಾಗಿಸುವ ವಚನಕಾರನಿಗೆ ಅವುಗಳ ಪರಿಕರಗಳೇ ಅನುಭಾವವಾಗಿ, ದರ್ಶನಗಳಾಗಿ ಕಂಡಿವೆ. ಅವುಗಳ ಮೂಲಕವೇ ತನ್ನ ತನವನ್ನು ಕಟ್ಟಿಕೊಳ್ಳುವ ದರ್ದು ಇದೆ. ಅದಕ್ಕೆ ಕಾರಣ ಅಂದಿನ ಸಾಮಾಜಿಕ ಸ್ಥಿತಿಯು ಕಾರಣವಾಗಿರುಬಹುದು. ಹನ್ನೆರಡನೆ ಶತಮಾನದ ಪರಿಸ್ಥಿತಿಯಲ್ಲಿ, ಪುರೋಹಿತ ಶಾಹಿಗಳ ಹಿಡಿತದಲ್ಲಿ ದೇವರು, ಧರ್ಮ, ಸಾಮಾಜಿಕ ಸಮಾನತೆಯೂ ಕೆಳವರ್ಗದವರ ಪಾಲಿಗೆ ಬರಿ ಕನಸಾಗಿತ್ತು. ಮತ್ತು ಅಂತಹ ವಿಚಾರದಲ್ಲಿ ಇವರನ್ನು ದೂರವೇ ನಿಲ್ಲಿಸಲಾಗಿತ್ತು. ಅಲ್ಲದೇ ಕೇವಲ ಕೆಳವರ್ಗದವರೆಂದೆ ಕಾಣಲಾಗುತ್ತಿದ್ದು, ಇಂತವರಿಂದ ಲಾಭವನ್ನು ಪಡೆದೆ ಮೇಲ್ವರ್ಗ ಆರಾಮವಾಗಿ ಬದುಕುತ್ತಿತ್ತು. ಇಂತಹ ಸಂದರ್ಭದಲ್ಲಿ ಹುಟ್ಟಿ ಬಂದ ವಚನಕಾರರು ಮತ್ತು ಅವರ ವಚನ ಆಂದೋಲನ ಹೊಸ ಬದಲಾವಣೆಯನ್ನೆ ಮಾಡುವ ಸಾಹಸಕ್ಕೆ ಕೈಹಾಕಿತು. ಸಮಾಜದಲ್ಲಿ ಅನೇಕ ಕುಲಕಸಬುಗಳನ್ನು ಮಾಡುತ್ತ ಮೇಲ್ವರ್ಗದವರ, ಅಧಿಕಾರ ಶಾಹಿಗಳ ಹಿಡಿತದಲ್ಲಿ ಶೋಷಣೆಗೆ ಒಳಗಾಗಿ ನೊಂದು, ಬೆಂದ ಜೀವಗಳಿಗೆ ವೃತ್ತಿಯೇ ಆಧಾರ ಗಳಾಗಿ ಮಾರ್ಪಡಿಸುವ, ಪ್ರತಿಭಟನೆಯ ಮಾರ್ಗಗಳನ್ನಾಗಿ ಬದಲಾಯಿಸುವ ಅವಶ್ಯಕತೆ ಇತ್ತು.

ಅಂತಹ ಅವಶ್ಯಕತೆಯ ನೀಗುವಿಕೆಯೇ ಎಂಬಂತೆ ಬಸವಣ್ಣನ ನೇತೃತ್ವದ ವಚನ ಚಳುವಳಿ ಅಸ್ತಿತ್ವಕ್ಕೆ ಬಂದುದು ವರವೇ ಸರಿ. ಇಂತಹ ಸಂದರ್ಭವನ್ನು ನಿರೀಕ್ಷಿಸುತ್ತಿದ್ದ ಜೀವಗಳಿಗೆ ಚೈತನ್ಯ ದೊರಕಿ ಕಾರ್ಯ ಪ್ರವೃತ್ತಿಗೆ ತೊಡಗಿಕೊಂಡರು. ತಮ್ಮ ತಿಳುವಳಿಕೆಯ ಜೊತೆಗೆ ಶರಣ ಸಮುದಾಯದ ತಿಳುವಳಿಕೆಯನ್ನು ಹೊಂದಿಸಿಕೊಂಡು, ತಮ್ಮ ತಿಳುವಳಿಕೆಗೆ ತಾತ್ವಿಕ ಆಯಾಮವನ್ನು ತಂದುಕೊಂಡರು. ಅನುಭವದ ಮೂಲಕ ಕಂಡುಕೊಂಡದ್ದನ್ನು ಅನುಭಾವವಾಗಿಸಿಕೊಂಡು ಸಾಧನೆ ಮಾಡತೊಡಗಿದರು. ಆ ಸಾಧನೆಯ ಜೊತೆಗೆ ಇಂದಿನಿಂದ ಬಂದಿದ್ದ ಪರಂಪರೆಯ ವಿರುದ್ಧ ಪ್ರತಿಭಟಿಸುತ್ತ, ತಮ್ಮತನವನ್ನು ಕಟ್ಟಿಕೊಳ್ಳುತ್ತ, ಉಳಿಸಿಕೊಳ್ಳುತ್ತ ಸಾಗುವ ಯತ್ನ ಮಾಡತೊಡಗಿದರು. ಕೆಳವರ್ಗದವರು ಮಾಡುತ್ತಿದ್ದ ವೃತ್ತಿಯಿಂದ ಸಮಾಜಕ್ಕೆ ಒಳಿತಾಗುತ್ತಿತ್ತು. ಆದರೆ ಕೆಳವರ್ಗದವರನ್ನು ಮತ್ತು ಅವರ ವೃತ್ತಿಗಳನ್ನು ತುಚ್ಚವಾಗಿ ಕಾಣಲಾಗುತ್ತಿತ್ತು. ವಚನಕಾರರು ತಮ್ಮ ಅನುಭವವನ್ನು ತಾವು ಮಾಡುತ್ತಿದ್ದ ಕಾಯಕಗಳ ಪರಿಭಾಷೆಯಲ್ಲಿ ರಚಿಸಿ, ಹೇಳುವ ಮೂಲಕ ಸಮಾಜದ

ಒಳಿತಿಗಾಗಿ ಮಾಡುವ ಕಾಯಕ ಶ್ರೇಷ್ಠ, ಮಹತ್ವವಾದದ್ದು, ಇಲ್ಲಿ ಯಾವ ಕೆಲಸವು ಕೀಳಲ್ಲ, ಮೇಲಲ್ಲ ಎಂದು ಹೇಳುತ್ತ ತಮ್ಮ ಕಾಯಕದ ಮೂಲಕವೇ ಮಾರ್ಮಿಕವಾಗಿ ಉತ್ತರಿಸಿದರು. ವೃತ್ತಿಯ ಪರಿಭಾಷೆಯ ಮೂಲಕವೇ ಆಧ್ಯಾತ್ಮದ ಸಾಧನೆಗೆ ತೊಡಗಿದರು. ತನ್ನ ವೃತ್ತಿಗೆ ಸಹಜವಾದ ಅನುಭವದ ಚಿತ್ರಣವನ್ನೆ ಕಟ್ಟಿಕೊಡುವ ಮೂಲಕ ಚೆನ್ನಯ್ಯ ಜ್ಞಾನಿ ಎನಿಸಿಕೊಂಡಿದ್ದಾನೆ. ಭಾಷೆಯ ಬಳಕೆಯನ್ನು ಹದವರಿತು ದುಡಿಸಿಕೊಂಡಿದ್ದಾನೆ. ಒಂದೊಂದು ವಚನವು ಕವಿತೆಯಂತೆ ಕಾಣುತ್ತವೆ. ಶಕ್ತಿಯುತವಾದ ಪ್ರತೀಮಾ ಸಂವಿಧಾನವನ್ನೆ ನಿರ್ಮಿಸಿದ್ದಾನೆ. ಭಾಷೆಯ ಅರ್ಥದಾಚೆಯು ಅಮೂರ್ತದ ಸ್ವರೂಪವನ್ನು ಧ್ವನಿಸುವುದನ್ನು ಚನ್ನಯ್ಯನ ವಚನಗಳಲ್ಲಿ ಕಾಣುತ್ತೇವೆ.

ಕಿಲಾರದ ಭೀಮಣ್ಣ

ವೃತ್ತಿ ಪರಿಭಾಷೆಯ ಅಭಿವ್ಯಕ್ತಿಯಿಂದಾಗಿ ಕನ್ನಡದಲ್ಲಿ ಒಂದು ವಿಶಿಷ್ಟ ಬಗೆಯ ಭಾಷಾ ಪ್ರಯೋಗ ನಡೆಯಲು ಸಾಧ್ಯವಾಯಿತು. ಇಂತಹ ಪ್ರಯೋಗ ವಚನಕಾರರು ನಡೆಸಿ, ವೃತ್ತಿ ನಿರತರ ಬದುಕಿಗೆ, ಮತ್ತು ಅವರ ವೃತ್ತಿ ಕಾಯಕಕ್ಕೆ ಗೌರವ ತಂದುಕೊಟ್ಟರು. ಇದು ಕನ್ನಡ ಸಾಹಿತ್ಯದ ಚರಿತ್ರೆಯಲ್ಲಿ ಗಮನೀಯ ಬದಲಾವಣೆ ಮಾಡಿತು ಎಂದೇ ಹೇಳಬಹುದು. ಜನಸಾಮಾನ್ಯರಲ್ಲೇ ಉಳಿದಿದ್ದ ಜಾನಪದ ಹಾಗೂ ಅಚ್ಚಗನ್ನಡ ಪದಗಳು, ಗಾದೆ, ನುಡಿಗಟ್ಟುಗಳು ವಚನಗಳ ಅಭಿವ್ಯಕ್ತಿಯಲ್ಲಿ ಬಳಸಲ್ಪಟ್ಟಿವೆ. ಆ ಮೂಲಕ ಭಾಷೆಗೆ ವಚನಕಾರರಿಂದ ಲಭಿಸಿದ ಕೊಡುಗೆಯಾಗಿದೆ.

ಗೊಲ್ಲರ ಜಾತಿಗೆ ಸೇರಿದವನೆಂದು ಗುರುತಿಸಲಾಗಿರುವ ವಚನಕಾರ ಕಿಲಾರದ ಭೀಮಣ್ಣನು ಶ್ರೇಷ್ಠ ಅನುಭಾವಿಗಳ ಸಾಲಿನಲ್ಲಿ ನಿಲ್ಲುತ್ತಾನೆ. ಹಾಲು ಮಾರಿ ಜೀವನ ನಿರ್ವಹಣೆ ಮಾಡುವುದು ಈತನ ಬದುಕು. ತನ್ನ ವಚನಗಳ ಮೂಲಕವೇ ವೃತ್ತಿಯ ಪರಿಚಯವನ್ನು ದೊರಕಿಸಿರುವುದನ್ನು ನೋಡಬಹುದು. ಕಾಯಕ ಜೀವಿಗಳ ಗುಂಪಿನಲ್ಲಿ ಸೇರಿಕೊಂಡು ತನ್ನ ವೃತ್ತಿಯ ಪದಗಳಿಂದಲೇ ವಚನಗಳನ್ನು ಕಟ್ಟಿ ಅನುಭಾವಿ ಎನಿಸಿಕೊಂಡಿದ್ದಾನೆ. ಹಸುಗಳ ವರ್ಣಗಳು ಅನೇಕವಿರಬಹುದು ಆದರೆ, ಹಾಲಿನ ವರ್ಣ ಒಂದೆ ಎಂಬ ಈತನ ಮಾತಿನಿಂದ ಅಂದಿನ ಸಮಾಜದ ಸ್ಥಿತಿಗತಿಗಳನ್ನು ಅರಿಯಬಹುದಾಗಿದೆ. ಜಾತಿ, ವರ್ಣ, ವರ್ಗ ವ್ಯವಸ್ಥೆಗೆ ಬೇಸತ್ತು. ಅದರ ಹಿಡಿತದಿಂದ ತಪ್ಪಿಸಿಕೊಳ್ಳುವ ಜನವರ್ಗವು ಪಡುವ ಕಷ್ಟ-ನಷ್ಟ, ಪಾಡುಗಳನ್ನು ಅರಿತ ಈತ ಮೇಲ್ಜಾತಿಯ ಶೋಷಣೆಗೆ ಪ್ರತಿಭಟನೆಯೋಪಾದಿಯಲ್ಲಿ ಮಾತನಾಡುತ್ತಾನೆ.

ನಾನಾ ವರ್ಣದ ಗೋವುಗಳೆಲ್ಲವೂ ಕೂಡಿ
ಒಂದೇ ಹೊಲದಲ್ಲಿ ಮೇದು,
ಆರು ಕೆರೆಯ ನೀರು ಕುಡಿದು,
ಒಂದೇ ದಾರಿಯಲ್ಲಿ ಬಂದು,
ಮೂರು ಕೊಟ್ಟಿಂಗೆಯ ಗೊತ್ತಿಂಗೊಳಗಾದುವು.
ಬಿಟ್ಟು ಕರೆಯಲಾಗಿ ಗೋವಿಂಗೆ ವರ್ಣವು ಹಲವು.

ಹಾಲಿಗೆ ಏಕವರ್ಣ.
ಹಾಲು ತಂದು ಭಾಜನದಲ್ಲಿ ನೀಡಿ ಕಾಸುವಲ್ಲಿ.
ಚಟ್ಟಿ ಹತ್ತದೆ, ಹಸುಕು ನಾರದೆ,
ಕೌರು ಹೇಳದೆ, ನೀರರಸತಪ್ಪಿ ಮಧುರ ರಸ ತುಂಬಿ
ಕಾಸಿ ಉಣಬಲ್ಲಡೆ ಆತನೇ ಭೋಗಿ
ಆತ ನಿರತಿಶಯಾನುಭಾವ ಶುದ್ಧಾತ್ಮನು.
ಕಾಲಕರ್ಮವಿರಹಿತ ತ್ರಿಪುರಾಂತಕಲಿಂಗ ತಾನೆ.

(ವಚನ ಸಂಪುಟ: ೨, ವಚನ ಸಂಖ್ಯೆ: ೭೩)

ಭೀಮಣ್ಣನ ಕಾಯಕನಿಷ್ಠೆ, ವೃತ್ತಿ ಪ್ರಾಮಾಣಿಕತೆಯನ್ನು ಧ್ವನಿಸುವ ವೃತ್ತಿ ಪ್ರಜ್ಞೆಯನ್ನು ಈ ವಚನದ ಮೂಲಕ ಕಟ್ಟಿಕೊಟ್ಟಿದ್ದಾನೆ. "ಚಟ್ಟಿ" (ಮಣ್ಣಿನ ಪಾತ್ರೆ) "ಹಸಕು" (ಕೊಳೆತನಾತ) "ಕೌರು" (ಸುಟ್ಟು ಕರಕಲು ವಾಸನೆ) ಎಂಬಂತ ಪದ ಪ್ರಯೋಗಗಳ ಮೂಲಕ ಹಾಲಿನ ಶುದ್ಧತೆಯನ್ನು ಕೆಡಿಸುವ ಕೆಲಸ ಮತ್ತು ಕೆಡದಂತೆ ಕಾಪಾಡಿಕೊಳ್ಳಬೇಕಾದ ಕೆಲಸ ಪ್ರಾಮಾಣಿಕ ಪ್ರಯತ್ನವನ್ನು ಧ್ವನಿಸಿದ್ದಾನೆ. ಮನುಷ್ಯನ ಪ್ರಾಮಾಣಿಕತೆಯು ಆತನ ಕಾಯಕದಿಂದಲೇ ಗುರುತಿಸಬೇಕಾದ ವಿಚಾರ ಎಂಬುದು ವಚನಕಾರರ ಆಶಯದಲ್ಲೊಂದು. ಮತ್ತು ಅನುಭಾವಿ ಅಥವಾ ಶರಣನಾದವನು ಒಂದಲ್ಲ ಒಂದು ವೃತ್ತಿಯಲ್ಲಿ ತೊಡಗಿಕೊಂಡಿರಲೇಬೇಕು. ಮತ್ತು ಆ ವೃತ್ತಿ ಪ್ರಾಮಾಣಿಕತೆಯಿಂದ ಕೂಡಿರಬೇಕು. ಅಡ್ಡದಾರಿ, ವಾಮ ಮಾರ್ಗವನ್ನು ಬಳಸಿ ಸಂಗ್ರಹಿಸುವ ನಿಷ್ಠಾಹೀನರನ್ನು ಜರಿದು, ದೂರ ಸರಿಸುವ ಮನೋವೃತ್ತಿ ವಚನಕಾರರದ್ದು. ವೃತ್ತಿ ಎಂಬುದು ನಿಷ್ಠೆ, ಪ್ರಾಮಾಣಿಕತೆಯಿಂದ ಕೂಡಿದ ಕಾಯಕವಾಗಿರಬೇಕು. ಅದರಿಂದ ಬಂದುದು ಗುರು, ಲಿಂಗ, ಜಂಗಮಕ್ಕೆ ಅರ್ಪಿತವಾದದ್ದು ಎಂಬ ಪರಿಕಲ್ಪನೆ ಅವರದ್ದು, ಹಾಗಾಗಿ ವಚನಕಾರರಿಗೆ ವೃತ್ತಿ ಕೇವಲ ಜೀವನ ನಿರ್ವಹಣೆಯಾಗಿ ಪರಿವರ್ತನೆಗೊಂಡಿಲ್ಲ. ಅದರ ಮೂಲಕವೇ ಅಂತರಂಗದ ಪ್ರವೇಶಿಕೆಯನ್ನು ಬಯಸಿದವರು. ಅದೇ ಸಾಧನೆಯ ಮೂಲ ಮಾರ್ಗವಾಗಿ ಸ್ವೀಕರಿಸಿದವರು. ಹೀಗಾಗಿ ವೃತ್ತಿಯನ್ನು ಆಧ್ಯಾತ್ಮಿಕ ಸಾಧನೆಯನ್ನು ತಲುಪಲು ಬಳಸಿಕೊಂಡ ಸಾಧನವಾಗಿ ವಚನಗಳನ್ನು ನೋಡಬಹುದಾಗಿದೆ.

ಹಲವು ಗಿರಿಗಳ ತಪ್ಪಲಲ್ಲಿ,
ಮಲೆಯ ಮಂದಿರಗಳಲ್ಲಿ
ಬಳನೆ ಬಳನೆ ಮೇದು
ಮತ್ತೆ ತಮ್ಮ ನೆಲ ಹೊಲಕ್ಕೆ ತಪ್ಪದೆ ಬಪ್ಪವು ನೋಡಾ
ಆ ಪಶುವಿಂಗೆ ಕಟ್ಟು ಗೊತ್ತಿಲ್ಲ,
ಕಾವ ಕಟ್ಟಿಗೆ ಒಳಗಲ್ಲ
ತಮ್ಮ ಠಾವಿಂಗೆ ಬಂದು ಹಾಲಕೊಟ್ಟು,
ಮತ್ತೆ ತಮ್ಮ ನೆಲೆಯ ಠಾವಿಂಗೆ ಹೋದ ಮತ್ತೆ ಕಾವಲು ತಪ್ಪಿಲ್ಲ,
ಕಾಲ ಕರ್ಮವಿರಹಿತ ತ್ರಿಪುರಾಂತರಕಲಿಂಗದೊಳಗಾದವಂಗೆ

(ವಚನ ಸಂಪುಟ: ೨, ವಚನ ಸಂಖ್ಯೆ: ೭೫)

ತುರುಗಾಯಿ ರಾಮಣ್ಣ

ವೃತ್ತಿ ಸ್ವಾತಂತ್ರ್ಯಕ್ಕೆ ಹೆಚ್ಚು ಗಮನಕೊಟ್ಟವರು ವಚನಕಾರರು. ಮತ್ತು ಆ ವೃತ್ತಿ ಸ್ವಾತಂತ್ರ್ಯವನ್ನು, ವೃತ್ತಿ ಗೌರವವನ್ನು ಪ್ರತಿಷ್ಠಾಪಿಸುವ ಮೂಲಕ ಅನೇಕ ಬಗೆಯ ತಾರತಮ್ಯಗಳನ್ನು ತೊಲಗಿಸಿದವರು ಆಗಿದ್ದಾರೆ. ಯಾರು ಯಾವ ಕಾಯಕವನ್ನಾದರೂ ಬಯಸಬಹುದು, ಮಾಡಬಹುದು ಮತ್ತು ಆ ಕಾಯಕ ಸತ್ಯ ಶುದ್ಧವಾಗಿರಬೇಕು ಎಂಬುದನ್ನು ಪ್ರತಿಪಾದಿಸಿದವರು ವಚನಕಾರರು. ಸಮಾಜದಲ್ಲಿ ನೆಲೆನಿಂತು, ಸಮಾಜಕ್ಕಾಗಿಯೇ ದುಡಿದು ಬದುಕು ಸಾಗಿಸುತ್ತಿದ್ದ ಸಮುದಾಯಗಳಿಗೆ ಸಮಾನತೆಯ ಸ್ಥಾನವಿಲ್ಲದೆ ಪರದಾಡುತ್ತಿದ್ದ, ಇಂತವರನ್ನು ಮುನ್ನಲೆಗೆ ತರುವ ಪ್ರಯತ್ನ ಹೊಸತು ಮತ್ತು ಮಹತ್ವವಾದದ್ದು. ಹೀಗೆ ವೃತ್ತಿಗಳನ್ನು ಮಾಡುತ್ತ, ತಮ್ಮತನವನ್ನು ಉಳಿಸಿಕೊಳ್ಳಲು ಹೋರಾಟವನ್ನೆ ಮಾಡಬೇಕಿತ್ತು. ಕಾರಣ ವೈದಿಕಶಾಹಿಯ ಹಿಡಿತದಿಂದ, ಪ್ರಭುತ್ವದ ಅಧಿಕಾರದಿಂದ ಸಾಕಷ್ಟು ಕಷ್ಟಗಳಿಗೆ ಸಿಲುಕಿ ನರಳಾಡುತ್ತಿದ್ದರು. ಇದರಿಂದ ಬಿಡಗಡೆ ಬಯಸಿ ಶರಣ ಸಮುದಾಯವೊಂದನ್ನು ನಿರ್ಮಿಸಿಕೊಂಡು ಪ್ರತಿಭಟನೆಯ ಅಸ್ತ್ರವನ್ನಿಡಿದು ಹೋರಾಟದ ಕಣಕ್ಕೆ ಇಳಿದರು. ಅದು ಸುಲಭದ ಕೆಲಸವು ಅಲ್ಲವೆಂದು ತಿಳಿದು, ತಾವು ಬದುಕುತ್ತಿದ್ದ ಪರಿಸರದಿಂದಲೇ ಬದುಕನ್ನು ಕಟ್ಟಿಕೊಳ್ಳಬೇಕು ಎಂಬ ಹಂಬಲದಿಂದ ತಾವು ಮಾಡುತ್ತಿದ್ದ ವೃತ್ತಿಯನ್ನೇ ಮುಂದುವರೆಸಿ, ಅದರ ಅವಶ್ಯಕತೆಯನ್ನು ಶೋಷಣೆ ಮಾಡುವ ವರ್ಗಕ್ಕೆ ಮನವರಿಕೆ ಮಾಡುವ ಕೆಲಸ ಮಾಡತೊಡಗಿದರು. ಹೀಗೆ ತಮ್ಮಲ್ಲಿರುವ ಮನಸ್ಥಿತಿಗಳನ್ನು ಬದಲಾಯಿಸುವ ಸೂಕ್ಷ್ಮತೆಯನ್ನು ಗಮನಿಸಿ ಹೀಗೆ ವೃತ್ತಿಯನ್ನೆ ಅವಲಂಬಿಸಿರುವಂತ ವೃತ್ತಿನಿರತರಲ್ಲಿ ಜಾಗೃತಿಯನ್ನು ಮೂಡಿಸಲು ಪ್ರಯತ್ನಿಸಿದರು. ಇಂತಹ ವೃತ್ತಿ ಸಮುದಾಯಗಳ ಪ್ರತಿನಿಧಿಗಳಂತೆ ಬಂದು ವಚನಗಳನ್ನು ರಚಿಸಿ ಅವುಗಳ ಮೂಲಕವೇ ವೃತ್ತಿ ಗೌರವವನ್ನು ಪ್ರತಿಷ್ಠಾಪಿಸಿದರು. ಇಂತಹ ವಚನಕಾರರಿಗೆ ವೃತ್ತಿ ಎಂಬುದು ಕೇವಲ ಬದುಕಲು ಸಾಧನ ಮಾತ್ರವಲ್ಲ. ಅದು ಸರ್ವಸಾಧನೆಯ ಮಾರ್ಗವಾಗಿ ಕಂಡಿದೆ. ಹಾಗಾಗಿ ಅವರು ತಮ್ಮ ವೃತ್ತಿಯನ್ನೇ 'ಕೈಲಾಸ' ಎಂದು ತಿಳಿದು ಮಾಡುತ್ತಿದ್ದರು. ಹೇಳುತಿದ್ದರು. ದೇವರು ಕೂಡ ಅವರಿಗೆ ವೃತ್ತಿಯೇ ಆಗಿತ್ತು. ಧರ್ಮ ಎಂದರೆ ಅವರಿಗೆ ಸತ್ಯಶುದ್ಧ ಕಾಯಕ. ಆಧ್ಯಾತ್ಮಿಕ ಸಾಧನೆಗೆ ಅಂತರಂಗ ಮತ್ತು ಬಹಿರಂಗ ಎಂಬ ಭೇದವಳಿದು ಎರಡರಲ್ಲೂ ಏಕತೆಯನ್ನು ಸಾಧಿಸುವ ಅನುಭಾವಿಕ ನೆಲೆಯೊಂದುಬೇಕು. ಅಂತಹ ನೆಲೆಯನ್ನು ಕಂಡುಕೊಂಡರು. ಅವರ ಆಧ್ಯಾತ್ಮಿಕ ಸಾಧನೆಯನ್ನು ಕಂಡುಕೊಳ್ಳುವ ಪ್ರಯತ್ನವನ್ನು ವಚನಗಳ ಮೂಲಕ ಗುರುತಿಸಬಹುದು. ಅವರ ವೃತ್ತಿಯಲ್ಲಿ ಬಳಕೆಗೊಳ್ಳುವ ಪರಿಭಾಷೆಯೆ ಅವರ ವಚನಗಳ ಅಭಿವ್ಯಕ್ತಿ. ಆಧ್ಯಾತ್ಮಿಕ ದಾರಿಯ ದೀಪಗಳಾಗಿವೆ.

ವೃತ್ತಿಯ ಮೂಲಕವೇ ತಮ್ಮನ್ನು ತಾವು ಗುರುತಿಸಿಕೊಳ್ಳುವ ಪ್ರಯತ್ನ ದನಕಾಯುವ ವೃತ್ತಿಯನ್ನು ಅವಲಂಬಿಸಿ, ಆ ವೃತ್ತಿಯಲ್ಲಿ ಒಡನಾಡಿ, ಅದನ್ನೆ ದರ್ಶನವಾಗಿ ಕಂಡು ಅಲ್ಲಿ ಕಂಡ ಅನುಭವಗಳನ್ನು ಶರಣರ ಜೊತೆಗೆ ಹಂಚಿಕೊಂಡು ಅದಕ್ಕೆ ಒಂದು ಮಹತ್ವವಾದ ಸ್ಥಾನವನ್ನು ನಿರ್ಧರಿಸಿಕೊಂಡು ಅನುಭಾವವಾಗಿಸಿ ಹೇಳುವ ತುರುಗಾಯಿ ರಾಮಣ್ಣನ ವಚನಗಳು ಬಹಳ ಮಹತ್ವದ, ಮೌಲಿಕ ತತ್ವವನ್ನೊಳಗೊಂಡ ವಚನಗಳಾಗಿ ಅಭಿವ್ಯಕ್ತಗೊಂಡಿವೆ. ಆತನ

ದರ್ಶನಸಾಧನವಾಗಿ ಆತನ ವೃತ್ತಿಯೇ ಪರಿಣಮಿಸಿದೆ. ಈ ವಚನದ ಮೂಲಕ ಅದನ್ನು ಗುರುತಿಸಬಹುದು.

ನೆವದಿಂದ ಶರಣರ ಬಾಗಿಲಲ್ಲಿ ಹೋಗಿ
ಕಟ್ಟಿದ ಹಸು ಕೂಡಿದ ಎತ್ತು ಬಿಡಿರೊ ಎಂದು ಕೂಗುತ್ತಿದ್ದೇನೆ.
ಎನ್ನ ಕೂಗಿನ ದನಿಯಿಂದ ಮಹಾಶರಣರ ಸತಿ ಬಂದು
ಕಟ್ಟಿದ ಹಸುವ ಬಿಟ್ಟು, ಕೂಡಿದ ಎತ್ತ ಕಡಹಿ
ನಾಳೆ ಕೊಡಿಯೆಂದು ಹೊಡೆವುತ್ತಿದ್ದೇನೆ.
ಗೋಪತಿನಾಥ ವಿಶ್ವೇಶ್ವರ ಲಿಂಗದಡಿಯಾಗಿ

(ವಚನ ಸಂಪುಟ: ೨, ವಚನ ಸಂಖ್ಯೆ: ೧೦೩೦)

ತುರುಗಾಹಿ ರಾಮಣ್ಣನ ಈ ವಚನದಲ್ಲಿ ಶಿವಭಕ್ತರ ಮನೆಯ ದನಗಳನ್ನು ಕಾಯುವುದು, ಅಂದರೆ ಮೇಯಿಸಿಕೊಂಡು ಬರುವುದು ಈತನ ವೃತ್ತಿ ಎಂಬುದನ್ನು ಮೇಲು ನೋಟಕ್ಕೆ ಕಂಡುಬಿಡುತ್ತದೆ. ಇನ್ನು ವಚನದ ಆರಂಭದಲ್ಲೆ ಬಳಕೆಗೊಂಡಿರುವ 'ನೆವದಿಂದ' ಪದವೆ ಆತನ ನಿಷ್ಠೆಯನ್ನು, ಶರಣ ತತ್ವದ ಪರಿದಿಯನ್ನು ತಿಳಿಸಿಬಿಡುತ್ತದೆ. ಈತ ದನಕರುಗಳನ್ನು ಮೇಯಿಸಿಕೊಂಡು ಬರುವ ವೃತ್ತಿಯನ್ನೇನೋ ಮಾಡುತ್ತಿದ್ದ ನಿಜ. ಆದರೆ ಆ ವೃತ್ತಿಯೇ ಈತನನ್ನು ಅನುಭಾವಿಯಾಗಿಸಿ ಬಿಡುತ್ತದೆ. ಅರಿವನ್ನು ಮೂಡಿಸುವುದರ ಜೊತೆಗೆ ವಿಸ್ತರಿಸುವ ಕೆಲಸ ವೃತ್ತಿಯ ಅನುಭವಗಳೇ ಮಾಡಿಬಿಡುತ್ತವೆ. ಹಾಗಾಗಿ ವೃತ್ತಿಯ ಅನುಭವದಿಂದಲೇ ಆಧ್ಯಾತ್ಮದ ಉನ್ನತಿಯನ್ನು ಸಾಧಿಸುತ್ತಾನೆ.

ವಚನಕಾರರು ಆಧ್ಯಾತ್ಮ ಸಾಧನೆಯ ಜೊತೆಗೆ ಲೌಖಿಕ ಬದುಕನ್ನು ನಿರಾಕರಿಸಿದವರಲ್ಲ. ಇದ್ದು ಇಲ್ಲದಂತಹ ಸ್ಥಿತಿಗೆ ಏರಲು ಬಯಸಿದವರು. ಹಾಗಾಗಿ ಅವರ ಕಾರ್ಯಕ್ಷೇತ್ರ ಹಲವು ಮುಖಗಳನ್ನು ಹೊಂದಿರುವಂತಹದ್ದು ಅದು ಸಾಮಾಜಿಕವಾಗಿರಬಹುದು, ಆರ್ಥಿಕವಾಗಿರಬಹುದು, ರಾಜಕೀಯವಾಗಿರಬಹುದು, ಧಾರ್ಮಿಕವಾಗಿರಬಹುದು, ಆಧ್ಯಾತ್ಮಿಕವಾಗಿರಬಹುದು ಹೀಗೆ ಹಲವುಗಳ ಜೊತೆಗೆ ತಮ್ಮ ತನದ ಹುಡುಕಾಟವೆಂಬ ಅಂತರಂಗದ ತುಮುಲವು ಒಂದಾಗಿ ಸೇರಿಕೊಂಡು ಬಿಡುತ್ತದೆ. ಇವೆಲ್ಲದರಲ್ಲೂ ತಮ್ಮತನವನ್ನು ಗಟ್ಟಿಯಾಗಿ ಉಳಿಸಿಕೊಂಡು ಬದುಕಿದವರು. ರಾಮಣ್ಣ ಬದುಕಿಗೆ ಬಳಸಿಕೊಳ್ಳುವ ವೃತ್ತಿ ಮತ್ತು ವೃತ್ತಿನಿಷ್ಠೆಯನ್ನು ತಿಳಿಸುವ ಈ ವಚನವನ್ನು ನೋಡಬಹುದು.

ಹಸುವಿಗೆ ಹಾಗ,
ಎತ್ತಿಗೆ ಹಣ ವಡ್ಡ,
ಕರುವಿಗೆ ಮೂರು ಹಣ,
ಎಮ್ಮೆ ಕೋಣ ಕುಲವ ನಾ ಕಾಯಲಿಲ್ಲ,
ಅವು ಎನ್ನ ತುರುವಿಗೆ ಹೊರಗು,
ತೊಂಡು ಹೋಗದಂತೆ ಕಾದೊಪ್ಪಿಸುವೆ.
ಗೋಪತಿನಾಥ ವಿಶ್ವೇಶ್ವರಲಿಂಗಕ್ಕೆ.

(ವಚನ ಸಂಪುಟ: ೨, ವಚನ ಸಂಖ್ಯೆ: ೧೦೫೦)

ಈ ವಚನದಲ್ಲಿ ರಾಮಣ್ಣನು ತಾನು ಮಾಡುತ್ತಿದ್ದ ವೃತ್ತಿಗೆ ಸಂಭಾವನೆ ಅಥವಾ ಕೂಲಿಯನ್ನು ನಿಗದಿಮಾಡಿರುವುದನ್ನು ನೋಡುತ್ತೇವೆ. 'ಹಸುವಿಗೆ ಹಾಗ', 'ಎತ್ತಿಗೆ ಹಣವಡ್ಡ', 'ಕರುವಿಗೆ ಮೂರು ಹಣ' ಹೀಗೆ ಹೇಳುತ್ತ ತನ್ನ ಕಾಯಕವನ್ನು ಉಪಜೀವನಕ್ಕೆ ಬಳಸಿಕೊಳ್ಳುವುದರ ಜೊತೆಗೆ ಅದರಲ್ಲಿ ನಿಷ್ಠೆಯನ್ನು ಪ್ರತಿಪಾದಿಸುತ್ತಾನೆ. ಕೂಲಿಯನ್ನು ತಾನು ತೆಗೆದುಕೊಳ್ಳುವುದು ತನ್ನ ವೃತ್ತಿಯ ಫಲದಿಂದಲೇ ಅದು ನಿಷ್ಠೆಯಿಂದ ಕೈಗೊಂಡ ವೃತ್ತಿಯ ಮುಖೇನ ಮಾತ್ರ ಎಂಬ ಧ್ವನಿಯನ್ನು ಗಮನಿಸಬಹುದು. ಹಾಗೆಯೇ ಮುಂದುವರೆದು 'ಎಮ್ಮೆ ಕೋಣ ಕುಲವ ನಾ ಕಾಯಲಿಲ್ಲ' ಎನ್ನುವ ಮಾತಂತು ತುಂಬ ಗಮನಾರ್ಹ. ಏಕೆಂದರೆ ಕೇವಲ ಜೀವನಕ್ಕಾಗಿ ವೃತ್ತಿಯನ್ನು ಮಾಡುವ ವ್ಯಕ್ತಿತ್ವವಲ್ಲದ, ಒಂದು ತಾತ್ವಿಕತೆಯ ಬದುಕನ್ನು ಸ್ವೀಕರಿಸಿರುವ ವಚನಕಾರನ ನಿಲುವನ್ನು ಈ ಮಾತಿನಿಂದ ಅರಿಯುತ್ತೇವೆ. ಈ ವಚನದಲ್ಲಿ ಕೇವಲ ಲೌಖಿಕ ಬದುಕಿನ ಚಿತ್ರಣ ದೊರೆತರು, ಅದನ್ನು ಬರಿ ಲೌಕಿಕಕ್ಕೆ ಸೀಮಿತಮಾಡುವ ಹಾಗಿಲ್ಲ. ಇವುಗಳನ್ನು ರೂಪಕಗಳಾಗಿ ಮಾತ್ರ ಬಳಕೆ ಮಾಡಿಕೊಂಡು ಅವುಗಳ ಮೂಲಕ ಒಂದು ಸಿದ್ಧಾಂತವನ್ನೇ ಕಟ್ಟಿಕೊಟ್ಟಿದ್ದಾನೆ.

ಬಳಕೆಗೊಂಡಿರುವ ರೂಪಕಗಳಾದ ಹಸು, ಎತ್ತು, ಕರು, ಎಮ್ಮೆ, ಕೋಣ. ಪ್ರಾಣಿಗಳ ಪ್ರತಿಮೆಯ ಮಹತ್ವ, ಅರ್ಥ ವಿಚಾರವನ್ನು ಅಡಗಿಸಿಟ್ಟುರುವುದನ್ನು ನೋಡುತ್ತೇವೆ. ಇವುಗಳು ಆಧ್ಯಾತ್ಮದ ಸ್ವರೂಪವನ್ನು ಪಡೆದು ವಿಶ್ಲೇಷಣೆಗೆ ಒಳಪಡುವಂತಗಳು ಆಗಿವೆ. ಆತನ ಅನೇಕ ವಚನಗಳಲ್ಲಿ ಈ ಕೆಲಸ ನಡೆದೆ ಇದೆ. ಹಸುವನ್ನು ಸಾತ್ವಿಕ ಗುಣಕ್ಕೆ, ಎತ್ತು, ಕರುವನ್ನು ರಜೋ ಗುಣಕ್ಕೆ ಹೋಲಿಸುತ್ತಿರುವ ವಿಚಾರವಂತಿಕೆಯನ್ನು ಗಮನಿಸಬಹುದು. ಹಾಗೇಯೇ ಎಮ್ಮೆ ಮತ್ತು ಕೋಣವನ್ನು 'ನಾ ಕಾಯಲಿಲ್ಲ' ಎಂದು ತಿರಸ್ಕರಿಸಲು ಅವುಗಳನ್ನು ತಮೋಗುಣಕ್ಕೆ ಹೋಲಿಸಿಕೊಂಡು ನುಡಿಯುತ್ತಾನೆ. ಮುಂದೆ ಸಾಗಿ 'ತೊಂಡು ಹೋಗದಂತೆ ಕಾದೊಪ್ಪಿಸುವೆ' ಎಂಬ ಮಾತಿನಲ್ಲಿ ಆತನ ನಿಷ್ಠೆಯ, ಪ್ರಮಾಣಿಕತೆಯ, ವೃತ್ತಿ ಮೇಲಿನ ಅಪಾರ ಗೌರವವನ್ನು ಗುರುತಿಸಬಹುದು. ಈ ವಚನವನ್ನು ಸಾಮಾಜಿಕವಾಗಿ ಗ್ರಹಿಸುವುದಾದರೆ, ತನ್ನತನವನ್ನು ಕಟ್ಟಿಕೊಳ್ಳುತ್ತಿರುವ ವೃತ್ತಿನಿರತನೊಬ್ಬ ತನ್ನ ವೃತ್ತಿಗೆ ಗೌರವನ್ನು ತಂದುಕೊಳ್ಳಲು, ಅನೇಕ ಬಗೆಯ ವಿರೋಧಿತನವನ್ನು ಕಟ್ಟಿಕೊಳ್ಳಬೇಕು. ಅಂದರೆ ವೃತ್ತಿಗೆ ನಿಷ್ಠೆ, ಬದುಕಿಗೆ ತಾತ್ವಿಕತೆ, ಸಿದ್ಧಾಂತ. ಅದನ್ನು ವಚನಕಾರರ ಆಂದೋಲನದಲ್ಲಿ ಪಾಲ್ಗೊಂಡ ಈತನಿಗೆ ಶರಣರ ಚಿಂತನೆಗಳು ಈತನಲ್ಲಿ ಸ್ವೀಕೃತಗೊಂಡು, ಆ ತತ್ವಕ್ಕೆ ಬದ್ಧನಾಗಿದ್ದಾನೆ. ಹಾಗಾಗಿ ವಚನಕಾರ ಆಶಯ, ತತ್ವಕ್ಕೆ ಬದ್ಧರಲ್ಲದ ಪರಂಪರೆಯನ್ನು, 'ಎಮ್ಮೆ-ಕೋಣ'ಗಳಿಗೆ ಹೋಲಿಸಿ, ಅಂತವರ ಸಹವಾಸ ಮತ್ತು ಸೇವೆಗೆ ಸಿದ್ದನಿಲ್ಲ ಎಂಬ ಮನೋಭಾವ ವಿರುವುದನ್ನು ಇಲ್ಲಿ ಗುರುತಿಸುತ್ತೇವೆ. ಕಾಣಬಹುದು. ಆಧ್ಯಾತ್ಮ ಮತ್ತು ಕಾಯಕದಲ್ಲಿ ತನ್ನದೇ ಆದ ಎತ್ತರದ ಸ್ಥಾನವನ್ನು ನಿರ್ಮಿಸಿಕೊಂಡಿದ್ದಾನೆ. ಈ ವಚನದಲ್ಲಿ ಬೆಡಗಿನ ಭಾಷೆಯ ಪ್ರಯೋಗವಿದ್ದು, ವೃತ್ತಿಪರ ನುಡಿಗಟ್ಟುಗಳು ಬಳಕೆಗೊಂಡಿವೆ. ಇದರ ಮೂಲಕ ರಾಮಣ್ಣನ ಅನುಭಾವ ಮತ್ತು ವೃತ್ತಿ ನಿಷ್ಠೆಯನ್ನು ತಿಳಿಯುತ್ತೇವೆ. ದನ ಕಾಯುವ ವೃತ್ತಿಯನ್ನು ಅವಲಂಬಿಸಿದ್ದರೂ ಆತನ ವೃತ್ತಿಯ ಅನುಭವಗಳೇ ಆತನಿಗೆ ಶಿಕ್ಷಣವಾಗಿದೆ.

ವರ್ಣ ವ್ಯವಸ್ಥೆಯ ಬಂದನದಿಂದ ಬಿಡಿಸಿಕೊಂಡು ಶರಣ ವ್ಯವಸ್ಥೆಯನ್ನು ಅವಲಂಭಿಸಿಯೇ ಅನುಭಾವಿಯಾಗಿ, ಆಧ್ಯಾತ್ಮಿಯಾಗಿ ವಚನಗಳನ್ನು ರಚಿಸಿದ್ದಾನೆ. "ದನ ಕಾಯುವ ರಾಮಣ್ಣನಂಥ ವ್ಯಕ್ತಿಯೂ ಇಷ್ಟೊಂದು ಸೂಕ್ಷ್ಮಜ್ಞನಾದ ಆಧ್ಯಾತ್ಮ ಜಿಜ್ಞಾಸು ಅಥವಾ ಸಂವೇದನಾ ಶೀಲನಾಗುವಂಥ ವಿದ್ಯೆ ಅವನಿಗೆ ದೊರತದ್ದು, ವರ್ಣ ವ್ಯವಸ್ಥೆಯನ್ನು ತೊರೆದು ಶರಣ ವ್ಯವಸ್ಥೆಯನ್ನು ಸೇರಿಕೊಂಡ ನಂತರವೇ"[೨] ಎಂದು ತಿಳಿದುಬರುತ್ತದೆ. ವೃತ್ತಿನಿರತ ವಚನಕಾರರು ತಮ್ಮತನವನ್ನು ವೃತ್ತಿಯ ಮೂಲಕವೇ ಕಂಡುಕೊಳ್ಳುವ ಪ್ರಯತ್ನ ಮಾಡಿದ್ದು ಮಹತ್ವದೆಂದು ಈಗಾಗಲೇ ಗುರುತಿಸಲಾಗಿದ್ದು, ಅವರ ಅರಿವಿನ ಹುಡಕಾಟದ ಸಾಧನವು ಆಗಿ ವೃತ್ತಿ ಮಾರ್ಪಟ್ಟಿರುವುದು ವಿಶೇಷ. ವೃತ್ತಿಯನ್ನು ಮಾಡಿ ಅದನ್ನು ಸಮಾಜಕ್ಕೆ ವಿನಿಯೋಗಿಸುವುದು ವಚನಕಾರರಿಗೆ ಸಂತಸ ಮತ್ತು ಸಾರ್ಥಕದ ಬದುಕು. ಹೀಗೆ ದಾಸೋಹದಲ್ಲಿ ತೊಡಗಿಕೊಂಡು ಅಷ್ಟಕ್ಕೆ ಸೀಮಿತಗೊಳ್ಳುವುದಿಲ್ಲ. ತಮ್ಮೊಳಗನ್ನು ಅರಿಯುವ ಪ್ರಯತ್ನ ನಿರಂತರವಾಗಿ ಮಾಡುತ್ತಲೆ ಇರುತ್ತಾರೆ. ಮೇಲ್ವರ್ಗದ ವಚನಕಾರರಲ್ಲಿ ಜಾತಿ, ಹುಟ್ಟು ಎಂಬುದು ಅಂತರಂಗ ಶೋಧನೆಗೆ ಪ್ರೇರಕವಾದುದಾದರೆ, ಕುಲಕಸುಬುಗಳನ್ನು ಮಾಡುವವರಿಗೆ, ಕೆಳಜಾತಿಯ ವಚನಕಾರರಿಗೆ ತಾವು ಅವಲಂಬಿಸಿರುವ ವೃತ್ತಿಯೇ ಅರಿವಿನ ಹುಡುಕಾಟಕ್ಕೆ ಲಭಿಸಿದ ದಾರಿ.

> ಕೋ ಬಾ ಎಂಬಲ್ಲಿ ಆತ್ಮನ ಭೇದ,
> ಅಂಬಾ ಎಂದಲ್ಲಿ ಅರಿವಿನ ಭೇದ,
> ಧಾ ಎಂದು ನಕ್ಕಿರಿದಲ್ಲಿ ಚಿದಾತ್ಮನ ಭೇದ
> ಇಂತೀ ಗುಣದ ಪಶು ಅಸುವಿನ ಬಲೆಯ ಕಾಯ್ದೊಪ್ಪಿಸಬೇಕು,
> ಗೋಪತಿನಾಥ ವಿಶ್ವೇಶ್ವರ ಲಿಂಗಕ್ಕೆ
>
> (ವಚನ ಸಂಪುಟ: ೨, ವಚನ ಸಂಖ್ಯೆ: ೧೦೨೧)

ವೃತ್ತಿಯ ಮೂಲಕ ತಮ್ಮ ಒಳಗನ್ನು ಪ್ರಶ್ನಿಸಿಕೊಳ್ಳುವ, ಉತ್ತರವನ್ನು ಹುಡುಕಿಕೊಳ್ಳುವ ಮಾರ್ಗ. ಇದನ್ನು ರಾಮಣ್ಣನ ಈ ವಚನ ನಿರೂಪಿಸುತ್ತದೆ.

ಮೇದಾರ ಕೇತಯ್ಯ

ಬಿದಿರಿನ ಕಾಯಕವನ್ನು ಮಾಡುವುದು ಈತನ ವೃತ್ತಿ ಎಂದು ಗುರುತಿಸಲಾಗಿದ್ದು, ಮೇದಾರಿಕೆ ಮಾಡುವ ಕೆಳವರ್ಗದ ಸಮುದಾಯದ ವೃತ್ತಿ ಇದಾಗಿದ್ದು, ಈಗಲೂ ಈ ಸಮುದಾಯ ವಷ್ಟೇ ಬಿದಿರಿನ ಕೆಲಸ ಮಾಡುವುದನ್ನು ನೋಡುತ್ತೇವೆ. ಬುಟ್ಟಿ, ಮರ, ಏಣಿ ಮುಂತಾದ ವಸ್ತುಗಳನ್ನು ತಯಾರಿಸುವುದು, ಕರಕುಶಲ ವೃತ್ತಿಯೆಂದೇ ಇಂದಿನ ಸಮಾಜದಲ್ಲಿ ಗುರುತಿಸಲಾಗಿರುವ ವೃತ್ತಿಯಾಗಿದೆ. ಬಹು ಉಪಯೋಗಿಯಾದ ಬಿದಿರಿನ ಮೂಲಕ ಜನರ ಜೀವನಕ್ಕೆ ಬೇಕಾದ ವಸ್ತುಗಳನ್ನು ತಯಾರಿಸುವುದು ಇಂತವರ ಕಸಬು. ಮೇದಾರ ಸಮುದಾಯವು ಕೇತಯ್ಯನನ್ನು ತಮ್ಮ ಕುಲ ದೈವವೆಂದು ಆರಾಧಿಸುವ, ಸಮುದಾಯದ ಸಾಂಸ್ಕೃತಿಕ ನಾಯಕರನ್ನಾಗಿ ಮಾಡಿಕೊಂಡಿದ್ದಾರೆ.

ಅನೇಕ ಕುಲಮೂಲದ ವೃತ್ತಿಯನ್ನು ಮಾಡುತ್ತ ಬಂದು, ಅದೇ ವೃತ್ತಿಯನ್ನು ಮುಂದುವರೆಸುತ್ತ, ವಚನಕಾರರ ಜೊತೆಗೆ ಸೇರಿಕೊಂಡು ಅನುಭಾವವನ್ನು ಮಾಡುತ್ತ ಸಾಧನೆಗೆ ತೊಡಗಿದ ವಚನಕಾರರು ತಮ್ಮ ಪಾಡಿಗೆ ತಮ್ಮನ್ನು ಅರಿತುಕೊಂಡು ಸಾಧನೆಗೆ ತೊಡಗಿದರಷ್ಟೆ. ಇವರನ್ನು ಇಷ್ಟಕ್ಕೆ ಸೀಮಿತ ಮಾಡುವುದು ಕೂಡ ಸರಿ ಕಾಣುವುದಿಲ್ಲ. ಏಕೆಂದರೆ ತಮ್ಮ ವೃತ್ತಿಯನ್ನು ಮಾಡುವ ಅನೇಕ ಜನರ, ತಮ್ಮ ಸಮುದಾಯದ ನಾಯಕರ ಸ್ಥಾನವನ್ನು ಏರಿ ಕುಳಿತಿದ್ದಾರೆ. ಹೀಗಾಗಿ ಇವರನ್ನು ತಮ್ಮ ಪ್ರತಿನಿಧಿಗಳು, ಕುಲ ಮೂಲ ಪುರುಷರುಗಳು ಎಂದು ಕರೆದುಕೊಂಡು, ಆದುನಿಕ ಜಗತ್ತಿನಲ್ಲಿ ತಮ್ಮತನವನ್ನು ಗುರುತಿಸಿಕೊಳ್ಳವ ಪ್ರಯತ್ನವನ್ನು ವೃತ್ತಿ ಅವಲಂಬಿಸಿರುವ ಸಮುದಾಯಗಳು ಮಾಡುತ್ತ ಬಂದಿವೆ. ಸಂಘಟಿಸುವ ಪ್ರಯತ್ನ ನಡೆದೆ ಇದೆ. ಹೀಗಾಗಿ ಇಂತಹ ವಚನಕಾರರ ಅನುಭಾವಿಕ ಸಾಧನೆಯು ಬಹಳ ಮಹತ್ವದ್ದಾಗಿದೆ. ಹನ್ನೆರಡನೆಯ ಶತಮಾನದ ಕಾಲಘಟ್ಟದಲ್ಲಿ ತಮ್ಮನ್ನು ಗುರುತಿಸಿಕೊಳ್ಳುವ ಸ್ವಾತಂತ್ರ್ಯ ಇಲ್ಲದ ಪರಿಸ್ಥಿತಿಯಲ್ಲಿ ಮಾತನಾಡುವ ಪ್ರಯತ್ನ ಮಾಡಿರುವುದು, ಅದರಲ್ಲೂ ತಮ್ಮ ವೃತ್ತಿಯ ಅನುಭವವನ್ನು ಹಂಚಿಕೊಳ್ಳುವುದರ ಜೊತೆಗೆ ತಮ್ಮ ವೃತ್ತಿಯೇ ತಮ್ಮ ಸಾಧನೆಯ ಮೂಲ ಮಾರ್ಗವಾಗಿ ಬದಲಾಯಿಸುವ ಪ್ರಯತ್ನವಂತೂ ತುಂಬ ವಿಶಿಷ್ಟ ಮತ್ತು ಧೈರ್ಯದ ಕೆಲಸವೇ ಆಗಿದೆ. ಮತ್ತು ಅದೊಂದು ಮಹತ್ವದ ಹೋರಾಟವಾಗಿಯೇ ಕಾಣುತ್ತದೆ. ಬರಿ ಕೇವಲ ತಮ್ಮ ವೃತಿಗೆ ದೊರಕಬೇಕಾದ ಸ್ಥಾನವನ್ನು ತಂದುಕೊಡುವುದಷ್ಟೇ ಇವರ ಕೆಲಸವಲ್ಲ. ಇದಷ್ಟಕ್ಕೆ ಸೀಮಿತ ಮಾಡಿದರೆ ಸಂಕುಚಿತತೆಯನ್ನು ಹಾಕಿದಂತಾಗುತ್ತದೆ. ಎಲ್ಲಾ ಸಂಕುಚಿತತೆಯನ್ನು ಮೀರಿ ನಿಂತವರಾಗಿದ್ದಾರೆ. ಮುಖ್ಯವಾಗಿ ವೃತ್ತಿನಿರತ ವಚನಕಾರರು ಸ್ಥಾಪಿಸಲೆತ್ನಿಸಿದುದು, 'ಕರ್ತಾರನ ಕಮ್ಮಟ', 'ಶ್ರಮದ ಬದುಕು', 'ನಿಷ್ಠೆಯ ಕಾಯಕ'. ಇದೇ ಸಮಾಜದ ಸ್ವಾಸ್ಥಕ್ಕೆ ಕಾರಣ ಎಂಬುದನ್ನು ಮನಗಂಡವರು ಇದನ್ನೆ ತಮ್ಮ ವಚನಗಳ ಮೂಲಕ ತಿಳಿಸಿದರು. ಮೇದಾರ ಕೇತಯ್ಯ ತನ್ನನ್ನು ಗುರುತಿಸಿಕೊಳ್ಳುವುದೇ ತನ್ನ ವೃತ್ತಿಯಿಂದ. ತನ್ನ ವೃತ್ತಿಯೇ ಸಾಧನೆಯ ಮಾರ್ಗ. ಅದನ್ನು ಹಿಡಿದೆ ಬದುಕಿದಂತಹ ವಚನಕಾರ. ಈತನ ವಚನಗಳಲ್ಲಿ ಆಧ್ಯಾತ್ಮ ಜೀವಿಯೊಬ್ಬನ ಬದುಕನ್ನು ಗುರುತಿಸಬಹುದು. ಈತನಿಗೆ ತನ್ನ ವೃತ್ತಿ ಬೇರೆಯಲ್ಲ ಶಿವ ಬೇರೆಯಲ್ಲ. ವೃತ್ತಿಯನ್ನು ಮಾಡುವುದೇ ಈತನಿಗೆ ಪೂಜೆ ಮತ್ತು ಶಿವದರ್ಶನ. ವೃತ್ತಿಯ ಪರಿಭಾಷೆಯ ಮೂಲಕ ತನ್ನ ಅನುಭವವನ್ನು ಕಟ್ಟಿಕೊಡುವ, ಅನುಭಾವದ ಸ್ಥಿತಿಗೆ ಏರು ವ್ಯಕ್ತಿತ್ವವನ್ನು ಗುರುತಿಸಬಹುದು. ಪರಿಪೂರ್ಣತೆಯನ್ನು ಪಡೆಯಲು ಹಂಬಲಿಸುವುದನ್ನು ಈ ವಚನದ ಮೂಲಕ ಗುರುತಿಸಬಹುದು.

ಒಂದು ಬಿದಿರಿಗೆ ಕವೆ ಮೂರು
ಆ ಕವೆಯೊಳಗೆ ಲಕ್ಕ ಸಿಬಿರು
ಮೂರು ಕವೆಯ ಕೊಚ್ಚಿಸಿ,
ಬಿಲ್ಲ ಸಿಕ್ಕಬಿಡಿಸಿ, ಸಿಗಿದ ಬಿದಿರ
ಹೊರೆ ಹೊರೆಯಲ್ಲಿ ನೆಯಿದೆ ತೊಟ್ಟಿಲಸಂದ ಕಾಣದಂತೆ,
ನಾಲ್ಕು ಕಾಲನಿಕ್ಕಿ ಅಂದು
ಅಂದವಾದ ತೊಟ್ಟಿಲ ದಂಡೆಯನಿಕ್ಕಿ

ಕಟ್ಟುವುದಕ್ಕೆ,
ಶೃತ ದೃಷ್ಟವೆಂಬೆರಡು ದಾರದಲ್ಲಿ ತೊಟ್ಟಿಲಕಟ್ಟಿ
ಗೌರೇಶ್ವರ ಲಿಂಗಕ್ಕೆ
ಹುಟ್ಟುಗೆಟ್ಟು ಹೋಗೋ ಎಂದು ಜೋಗುಳವಾಡಿದೆ.

ಈ ವಚನದಲ್ಲಿ ತುಂಬಿಕೊಂಡಿರುವ ಭಾವವನ್ನು ಅಲಕ್ಷಿಸಿ ಈ ವಚನದ ಬಗ್ಗೆ ಮಾತಾಡಲು ಸಾಧ್ಯವೆ ಇಲ್ಲ. ಈ ವಚನದ ಭಾವ ಸಾಂದ್ರತೆ ಹನ್ನೆರಡನೇ ಶತಮಾನದ ವಚನಕಾರರ ಮಹಾ ಆಂದೋಲನ ಬಸವಣ್ಣನ ಪ್ರೇರಣೆಯನ್ನು ಪಡೆದು ಅಥವಾ ಬಸವಣ್ಣನ ಹೋರಾಟವನ್ನು ಒಪ್ಪಿ ಅಪ್ಪಿಕೊಂಡು ಚಳುವಳಿಯಲ್ಲಿ ಭಾಗವಹಿಸಿದ ಫಲವೋ? ಇದು ಅನುಭಾವದ ಸಾಂಗತ್ಯಕ್ಕೆ ಸಂದುವಂತಹದ್ದಾಗಿದೆ.

ವೃತ್ತಿಯ ಪರಿಭಾಷೆಯ ಬಳಕೆ ಅದ್ಭುತವಾದ ಪ್ರಯೋಗವಾಗಿದೆ. ವೃತ್ತಿಯ ಪರಿಕರಗಳು ಅರಿವಿನ ಹಂಬಲವನ್ನು ತೋರಿಸುವಂತೆ ಬಳಕೆಗೊಂಡಿವೆ. 'ಬಿದಿರು', 'ಕವೆ', 'ಲಕ್ಕ', 'ಸಿಬಿರು', 'ನೇಯಿದೆ', 'ತೊಟ್ಟಿಲು', 'ದಾರ', 'ನಾಲ್ಕು ಕಾಲು' – ಹೀಗೆ ಮುಂತಾದ ಪದಗಳ ಪ್ರಯೋಗ ವೃತ್ತಿ ಕಸುಬಿನ ಚಿತ್ರಣವನ್ನು ಕೊಡುತ್ತದೆ. ಕೇತಯ್ಯನ ಈ ವಚನದಲ್ಲಿ ಬಿದಿರ ತೊಟ್ಟಿಲನ್ನು ಹೆಣೆದು, ಕಟ್ಟಿ ಮಗುವನ್ನು ಮಲಗಿಸಿ ಜೋಗುಳವಾಡುತ್ತಿರುವ ರೂಪಕ ಕಾಣುತ್ತದೆ. ತನ್ನನ್ನು ಅಥವಾ ಮನುಷ್ಯನ್ನು ಬಿದಿರಿಗೆ ಹೊಲಿಸಿಕೊಂಡು ಮುಂದುವರೆವ ವಚನ ಅಮೂರ್ತ ಸ್ವರೂಪಕ್ಕೆ ಕೈಚಾಚಿ ಬಿಡುತ್ತದೆ. 'ಕವೆ ಮೂರು' ಅನುಭಾವಿಯೊಬ್ಬ ಜಯ ಸಾಧಿಸಲು ಹೆಣ್ಣು, ಮಣ್ಣು, ಹೊನ್ನು ಎಂಬುದನ್ನು ಬಿಡಬೇಕು. ನಿರ್ಮೋಹಿಯಾಗಿ ಇದ್ದಾಗ ಮಾತ್ರ ಅರಿವಿನ ದಾರಿ ಸಿಗುವುದು ಎಂಬುದನ್ನು ಅಭಿವ್ಯಕ್ತಿಸುವ ಆಧ್ಯಾತ್ಮ-ಸ್ವರೂಪವನ್ನು ಪಡೆದುಕೊಳ್ಳುತ್ತದೆ. ಬದುಕಿನ ಮೋಹವನ್ನು ಬದುಕಿನಿಂದ ಬಿಡಿಸಿಕೊಂಡು ಮಗುವಿನಂತಾಗಬೇಕು. ಅಂತಹ ಮಗುವನ್ನು ನಿರ್ಮೋಹದ ಬದುಕಿನಿಂದ ಕಟ್ಟಿಕೊಂಡ ಜೀವನವನ್ನು ಇತರ ಸಾಧಕರಿಂದ ಕಂಡು, ಕೇಳಿ ಅನುಭವಕ್ಕೆ ತಂದುಕೊಂಡು ಅನುಸರಿಸಬೇಕು ಎಂಬುದನ್ನು "ಶೃತ ದೃಷ್ಟವೆಂಬೆರಡು ದಾರದಲ್ಲಿ ತೊಟ್ಟಿಲಕಟ್ಟಿ' ಎಂಬ ಸಾಲಿನಲ್ಲಿ ಹೇಳುತ್ತಾನೆ. ಇನ್ನೂ ಬಹಳ ಮಹತ್ವವಾದ ಸಾಲಿನಂತೆ ಕಾಣುವ ಅನುಭವ ವೇಧ್ಯ ಜೀವನಸತ್ಯವೆಂದು 'ಹುಟ್ಟುಗೆಟ್ಟು ಹೋಗೋ ಎಂದು ಜೋಗುಳವಾಡಿದೆ' ಇಲ್ಲಿ ಜೋಗುಳ ಹಾಡುವುದು ಆತ್ಮವೇ, ಮನುಷ್ಯ ನಿಷ್ಠೆ ಪ್ರಾಮಾಣಿಕತೆಯಿಂದ ಬದುಕಿದಾಗ ಒಳಗೂ-ಹೊರಗೂ ಎಂಬ ಬೇಧವನ್ನು ಅಳಿಯುತ್ತಾನೆ. ಅಂತರಂಗ ಮತ್ತು ಬಹಿರಂಗದಲ್ಲಿ ಏಕತೆಯನ್ನು ಸಾಧಿಸುತ್ತಾನೆ. ಎಂಬುದನ್ನು ತಿಳಿಸಿಕೊಡುತ್ತದೆ. ಜೊತೆಗೆ ನಾನಾ ರೀತಿಯ ಬಂದನವನ್ನು ಬಿಡಿಸಿಕೊಂಡು ಸಾಗುವ, ಮುಕ್ತಿಯ ಮಾರ್ಗವನ್ನು ಕಂಡುಕೊಳ್ಳುವುದು ಕಾಣುತ್ತದೆ.

ಕೇತಯ್ಯ ವೃತ್ತಿಗೂ-ತನ್ನ ಬದುಕಿಗೂ, ವೃತ್ತಿಗೂ-ಆಧ್ಯಾತ್ಮಕ್ಕೂ ಬೇಧವನ್ನು ಕಂಡುಕೊಂಡಿಲ್ಲ ಹಾಗಾಗಿ ವೃತ್ತಿಯೇ ಸಾಧನೆಗೆ ಮೂಲ ಆಧಾರ. ವೃತ್ತಿಯ ಮೂಲಕ ಕಂಡುಕೊಂಡ ಅನುಭವವೇ ಅನುಭಾವವಾಗಿ ಪರಿಣಮಿಸುತ್ತದೆ. ವೃತ್ತಿ ಕೇವಲ ಬದುಲಿಕ್ಕೆ ಮಾತ್ರವಲ್ಲ ಅದೊಂದು ಜೀವನ ಸಾಧನೆ. ನಿಷ್ಠೆಯ ಬದುಕು. ದರ್ಶನವಾಗಿ ವೃತ್ತಿ ಅಭಿವ್ಯಕ್ತಗೊಂಡಿದೆ.

ಕೇತಯ್ಯನ ವಚನಗಳಲ್ಲಿ ಅಷ್ಟಾಗಿ ಸಾಮಾಜಿಕತೆ ಕಾಣದಿದ್ದರೂ ಅರಿವಿನ ಹುಡಕಾಟ ಮಾಡುವ ವ್ಯಕ್ತಿತ್ವದ ಪರಿಚಯವೊಂದು ಕಾಣುತ್ತದೆ. ಈತನ ಮುಖ್ಯ ಅಭಿವ್ಯಕ್ತಿಯಾಗಿ ಸಾಧಕನ ಮನೋಸ್ಥಿತಿಯು ಕಾಣುತ್ತದೆ. ಆಧ್ಯಾತ್ಮದ ಜತೆ ಅನುಸಂದಾನ ಮಾಡುವ ಪ್ರಯತ್ನವನ್ನು ವಚನಗಳಲ್ಲಿ ಹೇರಳವಾಗಿ ಕಂಡುಕೊಳ್ಳುತ್ತೇವೆ. 'ಗವರೇಶ್ವರಲಿಂಗಕ್ಕೆ ಅರಿವೆ ಅರ್ಪಿತ, ಮೊರನ ಹೆಣೆವಗೌರ, ನಾನೆತ್ತ ಬಲ್ಲೆನಯ್ಯ' ಎಂಬ ವಚನದಲ್ಲಿ ಅರಿವಿಗಾಗಿ ತೊಡುಗುವ ವ್ಯಕ್ತಿನಾನಾದರೂ ನಾನು ವೃತ್ತಿಕಾರ ಮೊರವ ಹೆಣೆವ ಮೇದಾರ ಎಂಬ ಮಾತು ತನ್ನತನದ ಪ್ರಶ್ನೆಯನ್ನು ಎತ್ತಿಕೊಳ್ಳುವುದರ ಜೊತೆಗೆ ಅರಿವು ಎನ್ನುವುದು ಸಾಮಾನ್ಯರಿಗೆ ಅಲ್ಲ. ಅದಕ್ಕಾಗಿಯೇ ವಿಶೇಷವಾದ ಸಾಧನೆ ಮಾಡಬೇಕು. ಅದು ಶರಣರು ತೋರಿಕೊಟ್ಟ ಮಾರ್ಗ ಎಂಬುದನ್ನು ತಿಳಿಸಿದಂತೆಯೇ ಇದೆ. ಅಂದರೆ ಭವವನ್ನು ಗೆಲ್ಲುವ ಮೂಲಕ ಅರಿವನ್ನು ಪಡೆಯಬಹುದು ಎಂಬುದು ಧ್ವನಿಯಾಗುತ್ತದೆ. ಇನ್ನು ಅನೇಕ ವಚನಗಳಲ್ಲಿ ಗುರು, ಲಿಂಗ, ಜಂಗಮ ನಿಷ್ಠೆಯನ್ನು ಗುರುತಿಸುತ್ತೇವೆ. ಇನ್ನು ಅನೇಕ ವಚನಗಳಲ್ಲಿ ಬಸವಣ್ಣನನ್ನು ಮುಕ್ತ ಕಂಠದಿಂದ ಸ್ಮರಿಸಿರುವುದನ್ನು ನೋಡುತ್ತೇವೆ.

ಆಯ್ದಕ್ಕಿ ಮಾರಯ್ಯ

ಕಾಯಕಕ್ಕೆ ಜಗತ್ತಿನ ಯಾವ ಶ್ರಮಿಕ ವರ್ಗವೂ ನೀಡಿದ ಮಹತ್ವವನ್ನು ಮತ್ತು ಪ್ರಾಮುಖ್ಯತೆಯನ್ನು ಕೊಟ್ಟವರು ವಚನಕಾರರೆಂದರೆ ಅದು ಅತಿಶಯೋಕ್ತಿಯಲ್ಲ. ಪ್ರತಿಯೊಬ್ಬ ವ್ಯಕ್ತಿಯು ದುಡಿದು ತಿನ್ನಬೇಕೆಂಬುದು ವಚನಕಾರರ ನಿಲುವು. ದುಡಿಯದೇ ಬದುಕುವವನಿಗೆ ತಿನ್ನುವ ಹಕ್ಕಿಲ್ಲ. ಇಂತಹ ವ್ಯಕ್ತಿಗಳು ಪ್ರಾಣಿ ಪಕ್ಷಿಗಳಿಗಿಂತಲೂ ಕೀಳೆನಿಸಿಕೊಳ್ಳುತ್ತಾರೆ ಎಂದು ಬಾಳಿದವರು ವಚನಕಾರರು. ತಾವು ಮಾಡುವ ಪ್ರತಿಯೊಂದು ವೃತ್ತಿಯೂ ಪವಿತ್ರವೆಂದು ಭಾವಿಸಬೇಕು. ಕಾಯಕದಲ್ಲಿ ಕನಿಷ್ಠ-ಶ್ರೇಷ್ಠ ಎಂಬ ತಾರತಮ್ಯ ಮಾಡುವಂತಿಲ್ಲ. ಕಾಯಕದಿಂದಲೇ ಶರಣರು ಕೈಲಾಸವನ್ನು ಕಂಡವರು ಮಾಡುವ ಕಾಯಕದಿಂದ ಬಂದ ಪ್ರತಿಫಲ ತಮಗೆ ಮಾತ್ರವಲ್ಲದೆ ಸಮಾಜದ ಇತರರಿಗೂ ಬಳಕೆಯಾಗಬೇಕು. ಅಂದರೆ ದಾಸೋಹಕ್ಕೆ ಬಳಕೆಯಾಗಬೇಕು. 'ದಾಸೋಹ' ಎಂಬುದು ಶ್ರೇಷ್ಠವಾದ ಶಿವತತ್ವ. ದಾಸೋಹದ ಮೂಲಕ ಸಮಾಜದ ಉನ್ನತಿಯನ್ನು ಸಾಧಿಸಿದಂತಾಗುತ್ತದೆ ಮತ್ತು ಆಧ್ಯಾತ್ಮಿಕ ಪ್ರಗತಿಯನ್ನು ಪಡೆದಂತಾಗುತ್ತದೆ. ಬಡವ-ಶ್ರೀಮಂತ, ಆಳು-ಅರಸ, ಉಚ್ಚ-ನೀಚ, ಹೆಣ್ಣು-ಗಂಡು ಎಂಬ ತರತಮ ಭಾವನೆಗಳು ಇಲ್ಲದೆ ಎಲ್ಲ ಸ್ತರದ, ಎಲ್ಲ ವರ್ಗದ ಜನರು ವಿವಿಧ ವೃತ್ತಿಗಳಲ್ಲಿ ತೊಡಗಿಕೊಂಡು ಕಾಯಕದ ಜೊತೆ ಜೊತೆಗೆ ಗುರು, ಲಿಂಗ, ಜಂಗಮ, ದಾಸೋಹವನ್ನು ಮಾಡುವ ಮೂಲಕ ಉನ್ನತಿಯನ್ನು ಸಾಧಿಸಿದರು.

ವಚನಕಾರರು ಕಾಯಕ ನಿಷ್ಠೆಗೆ ಕೊಟ್ಟ ಮಹತ್ವವನ್ನು ಅವರ ವಚನಗಳಿಂದಲೇ ತಿಳಿಯಬಹುದು. ಸತ್ಯ ಶುದ್ಧ ಕಾಯಕವೇ ಶಿವನಿಗೆ ಅರ್ಪಿತವೆಂದು ಭಾವಿಸಿದ್ದ ವಚನಕಾರರು ವೃತ್ತಿಯಿಂದ ಗಳಿಸಿದ ಹಣ ಅಥವಾ ಯಾವ ರೀತಿಯ ಪದಾರ್ಥಗಳನ್ನಾದರೂ ಅಗತ್ಯಕ್ಕಿಂತ ಹೆಚ್ಚಾಗಿ ಸಂಗ್ರಹಿಸಬಾರದು. ನಿತ್ಯ ದುಡಿದೇ ಜೀವಿಸಬೇಕು ಎಂದು ತಿಳಿದಿದ್ದರು. ಇತರರು ಗಳಿಸಿದ ಯಾವುದೇ ವಸ್ತುವನ್ನು ಬಳಸುವಂತಿಲ್ಲ. ಅಲ್ಲದೆ, ಮೋಸ, ಹಿಂಸೆ, ಸುಳ್ಳು, ಕಳ್ಳತನ ಮೊದಲಾದ ಅನೈತಿಕ ಮಾರ್ಗದ ದುಡಿಮೆ ಕಾಯಕತತ್ವಕ್ಕೆ ವಿರುದ್ಧ.

ಕಾಯಕವೆಂದು ಕಾಯವ ಬಳಲಿಸದೆ, ತನುಕರಗದೆ, ಮನ ನೋಯದ
ಬೇಡಿ ಕಾಡಿ ಮಾಡುವುದು ದಾಸೋಹವೆ?
ಆವಕಾಯಕವು ಪ್ರಾಣವೇ ಕಡೆಯಾಗಿ, ದ್ರವ್ಯ ಮೊದಲಾಗಿ ಚಿತ್ತಶುದ್ಧದಲಿ
ಗುರುಚರಕ್ಕೆ ಮುಯಾಂತು ಮೆಯ್ಯಂತು
ಬಂದುದಕ್ಕೆ ಸರಿಗಂಡು, ಲಿಂಗ ದೇಹಿಗಳನ್ನೆಲ್ಲ ಒಂದೇ ಪ್ರಮಾಣದಲ್ಲಿ ಸಂದುದು
ಈಶಾನ್ಯಮೂರ್ತಿಮಲ್ಲಿಕಾರ್ಜುನಲಿಂಗಕ್ಕೆ ತೃಪ್ತಿ

(ಸಂಕೀರ್ಣ ವಚನ ಸಂಪುಟ: ೪, ವಚನ ಸಂಖ್ಯೆ: ೨೬೬)

ದೇಹವನ್ನು ದಂಡಿಸದೆ, ಮನಸ್ಸಿಗೆ ಆಯಾಸ ಮಾಡಿಕೊಳ್ಳದೆ ಸೋಮಾರಿಯಾಗಿ ಕುಳಿತು ಜೀವನ ಮಾಡುವುದು ನೀಚತನವೆಂದು ವಚನಕಾರರು ಭಾವಿಸಿದ್ದರು. ನಿತ್ಯ ದುಡಿಯದೆ ತನು ಮನ ಕರಗದೆ ಕಾಡಿಬೇಡಿ ಗಳಿಸಿಕೊಂಡು ಬದುಕುವುದು ಕಾಯಕವಲ್ಲ ಎಂದು ಸ್ಪಷ್ಟವಾಗಿಯೇ ಖಂಡನೆ ಇದೆ.

"ಕೃಷಿ ಕೃತ್ಯ ಕಾಯಕದಿಂದಾದಡೇನು? ತನು ಬಳಲಿಸಿ ತಂದು ದಾಸೋಹವ ಮಾಡುವ ಪರಮ ಸದ್ಭಕ್ತನ ಪಾದ ತೋರಯ್ಯ?" ಎನ್ನುವ ಬಸವಣ್ಣ ಅಂತಹ ಕಾಯಕ ಜೀವಿಯ ತನು ಮನ ಶುದ್ಧ. ಆತನ ನಡೆ ನುಡಿ ಎಲ್ಲ ಪಾವನವು. ಆತನಿಗೆ ಉಪದೇಶ ಮಾಡಿದಾತನೇ ಪರಮ ಸದ್ಗುರು ಎಂದು ಹರ್ಷವನ್ನು ವ್ಯಕ್ತಪಡಿಸುತ್ತಾರೆ. ಇಂತಹ ಸನ್ಮಾರ್ಗದಲ್ಲಿ ಗಳಿಸಿದುದೇ ಶ್ರೇಷ್ಠ.

ಗುರುವಾದರೂ ಕಾಯಕದಿಂದಲೆ ಜೀವನ್ಮುಕ್ತಿ
ಲಿಂಗವಾದಡೂ ಕಾಯಕದಿಂದಲೇ ಶಿಲೆಯ ಕುಲ ಹರಿಯುವುದು
ಜಂಗಮವಾದಡು ಕಾಯಕದಿಂದಲೇ ವೇಷದ ಪಾಶಹರಿವುದು
ಇದು ಚನ್ನಬಸವಣ್ಣಪ್ರಿಯ ಚಂದೇಶ್ವರ ಲಿಂಗದ ಅರಿವು

(ಸಂಕೀರ್ಣ ವಚನ ಸಂಪುಟ: ೩, ವಚನ ಸಂಖ್ಯೆ: ೧೩೧೪)

ಕಾಯಕವನ್ನು ಪರಮಪೂಜ್ಯವೆಂದು ಪರಮ ಪವಿತ್ರವೆಂದೂ ನಂಬಿದ್ದ ವಚನಕಾರರು ಕಾಯಕದಿಂದಲೇ ಲಿಂಗ, ಜಂಗಮ ದರ್ಶನ, ಕಾಯಕದಿಂದಲೇ ಸಂಪತ್ತು ಎಂದು ಭಾವಿಸುತ್ತಾರೆ.

'ಕಾಯಕವೇ ಕೈಲಾಸ'ವೆಂದು ಮೊದಲು ಸಾರಿದ ಕಾಯಕಜೀವಿ ಆಯ್ದಕ್ಕಿ ಮಾರಯ್ಯನ ಕಾಯಕನಿಷ್ಠೆ ವಚನಕಾರರಲ್ಲೇ ಅಪರೂಪ ಮತ್ತು ಅಪೂರ್ವವೆನಿಸುತ್ತದೆ.

ಒಮ್ಮೆ ಅನುಭವ ಮಂಟಪದಲ್ಲಿ ಅಲ್ಲಮ ಪ್ರಭುವಿನ ಅಧ್ಯಕ್ಷತೆಯಲ್ಲಿ ಬಸವಣ್ಣ, ಚೆನ್ನಬಸವಣ್ಣ ಮುಂತಾದ ಪ್ರಮುಖ ಶರಣರನ್ನೊಳಗೊಂಡ ಅನುಭವಗೋಷ್ಠಿ ನಡೆಯುತ್ತಿದ್ದಾಗ ಅಲ್ಲಿಗೆ ಬಂದ ಆಯ್ದಕ್ಕಿ ಮಾರಯ್ಯ, ನಿತ್ಯವೂ ಶಿವಭಕ್ತರ ಅಂಗಳದಲ್ಲಿ ಚೆಲ್ಲಿದ್ದ ಅಕ್ಕಿಯನ್ನು ಆಯ್ದು ತಂದು ಜೀವಿಸುತ್ತಿದ್ದ. ದಾಸೋಹವನ್ನು ನಿರಂತರವಾಗಿ ನೆರವೇರಿಸುತ್ತಿದ್ದ ಮಾರಯ್ಯನಿಗೆ ತಾನು ಮಾಡುವ ಕಾಯಕದ ಬಗ್ಗೆ ಅಪಾರವಾದ ಪ್ರೀತಿ. ತನ್ನ ಕಾಯಕವೇ ಅತ್ಯಂತ ಪವಿತ್ರವಾದ ಪರಮಶಿವನ ಸತ್ಯಸೇವೆ ಎಂದು ಭಾವಿಸಿದ್ದನು. ಸತ್ಯ ಶುದ್ಧ ಕಾಯಕವೇ ಪರಮಶ್ರೇಷ್ಠವೆಂದು ಭಾವಿಸಿದ್ದು, ಮಾರಯ್ಯ ಗುರು, ಲಿಂಗ, ಜಂಗಮಕ್ಕಿಂತಲೂ ಕಾಯಕವೇ ಪ್ರಧಾನ, ಪ್ರಥಮ ಎಂದು ನಂಬಿದ್ದಾತ.

ಚಿತ್ತಶುದ್ಧಿ ಮತ್ತು ಸತ್ಯನಿಷ್ಠೆಯಿಂದ ಮಾಡುವ ಕಾಯಕ ಮಾತ್ರದಿಂದಲೇ ಆಧ್ಯಾತ್ಮಿಕ ಉನ್ನತಿಯನ್ನು ಸಾಧಿಸಬಹುದೆಂದು ಬಲವಾಗಿ ನಂಬಿದ್ದ ಮಾರಯ್ಯ ಅನುಭವ ಮಂಟಪದಲ್ಲಿ ನಡೆಯುತ್ತಿದ್ದ ಕಾಯಕದ ಸ್ವರೂಪವನ್ನು ಕುರಿತು ತನ್ನ ಅಭಿಪ್ರಾಯವನ್ನು ಈ ರೀತಿ ವ್ಯಕ್ತಪಡಿಸುತ್ತಾನೆ.

ಕಾಯಕದಲ್ಲಿ ನಿರತನಾದರೆ ಗುರುದರುಶನವಾದರೂ ಮರೆಯಬೇಕು
ಲಿಂಗ ಪೂಜೆಯಾದಡೂ ಮರೆಯಬೇಕು
ಜಂಗಮ ಮುಂದಿದ್ದಡೂ ಹಂಗು ಹರಿಯಬೇಕು
ಕಾಯಕವೇ ಕೈಲಾಸವಾದ ಕಾರಣ, ಅಮರೇಶ್ವರ
ಲಿಂಗವಾಯಿತ್ತಾದಡೂ ಕಾಯಕದೊಳಗೂ

(ಸಂಕೀರ್ಣ ವಚನ ಸಂಪುಟ: ೧, ವಚನ ಸಂಖ್ಯೆ: ೧೧೭೧)

ಮಾರಯ್ಯ ಗುರು ಲಿಂಗ ಜಂಗಮ ಸೇವೆಗಿಂತಲೂ ಕಾಯಕನಿಷ್ಠೆ ಮಿಗಿಲಾದುದು, ಕಾಯಕ ಮಾತ್ರದಿಂದಲೇ ಮೋಕ್ಷ ಸಾಧಿಸಬಹುದು ಎಂದು ಹೇಳುತ್ತಾನೆ. ಕಾಯಕದಲ್ಲಿ ತೊಡಗಿದಾಗ ಅದಕ್ಕೆ ಅಡ್ಡಿಯಾಗುವ ಗುರುವಾದರೂ ಮರೆಯಬೇಕು. ಜಂಗಮ ಮುಂದಿದ್ದರೂ ಹಂಗು ತೊರೆಯ ಬೇಕು. ಅಷ್ಟೇ ಅಲ್ಲ ಶಿವನೂ ಕೂಡ ಕಾಯಕದಿಂದ ಹೊರಗಲ್ಲ ಎಂಬ ದಿಟ್ಟತನವನ್ನು ಮೆರೆಯುತ್ತಾನೆ ಮಾರಯ್ಯ. ಇದು ಮಾರಯ್ಯನ ಕಾಯಕನಿಷ್ಠೆಯ ವಿಶೇಷವೂ ಹೌದು. ಹೀಗೆ ಕಾಯಕದ ಮಹತ್ವವನ್ನು ಮಾರಯ್ಯ ಹೀಗೆ ನುಡಿದಿದ್ದಾನೆ.

ಹಾಗದ ಕಾಯಕವ ಮಾಡಿ ಹಣ ವಡ್ಡವಶಾ ಎಂಬಲ್ಲಿ
ಸತ್ಯದಕಾಯಕ ಉಂಟೆ?
ಭಕ್ತರಲ್ಲಿ ಕಾಯಕಕ್ಕೆ ಕಡಿಮೆಯಾಗಿ ತಾ ಎಂಬುದು
ಅಮರೇಶ್ವರ ಲಿಂಗಕ್ಕೆ ಚಿತ್ತದ ಶುದ್ಧದ ಕಾಯಕ

(ಸಂಕೀರ್ಣ ವಚನ ಸಂಪುಟ: ೧, ವಚನ ಸಂಖ್ಯೆ: ೧೧೯೬)

ತಾವು ಮಾಡಿದ ಕಾಯಕಕ್ಕೆ ಪಡೆಯುವ ಪ್ರತಿಫಲ ಅಂದರೆ ಯಾವುದೇ ರೀತಿಯ ದ್ರವ್ಯವಾಗಲಿ, ಹಣವಾಗಲಿ ನ್ಯಾಯಸಮ್ಮತ ಮತ್ತು ಧರ್ಮಮಾರ್ಗದಲ್ಲಿ ಗಳಿಸಿರಬೇಕು. ಮಾಡಿದ ಕಾಯಕಕ್ಕೆ ಹೆಚ್ಚು ಪ್ರತಿಫಲ ಬಯಸುವುದಾಗಲಿ, ಪಡೆಯುವುದಾಗಲಿ ಸತ್ಯಶುದ್ಧ ಕಾಯಕವೆನಿಸುವುದಿಲ್ಲ. ಅದು ತ್ರಿವಿಧ ದಾಸೋಹಕ್ಕೆ ಅನರ್ಪಿತ. ತಾನು ಮಾಡಿದ ದುಡಿಮೆಗೆ ಸ್ವೀಕರಿಸುವ ಪ್ರತಿಫಲದ ಪ್ರಮಾಣ ಕಡಿಮೆಯಾದರೂ ಚಿಂತೆಯಿಲ್ಲ, ಅದು ತ್ರಿವಿಧ ದಾಸೋಹಕ್ಕೆ ಅರ್ಪಿತ ಎನ್ನುವ ಮಾರಯ್ಯನ ಇನ್ನೊಂದು ವಚನ ಹೀಗಿದೆ.

ನೇಮವ ಮಾಡಿಕೊಂಡು ಭಕ್ತರ ಭವನಂಗಳ ಹೊಕ್ಕು
ಕಾಯಕ ಸತ್ತು, ಹಣ ಹೊನ್ನು ಬೇಡಹೆನೆಂಬುದು
ಕಷ್ಟವಲ್ಲದ ಸದ್ಭಕ್ತಂಗೆ
ಆ ಗುಣ ಅಮರೇಶ್ವರ ಲಿಂಗಕ್ಕೆ ದೂರ

(ಸಂಕೀರ್ಣ ವಚನ ಸಂಪುಟ: ೧, ವಚನ ಸಂಖ್ಯೆ: ೧೧೮೨)

ಶರಣನಾದವನು ಚಿತ್ತಶುದ್ಧಿಯಿಂದ ಕಾಯಕವನ್ನು ಮಾಡದೆ ಭಕ್ತರ ಮನೆಮನೆ ತಿರುಗಿ ಬೇಡಿ ತಂದು ಬದುಕುವುದು ಅತ್ಯಂತ ಅವಮಾನಕರವಾದ ಸಂಗತಿ. ಅಂತಹ ಬೇಡಿ ತಂದ ಪದಾರ್ಥಗಳನ್ನು ದಾಸೋಹಕ್ಕೆ ಅರ್ಪಿಸುವುದು ಅನಾಚಾರವಾಗುತ್ತದೆ. ಇಂತಹ ಗುಣ ಅಮರೇಶ್ವರ ಲಿಂಗಕ್ಕೆ ದೂರ ಎನ್ನುತ್ತಾರೆ. ಮೋಸ ಮಾಡದೆ ಪಿತ್ರಾರ್ಜಿತವಾಗಿ ಬಂದ ಧನಕನಕಗಳು ಕೂಡ ಶಿವನಿಗೆ ಅನರ್ಪಿತ. ಚಿತ್ತಶುದ್ಧಿಯಿಂದ ದುಡಿದು ಗಳಿಸಿದ ಧಾನ್ಯವೇ ಸಾಕು. ಒಂದು ಹಿಡಿ ಅಕ್ಕಿಯೇ ಸಾಕು ಕಾಯಕದಿಂದ ಬಂದ ಕಾರೆಸೊಪ್ಪಾದರೂ ಅದೇ ಪವಿತ್ರ ಲಿಂಗಕ್ಕೆ ಅರ್ಪಿತ.

ಕಾಯಕವನ್ನು ಮರೆತು ಕುಳಿತಿದ್ದಾಗ ಆತನ ಹೆಂಡತಿ ಲಕ್ಕಮ್ಮ ಅಲ್ಲಿಗೆ ಬರುತ್ತಾಳೆ. ಕಾಯಕಕ್ಕೆ ಸಮಯವಾದರೂ ಅನುಭವ ಮಂಟಪದಲ್ಲೇ ಕುಳಿತಿದ್ದ ಪತಿಯನ್ನು ಕಾಯಕಕ್ಕೆ ವೇಳೆಯಾಯಿತು ಎಂದು ಎಚ್ಚರಿಸುವ ಪರಿ ತುಂಬ ಅನನ್ಯವಾದುದು.

ಕಾಯಕ ನಿಂದಿತ್ತು ಹೋಗಯ್ಯ ಎನ್ನಾಳ್ದನೆ
ಭಾವಶುದ್ಧವಾಗಿ ಮಹಾಶರಣರ ತಿಪ್ಪೆಯ ತಪ್ಪಲಕ್ಕಿಯ ತಂದು
ನಿಶ್ಚೈಸಿ ಮಾಡಬೇಕು ಮಾರಯ್ಯ ಪ್ರಿಯ ಅಮರೇಶ್ವರ ಲಿಂಗಕ್ಕೆ
ಬೇಗ ಹೋಗು ಮಾರಯ್ಯ

(ಶಿವಶರಣೆಯರ ವಚನ ಸಂಪುಟ, ವಚನ ಸಂಖ್ಯೆ: ೩೧)

ಎಂದು ಲಕ್ಕಮ್ಮ ಮಾರಯ್ಯನನ್ನು ಎಚ್ಚರಿಸಿ ಕಾಯಕಕ್ಕೆ ತೆರಳುವಂತೆ ಹೇಳುತ್ತಾಳೆ. ಲಕ್ಕಮ್ಮನ ಸೂಚನೆಯಂತೆ ಮಾರಯ್ಯ ಬಸವಣ್ಣನವರ ಮನೆಯ ಅಂಗಳಕ್ಕೆ ಹೋಗಿ ಸ್ವಲ್ಪ ಹೊತ್ತಿನ ನಂತರ ಅಕ್ಕಿಯನ್ನು ಆಯ್ದುತಂದು ಪತ್ನಿ ಲಕ್ಕಮ್ಮನಿಗೆ ನೀಡುತ್ತಾನೆ. ಅದನ್ನು ನೋಡಿದ ಲಕ್ಕಮ್ಮನಿಗೆ ಆಶ್ಚರ್ಯ ಮತ್ತು ಸಿಟ್ಟು ಬರುತ್ತದೆ. ಏಕೆಂದರೆ, ಪ್ರತಿನಿತ್ಯ ಆಯ್ದು ತರುವುದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿದ್ದ ಅಕ್ಕಿಯನ್ನು ನೋಡಿದ ಲಕ್ಕಮ್ಮ ಮುನಿಸಿಕೊಂಡು

ಆಸೆಯೆಂಬುದು ಅರಸಿಂಗಲ್ಲದೆ
ಶಿವಭಕ್ತರಿಗುಂಟೆ ಅಯ್ಯಾ?
ರೋಷವೆಂಬುದು ಯಮದೂತರಿಗಲ್ಲದೆ
ಅಜಾತರಿಗುಂಟೆ ಅಯ್ಯಾ
ಈಸಕ್ಕಿಯಾಸೆ ನಿಮಗೇಕೆ? ಈಶ್ವರನೊಪ್ಪ
ಮಾರಯ್ಯಪ್ರಿಯ ಅಮರೇಶ್ವರಲಿಂಗಕ್ಕೆ ದೂರ ಮಾರಯ್ಯ

(ಶಿವಶರಣೆಯರ ವಚನ ಸಂಪುಟ, ವಚನ ಸಂಖ್ಯೆ: ೭೮)

ಎಂದು ಪತಿಯನ್ನು ಪ್ರಶ್ನಿಸುತ್ತಾಳೆ. ಈ ಆಸೆ, ರೋಷ ಮುಂತಾದ ಗುಣಗಳು ಶಿವಭಕ್ತರಿಗಲ್ಲ. ಇಂತಹ ದುರಾಸೆ ನಿಮ್ಮಲ್ಲೇಕೆ ಮೂಡಿತು? ದುರಾಸೆಯಿಂದ ತಂದ ಅಕ್ಕಿ ದಾಸೋಹಕ್ಕೆ ಸಲ್ಲದು ಇದನ್ನು ಶಿವ ಒಪ್ಪುವುದಿಲ್ಲ ಎಂದು ತೀಕ್ಷ್ಣವಾಗಿ ಪ್ರತಿಕ್ರಿಯಿಸುತ್ತಾಳೆ. ಸಂಗ್ರಹ ಪ್ರವೃತ್ತಿ ಭವಿಗಳಿಗೆ ಹೊರತು ಶಿವಭಕ್ತರಿಗಲ್ಲ. ಅಸಂಗ್ರಹ ಪ್ರವೃತ್ತಿಯನ್ನು ಪಾಲಿಸಬೇಕಾದದ್ದು ಶಿವಭಕ್ತರ ಧರ್ಮ.

ತ್ರಿವಿಧ ದಾಸೋಹಕ್ಕೆ ಬೇಕಾಗಿರುವುದು ದುರಾಸೆಯಿಂದ ಗಳಿಸಿದ ದ್ರವ್ಯವಲ್ಲ. ಸತ್ಯಶುದ್ಧಿಯಿಂದ ಮಾಡಿದ ಕಾಯಕದಿಂದ ಗಳಿಸಿದ ಪದಾರ್ಥವೇ ಪರಮ ಪವಿತ್ರ ಎಂಬುದು ವಚನಕಾರರ ಅಭಿಮತ. ಮಾನವನ ಅನಂತ ಕಷ್ಟ ಮತ್ತು ದುಃಖಗಳಿಗೆ ಮೂಲವಾಗಿರುವ ದುರಾಸೆಯ ಫಲದಿಂದ ಮನುಷ್ಯ ಸಂಕಷ್ಟಗಳನ್ನು ಎದುರಿಸಿದ್ದಾನೆ ಹಾಗೂ ಎದುರಿಸುತ್ತಿದ್ದಾನೆ. ಬಡವ ಶ್ರೀಮಂತರ ನಡುವಿನ ಅಂತರ ದಿನೇ ದಿನೇ ಹೆಚ್ಚಾಗುತ್ತಿದೆ. ಧನಿಕ ಮತ್ತಷ್ಟು ಧನಿಕನಾಗುತ್ತಿದ್ದಾನೆ ಬಡವ ಮತ್ತಷ್ಟು ಬಡವನಾಗುತ್ತಿದ್ದಾನೆ. ಇದರಿಂದ ದ್ವೇಷ, ಅಸೂಯೆಗಳು ಮಾನವನ ಮನಸ್ಸನ್ನು ಕದಡುತ್ತವೆ. ಇದರಿಂದ ಅಸಮಾನತೆ ಹೆಚ್ಚುತ್ತಿದೆ. ಉಳ್ಳವರು ಮತ್ತು ಇಲ್ಲದವರ ಮಧ್ಯೆ ಅಂತರ ಹೆಚ್ಚಾಗುತ್ತದೆ. ಇಂತಹ ಹಲವು ಸಮಸ್ಯೆಗಳಿಗೆ ಕಾರಣವಾಗಿರುವ ಆಸೆ ಶಿವಭಕ್ತರಲ್ಲಿ ಸುಳಿಯಲೂಬಾರದು ಎನ್ನುವುದು ಲಕ್ಕಮ್ಮನ ಅಭಿಪ್ರಾಯ. ಮಾನವೀಯ ಸಂಬಂಧಗಳನ್ನು ಅಳಿಸಿ ಹಾಕುವಲ್ಲಿ ದುರಾಸೆ ಯಶಸ್ವಿಯಾಗಿದೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ವಚನಕಾರರ ಆಚಾರ ವಿಚಾರಗಳು ಅತ್ಯಂತ ಅವಶ್ಯವಾಗಿವೆ. ಅದರಲ್ಲೂ ಮಾರಯ್ಯ ಮತ್ತು ಲಕ್ಕಮ್ಮನವರ ಕಾಯಕ ನಿಷ್ಠೆ ಮತ್ತು ಅಸಂಗ್ರಹ ಗುಣ ಒಂದು ಆದರ್ಶವಾಗಿದೆ.

ನಿತ್ಯ ಸಂಗ್ರಹಿಸಿ ತರುವ ಅಕ್ಕಿಗಿಂತಲೂ ಅಧಿಕವಾದ ಅಕ್ಕಿಯನ್ನು ತಂದ ಮಾರಯ್ಯ ಎಂದೂ ಕಾಯಕ ಲೋಪವೆಸಗಿದವನಲ್ಲ. ಇಂದೇಕೆ ಈ ರೀತಿ ಮಾಡಿದ ಎಂಬುದು ಲಕ್ಕಮ್ಮನವರ ಚಿಂತೆ ಅಗತ್ಯಕ್ಕಿಂತ ಅಧಿಕವಾದ ಯಾವುದೇ ಪದಾರ್ಥಗಳು ಶಿವನಿಗೆ ಅನರ್ಪಿತ ಎಂದು ಭಾವಿಸಿದ ಲಕ್ಕಮ್ಮ ಉಳಿದ ಅಕ್ಕಿಯನ್ನು ಅಲ್ಲಿಯೇ ಸುರಿದು ಬನ್ನಿ ಎಂದು ಯಾವ ಅನುಮಾನಕ್ಕೂ ಎಡೆಯಿಲ್ಲದಂತೆ ಹೇಳುತ್ತಾಳೆ.

ಒಮ್ಮನವ ಮೀರಿ ಇಮ್ಮನದಲ್ಲಿ ತಂದಿರಿ
ಇದು ನಿಮ್ಮ ಮನವೋ ಬಸವಣ್ಣನವರ ಅನುಮಾನದ ಚಿತ್ತವೋ?
ಈ ಮಾತು ಮಾರಯ್ಯಪ್ರಿಯ ಅಮಲೇಶ್ವರಲಿಂಗಕ್ಕೆ ಸಲ್ಲದ ಬೋನ
ಅಲ್ಲಿಯೆ ಸುರಿದು ಬನ್ನಿ ಮಾರಯ್ಯ

(ಶಿವಶರಣೆಯರ ವಚನ ಸಂಪುಟ, ವಚನ ಸಂಖ್ಯೆ: ೬೩೦)

ನಿತ್ಯವೂ ಆಯ್ದು ತರುತ್ತಿದ್ದ ಅಕ್ಕಿಯ ಪ್ರಮಾಣಕ್ಕಿಂತಲೂ ದುಪ್ಪಟ್ಟು ಅಕ್ಕಿಯನ್ನು ತಂದ ಮಾರಯ್ಯ ಲಕ್ಕಮ್ಮನ ಬೇಸರ ಮತ್ತು ಅನುಮಾನಗಳಿಗೆ ಕಾರಣವಾಗುತ್ತಾನೆ. ದವಸ ಧಾನ್ಯಗಳನ್ನು ಸಂಗ್ರಹಿಸುವದು ಅಪರಾಧ. ದುಡಿಯದೆ, ದೇಹ ಬಳಲಿಸದೆ ಭೋಗವಿಲಾಸದಲ್ಲಿ ಮುಳುಗಿರುವ ಧನಿಕರು ಅನೇಕ ಮಾನಸಿಕ ಮತ್ತು ದೈಹಿಕ ಸಮಸ್ಯೆಗಳಿಂದ ಬಳಲುತ್ತಿದ್ದಾರೆ. ಹೀಗಿರುವಾಗ ಮನುಷ್ಯರು ದುಡಿದು ಗಳಿಸುವುದು ಜೀವಿಸುವುದು ಅತ್ಯಗತ್ಯ. ಇಂತಹ ದುಡಿಯುವ ಶ್ರಮಜೀವಿಗಳು ದೈಹಿಕ ಮತ್ತು ಮಾನಸಿಕ ಆರೋಗ್ಯದಿಂದ ಇರುತ್ತಾರೆ. ಧರ್ಮ ಮಾರ್ಗವನ್ನು ತುಳಿಯದೆ ವಾಮಮಾರ್ಗದಲ್ಲಿ ಸಂಪಾದಿಸಿದ ಪದಾರ್ಥಗಳಿಂದ ದಾಸೋಹ ಮಾಡಿದರೆ ಅದು ಅನಾಚಾರ ವೆನಿಸುತ್ತದೆ. ಆದ್ದರಿಂದ ದುರಾಸೆಯಿಂದ ಸುಲಭವಾಗಿ ತಂದ ಅಧಿಕ ಅಕ್ಕಿಯನ್ನು ಅಲ್ಲಿಯೇ ಸುರಿದು ಬನ್ನಿ ಎಂದು ಲಕ್ಕಮ್ಮ ಮಾರಯ್ಯನನ್ನು ಆಗ್ರಹಿಸುತ್ತಾಳೆ.

ಸಂದಣಿಗೊಂಡು ಮನಹರುಷದಿಂದ ಬಸವಣ್ಣನ ಅಂಗಳಕ್ಕೆ ಹೋಗಿ.
ತಿಪ್ಪೆಯ ತಪ್ಪಲಲ್ಲಿ ಬಿದ್ದಿದ್ದ ತಂಡುಲವ ಕಟ್ಟಿಕೊಂಡು.
ಎಯಿದಾಗಿ ತರಲು ಎಯಿದಾಗಿ ಬಂದಿತ್ತಲ್ಲಾ
ನಮಗೆ ಎಂದಿನಂದವೆ ಸಾಕು
ಮತ್ತೆ ಕೊಂಡು ಹೋಗಿ ಅಲ್ಲಿಯೇ ಸುರಿ
ಮಾರಯ್ಯ ಪ್ರಿಯ ಅಮರೇಶ್ವರ ಲಿಂಗ ಕೊಟ್ಟ
ಕಾಯಕವೆ ಸಾಕು ಮಾರಯ್ಯ

(ಶಿವಶರಣೆಯರ ವಚನ ಸಂಪುಟ, ವಚನ ಸಂಖ್ಯೆ: ....)

ಹೀಗೆ ಹೇಳುವ ಮೂಲಕ ದುರಾಸೆಯನ್ನು ತುಂಬಿಕೊಂಡವನು ಭಕ್ತನೆನಿಸುವುದಿಲ್ಲ ಎನ್ನುವ ಆ ಅಧಿಕ ಅಕ್ಕಿಯನ್ನು ಆ ತಿಪ್ಪೆಯ ತಪ್ಪಲಲ್ಲೆ ಸುರಿದು ಬಾ ನಮಗೆ ಎಂದಿನದೇ ಸಾಕು ಎನ್ನುತ್ತಾಳೆ. ದಾಸೋಹಕ್ಕೆ ಅತಿಯಾದ ಪಡಿ ಪದಾರ್ಥಗಳಿಂದ ಮಾಡುವ ಸೇವೆಯಿಂದ ಯಾವ ಪ್ರಯೋಜನವಾಗಲಾರದು ಆಡಂಬರದ ಬಹಿರಂಗ ಪೂಜೆ ಅಥವಾ ತೋರಿಕೆಗಾಗಿ ಮಾಡುವ ಯಾವುದೇ ರೀತಿಯ ಪೂಜೆ, ಧ್ಯಾನ, ದಾಸೋಹಗಳು ವ್ಯರ್ಥ ಎನ್ನುತ್ತಾರೆ.

ಹೀಗೆ ತೋರಿಕೆಗಾಗಿ ಮಾಡುವ ಆಡಂಬರದ ಯಾವುದೇ ಧಾರ್ಮಿಕ ಆಚರಣೆಗಳಿಂದ ಫಲವಿಲ್ಲ. ಇದರಿಂದ ಹಣ, ದ್ರವ್ಯದ ಅಪವ್ಯಯವಾಗುತ್ತದೆ. ಚಿತ್ತಶುದ್ಧಿ ಮತ್ತು ದೃಢ ಭಕ್ತಿಯಿಲ್ಲದ ಯಾವುದೇ ಆಧ್ಯಾತ್ಮಿಕ ಆಚರಣೆಗಳಿಂದ ಯಾವ ರೀತಿಯ ಫಲ ಲಭಿಸುವುದಿಲ್ಲ.

ಮನ ಶುದ್ಧವಿಲ್ಲದವಂಗೆ ದ್ರವ್ಯದ ಬಡತನವಲ್ಲದೆ
ಚಿತ್ತಶುದ್ಧದಲ್ಲಿ ಕಾಯಕವ ಮಾಡುವಲ್ಲಿ
ಸದ್ಭಕ್ತಂಗೆ ಎತ್ತ ನೋಡಿದಡತ್ತ ಲಕ್ಷ್ಮಿ ತಾನಾಗಿಪ್ಪಳು
ಮಾರಯ್ಯ ಪ್ರಿಯ ಅಮರೇಶ್ವರಲಿಂಗದ ಸೇವೆಯುಳ್ಳನ್ನಕ್ಕ

(ಶಿವಶರಣೆಯರ ವಚನ ಸಂಪುಟ, ವಚನ ಸಂಖ್ಯೆ: ೬೪೩)

ಹೀಗೆ ಚಿತ್ತಶುದ್ಧವಿಲ್ಲದವರಿಗೆ ಅವರು ಎಲ್ಲಿದ್ದರೂ ಬಡತನ ಅವರನ್ನು ಚಿತ್ತಶುದ್ಧಿಯಿಂದ ನಿತ್ಯಕಾಯಕ ಮಾಡುವ ಶರಣರಿಗೆ ಇದ್ದಲ್ಲೇ ಲಕ್ಷ್ಮಿ ಅಂದರೆ ಸಂಪತ್ತು ಪ್ರಾಪ್ತವಾಗುತ್ತದೆ ಎಂದು ಪತಿ ಮಾರಯ್ಯನಲ್ಲಿದ್ದ ಸಂದೇಹವನ್ನು ದೂರಮಾಡಿ, ಧೈರ್ಯ ತುಂಬುತ್ತಾಳೆ. ಇಲ್ಲಿ ಲಕ್ಕಮ್ಮನ ಕಾಯಕನಿಷ್ಠೆ ಮತ್ತು ಆತ್ಮವಿಶ್ವಾಸವನ್ನು ಮೆಚ್ಚಲೇಬೇಕು. ಲಕ್ಕಮ್ಮನ ಉತ್ತರದಿಂದ ಸಂತಸಗೊಂಡ ಮಾರಯ್ಯ ಬಸವಣ್ಣನ ಮನೆಗೆ ಹೋಗಿ ಅಲ್ಲಿದ್ದ ಬಸವಣ್ಣ ಮತ್ತು ಇತರ ಶರಣರಿಗೆ ಈ ರೀತಿಯಾಗಿ ಆಹ್ವಾನ ನೀಡುತ್ತಾನೆ.

ಸತ್ಯವೆಂಬ ತಟ್ಟೆಯಲ್ಲಿ, ಚಿತ್ತಶುದ್ಧಿಯೆಂಬ ವಿಭೂತಿಯ ಬೈಚಿಟ್ಟು
ಸಕಲ ಸಂಪದ ಪ್ರಮಥರು ಮುಂತಾಗಿ
ಅಮರೇಶ್ವರಲಿಂಗದ ಆಶ್ರಯಕ್ಕೆ ಪ್ರಸಾದವ ಕೊಂಬುದಕ್ಕೆ
ಬಾ ಬಸವಣ್ಣ

(ಶಿವಶರಣೆಯರ ವಚನ ಸಂಪುಟ, ವಚನ ಸಂಖ್ಯೆ: ೧೯೭)

ಹೀಗೆ ಶರಣ ಸಮೂಹವನ್ನು ಅಮರೇಶ್ವರ ಲಿಂಗದ ಮನೆಗೆ ಆಹ್ವಾನಿಸಿ ಬಂದ ಮೇಲೆ ಬಸವಣ್ಣ, ಚೆನ್ನಬಸವಣ್ಣ, ಅಲ್ಲಮ ಪ್ರಭು ಮುಂತಾದ ಅಸಂಖ್ಯಾತ ಪ್ರಮಥರು ಮಾರಯ್ಯನವರ ಅಮರೇಶ್ವರ ಲಿಂಗದ ಮನೆಗೆ ಬರುತ್ತಾರೆ. ದಾಸೋಹದಲ್ಲಿ ಭಾಗವಹಿಸುತ್ತಾರೆ. ಇದರಿಂದ ಅವರ ಚಿಂತನೆಗಳನ್ನು ಶ್ರಮವನ್ನು ಒಪ್ಪಿ ಬದುಕುವ ರೀತಿಯನ್ನು ನೋಡಬಹುದು.

ಲೋಕದ ಕಣ್ಣಲ್ಲಿ ಮಾರಯ್ಯ ದಂಪತಿಗಳು ಸಾಮಾನ್ಯರಲ್ಲಿ ಸಾಮಾನ್ಯರು ಬಡವರು. ಯಾವ ಸಂಪತ್ತಿಗೂ ಒಡೆಯರಲ್ಲ. ಆದರೆ ಆಧ್ಯಾತ್ಮಿಕ ಸಾಧನೆಯ ಸಾದಕರು. ಅವರ ಸತ್ಯಶುದ್ಧ ಕಾಯಕದ ಅಸದೃಶ್ಯವಾದುದು. ಇಂತಹ ಪವಾಡವನ್ನು ಮೆರೆದು ಬಸವಣ್ಣ, ಅಲ್ಲಮಪ್ರಭುಗಳಿಗೆ ಅಚ್ಚರಿಯನ್ನುಂಟು ಮಾಡುತ್ತಾರೆ. ಆದರೂ ತಮ್ಮ ಆಧ್ಯಾತ್ಮಿಕ ಸಾಧೆಯ ಬಗ್ಗೆ ಯಾವ ಹೆಗ್ಗಳಿಯೂ ಇಲ್ಲದೆ ಹೀಗೆ ನುಡಿದಿರುವುದನ್ನು ಕಾಣುತ್ತೇವೆ.

ಎನಗೆ ಮನೆ ಇಲ್ಲ, ಎನಗೆ ಧನವಿಲ್ಲ
ಮಾಡುವುದೇನು ನೀಡುವುದೇನು
ಮನೆ ಧನ ಸಕಲ ಸಂಪದ ಸೌಖ್ಯವುಳ್ಳ
ನಿಮ್ಮ ಶರಣರ ತಪ್ಪಲಕ್ಕಿಯನಾಯ್ದು ತಂದು,
ಎನ್ನೊಡಲ ಹೊರೆವೆನಾಗಿ
ಅಮರೇಶ್ವರಲಿಂಗಕ್ಕೆ ನೀಡುವ ಬಯಕೆ ಎನಗಿಲ್ಲ ಸಂಗನ ಬಸವಣ್ಣ
(ಸಂಕೀರ್ಣ ವಚನ ಸಂಪುಟ ೧, ವಚನ ಸಂಖ್ಯೆ: ೧೧೬೮)

ಇಂತಹ ವಿನಯಶೀಲತೆಯನ್ನು ಬೆಳೆಸಿಕೊಂಡಿರುವ ಮಾರಯ್ಯ ಎಲ್ಲರಿಗೂ ಮಾರ್ಗದರ್ಶಿಯಾಗಿದ್ದಾನೆ. ಸತ್ಯ ಶುದ್ಧ ಕಾಯಕಜೀವಿ ಮಾರಯ್ಯನ ಜಂಗಮ ಸೇವೆಯನ್ನು ಪ್ರಶಂಸಿಸಿದ ಬಸವಣ್ಣ "ನಾ ನಡೆವುದೆಲ್ಲಾ ಅನಚಾರ, ನಾ ನುಡಿವುದೆಲ್ಲಾ ಅವಿಚಾರ, ನಡೆ ನುಡಿ ಶುದ್ಧವಿಲ್ಲದ ಅಪವಿತ್ರನ ತಂದು ನಿಮ್ಮೊಕ್ಕುದನಿಕ್ಕಿಸಲದಿರಾಗಿ ಎನಗಿನ್ನಾವ ಭಯವೂ ಇಲ್ಲ ಕೂಡಲಸಂಗಮ ದೇವರ ಸಾಕ್ಷಿಯಾಗಿ ಆಯ್ದಕ್ಕಿ ಮಾರಯ್ಯನ ಮನೆಯ ಮಗ ನಾನು" ಎಂದು ವಿನಯದಿಂದ ಮಾರಯ್ಯನ ವ್ಯಕ್ತಿತ್ವವನ್ನು ಹೊಗಳುವ ಮೂಲಕ ತಮ್ಮ ವಿನಯಶೀಲ ವ್ಯಕ್ತಿತ್ವವನ್ನು ತೋರುತ್ತಾನೆ.

ತ್ರಿವಿಧ ದಾಸೋಹ ಆಧ್ಯಾತ್ಮಿಕ ಸಾಧನೆಗೆ ದಾರಿ. ಸತ್ಯ ಶುದ್ಧ ಕಾಯಕದ ಮೂಲಕ ಗಳಿಸಿದ ಪಡಿಪದಾರ್ಥಗಳು ಅರ್ಪಿತವಾಗಬೇಕು. ಸತ್ಯಮಾರ್ಗದಲ್ಲಿ ನಿತ್ಯ ಕಾಯಕ ಮಾಡುವ ಶರಣರಿಗೆ ಯಾವುದೇ ರೀತಿಯ ಪ್ರತಿಫಲಾಪೇಕ್ಷೆ ಇರಲಾರದು. ಹಾಗೆಯೇ ಕೈಲಾಸದ ಕನಸು ಪದವಿಯ ಮೋಹ. ಒಮ್ಮೆ ಆಯ್ದಕ್ಕಿ ಮಾರಯ್ಯನ ಮನಸ್ಸು ಕೈಲಾಸದ ಕನಸು ಪದವಿಯ ಮೋಹ. ಒಮ್ಮೆ ಆಯ್ದಕ್ಕಿ ಮಾರಯ್ಯನ ಮನಸ್ಸು ಕೈಲಾಸದ ಹಂಬಲವನ್ನು ವ್ಯಕ್ತಪಡಿಸಿದಾಗ ಗಂಡನ ಆಸೆಯನ್ನು ಕುರಿತು ಶರಣೆ ಲಕ್ಕಮ್ಮ ಈ ರೀತಿ ಪ್ರತಿಕ್ರಿಯಿಸುತ್ತಾಳೆ.

ಮಾಡುವ ಮಾಟವುಳ್ಳನ್ನಕ್ಕ
ಬೇರೊಂದು ಪದವನರಸಲೇತಕ್ಕೆ?
ದಾಸೋಹವೆಂಬ ಸೇವೆಯ ಬಿಟ್ಟು

ನೀಸಲಾರದೆ ಕೈಲಾಸವೆಂಬ ಆಸೆ ಬೇಡ
ಮಾರಯ್ಯಪ್ರಿಯ ಅಮಲೇಶ್ವರಲಿಂಗವಿದ್ದ ಠಾವೆ ಕೈಲಾಸ
(ಶಿವಶರಣೆಯರ ವಚನ ಸಂಪುಟ, ವಚನ ಸಂಖ್ಯೆ: ೭೪೫)

ಎಲ್ಲಿಗೆ ಹೋಗಬೇಕೆಂದಿರುವೆ ಮಾರಯ್ಯ? ಕೈಲಾಸಕ್ಕೆ ಹೋಗಬೇಕೆಂಬ ಆಸೆಯೇಕೆ? ಎಲ್ಲಿದೆ ಕೈಲಾಸ? ನೀನು ಮಾಡುವ ಕಾಯಕದಲ್ಲಿ ದಾಸೋಹದಲ್ಲಿಲ್ಲದ ಕೈಲಾಸ ಇನ್ನೆಲ್ಲಿದೆ ಇಲ್ಲಿ ನಾವು ಮಾಡಬೇಕಾದ ಕಾಯಕವೇ ಸಾಕಷ್ಟು ಇರುವಾಗ ಕೈಲಾಸದ ಬಯಕೆಯೇಕೆ? "ಮಾಡಿ ನೀಡಿ ಹೋಂದೆನೆಂಬಾಗ ಕೈಲಾಸವೇನು ಕೈಕೂಲಿಯೆ? ಮುಂದೊಂದ ಕಲ್ಪಿಸದೆ, ಹಿಂದೊಂದ ಭಾವಿಸದೆ ಸಂತಿಸಂದಿದ್ದಾಗವೆ ಮಾರಯ್ಯ ಪ್ರಿಯ ಅಮಲೇಶ್ವರಲಿಂಗ ವಿದ್ದಾ ಠಾವೆ ಕೈಲಾಸ"ವೆಂದು ಕಾಯಕ ತತ್ವವನ್ನು ನಿರೂಪಿಸಿದ ಮಾರಯ್ಯನಿಗೆ ನಿತ್ಯ ಕಾಯಕದಲ್ಲಿ ತೊಡಗಿದ್ದು ಕೈಲಾಸ ಬಯಸಿದ ಮಾರಯ್ಯನಿಗೆ ಅಮಲೇಶ್ವರ ಲಿಂಗವಿದ್ದ ಠಾವೆ ಕೈಲಾಸವೆಂದು ಮನವರಿಕೆ ಮಾಡಿಕೊಡುತ್ತಾಳೆ. ಹೀಗೆ ಲಕ್ಕಮ್ಮ ಗಂಡನಿಗೆ ಅತ್ಯಂತ ನಿಷ್ಟುರವಾಗಿ ಕಾಯಕ ಮತ್ತು ದಾಸೋಹಗಳ ವಿಚಾರಗಳಲ್ಲಿ ದಾರಿತಪ್ಪಿದರೂ ತಿದ್ದಿ ತೀಡಿ ಸತ್ಯಪಥದಲ್ಲಿ ಕರೆದೊಯ್ಯುತ್ತಿದ್ದಳು.

ಗಾಣದ ಕಣ್ಣಪ್ಪ.

ಮೀನುಗಾರಿಕೆಯ ವೃತ್ತಿಯನ್ನು ಮಾಡುವ ಬೆಸ್ತರ ಜಾತಿಯವನಾದ ಕಣ್ಣಪ್ಪ ಗಾಣದ ಎಂಬ ವೃತ್ತಿ ವಿಶೇಣದಿಂದಲೇ ಗುರುತಿಸಿಲಾಗುತ್ತದೆ. ಅನೇಕ ವೃತ್ತಿ ಮೂಲದಿಂದ ಬಂದ ವಚನಕಾರರಂತೆ ಈತನು ಸಹ ವಚನ ಆಂದೋಲನದಲ್ಲಿ ಭಾಗವಹಿಸಿ, ಅನುಭವ ಮಂಟಪದ ಸದಸ್ಯನಾಗಿದ್ದಾನೆ. ಅಲ್ಲಿನ ಚರ್ಚೆ ಸಂವಾದಗಳಲ್ಲಿ ಭಾಗವಹಿಸಿ ಅನುಭವವನ್ನು ವೃತ್ತಿಯಿಂದ ಬಂದದ್ದಾಗಿರಬಹುದು, ಜೀವನದಿಂದ ಕಂಡುಕೊಂಡದ್ದಾಗಿರಬಹುದು. ಇದನ್ನೆ ಅನುಭಾವವಾಗಿಸಿ ಕೊಂಡು ಶರಣನೆನೆಸಿಕೊಂಡಿದ್ದಾನೆ. ಈತ ವಚನಗಳ ರಚನೆಯನ್ನು ಮಾಡಿದ್ದು, ಅವುಗಳ ಮೂಲಕ ಶ್ರೇಷ್ಠ ಅನುಭಾವಿಗಳ, ವಚನಕಾರರ ಸಾಲಿನಲ್ಲಿ ನಿಲ್ಲುತ್ತಾನೆ. ಈತನ ಅನೇಕ ವಚನಗಳು ಬೆಡಗಿನ ಶೈಲಿಯನ್ನೊಳಗೊಂಡಿವೆ. ಅಭಿವ್ಯಕ್ತಿ ಸ್ವರೂಪವು ಹಲವು ಆಯಾಮಗಳಲ್ಲಿ ವಿಸ್ತೃತ ಸ್ವರೂಪವನ್ನು ಪಡೆದುಕೊಂಡಿವೆ. ಈತನ ಅಂಕಿತ ಗುಹೇಶ್ವರನ ಶರಣ ಅಲ್ಲಮ ಎಂಬುದಾಗಿದ್ದು, ಅಲ್ಲಮಪ್ರಭುವಿನ ನೇರ ಪ್ರಭಾವಕ್ಕೆ ಒಳಗಾಗಿದ್ದು ಈತನ ವಚನಗಳ ಅಭಿವ್ಯಕ್ತಿಯನ್ನು ನೋಡಿ ಗುರುತಿಸಬಹುದಾಗಿದೆ. ಅಲ್ಲದೆ ಪ್ರತಿಯೊಬ್ಬ ವೃತ್ತಿನಿರತ ವಚನಕಾರರಂತೆ ಸ್ವಾತಂತ್ರ್ಯತೆ, ಅರಿವಿನ ಹುಡುಕಾಟ, ಆಧ್ಯಾತ್ಮದ ಸೆಳೆತ, ಸಾಧನೆಯ ಮನೋಭಾವವು ಈತನ ವಚನಗಳಲ್ಲಿರುವುದು ಕಾಣುತ್ತೇವೆ. ಈತನ ವಚನದಲ್ಲಿ ತನ್ನ ವೃತ್ತಿಗೆ ಸಂಬಂಧಿಸಿದ ಪರಿಕರಗಳ ವೃತ್ತಿ ಪರಿಭಾಷೆಯನ್ನೆ ಬಳಸಿ ವಚನವನ್ನು ಅಭಿವ್ಯಕ್ತಿಸಿದ್ದಾನೆ.

ಗಾಣವ ಹಾಕಲಾಗಿ ಆರಾರು ಸಿಕ್ಕಿದರು ಆರೈಕೆಗೊಳ್ಳಯ್ಯ,
ಐದಕ್ಕೊಂದು ಹೋಗಿ ನಾಲ್ಕರಲ್ಲಿ ನಾಚಿಕೆಗೆಟ್ಟು
ಜಗದಾಶೆಯ ಬಯಕೆಯಿಂದ ದಶಾವತಾರವಾದ,

ಇಷ್ಟದ ಇಂದ್ರಿಯಕ್ಕಾಗಿ ಪಾಶವ ಹೊತ್ತ ತಲೆಯಲ್ಲಿ
ಇಂತಿ ವೇಷಧಾರಿ ಹಾಕಿ ಗಾಣದಲ್ಲಿ ಇಷ್ಟಕ್ಕೆ ಸಿಕ್ಕಿ
ಘಾಸಿಯಾದರೂ ಇನ್ನಿಪ್ಪುವರಾರಯ್ಯಾ
ಗುಹೇಶ್ವರನ ಶರಣ ಅಲ್ಲಮನಲ್ಲದೆ?

(ಶಿವಶರಣೆಯರ ವಚನ ಸಂಪುಟ ೨, ವಚನ ಸಂಖ್ಯೆ: ೨೬೪)

ಕಣ್ಣಪ್ಪನ ಈ ವಚನ ಬೆಡಿಗನ ಶೈಲಿಯದ್ದಾಗಿದೆ. ಈ ವಚನದಲ್ಲಿ ಅಡಕಗೊಂಡಿರುವ ಚಿಂತನೆ, ತತ್ವವು ಕೂಡ ಬೆರಗೂ ಮೂಡಿಸುವ, ಬೆಡಗಿನದ್ದಾಗಿದೆ. ಮನುಷ್ಯ ಜೀವನದ ಮೇಲೆ ಬರೆದ ನಶ್ವರವಾದ ಸಿದ್ಧಾಂತವಾಗಿದೆ. ಮನದಲ್ಲಿರುವ ಮಾಯೆಯ ಸ್ವರೂಪವನ್ನು ಬಿಡಿಸಿ ತೋರಿಸಿದಂತಿದೆ. ಈ ವಚನದಲ್ಲಿ ಕಣ್ಣಪ್ಪನ ಮೀನುಗಾರಿಕೆ ವೃತ್ತಿಯ ಪರಿಕರವಾದ 'ಗಾಣ' ಎಂಬ ಪದ ಪ್ರಯೋಗ ಆಧ್ಯಾತ್ಮದ ಅರ್ಥವಂತಿಕೆಯನ್ನು ಪಡೆದು ಅಭಿವ್ಯಕ್ತಗೊಳ್ಳುತ್ತದೆ. ಪ್ರಪಂಚದಲ್ಲಿ ಮಾನವ ಜೀವನದ ಹಂಗಿಗೆ ಸಿಲುಕಿಕೊಂಡು ನಲುಗುವ ಸ್ಥಿತಿಯನ್ನು ತೋರಿಸುವುದಾಗಿದೆ. ಸಂಸಾರವನ್ನು ಗಾಣಕ್ಕೆ ಹೋಲಿಕೆ ಮಾಡಿಯೇ ಅಭಿವ್ಯಕ್ತಿ ಮಾಡುತ್ತಾನೆ. ಈತನ ಅನೇಕ ವಚನಗಳಲ್ಲಿ ಬೇಟೆಯ ಪ್ರತಿಮೆಗಳು ಬರುತ್ತವೆ. ಈ ಮೇಲಿನ ವಚನದಲ್ಲಿ 'ಗುಹೇಶ್ವರನ ಶರಣ ಅಲ್ಲಮನಲ್ಲದೆ?' ಎಂಬ ಪ್ರಶ್ನೆ ಬರುತ್ತದೆ. ಇಲ್ಲಿ ಮುಖ್ಯವಾಗಿ ಆತನ ಅಭಿವ್ಯಕ್ತಿಯನ್ನು ಗುರುತಿಸಬಹು ದಾಗಿದೆ. ಮೇಲಿನ ಸಾಲುಗಳಲ್ಲಿ ವಿವರಣೆಗಳನ್ನು ನೀಡುತ್ತ ಬರುತ್ತಾನೆ. ಇಲ್ಲಿರುವ ಒಂದು ಚರ್ಚೆಯನ್ನು ಗಮನಿಸಬಹುದು. ಯಾರು ಗಾಣಕ್ಕೆ ಸಿಲುಕಿದ್ದಾರೆ. ಯಾರು ಗಾಣದಿಂದ ತಪ್ಪಿಸಿಕೊಂಡಿದ್ದಾರೆ. ಸಂಸಾರದ ಗಾಣವಿರಬಹುದು. ಜೀವನದ ಸೀಮಿತತೆ ಇರಬಹುದು. ಅನುಭಾವಿಕತೆಯ ಅನುಸಂದಾನದ ವಿಷಯವೇ ಆಗಿರಬಹುದು. ಹೀಗೆ ವಿವರಣೆಯನ್ನು ನೀಡುತ್ತ 'ಜಗದಾಶೆಯ ಬಯಕೆಯಿಂದ ದಶವತಾರವಾದ' ಈ ಸಾಲನ್ನು ಗಮನಿಸಿದಾಗ ಪುರಾಣಗಳ ಪ್ರಸಂಗವನ್ನು ಸಾಂದರ್ಭಿಕವಾಗಿ ಬಳಸಿಕೊಂಡು, ಅದನ್ನು ಸೂಕ್ಷ್ಮವಾಗಿ ವ್ಯಂಗಕ್ಕೀಡು ಮಾಡುವುದನ್ನು ಮತ್ತು ಅದರ ನಿರುಪಯುಕ್ತತೆಯನ್ನು ಹೇಳುವ ಪ್ರಯತ್ನವನ್ನು ನೋಡುತ್ತೇವೆ. ಇನ್ನೂ ಮುಂದಿನ ಸಾಲಿನಲ್ಲಿ 'ವೇಷದಾರಿ ಹಾಕಿದ ಗಾಣದಲ್ಲಿ ಇಷ್ಟಕ್ಕೆ ಸಿಕ್ಕಿ ಘಾಸಿಯಾದರು ಇನ್ನಿಪ್ಪುವರಾರಯ್ಯ' ಎಂಬ ಪ್ರಶ್ನೆಯು ಬರುತ್ತದೆ. ಪ್ರಪಂಚದಲ್ಲಿ 'ಇಷ್ಟ'ಕ್ಕೆ ಆಸೆಯಾಮಿಷಗಳಿಗೆ ಸಿಕ್ಕಿಹಾಕಿಕೊಂಡವರೆ ಎಲ್ಲಾ. ಇಲ್ಲ ಆಸೆಯಾಚೆಗಿನ ಬದುಕು ಒಂದಿದೆ ಅದನ್ನು ಸ್ವೀಕರಿಸಿದವರು ಯಾರು ಇಲ್ಲ. ಇದ್ದರೆ ಶರಣರು ಮಾತ್ರ ಎಂಬ ಅಲ್ಲಮನ ಮೂಲಕ ಇಡಿ ವಚನ ಸಮುದಾಯದ ಚಿಂತನೆಗಳನ್ನು ಅಭಿವ್ಯಕ್ತಿಸುತ್ತಾನೆ.

ಕಣ್ಣಪ್ಪನ ಅನೇಕ ವಚನಗಳಲ್ಲಿ ತನ್ನತನದ ಹುಡುಕಾಟವಿರುವುದನ್ನು ಗುರುತಿಸಬಹುದಾಗಿದೆ. ಕೆಳವರ್ಗದ ವೃತ್ತಿನಿರತರನೊಬ್ಬನ ಅಭಿವ್ಯಕ್ತಿಗೂ, ಮೇಲ್ವರ್ಗದ ವಚನಕಾರನ ಅಭಿವ್ಯಕ್ತಿಗೂ ಹಲವು ಅಸಾಮ್ಯತೆಗಳನ್ನು ಕಣ್ಣಪ್ಪನ ವಚನಗಳಲ್ಲಿ ಗುರುತಿಸಬಹುದಾಗಿದೆ. ಈಗಾಗಲೇ ಹೇಳಿರುವಂತೆ ಬೆಡಗಿನ ಸ್ವರೂಪದಲ್ಲಿರುವ ಈತನ ವಚನಗಳಲ್ಲಿ ಅನುಭವವನ್ನು, ಅನುಭಾವವಾಗಿಸಿರುವುದನ್ನು ಗುರುತಿಸುತ್ತೇವೆ. ಈತ ತನ್ನ ವೃತ್ತಿ ಭಾಷೆಯನ್ನು ಬಳಸಿಕೊಂಡು ರಚಿಸಿರುವ ವಚನ ಒಂದೆ

ಒಂದು. ಉಳಿದಂತೆ ಸಾಮಾಜಿಕವಾಗಿ ಬಳಕೆಗೊಂಡರೂ ಅಪೂರ್ವ ಅನುಭಾವವನ್ನು ಕಟ್ಟಿಕೊಡುತ್ತವೆ. ವೃತ್ತಿಯ ಬಗೆಗಿನ ಆತನ ನಿಲುವುಗಳನ್ನು ವಚನಗಳ ಮೂಲಕ ಅರಿಯುತ್ತೇವೆ. ಇನ್ನು ಅನೇಕ ವಚನಗಳನ್ನು ಅಭಿವ್ಯಕ್ತಿಸಿರುವ ಬಗೆಯನ್ನು ಗಮನಿಸಿದರೆ ವಚನಕಾರರ ತತ್ವವಾದ ಜೀವನವನ್ನು ಸ್ವೀಕರಿಸುವುದು, ಮತ್ತು ಅಲ್ಲಿಂದಲೇ ಸಾಧನೆಯನ್ನು ಮಾಡುವುದು ಸ್ಪಷ್ಟವಾಗುತ್ತದೆ.

ಮಡಿವಾಳ ಮಾಚಯ್ಯ

ವಚನಕಾರಲ್ಲೇ ಉಗ್ರ ಸ್ವಭಾವದ ವ್ಯಕ್ತಿ ಎಂದು ಗುರುತಿಸಲಾಗಿರುವ ವ್ಯಕ್ತಿತ್ವ ಮಡಿವಾಳ ಮಾಚಯ್ಯನದು. ಈತನ ಹೆಸರಿನ ಹಿಂದೆ ಇರುವ ವಿಶೇಷಣವೇ ಈತನ ವೃತ್ತಿಯನ್ನು ತಿಳಿಸಿ ಬಿಡುತ್ತದೆ. ಶಿವಭಕ್ತರ, ಶರಣರ ವಚನಗಳನ್ನು ರಕ್ಷಿಸುವ ಜವಾಬ್ದಾರಿಯನ್ನು ಹೊತ್ತು, ಕಲ್ಯಾಣ ಕ್ರಾಂತಿಯ ನಂತರ ಮತ್ತು ಕಲ್ಯಾಣ ಕ್ರಾಂತಿಯ ಸಮಯದಲ್ಲಿ ಮಹತ್ವದ ಪಾತ್ರ ವಹಿಸಿದ್ದಾನೆಂದು ವಿದ್ವಾಂಸರು ಗುರುತಿಸಿದ್ದಾರೆ. ಕಾಯಕನಿಷ್ಠೆಗೆ ಹೆಸರಾದ ಈತ ಶಿವಭಕ್ತರಲ್ಲದ ಭವಿಗಳ ಬಟ್ಟೆಗಳನ್ನು ಮಡಿ ಮಾಡಲಾರೆ ಎಂದು ತನ್ನ ವೃತ್ತಿನಿಷ್ಠೆಯನ್ನು ಮೆರೆಯುತ್ತಾನೆ. ಇದರಿಂದ ಬಿಜ್ಜಳನನ್ನು ವಿರೋಧಿಸುವ ಮಟ್ಟಿಗೆ ತನ್ನ ನಿಷ್ಠೆಯನ್ನು, ವೃತ್ತಿಶ್ರೇಷ್ಠತೆಯನ್ನು ನೆಲೆಗೊಳಿಸುತ್ತಾನೆ. ಈತನ ವೃತ್ತಿನಿಷ್ಠತೆಯನ್ನು ಬಸವಣ್ಣ, ಅಲ್ಲಮ, ಚನ್ನಬಸವಣ್ಣ, ಅಕ್ಕಮಹಾದೇವಿ, ಸಿದ್ದರಾಮ ಮುಂತಾದ ವಚನಕಾರರು ಸ್ತುತಿಸಿದ್ದಾರೆ, ಸ್ಮರಿಸಿದ್ದಾರೆ. ಆದ್ದರಿಂದ ಈತನ ಪ್ರಭಾವವನ್ನು ಅರಿಯಬಹುದು. ವಚನಗಳನ್ನು ರಚಿಸಿ ಅವುಗಳ ಮೂಲಕ ಅನುಭಾವ ಸಿದ್ಧಾಂತವನ್ನು ನೆಲೆಗೊಳಿಸುವ ವಚನಕಾರರ ಕೆಲಸದಲ್ಲಿ ಈತನು ಪಾಲುದಾರನಾಗಿ ಅನೇಕ ವಚನಗಳನ್ನು ರಚಿಸಿ ಅನುಭಾವಿಕ ನೆಲೆಯ ಮುಖ್ಯ ಪ್ರವರ್ತಕ ಸ್ಥಾನವನ್ನು ಅಲಂಕರಿಸಿದ್ದಾನೆ. ಮಾಚಯ್ಯನ ವಚನಗಳು ವಿವಿಧ ಆಯಾಮವನ್ನೊಳ ಗೊಂಡಿದ್ದು, ಸಂಶೋಧನೆಗೆ ಆಕರಗಳಾಗಿವೆ. ಮತ್ತು ಆತನ ಅಭಿವ್ಯಕ್ತಿಯ ಸ್ವರೂಪವು ಕೂಡ ಒಂದೆ ಮಾರ್ಗವನ್ನು ಅನುಸರಿಸದೆ ಸಮಾಜದ ವಿವಿಧ ಮಜಲುಗಳೊಂದಿಗೆ ಸಮ್ಮಿಳಿತಗೊಳ್ಳುತ್ತವೆ. ಮುಖ್ಯವಾಗಿ ಸಾಮಾಜಿಕವಾದ ಅಭಿವ್ಯಕ್ತಿಯದು ಒಂದು ಬಗೆಯಾದರೆ, ಆಧ್ಯಾತ್ಮ, ಧಾರ್ಮಿಕ, ರಾಜಕೀಯ, ಆತ್ಮೋನ್ನತಿ ಹೀಗೆ ಹಲವು ಬಗೆಯಲ್ಲಿ ಅಭಿವ್ಯಕ್ತಿಗೊಳ್ಳುತ್ತವೆ. ಈತ ಮುನ್ನೂರ ಐವತ್ಮೂರಕ್ಕೂ ಹೆಚ್ಚು ವಚನಗಳನ್ನು ರಚಿಸಿದ್ದು, ಅವುಗಳು ಭಾವಸಾಂದ್ರತೆಯ ದ್ಯೋತಕಗಳಾಗಿವೆ.

ಕಾಯಕತತ್ವಕ್ಕೆ ಮಹತ್ವವನ್ನು ತಂದು ಕೊಟ್ಟ ವಚನಕಾರರು, ಹೀಗಾಗಲೇ ಹೇಳಿರುವಂತೆ ಸಮಾಜದ ಕುಲಕಸುಬಿನವರು. ವೃತ್ತಿಯಾದಾರಿತ ಬದುಕನ್ನು ಮಾಡುತ್ತಿದ್ದವರು. ವೃತ್ತಿ ನಿರತರು. ಇವರು ವೃತ್ತಿಗೂ ಮತ್ತು ಬದುಕಿಗೂ ಅವಿನಾಭಾವ ಸಂಬಂಧ ಇಟ್ಟುಕೊಂಡು ಎರಡರಲ್ಲೂ ಏಕತೆಯನ್ನು ಪ್ರತಿಪಾದಿಸಿದವರು. ವೃತ್ತಿಯನ್ನು ಮಾಡುವ ಇವರಿಗೆ ವೃತ್ತಿಯೇ ಪರಮ ಆರಾಧನೆ. ಹಾಗಾಗಿ ತಮ್ಮನ್ನು ವೃತ್ತಿಯ ಮೂಲಕವೇ ಗುರುತಿಸಿಕೊಳ್ಳುವ ಪ್ರಯತ್ನ ಮಾಡಿದರು. ಬಹುಶ ಶ್ರಮ ಜೀವಿಗಳ ಪಾಲಿಗೆ ಇದೊಂದು ಹೋರಾಟವೇ ಎಂದು ಹೇಳಬೇಕಾಗುತ್ತದೆ. ಅಸಮಾನತೆಯ ಪ್ರಶ್ನೆಯನ್ನು ಮುಂದಿಟ್ಟುಕೊಂಡು ಅದಕ್ಕೆ ತಕ್ಕ ಉತ್ತರವನ್ನು ಹುಡುಕುವ ಪ್ರಯತ್ನವು ನಡೆದಿದೆ ಎಂದೇ ಹೇಳಬಹುದು. ಹೀಗೆ ತಮ್ಮ ವೃತ್ತಿಗೆ ಗೌರವವನ್ನು, ಮಹತ್ವದ ಸ್ಥಾನವನ್ನು ಸ್ಥಾಪಿಸಿಕೊಡುವ

ಜರೂರತ್ತು ಅಂದಿಗೂ ಇತ್ತು. ಬಹುಶಃ ಈಗಲೂ ಬೇಕಿದೆ ಎಂದೆನಿಸುತ್ತದೆ. ಈ ರೀತಿಯ ಹೋರಾಟಕ್ಕೆ ಇಳಿಯಲು ವಚನಕಾರರ ಸಾಮಾಜಿಕ ಹೋರಾಟವೊಂದು ಬಸವಣ್ಣ ನೇತೃತ್ವದಲ್ಲಿ ರೂಪರೇಷೆಯನ್ನು ಪಡೆದಿತ್ತು. ಅದೇ ಸಂದರ್ಭದಲ್ಲಿ ವೃತ್ತಿಗೌರವದ ಸ್ಥಾಪನೆಯ ವೃತ್ತಿ ನಿಷ್ಠೆಯನ್ನು ಸಮಾಜದಲ್ಲಿ ಕಟ್ಟಿ ಬೆಳೆಸಬೇಕೆಂಬ ಕನಸು ಚಿಗುರೊಡೆದು, ಹೋರಾಟದೊಳಗಣ ಹೋರಾಟವಾಗಿ ಮಾರ್ಪಟ್ಟಿತ್ತು. ಇದು ವಚನಕಾರರ ಸಮಗ್ರ ಹೋರಾಟಕ್ಕೆ ಬಲ ತಂದುಕೊಟ್ಟಿತು. ಇಂತಹ ಹೋರಾಟಕ್ಕೆ ಅಣಿಕೊಂಡ ವೃತ್ತಿ ನಿರತರಲ್ಲಿ ಮಡಿವಾಳ ಮಾಚಯ್ಯ ಮುಂಚೂಣಿಯಲ್ಲಿ ನಿಲ್ಲುತ್ತಾನೆ. ವೃತ್ತಿಯ ಮೇಲ್ಮೆಯನ್ನು ತಿಳಿಸಲು ವೃತ್ತಿಯಲ್ಲಿಯ ಪರಿಕರಗಳೇ ಮುಖ್ಯ ಆಕರಗಳಾಗಿ ಬರುತ್ತವೆ.

ವೃತ್ತಿಯ ಉಪಕರಣಗಳೇ ಅಭಿವ್ಯಕ್ತಿಯ ಮೂಲ ಮಾಧ್ಯಮಗಳಾಗುತ್ತವೆ. ಅವುಗಳನ್ನು ಉದ್ದೇಶಪೂರ್ವಕವಾಗಿ ಬಳಸಿಯೇ ವಚನಗಳು ರಚನೆಗೊಂಡಿವೆ ಎಂಬಂತೆ ಕಾಣುತ್ತವೆ. ವೃತ್ತಿಯೇ ಕೆಲಸಗಾರರಿಗೆ ಮೇಲು, ಶ್ರೇಷ್ಠ ಮತ್ತು ಸಾಧನೆಯ ಮಾರ್ಗವಾಗುತ್ತದೆ. ತಮ್ಮತನದ ಹುಡಕಾಟ ನಡೆಯುವುದೇ ವೃತ್ತಿಯಿಂದ.

ಒಂದು ಕೈಯ ಬಯಲು ಎನಗೆ ಕೊಟ್ಟ
ಒಂದು ಕೈಯ ಬಯಲ ಚನ್ನಬಸವಂಗೆ ಕೊಟ್ಟ
ನೀವು ಬಂದಹರೆಂದು ಎಂಟು ಸಾವಿರ ವರುಷ
ಒಗೆದೊಗೆದು ಬಿಳಿದು ಮಾಡುತ್ತಿದ್ದೆನು.
ಒಂದ ಬಿಳಿದ, ಬಸವಣ್ಣ ಲಿಂಗಕ್ಕೆ ಕೊಡು ಎಂದಡೆ,
ಲಿಂಗಕ್ಕೆ ಕೊಡಲೊಲ್ಲದೆ ತಲೆಯ ಸುತ್ತಿಕೊಂಡ
ಮಡಿಯ ಕೂಲಿಯ ಬೇಡಹೋದಡೆ,
ಬಿಳಿದ ಹರಿದು, ಮೇಲೆ ಬಿಸಾಟನು.
ನೀನುಟ್ಟ ಬೀಳುಡುಗೆಯನು,
ಚೆನ್ನಬಸವಣ್ಣನ ಕೈಯ ನಿರಾಳವನು,
ಎನಗೆ ಕೊಡಿಸಾ ಕಲಿದೇವಯ್ಯಾ.

(ಸಂಕೀರ್ಣ ವಚನ ಸಂಪುಟ ೩, ವಚನ ಸಂಖ್ಯೆ: ೫೪೫)

ಈ ವಚನದಲ್ಲಿ ಮಾಚಯ್ಯನ ಮಡಿವಾಳ ವೃತ್ತಿಯ ಪದಗಳಿರುವುದನ್ನು ಗುರುತಿಸಬಹುದು. ಒಗೆದು (ಬಟ್ಟೆಯನ್ನು ಮಡಿ ಮಾಡುವುದು), ಮಡಿ, (ಶುಚಿಗೊಳಿಸುವುದು) ಬಿಳಿದ, ಬೀಳುಡುಗೆ ಎಂಬ ಪದಗಳ ಮೂಲಕ ವಚನವನ್ನು ಕಟ್ಟಿದ್ದಾನೆ. ಮತ್ತು 'ಕೂಲಿ' ಎಂಬ ಪದ ಬಳಕೆಗೊಂಡಿದ್ದು, ತನ್ನ ಕಾಯಕಕ್ಕೆ ಪಡೆವ ಸಂಭಾವನೆ ಎಂಬುದನ್ನು ನೋಡುತ್ತೇವೆ. ಇದಲ್ಲೆವನ್ನು ವಚನದ ಮೇಲು ನೋಟಕ್ಕೆ ಸೀಮಿತಗೊಳ್ಳಬಹುದಾದ ದೃಷ್ಟಿಕೋನ. ಇನ್ನೂ ಈ ವಚನದ ಅಭಿವ್ಯಕ್ತಿಯನ್ನು ಗಮನಿಸಿದರೆ, ಇದರೊಳಗಿನ ಗೂಡಾರ್ಥವು ಬಲು ವಿಸ್ತಾರವನ್ನು ಬಯಸಿರುವಂತಹದ್ದಾಗಿದೆ. ಬೆಡಗಿನ ರೀತಿಯಲ್ಲಿ ವ್ಯಕ್ತಗೊಳ್ಳುವ ಈ ವಚನ ಮಾಚಯ್ಯನ ಆತ್ಮೋನ್ನತಿಯ ಸಾಧನೆಯ

ಮಾರ್ಗವನ್ನು ವಿವರಿಸುತ್ತದೆ. ಜೊತೆಗೆ ಅಂತರಂಗದ ಪ್ರವೇಶಕ್ಕಾಗಿ ಹಾತೊರೆಯುವ ಮನಸ್ಸಿನ ಚಿತ್ರಣವನ್ನು ನೀಡುತ್ತದೆ. ಸಾಮಾನ್ಯವಾಗಿ ವೃತ್ತಿನಿರತ ವಚನಕಾರರು ತಮ್ಮತನವನ್ನು ಕಟ್ಟಿಕೊಳ್ಳಲು ಪ್ರಯತ್ನ ಮಾಡುತ್ತಿರುವುದನ್ನು ಗುರುತಿಸಬಹುದು. ಅವರು ಅಲ್ಲಿಯವರೆಗೆ ಸಮಾಜದಲ್ಲಿದ್ದ ತಾರತಮ್ಯವನ್ನು ನಿರಾಕರಿಸಿ, ಸಮಾನತೆಯ ಪ್ರತಿಪಾದನೆಯ ಜೊತೆಗೆ, ತಮ್ಮ ವೃತ್ತಿಯ ಅವಶ್ಯಕತೆ ಮತ್ತು ವೃತ್ತಿಯ ಮಹತ್ವವನ್ನು ಹೇಳುವ ಪ್ರಯತ್ನ ಮಾಡಿದರು. ಹೀಗೆ ಹೇಳುತ್ತ ವೃತ್ತಿಗೆ ಗೌರವನ್ನು ತಂದುಕೊಡುವ ನಿಟ್ಟಿನಲ್ಲಿ ಶ್ರಮಿಸಿದರು. ವೃತ್ತಿನಿರತ ವಚನಕಾರರಲ್ಲಿ ವೃತ್ತಿ ಕೇವಲ ಸಾಮಾಜಿಕವಾಗಿಯಷ್ಟೆ ಅಲ್ಲ ಅವರ ಅನುಭಾವಿಕ ನೆಲೆಯ ಮೂಲವನ್ನಾಗಿ ಮಾಡಿಕೊಂಡಿದ್ದಾರೆ. ಇದು ಮಾಚಯ್ಯನ ಅನುಭಾವಿಕ ನೆಲೆಯ ಮೂಲವಾಗಿ ಕೆಲಸ ಮಾಡುತ್ತದೆ.

ಮಾಚಯ್ಯ ಇಲ್ಲಿ ಏನನ್ನೊ ಹೇಳುತ್ತಿದ್ದಾನೆ. ಅದು ತನ್ನ ಇಷ್ಟದೈವ ಕಲಿದೇವಯ್ಯನಲ್ಲಿ ಅದು ಏನನ್ನು ಅಂದರೆ 'ಚನ್ನಬಸವಣ್ಣನ ಕೈಯಲ್ಲಿನ ನಿರಾಳವನ್ನು', ಹಾಗೆಯೆ 'ಮಡಿಯ ಕೂಲಿಯ ಬೇಡ ಹೋದಡೆ' ಎನ್ನುವ ಮಾತು ಬರುತ್ತದೆ. ಇಲ್ಲಿನ ಬೇಡುವಂತಹ ಸ್ಥಿತಿಯನ್ನು, ಒಳಗಿನ ನೋವನ್ನು ಗುರುತಿಸಬಹುದು. ಇನ್ನು ವಚನದ ಮೊದಲ ಸಾಲನ್ನು ಗಮನಿಸಿದರೆ 'ಒಂದು ಕೈ ಬಯಲ ಎನಗೆ ಕೊಟ್ಟ' ಎಂಬ ಮಾತು ಬರುತ್ತದೆ. ಇಲ್ಲಿ ಆತನ ಅತೃಪ್ತಿಯನ್ನು ಗುರುತಿಸಬಹುದು. ತನ್ನ ಬೆಳವಣಿಗೆಗೆ, ಆತ್ಮೋನ್ನತಿಗೆ ಇಷ್ಟು ಸಾಲದು ಇನ್ನು ಅರಿವಿನ ಗುರುತು ದೊರೆತಿಲ್ಲ ಎಂಬ ಭಾವವೇ ವ್ಯಕ್ತಗೊಳ್ಳುತ್ತದೆ. ಮತ್ತು 'ಎಂಟು ಸಾವಿರ ವರುಷ ಒಗೆದೊಗೆದು ಬಿಳಿದು ಮಾಡುತ್ತಿದ್ದೆನು' ಎಂಬ ಧ್ವನಿಯನ್ನು ನೋಡಿದರೆ, ಸಾವಿರಾರು ವರ್ಷಗಳ ಪರಂಪರೆಯ ಶೋಷಿತ ಬದುಕನ್ನು ತಿಳಿಸಿಕೊಡುತ್ತದೆ. ಮತ್ತು ಇದರಿಂದ ಬಯಲಾಗುವ ಮನಸ್ಥಿತಿಗೆ ತಲುಪಿರುವ ಹಂತವನ್ನು, ಬಿಡುಗಡೆಯ ಹಂಬಲದ ಹಾತುರತೆಯನ್ನು ಅರಿಯುತ್ತೇವೆ. ಅಲ್ಲದೆ ನಿಷ್ಠೆಯ ಬದುಕು ಇದ್ದರು. ಫಲವು ದೊರೆಯದ ಸ್ಥಿತಿಯ ಬಗ್ಗೆ ಬೇಸರ ಹೊಂದಿರುವುದನ್ನು ನೋಡುತ್ತೇವೆ. ಆದರೆ ನಿಷ್ಠೆಯ ಬದುಕು ಮಾತ್ರ ನಿರಂತರವಾಗಿ ನಡೆದಿದೆ. ಅದಕ್ಕಾಗಿ ತನ್ನ ಶ್ರಮದ ದೇವರನ್ನು ಕೇಳುತ್ತಾನೆ. ಪೂರ್ಣ ಬಯಲಾಗಲು. ಅದು ಬಸವಣ್ಣನ ಭಕ್ತಿ ಸಿದ್ಧಾಂತವನ್ನು, ಚೆನ್ನಬಸವಣ್ಣನ ಜ್ಞಾನ ಸಿದ್ಧಾಂತವನ್ನು. ಇನ್ನೂ ಮುಖ್ಯವಾಗಿ ಒಂದು ಸಾಲು ಬರುತ್ತದೆ. 'ನೀನುಟ್ಟ ಬೀಳುಡುಗೆಯನು' ಉಜ್ವಲವಾದ ಬದುಕನ್ನು, ಅರಿವಿನ ದಾರಿಯನ್ನು ಕೊಡು ಎಂದು ಕೇಳುತ್ತಾನೆ. ಅದು ತನ್ನ ನಿಷ್ಠೆಯನ್ನು ಹೇಳುತ್ತಲೆ ಆಧ್ಯಾತ್ಮಿಕ ಸಾಧನೆಯ, ಆತ್ಮ ಸಾಧನೆಯ ತೊಳಲಾಟವನ್ನು ತನ್ನ ವೃತ್ತಿಪದಗಳ ಮೂಲಕವೇ ಅಭಿವ್ಯಕ್ತಿಸುವ ಬಗೆ ಇದಾಗಿದೆ.

ಮಾಚಯ್ಯ ಕೆಳವರ್ಗದ ವಚನಕಾರನಾಗಿದ್ದು, ಮೇಲ್ವರ್ಗದ ವಚನಕಾರರಂತೆ, ಅತ್ಯಂತ್ಯ ಸೌಮ್ಯ ಸ್ವಭಾವವನ್ನು ಉಳಿಸಿಕೊಳ್ಳುವುದು ಸಾಧ್ಯವಾಗಿಲ್ಲ. ಅನೇಕ ಕೆಳವರ್ಗದ, ಅದರಲ್ಲೂ ಮೂಲ ಕುಲಕಸಬುಗಳನ್ನು ಮಾಡುತ್ತ ಬಂದ ವಚನಕಾರರಿಗೆ ಸಾಧ್ಯವಾಗಿಲ್ಲ. ಏಕೆಂದರೆ ಅಸಮಾನತೆಯ ಕಾಲಘಟ್ಟದಲ್ಲಿ ಶೋಷಣೆಯ ಬದುಕನ್ನು ಅನುಭವಿಸಿದವರು. ನೋವಿನಲ್ಲಿಯೆ ನಲುಗಿದವರು ಹಾಗಾಗಿ ಅವರ ವಚನಗಳಲ್ಲಿ ಪ್ರತಿಭಟನೆ, ವಿರೋಧ, ಸನಾತನ ಪರಂಪರೆಯ

ವಿರುದ್ಧ ಕಟುವಾದ ಟೀಕೆಗಳು ಪ್ರಕಟಗೊಂಡಿವೆ. ಇವು ಸಹಜವು ಕೂಡ ಆಗಿವೆ. ಇದಕ್ಕೆ ಮಾಚಯ್ಯ ಹೊರತಲ್ಲ. ತನ್ನತನದ ಹುಡುಕಾಟ ಮತ್ತು ಇರುವಿಕೆಯನ್ನು ವ್ಯಕ್ತಪಡಿಸುವ ಧೈರ್ಯವನ್ನು ಈತನ ವಚನಗಳಲ್ಲಿ ಗುರುತಿಸುತ್ತೇವೆ ಸ್ವಾಭಿಮಾನದ ಬದುಕು, ನಿಷ್ಠೆಯ ಕಾಯಕವನ್ನೊಳಗೊಂಡ ಆಧ್ಯಾತ್ಮ ಜೀವಿಯನ್ನು ವಚನಗಳಲ್ಲಿ ಗುರುತಿಸುವ ಸಾಧ್ಯತೆಗಳಿವೆ. ವಚನದಲ್ಲಿ ತನ್ನ ವೃತ್ತಿ ಉಪಕರಣಗಳ ಬಳಕೆ ಮತ್ತು ಚಿಂತನೆಯನ್ನು ಈ ಕೆಳಗಿನ ವಚನದಲ್ಲಿ ಗುರುತಿಸಬಹುದು.

ಮಡಿಯ ಹೇರಿದ ಕತ್ತೆ ಉಡುವೆತ್ತ ಬಲ್ಲುದು,
ಉಡುವಾತ ಬಲ್ಲನಲ್ಲದೆ.
ಕವಿಯ ಮಾತ ಕವಿಬಲ್ಲನು.
ನಾಲಗೆ ಬಲ್ಲದು ರುಚಿಯ,
ಭವದುಃಖಿಯೆತ್ತ ಬಲ್ಲನು ಲಿಂಗದ ಪರಿಯ.
ಮಡಿವಾಳ ಮಡಿವಾಳ ಎಂದು ನುಡಿವುದು ಜಗವೆಲ್ಲ.
ಹರಿಗೊಬ್ಬ ಮಡಿವಾಳನೆ?
ಮಡಿಯಿತು ಕಾಣ ಈರೇಳು ಭುವನವೆಲ್ಲ,
ಮಡಿವಾಳ ಮಾಚಯ್ಯನ ಕೈಯಲ್ಲಿ.
ಮುಂದೆ ಮಡಿದಾತ ಪ್ರಭುದೇವರು,
ಹಿಂದೆ ಮಡಿದಾತ ಬಸವಣ್ಣ,
ಇವರಿಬ್ಬರ ಕರುಣದ ಕಂದನು ನಾನು ಕಲಿದೇವಯ್ಯ.

(ಸಂಕೀರ್ಣ ವಚನ ಸಂಪುಟ ೩, ವಚನ ಸಂಖ್ಯೆ: ೭೧೦)

ಮಾಚಯ್ಯ ಈ ವಚನದಲ್ಲಿ ಒಂದು ಪ್ರತಿಮೆಯನ್ನು ಕಟ್ಟಿಕೊಡುತ್ತಾನೆ. 'ಮಡಿಯ ಹೇರಿದ ಕತ್ತೆ, ಉಡವೆತ್ತ ಬಲ್ಲುದು' ಎಂದು. ಈ ಪ್ರತಿಮೆಯು ಆಚಾರಕ್ಕಷ್ಟೆ ಸೀಮಿತವಾಗಿರುವ ಒಂದು ವರ್ಗವನ್ನು ಕುರಿತೆ ಮಾತಾಡುತ್ತಾನೆ. ತನ್ನ ವೃತ್ತಿಯಲ್ಲಿ ಬಳಸಲಾಗುವ ಕತ್ತೆ, ಪ್ರಾಣಿಯನ್ನು ಆತ್ಮ ಸಾಧನೆಯ ಹಾದಿಯನ್ನು ಬಿಟ್ಟು ಶಿವಸಂಸ್ಕೃತಿಯ ವಿರುದ್ಧವಾಗಿ ಬದುಕುವ ಸಮಾಜವನ್ನು ಕತ್ತೆಗೆ ಹೋಲಿಕೆ ಮಾಡುತ್ತಾನೆ. ತನ್ನ ಒಡೆಯನ ಆಜ್ಞೆಯನ್ನಷ್ಟೆ ಪಾಲಿಸುವ ಜಡತ್ವದ ಪ್ರತೀಕವಾಗಿ ಕತ್ತೆ ಇರುವುದನ್ನು ಮತ್ತು ಒಳಪ್ರವೇಶ ಸಾಧ್ಯವಾಗದ್ದನ್ನು ತಿಳಿಸುತ್ತಾನೆ. ಇದು ಒಂದು ರೀತಿಯಲ್ಲಿ ಅಲ್ಲಿಯವರೆಗೆ ಬೆಳೆದು ಬಂದ ಸಂಸ್ಕೃತಿಯ ದಡ್ಡತನವನ್ನು ಗುರುತಿಸಿ ತೋರಿಸುತ್ತಾನೆ. ಮುಂದುವರೆದು ಯಾರು ಯಾರನ್ನು ಅರ್ಥ ಮಾಡಿಕೊಳ್ಳಲು ಸಾಧ್ಯ ಎಂಬುದನ್ನು ಖಚಿತಪಡಿಸುತ್ತಾನೆ. ಲಿಂಗವಂತನಲ್ಲದ ಭವಿಯನ್ನು ದುಃಖಿ ಎಂದು ವ್ಯಾಖ್ಯಾನಿಸಿ ಅವನಿಗೆ ದರ್ಶನದ ಭಾಗ್ಯವಿಲ್ಲ, ಅವನು ಶಿವನ ಪರಿವೆಗೆ ದೂರನಾಗಿದ್ದಾನೆ. ಎಂಬುದನ್ನು ಹೇಳುವ ಮೂಲಕ ಶಿವಸಂಸ್ಕೃತಿಯ, ಶರಣ ಪರಂಪರೆಯ ಮಹತ್ವವನ್ನು ಹೇಳುತ್ತಾನೆ. 'ಮಡಿ' ಎಂಬ ಕ್ರಿಯಾ ಪದದ ಬಳಕೆ ಆಧ್ಯಾತ್ಮಿಕರಿಸಿ ನುಡಿಯುತ್ತಾನೆ. ಜಗತ್ತು ತನ್ನನ್ನು ಮತ್ತು ತನ್ನ ಕುಲವನ್ನು ಕೇವಲ ವೃತ್ತಿಯಿಂದ ಬೇರ್ಪಡಿಸಿ ನೋಡುತ್ತಿತ್ತು. ಇದನ್ನು ಖಂಡಿಸುವ ನಿಟ್ಟಿನಲ್ಲಿ ತನ್ನ

ಆತ್ಮಾಭಿಮಾನವನ್ನು ಪ್ರಕಟ ಪಡಿಸುತ್ತಾನೆ. 'ಮಡಿವಾಳ ಮಡಿವಾಳ' ಎಂದು ಕರೆವ ಜಗವನ್ನು ಪ್ರಶ್ನಿಸುತ್ತಾನೆ. 'ಹರಿಗೊಬ್ಬ ಮಡಿವಾಳನೆ?'. ಎಂದು ಕೇಳುವಲ್ಲಿ ಸೂಕ್ಷ್ಮವಾಗಿ ಗಮನಿಸಬೇಕಾದುದು ಶಿವ ಭಕ್ತರೆಲ್ಲರೂ ಏಕದೇವೋಪಾಸನೆಯನ್ನು ಮಾಡುವಂತವರು, ಅದರಲ್ಲೂ ಶಿವ ಪಾರಮ್ಯವನ್ನು ಪ್ರಚುರು ಪಡಿಸುವವರು. ಇಲ್ಲಿ ಹರಿಯನ್ನು ಟೀಕಿಸುವ ಮೂಲಕ ಸನಾತನ ಪರಂಪರೆ ತನ್ನನ್ನು, ತನ್ನ ವೃತ್ತಿಯನ್ನು ತನ್ನ ಕುಲವನ್ನು ನೋಡುತ್ತಿದ್ದ ಬಗೆಗೆ ಉತ್ತರವಾಗಿಯೇ ಅವರನ್ನು ಪ್ರಶ್ನಿಸುತ್ತಾನೆ. 'ಮಡಿವಾಳ' ಎಂಬ ಪದವನ್ನು ಎರಡೆರಡು ಬಾರಿ ವಚನದಲ್ಲಿ ಬಳಕೆಗೊಂಡು ವ್ಯಕ್ತವಾಗುತ್ತಿರುವ ಭಾವನೆಯನ್ನು ಗುರುತಿಸ ಹೊರಟರೆ ಹದಿನಾಲ್ಕು ಲೋಕ ಎಂಬ ರೂಢಿ ಮೂಲದ ಕಲ್ಪನೆಯನ್ನು, ಭ್ರಮೆಯ ಬದುಕನ್ನು, ಹುಟ್ಟು ಸಾವುಗಳು ಸಂಸಾರ ಜೀವನವನ್ನು ಟೀಕಿಸುತ್ತಿದ್ದಾನೆಂದೇ ಕಾಣುತ್ತದೆ. ಆದರೆ ವಚನದ ಕೊನೆಯ ಸಾಲು ಮಾತ್ರ ಗಮನಾರ್ಹವಾದುದು ಏಕೆಂದರೆ 'ಭುವನವೆಲ್ಲ ಮಡಿವಾಳ ಮಾಚಯ್ಯನ ಕೈಯಲ್ಲಿ' ಎಂಬ ಆತ್ಮ ಪ್ರತ್ಯಯಮಾತು, ತನ್ನತನದ ಸ್ವಾಭಿಮಾನದ ನುಡಿಯೋ? ಅಥವಾ ಅಹಮ್ಮಿಕೆಯ ನುಡಿಯೋ? ಇದು ಬದಲಾಗಿ ಬಿಡುತ್ತದೆ. ಅಂದರೆ ಆತನ ಅಭಿವ್ಯಕ್ತಿಯು ಬದಲಾಗಿರುವುದನ್ನು ಗುರುತಿಸಬಹುದು. ವಚನ ಸಿದ್ಧಾಂತದ, ವಚನ ಸಂಸ್ಕೃತಿಯ ಮುಖ್ಯ ಪ್ರಚಾರಕನಾದ ಈತ ಅದರ ಗಟ್ಟಿತನವನ್ನು ಕಟ್ಟಿ ಬೆಳೆಸಲು ತನ್ನನ್ನೇ ಅರ್ಪಿಸಿಕೊಂಡವನಾಗಿದ್ದಾನೆ. ಇತರ ವೃತ್ತಿನಿರತ ವಚನಕಾರರಂತೆ. ಮಾಚಯ್ಯ ವಚನಗಳಲ್ಲಿ ವೃತ್ತಿ ಪಾರಿಭಾಷಿಕ ಪದಗಳ ಮೂಲಕ ಅಭಿವ್ಯಕ್ತಿಗೊಂಡಿರುವ ತತ್ವ ಸಿದ್ಧಾಂತವನ್ನು ಮಾಚಯ್ಯನ ವಚನಗಳಲ್ಲಿ ಅರಿಯುತ್ತೇವೆ.

ಡಕ್ಕೆಯ ಬೊಮ್ಮಣ್ಣ

ವಚನಕಾರರು ವೃತ್ತಿಯ ಮಹತ್ವವನ್ನು ಮತ್ತು ಅನಿವಾರ್ಯತೆಯನ್ನು ತಮ್ಮ ವಚನಗಳ ಮೂಲಕ ಸಮಾಜಕ್ಕೆ ತಲುಪಿಸುವ ಕೆಲಸ ಮಾಡಿದ್ದಾರೆ. ಸಮಾಜದಲ್ಲಿ ವಿವಿದ ಕುಲ ವೃತ್ತಿಗಳನ್ನು ಮಾಡುತ್ತ, ಸ್ಪರ್ಶ ಮತ್ತು ಅಸ್ಪರ್ಶ ಜಾತಿಗಳ ವೃತ್ತಿಗಳೊನ್ನೊಳಗೊಂಡು ವಿವಿದ ವೃತ್ತಿನಿರತರು ತಮ್ಮ ಅನುಭವಗಳನ್ನು ವಚನಗಳಲ್ಲಿ ಬಿತ್ತರಿಸುವ ಕೆಲಸ ಮಾಡಿದರು. ಅದರಲ್ಲೂ ಅಭಿವ್ಯಕ್ತಿಯ ಸ್ವರೂಪದಲ್ಲಾದ ಬದಲಾವಣೆ ಮಹತ್ವದ ಸ್ಥಾನ ಪಡೆದಿದೆ. ಅದಕ್ಕೆ ಕಾರಣ ತಮ್ಮ ವೃತ್ತಿಗಳನ್ನು ಮಾಡುವ ನಿಷ್ಠೆ, ಪ್ರಾಮಾಣಿಕತೆಯ ಸ್ವರೂಪವನ್ನು ತಿಳಿಸುವ ಮಾರ್ಗವಾಗಿ ಅವರ ವೃತ್ತಿ ಉಪಕರಣಗಳು ವಚನಗಳಲ್ಲಿ ಒಡಮೂಡಿವೆ.

ಸಮಾಜದಲ್ಲಿ ವಿವಿಧ ವೃತ್ತಿಯನ್ನು ಮಾಡುತ್ತಿದ್ದ ವಚನಕಾರರಿಗಂತೂ ಸರಿ ಹೊಂದುತ್ತದೆ. ಆದರೆ ಜನಪದ ಕಲೆಯನ್ನೆ ತಮ್ಮ ಬದುಕಾಗಿಸಿಕೊಂಡು ಬದುಕುತ್ತಿದ್ದ ಜನ ಸಮುದಾಯದ ವೃತ್ತಿಯಾಗಿ ಜನಪದ ಕಲೆಗಳು ನೆಲೆಗೊಂಡದ್ದು ವಿಶೇಷವೇ ಸರಿ. ಜನಪದ ಕಲೆಯ ಪ್ರದರ್ಶನವನ್ನೆ ತಮ್ಮ ಕುಲಕಸಬನ್ನಾಗಿಸಿಕೊಂಡು ಜೀವನ ಸಾಗಿಸುವ ಸಮುದಾಯ, ಜಾತಿಗಳು ಹನ್ನೆರಡನೆ ಶತಮಾನ ಮತ್ತು ಅದಕ್ಕೂ ಮುಂಚೆ ಇದ್ದು ಇಂದಿಗೂ ಇರುವುದನ್ನು ಗುರುತಿಸುತ್ತೇವೆ. ಇಂತಹ ಕಲೆಗಳೇ ವೃತ್ತಿಗಳಾಗಿವೆ. ಆದರೆ ಆ ಕಲೆಯ ಪ್ರದರ್ಶನದ ಜೊತೆಗೆ ಭಿಕ್ಷಾ ವೃತ್ತಿಯು ನಡೆಯುತ್ತಿದ್ದು. ಇಂತಹ ಬಿಕ್ಷೆಯಿಂದಲೇ ಬದುಕು ಸಾಗುತ್ತಿತ್ತು. ಇಂತವರು ಕೆಳವರ್ಗದವರೆ ಆಗಿದ್ದಾರೆ.

ಮೊರದಲ್ಲಿ ಮಾರಿಯನ್ನು ಹಿಡಿದು ಬಿಕ್ಷೆಯನ್ನು ಬೇಡುತ್ತ ಬದುಕನ್ನು ಸಾಗಿಸುವ ದುರುಗಾ ಮುರುಗಿ, ಜರ್ ಬುರ್ ಸುಂಕಲಮ್ಮ ಎಂದು ಕರೆಸಿಕೊಳ್ಳುವ ಸಮುದಾಯದಿಂದ ಬಂದ ಢಕ್ಕೆಯ ಬೊಮ್ಮಣ್ಣ ವಚನಕಾರನಾಗಿ ವಚನಗಳನ್ನು ರಚಿಸಿದ್ದಾನೆ. ಈತನ ವಚನ ರಚನೆಯ ಪ್ರೇರಣ ಶಕ್ತಿಯಾಗಿ ವಚನಾಂದೋಲನ, ವಚನಕಾರರ ಸಾಮಾಜಿಕ ಹೋರಾಟ ನಿಲ್ಲುತ್ತದೆ. ಇತರ ವಚನಕಾರರಂತೆ ಈತನು ಬಸವಣ್ಣನ ನೇತೃತ್ವದ ವಚನಕಾರರ ಸಮೂಹವನ್ನು ಸೇರಿಕೊಳ್ಳುತ್ತಾನೆ. ಆ ಮೂಲಕ ಕ್ರಾಂತಿಯ ಪಾಲುದಾರಿಕೆಗೆ ಪಾತ್ರವಾಗುತ್ತಾನೆ. ಆದರೆ, ಆ ಮೊದಲು ಕೈಗೊಂಡ ವೃತ್ತಿಯನ್ನು ಮತ್ತು ಅದರ ಸ್ವರೂಪ ಮತ್ತು ತಾತ್ವಿಕ ಸಿದ್ಧಾಂತವನ್ನು ಬದಲಾಯಿಸಿಕೊಳ್ಳಬೇಕಾಗುತ್ತದೆ. ಏಕೆಂದರೆ ಶರಣತತ್ವಕ್ಕೂ ಈತನ ವೃತ್ತಿಗೂ ಬಹಳ ವಿರೋಧ ಮತ್ತು ವೈರುದ್ಯಗಳಿರುವುದು ಸತ್ಯ ವಿಷಯ. ಬಿಕ್ಷೆಯನ್ನು ಸಹಿಸದ, ನಿರಾಕರಿಸುವ ಸಮೂಹ ಶರಣ ಸಮೂಹವಾಗಿದೆ. ಆದರೆ ಬೊಮ್ಮಣ್ಣನ ವೃತ್ತಿ ಬಿಕ್ಷಾಟನೆ ಮತ್ತು ಕ್ಷುದ್ರ ದೇವತಾರಾಧನೆ, ಇಲ್ಲಿ ತಾತ್ವಿಕ ತಾಕಲಾಟವನ್ನು ನೋಡುತ್ತೇವೆ. ಸಮಾಜದ ದಿಕ್ಕು ತಪ್ಪಿಸಿ, ಮೌಡ್ಯಕ್ಕೆ ಗುರಿ ಮಾಡುವ ಕ್ಷುದ್ರ ದೇವತಾರಾಧನೆಯನ್ನು ಖಡಾ ಖಂಡಿತವಾಗಿಯೇ ಖಂಡಿಸಿದವರು ವಚನಕಾರರು. ಬಸವಣ್ಣನು ಕೂಡ ಮಾರಿ, ಮಸಣಿಯಂತೆ ಕ್ಷುದ್ರ ದೇವತಾರಾಧನೆಯನ್ನು ಖಂಡಿಸಿರುವುದನ್ನು ಆತನ ವಚನಗಳಲ್ಲಿ ನೋಡುತ್ತೇವೆ. ಆದರೆ ಅಂತಹ ಸಮೂಹವನ್ನು ಸೇರಬಯಸಿದ ಬೊಮ್ಮಣ್ಣ ಕ್ಷುದ್ರ ದೇವತಾರಾದಕ. ಕಾಯಕತತ್ವದ ಅಡಿಯಲ್ಲಿ ವೃತ್ತಿಯನ್ನು ಮಾಡಿಯೇ ಜೀವನ ನಡೆಸಬೇಕೆಂಬ ಸಿದ್ಧಾಂತ ವಚನಕಾರರದು. ಅದು ನಿಷ್ಠೆ, ಪ್ರಾಮಾಣಿಕತೆ, ಅಭಿಮಾನದ ಫಲದಿಂದ ಮೂಡಿರುವಂತಹದು. ಆದರೆ ಬೊಮ್ಮಣ್ಣನದು ಬಿಕ್ಷಾ ವೃತ್ತಿ, ಅಥವಾ ಮನೆ ಮನೆಗೆ ಹೋಗಿ ಮಾರಿಯನ್ನು ತೋರಿ ಹಠ ಮಾಡಿಯಾದರೂ ಸರಿ ಬೇಡಿತಂದು ಉಣ್ಣುವುದು. ಆದರೆ ಮುಂದೆ ಶರಣರ ಸಮೂಹದ ತೆಕ್ಕೆಗೆ ಒಳಗಾಗಿ ತನ್ನತನವನ್ನು ಮೆರೆಯುವುವ ಪ್ರಯತ್ನ ಮಾಡಿರುವುದು ಮುಖ್ಯವಾಗುತ್ತದೆ. ಕಾಡಿ ಬೇಡುವ ಬಿಕ್ಷೆ, ವೃತ್ತಿಯಾಗಿ ಬದಲಾಗಿ ಮಹತ್ವದ ತಿರುವು ಪಡೆದುಕೊಳ್ಳುತ್ತದೆ. ಅಲ್ಲಿಯವರೆಗೂ ಕ್ಷುದ್ರ ದೇವತೆಯಾಗಿದ್ದ ಮಾರಿ, ನಂತರ ಸಾತ್ವಿಕ ಸ್ವರೂಪಕ್ಕೆ ತಿರುಗುತ್ತಾಳೆ. ಅಂತರಂಗದ, ಆತ್ಮಸಾಧನೆಯ ಗುರಿಗೆ ಅಡ್ಡ ನಿಂತಿದ್ದ ಮಾರಿಯನ್ನು ಸರಿಸಿ, ಆತ್ಮಸಾಧನೆಯ ದಾರಿಯನ್ನು ಹಿಡಿಯುವ ಜ್ಞಾನಶಕ್ತಿಯಾಗಿ ಮಾರ್ಪಾಡು ಮಾಡಿಕೊಳ್ಳಲಾಗುತ್ತದೆ.

ವಚನ ರಚನೆಯಲ್ಲಿ ತೊಡಗಿಕೊಂಡ ವೃತ್ತಿನಿರತರು ತಮ್ಮ ವೃತ್ತಿ ಗೌರವನ್ನು ತಮ್ಮ ಆತ್ಮಾಭಿಮಾನವನ್ನು, ಶ್ರಮಸಿದ್ಧಾಂತವನ್ನು, ವಚನಗಳಲ್ಲಿ ತಮ್ಮ ವೃತ್ತಿಯ ಪರಿಕರಗಳನ್ನು ಬಳಸಿಯೇ ಅಭಿವ್ಯಕ್ತಿ ಮಾಡುವಲ್ಲಿ ಆಯಾ ವೃತ್ತಿಯ ಮಹತ್ವವನ್ನು ಅರಿಯಬಹುದಾಗಿದೆ. ಅಲ್ಲದೆ ಆಯಾ ವಚನಕಾರರ ತಿಳುವಳಿಕೆ, ಅನುಭಾವ, ಆಧ್ಯಾತ್ಮಿಕ ಸಾಧನೆಯನ್ನು ಗುರುತಿಸುವ ಅಧ್ಯಯನ ಸಾಮಾಗ್ರಿಗಳಾಗಿವೆ. ಅವರ ಹೇಳುವಿಕೆಗೆ ವೃತ್ತಿ ಹೇಗೆ ರೂಪಕ, ಉಪಮೆ, ಪ್ರತಿಮೆಗಳಾಗಿವೆ ಎಂಬುದನ್ನು ಅಭ್ಯಸಿಸುವ ಮೂಲಕ ಭಾಷೆಯ ಗಟ್ಟಿತನವನ್ನು, ಪ್ರಾದೇಶಿಕತೆಯ ಸ್ವರೂಪವನ್ನು ಗುರುತಿಬಹುದಾಗಿದೆ. ಇದು ಢಕ್ಕೆಯ ಬೊಮ್ಮಣ್ಣನ ವಚನಗಳ ಅಭಿವ್ಯಕ್ತಿಯಲ್ಲಿ ಬಂದಿರುವ ವೃತ್ತಿಯ ವಚನ ಹೀಗಿದೆ.

ಕಾಯವೆಂಬ ಡಕ್ಕೆ, ಕ್ರೀ ಭಾವವೆಂಬ ಹೊದಿಕೆ.
ಅರಿವೆಂಬ ನೇಣಿನಲ್ಲಿ, ಸ್ಥೂಲ ಸೂಕ್ಷ್ಮವೆಂಬ ಹೊಡೆ ಚೆಂಡು ಕಟ್ಟಿ
ಹೊಯ್ಯುತ್ತಿದೆ ಢಕ್ಕೆ, ಕಾಲಾಂತಕ ಭೀಮೇಶ್ವರಲಿಂಗವಲ್ಲದಿಲ್ಲಾ ಎಂದು.
(ಸಂಕೀರ್ಣ ವಚನ ಸಂಪುಟ ೨, ವಚನ ಸಂಖ್ಯೆ: ೯೨೪)

ಈ ವಚನದಲ್ಲಿ ಬೊಮ್ಮಣ್ಣ ದೇಹವನ್ನು ಢಕ್ಕೆಗೆ ಹೋಲಿಸುತ್ತಾನೆ. ಭಾವವನ್ನು ಢಕ್ಕೆಗೆ ನಾದಬರಲು ಚರ್ಮದಿಂದ ಅತ್ತಲೂ ಇತ್ತಲೂ ಬಿಗಿದಿರುವ ಚರ್ಮಕ್ಕೆ ಹೋಲಿಸುತ್ತಾನೆ. ಮತ್ತು ಅರಿವನ್ನು ಚರ್ಮ ಮತ್ತು ಡಕ್ಕೆಯನ್ನು ಒಂದು ಮಾಡಲು ಕಟ್ಟಿರುವ ಹಗ್ಗ ಅಥವಾ ನೂಲಿಗೆ ಹೋಲಿಸುತ್ತಾನೆ. ಸ್ಥೂಲ ಮತ್ತು ಸೂಕ್ಷ್ಮವನ್ನು ಹೊಡೆಚೆಂಡು ಎಂದು ಹೇಳುತ್ತ ಅದು ಹೊರಡಿಸುವ ನಾದವನ್ನು ಹೇಳುತ್ತಾನೆ. 'ಭೀಮೇಶ್ವರ ಲಿಂಗವಲ್ಲದಿಲ್ಲಾ' ಎಂದು. ಢಕ್ಕೆ ಹಾಗೂ ಅದರ ಧ್ವನಿ ದೇಹಕ್ಕೂ ಮನದಲ್ಲಿ ಸುಳಿಯುವ ವಿಷಯಗಳಿಗೂ ಮತ್ತು ಜೀವಕ್ಕೂ ಸಂಕೇತಗಳಾಗಿ ಈ ವಚನದಲ್ಲಿ ಬಳಕೆಗೊಂಡಿರುವುದನ್ನು ಕಾಣುತ್ತೇವೆ. ಹೊದಿಕೆ, ನೇಣು, ಹೊಡೆಚೆಂಡು ಇವುಗಳ ಮೂಲಕ ಮನುಷ್ಯನ ಲೌಕಿಕ ಜೀವನದ ಚಿತ್ರಣವನ್ನು ಮೂಡಿಸುತ್ತವೆ. ಮುಖ್ಯವಾಗಿ ಈ ವಚನ ದಲ್ಲಿರುವ ಆಧ್ಯಾತ್ಮವೊಂದನ್ನು ಗಮನಿಸಬಹುದು. ಲೌಕಿಕ ಬದುಕಿನ ನಿರಾಕರಣೆಯೊಂದು ಆಧ್ಯಾತ್ಮ ಬದುಕಿನ ಶಾಶ್ವತತೆಯನ್ನು ಹೇಳುವ ಪ್ರಯತ್ನವನ್ನು ಈ ವಚನ ಮಾಡುತ್ತಿದೆ ಎಂದು ಅನ್ನಿಸುತ್ತದೆ.

ತನ್ನ ವೃತ್ತಿಯಲ್ಲಿ ಬಳಕೆಗೊಂಡ ಮಾರಿಯನ್ನು ವಚನದಲ್ಲಿ ಕಟ್ಟಿಕೊಟ್ಟಿರುವ ಬಗೆಯನ್ನು ಈ ವಚನದಲ್ಲಿ ನೋಡುತ್ತೇವೆ.

ತನುವೆಂಬ ಮೊರದಲ್ಲಿ, ಮಾಯಾಗುಣವೆಂಬ ಮಾರಿಯ ಹಿಡಿದು
ರಾಜಸ ತಾಮಸವೆಂಬ ಬಾಳು ಬಟ್ಟಲು ಕೈಯಲ್ಲಿ
ಪ್ರಳಯ ಸಂಹಾರವೆಂಬ ಬಳೆಯ ಕೈಯಲ್ಲಿಕ್ಕಿ
ಅಂಗದ ಮನೆಯ ಭಾಗಿಲಲ್ಲಿ ಕೊಂಡು ಬಂದಿದ್ದೇನೆ.
ಬಲ್ಲವರಿಕ್ಕಿ, ಅರಿಯದವರೆಲ್ಲರೂ ಸುಮ್ಮನಿರಿ
ಢಕ್ಕೆಯ ಉಲುಹಡಗುವುದಕ್ಕೆ ಮುನ್ನವೆ ನಿಶ್ಚೈಸಿ
ನಿಜ ತತ್ವವರಿ, ಕಾಲಾಂತಕ ಭೀಮೇಶ್ವರಲಿಂಗವನರಿಯಬಲ್ಲಡೆ.
(ಸಂಕೀರ್ಣ ವಚನ ಸಂಪುಟ ೨, ವಚನ ಸಂಖ್ಯೆ: ೯೩೬)

ಈ ವಚನದಲ್ಲಿ ಬೊಮ್ಮಣ್ಣ ತನ್ನ ವೃತ್ತಿಯಲ್ಲಿ ಬಳಕೆಗೊಳ್ಳುವ 'ಮೊರ', 'ಮಾರಿ', 'ಬಟ್ಟಲು', 'ಬಳೆ' ಮುಂತಾದ ಪರಿಕರಗಳನ್ನು ನೀಡುತ್ತಾನೆ. ಮುಂದುವರೆದು ತಾನು ವೃತ್ತಿ ಮಾಡುವ ಬಗೆಯನ್ನು 'ಮನೆಯ ಬಾಗಿಲಲ್ಲಿ ಕೊಂಡುಬಂದಿದ್ದೇನೆ' ಎಂಬ ವಿವರವನ್ನು ನೀಡುತ್ತಾನೆ. ಮಾನವನ ಸಾಮಾನ್ಯಗುಣಗಳಾದ ರಾಜಸ, ತಾಮಸ ಗುಣಗಳನ್ನು ಹೇಳುತ್ತಾನೆ. ಮತ್ತು ಒಂದು ಸವಾಲನ್ನು ಹಾಕುತ್ತಾನೆ. ಯಾರು ಶಿವಜ್ಞಾನವನ್ನು ಅರಿತಿರುವಿರೋ ಅವರು ನೀಡಿ, ಅರಿಯದವರು ಸುಮ್ಮನಿರಿ ಎಂಬ ಸವಾಲನ್ನು ಮತ್ತು ಎಚ್ಚರಿಕೆಯನ್ನು ನೀಡುತ್ತಾನೆ. ವಚನ ಆಂದೋಲಕ್ಕೆ ಸೇರಿ ಅಲ್ಲಿನ ತತ್ವ ಸಿದ್ಧಾಂತಗಳನ್ನು ಅಪ್ಪಿಕೊಂಡು, ಆ ತತ್ವಗಳನ್ನು

ಪ್ರಚಾರ ಮಾಡುವ ಕೆಲಸಕ್ಕೆ ತೊಡಗಿ ತನ್ನ ಅನುಭವಗಳನ್ನು ಅರಿವನ್ನಾಗಿ ಮಾರ್ಪಡಿಸಿಕೊಂಡು ಶಿವಜ್ಞಾನಿಯಾದ ಬೊಮ್ಮಣ್ಣನ ಮುಂದೆ ಶಿವತತ್ವದ ಪ್ರಸಾರ ಜವಾಬ್ದಾರಿಯನ್ನು ಹೊತ್ತುಕೊಂಡು ಸಾಗಿದ್ದಾನೆ. ಮತ್ತು ನಿಜತತ್ವದ ನಿಷ್ಠಾವಂತನಾಗಿ, ಅದನ್ನೆ ಬೋಧನೆ ಮಾಡುತ್ತಿದ್ದಾನೆ. ಇಲ್ಲಿ ಸಂಪೂರ್ಣವಾಗಿ ಮಾರಿಯ ಸ್ವರೂಪವೇ ಬದಲಾಗಿ ಬಿಟ್ಟಿದೆ. ಮಾರಿಯೆಂಬುದು ಮನದ ಮುಂದಿನ ಮಾಯಾಗುಣ. ಅದನ್ನು ಕಳೆದು ಸಾತ್ವಿಕ ಭಕ್ತನಾದರೆ ಮಾತ್ರ ಅರಿವು ಪಡೆಯಬಹುದು. ಅದು ಡಕ್ಕೆಯ ಉಲುಹಡಗುವುದಕ್ಕೆ ಮುನ್ನ. ಢಕ್ಕೆಯನ್ನು ದೇಹಕ್ಕೆ ಹೋಲಿಸಿಯೆ ನುಡಿದ್ದಾನೆ. ವಚನಕಾರರು ದೇಹದ ಮೂಲಕವೇ ಅದರ ಅನಿತ್ಯತೆಯನ್ನು ಪ್ರಸ್ತುತಪಡಿಸುವಂತವರು ಮತ್ತು ಆತ್ಮೋದ್ಧಾರದ ಸಾಧಕರು. ಹಾಗಾಗಿ ಈ ಬಗೆಯ ವ್ಯಕ್ತತೆಯನ್ನು ಈ ವಚನ ಪಡೆದಿದೆ. ಅದರ ಮುಂದುವರೆಕೆಯು ಈ ಮುಂದಿನ ವಚನದಲ್ಲಿ ನಡೆದಿದೆ.

ಅಂಗವೆಂಬ ಮೊರದಲ್ಲಿ ವಿಕಾರನೆಂಬ ಕೋಣವನೇರಿ
ತಾಯಿ ಬಂದಳಯ್ಯ ಮೂರು ಮುಖವಾಗಿ
ಮೂರು ಮುಖದವ್ವೆಯ ಬಾಗಿಲಲ್ಲಿ
ಭಾದೆ ಬಡವರೆಲ್ಲರೂ ಹೋದರು ಹೊಲಬುದಪ್ಪಿ
ಕಾಲಾಂತಕ ಭೀಮೇಶ್ವರ ಲಿಂಗವನರಿಯದೆ.

(ಸಂಕೀರ್ಣ ವಚನ ಸಂಪುಟ ೨, ವಚನ ಸಂಖ್ಯೆ: ೯೦೦)

ಈ ಮೇಲಿನ ವಚನದಲ್ಲಿ ಬಳಕೆಗೊಂಡಿರುವ ಕೋಣ ಮತ್ತು ಮಾರಿಯ ಸಂಕೇತಗಳು ಬೊಮ್ಮಣ್ಣನಿಗೆ ಆರಾಧ್ಯವಾಗಿದ್ದ ದೈವ. ಆದರೆ ಅದು ವಚನಕಾರರ ಸಮೂಹಕ್ಕೆ ಬರುವ ಮುಂಚಿನದು. ವಚನಕಾರರ ತತ್ವದ ಅರಿವು ಮೂಡಿದ ಮೇಲೆ ಆ ಮಾರಿಯು ಬದಲಾಗಿ 'ಭೀಮೇಶ್ವರ' ಅದು 'ಕಾಲಾಂತಕ'ವಾಗಿ ಬದಲಾಗಿದೆ. ಇಲ್ಲಿ ಸಂಸ್ಕೃತಿಗಳು ಪಲ್ಲಟವಾಗಿರುವುದನ್ನು ಗುರುತಿಸಬಹುದು. ಅಜ್ಞಾನದ ಸಂಸ್ಕೃತಿಯೊಂದು ದೂರ ಸರಿಯಲು ಜ್ಞಾನ ಸಂಸ್ಕೃತಿಯೊಡನೆ ಸಂಘರ್ಷಕ್ಕೆ ಇಳಿಯಬೇಕು. ಇಲ್ಲವೆ ಸಮ್ಮಿಳತಗೊಳ್ಳಬೇಕು. ಇಲ್ಲಿ ಸಂಘರ್ಷಕ್ಕಿಂತ ಸಮ್ಮಿಳತಗೊಂಡಿರುವುದನ್ನು ಗುರುತಿಸುತ್ತೇವೆ.

'ಹೆಣ್ಣು, ಹೊನ್ನು, ಮಣ್ಣು' ಎಂಬ ಮನದ ಮಾಯಾಗುಣಕ್ಕೆ ಇಲ್ಲಿ ಬೊಮ್ಮಣ್ಣ ಮಾರಿ ಎನ್ನುತ್ತಿದ್ದಾನೆಯೆ? ಜೀವನ ವ್ಯಾಮೋಹದ ಬಾಗಿಲನ್ನು ತುಳಿದರೆ ಅರಿವಿನ ಇಮ್ಮುಖ ಸಾಧ್ಯ ಎಂಬುದನ್ನು, ಮತ್ತು ಇಂತಹ ಮೋಹಕ್ಕೆ ಸಿಕ್ಕಿಹಾಕಿಕೊಂಡವರನ್ನು ದಾರಿ ಕಾಣದವರು. ಎಂದೇ ಗುರುತಿಸಿರುವ, ಆಧ್ಯಾತ್ಮಿಕ ಭಾವವನ್ನು ಈ ವಚನದಲ್ಲಿ ನೋಡುತ್ತೇವೆ. ಮತ್ತು ಇಲ್ಲಿ 'ಅವ್ವೆ' ಎಂಬುದನ್ನು ಬಳಸಿರುವುದು ಗಮನಾರ್ಹ. ರಾಜಸ, ತಾಮಸ, ಸಾತ್ವಿಕ ಗುಣಗಳಿಗೆ ಹೋಲಿಸಿಯೆ ನುಡಿದಿರುಬಹುದಾಗಿದೆ.

ಕ್ರಿಯಾಶಕ್ತಿ ಬ್ರಹ್ಮಂಗೆ ಹಿಂಗಿ,
ಇಚ್ಛಾಶಕ್ತಿ ವಿಷ್ಣುವಿಂಗೆ ಹಿಂಗಿ,
ಜ್ಞಾನಶಕ್ತಿ ರುದ್ರಂಗೆ ಹಿಂಗಿ,
ಉತ್ಪತ್ತಿ ಸ್ಥಿತಿ ಲಯವೆಂಬುದಕ್ಕೆ

ಮಾಯಾದೇವಿಯೊಂದೆ ಗೊತ್ತಾಗಿ,
ಬಲ್ಲ ಬಲ್ಲವರೆಲ್ಲರ ತನ್ನಲ್ಲಿಯೇ ಅಡಗಿಸುತ್ತ
ಅರಿದವರಿಗೆ ದೇವಿಯಾಗಿ,
ಮರೆದವರಿಗೆ ಮಾರಿಯಾಗಿ,
ಮೊರದೊಳಗೆ ಕೊಂಡು ಬಂದಿದ್ದೇನೆ.
ಮರಕ್ಕೆ ಮೂರು ಗೋಟು,
ತಾಯಿದೆ ಅಯಿದು ಬಾಯಿ
ಬೇಡುವಾತನ ಬಾಯಿವೊಂದೆಯಾಯಿತ್ತು.
ಢಕ್ಕೆಯ ದನಿಯ ಕೇಳಿ ಬೆಚ್ಚುವುದಕ್ಕೆ ಮುನ್ನವೆ
ಕಾಲಾಂತಕ ಭೀಮೇಶ್ವರಲಿಂಗವನರಿಯಿರಣ್ಣಾ.

(ಸಂಕೀರ್ಣ ವಚನ ಸಂಪುಟ ೨, ವಚನ ಸಂಖ್ಯೆ: ೯೨೮)

ಈ ಮೇಲಿನ ವಚನವನ್ನು ಓದಿದಾಗ ಒಂದು ಆಧ್ಯಾತ್ಮದ ಶಕ್ತಿಯನ್ನು ಪಡೆದುಕೊಳ್ಳಲು ಅರಿವಿನ ಮೂಲಕ, ತಿಳುವಳಿಕೆಯನ್ನು ಪಡೆಯಬೇಕು ಅದು ಶಿವತತ್ವದ ತಿಳುವಳಿಕೆ ಎಂಬುದನ್ನು ತಿಳಿಸುವಂತಿದೆ. ಮರವೆಯನ್ನು ಅಜ್ಞಾನ ಎಂದು ವ್ಯಾಖ್ಯಾನಿಸಲಾಗಿದೆ. ಮನುಷ್ಯನು ಜೀವನದ ಬಯಕೆಯಲ್ಲಿಯೇ ಸಿಲುಕಿಕೊಂಡಾಗ ಅವನಲ್ಲಿರುವ ಮಾಯೆ, ಅವನಿಗೆ ಮಾರಿಯಾಗಿಯೇ ಇರುತ್ತಾಳೆ. ಈ ವಚನವಷ್ಟೆ ಅಲ್ಲ ಬೊಮ್ಮಣ್ಣನ ಇಡಿ ವಚನಗಳಲ್ಲಿ ಬರುವ ಮಾರಿ, ಮಾಯೆಯ ಸಂಕೇತವಾಗಿದ್ದಾಳೆ. ಇನ್ನೂ ಅಭಿವ್ಯಕ್ತಗೊಂಡಿರುವ ಬಗೆಯನ್ನು ಗುರುತಿಸಬಹುದಾದರೆ, ಬ್ರಹ್ಮ, ವಿಷ್ಣು, ರುದ್ರರನ್ನು ಉದಾಹರಣೆ ಮಾಡುವುದರ ಮೂಲಕ ಮಾಯೆಯನ್ನು ಗುರುತಿಸುವ ಪ್ರಯತ್ನ ಬೊಮ್ಮಣ್ಣ ಮಾಡುತ್ತಾನೆ. ಮಾರಿಗೆ ಸಂಬಂಧಿಸಿದ, ಮೊರ, ಅವಳ ಕೈಯಲ್ಲಿರುವ ಬಟ್ಟಲು, ಬಳೆ, ಆಕೆಯನ್ನು ಮನೆ ಮನೆಗೆ ಕರೆತರುವುದು ಇದೊಂದು ಪರಂಪರೆಯಿರುವುದನ್ನು ಗಮನಿಸಬಹುದು. ತನ್ನ ವೃತ್ತಿಯ ಚಿತ್ರಣವನ್ನು ಕಟ್ಟಿಕೊಡುವುದರ ಜೊತೆಗೆ ಜ್ಞಾನವನ್ನು ಪ್ರಸಾರ ಮಾಡುವ ವೃತ್ತಿ ನಡೆದಿರುವುದನ್ನು ಈ ವಚನ ತಿಳಿಸುತ್ತದೆ. ಅರಿವೇ ಶ್ರೇಷ್ಠ ಎಂಬ ಅಭಿಮತಕ್ಕೆ ಬರುವ ಬೊಮ್ಮಣ್ಣ ದೇಹವನ್ನು, ಅದರ ಅನಿತ್ಯತೆಯನ್ನು ಡಕ್ಕೆಗೆ, ಅದರ ದನಿಗೆ ಹೋಲಿಸುತ್ತ ಒಂದು ವಿಶಿಷ್ಟ ಅನುಭಾವ ಸಿದ್ಧಾಂತವನ್ನು ಕಟ್ಟಿಕೊಡುತ್ತಾನೆ. ಮುಖ್ಯವಾಗಿ ತನ್ನ ವೃತ್ತಿಯನ್ನೇ ಅರಿವಿನ ದಾರಿಯನ್ನಾಗಿ ಬದಲಾಯಿಸಿಕೊಳ್ಳುವ ಬೊಮ್ಮಣ್ಣ ಅರಿವಿನ ಮಹತ್ವವನ್ನು ತಿಳಿಸುವ ಪ್ರಚಾರಕನಾಗಿ ಕಾಣುತ್ತಾನೆ.

ತನ್ನ ವೃತ್ತಿಯ ಪರಿಕರಗಳನ್ನು ಬಳಸುವ ಮೂಲಕ ವೃತ್ತಿಯ ಭಾಷೆಯನ್ನು ಮತ್ತು ಅದರ ಮೂಲಕ ನಡೆದಿರುವ ಅಭಿವ್ಯಕ್ತಿಯನ್ನು ಈ ವಚನದಲ್ಲಿ ಗುರುತಿಸಬಹುದು. ಮತ್ತು ತನ್ನ ವೃತ್ತಿಯೇ ಆಧ್ಯಾತ್ಮಿಕ ಸಾಧನೆಯ ದಾರಿಯನ್ನಾಗಿ ಮಾಡಿಕೊಳ್ಳಲು ಆತ ಪಡುವ ಸಂಕಟವನ್ನು ತಳಮಳವನ್ನು ಗುರುತಿಸಲು ಸಾಧ್ಯವಿದೆ. ಅರಿವಿನ ಮಾರ್ಗ ಹುಡುಕುವಲ್ಲಿ ಜೀವನವನ್ನು ಹೇಗೆ ನೋಡಬೇಕೆಂಬ ಚಿಂತನೆ ನಡೆದೆ ಇದೆ.

ಅರಿವುಳ್ಳವರಿಗೆ ಆರನರಿದೆಹೆನೆಂಬುದೆ ಮಾಯೆ.
ಮೂರ ಮರೆದು ಬೇರೊಂದ ಕಂಡಿಹೆನೆಂಬುದೆ ಮಾಯೆ.
ನುಡಿಯ ನುಡಿವವರಲ್ಲಿ ಎಡೆ ಮಾತನಾಡಿ
ಬೇರೊಂದೆಡೆವುಂಟೆಂಬುದೆ ಮಾಯೆ.
ಘಟ ಮಟವೆಂಬ ಮನೆಯಲ್ಲಿ ಮರವೆಯೆಂಬ ಮಾರಿಯ ಹೊತ್ತು
ಭವವೆಂಬ ಬಾಗಿಲಲ್ಲಿ ತಿರುಗಾಡುತ್ತಿದ್ದೇನೆ.
ಢಕ್ಕೆಯ ಡಾವರಕ್ಕೆ ಸಿಕ್ಕಿ ನೊಂದೆನು.
ಇದರಚ್ಚುಗವ ಬಿಡಿಸು,
ಕಾಲಾಂತಕ ಭೀಮೇಶ್ವರಲಿಂಗಾ.

(ಸಂಕೀರ್ಣ ವಚನ ಸಂಪುಟ ೨, ವಚನ ಸಂಖ್ಯೆ: ೯೦೫)

ತನ್ನೊಳಗೆ ನಡೆದ ಅರಿವಿನ ಹುಡುಕಾಟಕ್ಕೆ 'ಘಟಮಟವೆಂಬ ಮನೆಯಲ್ಲಿ ಮರವೆಯೆಂಬ ಮಾರಿಯ ಹೊತ್ತು' ಎಂಬ ಸಾಲು ನಿದರ್ಶನವಾಗಿ ನಿಲ್ಲುತ್ತದೆ. ಆತ್ಮ ಸಾಧನೆಗೆ ತೊಡಗಿದ ಸಾಧಕನ ಮನೋಸ್ಥಿತಿಯ ಪ್ರಶ್ನೆ ಅಥವಾ ಉತ್ತರವಾಗಿಯೇ ಇಂತಹ ಧ್ವನಿ ಮೂಡುವುದನ್ನು ಅನೇಕ ವಚನಕಾರರಲ್ಲಿ ಗುರುತಿಸುತ್ತೇವೆ. ಇನ್ನು 'ಢಕ್ಕೆಯ ಡಾವಕ್ಕೆ ಸಿಕ್ಕಿ ನೊಂದೆನು' ಎನ್ನುವ ಸಾಲು ಇದಕ್ಕೆ ಶಕ್ತಿಯನ್ನು ನೀಡುತ್ತದೆ. ಆತನ ಮನಸಿನಗೊಂದಲಗಳನ್ನು, ಆತನ ನಿಲುವುಗಳನ್ನು ಅಭಿವ್ಯಕ್ತಿಸುತ್ತವೆ. ಮರವು ಮಾರಿಯಾಗಿ, ಅರಿವು ಜ್ಞಾನ ಭೀಮೇಶ್ವರಲಿಂಗವಾಗಿ ಮೂಡಿದೆ. ವೃತ್ತಿನಿಷ್ಠೆಯ ಮೂಲಕ ತಮ್ಮನ್ನು ತಾವು ಗುರುತಿಸಿಕೊಳ್ಳುವ ವಚನಕಾರರು ಕೇವಲ ತಮ್ಮ ವೃತ್ತಿಗೆ, ಬದುಕಿಗೆ ಸೀಮಿತಗೊಳ್ಳುವುದಿಲ್ಲ ವೃತ್ತಿಯನ್ನು ತಮ್ಮ ಅನುಭಾವಿಕ ಸಾಧನೆಯ ಮಾಧ್ಯಮ ವನ್ನಾಗಿ ಬದಲಾಯಿಸಿದ್ದಾರೆ. ಬೊಮ್ಮಣ್ಣನು ತನ್ನ ವೃತ್ತಿಯ ಮೂಲಕವೇ ಅರಿವಿನ ಹುಡುಕಾಟವನ್ನು ಮಾಡುತ್ತಾನೆ. ಮತ್ತು ಅರಿವನ್ನು ಸಂಪಾದಿಸುತ್ತಾನೆ. ತನ್ನ ವೃತ್ತಿ ಕೇವಲ ತಾನು ಬದುಕುವುದಕ್ಕಷ್ಟೆ ಉಳಿದುಕೊಳ್ಳುವುದಿಲ್ಲ ಅದರಾಚೆಗೆ ಹೊರಚಾಚಿಕೊಳ್ಳುತ್ತದೆ. ಸತ್‌ಕಾರ್ಯದಿಂದ, ಶರಣರ ಸೂಳ್ನುಡಿಯಿಂದ ಪರಮಾತ್ಮನನ್ನು ಅರಿಯುವಂತಹುದು. ಹಾಗಾಗಿ ಅನೇಕ ವಚನಕಾರರಿಂದ ಬಸವಣ್ಣನ ಆದಿಯಾಗಿ ಈತನನ್ನು ಸ್ಮರಿಸಿದ್ದಾರೆ. ತನ್ನ ಕಾಯಕದಲ್ಲಿ ಬರುವ ಮಾರಿಯನ್ನು ಬದಲಾಯಿಸಿಯೇ ಬಿಡುತ್ತಾನೆ. ಹಿಂಸಾ ಸ್ವರೂಪದ ಮಾರಿ, ಬೊಮ್ಮಣ್ಣನ ದೆಸೆಯಿಂದ ಅರಿವಿನ ಸಂಕೇತವಾಗಿ ಬದಲಾಗಿ ಬಿಡುತ್ತಾಳೆ. ವೃತ್ತಿನಿರತತೆಯಲ್ಲಿ ಗಳಿಸಿದ ಅನುಭವವೇ ಅನುಭಾವವಾಗಿ ವಿಶಿಷ್ಟ ಅಭಿವ್ಯಕ್ತಿಯು ಬೊಮ್ಮಣ್ಣ ವಚನಗಳಲ್ಲಿ ಮೂಡಿಬಂದಿರುವುದನ್ನು ಗಮನಿಸಬಹುದಾಗಿದೆ. ಕೇವಲ ತನ್ನ ಮಾರಿಯನ್ನಷ್ಟೆ ಉದಾತ್ತಿಕರಿಸಿಲ್ಲ, ತನ್ನ ವೃತ್ತಿಯನ್ನು ಉದಾತ್ತಿಕರಿಸಿದ್ದಾನೆ.

ಕಂಬದ ಮಾರಿತಂದೆ

ಮೀನುಗಾರಿಕೆಯ ವೃತ್ತಿಯನ್ನು ಮಾಡುತ್ತಿದ್ದನೆಂದು ಕಂಬದಮಾರಿತಂದೆಯನ್ನು ಗುರುತಿಸಲಾಗಿದೆ. ಆತನ ವಚನಗಳಲ್ಲಿ ಬರುವ ಮತ್ಸ, ಬಲೆ, ಕೀಟಕ ಮುಂತಾದ ಮೀನುಗಾರಿಕೆಯ ಪಾರಿಭಾಷಿಕ ಪದಗಳ ಆಧಾರದ ಮೇಲೆ ಗುರುತಿಸಲಾಗಿದೆ. ಮೀನುಗಾರಿಕೆಯ ವೃತ್ತಿಯನ್ನು ಅವಲಂಬಿಸಿರುವ

ಇನ್ನೊಬ್ಬ ವಚನಕಾರ ಗಾಳದ ಕಣ್ಣಪ್ಪ ಇದ್ದಾನೆ. ಈತನಂತೆ ಕಂಬದ ಮಾರಿತಂದೆಯು ಮೀನುಗಾರನಾಗಿದ್ದಾನೆ. ಸಾಮಾನ್ಯವಾಗಿ ಗಾಳದ ಕಣ್ಣಪ್ಪನನ್ನು ಆತನ ವೃತ್ತಿಯನ್ನು ಮೀನುಗಾರಿಕೆ ಎಂದು ಪರಿಗಣಿಸಿ ಬೆಸ್ತ ಕುಲದವನು ಎಂದು ಹಲವಾರು ವಿದ್ವಾಂಸರು ಅಭಿಪ್ರಾಯಕ್ಕೆ ಬಂದಿದ್ದಾರೆ. ಅದೇ ರೀತಿ ಅನೇಕ ವಚನಕಾರರ ಜೀವಿತದ ವಿವರದ ಬಗ್ಗೆ, ಅವರ ಬದುಕಿನ ಬಗ್ಗೆ, ಜಾತಿ–ಕುಲ ಸಮುದಾಯದ ಬಗ್ಗೆ, ವೃತ್ತಿಯ ಬಗ್ಗೆ ಪೂರ್ಣ ವಿವರಗಳು ಅಲಭ್ಯವಾಗಿರುವ ಕಾರಣ. ಕೆಲವು ಪೂರಕ ಅಂಶಗಳ ಎಳೆಗಳನ್ನು ಹಿಡಿದುಕೊಂಡು, ಸಿಕ್ಕ ಮಾಹಿತಿಯನ್ನು ಅನುಸರಿಸಿ ಅವರ ಜೀವನವನ್ನು ಕಟ್ಟಿಕೊಡುವ ಪ್ರಯತ್ನವನ್ನು ಅನೇಕ ವಿದ್ವಾಂಸರು ಕವಿ ಚರಿತಕಾರರು ಮಾಡಿದ್ದಾರೆ. ಇಂತಹ ವಿಧಾನದಿಂದ ಸಿಕ್ಕ ವಿವರಗಳನ್ನೇ ಆಕರಗಳನ್ನೆ ಬಳಸಿಕೊಂಡು ಅಧ್ಯಯನಗಳು ನಡೆಯುತ್ತಿವೆ. ಅದರಂತೆ ಕಂಬದ ಮಾರಿತಂದೆಯ ಜೀವನದ ಪೂರ್ಣ ವಿವರಗಳು ಲಭ್ಯವಿಲ್ಲ. ಸಿಕ್ಕಿರುವ ಈತನ ವಚನಗಳ ಆಧಾರದ ಮೇಲೆಯೇ ಈತನದು ಮೀನುಗಾರಿಕೆಯ ವೃತ್ತಿ ಎಂದು ಗುರುತಿಸಲಾಗಿದೆ. ಅಂದರೆ ಮೀನುಗಾರಿಕೆಯನ್ನು ಸಾಮಾನ್ಯವಾಗಿ ಬೆಸ್ತ ಕುಲದವರೇ ಮಾಡುವ ವೃತ್ತಿಯಾಗಿದ್ದು ಈತನದೂ ಬೆಸ್ತ ಕುಲ ಅಥವಾ ಜಾತಿ ಎಂದು ಸಾಮಾನ್ಯವಾಗಿಯೇ ಅಭಿಪ್ರಾಯಕ್ಕೆ ಬರಲು ಸಾಧ್ಯವಿದೆ. ಅದಕ್ಕೆ ಕಾರಣ ಮತ್ತು ಆಧಾರವಾಗಿ ವಚನಗಳನ್ನೆ ನೋಡಬಹುದಾಗಿದೆ. ಈತನ ವೃತ್ತಿಯನ್ನು ಮೀನುಗಾರಿಕೆ ಎಂದು ಗುರುತಿಸಿದ ಮೇಲೆ ಬೆಸ್ತ ಜಾತಿಯವನೆಂದು ಗುರುತಿಸಬಹುದು. ಅಂದರೆ ಬೆಸ್ತರ ಜಾತಿಯಿಂದ ಬಂದ ವಚನಕಾರ ಎಂದೇ ಕರೆಯಬಹುದು. ಏಕೆಂದರೆ ಜಾತಿಯ ಮೂಲದಿಂದ ವೃತ್ತಿ, ವೃತ್ತಿಯ ಮೂಲದಿಂದ ವೃತ್ತಿಯ ಅನುಭವ, ಅನುಭವದಿಂದ ಅನುಭಾವ, ಅನುಭಾವದಿಂದ ಅಭಿವ್ಯಕ್ತಿ, ಹೀಗೆ ಗುರುತಿಸಬಹುದಲ್ಲದೆ, ಆತನ ವಚನಗಳಲ್ಲಿ ನಡೆಸಿರುವ ಚರ್ಚೆಯನ್ನು ಅರಿಯಬಹುದು. ತನ್ನ ವೃತ್ತಿಯ ಪರಿಕಗಳನ್ನೇ ಅಭಿವ್ಯಕ್ತಿಯ ಮಾಧ್ಯಮವನ್ನಾಗಿ ಮಾಡಿಕೊಂಡು ಅದರ ಮೂಲಕ ವಚನಗಳನ್ನು ರಚಿಸಿರುವುದು ಮತ್ತು ಆಧ್ಯಾತ್ಮದ ಸಾಧನೆಯ ದಾರಿಯನ್ನು ಹುಡುಕಿಕೊಳ್ಳುವುದನ್ನು ಗುರುತಿಸುತ್ತೇವೆ. ದೊರೆತ ಈತನ ಹನ್ನೊಂದು ವಚನಗಳಲ್ಲಿ ತನ್ನ ವೃತ್ತಿಯ ಪಾರಿಭಾಷಿಕ ಪದಗಳ ಬಳಕೆಯ ವಚನಗಳೇ ಹೆಚ್ಚು, ಮೇಲ್ವರ್ಗದ ಅಥವಾ ಪ್ರಮುಖ ಎಂದು ಗುರುತಿಸಲಾಗಿರುವ ವಚನಕಾರರಂತೆ ಸಮಾಜ ವಿಡಂಬನೆಯ, ಪ್ರಭುತ್ವದ ಬಗೆಗಿನ, ಸಾಮಾಜಿಕತೆಯ ವಿಷಯಗಳನ್ನೊಳಗೊಂಡ ವಚನಗಳು ಅಷ್ಟಾಗಿ ಇಲ್ಲದಿದ್ದರೂ ಸಿಕ್ಕ ಇಷ್ಟು ವಚನಗಳಲ್ಲೇ ಇಂತಹ ಕೆಲವು ಅಂಶಗಳನ್ನು ಗುರುತಿಸಬಹುದು, ಮುಖ್ಯವಾಗಿ ವೃತ್ತಿನಿರತ ವಚನಕಾರರ ಮೂಲ ಸಿದ್ಧಾಂತವಾಗಿ ಕಾಯಕತತ್ವದ ಸಿದ್ಧಾಂತ ಬೆಳೆದು ಬಂದಿದೆ. ಅದರ ತತ್ವದಡಿಯಲ್ಲೇ ಕಾರ್ಯ ಮಗ್ನರಾಗಿರುವುದನ್ನು ಗುರುತಿಸುತ್ತೇವೆ. ಒಟ್ಟು ಶ್ರಮ ಸಿದ್ಧಾಂತವನ್ನೆ ಮುನ್ನೆಲೆಗೆ ತರುವ ಯತ್ನದಲ್ಲೇ ವೃತ್ತಿನಿರತ ವಚನಕಾರರ ಅಭಿವ್ಯಕ್ತಿ ಪ್ರಕಟಗೊಂಡಿರುವುದನ್ನು ನೋಡುತ್ತೇವೆ. ಕಂಬದ ಮಾರಿತಂದೆಯು ತನ್ನ ವೃತ್ತಿಯ ಅನುಭವವನ್ನು ಕಟ್ಟಿಕೊಟ್ಟಿರುವ ಬಗೆಯನ್ನು ಈ ವಚನದಲ್ಲಿ ನೋಡಬಹುದು.

ಮಾಟಕೂಟವೆಂಬ ತೆಪ್ಪವಮಾಡಿ,
ಮೂರ್ತಿ ವಿಶ್ವಾಸವೆಂಬ ಕಣೆಯ ಹಿಡಿದು

ಒತ್ತುತ್ತಿರಲಾಗಿ
ಹಾಯಿ ಮಾರುತನೆಂಬ ಮತ್ಸ್ಯ
ಆ ಸರಹು ನೋಡಿ ತೆಪ್ಪವನೊತ್ತುತ್ತಿರಲಾಗಿ
ತ್ರೀವಿಧದ ಸತ್ತೆಯ, ಸರ್ವೇಂದ್ರಿಯ ಬೆಳೆದ ಪಾಸೆಯ
ಮರೆಯಲ್ಲಿ ತಪ್ಪಿಹೊಯಿತ್ತು ಮತ್ಸ್ಯ.
ಇಂತೀ ಬರಿ ಕುಕ್ಕೆಯ ಹೊತ್ತು
ಮತ್ಸ್ಯವ ಕಾಣದೆ ವೆಚ್ಚ ಕಡಹಿಲ್ಲ.
ಇದರಚ್ಚಿಗವ ಬಿಡಿಸಾ,
ಕದಕತನ ಬೇಡ ಕದಂಬಲಿಂಗಾ.

(ಸಂಕೀರ್ಣ ವಚನ ಸಂಪುಟ ೨, ವಚನ ಸಂಖ್ಯೆ: ೮)

ಈ ವಚನದಲ್ಲಿ ಮಾರಿತಂದೆಯು ಆಧ್ಯಾತ್ಮಿಕ ಅರ್ಥವನ್ನು ಹೇಳುವ ಪ್ರಯತ್ನ ಮಾಡಿರುವುದನ್ನು ಗಮನಿಸುತ್ತೇವೆ. ಇಲ್ಲಿ ತನ್ನ ಮೀನುಗಾರಿಕೆ ವೃತ್ತಿಯ ಪರಿಕರಗಳನ್ನು ಬಳಸಿದ್ದಾನೆ. ತೆಪ್ಪ, ಕಣೆ, ಮತ್ಸ್ಯ, ಕುಕ್ಕೆ ಮುಂತಾದ ಸಲಕರಣೆಗಳು ಆತನ ಅಭಿವ್ಯಕ್ತಿಯ ಮಾಧ್ಯಮಗಳಾಗಿವೆ. ಜೀವನದ ಅನಿತ್ಯತೆಯನ್ನು ಅನವಶ್ಯಕ ಶ್ರಮ ಎಂದು ಹೇಳುವ ಮೂಲಕ ಇದನ್ನು ಬಿಡಿಸಿ ನಡೆಸು ಎಂದು ಮನವಿ ಮಾಡಿಕೊಳ್ಳುತ್ತಿರುವುದನ್ನು ನೋಡುತ್ತೇವೆ. ಈ ವಚನದ ಮೂಲಕ ಒಂದು ಚಿತ್ರಣವನ್ನು ನೀಡುತ್ತಾನೆ. ಅದು ಮೀನುಗಾರನೊಬ್ಬ ಮೀನು ಹಿಡಿಯುವ ಮತ್ತು ಮೀನು ಹಿಡಿಯಲು ಏನೆಲ್ಲ ಮಾಡುತ್ತಾನೆ ಎಂಬ ಚಿತ್ರಣ ಮೂಡುತ್ತದೆ. ಆದರೆ ಇದು ಕೇವಲ ಲೌಕಿಕ ಜಗತ್ತಿನ ಒಂದು ವೃತ್ತಿಯ ಚಿತ್ರಣವಾಗಿ ಬಿಡುತ್ತದೆ ಅಷ್ಟೆ. ಆದರೆ ಮಾರಿತಂದೆ ಅದರಾಚೆಗೆ ಅದನ್ನು ವಿಸ್ತರಿಸುವ, ವಿಶ್ಲೇಷಿಸುವ ಪ್ರಯತ್ನ ಮಾಡುತ್ತಾನೆ. ಈ ವಚನದಲ್ಲಿ ಬಳಕೆಗೊಂಡಿರುವ ಭಾಷೆಯನ್ನು ಗಮನಿಸಿದರೆ, ತನ್ನತನದ, ತನ್ನ ವೃತ್ತಿಯ ಮಾತನ್ನಷ್ಟೇ ಹೇಳತೊಡಗುವುದಿಲ್ಲ. ಒಂದು ಆಧ್ಯಾತ್ಮಿಕತೆಯನ್ನು ಕಟ್ಟಿನಿಲ್ಲಿಸುತ್ತಾನೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದುದು ನಿಷ್ಠೆಯ ಜೀವನವನ್ನು ಮಾಡುತ್ತ ಇರುವುದನ್ನು ತಿಳಿಸುತ್ತಾನೆ. ಆ ನಿಷ್ಠೆಗೆ ಪ್ರಪಂಚ ಅಡ್ಡ ಬರುತ್ತಿವುದನ್ನು ಗುರುತಿಸುತ್ತಾನೆ. ಆತನಿಗೆ ಒಂದು ನೋವು ಇದೆ. ತನ್ನ ನಿಷ್ಠೆ ಪ್ರಾಮಾಣಿಕತೆಯ ಅರಿವು ಇದೆ. ಇಂತಹ ಗೊಂದಲದಲ್ಲಿ ಸಿಕ್ಕಿ ನಲುಗುವ ಮಾನವನ ಸ್ಥಿತಿಯನ್ನು ಇಲ್ಲಿ ಅಭಿವ್ಯಕ್ತಿಸಿದ್ದಾನೆ.

ಭಾಷೆಯನ್ನು ತನ್ನ ವೃತ್ತಿಯ ಪರಿಕರಗಳ ಪರಿಭಾಷೆಯಲ್ಲಿ ರೂಪಕಗಳಾಗಿ ಹಿಡಿದಿಟ್ಟಿದ್ದಾನೆ. ಕುಕ್ಕೆ, ಮತ್ಸ್ಯ, ಸರಹು ಉಂತಾದುವುಗಳು ಪ್ರತಿಮೆಗಳಾಗಿ ಬಳಕೆಗೊಂಡು ಒಂದು ವಿಶಿಷ್ಠ ಬಗೆಯ ಆತ್ಮೀಯತೆಯ ರಚನೆಯನ್ನು ವಚನಗಳಲ್ಲಿ ತಂದಿದ್ದಾನೆ. ಮನದೊಳಗಿರುವ ತಳಮಳವನ್ನು, ತುಡಿತ ಮಿಡಿತಗಳು, ಅನುಭವಗಳೊಂದಿಗೆ ಬೆರೆತು ಆತನನ್ನು ಇನ್ನಷ್ಟು ಬೆರಗುಗೊಳಿಸಿವೆ.

ಗಂಪಕ್ಕೆ ಸಿಕ್ಕೆ, ಬಲೆಗೊಳಗಾಗೆ,
ಗೂಳಿಯ ಇರಿತದ ಡಾವರಕ್ಕೆ ನಿಲ್ಲೆ,
ಸೆಳೆಗೋಲಿನ ಗಾಣದ ಕೀಟಕವನೊಲ್ಲೆ.

ನಿನ್ನಾಟ ಅದೇತರ ಮಡುವಿನಾಟ ಹೇಳಾ,
ಕದಕತನ ಬೇಡ ಕದಂಬಲಿಂಗಾ.

(ಸಂಕೀರ್ಣ ವಚನ ಸಂಪುಟ ೨, ವಚನ ಸಂಖ್ಯೆ: ೩)

ಈ ವಚನದಲ್ಲಿ ತಿರಸ್ಕಾರ ಭಾವವಿರುವುದನ್ನು ನೋಡುತ್ತೇವೆ. ಹಾಗೇಯೇ ತಿರಸ್ಕರಿಸುವ, ಪ್ರತಿಭಟಿಸುವ ಸ್ವಭಾವ ಅಭಿವ್ಯಕ್ತಗೊಂಡಿರುವುದನ್ನೂ ಗುರುತಿಸಬಹುದು. ಅದು ಸಾತ್ವಿಕ ತಿರಸ್ಕಾರ. ಸಂಘರ್ಷದ ಸೂಕ್ಷ್ಮ ಸಂವೇದನಾತ್ಮಕವಾದ ನಿರಾಕರಣೆ. ಹಾಗೇಯೇ ವಚನದ ಕೊನೆಯ ಸಾಲಿನಲ್ಲಿ ಪ್ರಶ್ನೆಯಿರುವುದನ್ನು ಗಮನಿಸಬಹುದು. ತನ್ನ ನಿಷ್ಠೆಯನ್ನು ನಂಬಿ ಬದುಕು ಸಾಗಿಸುವ ವ್ಯಕ್ತಿಗೆ ಸ್ವಾಭಿಮಾನ ಮತ್ತು ಪ್ರಾಮಾಣಿಕತೆಯು ಅವಿಭಾಜ್ಯ ಅಂಗವಾಗಿರುತ್ತದೆ. ಅದಕ್ಕೆ ದಕ್ಕೆ ಎದುರುದಾಗ ಪ್ರಶ್ನೆಗಳು ಏಳುತ್ತವೆ. ಜೊತೆಗೆ ಪ್ರತಿಭಟನೆಯು ಕೂಡ ಬರುತ್ತದೆ. ಅಂತಹ ಪ್ರಸಂಗವನ್ನು ಇಲ್ಲಿ ಗುರುತಿಸಬಹುದು. ಅದು ಯಾರಾದರೂ ಸರಿ. ಜೀವನವಾಗಿರಲಿ, ದೈವವಾಗಿರಲಿ, ಸಮಾಜವಾಗಿರಲಿ. ಇಲ್ಲಿ ಬಳಕೆಗೊಂಡ ವೃತ್ತಿ ಪರಿಕರಗಳಾದ ಗಂಪ, ಬಲೆ, ಸೆಳೆಗೋಲು, ಕೀಟಕ ಮಡುವು ಇವುಗಳು ತನ್ನ ತನದ ಸ್ವಭಾವಕ್ಕೆ ದಕ್ಕೆ ಬರುವ ರೂಪಕಗಳಾಗಿ ಪ್ರತಿಮೆಗೊಂಡಿದ್ದು, 'ಒಳಗಾಗೆ', 'ನಿಲ್ಲೆ', 'ಒಲ್ಲೆ' ಮುಂತಾದ ಪದಗಳ ಮೂಲಕ ತನ್ನನ್ನು ತನ್ನತನವನ್ನು ತೋರಿಸುವ ಪ್ರಯತ್ನ ಮಾಡಿರುವುದನ್ನು ಕಾಣುತ್ತೇವೆ. ಇದೊಂದು ವೃತ್ತಿನಿರತರ ಅಸ್ತಿತ್ವದ ಹೋರಾಟವಾಗಿಯೇ ಅನೇಕ ವಚನಕಾರರಲ್ಲಿ ಇಂತಹ ನಿಲುವುಗಳನ್ನು ಕಾಣುತ್ತೇವೆ.

ವಚನಕಾರರು ಮೂಲತಃ ಸಮಾಜ ಸುಧಾರಕರಷ್ಟೇ ಅಲ್ಲ. ಆಧ್ಯಾತ್ಮಿಕ ಸಾಧಕರು ಆಗಿದ್ದಾರೆ. ತಮ್ಮ ಮೂಲಕವೇ ಇಡಿ ಸಮುದಾಯವನ್ನು ಕಟ್ಟಿಕೊಟ್ಟವರು. ಅವರ ವೃತ್ತಿಯ ಪ್ರಾಮಾಣಿಕತೆ, ನಿಷ್ಠೆ, ಶ್ರಮ ಗೌರವ ವೃತ್ತಿ ಸಮುದಾಯಕ್ಕೆ ದೊರಕಿಸಿಕೊಟ್ಟ ಮಹತ್ವದ ತಾತ್ವಿಕತೆಯಾಗಿದೆ.

ಕನ್ನದ ಮಾರಿತಂದೆ

ವೃತ್ತಿನಿರತ ವಚನಕಾರರಲ್ಲೇ ವಿಶಿಷ್ಠ ವೃತ್ತಿಯನ್ನು ಕೈಗೊಂಡಿರುವ ವಚನಕಾರ ಕನ್ನದ ಮಾರಿತಂದೆ. ಕನ್ನ ಎಂಬ ವಿಷೇಣವು 'ಕಳ್ಳತನ' ಎಂಬುದಾಗಿದೆ. ಈತ ವಚನಕಾರನಾಗುವ ಮೊದಲು ಕಳ್ಳತನ ಮಾಡಿ ಜೀವನ ನಡೆಸುತ್ತಿದ್ದನು. ನಂತರ ಬಸವಣ್ಣನ ಕಲ್ಯಾಣದ ಮಹಾಮನೆಯನ್ನು ಸೇರಿಕೊಂಡು ಅನುಭವ ಮಂಟಪದ ಚರ್ಚೆಯಲ್ಲಿ ಪಾಲ್ಗೊಂಡು ಈತನು ಅನುಭಾವಿಯಾದನು ಎಂದು ಗುರುತಿಸಲಾಗಿದೆ. ತನ್ನ ಅರಿವಿಗೆ ಕಳ್ಳತನದಿಂದ ಬದುಕುವುದು ತಪ್ಪು ಎಂಬುದು ಮೂಡಿ ನಂತರ ಈತ ತನ್ನ ಕನ್ನ ಹಾಕುವ ವೃತ್ತಿಯನ್ನು ಬಿಟ್ಟು, ಪರ್ಯಾಯ ವೃತ್ತಿಯೊಂದನ್ನು ಕಂಡುಕೊಂಡಿರಬೇಕು ಎಂದು ಊಹಿಸಲು ಸಾಧ್ಯವಿದೆ. ಆದರೆ ಈತ ತನ್ನ ಮೊದಲ ವೃತ್ತಿಯಾದ ಕನ್ನಹಾಕುವ ವೃತ್ತಿಯ ಪರಿಭಾಷೆಯ ಮೂಲಕವೇ ವಚನಗಳನ್ನು ರಚಿಸಿ ಅದರ ರೂಪಕಗಳನ್ನೆ ಬಳಸಿ ವಚನಗಳನ್ನು ಅಭಿವ್ಯಕ್ತಿಸಿದ್ದಾನೆ. ಪರ್ಯಾಯ ಕೆಲಸವನ್ನು ತಾನು ಮಾಡುದ್ದುದರ ಸುಳಿವನ್ನು ಎಲ್ಲಿಯೂ ನೀಡದ ಈತ ತನ್ನ ಮೊದಲ ವೃತ್ತಿಯ ಪರಿಕರಗಳನ್ನೆ ಮತ್ತು ಅದರಿಂದ ಪಡೆದ ಅನುಭವಗಳನ್ನೆ ಆಧ್ಯಾತ್ಮಿಕವಾಗಿ ಬರೆದು ಅರಿವಿನ ಹುಡುಕಾಟಕ್ಕೆ ತೊಡಗಿರುವುದನ್ನು ನೋಡುತ್ತೇವೆ.

ಸಮಾಜಕ್ಕೆ ಬಾಹಿರವಾಗಿರುವಂತ, ನಿಷ್ಠೆ, ಪ್ರಾಮಾಣಿಕ ವೃತ್ತಿಗಳನ್ನು, ಅದು ಜನಸ್ನೇಹಿ ಅಥವಾ ಸಮಾಜಮುಖಿಯಾಗಿರುವಂತ ವೃತ್ತಿಗಳನ್ನೆ ಬಹಳಷ್ಟು ವಚನಕಾರರು ಅನುಸರಿಸಿರುವರು. ಮತ್ತು ಅಂತಹ ವೃತ್ತಿಗಳನ್ನು ಪ್ರೋತ್ಸಾಹಿಸುವ ಕಾರ್ಯವು ನಡೆಯಿತು. ಇಂತಹ ಸಂದರ್ಭದಲ್ಲಿ ಸಮಾಜಕ್ಕೆ ವಿರೋಧವಾದ ವೃತ್ತಿಯನ್ನು ಮಾಡುವ ವ್ಯಕ್ತಿಯಾಗಿ ಮತ್ತು ಕಳ್ಳತನದ ವೃತ್ತಿಯನ್ನು ಅವಲಂಬಿಸುವುದು ಎಷ್ಟರಮಟ್ಟಿಗೆ ಸರಿಯಾದುದು ಮತ್ತು ಅದಕ್ಕೆ ವಚನಕಾರರ ಪ್ರತಿಕ್ರಿಯೆ ಹೇಗಿರಬಹುದು? ಎಂಬುದನ್ನು ನೋಡಬೇಕು. ಸಮಾಜದ ನಾನಾಸ್ಥರದ, ನಾನಾವಿಧದ ವೃತ್ತಿಯನ್ನು ಮಾಡುವವರು ಅನುಭವ ಮಂಟಪಕ್ಕೆ ಬಂದು ತಮ್ಮ ವೃತ್ತಿಯ ಬಗೆಗಿನ ಚಿಂತನೆಗೆ ತೊಡಗಿರುವಂತಿದೆ. ಅಲ್ಲಿನ ಚರ್ಚೆಗಳ ಫಲವಾಗಿ ಅನೇಕರು ತಮ್ಮ ವೃತ್ತಿಯ ಮಹತ್ವವನ್ನು ತಿಳಿದಂತಿದೆ. ಮತ್ತು ವೃತ್ತಿಯ ನ್ಯೂನತೆಗಳನ್ನು ಕಂಡುಕೊಂಡು ಸಮಾಜಕ್ಕೆ ಅಪಾಯವನ್ನು ತಂದೊಡ್ಡುವ ವೃತ್ತಿಯ ಸ್ವರೂಪವನ್ನು ಬದಲಾಯಿಸಿಕೊಂಡಿದ್ದರೇನೋ? ಅಂದೆನಿಸುತ್ತದೆ. ಆ ಕಾರಣಕ್ಕೆ ನಾನಾವೃತ್ತಿನಿರತರಿಗೂ ಅಲ್ಲಿ ಅವಕಾಶ ದೊರೆತಿರುವುದನ್ನು ಗಮನಿಸಬೇಕು. ಉದಾಹರಣೆಗೆ ಢಕ್ಕೆಯ ಬೊಮ್ಮಣ್ಣನ ಮಾರಿ ಪರಿವರ್ತನೆಗೊಂಡಿದ್ದು, ಸೂಳೆ ಸಂಕವ್ವೆಯ ಅಪ್ರಜ್ಞಾವೃತ್ತಿ ಬದಲಾಗಿ ಶರಣೆಯಾಗಿ ಬದಲಾಗುವುದು. ಇಂತಹ ಬದಲಾವಣೆಯಂತೆ ಕನ್ನದ ಮಾರಿತಂದೆಯ ವೃತ್ತಿಯೂ ಪರಿವರ್ತನೆಗೊಂಡಿರಬಹುದು. ತಮ್ಮ ಅನನ್ಯತೆಗಾಗಿಯೇ ವೃತ್ತಿನಿರತ ವಚನಕಾರರು ತಮ್ಮ ವೃತ್ತಿಗಳ ವಿಶೇಷಣಗಳನ್ನೆ ತಮ್ಮ ಹೆಸರುಗಳ ಮುಂದೆ ಉಳಿಸಿಕೊಂಡಿರುವುದು, ಬಳಸಿಕೊಂಡಿರುವುದು ವೃತ್ತಿನಿರತರ ವಿಶೇಷತೆಗಳಲ್ಲೊಂದು. ಹಾಗೆಯೇ ಕನ್ನದ ಮಾರಿತಂದೆ ತನ್ನ ವೃತ್ತಿಯ ವಿಶೇಷಣವಾದ 'ಕನ್ನ'ವನ್ನು ಉಳಿಸಿಕೊಂಡಿದ್ದಾನೆ. ಮತ್ತು ಆ ವೃತ್ತಿಯ ಮೂಲಕವಾಗಿಯೇ ಅಭಿವ್ಯಕ್ತಿ ಕ್ರಮವನ್ನು ರೂಪಿಸಿಕೊಂಡಿದ್ದಾನೆ. ಅದರ ಮೂಲಕವೇ ಅನುಭಾವ ಲೋಕದ ಪ್ರವೇಶ ಮಾಡಿರುವುದನ್ನು ಆತನ ವಚನಗಳಲ್ಲಿ ಗುರುತಿಸಬಹುದಾಗಿದೆ.

ಕತ್ತಲೆಯಲ್ಲಿ ಕನ್ನವನಿಕ್ಕಿದಡೆ
ಎನಗೆ ಕತ್ತಿಯ ಕೊಟ್ಟ ಕರ್ತುವಿಂಗೆ ಭಂಗ.
ಅವರು ಮರದಿರ್ದಲ್ಲಿ ಮನೆಯ ಹೊಕ್ಕಡೆ
ಎನ್ನ ಚೋರತನದ ಅರಿಕೆಗೆ ಭಂಗ.
ಮರದಿರ್ದವರ ಎಬ್ಬಿಸಿ ಅವರಿಗೆ ಅವರೊಡೆವೆಯ ತೋರಿ
ಎನ್ನೊಡೆವೆಯ ತಂದೆ ಮಾರನವೈರಿ ಮಾರೇಶ್ವರಾ.

(ಸಂಕೀರ್ಣ ವಚನ ಸಂಪುಟ ೨, ವಚನ ಸಂಖ್ಯೆ: ೨೪)

ಈ ವಚನದಲ್ಲಿ ಮಾರಿತಂದೆಯು ತನ್ನ ವೃತ್ತಿಯ ಪರಿಚಯವನ್ನು ಮಾಡಿಕೊಡುತ್ತಾನೆ. ಬರಿ ಕೇವಲ ವೃತ್ತಿಯ ಪರಿಚಯದ ದೃಷ್ಟಿಯಿಂದ ಈ ವಚನವನ್ನು ನೋಡಲು ಸಾಧ್ಯವಿಲ್ಲ. ಇದರಲ್ಲಿ ಒಂದು ಆಧ್ಯಾತ್ಮಿಕ ಅನುಭವವೊಂದನ್ನು ಕಟ್ಟಿಕೊಡುತ್ತಾನೆ. ಆತನ ವೃತ್ತಿಯ ಪರಿಕರಗಳಾದ 'ಕನ್ನ', 'ಕತ್ತಿ', 'ಚೋರತನ', 'ಒಡವೆ', 'ಮನೆಯ ಹೊಕ್ಕಡೆ' ಎಂಬ ಕ್ರಿಯೆ ಮುಂತಾದ ವೃತ್ತಿಯ ಪರಿಭಾಷೆಯನ್ನು ಬಳಸಿಕೊಂಡು ತನ್ನತನವನ್ನು ಹೇಳುವುದನ್ನು ಈ ವಚನದಲ್ಲಿ ಗುರುತಿಸುತ್ತೇವೆ.

ಈ ವಚನದ ಅಭಿವ್ಯಕ್ತಿಯ ಸ್ವರೂಪವನ್ನು ಗಮನಿಸಬಹುದಾದರೆ, ಇದರಲ್ಲಿ ಹೇಳುವಿಕೆಯು ಇರುವುದನ್ನು ಗಮನಿಸಬಹುದು. ಸಾಮಾನ್ಯವಾಗಿ ವಚನಗಳು ಹೇಳುವಂತಹ ರೀತಿಯಲ್ಲಿಯೇ ಪ್ರಕಟಗೊಂಡಿರುತ್ತವೆ. ಏಕೆಂದರೆ, ವಚನಕಾರರ ಮುಂದೆ ಒಂದು ಸಮಾಜ ಇದ್ದು, ಅದಕ್ಕೆ ಮಾರ್ಗದರ್ಶವನ್ನು ಮಾಡುವ, ನೀತಿಯನ್ನು ಭೋದಿಸುವ ಪ್ರಯತ್ನವಿರುತ್ತದೆ. ಇಲ್ಲಿ ಭಾಷಾ ಬಳಕೆಯು ರೂಪಕಗಳೊಂದಿಗೆ ಬಳಕೆಗೊಂಡಿರುವುದು ಕಾಣುತ್ತದೆ. 'ಕತ್ತಿಯ ಕೊಟ್ಟ ಕರ್ತುವಿಂಗೆ ಭಂಗ' ಎನ್ನುವ ಸಾಲು ಆತನ ನಿಷ್ಠೆಯನ್ನು ಹೇಳುತ್ತದೆ. ಇಲ್ಲಿ ಕರ್ತುಯಾರು ಎಂಬ ಪ್ರಶ್ನೆಯನ್ನು ಕೇಳಿದರೆ, ಆತನ ದೈವ ಮಾರೇಶ್ವರನಾಗಿದ್ದಾನೆ. ಅಥವಾ ಹನ್ನೆರಡನೇಯ ಶತಮಾನದ ಶರಣರು ತೋರಿಕೊಟ್ಟ ಮಾರ್ಗ, ಕಾಯಕ ಸಿದ್ಧಾಂತವಾಗಿದೆ. ತನ್ನ ನಿಷ್ಠೆಯನ್ನು ಹೇಳುವ ಬಗೆಯಾಗಿಯೇ ಈ ವಚನವನ್ನು ನೋಡಬಹುದು. ಇದಕ್ಕೆ ಇನ್ನಷ್ಟು ಶಕ್ತಿಯನ್ನು ಮುಂದಿನ ಸಾಲಿನಲ್ಲಿ ಬರುವ 'ಅವರು ಮರದಿರ್ದಲ್ಲಿ ಮನೆಯ ಹೊಕ್ಕಡೆ' ಎಂಬುದನ್ನು ನೋಡಿದಾಗ ಆತನ ನಿಷ್ಠೆ, ಪ್ರಾಮಾಣಿಕತೆಯನ್ನು ಅರಿಯಬಹುದು. ಇಲ್ಲಿ ಇನ್ನೊಂದು ಪ್ರಶ್ನೆ ಉದ್ಭವವಾಗುತ್ತದೆ. ಕಳ್ಳತನ ಮಾಡುವುದು ಹೇಗೆ ಕಾಯಕವಾಗುತ್ತದೆ ಎಂಬುದು. ಉತ್ತರವಾಗಿ 'ಮರದಿರ್ದವರ ಎಬ್ಬಿಸಿ ಅವರಿಗೆ ಅವರೊಡೆವೆಯ ತೋರಿ, ಎನ್ನೊಡೆವೆಯ ತಂದೆ' ಎನ್ನುವುದು. ಇದು ತುಂಬ ಗಮನಾರ್ಹವಾದ ಮಾತಾಗಿದೆ. ಈ ಸಾಲು ಲೌಕಿಕ ಬದುಕಿನಲ್ಲಿರುವ ಶಿವಭಕ್ತರಲ್ಲದವರ ಮನಕ್ಕೆ ಕನ್ನಹಾಕಿ ಅವರು ಮರೆವಿನ ಮರವಿನಲ್ಲಿ, ಮಾಯಾ ಪ್ರಪಂಚದ ಕತ್ತಲೆಯಲ್ಲಿ ಮಲಗಿರುವವರನ್ನು ಎಬ್ಬಿಸಿ, ಎಚ್ಚರಿಸಿ, ಅವರಿಗೆ ಅರಿವಿನ ದಾರಿ ತೋರುವುದೆ ಆಗಿದೆ. ತನ್ನ ವೃತ್ತಿ ಪರಿಭಾಷೆಯ ಮೂಲಕವೇ ಒಂದು ಅನುಭಾವವನ್ನು ಕಟ್ಟಿಕೊಟ್ಟಿರುವುದು ಈ ವಚನದ ವಿಶೇಷತೆಯಾಗಿದೆ. ತನ್ನ ವೃತ್ತಿ ಪರಿಕರಗಳೇ ಆಧ್ಯಾತ್ಮವನ್ನು ಹೇಳುವ ಮಾಧ್ಯಮಗಳಾಗಿ, ರೂಪಕ, ಪ್ರತಿಮೆಗಳಾಗಿ ಬಂದಿವೆ. ಇದಕ್ಕೆ ಇನ್ನೊಂದು ಆತನ ವಚನವನ್ನು ನೋಡಬಹುದು. ಇದರಲ್ಲಿ ಬಳಕೆಗೊಂಡಿರುವ ಭಾಷೆಯನ್ನು ಗಮನಿಸಬಹುದು.

> ಊರ ಕನ್ನವನಿಕ್ಕಿ ನೀರ ಕದ್ದೆನು.
> ಹೊಹಾಗ ಆರು ಅರಿಯರು,
> ಬಾಹಾಗ ಎಲ್ಲರೂ ಅರಿವರು.
> ಅರಿದರಲ್ಲಾ ಎಂದು ಸುರಿದೆ ನೀರ.
> ಹಾಕಿದ ಮಡಕೆಯು ಕನ್ನಗತ್ತಿಯ ಕೈಯಲ್ಲಿಯದೆ.
> ಅಂಗ ಸಿಕ್ಕಿತ್ತು ಮದನಂಗದೂರ ಮಾರೇಶ್ವರಾ.

(ಸಂಕೀರ್ಣ ವಚನ ಸಂಪುಟ ೨. ವಚನ ಸಂಖ್ಯೆ: ೨೨)

ಈ ವಚನದಲ್ಲಿ ಭಾಷೆಯ ಬಳಕೆಯನ್ನು ಮಾರಿತಂದೆ ಮಾಡಿಕೊಂಡಿರುವ ಕ್ರಮವೇ ಅನನ್ಯವೆನಿಸುತ್ತದೆ. ಪದಗಳ ಪುನಾರಾವರ್ತನೆಗೊಳ್ಳುವ ಮೂಲಕ ಆತನ ಅಭಿವ್ಯಕ್ತಿಯನ್ನು ಮತ್ತು ಆತನ ವಿಚಾರ ಮಂಡನೆಯನ್ನು ಗಟ್ಟಿಗೊಳಿಸುತ್ತಿವೆ ಎಂದೆನಿಸುತ್ತದೆ.

ಊರ–ನೀರ, ಹೊಹಾಗ–ಬಾಹಾಗ, ಆರೂ–ಎಲ್ಲರೂ, ಅರಿಯರು–ಅರಿವರು ಮುಂತಾದ ಪದಗಳು ಹೊಂದಿಕೊಂಡು ವ್ಯಕ್ತವಾಗುವ ಭಾವಕ್ಕೆ, ತಿರುಳಿಗೆ ವಿಶೇಷತೆಯನ್ನು ತಂದುಕೊಡುತ್ತವೆ.

'ಮನೆಯ ಹೊಕ್ಕಡೆ' ಎಂಬ ಸಾಲಿಗಿಂತ 'ಊರ ಕನ್ನವನಿಕ್ಕಿ' ಎಂಬ ಸಾಲು ವಿಸ್ತಾರವನ್ನು ಪಡೆದುಕೊಳ್ಳುತ್ತದೆ. ಇನ್ನೂ 'ಹೊಹಾಗ ಆರೂ ಅರಿಯರು' ಎಂಬ ಮಾತು ಮನುಷ್ಯನ ಬದುಕಿನ ಸಾರ್ಥಕತೆಯನ್ನು ತಿಳಿಸುತ್ತದೆ. ಅವನು ಬದುಕಿದ ರೀತಿಯನ್ನು ಶಾಶ್ವತವಾಗಿ ಉಳಿಯುವುದನ್ನು ಗುರುತು ಮಾಡುವಂತಿದೆ. ಅಮೂರ್ತ ಸ್ವರೂಪವನ್ನು ಪಡೆಯುತ್ತದೆ. ನಿಷ್ಠೆ, ಪ್ರಾಮಾಣಿಕತೆಯ ಬದುಕಿನಿಂದಲೇ ಸಾರ್ಥಕ ಜೀವನ ಎನ್ನುವ ತತ್ವವನ್ನು ಇಲ್ಲಿ ಕಾಣಬಹುದು.

ಎನ್ನ ಕನ್ನಗತ್ತಿಯ ಒಡೆಯಂಗೆ ಆಡನರಿದೆ,
ಕೋಡಗವ ಬಲಿಯನಿಕ್ಕಿದೆ,
ಎನ್ನ ಮಾತಾಪಿತರ ಮೀಸಲನಿಕ್ಕಿದೆ.
ಇಷ್ಟಕ್ಕೆ ಎನಗೆ ಕನ್ನ ಕೂರ್ತು ಬಾರದಿದ್ದಡೆ,
ಮಾರನವೈರಿ ಮಾರೇಶ್ವರನಿಲ್ಲಾ ಎಂದೆ.

(ಸಂಕೀರ್ಣ ವಚನ ಸಂಪುಟ ೨, ವಚನ ಸಂಖ್ಯೆ: ೨೩)

ವಚನದ ಮೊದಲ ಸಾಲಿನಲ್ಲಿ ಒಂದು ನಿವೇದನೆಯಿದೆ. ಮತ್ತು ಅರ್ಪಿತ ಭಾವವೊಂದು ಕಾಣುತ್ತದೆ. ಎನ್ನ ಮತ್ತು ಒಡೆಯ ಅಂದರೆ ಮಾರೇಶ್ವರ ಅಥವಾ ಶಿವ–ಮನುಷ್ಯ. ಇನ್ನೂ ಮುಂದುವರೆದು ತನ್ನನ್ನೆ ತಾನು ಸಂಪೂರ್ಣವಾಗಿ ಅರ್ಪಿಸುವಂತಹ ಕ್ರಿಯೆ ನಡೆದಿದೆ. ಅದಕ್ಕೆ ಬಲಿಯ ರೂಪಕವನ್ನು ಮಾರಿತಂದೆ ನೀಡುತ್ತಾನೆ. ಇದೂ ನಡೆದಿರುವುದು ನಿಷ್ಠೆ, ಪ್ರಾಮಾಣಿಕತೆ ಯಿಂದ, ಅಲ್ಲದೆ ತನ್ನ ವೃತ್ತಿಯನ್ನು ಮಾಡುವವನು ನಾನು ಇದು ನನಗೆ ತೃಪ್ತಿಯನ್ನು ತರಬೇಕಾದುದಾಗಿರಬೇಕು. ಆದ್ದರಿಂದಲೇ ಮುಂದಿನ ಸಾಲಿನಲ್ಲಿ ಒಂದು ಪ್ರಶ್ನೆ ಎದ್ದು ಬಿಡುತ್ತದೆ. ಅದು 'ಎನಗೆ ಕನ್ನ ಕೂರ್ತು ಬಾರದಿದ್ದಡೆ' ಎನ್ನುವಂತಹದ್ದು. ಅಂದರೆ ತಾನು ಮಾಡುವ ಕೆಲಸ ತನಗೆ ಮೆಚ್ಚಿಗೆಯಾಗದಿದ್ದರೆ, ಅಥವಾ ನಿಷ್ಠೆ, ಪ್ರಾಮಾಣಿಕತೆ ಮರೆಯಾದಾಗ, ವೃತ್ತಿಗೆ ಅಥವಾ ಬದುಕಿಕೆ ಬೆಲೆ ಎಲ್ಲಿ. ಗೌರವ ಸಿಗುವುದು ಸಾಧ್ಯವಿಲ್ಲ ಎಂಬ ನಿರ್ಣಯಕ್ಕೆ ಬಂದು ಬಿಡುತ್ತದೆ. ಹೀಗೆ ಮಾಡುವ ಕಾಯಕದಲ್ಲಿ, ಶ್ರಮದಲ್ಲಿ ನಿಷ್ಠೆ ಇಲ್ಲದಿದ್ದಾಗ ನೀನು ಅಲ್ಲಿಲ್ಲ ಎನ್ನುತ್ತಾನೆ. ಅಂದರೆ ವಚನಕಾರರು ತಮ್ಮ ಇಷ್ಟದೈವವನ್ನು ಶಿವನನ್ನು ವೃತ್ತಿಯಲ್ಲಿ ಕಾಣುವ ಪ್ರಯತ್ನವನ್ನು ಮಾಡುತ್ತಾರೆ. ಅವರಿಗೆ ವೃತ್ತಿಯೇ ಶಿವ. ದೇವರೆಂದು ವೃತ್ತಿಯಲ್ಲದೇ ಬೇರೆ ಇಲ್ಲ ಎನ್ನುವ ಸ್ವಭಾವದವರು. ಅವರಿಗೆ ಶ್ರಮದದೇವರು ತಮ್ಮ ದೇವರು. ಹಾಗಾಗಿ ತಮ್ಮ ವೃತ್ತಿಯ ತೃಪ್ತಿ ಅವರಿಗೆ ಲಭಿಸದಿದ್ದರೆ ಅಲ್ಲಿ ಶಿವನಿಲ್ಲ ಎಂಬ ಉತ್ತರವನ್ನೆ ಕಾಣುತ್ತಾರೆ.

ಕನ್ನಡಿ ಕಾಯಕದ ಅಮ್ಮಿದೇವಯ್ಯ

ವಚನಕಾರರು, ಸಂತರು, ಅನುಭಾವಿಗಳು, ಭಕ್ತರು ಆಧ್ಯಾತ್ಮ, ಜೀವಿಗಳಾಗಿರುವುದು ಸಾಮಾನ್ಯ ಮತ್ತು ಸಹಜವಾದದ್ದು. ಸಾಂಸ್ಥಿಕ ಧರ್ಮದ, ಅದರ ತತ್ವ, ಆಚರಣೆಗಳನ್ನು ಪ್ರಸಾರ ಮಾಡುವವರು ಆಧ್ಯಾತ್ಮದ ಕಡೆಗೆ ಒಲವಿರುವುದಿಲ್ಲ. ತಾವು ನಂಬಿಕೊಂಡ ಧರ್ಮ, ಅದಕ್ಕೊಂದು ದೇವರು,

ಗ್ರಂಥ ಮಾಡಿಕೊಂಡು ಅದರ ಚೌಕಟ್ಟಿನಲ್ಲಿ ಆಚರಣೆ, ಸಂಪ್ರದಾಯಗಳನ್ನು ಮಾಡಿಕೊಂಡಿರುತ್ತಾರೆ. ಆದರೆ ವಚನಕಾರರು, ಶರಣರು, ಆಧ್ಯಾತ್ಮಜೀವಿಗಳು ಅಂತಹ ಚೌಕಟ್ಟುಗಳನ್ನು ಮೀರಿ ಬೆಳೆದವರಾಗಿರುತ್ತಾರೆ. ದೇವರು, ಧರ್ಮ, ದೇವಾಲಯ ಮುಂತಾದ ವ್ಯವಸ್ಥೆಯನ್ನು ಒಪ್ಪಿ ಅಪ್ಪಿಕೊಂಡವರಲ್ಲ. ಇದರಾಚೆಗೆ ನಡೆದು ದೇಹ, ಮನಸ್ಸು, ಆತ್ಮ-ಪರಮಾತ್ಮ ಇವುಗಳ ಅಂತರ ಸಂಬಂಧ, ಅವುಗಳ ಶುದ್ಧತೆ, ಅಂತರಂಗ ಬಹಿರಂಗದಲ್ಲಿ ಏಕತೆ ಮುಂತಾದ ಯೋಗ, ಸಾಧನೆಯ ಆಧಾರಿತ ಜೀವನವನ್ನು ಬಯಸಿರುತ್ತಾರೆ. ಶಿವನನ್ನು ಭಕ್ತರು ತಾವೇ ರೂಪಿಸಿಕೊಂಡು, ಅದರ ಸ್ವರೂಪವನ್ನು ಸಾರ್ವತ್ರಿಕಗೊಳಿಸಿ. ಆರಾಧಿಸುವವರು ಇರುತ್ತಾರೆ. ಇಂತವರನ್ನು ಸಾಮಾನ್ಯವಾಗಿ ಆಧ್ಯಾತ್ಮ ಜೀವಿಗಳು ಎಂದು ಕರೆಯಲಾಗುತ್ತದೆ. ಈ ಬಗೆಯ ಆಧ್ಯಾತ್ಮಿಗಳು ತಮ್ಮ ಅನುಭವಗಳನ್ನು ಅನುಭಾವವಾಗಿಸಿಕೊಂಡು ಅದನ್ನು ಅಕ್ಷರಗಳ ಮೂಲಕ ಅಭಿವ್ಯಕ್ತಿಸುವುದು ಕಂಡು ಬರುತ್ತದೆ. ಇಂತಹ ಮಾತು, ಸಾಹಿತ್ಯ ಲೋಕದ ಜನರಿಗೆ ತಿಳಿಹೇಳುವ, ಅರಿವು ಮೂಡಿಸುವ, ಲೋಕ ನೀತಿಯನ್ನು ಭೋಧಿಸುವ ಕೆಲಸವನ್ನು ಮಾಡುತ್ತಿರುತ್ತವೆ.

ಕನ್ನಡಿ ಕಾಯಕದ ಅಮ್ಮಿದೇವಯ್ಯನು ಅನುಭಾವಿಯೂ, ಆಧ್ಯಾತ್ಮಜೀವಿಯೂ, ವಚನಕಾರನೂ ಆಗಿದ್ದಾನೆ. ಹನ್ನೆರಡನೇ ಶತಮಾನದ ವಚನಕಾರರ ಸಾಮಾಜಿಕ-ಧಾರ್ಮಿಕ ರಾಜಕೀಯವಾಗಿ ನಡೆದ ಚಳುವಳಿಯಲ್ಲಿ ಕಾಣಿಸಿಕೊಂಡು, ಶಿವಭಕ್ತಿಯಿಂದ ಶರಣನಾಗಿ ಕನ್ನಡದ ನೆಲದಲ್ಲಿ ಪಡಿ ಮೂಡಿದ್ದಾನೆ. ಈತನದು ಕ್ಷೌರಿಕ ವೃತ್ತಿಯಾಗಿದ್ದು, ಅದೇ ಜಾತಿಯಿಂದ ಬಂದವನಾಗಿದ್ದಾನೆಂದು ಹಲವು ವಿದ್ವಾಂಸರು ಗುರುತಿಸಿದ್ದಾರೆ. ಅದು ಈತನ ವಚನಗಳಲ್ಲಿ ಬಳಕೆಗೊಂಡಿರುವ ಪರಿಭಾಷೆಗಳನ್ನು, ವೃತ್ತಿಯಲ್ಲಿ ಬಳಕೆಗೊಳ್ಳುವ ಪರಿಕರಗಳ ಮೂಲಕ ಈತನ ಜಾತಿ ಮತ್ತು ವೃತ್ತಿಯನ್ನು ನಿರ್ಧರಿಸಲಾಗಿದೆ. ಉಪಲಬ್ಧವಿರುವ ಅಮ್ಮಿದೇವಯ್ಯನ ವಚನಗಳ ಸಂಖ್ಯೆ ಹತ್ತು. ಇವುಗಳಲ್ಲಿ ಆತನ ವೃತ್ತಿಯನ್ನು ಗುರುತಿಸಬಹುದಾಗಿದೆ. ವಚನಗಳನ್ನು ಅಭಿವ್ಯಕ್ತಿಸುವ ಕ್ರಮವನ್ನು ಅಭ್ಯಸಿಸುವುದಾದರೆ ಅನೇಕ ವಚನಗಳಲ್ಲಿ ಈತನ ಆಧ್ಯಾತ್ಮಿಕ ಸಿದ್ಧಾಂತವೊಂದನ್ನು ಅರಿಯಬಹುದಾಗಿದೆ. ಇತರ ವೃತ್ತಿ ನಿರತ ವಚನಕಾರರಂತೆ ಈತನಿಗೆ ವೃತ್ತಿ ಶಿವ ಸ್ವರೂಪವಾದುದು. ಅದರ ಗೌರವ ಪ್ರಾಪ್ತಿಗಾಗಿ ಅದಕ್ಕೆ ನಿಷ್ಠೆ ಪ್ರಾಮಾಣಿಕತೆಯನ್ನು ಅರ್ಪಿಸುವ ಮನೋಭಾವ ಈತನದು. ಬಸವಣ್ಣನ ನೇತೃತ್ವದ ಶರಣ ಚಳುವಳಿಯನ್ನು ಕೇವಲ ಒಂದೆ ಆಯಾಮದಿಂದ ನೋಡಲು ಬರುವಂತಿಲ್ಲ. ಅದೊಂದು ಹಲವು ಆಯಾಮಗಳೊನ್ನೊಳಗೊಂಡ ಸಮಗ್ರ ಚಳವಳಿ. ಹಾಗಾಗಿಯೆ ಅಲ್ಲಿನ ಸಮೂಹದಲ್ಲಿರುವ ವಚನಕಾರರ ವಚನಗಳನ್ನು ಒಂದೆ ಆಯಾಮ, ದೃಷ್ಟಿಯಿಂದ ನೋಡುವುದು ಬಹುಶಃ ಸಂಕುಚಿತವಾದುದ್ದಾಗಿದೆ. ವೃತ್ತಿ ಆಧಾರಿತ ವಚನಗಳನ್ನು ಹಲವು ಬಗೆಯಲ್ಲಿ ಅರ್ಥಮಾಡಿಕೊಳ್ಳಬೇಕಿದೆ. ಅದಲ್ಲಿರುವ ಆಧ್ಯಾತ್ಮವನ್ನು, ಸಾಮಾಜಿಕತೆಯನ್ನು, ನೀತಿ ಭೋದನೆಯನ್ನು, ಭಕ್ತಿ, ಧರ್ಮ ಪ್ರಚಾರವನ್ನು ಹೀಗೆ ಮುಂತಾಗಿ ವಚನಗಳ ರಚನ ಕ್ರಮಗಳೊನ್ನಳಗೊಂಡಿರುತ್ತವೆ.

ಅಮ್ಮಿದೇವಯ್ಯನಂತ ವೃತ್ತಿನಿರತರಲ್ಲೂ ವಚನಗಳ ಅಭಿವ್ಯಕ್ತಿಯ ಸ್ವರೂಪವನ್ನು ಚರ್ಚಿಸಬಹುದಾಗಿದೆ.

ಚಿರ ಹಡಪಕ್ಕೆ ಅಳವಲ್ಲ.
ಕತ್ತಿಯ ಬಸವಣ್ಣಕೊಟ್ಟ,
ಕತ್ತರಿಯ ಚನ್ನಬಸವಣ್ಣ ಕೊಟ್ಟ,
ಕಿತ್ತು ಹಾಕುವ ಚಿಮ್ಮಟಿಕೆಯ ಪ್ರಭುರಾಯ ಕೊಟ್ಟ,
ಮಿಕ್ಕಾದ ಎನ್ನಯ ಮುಟ್ಟ ಸತ್ಯ ಶರಣರು ಕೊಟ್ಟರು.
ದೃಷ್ಟವ ತೋರಿ ಅಡಗುವ ಮುಕುರವ ಕೊಟ್ಟವರ ಹೇಳುವೆನು.
ದೃಷ್ಟ ಪ್ರಸಿದ್ಧ ಅಪ್ರತಿಮ ಪ್ರಸನ್ನ
ಚನ್ನ ಬಸವಣ್ಣಪ್ರಿಯ ಕಮಳೇಶ್ವರ ಲಿಂಗವು
ಎನಗೆ ದೃಷ್ಟವ ಕೊಟ್ಟು ತಾ ಬೆಳಗಿನೊಳಗಾದ!

(ಸಂಕೀರ್ಣ ವಚನ ಸಂಪುಟ ೨, ವಚನ ಸಂಖ್ಯೆ: ೧೪)

ಈ ವಚನದಲ್ಲಿ ಅಮ್ಮಿದೇವಯ್ಯ ತನ್ನ ವೃತ್ತಿಯಲ್ಲಿ ಬಳಕೆಗೊಳ್ಳುವ ವಸ್ತುಗಳ, ಪರಿಕರಗಳ ಮಾಹಿತಿಯನ್ನು ನೀಡುತ್ತಾನೆ. ಇದು ಆತನ ವೃತ್ತಿಯನ್ನು ಸ್ಪಷ್ಟಪಡಿಸುತ್ತದೆ. ಈ ವಚನದ ಮೂಲಕ ಶರಣ ಸಮುದಾಯದ ನೇತಾರಿಕೆಯನ್ನು ವಹಿಸಿಕೊಂಡಿರುವಂಥ ಪ್ರಮುಖರನ್ನು ಸ್ಮರಿಸುವ ರೀತಿಯಲ್ಲಿಯೇ ವ್ಯಕ್ತಿಗೊಳಿಸುತ್ತಾನೆ. ತನ್ನ ವೃತ್ತಿಯನ್ನೇನೋ ತಾನು ಮಾಡುತ್ತಾನೆ. ಆದರೆ ಆ ವೃತ್ತಿಗೆ ಒಂದು ಮಹತ್ವದ ಸ್ಥಾನವನ್ನು ನಿರ್ಮಿಸುವ ಪ್ರಯತ್ನ ಇಲ್ಲಿ ನಡೆದಿದೆ ಎಂದೇ ಹೇಳಬೇಕಾಗುತ್ತದೆ. ಇಡಿ ವಚನ, ಶರಣ ಆಂದೋಲನದ ಒಟ್ಟು ಆಶಯವನ್ನು ಇಲ್ಲಿ ಕಟ್ಟಿಕೊಡುವ ಯತ್ನ ಅಮ್ಮಿದೇವಯ್ಯನದಾಗಿದೆ. ತನ್ನ ವೃತ್ತಿ ಸಲಕರಣೆಗಳನ್ನು, ವೃತ್ತಿಯನ್ನು ಆಧ್ಯಾತ್ಮಿಕರಿಸುತ್ತಾನೆ. ತನ್ನತನದ ಹುಡುಕಾಟಕ್ಕೆ ಸಾಧನಗಳಾಗಿ ವೃತ್ತಿ ಮತ್ತು ಅದರ ವಸ್ತುಗಳು ಬಂದರೆ, ತನ್ನ ಅರಿವಿನ ಹುಡುಕಾಟಕ್ಕೆ ಬಸವಣ್ಣ, ಅಲ್ಲಮಪ್ರಭು, ಚನ್ನಬಸವಣ್ಣ, ಮತ್ತು ಅನೇಕ ಶರಣರು ಮಾರ್ಗದರ್ಶಕರಾಗಿದ್ದಾರೆ. ಇಂತಹ ಮಾಗದರ್ಶಕರನ್ನು, ತನ್ನ ಸಾಧನೆಯ ಒಂದೊಂದೆ ಮಾರ್ಗದ ಅರಿವಿನ ದಾರಿಯನ್ನು ತೋರಿದವರು ಎನ್ನುತ್ತಾನೆ. ಅದು ತನ್ನ ವೃತ್ತಿಯ ಪರಿಕರಗಳನ್ನು ನೀಡಿದ್ದಾರೆ ಎಂಬ ಮಾತಿನಲ್ಲಿರುವುದು. ಈ ವಚನದಲ್ಲಿ ಒಂದು ಧೈನ್ಯತೆಯ ಭಾವ ಅಡಗಿರುವದನ್ನು ನೋಡುತ್ತೇವೆ. ಜೀವನದ ಬಗೆಗಿನ ನಿಲುವುಗಳನ್ನು ಇಲ್ಲಿ ಗುರುತಿಸಬಹುದು. ಅನುಬಾವಿಗಳು ಜೀವನವನ್ನು ನಿರಾಕರಿಸಿದವರಲ್ಲ. ಆದರೆ ಇದ್ದು ಇಲ್ಲದಂತಿರುವ ಭಾವ ಅವರದು. ವೃತ್ತಿಜೀವನ ಇರುವುದನ್ನು ಸೂಚಿಸಿದರೆ, ಬದುಕು ಇಲ್ಲದ್ದರೆಡೆಗೆ ಸಾಗುವುದನ್ನು ನೋಡಬಹುದಾಗಿದೆ. 'ದೃಷ್ಟವ ತೋರಿ ಅಡಗುವ ಮುಕುರವ ಕೊಟ್ಟವರ ಹೇಳುವೆನು' ಎಂಬ ಮಾತನ್ನು ಆಡಿರುವುದನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ, ಆತನ ಸಾಧನೆಯ ಶ್ರಮವನ್ನು ಅರಿಯಬಹುದು. 'ಕನ್ನಡಿ' ಎಂದರೆ ವಾಸ್ತವ ಅಥವಾ ಸತ್ಯ. ಭವವನ್ನು ದಾಟುವುದೇ ಜೀವನದ ಅಂತಿಮ ಸತ್ಯವಾಗಿದೆ. ಅಂತಹ ಸತ್ಯದ ಕನ್ನಡಿಯನ್ನು ಕೊಟ್ಟ ಶರಣ ಸಮೂಹಕ್ಕೆ, ವಚನ ಸಿದ್ಧಾಂತಕ್ಕೆ ನಿಷ್ಠನಾಗಿಯೇ ನುಡಿಯುತ್ತಾನೆ.

ಹಿಡಿಯಿಲ್ಲದ ಶಸ್ತ್ರ, ಕೀಲಿಲ್ಲದ ಕತ್ತರಿ
ಉಭಯ ಒಡಗೂಡದ ಚಿಮ್ಮುಟ ರೂಹಿಲ್ಲದ ಚಣ
ಹಲ್ಲಿಲ್ಲದ ಹಣಿಗೆ, ಮಲವಿಲ್ಲದ ಬೆಳಗಿನ ಮುಕುರವ ಹಿಡಿದು

ಶರಣರೆ ಅಡಿವಿಡಿದಾಡ ಬಂದೆ.
ಚನ್ನಬಸವಣ್ಣಂಗೆ ಭೃತ್ಯನಾಗಿ, ಶರಣ ತತಿಗೆ ಲೆಂಕನಾಗಿ
ಸತ್ಯ ಗುರುಚರದ ಕತ್ರುಸ್ವರೂಪಕ್ಕೆ ಡಿಂಗರಿಗ
ಉಭಯ ಡಿಂಗರಿಗರ ಪ್ರತಿ ಡಿಂಗರಿಗರ ಕಂದನೆಂದು ಪ್ರತಿಪಾಲಿಸಿಕೋ
ಚನ್ನಬಸವಣ್ಣಪ್ರಿಯ ಕಮಳೇಶ್ವರ ಲಿಂಗಾ.

(ಸಂಕೀರ್ಣ ವಚನ ಸಂಪುಟ ೨, ವಚನ ಸಂಖ್ಯೆ: ೨೧)

ಈ ವಚನದಲ್ಲಿ ಅಮ್ಮಿದೇವಯ್ಯನು ತನ್ನ ವೃತ್ತಿಯ ಚಿತ್ರಣವನ್ನು ಕಟ್ಟಿಕೊಡುವದನ್ನು ನೋಡುತ್ತೇವೆ. ಮೊದಲು ನೋಡಿದ ವಚನದ ಅಭಿವ್ಯಕ್ತಿ ಕ್ರಮಕ್ಕೂ ಈ ವಚನದ ಅಭಿವ್ಯಕ್ತಿ ಕ್ರಮಕ್ಕೂ ತುಂಬಾ ವ್ಯತ್ಯಾಸಗಳಿವೆ. ಮೊದಲ ವಚನದಲ್ಲಿ ಬಸವಣ್ಣ, ಚನ್ನಬಸವಣ್ಣ, ಅಲ್ಲಮ ಮುಂತಾದ ವಚನಕಾರರು ಕೊಟ್ಟ ವಸ್ತುಗಳು ಇರುವಿಕೆಯನ್ನು ಸೂಚಿಸುತ್ತವೆ. ಆದರೆ ಈ ವಚನದ ಅಭಿವ್ಯಕ್ತಿಯಲ್ಲಿ ಅಮ್ಮಿದೇವಯ್ಯ ಇಲ್ಲದ್ದರ ಸ್ಪಷ್ಟೀಕರಣ ನೀಡುತ್ತಾನೆ. ಅದರಲ್ಲಿ ಸ್ವೀಕಾರಭಾವ ಕಂಡರೆ ಇದರಲ್ಲಿ ತಿರಸ್ಕಾರದ ಭಾವವಿರುವುದನ್ನು ಗುರುತಿಸಬಹುದಾಗಿದೆ. ಒಂದು ತೃಪ್ತ ಭಾವನೆಯೆನ್ನೊಳಗೊಂಡ ವಿನೀತತೆಯನ್ನು, ವಿದೇಯತೆಯ ಭಾವನೆಯನ್ನು ಇಲ್ಲಿ ಕಾಣುತ್ತೇವೆ. 'ಡಿಂಗರಿಗ ಪ್ರತಿ ಡಿಂಗರಿಗರ ಕಂದ' ಎಂಬ ಧ್ವನಿಯೇ ಹೇಳುವಂತೆ ಸೇವೆ ಮಾಡುವವ ಸೇವೆಯನ್ನು ಮಾಡುವವರ ಮಗನಾಗಲು ಬಯಸುತ್ತಾನೆ ಅಮ್ಮಿದೇವಯ್ಯ.

ನಾ ಶಸ್ತ್ರವ ಹಿಡಿದಲ್ಲಿ
ಮುಮ್ಮುಖದಲಿ ಒಂದನಿರಿಸಿ ಎರಡ ತೊಡೆವೆನು.
ಪೂರ್ವಪಕ್ಷದಲ್ಲಿ ಆರನಿರಿಸಿ ಮೂರ ತೊಡೆವೆನು.
ಉತ್ತರ ಪಕ್ಷದಲ್ಲಿ ಆರನಿರಿಸಿ ಮುವತ್ತಾರ ತೊಡೆವೆನು.
ಮೇಲಣ ದಂಡೆಯನೊತ್ತುವಲ್ಲಿ ಎರಡ ನಿಲಿಸಿ
ಇಪ್ಪತ್ತೈದ ತೊಡೆವೆನು.
ಇಂತೀ ಕೆಲಸವ ಸಾಧಿಸಿದಲ್ಲಿ
ಕಂಕುಳ ತಟ್ಟೆನು, ಮೂಗುವ ಮುಟ್ಟೆನು,
ಮಂಡೆಯ ಬೋಳಿಸುವೆ, ಚಂಡಿಕೆಯ ನಿರಿಸುವೆನು
ಚನ್ನಬಸವಣ್ಣ ಪ್ರಿಯಾ ಕಮಳೇಶ್ವರಲಿಂಗ ಸಾಕ್ಷಿಯಾಗಿ.

(ಸಂಕೀರ್ಣ ವಚನ ಸಂಪುಟ ೨, ವಚನ ಸಂಖ್ಯೆ: ೧೭)

ಅಮ್ಮುದೇವಯ್ಯನು ಮಾಡುವ ವೃತ್ತಿಯ ಬಗ್ಗೆ ವಿವರಣೆ ಈ ವಚನದಲ್ಲಿ ಕಾಣತ್ತದೆ. ಇದೊಂದು ಲೌಕಿಕ ಬದುಕಿನ ವಿವರಣೆಯಂತೆ ಕಾಣುತ್ತದೆ. ಅದರೆ ಅದರ ಒಳಗೆ ತುಂಬ ಗಹನವಾದ ಚರ್ಚೆಯೇ ಏರ್ಪಟ್ಟಿರುವುದನ್ನು ನೋಡುತ್ತೇವೆ. ಸಂಪೂರ್ಣವಾಗಿ ಇದೊಂದು ಆಧ್ಯಾತ್ಮಿಕ ಅನುಭವದ ಅಭಿವ್ಯಕ್ತಿಯಾಗಿಯೇ ಕಾಣುತ್ತದೆ. ತನ್ನ ವೃತ್ತಿಯ ಅನುಭವಗಳನ್ನು ಇಲ್ಲಿ ಅನುಭಾವವಾಗಿಸಿದ್ದಾನೆ. ಏಕಕಾಲದಲ್ಲಿ ತಾನು ನಂಬಿರುವ ಸಿದ್ಧಾಂತದ ಪ್ರತಿಪಾದನೆಯನ್ನು,

ವಚನತತ್ವ ನಿಷ್ಠೆಯನ್ನು, ತನ್ನ ವೃತ್ತಿನಿಷ್ಠೆಯನ್ನು ಇಲ್ಲಿ ತೋರ್ಪಡಿಸುತ್ತಾನೆ. ಮುಖ್ಯವಾಗಿ ತನ್ನ ಕಾಯಕದ ಬಗ್ಗೆ, ಹೇಳುತ್ತಾ ಹೇಳುತ್ತ ಸಾಗುತ್ತಿರುವ ವಚನ ಕಾಯಕನಿಷ್ಠೆಯನ್ನು ಪ್ರತಿಪಾದಿಸುತ್ತಿರುವುದನ್ನು ಗಮನಿಸಬಹುದು. ತೊಡೆವೆನು, ತಟ್ಟೆನು, ಮುಟ್ಟೆನು ಎಂಬ ನಕಾರಾತ್ಮಕ ಪದರಚನೆಗಳೇ ವಚನದ ಅಭಿವ್ಯಕ್ತಿಗೆ ಗಟ್ಟಿತನವನ್ನು ಒದಗಿಸಿವೆ.

ನಿಜ ಬೋಳಿಂಗೆ ಲೋಚು ಮಾಡಲೇತಕ್ಕೆ?
ಚಿದ್ಘನ ಬೋಳಿಂಗೆ ವೈಭವದ ಮದನನ ಶೃಂಗಾರದ ಹಾರವೇತಕ್ಕೆ?
ಸಕಲ ಸುಖ ಬೋಳಿಂಗೆ ಅಖಿಳ ಸುಖಗೋಷ್ಠಿ ಏತಕ್ಕೆ?
ಸರ್ವಸಂಗ ಪರಿತ್ಯಾಗ ನಿರ್ಮಲ ಪರನಿರ್ವಾಣಿಗೆ
ತ್ರಿಬಂದದಲ್ಲಿಸಿಲುಕಿ ಕಂಡವರಿಗೆ ಕಾರ್ಪಣ್ಯಬಡಲೇತಕ್ಕೆ?
ಇಂತೀ ಗುಣದಲ್ಲಿ ತಾವು ತಾವು ಬಂದುದನರಿಯದೆ
ತಮಗೆ ವಂದಿಸಿ ನಿಂದಿಸುವವರಂಗವನರಿಯದೆ
ಮತ್ತೆ ಲಿಂಗಾಂಗಿಗಳೆಂದು ನುಡಿವ ಜಗ ಸರ್ವಾಂಗ ಭಂಡರ ಕಂಡು
ನುಡಿದಡೆ ಸಮಯಕ್ಕೆ ಹಾನಿ.
ಸುಮ್ಮನಿದ್ದಡೆ ಜ್ಞಾನಕ್ಕೆ ಭಂಗ.
ಉಭಯವನೂ ಪ್ರತಿಪಾದಿಸದಿದ್ದಡೆ,
ತನ್ನಯ ಭಕ್ತಿಗೆ ಇದಿರೆಡೆಗೇಡು,
ಇದು ಚುನ್ನವಲ್ಲ, ಎನ್ನಯಕೇಡು,
ಈ ಗುಣ ಚನ್ನಬಸವಣ್ಣಪ್ರಿಯ
ಕಮಳೇಶ್ವರ ಲಿಂಗಸಾಕ್ಷಿಯಾಗಿ

(ಸಂಕೀರ್ಣ ವಚನ ಸಂಪುಟ ೨, ವಚನ ಸಂಖ್ಯೆ: ೧೮)

ಅಮ್ಮಿದೇವಯ್ಯನು ಸಮಾಜವನ್ನು, ತನ್ನ ಸುತ್ತಮುತ್ತಲಿನ ವೇಷದಾರಿಗಳನ್ನು ಆಚಾರ ಸೀಮಿತರನ್ನು ವಿಡಂಬಿಸಿರುವುದನ್ನು ಈ ವಚನದಲ್ಲಿ ಸ್ಪಷ್ಟವಾಗಿದೆ. ಸಾಮಾಜಿಕವಾಗಿ ವಿಶ್ಲೇಷಣೆಗೆ ದಾರಿ ಮಾಡುವ ಈ ವಚನದಲ್ಲಿ, ಅಂದಿನ ಸಮಾಜದ ಚಿತ್ರಣ ದೊರೆಯುತ್ತದೆ. ಆತನೊಳಗೆ ಎದ್ದಿರುವ ಪ್ರಶ್ನೆಗಳು ಸಾರ್ವತ್ರಿಕಗೊಂಡು ಒಂದು ಸಮಾಜಿಕ ವ್ಯವಸ್ಥೆಯ ವಿಮರ್ಶೆಯಾಗಿ ನಿಲ್ಲುತ್ತವೆ. ಹುಸಿ ಆಧ್ಯಾತ್ಮಿಗಳನ್ನು, ಅವರ ನಡೆ ನುಡಿಗಳನ್ನು ಟೀಕಿಸುತ್ತಾನೆ.

ಈ ವಚನದ ಐದು ಸಾಲುಗಳಲ್ಲಿ ಪ್ರಶ್ನಾರ್ಥಕ ಚಿಹ್ನೆಗಳಿದ್ದು, ಪ್ರಶ್ನೆಗಳಿವೆ. ಅಂದರೆ ಮನುಷ್ಯ ನಡೆ-ನುಡಿಯಲ್ಲಿ ಏಕವಾಗಿಲ್ಲದಿರುವದನ್ನು ಪ್ರಶ್ನಿಸುತ್ತಾನೆ. ಮತ್ತು ಸರ್ವಸಂಗ ಪರಿತ್ಯಾಗಿಗಳಾದ ಆಧ್ಯಾತ್ಮ-ಜೀವಿಗಳು ಕೇವಲ ವೇಷದಾರಿಗಳಾಗಿದ್ದು ಅವರ ನಿಷ್ಠೆಯನ್ನು, ಪ್ರಾಮಾಣಿಕತೆಯನ್ನು ಪ್ರಶ್ನಿಸುತ್ತಾನೆ. ಅಂದರೆ ಅವರ ಕುಹಕತನವನ್ನು ಮೋಸಗಾರಿಕೆಯನ್ನು ಟೀಕಿಸುತ್ತಾನೆ. ಲೋಕದಲ್ಲಿರುವ ಅಧಿಕಾರ, ಹಣ, ಹೆಣ್ಣು, ಬಂದು-ಬಳಗ ಎಂಬ ಮೋಹದ ಬಲೆಯಲ್ಲಿಯೇ ಬಿದ್ದು ಒದ್ದಾಡುವವರನ್ನು ಸರ್ವಾಂಗ ಭಂಡರು ಎಂದು ಜರಿಯುತ್ತಾನೆ. ಮತ್ತು ಅಂತವರ ಬಗ್ಗೆ ಮಾತಾಡಿದರೆ ಸಮಯ ವ್ಯರ್ಥ ಎನ್ನುತ್ತಾನೆ. ಮತ್ತೆ ಹಾಗೆ ನುಡಿಯದಿದ್ದರೆ

ತನ್ನ 'ಜ್ಞಾನಕ್ಕೆ ಭಂಗ' ಎಂದು ಈ ಎರಡನ್ನು ಪ್ರತಿಪಾದಿಸುವ ಸಮಯದ ಜ್ಞಾನಿಯಾಗಿ ಕಾಣುತ್ತಾನೆ. ಹೀಗೆ ಅದವರಿತು ನಡೆಕೊಂಬುವ ರೀತಿಯನ್ನು ಈ ವಚನದಲ್ಲಿ ಕಾಣುತ್ತೇವೆ.

ವಚನ ಅಭಿವ್ಯಕ್ತಿ ಕ್ರಮವೇ ವಿಶಿಷ್ಟವಾಗಿದೆ. ಪ್ರಶ್ನೆಯನ್ನು ಕೇಳುವ ರೀತಿಯಲ್ಲಿ ಮೊದಲ, ಎರಡನೇ, ಮೂರನೇ, ಐದನೇ ಸಾಲಿನಲ್ಲಿ ಪ್ರಶ್ನೆಗಳಿದ್ದು, ಮುಂದಿನ ಸಾಲಿನಲ್ಲಿ ಪ್ರಶ್ನಾರ್ಥಕವಿಲ್ಲದೆ ಪ್ರಶ್ನೆಯಿದ್ದು, ನಂತರ ತನ್ನದೇ ಆದ ಸಿದ್ಧಾಂತವನ್ನು ಉತ್ತರೋಪಾದಿಯಲ್ಲಿ ಪ್ರತಿಪಾದಿಸಿದ್ದಾನೆ. ಒಳ್ಳೆಯ-ಕೆಟ್ಟದ್ದರ ಒಂದು ಪಟ್ಟಿಯನ್ನು ನೀಡುತ್ತಾನೆ. ಮತ್ತು ಒಳ್ಳೆಯದರ ಶಾಶ್ವತತೆಯನ್ನು, ಮಹತ್ವವನ್ನು ಹೇಳುತ್ತಾನೆ. ಪ್ರಕೃತಿಯೊಂದಿಗೆ ಮಾನವ ವಿರೋಧಿತನದಲ್ಲಿ ನಡೆದುಕೊಳ್ಳುವ ಮತ್ತು ಅದರ ನಿಯಮದ ಪ್ರತಿಯಾಗಿ ತನ್ನದೇ ಆದ ತನ್ನ ಸ್ವಾರ್ಥದ ಬದುಕನ್ನು ಕಟ್ಟಿಕೊಳ್ಳುವುದರ ಬಗ್ಗೆ ಬೇಸರಿಸಿಕೊಂಡೇ ನುಡಿಯುತ್ತಾನೆ. ಅಲ್ಲದೆ ಮನುಷ್ಯನ ವೈಭವದ ಬದುಕನ್ನು ಚಿತ್ರಿಸುತ್ತದೆ. ಅದರಿಂದ ಬೀರುವ ಪರಿಣಾಮ ವಿವೇಕ ಶೂನ್ಯತೆ, ನಿಯಮ ಬಾಹಿರ ಬದುಕು, ಮಾನವನು ಅಥವಾ ಸಾಧಕರು ಮಾಡಬೇಕಾದ ಸತ್‌ಕ್ರಿಯೆಯನ್ನು ಮರೆತು ಬದುಕುತ್ತಿರುವುದನ್ನು ಎತ್ತಿ ತೋರಿಸಿದ ರೀತಿಯಲ್ಲಿ ಕಾಣುವುದಲ್ಲದೇ, ಅಂತಹ ವಿರೋಧಿತನವನ್ನು ವಿರೋಧಿಸುತ್ತ, ಸರಿದಾರಿಯನ್ನು, ನಿಷ್ಠೆಯ ಬದುಕನ್ನು ತೋರಿಸುವ ಮಾರ್ಗದರ್ಶನವನ್ನು ಅಮ್ಮಿದೇವಯ್ಯ ಈ ವಚನದ ಮೂಲಕ ಮಾಡುತ್ತಾನೆ. ಹಾಗಾಗಿ ಅಮ್ಮಿದೇವಯ್ಯ ತನ್ನ ಕಾಯಕದ ಪರಿಭಾಷೆಗಳ ಮೊರೆ ಹೋಗಿರುವುದು ಮತ್ತು ಅದರ ಮೂಲಕ ವಚನಗಳನ್ನು ಅಭಿವ್ಯಕ್ತಿಸಿರುವ ವೃತ್ತಿನಿರತ ವಚನಕಾರನಾಗಿದ್ದಾನೆ.

ಒಕ್ಕಲಿಗ ಮುದ್ದಣ್ಣ

ವಚನಕಾರರು ನಡೆಸಿದ ಆಂದೋಲನದ ಒಂದು ಭಾಗವೆಂದರೆ ವೃತ್ತಿ ಸಮಾನತೆ, ಕಾಯಕತತ್ವದ ಪ್ರತಿಪಾದನೆ ಶ್ರಮಗೌರವ ಸಿದ್ಧಾಂತ ಪ್ರಸಾರಣೆ ಇದನ್ನು ಪ್ರತಿಪಾದಿಸಲು ಅವರು ಅವೈಚಾರಿಕತೆಯನ್ನು ದೂರೀಕರಿಸಿದರು. ಪ್ರಕೃತಿ ನಿಯಮವನ್ನು, ಅದರ ಶಕ್ತಿಯನ್ನು ತಮ್ಮ ತಮ್ಮ ಅನುಭವದ ಮೂಲ ದೈವಕ್ಕೆ ಕರೆದುಕೊಂಡರು. ಇದನ್ನು ಸಕಾರಾತ್ಮಕವಾಗಿ ಪರಿಭಾವಿಸಿ, ಅದಕ್ಕೆ ಅಂಟಿಕೊಳ್ಳುವ ಸ್ವಭಾವ ಅವರದಲ್ಲ. ಅದ್ದರಿಂದಲೇ ಅಂದಿನ ಜನ ಜೀವನದ ಶೋಷಕ ಸಂಕೇತಗಳನ್ನು, ಮೂಢ ಪದ್ಧತಿಗಳನ್ನು ತಿರಸ್ಕರಿಸಿದರು. ವೈಯಕ್ತಿಕ ಅರಿವಿಗೆ, ಅನುಭವಕ್ಕೆ ನಿಲುಕುವ ದೈವವನ್ನು, ತತ್ವ ಸಿದ್ಧಾಂತ ಮಾರ್ಗವನ್ನು ನೆಲೆಗೊಳಿಸಿದರು. ಎಲ್ಲ ವಚನಕಾರರ ವಚನಗಳು ಜಗತ್ತಿನೊಡನೆಯ, ಪ್ರಕೃತಿಯೊಡನೆಯ ತಮ್ಮ ಅನುಭವದ, ಚಿಂತನೆಯ ಹಿನ್ನೆಲೆಯಲ್ಲಿಯೆ ಆಧ್ಯಾತ್ಮಿಕತೆಯನ್ನು ನಿರೂಪಿಸುತ್ತವೆ.

ಬಸವಣ್ಣನ ಆಂದೋಲನಕ್ಕೆ ಒಂದು ರೀತಿಯಲ್ಲಿ ಬಲವನ್ನು ತುಂಬಿದವರು ವೃತ್ತಿನಿರತ ವಚನಕಾರರು. ಕುಲಮೂಲದ ವೃತ್ತಿಯ ಜೊತೆಗೆ ಸಾಮಾಜಿಕ-ಧಾರ್ಮಿಕ ಮುಂತಾದ ಕ್ಷೇತ್ರಗಳಲ್ಲಿ ಸುಧಾರಣೆ ತರುವ ಪ್ರಯತ್ನ ಮಾಡಲು ಸಹಕಾರಿಯಾದರು. ಇಂತವರಲ್ಲಿ ಕೃಷಿ ಕಾಯಕವನ್ನು

ಮಾಡುತ್ತ ಅನುಭಾವದಲ್ಲಿ ತೊಡಗಿಕೊಂಡು ತನ್ನದೇ ಆದ ವ್ಯಕ್ತಿ ವಿಶಿಷ್ಟತೆಯನ್ನು ಪಡೆದವನು ಒಕ್ಕಲಿಗ ಮುದ್ದಣ್ಣ, ಈತನ ವಚನಗಳು ಎಲ್ಲ ರೀತಿಯಲ್ಲಿ ಮಾರ್ಗದರ್ಶಕ ಸೂತ್ರಗಳನ್ನು ನೀಡಿದವು. ವಿಧಾನದಲ್ಲಿ, ಅಭಿವ್ಯಕ್ತಿಯಲ್ಲಿ ಭಾಷಾ ಪ್ರಯೋಗದಲ್ಲಿ, ಶೈಲಿಯಲ್ಲಿ, ವೃತ್ತಿ ಪರಿಕರಗಳ ಬಳಕೆಯೊಂದಿಗೆ ಮಹತ್ವಪೂರ್ಣ ಸಂದೇಶವನ್ನು, ತತ್ವ ಪ್ರತಿಪಾದನೆಯನ್ನು ಮಾಡಿದವು.

ಲೋಕದಲ್ಲಿ ನಡೆಯುವ ಕ್ರಿಯೆಗಳ ಬಿನ್ನತೆ ಅಥವಾ ವಿವಿಧತೆಗಳಿರುವುದನ್ನು ಅರಿತ ಸಾಧಕ ಇದನ್ನು ಕುರಿತು ಚಿಂತಿಸುವ ರೀತಿಯು ವಿಸ್ಮಯದ ಮೂಲವನ್ನೆ ಪಡೆದುಬಿಟ್ಟಿರುತ್ತದೆ. ಇದನ್ನು ಮುದ್ದಣ್ಣ ತನ್ನ ವಚನದಲ್ಲಿ ತಾನು ವೃತ್ತಿಯಲ್ಲಿ ಬಳಸಲಾಗುವ ಪರಿಕರಗಳ ಮೂಲಕವೇ ಅಭಿವ್ಯಕ್ತಿಸುವುದನ್ನು ನೋಡಬಹುದು. ಬಸವಣ್ಣನ ಪ್ರಭಾವಲಯದಲ್ಲಿ ತನ್ನ ಅನುಭಾವದ ಅರಿವಿನಲ್ಲಿ ಮುದ್ದಣ್ಣ ತನ್ನ ವ್ಯಕ್ತಿತ್ವವನ್ನು ಕಟ್ಟಿಕೊಂಡಿದ್ದಾನೆ. ಮುದ್ದಣ್ಣನ ಬಹುತೇಕ ವಚನಗಳು ಅಂತರಂಗ ಬಹಿರಂಗದ ಸಾಧನೆಗೆ ತೊಡಿಗಿದ ಸಾಧಕನ ಕೃಷಿಯನ್ನು ಅಭಿವ್ಯಕ್ತಿಸುತ್ತವೆ. ತನ್ನ ವೃತ್ತಿಯಾದ ಒಕ್ಕಲುತನದ ಮಹತ್ವವನ್ನು, ಗೌರವನ್ನು ಪ್ರತಿಷ್ಠಾಪಿಸುತ್ತವೆ.

ಪೈರಿಗೆ ನೀರು ಬೇಕೆಂಬಲ್ಲಿ ಉಚಿತವನರಿದು ಬಿಡಬೇಕು.
ಕ್ರೀಗೆ ಅರಿವು ಬೇಕೆಂಬಲ್ಲಿ ಉಭಯವನರಿದು ಘಟಿಸಬೇಕು.
ಏರಿ ಹಿಡಿವನ್ನಕ್ಕ ನೀರ ಹಿಡಿದಡೆ ಸುಖವಲ್ಲದೆ ಮೀರದರುಂಟೆ?
ಕ್ರೀಯ ಬಿಡಲಿಲ್ಲ, ಅರಿವ ಮರೆಯಲಿಲ್ಲ.
ಬೆಳೆಯ ಕೊಯಿದ ಮತ್ತೆ, ಹೊಲಕ್ಕೆ ಕಾವಲುಂಟೆ?
ಫಲವ ಹೊತ್ತ ಪೈರಿನಂತೆ, ಪೈರನೊಳಕೊಂಡ ಫಲದಂತೆ,
ಅರಿವು ಆಚರಣೆಯಲ್ಲಿ ನಿಂದು,
ಆಚರಣೆ ಅರಿವಿನಲ್ಲಿ ಲೇಪನಾದ ಮತ್ತೆ
ಕಾಮ ಭೀಮ ಜೀವಧನದೊಡೆಯನೆಂಬುದ ಭಾವಿಸಲಿಲ್ಲ.

(ಸಂಕೀರ್ಣ ವಚನ ಸಂಪುಟ ೧, ವಚನ ಸಂಖ್ಯೆ: ೧೭೪೪)

ಮುದ್ದಣ್ಣನು ಕೃಷಿ ಕಾಯಕದ ಮೂಲದಿಂದ ಬಂದವನಾದ್ದರಿಂದ ಆತನ ವಚನಗಳಲ್ಲಿ ವ್ಯವಸಾಯ ವೃತ್ತಿಯ ಪರಿಭಾಷೆಯು ವಚನಗಳಲ್ಲಿ ಬಳಕೆಗೊಂಡಿದೆ. ಅನೇಕ ವಚನಗಳಲ್ಲಿ ವೃತ್ತಿಪರ ಪದಗಳು, ರೂಪಕಗಳು, ಪ್ರತಿಮೆಗಳು ಸೇರಿಕೊಂಡು ಒಂದು ವಿಶಿಷ್ಠ ಬಗೆಯ ಅನುಭವವನ್ನು ಕಟ್ಟಿಕೊಡುತ್ತವೆ.

ಮುದ್ದಣ್ಣ ಜೀವನ ಸಾಗಿಸಲು ಮಾತ್ರ ಕೃಷಿ ಕಾಯಕವನ್ನು ಸೀಮಿತಗೊಳಿಸಿದವನಲ್ಲ. ಅದು ಬದುಕಿನ ವೃತ್ತಿಯ ಜತೆಗೆ ಆಧ್ಯಾತ್ಮದ ಅನುಸಂದಾನ ಮಾಡುವ ಕಾಯಕವು ಆಗಿದೆ. ಮಾನವ ದೈವತ್ವಕ್ಕೇರುವ ಭಕ್ತಿಯ ಸ್ವರೂಪದ ನಿಜ ರೂಪವನ್ನು ಕಲ್ಪಿಸಿಕೊಟ್ಟದ್ದಾನೆ.

ಮೇಲಿನ ವಚನದಲ್ಲಿ ಕ್ರಿಯೆ ಮತ್ತು ಅರಿವಿನ ಸಂಬಂಧವನ್ನು ಪ್ರತಿಪಾದಿಸುತ್ತಾನೆ. ಮನುಷ್ಯ ತನ್ನ ಬದುಕನ್ನು ಸಾಗಿಸುವ ವಿದವನ್ನು ವಿಶ್ಲೇಷಣೆ ಮಾಡುವಂತೆ ಈ ವಚನ ವ್ಯಕ್ತಗೊಳ್ಳುತ್ತದೆ.

'ಉಚಿತವನರಿದು ನೀರು ಬಡಿಬೇಕು', 'ಉಭಯವನರಿದು' ಮುಂತಾದ ರೀತಿಯಲ್ಲಿ ಅಭಿವ್ಯಕ್ತಗೊಳ್ಳುವ ಈ ವಚನದಲ್ಲಿ ಬದುಕಿನ ಹದವನ್ನರಿತು ನಡೆಯಬೇಕೆಂಬ ನಿಲುವನ್ನು ಪ್ರತಿಪಾದಿಸುವ ಮೂಲಕ ಸಾಧಕನ ಜೀವನಕ್ಕೆ ಮಾರ್ಗದರ್ಶನವನ್ನು ನೀಡುವಂತೆಯೇ ಕಾಣುತ್ತದೆ. 'ಕ್ರೀಯೆ ಬಿಡಲಿಲ್ಲ, ಅರಿವು ಮರೆಯಲಿಲ್ಲ' ಎಂಬ ಸಾಲು ಜೀವನ ಪ್ರೀತಿಯನ್ನು ವೃತ್ತಿ ನಿಷ್ಠೆಯನ್ನು ಅಭಿವ್ಯಕ್ತಿಸಿದರೆ, ಅದರ ಮೂಲಕವೇ ಅರಿವಿನ ದಾರಿ ಕಾಣಬೇಕೆಂಬ ಹಂಬಲ ಉಳ್ಳದ್ದಾಗಿದೆ.

ಮುದ್ದಣ್ಣನ ಮತ್ತೊಂದು ವಚನದಲ್ಲಿ ವೃತ್ತಿಯ ಸ್ವರೂಪವನ್ನು ಅರಿಯುತ್ತೇವೆ.

ನೀ ಕೊಟ್ಟ ಭೂಮಿಗೆ ಮುಂದೆ ಕರಲು, ಹಿಂದೆ ಇಗ್ಗರಲು,
ಅಲ್ಲಿಂದ ಆಚೆ ಮಧ್ಯಭೂಮಿ.
ಮೂರು ನೆಲದ ಭೂಮಿಯ ಆರೈದು ಬೆಳೆದೆಹೆನೆಂದಡೆ,
ಇದಾರ ವಶವೂ ಅಲ್ಲ.
ಕಾಮಭೀಮ ಜೀವಧನದೊಡೆಯ ನೀನೆ ಬಲ್ಲೆ.

(ಸಂಕೀರ್ಣ ವಚನ ಸಂಪುಟ ೧, ವಚನ ಸಂಖ್ಯೆ: ೧೭೪೨)

ಅನುಭವದ ಮೂಲ ನೆಲೆಯಿಂದ ಹುಟ್ಟಿಕೊಂಡಿರುವ ಆಧ್ಯಾತ್ಮದ ಸಾಧನೆಯನ್ನು, ಅನುಭಾವ ಸಾಧಿಸಲು ಅನುಭವದ ಮೂಲನೆಲೆ ಕೃಷಿ ವೃತ್ತಿಯೇ ಆಗಿರುವುದನ್ನು ಈ ವಚನದಲ್ಲಿ ಗುರುತಿಸಬಹುದಾಗಿದೆ. ಈ ವಚನದಲ್ಲಿ ಬಳಕೆಗೊಂಡಿರುವ ವೃತ್ತಿ ಪದಗಳಾದ ಭೂಮಿ, ಕರಲು, ಇಗ್ಗರಲು, ನೆಲ ಮುಂತಾದ ಕೃಷಿ ಕಾಯಕದ ಗುರುತನ್ನೊದಗಿಸುವುದಷ್ಟೇ ಅಲ್ಲ. ಅವುಗಳು ಅಭಿವ್ಯಕ್ತಿಯ ಮಾಧ್ಯಮಗಳಾಗಿ ಬಳಕೆಗೊಂಡಿವೆ. ಈ ವಚನದಲ್ಲಿ ಮುದ್ದಣ್ಣ ಜೀವನಕ್ಕೆ ಭೂಮಿಯನ್ನು ಹೋಲಿಸಿಯೇ ಹೇಳುತ್ತಾನೆ. ಈ ವಚನ ಅಭಿವ್ಯಕ್ತಿ ಕ್ರಮವು ವಿಶೇಷವಾಗಿರುವುದನ್ನು ನೋಡುತ್ತೇವೆ. ಭೂಮಿ, ಕರಲು, ಇಗ್ಗರಲು, ಮಧ್ಯಭೂಮಿ, ನೆಲ ಇವುಗಳು ಒಂದೆ ಅರ್ಥವುಳ್ಳ ಅಥವಾ ಒಂದೆ ವಸ್ತು ಸ್ಥಿತಿ ಉಳ್ಳವುಗಳಾಗಿವೆ. ಆದರೆ ಇಲ್ಲಿ ಬಳಕೆಗೊಂಡಿರುವುದು ವಿಶೇಷ ಅರ್ಥ ಚಹರೆ, ವ್ಯಾಪ್ತಿಯನ್ನೊಳಗೊಂಡು ಬೆಳೆ ಬೆಳೆಯಲು ಭೂಮಿಬೇಕು ಅದೂ ಉತ್ತಮವಾದ ಭೂಮಿಯಾಗಿರಬೇಕು. ಅರಿವಿನ ಹುಡುಕಾಟ ನಡೆಸುವ ಸಾಧಕ ಅರಿವಿನ ಬೆಳೆಯನ್ನು ಪಡೆಯಲು, ವೃತ್ತಿ ಅಥವಾ ಜೀವನ, ಬದುಕು ಅವಶ್ಯವಿರುವುದನ್ನು, ಮತ್ತು ಅದು ಕರಲು, ಇಗ್ಗರಲು ಆಗದೆ ಅಪ್ರಾಮಾಣಿಕತೆಯಿಂದ ಕೂಡಿರದ, ನಿಷ್ಠೆಯನ್ನೊಳಗೊಂಡ ಬದುಕಿನ ಅಪೇಕ್ಷೆಗೆ ಹಂಬಲಿಸುವುದು ಇಲ್ಲಿದೆ. 'ಮೂರು ನೆಲದ ಭೂಮಿಯ ಆರೈದು ಬೆಳೆದೆಹೆನೆಂದಡೆ' ಎಂಬ ಪ್ರಶ್ನಾರ್ಥಕ ವಾಕ್ಯ ಈ ವಚನದಲ್ಲಿ ಬರುತ್ತದೆ. ಮುಂದೆ ಅದಕ್ಕೆ ಉತ್ತರವನ್ನು ವಚನಕಾರನು ನೀಡಿ ಬಿಡುತ್ತಾನೆ. ಇದು ಪ್ರಕೃತಿಯ ನಿಯಮವನ್ನು ಒಪ್ಪಿಕೊಳ್ಳುವಂತೆಯೂ ಕಾಣುತ್ತದೆ.

ಪೂರ್ವಕ್ಕೆ ತಾಳಾಗಿ ಉತ್ತರಕ್ಕೆ ತಲಹಾಗಿ ಬಿದ್ದ
ಮರನ ತಂದು,
ನಿಬುದ್ಧಿಯ ಕಾರುಕನ ಕೈಯಲ್ಲಿ ಸುಬದ್ದಿಸಿ, ಶುದ್ಧೈಸಿ
ಅನಾದಿಯೆಂಬ ಹುಗಿಲುದೆಗೆದು,

ಆದಿಯೆಂಬ ಈಯವನಿಕ್ಕಿ,
ಇಷ್ಟವೆಂಬ ವಿಶ್ವಾಸದ ಮೇಳಿಯಂ ಬೆಟ್ಟಿ,
ಭಾವವೆಂಬ ಜಿಗುಳಿಯನಿಕ್ಕಿ,
ಸದ್ಭಾವವೆಂಬ ಗುಳುವ ತೊಡಿಸಿ,
ಸತ್ಕ್ರಿಯೆಯೆಂಬ ಕಣ್ಣಿಯಲ್ಲಿ ನೇಗಿಲ ತೊಡಚಿ,
ಜ್ಞಾನ ಚಕ್ಷುವೆಂಬ ನೊಗದ ಉಭಯದ ಕೊನೆಯಲ್ಲಿ
ಎಡಗೋಲಿನಲ್ಲಿ ಕಾರಿಯ ಹೂಡಿ,
ಬಲಗೋಲಿನಲ್ಲಿ ಬೆಳ್ಳಿಯ ಹೂಡಿ,
ಅಡಿಕೆತ್ತುವಂತೆ ಧಾಯೆಂದು ಹೊಡೆಯಲಾಗಿ,
ಭೂಮಿಯೊಡಗೂಡಿ ಸವೆಯಿತ್ತು.
ಬಿತ್ತವಟ್ಟಕ್ಕೆ ದಿಕ್ಕಿಲ್ಲ.
ಕಾಮಭೀಮ ಜೀವಧನದೊಡೆಯ ನೀನೆ ಬಲ್ಲೆ.

(ಸಂಕೀರ್ಣ ವಚನ ಸಂಪುಟ ೧, ವಚನ ಸಂಖ್ಯೆ: ೧೭೪೩)

ಮುದ್ದಣ್ಣನು ಪದಗಳನ್ನು ಹೊಂದಿಸಿಕೊಳ್ಳುವ ಕ್ರಮವೇ ಅನನ್ಯವೆನಿಸುತ್ತದೆ. ಈ ವಚನದಲ್ಲಿ ವ್ಯವಸಾಯದಲ್ಲಿ ಬಳಕೆಗೊಳ್ಳುವ, ಉಳುಮೆ ಮಾಡಲು ಬಳಸುವ ನೇಗಿಲಿನ ಚಿತ್ರ ಬರುತ್ತದೆ. ನೇಗಿಲನ್ನು ಸಿದ್ದಪಡಿಸಲು ಮಾಡುವ ಕ್ರಮವನ್ನು ಮತ್ತು ನೇಗಿಲನ್ನು ತಯಾರಿಸಲು ಬಳಸುವ ಸಾಮಾಗ್ರಿಗಳನ್ನು ಹೇಗೆ ಬಳಸಿಕೊಂಡು ನೇಗಿಲನ್ನು ಮಾಡುತ್ತಾರೆಂಬ ರೂಪಕವನ್ನು ಕಟ್ಟಿಕೊಡುತ್ತಾನೆ. ಈ ವಚನದಲ್ಲಿ ಎರಡು ಪಟ್ಟಿಗಳಿರುವುದನ್ನು ಗುರುತಿಸಬಹುದು. ಮಾನವನ ಬದುಕಿನ, ಸಾಧನೆಯನ್ನು ಮಾಡುವವನ್ನು ಮಾಡಬೇಕಾದ ಮನೋವೃತ್ತಿಯನ್ನು, ಇನ್ನೊಂದು ಲೌಕಿಕ ಬದುಕಿನ ಕೃಷಿ ವೃತ್ತಿಯನ್ನು ಇವೆರಡನ್ನು ಮಿಳಿತಗೊಳಿಸಿಕೊಂಡು ಅಭಿವ್ಯಕ್ತಿಪಡಿಸುವುದು ಗಮನಾರ್ಹವಾದುದು.

ಅಂಗವೆ ಭೂಮಿಯಾಗಿ, ಲಿಂಗವೆ ಬೆಳೆಯಾಗಿ,
ವಿಶ್ವಾಸವೆಂಬ ಬತ್ತ ಒಲಿದು ಉಂಡು
ಸುಖಿಯಾಗಿರಬೇಕೆಂದ ಕಾಮಭೀಮ ಜೀವನಧನದೊಡೆಯ

(ಸಂಕೀರ್ಣ ವಚನ ಸಂಪುಟ ೧, ವಚನ ಸಂಖ್ಯೆ: ೧೭೩೭)

ಮುದ್ದಣ್ಣ ಹೇಳುವುದನ್ನು ಸರಳವಾದ ಭಾಷಾ ರಚನೆ ಕ್ರಮದಲ್ಲಿಯೆ ಹೇಳಿದರು ಅದರಲ್ಲಿನ ಅರ್ಥದ ಭಾವವು ಸರಳವಾಗಿರುವುದಿಲ್ಲ. ಆಳವಾದ ಅರ್ಥವಂತಿಕೆಯಿಂದ ಕೂಡಿದ ಪ್ರಯೋಗಗಳಾಗಿಯೆ ಕಾಣುತ್ತವೆ. ಮೇಲಿನ ವಚನವನ್ನು ಮೂರೇ ಸಾಲುಗಳಲ್ಲಿ ಹೇಳಿದರೂ, ಮದುರ ಕಾವ್ಯಗುಣ ರಚನೆಯಂತೆ ಕಾಣುತ್ತದೆ. ಅದರ ಒಳಗಿನ ಭಾವ ಅರ್ಥದ, ತತ್ವದ ಸಿರಿವಂತಿಕೆಯು ಮದುರತೆಯನ್ನು ಮೀರಿ ಒಂದು ತಾತ್ವಿಕ ನಿಲುವು ಆಗಿ ವ್ಯಕ್ತಗೊಳ್ಳುತ್ತದೆ. ತನ್ನ ವೃತ್ತಿ ಪರಿಭಾಷೆಯಲ್ಲಿ ಜೀವನ ಮೌಲ್ಯಗಳನ್ನು ತಾತ್ವಿಕತೆಯ ರೀತಿ ನೀತಿಗಳನ್ನು ಆಧ್ಯಾತ್ಮದ ಬದುಕನ್ನು, ಧಾರ್ಮಿಕ ನಂಬಿಕೆಯನ್ನು ಅಂತರಂಗದ ಸಾಧನೆಯನ್ನು ತೋರಿಸುವುದು, ನೋಡುವುದು ತಿಳಿಸುವುದು ಮುದ್ದಣ್ಣನ ವಚನ ರಚನೆಯ ಸ್ವರೂಪದಲ್ಲಿ ಕಾಣುತ್ತೇವೆ. ಬೇಸಾಯಗಾರನಾದ

ಈತ ಅಂಗವೆ ಭೂಮಿಯಾಗಿ, ಲಿಂಗವೆ ಬೆಳೆಯಾಗಿ ಎಂದು ಹೇಳುವಲ್ಲಿ ಹನ್ನೆರಡನೆಯ ಶತಮಾನದ ಚಳುವಳಿಯ ಆಶಯವನ್ನು ಮಂಡಿಸುತ್ತಿರುವಂತೆ ಕಾಣುತ್ತದೆ. ಅದಷ್ಟಕ್ಕೆ ಸೀಮಿತಗೊಳ್ಳುತ್ತದೆ. ಆ ಕಾಲದ ಪ್ರಜ್ಞಾಪೂರ್ವಕ ಚಳುವಳಿಯ ರೂಪರೇಷೆಗೆ ಮನ್ನಣೆ ದೊರಕಿಸುವ, ನೀಡುವ ಪ್ರಯತ್ನವಾಗಿರುವುದಂತು ನಿಜ. ಅಲ್ಲದೆ ಲಿಂಗ ಸಾಹಿತ್ಯ ಎಂಬ ಪರಿಕಲ್ಪನೆಯ ವಿಚಾರಕ್ಕೆ ಪೂರಕ ಚಿಂತನೆಯಾಗಿಯೂ ಇದನ್ನು ಗ್ರಹಿಸಬಹುದು. ಇಲ್ಲಿ ಭೂಮಿ, ಲಿಂಗದ ಬೆಳೆ, ವಿಶ್ವಾಸದ ನಡೆ, ಬತ್ತ ಇವುಗಳೆಲ್ಲವು ಶ್ರಮದ ಮೂಲಕ ಸಾಧಿಸುವಂತಹವು. ಇಲ್ಲಿ ಮುಖ್ಯವಾಗಿ ಇವುಗಳು ಮುಖ್ಯವಾಗಿ ಶ್ರಮದಾನದ ಅವಶ್ಯಕತೆ ಇರುವಂತಹವುಗಳು. ಇಂತಹ ಶ್ರಮದ ಮೂಲಕ ಮುಂದೆ ಗಳಿಸುವುದು ಉತ್ತಮ ಜೀವನ, ಉಂಡು ಅಥವಾ ಉಪಬೋಗಿಸುವುದು. ಭಕ್ತನ ಸತ್ಯಶುದ್ಧ ಕಾಯಕದ ಬದುಕಿನಿಂದ ಮುಂದೆ ದೊರೆತ ಫಲ ಲಿಂಗ ಬೆಳೆಯಾಗಿದೆ. ಇಂತಹ ಲಿಂಗದ ಬೆಳೆಯ ಫಲವನ್ನುಂಡು ಭವವನ್ನು ಕಳೆದುಕೊಂಡಾಗ ಸುಖಜೀವನ. ಇದರ ಕಲ್ಪನೆ ಮಾನವನ ಬದುಕನ್ನು ನೈತಿಕವಾಗಿ ಕಟ್ಟಿ ಅದರ ಮೂಲಕ ಸಮಾಜದ ಜನಜೀವನ್ನು ಲಿಂಗ ಸಾಹಿತ್ಯವಾಗಿಸಿಬೇಕೆಂಬ ಮುದ್ದಣ್ಣನ ನಿಲುವು ಇಲ್ಲಿ ತುಂಬ ಗಮನೀಯವಾಗಿ ಪ್ರಕಟಗೊಂಡಿದೆ. ಅಂಗ, ಭೂಮಿ, ಲಿಂಗ, ಬೆಳೆ ಈ ನಾಲ್ಕು ಸಂಗತಿಗಳು ಐಹಿಕ ಲೋಕದ ವಸ್ತುಗಳು. ಇವೆಲ್ಲಕ್ಕೂ ತನ್ನದೇ ಆದ ಉದ್ದೇಶಗಳಿವೆ. ಅದರೊಂದಿಗೆ ಪರಿಣಾಮಗಳಿವೆ. ಪ್ರಾಪಂಚಿಕ ಬದುಕಿನಲ್ಲಿ ಅವಿರುವಂತೆಯೇ ನೋಡಿದರೆ ಅವು ಕೇವಲ ವಿಷಯಗಳಾಗುತ್ತವೆ. ಆದರೆ ಇಲ್ಲಿ ಅಂಗ ಭೂಮಿ, ಲಿಂಗ ಬೆಳೆ ಶಬ್ದಗಳು ನುಡಿಗಟ್ಟುಗಳಾಗಿ ಹೇಳುವುದಾದರೆ ಅವು ಅರಿವು. ಎತ್ತರದ ಸಾಧನೆ.

ಮನುಷ್ಯನನ್ನು ಭೂಮಿಗೂ, ಲಿಂಗವನ್ನು ಬೆಳೆಗೂ ಹೊಲಿಸುವ ಮೂಲಕ ಬಸವಣ್ಣನ ನೇತೃತ್ವದ ವಚನ ಚಳುವಳಿಯ ಆಶಯವನ್ನು ಹೇಳುವ ಪ್ರಯತ್ನ ಇಲ್ಲಿ ನಡೆದಿರುವುದನ್ನು ಗುರುತಿಸಬಹುದಾಗಿದೆ. ನಿಷ್ಠೆಯುಳ್ಳ ಬದುಕನ್ನು ಸ್ವೀಕರಿಸಿದಾಗ ಮಾನವ ಸುಖಿಯಾಗಿರಬಲ್ಲ ಎಂಬುದು ಮಾನವ ಸರ್ವ ಸಮರ್ಪಣಬಾವದಿಂದ ಸಾಧನೆ ಮಾಡಿದಾಗ ಮಾತ್ರ ಸುಖ. ಅಂದರೆ ಜೀವನವನ್ನು ನಿಷ್ಠಾಪೂರ್ಣತೆಯಿಂದ ಕಟ್ಟಿಕೊಂಡಾಗ ದೈವತ್ವಕ್ಕೇರಿ ಅಂತರಂಗದ ಸುಖವನ್ನು ಅನುಭವಿಸಬಲ್ಲ ಎಂಬ ತತ್ವದ ಅಭಿವ್ಯಕ್ತತ ಇರುವುದನ್ನು ನೋಡುತ್ತೇವೆ. ಮತ್ತು ಶರೀರವನ್ನು ಹಸನು ಮಾಡಿಕೊಳ್ಳುವ ಬಗೆಯನ್ನು ಈ ವಚನದಲ್ಲಿ ತಿಳಿಸುತ್ತಾನೆ. ತನ್ನ ಕೃಷಿ ಕಾಯಕದಂತೆ ಅಂಗವೆಂಬ ಭೂಮಿಯಲ್ಲಿ ಲಿಂಗವೆಂಬ ಬೆಳೆ ಪಡೆಯಲು, ನಿಷ್ಠೆ, ಪ್ರಾಮಾಣಿಕತೆ ಎಂಬ ತತ್ವ ಸಿದ್ಧಾಂತದಲ್ಲಿ ಬದುಕಬೇಕೆಂಬುದು ಮತ್ತು ಲಿಂಗದ ಮೇಲಿನ ವಿಶ್ವಾಸ ಮುಖ್ಯವೆನ್ನುತ್ತಾನೆ.

ಭಕ್ತಿಯೆಂಬ ಪೃಥ್ವಿಯಲ್ಲಿ ಗೂರೂಪದೇಶವೆಂಬ ನೇಗಿಲಂ ಪಿಡಿದು,
ಅಂತಃಕರಣ ಚತುಷ್ಟಯವೆಂಬ ಪಶುವಂ ಕಟ್ಟಿ
ಓಂಕಾರನದವೆಂಬ ಸೆಳೆಕೋಲಂ ಪಿಡಿದು
ಉತ್ತರ ಕ್ರೀಯೆಂಬ ಸಾಲನೆತ್ತಿ
ದುಃಕರ್ಮವೆಂಬ ಕಂಕಟದ ಗುಲ್ಮವಂ ಕಡಿದು

ಅರುಹೆಂಬ ರವಿಯ ಕಿರಣದಿಂದ ಒಣಗಿಸಿ
ಅವಂ ಕೂಡಲೊಟ್ಟು ಜ್ಞಾನಾಗ್ನಿಯೆಂಬ ಅಗ್ನಿಯಿಂದ ಸುಟ್ಟುರುಹಿ
ಆ ಹೊಲನಂ ಹಸಮಾಡಿ, ಬಿತ್ತುವ ಪರಿ ಇನ್ನಾವುದಯ್ಯಾ ಎಂದಡೆ:
ನಾದ, ಬಿಂದು, ಕಳೆ, ಮಳೆಗಾಲದ ಹದಬೆದೆಯನರಿದು
ಸ್ಥೂಲವೆಂಬ ದಿಂಡಿಗೆ ತ್ರೀದೇವರೆಂಬ ತಾಳ ನಟ್ಟು
ಇಡಾಪಿಂಗಳ ಸುಷುಮ್ನಾನಾಳವೆಂಬ ಕೋವಿಗಳ ಜೋಡಿಸಿ,
ಮೇಲೆ ತ್ರಿಕೂಟಸ್ಥಾನವೆಂಬ ಬಟ್ಟಲಂ ಬಲಿದು,
ಕುಂಡಲೀಸರ್ಪನೆಂಬ ಹಗ್ಗವ ಸೇದಿ ಕಟ್ಟಿ
ಹಂಸನೆಂಬ ಎತ್ತಂ ಹೂಡಿ,
ಪ್ರಣವನೆಂಬ ಬೀಜವ ಪಶ್ಚಿಮ ಮುಖಕ್ಕೆ ಬಿತ್ತಿ,
ಸರ್ವಶಾಂತಿ ನಿರ್ಮಲವೆಂಬ ಮೇಘ ಸುರಿಯಲ್ಕೆ
ನೀಲಬ್ರಹ್ಮವೆಂಬ ಸಸಿ ಹುಟ್ಟಿತ್ತ
ಆ ಸಸಿಯ ಮುಟ್ಟುವ ಸಪ್ತವರ್ಣದ ಸದೆಯ ಕಳೆದು
ಅಷ್ಟವರ್ಣ ಅಲಬಂ ಕಿತ್ತು, ದಶವಾಯುವೆಂಬ ಕಸಮಂ ತೆಗೆದು,
ಆ ಸಸಿ ಪಸರಿಸಿ ಪ್ರಜ್ವಲಿಸಿ ಫಲಕ್ಕೆ ಬರಲಾಗಿ
ಚತುರ್ವಿಧವೆಂಬ ಮಂಚಿಗೆಯಂ ಮೆಟ್ಟಿ
ಬಾಲಚಂದ್ರನೆಂಬ ಕವಣೆಯಂ ಪಿಡಿದು
ಪ್ರಪಂಚುವೆಂಬ ಹಕ್ಕಿಯಂ ಸೋವಿ
ಆ ಬತ್ತ ಬಲಿದು ನಿಂದಿರಲು,
ಕೊಯ್ದುಂಬ ಪರಿ ಇನ್ನಾವುದಯ್ಯಾ ಎಂದಡೆ
ಇಷ್ಟವೆಂಬ ಕುಡುಗೋಲಿಗೆ ಪ್ರಣವವೆಂಬ ಹಿಡಿಯಂ ತೊಡಿಸಿ,
ಭಾವವೆಂಬ ಹಸ್ತದಿಂ ಪಿಡಿದು, ಜನನದ ನಿಲವಂ ಕೊಯ್ದು,
ಮರಣದ ಸಿವುಡ ಕಟ್ಟಿ ಆಕಾಶವೆಂಬ ಬಣವೆಯನೊಟ್ಟಿ
ಉನ್ಮನಿಯೆಂಬ ತೆನೆಯನ್ನರಿದು, ಮನೋರಥವೆಂಬ ಬಂಡಿಯಲ್ಲಿ ಹೇರಿ,
ಮುಕ್ತಿಯೆಂಬ ಕೋಟಾರಕ್ಕೆ ತಂದು, ಅಷ್ಟಾಂಗಯೋಗವೆಂಬ ಜೀವನಧನದಿಂದೊಕ್ಕಿ,
ತಾಪತ್ರಯದ ಮೆಟ್ಟನೇರಿ, ಪಾಪದ ಹೊಟ್ಟು ತೂರಿ,
ಪುಣ್ಯದ ಬೀಜಮಂ (ತ)ಳೆದು
ಷಡುವರ್ಗ ಷಡೂರ್ಮೆಯೆಂಬ ಬೇಗಾರಮಂ ತಕಳೆದು
ಅಂಗಜಾಲನ ಕಣ್ಣ(ಮು)ಚ್ಚಿ ಚಿತ್ರ ಗುಪ್ತರೆಂಬ ಕರಣಿಕರ ಸಂಪುಟಕೆ ಬರಿಸದೆ
ಯಜರಾಜನೆಂಬರಸಿಗೆ ಕೋರನಿಕ್ಕದೆ
ಸುಖ ಶಂಕರೋತಿ ಶಂಕರೋತಿ ಎಂಬ ಸಯಿದಾನವನುಂಡು
ಸುಖಿಯಾಗಿಪ್ಪ ಒಕ್ಕಲಮಗನ ತರಿ ಬದುಕಿಸಯ್ಯಾ,
ಕಾಮಭೀಮ ಜೀವಧನದೊಡೆಯ ಪ್ರಭುವೆ
ನಿಮ್ಮ ಧರ್ಮ, ನಿಮ್ಮ ಧರ್ಮ

(ಸಂಕೀರ್ಣ ವಚನ ಸಂಪುಟ ೧, ವಚನ ಸಂಖ್ಯೆ: ೧೭೪೧)

ಮುದ್ದಣ್ಣ ದೀರ್ಘವಾದ ಈ ವಚನದಲ್ಲಿ ಒಂದು ಕಡೆ ಬಹಿರಂಗ ಬೇಸಾಯ, ಇನ್ನೊಂದು ಕಡೆ ಅಂತರಂಗ ಬೇಸಾಯ ಕುರಿತಾಗಿಯೇ ಸವಿವರವಾಗಿ ಹೇಳುತ್ತಿದ್ದಾನೆ. ಅವೆರಡರ ಅನುಭವವುಳ್ಳ ಅವನು ತನ್ನ ವೃತ್ತಿ ಉಪಕರಣಗಳ ಪರಭಾಷೆಯ ರೂಪಕಗಳನ್ನೇ ಬಳಸಿ ವಿಷಯಗಳನ್ನು ಮನಕ್ಕೆ ಮುಟ್ಟುವಂತೆ ನಿರೂಪಿಸಲು ತನ್ನ ಶಕ್ತಿಯನ್ನೇ ಪ್ರಕಟಗೊಳಿಸುವ ರೀತಿಯಲ್ಲಿರುವುದನ್ನು ನೋಡುತ್ತೇವೆ.

ಈ ವಚನದ ಪ್ರಾರಂಭದಿಂದ ಹಿಡಿದು ಐದು ಆರು ಸಾಲುಗಳಲ್ಲಿ ಬೇಸಾಯದ ರೀತಿಯನ್ನು ಕಟ್ಟಿಕೊಡುವ ಪ್ರಯತ್ನ ಮುಂದಿನ ಸಾಲುಗಳಲ್ಲಿರುವ ಸಿದ್ಧಾಂತಕ್ಕೆ ಪೂರಕವಾಗಿಯೇ ಬರುತ್ತವೆ. ಭಕ್ತಿಯೆನ್ನುವ ಭೂಮಿಯಲ್ಲಿ ಗುರುವಿನ ಉಪದೇಶವೆಂಬ ನೆಗಿಲನ್ನು ಹಿಡಿದು, ಮನ ಬುದ್ಧಿ ಚಿತ್ತ ಅಹಂಕಾರವೆಂಬ ಅಂತಃಕರಣ ಚತುಷ್ಟಯವೆನ್ನುವ ಪಶುಗಳನ್ನು ಹೂಡಿ, ಓಂಕಾರವೆನ್ನುವ ಚಾವಟಿ ಹಿಡಿದು, ಉತ್ತರ ಕ್ರಿಯೆಂಬ ಸಾಲನ್ನು ಹಿಡಿದು ದುಷ್ಕರ್ಮವೆನ್ನುವ ಮುಳ್ಳುಪೊದೆಯನ್ನು ಕಡಿದು, ಜ್ಞಾನವೆಂಬಸೂರ್ಯ ಕಿರಣದಿಂದ ಒಣಗಿಸಿ, ಗುಡ್ಡೆಹಾಕಿ, ಜ್ಞಾನಾಗ್ನಿಯಿಂದ ಸುಟ್ಟು, ಆ ಹೊಲವನ್ನು ಹಸನು ಮಾಡಿದ ಮೇಲೆ ಬೀಜವನ್ನು ಬಿತ್ತುವ ರೀತಿ ಯಾವುದೆಂಬುವ ಪ್ರಶ್ನೆಯ ಜತೆಗೆ ಉತ್ತರವ್ನು ಮುಂದಿನ ಸಾಲುಗಳಲ್ಲಿ ನೀಡುತ್ತಾನೆ.

ನಾದ, ಬಿಂದು, ಕಳೆ, ಮಳೆಗಾಲದ ಹದಬೆದೆಯನ್ನು ಅರಿದು ಸ್ಥೂಲವೆಂಬ ಕೂರಿಗೆ ತ್ರಿದೇವರೆಂಬ ತಾಳನ್ನು ಜೋಡಿಸಿ, ಇಡಾ ಪಿಂಗಳ ಸುಷುಮ್ನ ನಾಳವೆನ್ನುವ ಕೊಳವೆಗಳನ್ನು ಜೋಡಿಸಿ, ಮೇಲೆ ಭ್ರೂಮಧ್ಯೆ ಸ್ಥಾನವೆಂಬ ಬಟ್ಟಲನ್ನು ಬಿಗಿಗೊಳಿಸಿ, ಕುಂಡಲಿನಿ ಸರ್ಪವೆನ್ನುವ ಹಗ್ಗವನ್ನು ಕಟ್ಟಿ, ಹಂಸ ಎಂಬ ಎತ್ತನ್ನು ಹೂಡಿ, ಪ್ರಣವ ಎಂಬ ಬೀಜವನ್ನು ಪಶ್ಚಿಮ ದಿಕ್ಕಿಗೆ ಬಿತ್ತಿ, ಸರ್ವಶಾಂತಿ ನಿರ್ಮಲವೆನ್ನುವ ಮೋಡವು ಮಳೆ ಸುರಿಸಲು, ನೀಲಬ್ರಹ್ಮವೆನ್ನುವ ಸಸಿ ಹುಟ್ಟಿತ್ತು ಆ ಸಸಿಯನ್ನು ಮುತ್ತುವ ಏಳು ಬಣ್ಣದ ತರಗ ತೆಗೆದು, ಅಷ್ಟವರ್ಣದ ಕಳೆಯ ಕಿತ್ತು, ದಶವಾಯುಗಳೆಂಬ ಕಸವ ತೆಗೆದು, ಆ ಸಸಿಯು ಹರಡಿ ಕಾಂತಿಗೂಡಿ ಫಲಕ್ಕೆ ಬರಲಾಗಿ, ಚತುರ್ವಿಧವೆಂಬ ಅಟ್ಟಣಿಗೆಯ ಮೇಲೆ ನಿಂತು, ಬಾಲಚಂದ್ರನೆಂಬ ಕವಣೆಯನ್ನು ಹಿಡಿದು, ಲೌಕಿಕವೆಂಬ ಹಕ್ಕಿಯ ಅಟ್ಟಿ, ಆ ಭತ್ತವು ಬಲಿತು ನಿಂತಿರಲು, ಕೊಯ್ದು ಉಂಬುವ ಬಗೆಯನ್ನು ಮುಂದಿನ ಸಾಲುಗಳಲ್ಲಿ ಹೇಳುತ್ತಾನೆ.

ಇಷ್ಟವೆನ್ನುವ ಕುಡುಗೋಲಿಗೆ ಪ್ರಣವನೆಂಬ ಹಿಡಿಯನ್ನು ತೋಡಿಸಿ, ಭಾವವೆಂಬ ಹಸ್ತದಿಂದ ಹಿಡಿದು, ಹುಟ್ಟು ಎನ್ನುವ ನಿಲವನ್ನು ಕೊಯ್ದು, ಮರಣದ ಸಿವುಡನ್ನು ಕಟ್ಟಬೇಕು. ಆಕಾಶವೆಂಬ ಬಣವೆಯನ್ನು ಒಟ್ಟಿ, ಮನಸ್ಸೆಂಬ (ಉನ್ಮನಿ) ತೆನೆಯನ್ನು ಕತ್ತರಿಸಬೇಕಾಗುತ್ತದೆ. ಹೀಗೆ ಸಂಗ್ರಹಿಸಿದ ಉತ್ಪನ್ನವನ್ನು ಮನೋರಥ ಎಂಬ ಬಂಡಿಯಲ್ಲಿ ಹೇರಿಕೊಂಡು, ಮುಕ್ತಿಯೆಂಬ ಕೊಠಡಿಗೆ ತರಬೇಕು. ಅಲ್ಲಿ ಅಷ್ಟಾಂಗ ಯೋಗವೆಂಬ ದನಗಳಿಂದ ಒಕ್ಕಬೇಕು. ನಂತರ ತಾಪತ್ರಯದ ಮೆಟ್ಟನ್ನು ಹತ್ತಿ, ಪಾಪದ ಹೊಟ್ಟನ್ನು ತೂರಿ, ಪುಣ್ಯದ ಬೀಜವನ್ನು ಪಡೆದು, ಅರಿಷಡ್ವರ್ಗ, ಷಡೂರ್ಮಿಯೆಂಬ ಜೊಳ್ಳನ್ನು ಕಳೆದು, ಅಂಗಜಾಲನ ಕಣ್ಣಮುಚ್ಚಿ ಚಿತ್ರಗುಪ್ತರೆಂಬ ಕರಣಿಕರ ಸಂಪುಟಕ್ಕೆ ಬರಿಸದೆ, ಯಮರಾಜನಿಗೆ ಪಾಲನ್ನು ಕೊಡದೆ, ಸುಖ ಶಂಕರೋತಿ ಎಂಬ

ಪ್ರಸಾದವನ್ನು ಉಂಡು ಸುಖಿಯಾಗಿರಬೇಕು. ಅಂಥ ಒಕ್ಕಲು ಮಗನನ್ನಾಗಿ ನನ್ನನ್ನು ಬದುಕಿಸು ಎಂಬ ಪ್ರಾರ್ಥನೆ ಮುದ್ದಣ್ಣನದು.

ವಿಶೇಷವಾಗಿ ಈ ವಚನವನ್ನು ಸಂಪೂರ್ಣವಾಗಿ ಅವಲೋಕಿಸಿದಾಗ ಒಕ್ಕಲು ಮುದ್ದಯ್ಯ ಅಪಾರ ಚಿತ್ರಕ ಶಕ್ತಿಯಿರುವ ಕವಿಯಾಗಿದ್ದನೆಂದು ಯಾರಿಗಾದರೂ ಅರ್ಥವಾಗುತ್ತದೆ. ಈ ರಚನೆಯಲ್ಲಿ 'ಹೇಳುವಿಕೆ'ಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿದ್ದಾನೆ. ಕೃಷಿಯ ಒಟ್ಟು ಸನ್ನಿವೇಶವನ್ನು ಯಥಾವತ್ತಾಗಿ, ನಿರ್ದಿಷ್ಟ ಕ್ರಮಾನುಗತಿಯಲ್ಲಿ ನಿರೂಪಿಸುವ ಅವನ ಶೈಲಿ ಕಥನ ಕಾವ್ಯತಂತ್ರಕ್ಕೆ ಹತ್ತಿರವಾಗಿದೆ. ಇಲ್ಲಿ ಸೂಚಿತವಾಗಿರುವ ವಿವಿಧ ಬೇಸಾಯ ಕ್ರಮಗಳ ನಡುವೆ ನಿರಂತರ ಸಂಬಂಧವನ್ನು ಸ್ಥಾಪಿಸಿ ವಚನದುದ್ದಕ್ಕೂ ಬದ್ಧತೆಯನ್ನು ಕಾಯ್ದುಕೊಳ್ಳಲಾಗಿದೆ. ಇಂಥ ಸಾಹಿತ್ಯದಲ್ಲಿ ಓದುಗನಿಗೂ ಪಠ್ಯಕ್ಕೂ ಸಂಬಂಧ ಕಲ್ಪಿಸುವುದು ಅವಶ್ಯಕವಾಗಿದ್ದು, ವಚನಕಾರ ಆತ್ಮೀಯತೆಯಿಂದ ನಿರೂಪಿಸುವ ರೀತಿಯನ್ನು ಅನುಸರಿಸಿದ್ದಾನೆ.

ಇದು ಗದ್ಯದ ಪದ್ಯದ ನಡುವಿನ ಆಕೃತಿಯನ್ನು ಪಡೆದಿದ್ದು ಹೇಳಬೇಕೆನ್ನುವ ತುಡಿತ ಎಲ್ಲೆಲ್ಲೂ ಎದ್ದುಕಾಣುತ್ತದೆ. "ವಿಮರ್ಶನ ದೃಷ್ಟಿಯಿಂದ ಹೇಳುವದಾದರೆ ಇಲ್ಲಿನ ನಿರೂಪಣೆಗೆ ಎರಡು ಲಕ್ಷಣಗಳಿವೆ. ಕೃತಿಯ ತಿರುಳಿಗೆ ಸಂಬಂಧಿಸಿದ ವಿಷಯ ಘಟನೆ, ಸಂಗತಿಗಳನ್ನು ವ್ಯವಸ್ಥೆಗೊಳಿಸಿ ಸಂಬಂಧ ಸ್ಥಾಪಿಸುವದು ಒಂದಾದರೆ, ಸಹೃದಯನಿಗೆ ಹೇಗೆ ಹೇಳಬೆಕೆಂಬ ತಂತ್ರಗಾರಿಕೆ ಮತ್ತೊಂದು. ಇವುಗಳನ್ನೆಲ್ಲ ವಚನಕಾರ ತೀರ ಪ್ರಜ್ಞಾಪೂರ್ವಕವಾಗಿ ಪೂರೈಸಿದ್ದಾನೆಂದು ಹೇಳಲು ಬರುವುದಿಲ್ಲ. ಆದರೆ ಒಂದು ವಸ್ತುವಿನ ಮೇಲೆ ಇಷ್ಟೊಂದು ವ್ಯಾಪ್ತಿಯ ಕಾವ್ಯ ಸನ್ನಿವೇಶವನ್ನು ಸಂಶ್ಲೇಷಿಸುವುದು, ಸಾಂದರ್ಭಿಕವಾದ ಘಟನೆಯಲ್ಲ. ೪೦ ಸಾಲಿನ ನೀಳ್ಗವಿತೆ ಯಂತಿರುವ ಇಂಥ ಕವನವನ್ನು ಕಟ್ಟಲು ಅದರ ಕರ್ತೃವಿನ ಸಾಕಷ್ಟು ತಯಾರಿಬೇಕಾಗುತ್ತದೆ ಎನ್ನುವುದು ಸುಳ್ಳಲ್ಲ."[೩]

ಭಕ್ತಿಯನ್ನು ಭೂಮಿಗೆ ಹೋಲಿಸುತ್ತ ಗುರುವಿನ ಉಪದೇಶವೇ ನೆಗಿಲಾಗಿ, ಆ ನೆಲವನ್ನು ಉಳುಮೆ ಮಾಡುತ್ತದೆ ಎನ್ನುವ ಆಶಯ ಇಲ್ಲಡಗಿದೆ. ಅಂತಃಕರಣದ ಚತುಷ್ಟಯದ ಎತ್ತನ್ನು ನೇಗಿಲಿಗೆ ಹೂಡಬೇಕು. ಅಂದರೆ ಗುರು, ಲಿಂಗ, ಜಂಗಮ, ಪ್ರಸಾದಗಳನ್ನು ಆಚರಿಸುವಂತ ನಾಗಬೇಕು. ಚೆನ್ನಬಸವಣ್ಣ ಚತುರ್ವಿಧ ಪುರುಷಾರ್ಥಗಳಾದ ಧರ್ಮ, ಅರ್ಥ, ಕಾಮ, ಮೋಕ್ಷಗಳ ಬಗ್ಗೆ ತನ್ನ ವಚನಗಳಲ್ಲಿ ಉಲ್ಲೆಖಿಸಿದ್ದಾನೆ. ನೇಗಿಲಿಗೆ ಕಟ್ಟಿದ ಪಶುಗಳಿಗೆ ಓಂಕಾರದ ಚಾವಟಿಯಿಂದ ನಿಯಂತ್ರಿಸುತ್ತ ಸಾಲೆಂಬ ಉಪಕರಣದಿಂದ ದುಃಖಕಾರಿ ಕರ್ಮ, ಕಂಟಕಪ್ರಾಯವಾದ ಮುಳ್ಳು ಪೊದೆಯನ್ನು ಕಿತ್ತೊಗೆಯಬೇಕು. ಅರಿವಿನ ಸೂರ್ಯನ ಬಿಸಿಲಿನಲ್ಲಿ ಜ್ಞಾನ ಕಿರಣದಿಂದ ಒಣಗಿಸಿ, ಆ ಕಸವನ್ನು ಸುಟ್ಟು ಹಾಕಬೇಕು. ಹೀಗೆ ಹೊಲವನ್ನು ಹಸನು ಮಾಡಿ ಬಿತ್ತುವ ಹದಕ್ಕೆ ರೈತ ಕಾಯುತ್ತಿದ್ದಾನೆ. 'ಬಿತ್ತುವಟ್ಟಕ್ಕೆ ದಿಕ್ಕಿಲ್ಲ'ವೆಂದು ಗೊಂದಲಕ್ಕೀಡಾಗದೆ ಪ್ರಸ್ತುತ ವಚನದಲ್ಲಿ ಬಿತ್ತುವ ಕ್ರಮವನ್ನು ಹೇಳುತ್ತ ಹೋಗುತ್ತಾನೆ.

ಇಲ್ಲಿ ನಾದ, ಬಿಂದು, ಕಳೆ, ಓಂಕಾರದಲ್ಲಿ ಅ, ಉ, ಮ, ಕಾರಗಳನ್ನು ಪ್ರತಿನಿಧಿಸುತ್ತ ಮಳೆಗಾಲದ ಹದವಾಗಿ ಬಿತ್ತನೆಗೆ ಭೂಮಿಕೆ ಸಿದ್ಧಗೊಳಿಸಿವೆ. ಬಲವಾದ ಕೊರಡಿಗೆ, ತಾಳನ್ನು

ಜೋಡಿಸಿ, ಇಡಾ ಪಿಂಗಳ ಮತ್ತು ಸುಷುಮ್ನವೆಂಬ ಮಾನವ ದೇಹದ ಮುಖ್ಯ ಮೂರು ನಾಳಗಳೇ ಕೂರಿಗೆಯ ಕೊಳವೆಯಾಗಿವೆ. ಭ್ರೂಮಧ್ಯ ಸ್ಥಾನದಲ್ಲಿ ಕಾಳನ್ನು ಹಾಕುವ ಬಟ್ಟಲು ಇದ್ದು, ಅದನ್ನು ಕುಂಡಲೀ ಸರ್ಪದಿಂದ ಬಿಗಿಗೊಳಿಸಬೇಕು. ಈಗ ಕೊರಡು, ತಾಳು, ಈಚು, ಬಟ್ಟಲು, ಕೊಳವೆಗಳನ್ನು ಬಂಧಿಸಿ, ಬಿಗಿಯಾಗಿ ಕಟ್ಟಬೇಕಾಗಿದೆ. ಪರತತ್ವ ಚಿಂತನೆಯಲ್ಲಿ ತಯಾರಾದ ಆತ್ಮದ ಎತ್ತನ್ನು ಕಟ್ಟಬೇಕು. ಪ್ರಣವ ಬೀಜವೆಂದರೆ ಅ, ಉ, ಮ ಕಾರದ ಬೀಜಾಕ್ಷರಗಳು. ಇವು ಯಾವುದೇ ಶುಭಕಾರ್ಯದ ಆರಂಭಿಕ ಮಂತ್ರವನ್ನು ಹೇಳುತ್ತವೆ. ಅಂಥ ಬೀಜವನ್ನು ಪಶ್ಚಿಮಕ್ಕೆ ಬಿತ್ತಬೇಕೆಂದರೆ ಪೂರ್ವದ ಬೆಳಕನ್ನು ಸಂಪೂರ್ಣ ಪಡೆಯಬೇಕೆಂದು ಅರ್ಥ. ಮತ್ತೆ ಉಳಿದಿರುವ ಕಸಕಡ್ಡಿಗಳನ್ನು ತೆಗೆದುಹಾಕಿ ಸ್ವಚ್ಚಗೊಳಿಸಬೇಕು. ಆಗ ಹುಲಸಾಗಿ ಬೆಳೆದ ಪೈರನ್ನು ಕಾಯಲು ಚತುರ್ವಿಧದ ಅಟ್ಟಣಿಗೆಯ ಹತ್ತಿ ನಿಲ್ಲಬೇಕು. ಅರ್ಧಚಂದ್ರನನ್ನು ಕವಣೆ ಮಾಡಿ ಪ್ರಾಪಂಚಿಕ ವಿಷಯಾಸಕ್ತಿಯ ಹಕ್ಕಿಯನ್ನು ದೂರಕ್ಕೋಡಿಸಬೇಕು. ಬೆಳೆಯನ್ನು ಕೊಯ್ದು ತರುವ ರೀತಿ ಹೇಗೆಂಬ ಪ್ರಶ್ನೆಯೊಂದಿಗೆ ವಚನ ಮತ್ತೊಂದು ಹಂತಕ್ಕೆ ಬಂದು ನಿಲ್ಲುತ್ತದೆ.

ಮನದಿಚ್ಛೆಯನ್ನು ಕುಡುಗೋಲು ಮಾಡಿ, ಸದ್ಭಾವನೆಯ ಕೈಯಿಂದ ಜನನದ ಫಸಲನ್ನು ಕತ್ತರಿಸಿ ಮರಣದ ಸಿವುಡು ಕಟ್ಟಬೇಕು. ಆಕಾಶದೆತ್ತರಕ್ಕೆ ಬಣವೆಯಿದ್ದರೆ, ಸಂಸ್ಕಾರದಿಂದ ಊರ್ಧ್ವಮುಖವಾದ ಮನಸ್ಸು ತೆನೆಯಾಗುತ್ತದೆ. ಅದನ್ನು ಒಕ್ಕಿ, ಬಂಡಿಯಲ್ಲಿ ಹೇರಿಕೊಂಡು ಉಗ್ರಾಣಕ್ಕೆ ತರಬೇಕು. ಅದು ಮುಕ್ತಿದಾರಿ ತೋರಿಸುವ ಉಗ್ರಾಣವಾಗಿದ್ದು, ಅಲ್ಲಿ ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣ ಮತ್ತು ಸಮಾಧಿಯೆಂಬ ದನಗಳನ್ನು ಕಟ್ಟಿ ತಿರುಗಿಸಿ, ಹಂತಿ ತುಳಿಸಬೇಕು. ನಂತರ ಧಾನ್ಯವನ್ನು ಮೇಲೆ ಹತ್ತಿ ನಿಂತು ಗಾಳಿಗಭಿಮುಖವಾಗಿ ತೂರಿ ಪಾಪದ ಹೊಟ್ಟನ್ನು ಬೇರ್ಪಡಿಸಬೇಕು. ಆದಾಗ್ಯೂ ಅದರಲ್ಲಿ ಉಳಿದಿರುವ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರವೆಂಬ ಅರಿಷಡ್ವರ್ಗಗಳು ಹಾಗೂ ಕ್ಷುಉತ್ತು, ಪಿಸಾಸೆ, ಶೋಕ, ಮೋಹ, ಜರೆ, ಮರಣಗಳೆಂಬ ಜೊಳ್ಳು ಷಡೂರ್ಮಿಗಳನ್ನು ಬೇರ್ಪಡಿಸಿದಾಗ ಪುಣ್ಯದ ಬೀಜ ದೊರೆಯುತ್ತದೆ. ಈ ಒಕ್ಕಲುತನ ಕಾರುಬಾರಿನ ಖರ್ಚುವೆಚ್ಚದ ಲೆಕ್ಕಾಚಾರ ಚಿತ್ರಗುಪ್ತರ ಮುಂದೆ ಚರ್ಚೆಯಾಗದೆ, ಕಾಲನಿಯಾಮಕನಾದ ಜವರಾಯನಿಗೆ ಕೋರಪಾಲನ್ನು ನೀಡದೆ, ಸುಖದಿಂದ ತರುವ ರೈತರನ್ನು ತನಗೆ ತೋರಿಸಬೇಕೆಂದು ಮುದ್ದಣ್ಣ ಶಿವನನ್ನು ಪ್ರಾರ್ಥಿಸುತ್ತಾನೆ.

“ಇದೊಂದು ಗಂಭೀರ ಸಾಹಿತ್ಯ ರಚನೆಯ ಕ್ರಮ. ಶಿಷ್ಟ ಕವಿಯೊಬ್ಬ ರಚಿಸಿದ, ಸಾಂಪ್ರದಾಯಿಕವಾದ ‘ಸಾಹಿತ್ಯಿಕ ಕಥನ ಕವನ’. ಮುದ್ದಣ್ಣ ಇಲ್ಲಿ ಉದ್ದಕ್ಕೂ ಸಂಕೇತಗಳನ್ನು ಬಳಸುತ್ತ ಹೋಗಿದ್ದಾನೆ. ಒಂದು ಭಾಷೆಯೆಂದರೆ ಅದು ಸಂಕೇತದ ವಿನ್ಯಾಸವೇ ಆಗಿರುತ್ತದೆ. ಅದನ್ನು ಬಳಸಿಕೊಳ್ಳುವ ಜಾಣ್ಮೆಯನ್ನು ಈ ವಚನಕಾರ ತೋರಿದ್ದಾನೆ. ಪಟ್ಟು ಹಿಡಿದು, ಕುಳಿತು ಬರೆದ ಕಾವ್ಯದ ಲಕ್ಷಣಗಳನ್ನು ಇದು ತೋರುತ್ತಿದ್ದರೆ, ಅವನ ಪಾಂಡಿತ್ಯ ಹಾಗೂ ಅಭಿವ್ಯಕ್ತಿ ಸಾಮರ್ಥ್ಯವನ್ನು ಅಂದಿನ ಹಿರಿಕಿರಿಯ ಶರಣರೆಲ್ಲ ಖಂಡಿತ ಗಮನಿಸಿರುತ್ತಾರೆ”.[೪]

ವೃತ್ತಿನಿರತ ವಚನಕಾರರಂತೆ ಮುದ್ದಣ್ಣನು ತನ್ನ ವೃತ್ತಿಯ ಅನುಭವವನ್ನು ತನ್ನ ವೃತ್ತಿಯಾದ ವ್ಯವಸಾಯದ ಪರಿಕರಗಳ ಪರಿಭಾಷೆಯಲ್ಲಿಯೇ ಅಭಿವ್ಯಕ್ತಿಸುವ, ಅನುಭಾವವನ್ನಾಗಿ ಮಾಡಿಕೊಂಡು, ಅದರ ಮೂಲಕವೇ ಬದುಕನ್ನು ನಿಷ್ಠೆ, ಪ್ರಾಮಾಣಿಕತೆಯಿಂದ ಸ್ವೀಕರಿಸಿ, ಅದರಂತೆ ಆತ್ಮನ ಹುಡುಕಾಟ ಮಾಡುತ್ತಾನೆ. ಅಂತರಂಗದ ಕಂಪನಗಳಿಗೆ ಉತ್ತರವನ್ನು ಕಂಡುಕೊಳ್ಳುತ್ತಾನೆ. ಜತೆಗೆ ಸಮಾಜದ ಮಾರ್ಗದರ್ಶಕನಾಗಿ ನೀತಿ ಭೋದನೆಯನ್ನು ಮಾಡುವ ವಚನಗಳು ರಚನೆಗೊಂಡು ಕಾರ್ಯ ನಿರ್ವಹಿಸುವುದನ್ನು ಅರಿಯುತ್ತೇವೆ. ಅರಿವಿಗಾಗಿ ತನ್ನ ದೈವಕ್ಕೆ ಮೊರೆಯಿಡುವುದನ್ನು ನೋಡುತ್ತೇವೆ. ಮುಕ್ತಿಯ ಹಂಬಲವನ್ನು ಉಳ್ಳವನಾಗಿ ದೇಹ ಮತ್ತು ವೃತ್ತಿಯನ್ನು ಸಮ್ಮಿಳಿತಗೊಳಿಸಿಕೊಂಡು ವಚನಗಳನ್ನು ಅಭಿವ್ಯಕ್ತಿಸಿವುದು ವಿಶೇಷವೆ ಸರಿ. ದೇಹದ ಸ್ವರೂಪವನ್ನು ತನ್ನದೇ ಆದ ವೃತ್ತಿ ಪರಿಭಾಷೆಯಲ್ಲಿ ಕಟ್ಟಿಕೊಡುತ್ತಾನೆ. ಅದರ ನಶ್ವರತೆಯನ್ನು ಹೇಳುವ ಬಂದದಲ್ಲಿ ಸಿಲುಕಿರುವ ದೇಹವನ್ನು 'ಕರಲು' ಭೂಮಿಗೆ ಹೊಲಿಸಿ ಅದನ್ನು ಫಲ ನೀಡುವ ಭೂಮಿಯನ್ನಾಗಿ ಪರಿವರ್ತಿಸುವಂತೆ ಬೇಡುತ್ತಾನೆ. ದೇಹ – ಕೃಷಿ – ಆಧ್ಯಾತ್ಮದ ಚಿಂತನೆಗಳಿಂದ ತಾತ್ವಿಕತೆಯನ್ನೊಳಗೊಂಡಿರುವ ಈತನ ವಚನಗಳು ಅನುಭಾವದ ಅಭಿವ್ಯಕ್ತಿಗಳಾಗಿ ಮೂಡಿವೆ. ಹಾಗಾಗಿ ಮುದ್ದಣ್ಣ ಭಾಗಶಃ ತನ್ನ ಎಲ್ಲಾ ವಚನಗಳಲ್ಲಿ ತನ್ನ ವೃತ್ತಿಯ ಪದಗಳನ್ನೆ ಬಳಸಿಕೊಳ್ಳುತ್ತಿರುವುದನ್ನು ನೋಡಿದರೆ ಆತನ ವೃತ್ತಿ ನಿಷ್ಠತೆ, ಶ್ರಮಗೌರವನ್ನು ಅರಿಯಬಹುದು. ಮುದ್ದಣ್ಣನಿಗೆ ವೃತ್ತಿ ಬೇರೆಯಲ್ಲ, ಆಧ್ಯಾತ್ಮ ಬೇರೆಯಲ್ಲ, ಇವರೆಡರಲ್ಲೂ ಏಕತೆಯನ್ನು ಸಾಧಿಸಿಕೊಂಡು ಮಾನವನ ಬದುಕನ್ನು ಶರಣತ್ವಕ್ಕೇರಿಸುವ ಪ್ರಯತ್ನ ಮುದ್ದಣ್ಣನ ವಚನಗಳಲ್ಲಿ ನಡೆದೇ ಇದೆ.

ಎಲೆಗಾರ ಕಾಮಣ್ಣ

ಈತನ ವೃತ್ತಿ ಎಲೆಕಾಯಕ ಎಂದು ತಿಳಿಯಲಾಗಿದೆ. ಉಪಲಬ್ಧ ಇರುವ ಈತನ ಒಂದೆ ಒಂದು ವಚನದಲ್ಲಿ 'ಎಲೆ' ಪದ ಬಳಕೆಗೊಂಡಿದ್ದು, ಅದು ಆತನ ವೃತ್ತಿಯ ಮಾಹಿತಿಯನ್ನು ಒದಗಿಸುವ ವಚನವಾಗಿದೆ. ಈತ ತನ್ನ ವೃತ್ತಿಯ ಪರಿಭಾಷೆಯನ್ನು ಬಳಸಿಕೊಂಡು ವ್ರತಾಚರಣೆಯನ್ನು, ಅದರ ಪ್ರಾಮುಖ್ಯತೆಯನ್ನು ಹೇಳುವ ಪ್ರಯತ್ನ ಮಾಡಿದ್ದಾನೆ. ಅನೇಕ ಮಹಿಳಾ ವಚನಕಾರರು ಒಂದೊಂದೆ ವಚನಗಳಲ್ಲಿ ವ್ರತಾಚರಣೆಯ ಮಹತ್ವವನ್ನು ಪ್ರತಿಪಾದಿಸುವ ಪ್ರಯತ್ನ ಮಾಡಿದ್ದಾರೆ. ಅವರಂತೆ, ವ್ರತ ನಿಷ್ಠೆಯ ವ್ಯಕ್ತಿತ್ವದ ಪ್ರತಿಪಾದನೆ, ವ್ರತ ಭಂಗದ ಮುನ್ನಿನ ಅವಗಹನೆಯನ್ನು ಹೇಳುತ್ತಾನೆ. ವಚನಕಾರರು ಶರಣರ ಒಟ್ಟು ಆಶಯಗಳನ್ನು ಪ್ರತಿಪಾದಿಸುವ ತೀವ್ರತೆ ಬಹಳ ಮಹತ್ವವಾದುದಾಗಿದೆ. ಸಮಾನತೆಯ ಸಿದ್ಧಾಂತ, ಮಾನವ ಕಲ್ಯಾಣದ ಕಲ್ಪನೆ, ಕಂದಾಚಾರದ ನಿರ್ಮೂಲನೆ, ಆಚರಣೆಯ ಖಂಡನೆ ಹೀಗೆ ಸಮಾಜದ ಪೀಡಕಶಕ್ತಿಗಳ ವಿರುದ್ಧ ಒಂದು ಹೊಸ ಚೈತನ್ಯ ಶಕ್ತಿದಾಯಕ ಮಾರ್ಗವೊಂದನ್ನು ಕಂಡುಕೊಂಡು ಅದರ ಮೂಲಕ ತಾವು ಮತ್ತು ತಮ್ಮ ಸುತ್ತ ಮುತ್ತಲಿನ ಸಮಾಜವನ್ನು ಸಾಧನೆಗೆ ತೊಡಗಿಸುವ ಮೂಲಕ ಮಾನವತಾವಾದವನ್ನು ಪ್ರತಿಪಾದಿಸುತ್ತಾರೆ. ಅದರಲ್ಲೂ ಮಹತ್ವದ ಸಿದ್ಧಾಂತವಾದ ಕಾಯಕ–ದಾಸೋಹ ಸಮಾಜದ ಮೇಲೆ ಅಗಾದ ಪರಿಣಾಮವನ್ನು ಬೀರುವ ಮೂಲಕ ಹೊಸ ಕ್ರಾಂತಿಯನ್ನು ಸೃಷ್ಟಿಸಿತು. ಮನುಷ್ಯ ಬದುಕಲೇ ಬೇಕು. ಬದುಕಲು ಆತನಿಗೆ ವೃತ್ತಿಬೇಕು. ಆದರೆ ವೃತ್ತಿ ಕೇವಲ ತುತ್ತಿನ ಚೀಲ ತುಂಬಿಸಿಕೊಳ್ಳುವುದಕ್ಕಾಗಿ ಅಲ್ಲ. ಅದೊಂದು ಪವಿತ್ರವಾದ ಕೆಲಸ. ಅದು

ಕೈಲಾಸಕ್ಕೆ ಸಮ. ಅದೊಂದು ವ್ರತ, ನಿಷ್ಠೆ, ಪ್ರಾಮಾಣಿಕತೆಯೊಂದಿಗೆ ಪಡಿಮೂಡಿರಬೇಕು ಎಂದು ವಚನಕಾರರು ಪ್ರತಿಪಾದಿಸುವವರಾಗಿದ್ದಾರೆ. ಹಾಗಾಗಿ ಶ್ರಮ ಸಿದ್ಧಾಂತದ ಜತೆಗೆ ಶ್ರಮ ಗೌರವನ್ನು ನಿರ್ಮಿಸಿದ್ದಾರೆ. ವೃತ್ತಿಯ ಅನುಭವಗಳ ಮೂಲಕ ಅನುಭಾವಿಗಳಾಗಿದ್ದಾರೆ. ಅವರಂತೆ ಎಲೆಗಾರ ಕಾಮಣ್ಣ ತನ್ನ ಒಂದೆ ಒಂದು ವಚನದಲ್ಲಿ ತನ್ನ ವೃತ್ತಿಯ ಉಪಕರಣವನ್ನು ಬಳಸಿಕೊಂಡು ಕಾಯಕದ, ವ್ರತದ ನಿಷ್ಠೆಯನ್ನು ಪ್ರತಿಪಾದಿಸುವುದನ್ನು ನೋಡಬಹುದಾಗಿದೆ.

ಎಲೆ ಮಿಗಿಲು ಆರು ತಿಂಗಳಿರುವುದು
ವ್ರತ ಹೋಗಲು ಆ ಕ್ಷಣ, ಭ್ರಷ್ಟನೆಂದು ಕೂಡರು,
ಎಲೆ ಹಳದಾದಡೆ ಶಿವಂಗರ್ಪಿತ
ವ್ರತನಷ್ಟವಾಗಲಾಕ್ಷಣ ಮರವಯ್ಯ,
ಆತುರೇಶ್ವರ ಲಿಂಗವೆ.

(ಸಂಕೀರ್ಣ ವಚನ ಸಂಪುಟ ೧, ವಚನ ಸಂಖ್ಯೆ: ೧೬೫೫)

ಕಾಮಣ್ಣನ ಈ ವಚನದಲ್ಲಿ ಒಂದು ಮತ್ತು ಮೂರನೇ ಸಾಲುಗಳಲ್ಲಿ ವೃತ್ತಿಯ ಪದ ಬಳಕೆಯಿದ್ದು, ಉತ್ತರಿಸುವ ಅಥವಾ ಹೇಳುವ ಕ್ರಮವನ್ನು ಅನುಸರಿಸರಿಲಾಗಿದೆ. ಇನ್ನು ಎರಡು ಮತ್ತು ನಾಲ್ಕನೆ ಸಾಲುಗಳಲ್ಲಿ ನಿಷೇದಾರ್ಥವನ್ನೊಳಗೊಂಡಿರುವಂತಹುಗಳಾಗಿವೆ. ಶರಣರ ಆಂದೋಲನದ ಪ್ರಭಾವ ವೃತ್ತಿಯನ್ನು ಮಾಡುತ್ತ ತಮ್ಮ ಪಾಡಿಗೆ ತಾವು ಇದ್ದು ಯಾರಿಗೂ ಕಾಣದಂತೆ ಸಾಧನೆ ಮಾಡುವ ಅನೇಕರಿಗೆ ಮಾರ್ಗದರ್ಶನವನ್ನು ಮಾಡಿರುವುದು ನಿಜ. ಅದಕ್ಕೆ ಎಲೆಗಾರ ವೃತ್ತಿಯನ್ನು ಮಾಡುತ್ತ ಜೀವನ ಸಾಗಿಸುತ್ತಿದ್ದ ಕಾಮಣ್ಣನ ಮೇಲೂ ಪ್ರಭಾವವಾಗಿ ಈತನು ವಚನಕಾರರ ಅನುಭವ ಮಂಟಪದ ತಾತ್ವಿಕ ಚರ್ಚೆಯಲ್ಲಿ ಪಾಲ್ಗೊಂಡು ತನ್ನ ಅನುಭವವನ್ನು ಅನುಭಾವವನ್ನಾಗಿ ಮಾಡಿಕೊಂಡಿರಬಹುದಾಗಿದೆ. ಆ ಕಾರಣಕ್ಕೆ ಅನೇಕ ವ್ರತಾಚಾರಿಗಳ ಕಾಯಕ ತತ್ವದ ಪ್ರಭಾವವನ್ನು ಈತನ ವಚನದಲ್ಲಿ ಗುರುತಿಸಬಹುದಾಗಿದೆ. 'ವ್ರತನಷ್ಟವಾಗಲಾಕ್ಷಣ ಮರಣವಯ್ಯಾ' ಎಂಬ ಈತನ ವಚನದ ಸಾಲು ನಿಷ್ಠೆ, ಪ್ರಾಮಾಣಿಕತೆ, ಕಾಯಕತತ್ವದ ನಿರೂಪಣೆ, ಪ್ರತಿಪಾದನೆ ಇರುವುದನ್ನು ಗಮನಿಸುತ್ತೇವೆ. ತಮ್ಮ ನಿಷ್ಠೆಯನ್ನು ಶಿವನಿಗೆ ಅರ್ಪಿಸುವ ಮನೋವೃತ್ತಿಯೂ ಇತರ ವಚನಕಾರರಂತೆ ಶಿವತತ್ವ ನಿಷ್ಠೆಯುಳ್ಳವನಾಗಿರುವುದನ್ನು ಹೇಳುತ್ತದೆ. ಈ ವಚನದಲ್ಲಿ ಭಾಷೆಯ ಬಳಕೆಯು ತೀವ್ರ ಪ್ರಭಾವವನ್ನು ಬೀರದಿದ್ದರೂ ತಾನು ನಂಬಿರುವ ತತ್ವ ಪ್ರತಿಪಾದನೆಯ, ವ್ರತ ನಿಷ್ಠೆಯನ್ನು ಬೋಧಿಸುವ ರೀತಿಯಲ್ಲಿಯೇ ಅಭಿವ್ಯಕ್ತಗೊಂಡಿದೆ.

ಕಲಕೇತಯ್ಯ.

ಭಕ್ತಿ ಚಳುವಳಿ, ಭಕ್ತಿಪಂಥ ಅನೇಕ ತಳಸಮುದಾಯದ ಜನರನ್ನು ಒಳಗೊಂಡಿತ್ತು. ಕೊನೆ ಸಮುದಾಯದ ದಲಿತರೂ, ಅಸ್ಪರ್ಶರು ಸೇರಿಕೊಂಡರು. ಕೆಳಜಾತಿಯವರು ಶತಮಾನಗಳಿಂದ ಮುಟ್ಟಿಸಿಕೊಳ್ಳಲು ಅನರ್ಹ ಕುಲದವರೆಂದು ಕಟ್ಟಕಡೆಯ ಸ್ಥಾನದಲ್ಲಿ ನಿಂತಿದ್ದರು. ಭಕ್ತಿ ಚಳುವಳಿಯಿಂದ ಶಿವನ ಭಕ್ತರಾದರು. ಮುಂದಿನ ಭಕ್ತಿ ಚಳುವಳಿಗೆ ಜಾತಿನಾಶದ ಆಶಯಕ್ಕೆ

ಬಲ ತಂದುಕೊಡುವುದಲ್ಲದೆ ಸ್ಫೂರ್ತಿ ನೀಡಿದರು. ಆದರೂ ಸಮಾಜದಲ್ಲಿ ಜಾತಿ ಪದ್ಧತಿಯೂ ಬಲವಾದ ಬೇರುಗಳನ್ನು ಆಳಕ್ಕೆ ಬಿಟ್ಟು ಹೆಮ್ಮರವಾಗಿ ನಿಂತಿತ್ತು. ಅದೇ ಸಂದರ್ಭಕ್ಕೆ ಹುಟ್ಟಿಕೊಂಡ ಭಕ್ತಿ ಆಂದೋಲನಕ್ಕೆ ಅನೇಕ ಜಾತಿ, ವರ್ಗ, ವರ್ಣದಿಂದ ಬಂದು ಸೇರಿದರು. ಇದರ ಫಲವಾಗಿ ಒಂದು ಕುಲವಾಗಿ 'ಶಿವಕುಲ' ರೂಪಗೊಂಡು, ವಚನ ಸಂಕುಲವಾಗಿ ಮಾರ್ಪಟ್ಟಿತು. ಶಿವನೆ ಪರಮ ದೈವವಾದನು. ಶಿವನ ಆರಾಧನೆಯೇ ಪರಮ ಗುರಿಯಾಯಿತು.

ಕರ್ನಾಟಕದಲ್ಲಿ ಭಕ್ತಿ ಚಳುವಳಿಯ ನೇತೃತ್ವ ವಹಿಸಿಕೊಂಡ ಬಸವಣ್ಣ ಭಕ್ತಿಪಂಥದ ಭಕ್ತರಿಗೆ 'ಲಿಂಗವಂತ' ಎಂಬ ವಿಶಿಷ್ಠ ಪರಿಕಲ್ಪನೆಯನ್ನು ನೀಡಿ ಸಾಮಾಜಿಕ ಮೇಲುಸ್ತರಕ್ಕೇರಿಸುವ ಕೆಲಸ ಮಾಡಿದ. ಬದುಕಿಗೆ ತಾತ್ವಿಕತೆಯನ್ನು ನೀಡಿ, ಭವ ಬದುಕಿನಿಂದ ಭಕ್ತ ಬದುಕನ್ನಾಗಿ ಪರಿವರ್ತಿಸಿದ. ಇದರ ಫಲವಾಗಿ ಸಮಾಜದ ಅನೇಕ ಸ್ತರಗಳಿಂದ, ದೇಶದ ಮೂಲೆ ಮೂಲೆಯಿಂದ ಭಕ್ತರು ಬಂದು ಈ ಆಂದೋಲನಕ್ಕೆ ಸೇರಿ ಸಾಧನೆ ಮಾಡತೊಡಗಿದರು. ಹೀಗೆ ಬಂದವರಲ್ಲಿ ಅನೇಕರು ವಚನಗಳನ್ನು ರಚಿಸಿದ್ದಾರೆ. ಅವುಗಳ ಮೂಲಕ ಶರಣ ತತ್ವದ ಪ್ರತಿಪಾದಕರಾಗಿದ್ದಾರೆ. ಲಿಂಗವಂತಿಕೆಯ ಪ್ರಸಾರಕರಾಗಿದ್ದಾರೆ. ಆಧ್ಯಾತ್ಮದ ಸಾಧಕರಾಗಿದ್ದಾರೆ. ಸಮಾಜ ಸುಧಾರಕರಾಗಿದ್ದಾರೆ. ವೃತ್ತಿ ಗೌರವ ಪ್ರತಿಷ್ಠಾಪಕರಾಗಿದ್ದಾರೆ.

ಹನ್ನೆರಡನೆ ಶತಮಾನದ ವಚನಕಾರರ ಕ್ರಾಂತಿಯಲ್ಲಿ ಅನೇಕ ವೃತ್ತಿಗಳನ್ನು ಕುಲಕಸಬುಗಳನ್ನು ಮಾಡುತ್ತ ಜೀವನ ಸಾಗಿಸುತ್ತಿದ್ದವರು ಬಂದು ಶರಣರಾಗಿ ವಚನಕಾರರಾಗಿ ವಚನಗಳನ್ನು ರಚಿಸಿದ್ದಾರೆ. ಸಮಾಜದ ಸಂಪ್ರಾದಾಯಗಳಿಗೆ ಅನುಗುಣವಾಗಿ ಜಾತಿ ಪದ್ಧತಿಗಳು ನೆಲೆ ನಿಂತಿದ್ದವು. ಇಂತಹ ಜಾತಿಗಳಿಗೆ ತಮ್ಮದೇ ಆದ ಕಸುಬು ಇರುತ್ತಿತ್ತು. ಹಾಗಾಗಿ ತಮ್ಮ ವೃತ್ತಿಗಳೇ ಜಾತಿಗಳಾಗಿದ್ದವು. ಇನ್ನು ಅನೇಕ ಜಾತಿಗಳು ಜನಪದ ಕಲೆಗಾರಿಕೆಯನ್ನೇ ನಂಬಿಕೊಂಡು ಜೀವನ ಸಾಗಿಸುತ್ತಿದ್ದವು. ಅದರಲ್ಲಿ ಕಿಳ್ಳೆಕ್ಯಾತ, ಡೊಂಬರಾಟ, ಡಕ್ಕೆ ಅಥವಾ ಜರ್ ಬುರ್ ಸುಂಕ್ಲಮ್ಮ ಮುಂತಾದುವುಗಳಿದ್ದವು. ಇಂತಹ ಹಿಂದುಳಿದ ಜನ ಸಮುದಾಯವನ್ನು ಆಕರ್ಷಿಸಿದ್ದು, ಅಪ್ಪಿಕೊಂಡಿದ್ದು, ಶರಣ ಸಮೂಹ.

ಈತನ ಕಾಯಕ ಜನಪದ ಕಲೆಯನ್ನು ಪ್ರದರ್ಶಿಸಿವುದೇ ಆಗಿದೆ ಎಂದು ಗುರುತಿಸಲಾಗಿದೆ. ಈತನು ವಚನಗಳ ಮೂಲಕ ತನ್ನ ವೃತ್ತಿಯ ಚಿತ್ರಣವನ್ನು ಕಟ್ಟಿಕೊಟ್ಟಿದ್ದಾನೆ. ಕಲಾ ಬದುಕಿನ ಅನುಭವದ ಆಧಾರದ ಮೇಲೆ, ವಚನಗಳನ್ನು ನಿಲ್ಲಿಸುತ್ತಾನೆ. ವೃತ್ತಿಯನ್ನು ಸಾಧನೆಯ ಮೂಲ ಮಾರ್ಗವಾಗಿ ಡಕ್ಕೆಯ ಬೊಮ್ಮಣ್ಣ ಬದಲಾಯಿಸಿಕೊಂಡರೆ, ಆತನಂತೆ ಈತನು ಈಡ ಜನಪದ ಕಲೆಯನ್ನು ಆಶ್ರಯಿಸಿ ತನ್ನ ಅರಿವಿನ ಹುಡುಕಾಟವನ್ನು ನಡೆಸಿದ್ದಾನೆ. ತನ್ನ ವೃತ್ತಿ ಪರಿಕರಗಳು ಅಭಿವ್ಯಕ್ತಿಯ ಮಾಧ್ಯಮವಾಗಿ ಬಳಕೆಗೊಂಡಿರುವುದನ್ನು ನೋಡುತ್ತೇವೆ. ಈತನು ಹನ್ನೊಂದು ವಚನಗಳನ್ನು ರಚಿಸಿದ್ದು, ಅವುಗಳಲ್ಲಿ ಸಮಾಜದ ಪರಿವರ್ತನೆಯ ನೀತಿ ಭೋದನೆಯನ್ನು, ಶಿವನಿಷ್ಠೆಯನ್ನು, ವಿಡಂಬನಾತ್ಮಕ ಅಭಿವ್ಯಕ್ತಿಯನ್ನು ಒಳಗೊಂಡಿವೆ. ತನ್ನ ವೃತ್ತಿಯ ಭಾಷೆಯಲ್ಲಿ ತತ್ವವನ್ನು ಹೇಳುವ ವಚನಗಳಿದ್ದು ಅವುಗಳನ್ನು ನೋಡಲಾಗಿದೆ.

ಎನ್ನ ತಗರು ಆರು ಸನ್ನೆಗೆ ಏರದು,
ಮೂರು ಸನ್ನೆಗೆ ಓಡದು.
ಲೆಕ್ಕವಿಲ್ಲದ ಸನ್ನೆಗೆ ದಿಕ್ಕರಿಸಿ ನಿಲುವುದು.
ಕುಟಿಲ ಕಳವಳವನೊಲ್ಲದು.
ಮದ್ದು ಮರುಡೆ ಬೆಳೆವೆಯಗುಣ ಗಾಳಿಯ ಲೆಕ್ಕಿಸದು.
ಇಂತೀ ಅರಿಗುರಿಯ ಕೋಡ ಕಿತ್ತು.
ಒಂದ ಹಿಂದಕ್ಕಿರಿಸಿ, ಒಂದ ಹಿಡಿದಾಡ ಬಂದೆ.
ಆ ಕೋಡಿನಲ್ಲಿ ನಾನಾ ವರ್ಣದ ಶಬ್ದದ ಉಲುಹು.
ಇಂತಿವೆಲ್ಲವ ಒಂದುಂಗುರದಲ್ಲಿ ಸೇರಿಸಿ,
ಅಂಗುಲಿಗಳಲ್ಲಿ ಮುಟ್ಟಿಯಾಡುತ್ತ ಬಂದೆ.
ಮೇಖಲೇಶ್ವರಲಿಂಗದಲ್ಲಿ ಲೀಯವಾದ
ಶರಣರ ನೋಡಿಹೆನೆಂದು

(ಸಂಕೀರ್ಣ ವಚನ ಸಂಪುಟ ೨, ವಚನ ಸಂಖ್ಯೆ: ೩೪)

ಕಲಕೇತಯ್ಯನ ಈ ವಚನದಲ್ಲಿ ಕಿಳ್ಳೆಕೇತರ ಆಟದ ಸಾಮಾಗ್ರಿಗಳು ಬಳಕೆಗೊಂಡಿವೆ. ಮತ್ತು ತಾನು ವೃತ್ತಿಯಲ್ಲಿ ತೊಡಗುವ ಬಗೆಯನ್ನು ವಿವರಿಸುತ್ತಾನೆ. ತನ್ನನ್ನು ಟಗರಿಗೆ ಹೋಲಿಸಿಕೊಳ್ಳುತ್ತಾನೆ. ಆತ್ಮಭಿಮಾನದ ಮಾತುಗಳನ್ನು ಹೇಳುತ್ತಾನೆ. ಅದು ವಚನದ ಮೊದಲ ಐದು ಸಾಲಿನವರೆಗೆ ಮುಂದುವರೆದು, ಯಾವ ಯಾವ ವಿಷಯದಲ್ಲಿ ನಾನು ಸೋಲುವುದಿಲ್ಲ ಎಂಬುದನ್ನು ತಿಳಿಸುತ್ತಾನೆ. ಮತ್ತು ಮಾಯಾ ಪ್ರಪಂಚದ ಬೆರಗಿಗೆ ಬೆರಗುಗೊಂಡು ಅದರಿಂದ ತಪ್ಪಿಸಿಕೊಳ್ಳಲು ಅಥವಾ ಆಸೆಯು ಅವನನ್ನು ಕಾಡುವ, ಸಿಲುಕಿಸುವ, ಬೆರಗುಮಾಡಿ ಬಂದನದಲ್ಲಿಕ್ಕುವ ಚಿತ್ರಣವನ್ನು ಪರೋಕ್ಷವಾಗಿ ನೀಡಿ, ಅದರಿಂದ ತಪ್ಪಿಸಿಕೊಳ್ಳುವುದು ಹೇಗೆ ಎಂಬುದನ್ನು ಬೋದಿಸುವಂತಿದೆ. ಇಲ್ಲಿ 'ಸನ್ನೆ' ಎಂಬ ಪದವನ್ನು ವಿಶೇಷವಾಗಿ ಗಮನಿಸಬೇಕಾಗುತ್ತದೆ. ಸನ್ನೆ ಅನ್ನುವುದು ಮೋಹವಾಗಿಯೆ ಬಳಕೆಗೊಂಡಿದೆ. ಜೀವನದಲ್ಲಿ ಮನುಷ್ಯನಿಗೆ ಅಂಟಿಕೊಂಡು ಅವನನ್ನು ಭವಿಯನ್ನಾಗಿಯೇ ಉಳಿಸಿಬಿಡುವಂತಹುಗಳಾಗಿವೆ. ಅಂತಹ ಮೋಹ ಪಾಶದ ಸನ್ನೆಯನ್ನು ಧಿಕ್ಕರಿಸುವ ನಿಲುವು ಕೇತಯ್ಯನದಾಗಿದೆ.

ಇನ್ನೂ ವಚನದ ಕೊನೆಯರ್ದದ ಐದು ಸಾಲುಗಳಲ್ಲಿ ಜೀವನವನ್ನು ಜಯಸುವ ಬಗೆಯನ್ನು ಅರಿವಿನ ದಾರಿಯನ್ನು ಹುಡುಕಿಕೊಂಡಿರುವುದನ್ನು ಗಮನಿಸುತ್ತೇವೆ. ನಿಜ ಶರಣರ ಹುಡುಕಾಟ ಅಥವಾ ಮುಕ್ತಿಪಥದ ಹುಡುಕಾಟ ನಡೆಸಿರುವುದನ್ನು ಹೇಳಿಕೊಳ್ಳುತ್ತಾನೆ. ತನ್ನ ವೃತ್ತಿಯಲ್ಲಿ ಬಳಕೆಗೊಳ್ಳುವ ತಗರು ಇಡಿ ವ್ಯವಸ್ಥೆಯ ರೂಪಕವಾಗಿ ಬಳಕೆಗೊಂಡಿದೆ. ಸನ್ನೆ ಎಂಬುದು ಆತನ ವೃತ್ತಿಯ ಅಥವಾ ಅಭಿನಯದ ಪ್ರತಿಮೆಯಾಗಿ ಬಂದಿದೆ. ಕೋಡು ಎಂಬುದು ಅರಿವಿನ ತಿಳುವಳಿಕೆಗೆ ಅಡ್ಡವಾಗಿ ನಿಂತಿರುವ ಅಹಂಕಾರವಾಗಿ ಅಭಿವ್ಯಕ್ತಗೊಂಡಿದೆ. ಕಲಕೇತಯ್ಯ ತನ್ನ ಕಲಾ ವೃತ್ತಿಯ ಚಿತ್ರಣದ ಮೂಲಕ ತನ್ನ ಅನುಭವವನ್ನು ಕಡೆದು ಆಧ್ಯಾತ್ಮದ ಉನ್ನತಿಯನ್ನು

ಸಾಧಿಸುವ ಪ್ರಯತ್ನ ನಡೆಸಿರುವುದನ್ನು ಗುರುತಿಸಬಹುದಾಗಿದೆ. ಸಮಾಜದ ವಿಡಂಬನೆಯ ಜೊತೆಗೆ ವೃತ್ತಿಯ ಬದುಕನ್ನು ತಿಳಿಸುವ ಈ ವಚನವನ್ನು ನೋಡಬಹುದು.

ಜಗಕ್ಕಹುದಾದುದ ಕಿತ್ತು ಜಗಕ್ಕಲ್ಲವಾದುದ ತೊಟ್ಟು
ಜಗ ಹಿಡಿದುದ ಬಿಟ್ಟು, ಜಗ ವಲ್ಲದುದ ತೊಟ್ಟು
ತಾನರಿದುದ ಮರದು, ಆ ಮರವೆಗೆ ಒಡಲಾದುದ ನರಿದು
ಉಭಯದ ಕೋಡ ಕಿತ್ತು, ನಲಿದೊಲವಿನ ಹೊಲನ ಬಿಟ್ಟು
ಕೊಂಬಿನ ಗಿಲಕಿಯಲ್ಲಿ ಒಲದಾಡುವೆ.
ಜಗಭಂಡರ ಅಂಗಳದಲ್ಲಿ ತುಳಿದಾಡುತ್ತಲಿರಬೇಕು.
ಮೇಖಲೇಶ್ವರಲಿಂಗ ಒಡಗೂಡತ್ತಲಿರಬೇಕು

(ಸಂಕೀರ್ಣ ವಚನ ಸಂಪುಟ ೨, ವಚನ ಸಂಖ್ಯೆ: ೩೮)

ಕಲಕೇತಯ್ಯನ ಈ ವಚನದಲ್ಲಿ ಪ್ರಾಸಾನುಪ್ರಾಸಗಳು ಸಹಜವಾಗಿಯೇ ಮೂಡಿ ಅರ್ಥವ್ಯಾಪ್ತಿಯನ್ನು, ಭಾವ ತೀವ್ರತೆಯನ್ನು ಹೆಚ್ಚಿಸಿವೆ. ಈತ ಹೇಳಬೇಕಾಗಿರುವುದನ್ನು ಮನ ಮುಟ್ಟುವ ಹಾಗೆ ಹೇಳುತ್ತಾನೆ. ತತ್ವದ ನಿರೂಪಣೆ ಓದಿಗೆ ಸ್ಪಷ್ಟವಾಗುವಂತೆ ಕಾಣುತ್ತದೆ. ಉನ್ನತ ಮಟ್ಟದ ಭಾವತೀವ್ರತೆಯನ್ನು ಸುಲಭವಾಗಿ ಅರ್ಥೈಸಿಕೊಳ್ಳುವಂತೆ, ನಿಲುಕುವಂತೆ ಭೋದನೆಯುಳ್ಳ ಅಭಿವ್ಯಕ್ತಿ ಕ್ರಮವನ್ನು ಅನುಸರಿಸಿದ್ದಾನೆ.

ಸಾಮಾನ್ಯ ಮನುಷ್ಯನು ನಂಬಿರುವ ಜಗತ್ತನ್ನು ವಿಡಂಬಿಸುತ್ತಾನೆ. ಭಕ್ತರ ಜಗತ್ತೆ ಬೇರೆ ಇದೆ. ಅದು ಶಾಶ್ವತ ಜಗತ್ತು. ಲೌಖಿಕ ಮತ್ತು ಅಲೌಕಿಕ ಜಗತ್ತು ಬೇರೆ ಬೇರೆ ಎಂದು ವಿಭಾಗಿಸಿರುವುದನ್ನು ನೋಡುತ್ತೇವೆ.

ಕಾಲನಾಲ್ಕು ಮುರಿದು, ಕೋಡೆರಡಕಿತ್ತು,
ಆರಡಗಿತ್ತು ತಗರಿನ ಹಣೆಯಲ್ಲಿ,
ಮೂರು ಹೋಯಿತ್ತು ತಗರಿನ ಕೋಡೆರಡರಲ್ಲಿ.
ಎಂಟು ಹೋಯಿತ್ತು ಕಾಲು ನಾಲ್ಕರಲ್ಲಿ.
ತಗರಿನ ಜೀವ ಉಭಯದ ಸನ್ನೆಯಲ್ಲಿ ಹೋಯಿತ್ತು.
ಇಂತೀ ಕಲಕೇತ ವಿಧ್ಯವ ಧರಿಸಿ,
ಮಹಾ ಶರಣರ ಮನದ ಮಂದಿರದಲ್ಲಿ
ಕಲಕೇತನ ಒಲವರದಲ್ಲಿ
ಮೂಡಿ ಮುಳಗಬೇಡ ಎಂದು ಸಾರಿ ಮಾರಬಂದೆ.
ಶುದ್ಧ ಪ್ರಸಾದ ಎನಗುಂಟು, ಸಿದ್ಧ ಪ್ರಸಾದ ಎನಗುಂಟು,
ಪ್ರಸಿದ್ಧ ಪ್ರಸಾದ ನಿಮಗುಂಟು,
ಆ ಪ್ರಸನ್ನ ಪ್ರಸಾದ ಎನಗೆ ಬೇಕೆಂದು,
ಮೇಖಲೇಶ್ವರ ಲಿಂಗವನೊಡಗೂಡಿಕೊಂಡು ಬೇಡ ಬಂದೆ.

(ಸಂಕೀರ್ಣ ವಚನ ಸಂಪುಟ ೨, ವಚನ ಸಂಖ್ಯೆ: ೩೬)

ಈ ವಚನ ಬೆಡಗಿನ ಶೈಲಿಯನ್ನು ಹೋಲುವ ರೂಪದಂತಿದೆ. ಮಾನವನು ಲೌಕಿಕ ಬದುಕನ್ನು ಮೀರಿ ಅಲೌಕಿಕ ಬದುಕಿಗೆ ಸಾಗಲು ಮಾಡಬೇಕಾದ ಕೆಲಸವನ್ನು ವಿವರಿಸುತ್ತದೆ. ಮಾಯಾ ಪ್ರಪಂಚದಲ್ಲಿ ಸಿಲುಕಿ ತನ್ನತನವನ್ನೆ ಮರೆತು ಭವ ಬಂದನದಲ್ಲಿ ಬಳಲುವ ಮಾನವರಿಗೆ ಆಧ್ಯಾತ್ಮದ ನಿಜ ಸುಖದ ಅರಿವಿನ ದಾರಿಯನ್ನು ತೋರಿಸುವ ನೀತಿ ಭೋದೆ ಇಲ್ಲಿದೆ. ಅಲ್ಲದೆ ಸಾಧಕನಾದವನು ತಾನು ಬಿಡಬೇಕಾದ ಗುಣಗಳನ್ನು ಬಿಟ್ಟು, ಆತ್ಮೋತನ್ನತಿಯನ್ನು ಸಾಧಿಸಿಕೊಂಡು ತನ್ನನ್ನೆ ತಾನು ಶಿವನಿಗರ್ಪಿಸಿ, ಮುಕ್ತಿಯನ್ನು ಬೇಡುವ ಧೈನ್ಯತೆಯಭಾವ ತೀವ್ರತೆಯಲ್ಲಿ ಪ್ರಕಟಗೊಂಡಿದೆ. ಈ ವಚನದಲ್ಲಿ ಲೌಖಿಕ ಜಗತ್ತಿನ ನಿರಾಕರಣೆಯಿರುವುದನ್ನು ಗಮನಿಸಬಹುದು. ಹಾಗೂ ಆಧ್ಯಾತ್ಮದ ಸೆಳೆತ ನಿಜೈಕ್ಯದ ಸ್ಥಿತಿಗೆ ತಲುಪುವ ಹಂಬಲವಿದೆ. ಕಲಕೇತಯ್ಯನ ಆಧ್ಯಾತ್ಮದ ಪರಿಕಲ್ಪನೆಗೆ ತನ್ನ ವೃತ್ತಿಯಾದ ಕಿಳ್ಳೇತರ ಆಟ ವೇದಿಕೆಯಾಗಿದೆ. ವೃತ್ತಿಯ ಪರಿಭಾಷೆಯು ಅಭಿವ್ಯಕ್ತಿಯ ಮಾಧ್ಯಮವಾಗಿ ಮಾರ್ಪಟ್ಟಿದೆ.

ನುಲಿಯ ಚಂದಯ್ಯ

ಬಸವಣ್ಣನ ಹಿರಿಯ ಸಮಕಾಲೀನ ವಚನಕಾರ ನುಲಿಯ ಚಂದಯ್ಯ. ಈತ ವೃತ್ತಿಯಲ್ಲಿ ನಿರತನಾಗಿರುವ ವಚನಕಾರ. ಹಗ್ಗವನ್ನು ಹೆಣೆಯುವ ಕಾಯಕ ಈತನದೆಂದು ಗುರುತಿಸಲಾಗಿದೆ. ಕೆಳವರ್ಗದ ಕೊರವ ಜಾತಿ ಮೂಲದವನೆಂದು ಈತನನ್ನು ಗುರುತಿಸಲಾಗಿದೆ. ಹಗ್ಗ ನೇಯುವುದು, ಕಣ್ಣಿ ಮಾಡುವುದು ಈತನ ವಚನಗಳಲ್ಲಿ ಉಲ್ಲೇಖವಿರುವುದರಿಂದ ಜಾತಿ ಮತ್ತು ವೃತ್ತಿಯನ್ನು ಗುರುತಿಸಲಾಗಿದೆ. ಚಂದಯ್ಯ ಕಲ್ಯಾಣದ ಮಹಾಮನೆಗೆ ಸೇರಿಕೊಂಡು ಅಲ್ಲಿನ ಚರ್ಚೆಗಳಲ್ಲಿ ಪಾಲ್ಗೊಳ್ಳುತ್ತಿದ್ದು ಸ್ವಾಭಾವಿಕವಾಗಿಯೇ ವಚನಕಾರರ ತತ್ವವನ್ನು ಮೈಗೂಡಿಸಿಕೊಂಡು ಬದುಕಿದವನಾಗಿದ್ದಾನೆ. ಈತನ ಮೇಲೆ ಬಸವಣ್ಣ, ಅಲ್ಲಮ, ಚನ್ನಬಸವಣ್ಣ ಮುಂತಾದ ವಚನಕಾರರ ಪ್ರಭಾವವಿದ್ದು, ಸ್ವತಃ ಅವರನ್ನು ಸ್ಮರಿಸಿರುವುದನ್ನು, ವಚನಗಳಲ್ಲಿ ಉಲ್ಲೇಖಿಸಿರುವುದನ್ನು ನೋಡ ಬಹುದು. ತನ್ನ ವೃತ್ತಿಯನ್ನೇ ಶ್ರೇಷ್ಠವೆಂದು ನಂಬಿ ಬದುಕಿದ ಕಾಯಕ ಜೀವಿ ಚಂದಯ್ಯನಾಗಿದ್ದಾನೆ.

ವಚನಗಳನ್ನು ರಚಿಸಿ ವಚನಕಾರನೆಂದು ಹೆಸರು ಪಡೆಯುವುದಕ್ಕಿಂತ, ನಿಷ್ಠೆಯುಳ್ಳ ಕಾಯಕ ಜೀವಿ ಎಂದು ಕಾಯಕತತ್ವದ ಪ್ರತಿಪಾದಕನೆಂದು ಹೆಸರಾಗಿದ್ದಾನೆ. ಚಂದಯ್ಯನ ಮೇಲೆ ಹುಟ್ಟಿಕೊಂಡಿರುವ ಅನೇಕ ಪವಾಡ ಕತೆಗಳನ್ನು ನೋಡಿದರೆ ಈತನ ಕಾಯಕತತ್ವದ ಪ್ರತಿಪಾದನೆ, ವೃತ್ತಿನಿಷ್ಠೆ, ಶ್ರಮಗೌರವವನ್ನು ಗುರುತಿಸಬಹುದು. ಚಂದಯ್ಯನ ವಚನಗಳು ಅಭಿವ್ಯಕ್ತಗೊಂಡಿರುವ ಕ್ರಮವನ್ನು ಅನುಲಕ್ಷಿಸಿದರೆ, ಸಾಧಾರಣ ಅಭಿವ್ಯಕ್ತಿಯ ವಿಧಾನವನ್ನು ಅನುಸರಿಸಿವೆ ಎಂದು ತಿಳಿದರೂ ಹಲವು ಆಯಾಮಗಳಲ್ಲಿ ಓದಿಗೆ ನಿಲುಕ ಬಲ್ಲಂತಹವುಗಳಾಗಿವೆ. ತನ್ನ ಅನೇಕ ವಚನಗಳಲ್ಲಿ ಶಿವನಿಷ್ಠೆಯನ್ನು ಪ್ರತಿಪಾದಿಸಿರುವುದನ್ನು ಕಾಣಬಹುದು. ಗುರು-ಲಿಂಗ-ಜಂಗಮ ತತ್ವದ ಪ್ರತಿಪಾದನೆ ಸಹಜವಾಗಿ ಮೂಡಿದೆ. ಸಾಮಾಜದ ವಿಮರ್ಶೆ ವಿಡಂಬನೆಯೂ ಕೂಡ ಇಲ್ಲದಿಲ್ಲ. ತನ್ನ ವೃತ್ತಿ ಸಹಜ ಅಭಿವ್ಯಕ್ತಿಯ ವಚನಗಳು ಅತ್ಯಲ್ಪವಾದರೂ, ವೃತ್ತಿ ಬಗೆಗಿನ ಚಿಂತನೆ, ವೃತ್ತಿನಿಷ್ಠೆ ಶ್ರಮಗೌರವದ ಪ್ರತಿಪಾದನೆ ಪರಿಣಾಮಕಾರಿಯಾಗಿಯೇ ಅಭಿವ್ಯಕ್ತಗೊಂಡಿರುವುದನ್ನು

ಅರಿಯಬಹುದು. ಮಾನವನು ಅನುಸರಿಸುವ ಆಚರಣೆಗಳ ಕುರಿತು ಸ್ಪಷ್ಟ ವೈಚಾರಿಕತೆಯ ಅಭಿಪ್ರಾಯ ಮಂಡನೆಗೊಂಡಿರುವುದನ್ನು ಈತನ ವಚನಗಳಲ್ಲಿ ನೋಡುತ್ತೇವೆ. ಮುಖ್ಯವಾಗಿ ವೃತ್ತಿನಿಷ್ಠೆಗೆ ಹೆಸರಾಗಿರುವ ಚಂದಯ್ಯ ತನ್ನ ವೃತ್ತಿಯಲ್ಲಿ ಬಳಸಲಾಗುವ ಉಪಕರಣಗಳ ಮೂಲಕ ಭಾಷೆಯನ್ನು ಬಳಸಿರುವ ಬಗೆಯನ್ನು ಈ ವಚನದ ಮೂಲಕ ನೋಡಬಹುದು.

ಸಂಸಾರವೆಂಬ ಸಾಗರದ ಮಧ್ಯದೊಳಗೆ
ಬೆಳೆದ ಹೊಡೆಕೆ ಹುಲ್ಲ ಕೊಯ್ದು
ಮತ್ತಮಾ ಕಣ್ಣ ತೆಗೆದು, ಕಣ್ಣಿಯ ಮಾಡಿ
ಇಹಪರವೆಂಬ ಉಭಯದ ಗಂಟನಿಕ್ಕಿ
ತುದಿಯಲ್ಲಿ ಮಾಟಕೂಟವೆಂಬ ಮನದ
ಕುಣಿಕೆಯಲ್ಲಿ ಕಾಯಕವಾಯಿತ್ತು.
ಇದು ಕಾರಣ ಚಂದೇಶ್ವರಲಿಂಗವೆಂಬ ಭಾವವೆನಗಿಲ್ಲ.

(ಸಂಕೀರ್ಣ ವಚನ ಸಂಪುಟ ೨, ವಚನ ಸಂಖ್ಯೆ: ೧೩೩೬)

ಪ್ರಸ್ತುತ ವಚನ ಒಂದು ವಿಶಿಷ್ಟವಾದ ಮಂಡನೆಯ ಕಡೆಗೆ ಸಾಗುತ್ತದೆ. ಒಂದು ಜೀವನ ಮೀಮಾಂಸೆಯನ್ನು ಮತ್ತು ಅದರ ಪರಿಣಾಮದಿಂದ ಬಿಡುಗಡೆ ಬಯಸುವುದನ್ನು ಮಂಡಿಸುತ್ತದೆ. ಇರುವುದು ಮತ್ತು ಬಿಡುವುದು ಯಾವುದು? ಹೀಗೆ ಸಾಗುತ್ತದೆ. ಇದರ ನಿರೂಪಣೆ, ಪೂರ್ಣವಾಗುವರೆಗೂ ಕಾರ್ಯ ಪ್ರವೃತ್ತತೆಯನ್ನು ನಡೆಸುವುದು, ನಡೆಯುವುದು ಇಲ್ಲಿನ ನಿರಂತರತೆಯಾಗಿದೆ. ಮೊದಲಿಗೆ ಬರುವ 'ಸಂಸಾರ' ಒಂದು ಭೂಮಿಕೆಯನ್ನು ಸಿದ್ಧಪಡಿಸುತ್ತದೆ. 'ಹೊಡೆ ಹುಲ್ಲನ್ನು' ಬೆಳೆಸಿ ನಿಲ್ಲಿಸುತ್ತದೆ. ನಂತರ 'ಕೊಯ್ದು' ಸಂಸಾರ ಜೀವನದಲ್ಲಿ ಸೀಮಿತಗೊಳಿಸಲು ಏನೇನಿವೆಯೋ ಅವುಗಳ ಅಗತ್ಯತೆಯನ್ನು ಕಿತ್ತು ಹಾಕುತ್ತದೆ. ಮುಂದುವರೆದು ಲೌಕಿಕ–ಅಲೌಕಿಕ ಬದುಕಿನ ಚಿತ್ರಣವನ್ನು ನೀಡಿ, ಅವೆರಡನ್ನು ಮಿಳಿತಗೊಳಿಸಿ ಬಿಡುತ್ತದೆ. ಇವೆಲ್ಲವನ್ನು ಕಾಯಕದ ಬಂದದಲ್ಲಕ್ಕಿ ಬಿಡುತ್ತದೆ. ಅಂದರೆ ಕಾಯಕ ಎಂಬುದು ಇಹಪರದ ಪ್ರತಿರೂಪ. ಜೀವನಕ್ಕಿಂತಲೂ ಶ್ರೇಷ್ಠ. ಇದೂ ಅಂತರಂಗದ ಜ್ಞಾನಚಕ್ಷುವಾಗಿ ಕೆಲಸ ಮಾಡುವುದನ್ನು ಚಂದಯ್ಯ ಈ ವಚನದಲ್ಲಿ ಕಟ್ಟಿಕೊಟ್ಟಿದ್ದಾನೆ. ಈ ವಚನದಲ್ಲಿ ಏನನ್ನು ಹೇಳಬೇಕಾಗಿತ್ತೋ ಅದು ಹೀಗೆ ಹೇಳುತ್ತಿರುವುದು ಸರಿಯೇ ಆದರೆ ಹೇಳಬೇಕಾದ ಅಗತ್ಯ ಒಂದಿದೆ. ಅದು ಏನು? ವೃತ್ತಿ ನಿಷ್ಠೆಯೋ? ಆಧ್ಯಾತ್ಮಿಕ ಅನುಸಂದಾನದ ದಾರಿಯ ಹುಡುಕಾಟವೋ? ಕಾಯಕ ತತ್ವದ ಪ್ರತಿಪಾದನೆಯೋ? ಈ ವಚನದಲ್ಲಿ ವೃತ್ತಿಯ ರೂಪಕವಿದ್ದು, ಅಂತರಿಕ ಕೊರತೆಯನ್ನು ಬಹಿರಂಗದಲ್ಲಿ ಗುರುತಿಸುವುದು. ಇಲ್ಲಿ ಸಂಸಾರ ಸುಖದ ನಿರಾಕರಣೆ, ಆಧ್ಯಾತ್ಮದ, ಪರದ ಸ್ವೀಕರಣೆ ಇವುಗಳಿಗೆ ಮೂಲ ಮಾರ್ಗವಾಗಿ ಕಾಯಕ. ಈ ಮೂರು ನಿಂತು ಈ ವಚನ ಅಭಿವ್ಯಕ್ತಗೊಳ್ಳುತ್ತದೆ.

ಹನ್ನೆರಡನೆಯ ಶತಮಾನದ ಈ ಶ್ರಮಜೀವಿಗಳ ಚಳವಳಿಯ ಬೇರುಗಳಲ್ಲಿ ಒಬ್ಬರಾಗಿರುವ ನುಲಿಯ ಚಂದಯ್ಯನವರು ಕಾಯಕ ಮತ್ತು ದಾಸೋಹಕ್ಕೆ ತುಂಬ ಮಹತ್ವ ಕೊಟ್ಟ ವಚನಕಾರ. ತಮ್ಮ ಬಹುತೇಕ ಎಲ್ಲ ವಚನಗಳಲ್ಲಿ ಅರಿವು, ಭಾವಶುದ್ಧಿ, ಜ್ಞಾನನಿಷ್ಠೆಯ ಕುರಿತು ಒತ್ತುಕೊಟ್ಟು

ಹೇಳಿರುವರು. ಕಾಯಕ ಮತ್ತು ದಾಸೋಹದಲ್ಲಿ ಈ ಗುಣಗಳು ಇದ್ದಾಗ ಮಾತ್ರ ಅವಕ್ಕೆ ಗೌರವವಿದೆಯೆಂದು ಪ್ರತಿಪಾದಿಸಿರುವರು. ಈ ಗುಣಗಳು ಇರುವುದರಿಂದ ಯಾವುದೇ ಕಾಯಕವಾದರೂ ಅದು ಶ್ರೇಷ್ಠವೇ ಆಗುತ್ತದೆಂಬ ಮನೋಧರ್ಮ ಅವರದು. ಶರೀರವನ್ನು ದಂಡಿಸಿ ದುಡಿಯದೇ ಮಂತ್ರ ಹೇಳಿ ಮಾಡುವ ಪೂಜೆಯೇ ಶ್ರೇಷ್ಠವೆಂದು, ಅದು ತಮ್ಮ ಹಕ್ಕು ಮಾತ್ರವೆಂದು ಬಹುಜನತೆಗೆ ಮಂಕುಬೂದಿ ಎರಚಿದ ಪುರೋಹಿತ ವ್ಯವಸ್ಥೆಗೆ ಸವಾಲಾಗಿ ಚಂದಯ್ಯನವರು 'ದುಡಿಮೆಯೇ ದೇವ ಪೂಜೆ' ಎಂಬ ಕಾಯಕ ತತ್ವವನ್ನು ಪ್ರತಿಪಾದಿಸುತ್ತಾರೆ.

ಚಾಪ ಕಪಿ(ತ್ಥ)ದ ಕಾಯ ಕೂಡಿ ಹಿಡಿದು ಎಸೆಯಬಹುದೇ?
ಪೂಜೆಗೆ ಷೋಡಶ ಉಪಚರಿಯಬೇಕು
ಮಾಡುವನ್ನಬರ ಕಾಯಕ ನಿಂದಿತ್ತು
ಕಾಯಕದೊಳಗೆ ಮೂರರ ಕೂಟ
ಚಂದೇಶ್ವರಲಿಂಗಕ್ಕೆ ಮಡಿವಾಳಯ್ಯಾ

(ಸಂಕೀರ್ಣ ವಚನ ಸಂಪುಟ ೨, ವಚನ ಸಂಖ್ಯೆ: ೧೩೨೧)

ಜನ್ಮವನ್ನು ದುಡಿಯದೆ ವ್ಯರ್ಥ ಸವೆಸುವುದರಲ್ಲಿ ಅರ್ಥವಿಲ್ಲ. ತನುವ ಬಳಲಿಸಿ ದುಡಿಯಬೇಕು. ಈ ಕಾಯಕದಲ್ಲೇ ಶಿವನ(ದೇವರ)ನ್ನು ಕಾಣಬೇಕೇ ಹೊರತು ವಿಧವಿಧ ಪೂಜೆಯಿಂದ ಅಲ್ಲ. ತನು, ಮನವನ್ನು ಬಳಲಿಸಿ ಕಾಯಕ ಮಾಡಬೇಕು. ಅಂಥದ್ದರಲ್ಲಿ ದುಡಿಮೆಯ ಬಿಟ್ಟು ಈ ಷೋಡಶೋಪಚಾರ ಪೂಜೆಯಿಂದ ಕಾಯಕದ ಸಮಯ ಹಾಳಾಗುತ್ತಿದೆಯಲ್ಲಾ ಎಂಬ ಪ್ರಜ್ಞಾಭಾವ ವೊಂದು ಇಲ್ಲಿ ಕಾಣುತ್ತದೆ. ಸಮಾಜ ಸೇವೆಗಾಗಿ ಮಾಡುವ ಕಾಯಕದಲ್ಲೇ ಎಲ್ಲ ಪೂಜೆಗಳು ನೆರವೇರುತ್ತವೆ. ಅಂದರೆ ಕಾಯಕವೇ ಕೈಲಾಸವಾಗುತ್ತೆಂದು ಚಂದಯ್ಯನವರು ಮಡಿವಾಳ ಮಾಚಯ್ಯನವರ ಮುಂದೆ ನಿವೇದಿಸುತ್ತಾರೆ. ಈ ವಚನದಲ್ಲಿ ಷೋಡಶೋಪಚಾರದ ಪೂಜೆಯನ್ನು ಮಾತ್ರ ನಿರಾಕರಿಸುತ್ತಿಲ್ಲ, ಈ ಆಚಾರದ ಪೂಜೆಗೆ ಇಂಬಾಗಿರುವ ಶಾಸ್ತ್ರಗಳನ್ನು, ಭಕ್ತಿಯ ಕಲ್ಪಿತ ಮೌಢ್ಯದ ನಂಬಿಕೆಗಳನ್ನು ನಿರಾಕರಿಸಲಾಗಿದೆ.

ಆವಾವ ಕಾಯಕದಲ್ಲಿ ಬಂದಡೂ ಭಾವಶುದ್ಧವಾಗಿ
ಗುರು ಲಿಂಗ ಜಂಗಮಕ್ಕೆ ಮಾಡುವುದೇ ಶಿವಪೂಜೆ
ಮಾಡುವ ಮಾಟವಿಲ್ಲದೆ ಮಾತಿಂಗೆ ಮಾತಾಡುವುದು
ಅದೇತರ ಪೂಜೆ?
ಅದು ಚಂದೇಶ್ವರಲಿಂಗಕ್ಕೆ ಒಪ್ಪವಲ್ಲ, ಮಡಿವಾಳಯ್ಯಾ

(ಸಂಕೀರ್ಣ ವಚನ ಸಂಪುಟ ೨, ವಚನ ಸಂಖ್ಯೆ: ೧೨೬೫)

ವರ್ಣವ್ಯವಸ್ಥೆಯಲ್ಲಿ ದುಡಿವ ವೃತ್ತಿಗಳನ್ನೆಲ್ಲ ಕೀಳಾಗಿ ಕಾಣಲಾಗುತ್ತಿತ್ತು. ಪೌರೋಹಿತ್ಯವೇ ಶ್ರೇಷ್ಠವೆನ್ನಲಾಗಿತ್ತು. ಆದರೆ ಕಾಯಕ ಜೀವಿಗಳೇ ತುಂಬಿರುವ ವಚನ ಚಳುವಳಿಯಲ್ಲಿ ಕಾಯಕವೇ ಅಗ್ರಸ್ಥಾನ ಪಡೆಯಿತು. ಯಾವುದೇ ಕಾಯಕವಾದರೂ ಅದು ಭಾವ ಶುದ್ಧವಾಗಿ ಗುರು ಲಿಂಗ ಜಂಗಮಕ್ಕಾಗಿ ಮಾಡುವುದರಿಂದ ಅದೇ ಶಿವಪೂಜೆಯಾಗುತ್ತದೆ. ಮಾಡುವ ಕರ್ತವ್ಯ ಪ್ರಜ್ಞೆಯಿಲ್ಲದೇ

ಒಣ ತರ್ಕಕ್ಕೆ ಗಂಟುಬಿದ್ದು ಮಾತಾಡುವುದು 'ಅದೇತರ ಪೂಜೆ?' ಎಂದು ಚಂದಯ್ಯ ಪ್ರಶ್ನಿಸುತ್ತಾರೆ. 'ಚಂದೇಶ್ವರಲಿಂಗಕ್ಕೆ ಒಪ್ಪವಲ್ಲ' ಎನ್ನುವುದಂತೂ ಇಡಿ ವಚನ ಚಳುವಳಿ ಒಪ್ಪಿಕೊಳ್ಳುವುದಿಲ್ಲ ಎಂಬಂತೆ ಧ್ವನಿಪೂರ್ಣವಾಗಿದೆ.

ಕಾಯಕವೆಂದರೆ ಬರೀ ಮಾಡುವ ಕೆಲಸವಲ್ಲ. ಅದೊಂದು ಮನುಷ್ಯ ಬದುಕಿನ ಮೌಲ್ಯ, ನಿಷ್ಠೆ. ಪ್ರತಿಯೊಬ್ಬರೂ ದುಡಿಯಲೇಬೇಕು. "ದಯೆಯು ಧರ್ಮದ ಮೂಲವಾದರೆ ಕಾಯಕವು ಧರ್ಮದ ಆಧಾರ ಸ್ತಂಭವಾಗಿದೆ. ಕಾಯಕವಿಲ್ಲದೆ ಈ ಜಗತ್ತು ನಿಷ್ಕ್ರಿಯವಾಗುವುದು. ಎರೆಹುಳು ಭೂಮಿಯನ್ನು ಹದಗೊಳಿಸುವ ಕಾಯಕ ಮಾಡುತ್ತದೆ. ಜೇನುಹುಳುಗಳು ಪರಾಗಸ್ಪರ್ಶದ ಕಾಯಕ ಮಾಡುವುದರ ಮೂಲಕ ಹೂ, ಹಣ್ಣು ಮತ್ತು ಆಹಾರ ಧಾನ್ಯ ನಮಗೆಲ್ಲ ಸಿಗುವಂತೆ ಮಾಡುತ್ತದೆ. ಮೋಡಗಳು ಮಳೆ ಸುರಿಯುವ ಕಾಯಕ ಮಾಡುತ್ತದೆ. ಭೂಮಿಯು ಬೆಳೆಯುವ ಕಾಯಕ ಮಾಡುತ್ತದೆ. ಸೂರ್ಯ ಬೆಳಕು ಕೊಡುವ ಕಾಯಕ ಮಾಡುತ್ತಾನೆ. ಚಂದ್ರ ಬೆಳದಿಂಗಳು ನೀಡುವ ಕಾಯಕ ಮಾಡುತ್ತಾನೆ. ಹೀಗೆ ಜಗತ್ತಿನಲ್ಲಿ ಪ್ರತಿಯೊಂದು ಜೀವಿ ಮತ್ತು ವಸ್ತುಗಳು ಕೂಡಾ ತಮ್ಮದೇ ಆದ ಕಾಯಕ ಮಾಡುವುದರ ಮೂಲಕ ತಮ್ಮ ಮಹತ್ವವನ್ನು ಸಾರುತ್ತವೆ. ಆದ್ದರಿಂದ ಮಾನವರು ಕೂಡ ಕಾಯಕ ಮಾಡುವುದರ ಮೂಲಕವೇ ಈ ಭೂಮಿಯಲ್ಲಿ ಸಾಧನೆ ಮಾಡಬೇಕು." ಭಕ್ತನಿಂದ ಹಿಡಿದು ದೇವರವರೆಗೂ ಎಲ್ಲರೂ ದುಡಿಯಲೇಬೇಕು. ಜನ್ಮದ ಮುಕ್ತಿಯ ಪಡೆಯಬೇಕು. ಅದಕ್ಕೆಂದೇ ಚಂದಯ್ಯನವರು

ಗುರುವಾದರೂ ಕಾಯಕದಿಂದವೆ ಜೀವನ್ಮುಕ್ತಿ
ಲಿಂಗವಾದಡೂ ಕಾಯಕದಿಂದಲೆ ವೇಶದ ಪಾಶ ಹರಿವುದು
ಗುರುವಾದರೂ ಚರಸೇವೆಯ ಮಾಡಬೇಕು
ಲಿಂಗವಾದರೂ ಚರಸೇವೆಯ ಮಾಡಬೇಕು
ಜಂಗಮವಾದರೂ ಚರಸೇವೆಯ ಮಾಡಬೇಕು
ಚನ್ನಬಸವಣ್ಣಪ್ರಿಯ ಚಂದೇಶ್ವರಲಿಂಗದ ಅರಿವು

(ಸಂಕೀರ್ಣ ವಚನ ಸಂಪುಟ ೨, ವಚನ ಸಂಖ್ಯೆ: ೧೩೧೪)

ಗುರು ಲಿಂಗ ಜಂಗಮವಾದರೂ ತಮ್ಮ ತಮ್ಮ ಪಾಲಿನ ಕಾಯಕ ಮಾಡಿದಾಗಲೇ ಅವರು ಮುಕ್ತಿಗೆ ಅರ್ಹರಾಗುತ್ತಾರೆ. ಅವರೆಲ್ಲ ಬರೀ ಕಾಯಕ ಮಾಡಿದರೆ ಸಾಲದು, ಅವರೂ ಚರ(ಜಂಗಮ) ಸೇವೆ ಮಾಡಲೇಬೇಕು. ತಾವು ವಹಿಸಿಕೊಂಡ ಜವಾಬ್ದಾರಿಯನ್ನು ನಿರ್ವಹಿಸಿದಾಗಲೇ ಅವರಿರುವ ಸ್ಥಾನಕ್ಕೆ ಗೌರವ ಪ್ರಾಪ್ತವಾಗುತ್ತದೆ. 'ಚಂದೇಶ್ವರಲಿಂಗದ ಅರಿವು' ಎನ್ನುವುದು ಅದು ಶಿವಭಕ್ತರಾದ ವರೆಲ್ಲರ ತಿಳುವಳಿಕೆಯ ಬೆಳಕು ಮಾತ್ರವಾಗಿರದೆ ಅರಿವಿರುವವರೆಲ್ಲರಿಗೂ ಅನ್ವಯಿಸುವ ದಾರಿಯಾಗಿದೆ.

ಎಲ್ಲರೂ ಮೈಸವೆಸಿ ದುಡಿಯಬೇಕೆಂಬುದರ ಜೊತೆಗೆ ವಚನಕಾರರನ್ನು ಕಾಡಿದ ವಿವೇಚನೆಗೆ ಎಡೆಮಾಡಿದ ವಿಚಾರವೆಂದರೆ ದುಡಿಮೆಯಿಂದ ಬರುವ ದ್ರವ್ಯದ ಕುರಿತು. ಈ ಕುರಿತು ಚಂದಯ್ಯ ನಿಷ್ಠೆ ಹೀಗಿದೆ.

ಸತ್ಯ ಶುದ್ಧ ಕಾಯಕದಿಂದ ಬಂದ ದ್ರವ್ಯದಲ್ಲಿ
ಚಿತ್ತ ವಿಚ್ಛಂದವಾಗದಿರಬೇಕು
ನೇಮದ ಕೂಲಿಯಂದಿನ ನಿತ್ಯ ನೇಮದಲ್ಲಿ ಸಂದಿಲ್ಲದಿರಬೇಕು
ನೇಮದ ಕೂಲಿಯ ಬಿಟ್ಟು
ಹೇಮದಾಸೆಗೆ ಕಾಮಿಸಿ ದ್ರವ್ಯದ ಹಿಡಿದಡೆ
ತಾ ಮಾಡುವ ಸೇವೆ ನಷ್ಟವಯ್ಯಾ
ನಿನ್ನಾಸೆಯ ವೇಷದ ಪಾಶಕ್ಕೆ ನೀನೆ ಹೋಗು
ನನಗೆ ನಮ್ಮ ಜಂಗಮದ ಪ್ರಸಾದದಾಗೆ
ಚಂದೇಶ್ವರಲಿಂಗಕ್ಕೆ ಪ್ರಾಣವಯ್ಯಾ

(ಸಂಕೀರ್ಣ ವಚನ ಸಂಪುಟ ೨, ವಚನ ಸಂಖ್ಯೆ: ೧೩೩೭)

ಮಾಡುವ ಕಾಯಕ ಯಾವುದೇ ಆಗಿರಲಿ ಅದು ಸತ್ಯಶುದ್ಧವಾಗಿರಬೇಕು. ಆ ಕಾಯಕ ಎನ್ನುವಂಥದ್ದು ಅಪಮಾರ್ಗದ್ದಿರಬಾರದು. ಸಮಾಜದ ಸ್ವಾಸ್ಥ್ಯ ಕೆಡಿಸುವಂತಿರಬಾರದು, ನೇಮದ ಕೂಲಿ ಎಂದರೆ ತಾನು ನಿಯಮಿತವಾಗಿ ಮಾಡುವಂತಹ ಕಾಯಕ. ಅದು ಹಿಡಿದ ನೇಮ(ವ್ರತ)ದ ಹಾಗಿರಬೇಕು. ಅಂದಂದು ದುಡಿದು ತರುವ ಕೂಲಿಯ ದ್ರವ್ಯವನ್ನು ನಿತ್ಯ ನೇಮದಂತೆ ಅಂದಂದಿನ ಜಂಗಮ ದಾಸೋಹಕ್ಕೆ ಬಳಸಬೇಕು. ನಿತ್ಯದ ಕಾಯಕ ಮತ್ತು ಗಳಿಕೆ ಬಿಟ್ಟು ಮತ್ತಷ್ಟು ಸಂಪತ್ತು ಗಳಿಸುವ ದುರಾಸೆಗೆ ಒಳಗಾಗಿ ದುರ್ಮಾರ್ಗದಿಂದ ಬೇರೆ ದ್ರವ್ಯವ ತಂದರೆ ತನ್ನ ಕಾಯಕಕ್ಕೆ ದ್ರೋಹ ಬಗೆದಂತೆ. 'ನನಗೆ ನಮ್ಮ ಜಂಗಮದ ಪ್ರಸಾದದಾಗೆ ಚಂದೇಶ್ವರ ಲಿಂಗಕ್ಕೆ ಪ್ರಾಣವಯ್ಯಾ' ಎಂದು ನಿತ್ಯದ ತಮ್ಮ ದುಡಿಮೆಯಿಂದ ಬರುವ ದ್ರವ್ಯವನ್ನು ನಿತ್ಯದ ಜಂಗಮ ದಾಸೋಹಕ್ಕೆ ಬಳಸುವ ರೀತಿಯನ್ನು ಅನುಸರಿಸಿದ್ದನು.

ಸಾಮಾಜಿಕ, ಆರ್ಥಿಕ ಬದಲಾವಣೆಯಲ್ಲಿ ಧಾರ್ಮಿಕದ ಆಧ್ಯಾತ್ಮಿಕ ಮಾರ್ಗವನ್ನಾಗಿ ತ್ರಿವಿಧ ದಾಸೋಹವನ್ನು ಅಳವಡಿಸಿಕೊಂಡಿದ್ದರು. ತ್ರಿವಿಧದ ಅಂತರಾತ್ಮ ತಿಳಿದಿದ್ದ ನುಲಿಯ ಚಂದಯ್ಯ ಜಂಗಮ ದಾಸೋಹದಲ್ಲಿ ಗುರು, ಲಿಂಗವನ್ನು ಅಡಕಗೊಳಿಸಿ ಕಾಯಕವನ್ನು ಅದರ ಉದ್ದೇಶಕ್ಕಾಗಿ ನೇಮವನ್ನಾಗಿ ಮಾಡಿಕೊಂಡಿದ್ದನು ಮತ್ತು ಅದನ್ನು ಜೀವನದ ನಿಯಮವನ್ನಾಗಿ ಸ್ವೀಕರಿಸಿ ಪ್ರತಿಪಾದಿಸಿರುವುದನ್ನು ಕಾಣುತ್ತೇವೆ.

ಕಂದಿಸಿ ಕುಂದಿಸಿ ಬಂಧಿಸಿ ಕಂಡವರ ಬೇಡಿತಂದು
ಜಂಗಮಕ್ಕೆ ಮಾಡಿದೆನೆಂಬ ದಂದುಗದೋಗರ ಲಿಂಗಕ್ಕೆ ನೈವೇದ್ಯ ಸಲ್ಲ
ತನುಕರಗಿ ಮನ ಬಳಲಿ ಬಂದ ಚರದ ಅನುವರಿತು
ಸಂದಿಲ್ಲದೆ ಸಂಶಯವಿಲ್ಲದೆ ಜಂಗಮಲಿಂಗಕ್ಕೆ
ದಾಸೋಹದ ಮಾಡುವುದೇ ಮಾಟ
ಕಾಶಿಯ ಕಾಯಿ ಕಾಡಿನ ಸೊಪ್ಪಾಯಿತ್ತಾದಡೂ
ಕಾಯಕದಿಂದ ಬಂದುದು ಲಿಂಗಾರ್ಪಿತ
ಚನ್ನಬಸವಣ್ಣಪ್ರಿಯ ಚಂದೇಶ್ವರಲಿಂಗಕ್ಕೆ ನೈವೇದ್ಯ ಸಂದಿತ್ತು

(ಸಂಕೀರ್ಣ ವಚನ ಸಂಪುಟ ೨. ವಚನ ಸಂಖ್ಯೆ: ೧೩೦೨)

ಗುರು ಲಿಂಗ ಜಂಗಮ ಸೇವೆಗಳು ಉಪಚಾರದ ಆಚರಣೆಗಳಾಗುತ್ತಿದ್ದವು. ಜಂಗಮ ದಾಸೋಹವನ್ನು ತನ್ನ ಪರಮ ಧ್ಯೇಯವೆಂದು ಸ್ವೀಕರಿಸಿದ್ದ ಚಂದಯ್ಯನವರಿಗೆ ಭಾವ ಶುದ್ಧಿ ಇಲ್ಲದ ಕಾಟಾಚಾರದ ಈ ಆಚರಣೆಯನ್ನು ಸಹಿಸಿಕೊಳ್ಳುವುದಾಗಿರಲಿಲ್ಲ. ತಾನೇ ಸ್ವಂತಃ ದುಡಿದು ಸಂಪಾದಿಸಿ ತಂದ ದ್ರವ್ಯದಿಂದ ಭಾವಶುದ್ಧಿಯಾಗಿ ಮಾಡಬೇಕಾದ ಜಂಗಮ ದಾಸೋಹವನ್ನು ಕಪಟತನದಲ್ಲಿ ವಂಚಿಸಿ ಕಂಡವರ ಬೇಡಿ ತಂದು 'ನಾನು ಜಂಗಮ ಸೇವೆ ಮಾಡುತ್ತಿದ್ದೇನೆ' ಎನ್ನುವ ಡಾಂಬಿಕರು ತಂದು ನೀಡುವ ಪ್ರಸಾದ ಅದು 'ದಂದುಗದೋಗರ' ದಾಸೋಹದ ಪ್ರಸಾದವು ಶ್ರೀಮಂತಿಕೆಯಿಂದ ಕೂಡಿದವುಗಳಾಗಿರಬೇಕಿಲ್ಲ. ಕಾಶಿಯ ಕಾಯಿ ಕಾಡಿನ ಸೊಪ್ಪಾದರೂ ನಡೆಯುತ್ತದೆ. ಆದರೆ ಅದನ್ನು ಅರ್ಪಿಸುವವರು ತನುವನ್ನು ಕರಗಿಸಿ ಮನವನ್ನು ಬಳಲಿಸಿ ದುಡಿದು ತಂದದ್ದಾಗಿರಬೇಕು. ಅದನ್ನು ಜಂಗಮರಿಗೆ ಅರ್ಪಿಸುವಲ್ಲಿ ಮನಪೂರ್ವಕವಾಗಿ ಸಂತೋಷದಿಂದ ಅರ್ಪಿಸುವಂತಾಗಬೇಕು. ಜಂಗಮ ದಾಸೋಹ ಮಾಡುವವರಿಗೆ ಕಾಯಕದ ಮಹತ್ವ ಗೊತ್ತಿರಬೇಕು. ಕಾಯಕ ಸೇವೆಗಳು ತನ್ನಷ್ಟಕ್ಕೆ ತಾನೇ ಶ್ರೇಷ್ಠ ಎನಿಸಿಕೊಳ್ಳುತ್ತದೆ - ಎನ್ನುವ ಆಧ್ಯಾತ್ಮ ನೆಲೆಯ ಭಾವವಿರಬೇಕು. ಹೀಗೆ ಕಾಯಕದಿಂದ ದಾಸೋಹ ಮಾಡುವವರಿಗೆ ಯಾವ ಪೂಜೆಯ ಹಂಗು ಬೇಕಿಲ್ಲ ಎಂಬುದು ಚಂದಯ್ಯನ ತಾತ್ವಿಕತೆಯಾಗಿದೆ.

ಚಂದಯ್ಯನ ವಚನಗಳಲ್ಲಿ ಕಾಯಕ ಮತ್ತು ದಾಸೋಹದ ಕುರಿತ ವಿಚಾರ ಬಹಳಷ್ಟು ಬರುವುವು. ಈತನ ಆರು ವಚನಗಳಲ್ಲಿ ಕಾಯಕದ ಪರಿಕಲ್ಪನೆಯು ತುಂಬಿದೆ. ಇನ್ನುಳಿದ ವಚನಗಳಲ್ಲಿ ದಾಸೋಹ, ಜಂಗಮಸೇವೆ, ಲಿಂಗ ತತ್ವ, ಸಾಮಾಜಿಕತೆ ವಿಷಯವನ್ನು ಪ್ರತಿಪಾದಿಸುತ್ತವೆ. ಈತನ ವಚನ ಓದಿಗೆ ಸುಲಭವಾಗಿ ದಕ್ಕುವಂತಿದ್ದು, ಆಧ್ಯಾತ್ಮದ ಅನುಸಂದಾನದ ಕುರುಹನ್ನು ನೀಡುತ್ತವೆ. ಅಂತ ಜಟಿಲವಲ್ಲದ ಸರಳವಾದ ಭಾಷೆಯ ಬಳಕೆಯನ್ನು ಬಳಸಿಕೊಂಡು ವೃತ್ತಿಯ ಗೌರವವನ್ನು ಪ್ರತಿಪಾದಿಸುವ ಪ್ರಯತ್ನ ನಡೆದಿರುವುದನ್ನು ಮತ್ತು ಆತನ ಕಾಯಕ ನಿಷ್ಠೆಯನ್ನು ಚಂದಯ್ಯ ವಚನಗಳಲ್ಲಿ ಗುರುತಿಸುತ್ತೇವೆ.

ಹೆಂಡದ ಮಾರಯ್ಯ.

ವೃತ್ತಿ ಅನುಭಾವವಾಗಿ ರೂಪ ಪಡೆದದ್ದು ವಚನಕಾರರಲ್ಲಿ. ಅವರ ವಚನಗಳಲ್ಲಿ ಲೋಕದ ಅನುಭವವು ಕೇವಲ ಅನುಭವವಾಗಿ ಮೂಡುವುದಿಲ್ಲ. ಅದು ಹಲವು ಅರವುಗಳನ್ನು ಪಡೆದುಕೊಂಡಿರುತ್ತದೆ. ವಚನಕಾರರ ಮುಂದೆ ಹಲವಾರು ಸವಾಲುಗಳು ಸಮಸ್ಯೆಗಳಿದ್ದುದು ಅದಕ್ಕೆ ಕಾರಣ. ಅವರು ಬದುಕಿದ್ದ ಕಾಲಘಟ್ಟವನ್ನು ಅವಲೋಕಿಸಿದರೆ ಅದು ಸ್ಪಷ್ಟವಾಗುತ್ತದೆ. ಅಂದಿನ ಸಮಾಜದಲ್ಲಿ ನೆಲೆ ನಿಂತಿದ್ದ ಅಸಮಾನತೆ, ಜಾತಿ ಸಂಘರ್ಷ, ವೈದಿಕ ಶಾಹಿತ್ವ, ಪ್ರಭುತ್ವದ ಕಠೋರ ನಿಲುವು. ಮೂಢ ಸಂಪ್ರದಾಯ, ಅನೈತಿಕತೆ ಇವರನ್ನು ಹೆಚ್ಚು ವಿಚಾರಕ್ಕೆ ಹಚ್ಚಿದ್ದು ನಿಜ. ಇವುಗಳಿಗೆ ಪರಿಹಾರವನ್ನು ಕಂಡುಕೊಳ್ಳಲು ಹೋರಾಟವನ್ನು ಮಾಡಬೇಕಾದುದು ಅವಶ್ಯವಾಗಿತ್ತು. ಅದಕ್ಕೆ ಬಸವಣ್ಣನ ನೇತೃತ್ವದ ಶರಣ ಸಮುದಾಯ ಅಣಿಗೊಂಡಿತ್ತು. ಇದರ ಫಲವಾಗಿ ಅನೇಕ ಜಾತಿ ಮೂಲದಿಂದ ಮೇಲ್ವರ್ಗ-ಕೆಳವರ್ಗದ ಜನರು, ಅದರಲ್ಲೂ ಸೂಕ್ಷ್ಮ-ಸಂವೇದನಾ ಶೀಲ ಮನಸ್ಸಿನವರು ಬಂದು ಸೇರಿ ದೊಡ್ಡ ಸಮೂಹವೊಂದನ್ನು ಕಟ್ಟಿಕೊಂಡರು. ಇವರು ಕೇವಲ ಸಮಾಜಿಕ, ಧಾರ್ಮಿಕವಾಗಿಯಷ್ಟೆ ಮಾತನಾಡಿದವರಲ್ಲ, ಬರೆದವರಲ್ಲ. ತಮ್ಮತನದ

ಹುಡುಕಾಟ ನಡೆಸಿ, ಅನುಭಾವಿಕ ನೆಲೆಯನ್ನು ಕಂಡುಕೊಂಡವರಾಗಿದ್ದಾರೆ. ಸಮಾಜದ ಅಗಣಿತ, ಗಣೀತ ವೃತ್ತಿ, ಜಾತಿಗಳಿಂದ ಬಂದು ವಚನಗಳನ್ನು ಬರೆದು, ಭಕ್ತಿಯನ್ನು, ಧರ್ಮವನ್ನು ಪ್ರಸಾರ ಮಾಡುವ ಕಾರ್ಯವನ್ನು ಮಾಡಿದರು. ಬರೀ ಇದಷ್ಟೇ ಉದ್ದೇಶವಲ್ಲದೇ ವಚನಗಳ ಮೂಲಕ ಸಮಾಜದ ಮೇಲ್ವರ್ಗದವರ ನೋಟವನ್ನು ಬದಲಾಯಿಸುವ ಪ್ರಯತ್ನ ಮಾಡಿದರು. ಸಮಾಜದ ಒಳಿತಿಗಾಗಿ ದುಡಿಯುತ್ತಿದ್ದ ವೃತ್ತಿನಿರತರನ್ನು ಹೀನಾಯವಾಗಿ ಕಾಣುತ್ತಿದ್ದವರ ವಿರುದ್ಧ ಪ್ರತಿಭಟನೆಯ ಅಸ್ತ್ರವಾಗಿ ತಮ್ಮ ವೃತ್ತಿಯನ್ನೆ ಮಾಡಿಕೊಂಡು ವಚನಗಳನ್ನು ಅಭಿವ್ಯಕ್ತಿಸುವ ಮೂಲಕ ಶ್ರಮ ಗೌರವವನ್ನು, ವೃತ್ತಿ ನಿಷ್ಠೆಯನ್ನು ಪ್ರತಿಪಾದಿಸಿದರು. ಅನೇಕ ವೃತ್ತಿನಿರತ ವಚನಕಾರರಂತೆ ತನ್ನ ವೃತ್ತಿಯ ಪದಗಳ, ಪರಿಭಾಷೆಯ ಮೂಲಕ ತಾನು ಕಂಡು ಕೊಂಡದ್ದನ್ನು, ತನ್ನ ತಿಳುವಳಿಕೆಯನ್ನು ಹೆಂಡದ ಮಾರಯ್ಯ ತನ್ನ ವಚನಗಳಲ್ಲಿ ಕಟ್ಟಿಕೊಟ್ಟಿದ್ದಾನೆ. 'ಧರ್ಮೇಶ್ವರ ಲಿಂಗ' ಎಂಬ ಅಂಕಿತದಲ್ಲಿ ರಚನೆಗೊಂಡಿರುವ ವಚನಗಳು ಉಬಲಬ್ದವಿದ್ದು, ಅವುಗಳ ಅಭಿವ್ಯಕ್ತಿ ಕ್ರಮವನ್ನು ಅದರಲ್ಲಿ ಬಳಕೆಗೊಂಡಿರುವ ಪರಿಭಾಷೆಯನ್ನು ಗಮನಿಸಿ ಅವು ಮಾರಯ್ಯನವು ಎಂದು ಗುರುತಿಸಿ, ಆತನ ವೃತ್ತಿ ಹೆಂಡ ಮಾರುವುದು ಎಂದು ತಿಳಿಯಲಾಗಿದೆ. ಈತನ ಹನ್ನೆರಡು ವಚನಗಳಲ್ಲಿ ಸಾಮಾಜಿಕ ವಿಡಂಬನೆ, ಪರಂಪರೆಯ ವಿರುದ್ಧ ಪ್ರತಿಭಟನೆ, ಅರಿವಿನ ಸಾಧನೆ, ಅಂತರಂಗದ ಜ್ಞಾನದ ಹುಡುಕಾಟ, ನೀತಿಭೋದನೆ, ಆಧ್ಯಾತ್ಮಿಕತೆ ಇರುವುದನ್ನು ನೋಡುತ್ತೇವೆ. ತನ್ನ ವೃತ್ತಿಯಾದ ಹೆಂಡ ಮಾರುವ ಚಿತ್ರಣವನ್ನು ರೂಪಕವಾಗಿ ಬಳಸಿ ಅಭಿವ್ಯಕ್ತ ಗೊಂಡಿರುವ ವಚನ ಹೀಗಿದೆ.

ಘಟಕುಂಭದಲ್ಲಿ ಜೀವನೆಂಬ ಜೇಗಟೆ ಬಂದಿತ್ತು.
ದೃಷ್ಟವ ಇಷ್ಟದಲ್ಲಿ ಕುಟ್ಟಲಾಗಿ, ಮೊಳೆ ಮುರಿದು ಒಡಲೊಡೆಯಿತ್ತು.
ಅಂಗದ ಅಗ್ನಿಯಲ್ಲಿ ಬೇಯಿಸಿ, ಮೂರು ಸಂಗವಡೆದ ಮಡಕೆಯ ಓಡಿನಲ್ಲಿ
ಶ್ರುತದೃಷ್ಟ ಅನುಮಾನವೆಂಬ ಕೋಲಿನಲ್ಲಿ ಕಡೆಯಲಾಗಿ,
ರಸ ಒಳಗಾಗಿ ಹಿಪ್ಪಿಹೊರಗಾಯಿತ್ತು. ಆ ಸುಧೆಯ ತುಂಬಿ ತಂದೆ,
ಒಮ್ಮೆಗೆ ಕೊಂಡಲ್ಲಿ ಬ್ರಹ್ಮ ಕಲ್ಪವ ಕೆಡಿಸಿತ್ತು.
ಮತ್ತೊಮ್ಮೆ ಕೊಂಡಲ್ಲಿ ವಿಷ್ಣುವಿನ ಗೊತ್ತ ಕಿತ್ತಿತ್ತು.
ಮೂರೆಂದು ಮೊದಲ ಹಾಗವ ಮೀರಿದ ರುದ್ರನ ಅಗಡವ ಕಿತ್ತಿತ್ತು.
ಅರಿದುಕೊಂಡಲ್ಲಿ ಸುಧೆ, ಮರೆದು ಕೊಂಡಲ್ಲಿ ಸುರೆಯಾಗಿ,
ಅರುಹಿರಿಯರ ಮರವೆಯ ಮಾಡಿತ್ತು.
ನಾ ತಂದ ಬೆವಹಾರವ ಅಹವರೆಲ್ಲರೂ ಕೊಳ್ಳಿ,
ಧರ್ಮೇಶ್ವರಲಿಂಗವನರಿಯ ಬಲ್ಲಡೆ.

(ಸಂಕೀರ್ಣ ವಚನ ಸಂಪುಟ ೪, ವಚನ ಸಂಖ್ಯೆ: ೧೯೯೨)

ಮಾರಯ್ಯನ ಈ ವಚನದಲ್ಲಿ ತನ್ನ ಹೆಂಡದ ವೃತ್ತಿಯ ಚಿತ್ರಣವನ್ನು ನೀಡುತ್ತಾನೆ. ಆತನ ವಚನಗಳಲ್ಲಿ ಪರಿಣಾಮಕಾರಿಯಾದ ವಚನವಿದು. ವಚನದ ಮೊದಲ ಐದು ಸಾಲುಗಳಲ್ಲಿ ಹೆಂಡ ತಯಾರಿಕೆಯ ವಿಧಾನವನ್ನು ಕಟ್ಟಿಕೊಟ್ಟಿದ್ದಾನೆ. ಮುಂದಿನ ಸಾಲುಗಳಲ್ಲಿ 'ಸುರೆ', 'ಸುಧೆ'ಯಾಗಿ ಬದಲಾಗುವುದನ್ನು ನಿರೂಪಿಸುತ್ತದೆ. ಇಲ್ಲಿ 'ಸುರೆ' ಮತ್ತು 'ಸುಧೆ'ಗೆ ವ್ಯತ್ಯಾಸವಿರುವುದನ್ನು

ತಿಳಿಸುತ್ತದೆ. ಮಾನವನು ತನ್ನ ಜೀವನದಲ್ಲಿ 'ಭವಿ'ಯಾಗಿ ಸಂಸಾರ ಮಧ್ಯದೊಳಗೆ ಮುಳಿಗಿರುವುದನ್ನು ಸುರೆಗೆ ಹೋಲಿಸಲಾಗಿದೆ. ಜೀವನದ ನಶ್ವರತೆಯನ್ನು ಅರಿತು ನಿಜತತ್ವವನ್ನು ಅವಲಂಬಿಸಿ ಸಾಧನೆ ಮಾಡುವುದನ್ನು 'ಸುಧೆ'ಗೆ ಹೋಲಿಸಲಾಗಿದೆ. ಅರಿವು ಬಯಸಿ ಬರುವುವರೆಲ್ಲರಿಗೂ ವಚನಕಾರರ ಸಮೂಹದಲ್ಲಿ ಅವಕಾಶ ಉಂಟು. ಅರಿವಿನ ಸಾಧನೆಗೆ ದಾರಿಯೊಂದನ್ನು ತೋರಿಕೊಡುತ್ತಿದ್ದಾನೆ. ಮಾನವ ಹೆಣ್ಣು, ಹೊನ್ನು, ಮಣ್ಣು ಎಂಬ ಮೂರು ಸಂಗದಲ್ಲಿ ಬಳಲುವ ಸ್ಥಿತಿಯನ್ನು ವಿಷಾದದಿಂದಲೇ ಅಭಿವ್ಯಕ್ತಿಸುತ್ತಾನೆ. ತಾನು ಹೇಳಬೇಕಾಗಿರುವುದನ್ನು ತನ್ನ ವೃತ್ತಿ ಉಪಕರಣಗಳ ಮೂಲಕ ಪ್ರತಿಪಾದನೆ ಮಾಡುತ್ತಿರುವುದನ್ನು ನೋಡುತ್ತೇವೆ. ಇಲ್ಲಿ ಹೆಂಡ ಮತ್ತು ಅದರ ತಯಾರಿಕೆಯ ವಿಧಾನ ರೂಪಕವಾಗಿ ಮೂಡಿದೆ. ಹದವರಿತ ಭಾಷೆಯ ಬಳಕೆ ಒಂದು ತೀವ್ರತೆಯನ್ನು, ಆತ್ಮೀಯತೆಯ ಬಂದವನ್ನು ಕಟ್ಟಿಕೊಡುತ್ತದೆ. ತನ್ನ ತಿಳುವಳಿಕೆಯನ್ನು ಅಥವಾ ತತ್ವವನ್ನು ಬೋಧಿಸುವ ಪ್ರಯತ್ನ ನಡೆದಿರುವುದನ್ನು ಈ ವಚನ ಓದಿದಾಗ ಸ್ಪಷ್ಟವಾಗುತ್ತದೆ. ವಚನದ ಕೊನೆಯ ಸಾಲುಗಳಿಗೆ ಬಂದಾಗ ಘೋಷಿಸುವುದನ್ನು ಕಾಣಬಹುದು. 'ಬ್ರಹ್ಮ–ಕಲ್ಪವ ಕೆಡಿಸಿತ್ತು', 'ವಿಷ್ಣುವಿನ ಗೊತ್ತ ಕಿತ್ತಿತ್ತು', 'ರುದ್ರನ ಅಗಡವ ಕಿತ್ತಿತ್ತು' ಈ ವಾಕ್ಯಗಳಂತು ವಚನಕ್ಕೆ ಗಟ್ಟಿತನವನ್ನು ಕಟ್ಟಿಕೊಟ್ಟವೆ. ಇಲ್ಲಿ ವಿಡಂಬನೆ, ವಿರೋದವಿರುವುದನ್ನು ಕಾಣುತ್ತೇವೆ. ಮತ್ತು ತನ್ನ ಶ್ರಮದ ದೇವರಾದ ಧರ್ಮೇಶ್ವರಲಿಂಗದ ನಿಷ್ಠೆ, ವೃತ್ತಿ ಪ್ರಾಮಾಣಿಕತೆಯನ್ನು ಪ್ರತಿಪಾದಿಸಿದಂತಿದೆ.

ಮಣ್ಣೆಂಬ ಘಟದ ಮಧ್ಯದಲ್ಲಿ ಹೊನ್ನೆಂಬ ಸುರೆ ಹುಟ್ಟಿತ್ತು.
ಹೆಣ್ಣೆಂಬ ಬಟ್ಟಲಲ್ಲಿ ಅಂತು ಈಂಟಲಾಗಿ ಲಹರಿ ತಲೆಗೇರಿತು.
ಈ ಉನ್ಮತ್ತದಲ್ಲಿ ಮಗ್ನರಾದವರೆಲ್ಲರೂ ಅರುಹಿರಿಯರೆಂಪ್ಪರೋ?
ಭಕ್ತಿ ವಿರಕ್ತಿಯೆಂಬುದು ಇತ್ತಲೆ ಉಳಿಯಿತ್ತು.
ಧರ್ಮೇಶ್ವರಲಿಂಗದತ್ತ ಮುಟ್ಟಿದಡಂತಿಲ್ಲ.

(ಸಂಕೀರ್ಣ ವಚನ ಸಂಪುಟ ೪, ವಚನ ಸಂಖ್ಯೆ: ೧೧೯೮)

ವಚನ ಸಾಹಿತ್ಯದಲ್ಲಿ ಪ್ರಮುಖವಾಗಿ ಕಾಣುವ ತತ್ವಗಳಲ್ಲಿ ನಡೆ–ನುಡಿ ಒಂದು. ವಚನಕಾರರಿಗೆ ಕಾಡಿದ ಸಂಗತಿ ಇದು. ಧರ್ಮ, ಆಧ್ಯಾತ್ಮದಲ್ಲಿ ನಂಬಿಕೆಯಿಂದ ಸದಾಚಾರಿಗಳಾಗಿ ಇರುವವರು ತಮ್ಮದೇ ಆದ ವಿಶೇಷತೆಯನ್ನು ಹೊಂದಿರುತ್ತಾರೆ. ಸರಳವಾದ ಸಂಕೇತಗಳನ್ನು ಅನುಸರಿಸಿಕೊಂಡು ಲೋಕದಲ್ಲಿ ಬದುಕಲು ಪ್ರಯತ್ನಿಸುತ್ತಾರೆ. ಅವರ ನಡೆನುಡಿ ಏಕವಾಗಿರುತ್ತದೆ. ಇಂಥವರನ್ನು ನಾಚಿಸುವಂತ ವೇಷಧಾರಿಗಳು ಹುಟ್ಟಿಕೊಳ್ಳುತ್ತಾರೆ. ಅವರು ಐಹಿಕ ಸುಖದ ಮತ್ತಿನಲ್ಲಿ ತೇಲಾಡುತ್ತಿರುತ್ತಾರೆ. ನುಡಿಯಲ್ಲಿ ಇದ್ದು ನಡೆಯಲ್ಲಿ ದಾರಿ ತಪ್ಪಿಬಿಟ್ಟಿರುತ್ತಾರೆ. ಇಂತವರಿಗೆ ಭಕ್ತಿ, ವಿರಕ್ತಿಯೆಂಬುದು ಲಭಿಸದ ದೂರದ ದಾರಿಯಾಗಿರುತ್ತದೆ. ಇಂತ ಡಂಬಾಚಾರಿಗಳನ್ನು ಮಾರಯ್ಯ ಪ್ರಶ್ನಿಸುತ್ತಾನೆ. ಅಂತವರು ಹೇಗೆ ಹಿರಿಯರು ಎಂದು ಒಪ್ಪಿಕೊಳ್ಳಬೇಕು? ಎಂದು ಕೇಳುತ್ತಾನೆ. ಮಣ್ಣು, ಹೊನ್ನನ್ನು ಸುರೆಗೆ ಹೋಲಿಸಿ, ಅಂತ ಸುರೆಯನ್ನು ಕುಡಿಯುವುದು ಹೆಣ್ಣೆಂಬ ಬಟ್ಟಲಲ್ಲಿ. ಮೋಹದ ಪಾನಮತ್ತರಿಗೆ ಭಕ್ತಿ, ಆಧ್ಯಾತ್ಮ, ತತ್ವ, ಸಿದ್ಧಾಂತ ಎಲ್ಲಿಯದೋ? ಅಂತವರನ್ನು ನಶೆಗೆ ಒಳಗಾದವರನ್ನು ಒಪ್ಪಿಕೊಳ್ಳುವುದಿಲ್ಲ ಎಂಬ ದಿಟ್ಟ ಉತ್ತರ ವಚನದ ಮೂರನೇ ಸಾಲಿನಲ್ಲಿರುವ ಪ್ರಶ್ನಾರ್ಥಕ ವಾಕ್ಯದ ಮೂಲಕ ಹೇಳುತ್ತಾನೆ.

ಹುಂಜಿನ ಕಾಳಗದ ದಾಸಯ್ಯ

ವೃತ್ತಿನಿರತ ವಚನಕಾರರು ತಮ್ಮ ಕುಲಮೂಲದ ಕಸುಬನ್ನು ಮಾಡುವಂತವರು. ಅವರಲ್ಲಿ ಅನೇಕರು ತಮ್ಮ ಇಷ್ಟದ ವೃತ್ತಿಗಳನ್ನು ಅನುಸರಿಸಿದವರು ಇದ್ದಾರೆ. ಇನ್ನು ಕೆಲವರು ಸಮಾಜ ಸಮ್ಮತವಲ್ಲದ ವೃತ್ತಿಗಳನ್ನು ಅವಲಂಬಿಸಿದವರು ಇದ್ದಾರೆ. ಅವರಲ್ಲಿ ಕನ್ನದ ಮಾರಿತಂದೆ, ಹುಂಜಿನ ಕಾಳಗದ ದಾಸಯ್ಯ ಮುಂತಾದವರು. ಇವರ ವೃತ್ತಿಯ ಬಗ್ಗೆ ಅನುಮಾನವೊಂದು ಬರುತ್ತದೆ. ಕಳ್ಳತನ ಮಾಡುವುದು, ಜೂಜು ಆಡುವುದು ವೃತ್ತಿ ಹೇಗಾಗುತ್ತದೆ? ಅದೊಂದು ಪ್ರವೃತ್ತಿಯಾಗಿರಬಹುದೆ? ಇರಲಿ. ಹನ್ನೆರಡನೇ ಶತಮಾನದ ವಚನಕಾರರ ಆಂದೋಲನದ ವ್ಯಾಪ್ತಿಗೆ ಬಂದು ತಮ್ಮ ವೃತ್ತಿಗಳನ್ನು ಪರಿಶೀಲಿಸಿಕೊಂಡು, ಬದಲಾವಣೆ ಮಾಡಿಕೊಂಡಿರುವ ಸಾಧ್ಯತೆ ಇದೆ. ಆದರೂ ಅಂತವರು ರಚಿಸಿದ ವಚನಗಳಲ್ಲಿ ಅವರು ಮಾಡುತ್ತಿದ್ದ ವೃತ್ತಿ ಪರಿಚಯದ ಜತೆಗೆ ಅದನ್ನು ಪರಿವರ್ತಿಸಿರುವ ಬಗೆಯನ್ನು ತಿಳಿಯಬಹುದು. ವೃತ್ತಿನಿರತ ವಚನಕಾರರಿಗೆ ವೃತ್ತಿ ಅರಿವಿನ ದಾರಿಯಾಗಿ ಕಾಣುತ್ತದೆ. ಹಾಗಾಗಿ ಅರಿವಿನ ಸಾಧಕರಾದವರು ತಮ್ಮ ವೃತ್ತಿಯ ಸ್ವರೂಪವನ್ನು, ತತ್ವವನ್ನು, ಶರಣರ ನಿಷ್ಠಾಪೂರ್ಣ ಕಾಯಕತತ್ವದಡಿಯಲ್ಲಿ ಕಟ್ಟಿಕೊಂಡು ಅದರ ಮೂಲಕ ಸತ್ಯದ ಶೋಧ ಮಾಡುತ್ತಾರೆ. ಶರಣರಾದ ನಂತರ ವೃತ್ತಿಯ ತಾತ್ವಿಕ ನೆಲೆಯು ಬದಲಾವಣೆಯನ್ನು ಪಡೆದುಕೊಂಡಿದೆ. ಇಲ್ಲಿ ಸಮಾಜಕ್ಕೆ ಮಾರಕವಾಗುವಂತಹ ಕೆಲಸವನ್ನು ನಿರಾಕರಿಸುವುದನ್ನು ಕಾಣುತ್ತೇವೆ. ಮತ್ತು ಆ ವೃತ್ತಿಯ ಅನುಭವಗಳನ್ನು ಬದಲಾಯಿಸಿ ಅನುಭಾವ ವನ್ನಾಗಿ ಮಾಡಿಕೊಂಡು ಆಧ್ಯಾತ್ಮದ ವಿಷಯವನ್ನು ಮಂಡನೆ ಮಾಡುತ್ತಾರೆ.

ಹುಂಜಿನ ಕಾಳಗ ಎನ್ನುವುದು ಇಂದು ಜೂಜು ಎಂದು ಪರಿಗಣಿತವಾಗಿದೆ. ಆದರೆ, ಹಿಂದೆ ಜನಪದರ ಮನೋರಂಜನೆಯ ಕ್ರೀಡೆಯಾಗಿತ್ತು. ಗೂಳಿಗಳ ಹೋರಾಟ, ಟಗರಿನ ಕಾಳಗ ಮುಂತಾದುವುಗಳಲ್ಲಿ ಸಮಾಜ ಸಮ್ಮತಿಯಿತ್ತ ಮನೋರಂಜನೆಯ ಆಟಗಳು. ಇದನ್ನೆ ವೃತ್ತಿಯಾಗಿಸಿಕೊಂಡು ಅದರ ಮೂಲಕ ಜೀವನ ಸಾಗಿಸುವುದು ಕೆಲವರ ಬದುಕು. ಇಂತಹ ವೃತ್ತಿಯಲ್ಲಿ ತೊಡಗಿಕೊಂಡು ಅನುಭವ ಮಂಟಪಕ್ಕೆ ಬಂದವನು ದಾಸಯ್ಯ. ಈತ ವಚನ ರಚನೆಯಲ್ಲಿ ತೊಡಗಿದ್ದು, ಈತನ ಒಂದೆ ಒಂದು ವಚನ ಉಪಲಬ್ಧವಿದೆ. ಮೂರು ಸಾಲಿನಲ್ಲಿ ಸರಳವಾಗಿಯೆ ರಚನೆಗೊಂಡಿದೆ. ಮತ್ತು ವ್ರತ ಆಚರಣೆಯ ಪ್ರತಿಪಾದನೆಯನ್ನೆ ವಸ್ತುವಾಗಿಸಿಕೊಂಡು ಬರೆದುದಾಗಿದೆ. ಬಹುಶಃ ಮಹಿಳಾ ವಚನಕಾರರ ವ್ರತದ ಬಗ್ಗೆ ವಚನಗಳನ್ನು ಬರೆದಿದ್ದಾರೆ. ಅಂತಹ ವಚನಕಾರರ ಪ್ರೇರಣೆ ದಾಸಯ್ಯನ ವಚನದಲ್ಲಿ ಗುರುತಿಸಬಹುದು.

> ಹುಂಜ ಸೋತಡೆ ಹಿಡಿವೆ.
> ವ್ರತ ಹೋದವರ ನೋಡೆನು,
> ಚಂದ್ರಚೂಡೇಶ್ವರ ಲಿಂಗವೆ.
>
> (ಸಂಕೀರ್ಣ ವಚನ ಸಂಪುಟ ೪, ವಚನ ಸಂಖ್ಯೆ: ೧೧೮೮)

ದಾಸಯ್ಯ ತನ್ನ ತಿಳುವಳಿಕೆಯನ್ನು ಎರಡೇ ಸಾಲುಗಳಲ್ಲಿ ಸರಳವಾಗಿಯೇ ಹೇಳಿರುವುದನ್ನು ನೋಡುತ್ತೇವೆ. ವ್ರತನಿಷ್ಟೆ, ಅದರ ಪರಿಪಾಲನೆಯನ್ನು ಒತ್ತಿ ಹೇಳುವ ಪ್ರಯತ್ನ ಇಲ್ಲಿದೆ.

ಹೊಡೆಹುಲ್ಲ ಬಂಕಣ್ಣ

ವಚನಕಾರರು ಇರುವ ನೆಲೆಗಿಂತ ಇರಬೇಕಾದ ನೆಲೆಯನ್ನು ಕುರಿತು ಸಂವಾದ ನಡೆಸುತ್ತಾರೆ. ಅಂತರಂಗದ ಅರಿವು ಪಡೆಯುವುದು ಮುಖ್ಯ ಎಂಬ ಅಂಶ ವಚನಗಳಲ್ಲಿ ಕಂಡು ಬರುತ್ತದೆ. ಪ್ರಪಂಚದ ಜಂಜಡಗಳಿಂದ, ಆಸೆ, ಆಮೀಷಗಳಿಂದ ಕೂಡಿದ ಮನಸ್ಸಿನ ಮೈಲಿಗೆಯನ್ನು ತೊಳೆದುಕೊಳ್ಳುವುದಕ್ಕಾಗಿ ಅನುಭಾವಿಗಳ, ಶರಣರ ಸಂಗ ಮಾಡಬೇಕೆಂದು ವಚನಕಾರರು ಹೇಳುತ್ತಾರೆ. ಜೀವಾತ್ಮನು ತನಗಿಂತ ಬೇರೆಯಾದ ಇನ್ನೊಂದು ಶಕ್ತಿ, ಚೈತನ್ಯ ಸ್ವರೂಪಿಯಾದ ಪರಮಾತ್ಮ ಇದ್ದಾನೆಂದು ಭಾವಿಸಿ, ಅಂತರಂಗವನ್ನು ಶುದ್ಧಗೊಳಿಸಿಕೊಂಡು ಪರಮಾತ್ಮನ ಸನ್ನಿಧಿಯನ್ನು ಸೇರಬೇಕು ಎಂದು ಬಯಸುವುದು. ತನಗಿಂತ ಬೇರೆಯಾದ ಶಿವನ ನೆಲೆಯನ್ನು ಅರಿಯುವುದಕ್ಕೆ ನಡೆಸುವ ಸಾಧನೆಯೇ ಅನುಭಾವ. ಇಂತಹ ಅನುಭಾವದ ಶಿಖರಕ್ಕೇರಲು ನಡೆ-ನುಡಿಯಲ್ಲಿ ಭಿನ್ನತೆ ಇರಬಾರದೆಂದು ಹೇಳಿದರು. ತಮ್ಮ ಅನುಭವದಿಂದ ಕಂಡುಕೊಂಡ ಜ್ಞಾನವನ್ನು, ತಿಳುವಳಿಕೆಯನ್ನು ವಚನಗಳ ಮೂಲಕ ಕಟ್ಟಿ ಪ್ರಸಾರಕ್ಕೆ ತಂದರು. ಮುಖ್ಯವಾಗಿ ಕಾಯಕ-ದಾಸೋಹ, ಲಿಂಗನಿಷ್ಠೆ, ಸದಾಚಾರ ಮುಂತಾದ ವಚನಕಾರರ ಚರ್ಚೆಯಲ್ಲಿ ಮಂಡನೆಗೊಂಡಂತಹ, ಒಪ್ಪಿತಗೊಂಡಂತಹ ತಾತ್ವಿಕ ಮೌಲ್ಯಗಳನ್ನು ತಮ್ಮ ಚಿಂತನೆಗಳನ್ನಾಗಿಸಿಕೊಂಡು ಅವುಗಳನ್ನು ಅಭಿವ್ಯಕ್ತಿಸಿ ಹೊಸ ಬದಲಾವಣೆಯ ಕನಸು ಕಂಡರು. ಅದರಲ್ಲೂ ಸಮಾಜದಲ್ಲಿ ನೆಲೆಸಿದ್ದ ವೃತ್ತಿ ತಾರತಮ್ಯಗಳನ್ನು ಎದುರಿಸುವ ಜರೂರು ಮತ್ತು ಸವಾಲು ಅವರ ಮುಂದಿತ್ತು. ಅದಕ್ಕಾಗಿ ಅವರು ತಮ್ಮ ವೃತ್ತಿಯನ್ನೇ ಅನುಭಾವದ ಮೂಲ ಮಾಧ್ಯಮವನ್ನಾಗಿ ಬಳಸುವ ಮೂಲಕ ಸಮಾನತೆಯನ್ನು ತಂದರು. ಅವಶ್ಯವಾಗಿ ಬೇಕಾಗಿದ್ದ ನಿಷ್ಠೆಯನ್ನು ಬಲಗೊಳಿಸುವ ನಿಟ್ಟಿನಲ್ಲಿ ಪ್ರಚಾರ ಮಾಡಿದರು. ಹಾಗಾಗಿ ಹೆಚ್ಚಿನ ಸಂಖ್ಯೆಯಲ್ಲಿದ್ದ ವೃತ್ತಿನಿರತರು ತಮ್ಮ ವಚನಗಳಲ್ಲಿ ವೃತ್ತಿಯ ಉಪಕರಣಗಳ ಪರಿಭಾಷೆಯನ್ನೆ ಬಳಸಿ ವಚನಗಳನ್ನು ಅಭಿವ್ಯಕ್ತಿಸಿದ್ದಾರೆ. ಹೊಡೆಹುಲ್ಲ ಬಂಕಣ್ಣ ಅನುಭಾವಿಯಾಗಿ ಸಾಧನೆಗೆ ತೊಡಗಿಕೊಂಡ ವಚನಕಾರನಾಗಿದ್ದಾನೆ. ಈತನದು ಹೊಡೆಹುಲ್ಲು ಕೊಯ್ದು ಹೊತ್ತು ಮಾರುವುದು ವೃತ್ತಿ. ಈತನ ವಚನಗಳಲ್ಲಿ ಕೂಲಿ, ಕೃಷಿ, ಕಣ, ಒಕ್ಕಿ, ಕೊಳಗ, ಖಂಡಗ, ಅಳೆಯುವುದು ಮುಂತಾದ ಪದಗಳು ಬಳಕೆಗೊಂಡಿದ್ದು, ಬಹುಶಃ ಈತನ ಹುಲ್ಲು ಹೊತ್ತು ಮಾರುವುದರ ಜೊತೆಗೆ ಕೃಷಿ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುತ್ತಿದ್ದನೆಂದು ಕಾಣುತ್ತದೆ. ಅಥವ ಸುಗ್ಗಿ ಕಾಲದಲ್ಲಿ ನೆಲ್ಲು ಕೊಯ್ದು ಒಕ್ಕಣಿಕೆ ಮಾಡುವ ಕಾಯಕದಲ್ಲಿ ತೊಡಗಿಕೊಳ್ಳುತ್ತಿದ್ದನೇನೋ? ಎಂದು ತಿಳಿಯಬಹುದಾಗಿದೆ. ತನ್ನ ವೃತ್ತಿಯಲ್ಲಿ ಪಡೆದ ಅನುಭವವನ್ನು ತನ್ನತನದ ಅಭಿವ್ಯಕ್ತಿಯಾಗಿ ಬಳಕೆಯಾಗುವುದನ್ನು ಈ ವಚನದ ಮೂಲಕ ನೋಡಬಹುದಾಗಿದೆ.

> ನೆಲ್ಲು ನೆಲದಲ್ಲಿಯೆ ಅಳಿದು, ಹುಲ್ಲಿನ ಒಡಲಲ್ಲಿಯೆ ಜನಿಸಿ,
> ಆ ಹುಲ್ಲ ತನ್ನೊಳಗಿರಿಸಿದ ಭೇದವ ನೋಡಾ.
> ತನ್ನೊಡಲಳಿದಲ್ಲಿ ನೆಲ್ಲೂ ಅಲ್ಲ, ಹುಲ್ಲೂ ಅಲ್ಲ!
> ಆ ಹೊಡಿಯಲ್ಲಿ ಅಡಗಿತ್ತೆಂದರಿಯೆ,
> ಕುಂಭೇಶ್ವರಲಿಂಗದಲ್ಲಿ ಜಗನ್ನಾಥನರಿಯಲಾಗಿ

(ಸಂಕೀರ್ಣ ವಚನ ಸಂಪುಟ ೪, ವಚನ ಸಂಖ್ಯೆ: ೧೨೦೬)

ಈ ವಚನದಲ್ಲಿ ಭೂಮಿಯಲ್ಲಿ ಬಿತ್ತಿದ ನೆಲ್ಲು ಹುಲ್ಲಾಗಿ ಬೆಳೆದು ಹೊಡೆಯಾಗಿ ಮತ್ತೆ ನೆಲ್ಲಾಗುವ ಚಿತ್ರಣವನ್ನು ಕಟ್ಟಿಕೊಟ್ಟಿರುವುದನ್ನು ಕಾಣುತ್ತೇವೆ. ಇದು ರೂಪಕವಾಗಿ ಇಲ್ಲಿ ಬರುತ್ತದೆ. ಈ ವಚನ ಅಭ್ಯಾಸಕ್ಕೆ ಸರಳವಾಗಿ ದಕ್ಕುವುದಕ್ಕೆ ಅದನ್ನು ಕಟ್ಟಿರುವ ಕ್ರಮವೇ ಕಾರಣವಾಗುತ್ತದೆ. ಮೊದಲ ಸಾಲಿನಲ್ಲಿ ಮತ್ತು ಮೂರನೇ ಸಾಲಿನಲ್ಲಿ ನೆಲ್ಲು, ಹುಲ್ಲು ಪದಗಳು ಪುನರಾವರ್ತನೆಗೊಂಡು ಒಂದು ತೀವ್ರತೆಯನ್ನು ಒದಗಿಸುತ್ತವೆ. ಮತ್ತು ಎರಡನೇ ಸಾಲಿನಲ್ಲಿ ಬೆರುಗುಗೊಳಿಸಿರುವ ಭಾವ ಅಥವಾ ಬೆರಗಾಗಿರುವ ಭಾವ ಇದ್ದು, ನಾಲ್ಕನೇ ಸಾಲಿನಲ್ಲಿ ಪ್ರಶ್ನಾರ್ಥವಿರುವ ವಾಕ್ಯವಿದೆ. ಪದಗಳ ಜೊಡಣೆಯಲ್ಲಿ ಬಂದವಿರುವುದನ್ನು ನೋಡುತ್ತೇವೆ.

ಮಾನವನು ಕಾಯ ಹಿಡಿದವನು. ಆ ಕಾಯದ ಒಳಗೆ ಆತ್ಮವಿರುತ್ತದೆ. ಆತ್ಮದ ಕಡೆಗೆ ಚಿಂತನೆ ಸಾಗಿದಾಗ ಕಾಯದ ಮೋಹ ಬಿಡಬೇಕಾಗುತ್ತದೆ. ಆದರೆ ಕಾಯದ ಮೋಹವನ್ನು ಮಾನವ ಬಿಡಲಾಗದ್ದಕ್ಕೆ ಬಂಕಣ್ಣ ವಿಷಾದ ಪಡುತ್ತಾನೆ. ಮತ್ತು ಅಂತಹ ದೇಹದೊಳಗೆ ಇರುವ ಆತ್ಮಕ್ಕೆ ಬೆರಗಾಗಿದ್ದಾನೆ.

ಧರೆಯ ಮೇಲೆ ಬಿದ್ದ ಬೀಜ,
ಧರೆಯಲ್ಲಿಯೆ ಅಳಿದು, ಆಕಾಶದಲ್ಲಿ ಫಲವಾಯಿತ್ತು.
ಆ ಫಲವ ಬಯಲ ಕಣದಲ್ಲಿ ಒಕ್ಕಿ, ಮನದ ಹಗಹದಲ್ಲಿ ತುಂಬಿ,
ಛಾಯ ಹಗಹದಲ್ಲಿ ತೆಗೆದು, ಕಣ್ಣಿನ ಕೊಳಗದಲ್ಲಿ ಅಳೆವುತ್ತಿರಲಾಗಿ,
ಖಂಡಗವೆಂಬುದಕ್ಕೆ ಮೊದಲೆ ಕೊರಳಡಗಿತ್ತು
ಕುಂಭೇಶ್ವರಲಿಂಗದಲ್ಲಿ ಜಗನ್ನಾಥನನರಿಯಲಾಗಿ.

(ಸಂಕೀರ್ಣ ವಚನ ಸಂಪುಟ ೪, ವಚನ ಸಂಖ್ಯೆ: ೧೨೦೫)

ಈ ವಚನವು ಮೇಲಿನ ವಚನದಂತೆ ಅಭಿವ್ಯಕ್ತಗೊಂಡಿದೆ. ಅದರ ಮುಂದುವರಿಕೆಯಂತೆಯೆ ಕಾಣುತ್ತದೆ. ಜೀವ-ಶಿವನ ಭೇಧ ಒಂದಾಗುವ ಸ್ಥಿತಿಯ ಚಲನೆಯಲ್ಲಿ ಭೇದವರಿಯದೇ ಒಂದಾಗಲು ಸಾಧ್ಯವಿಲ್ಲವೆಂದು ತೋರುತ್ತದೆ. ಎಲ್ಲಿ 'ಬಯಲು' ಎಂಬುದು ಇರುತ್ತದೋ 'ಮನ'ವು ತುಂಬುತ್ತದೆ. ಹಾಗಾಗಿ 'ಬಯಲು' ಕಂಡುಕೊಳ್ಳಬೇಕಾಗುತ್ತದೆ. ಇದಕ್ಕೆ ಅರಿವು ಪ್ರಧಾನ. ಅದರಿಂದ ಏನನ್ನಾದರೂ ಕಂಡುಕೊಳ್ಳಬಹುದು. ಆದ್ದರಿಂದ ಆಧ್ಯಾತ್ಮದ ತಿರುಳನ್ನು ಬಿತ್ತಿ, ಬೆಳೆವ ಹಂಬಲದ ಮನೋವೃತ್ತಿ ಬಂಕಣ್ಣನದು.

ಕೂಗಿನ ಮಾರಯ್ಯ

ವಚನಕಾರರು ಕೈಗೊಂಡ ಕಾರ್ಯಕ್ಕೆ ಪುರೋಹಿತಶಾಹಿ ಮತ್ತು ಪ್ರಭುತ್ವದ ವಿರೋಧ ಇತ್ತು. ಸಮಾಜವನ್ನು ಸರಿದಾರಿಯಲ್ಲಿ ನಡೆಸಬೇಕೆಂಬ ಹಂಬಲ ವಚನಕಾರರದ್ದು, ಆದರೆ ಪ್ರಭುತ್ವಕ್ಕೆ ಅಂತಹ ಚಿಂತನೆಗಳಿರುವುದಿಲ್ಲ. ಪ್ರಭುತ್ವ ಅಧಿಕಾರಕ್ಕಾಗಿ ಸಂಪತ್ತಿಗಾಗಿ ಹಂಬಲಿಸುತ್ತಿತ್ತೆ ವಿನಃ ಜನರ ಬದುಕನ್ನು ಸುಧಾರಿಸುವ ಪ್ರಯತ್ನ ಮಾಡುತ್ತಿರಲಿಲ್ಲ. ಇದರಂತೆ ಸನಾತನ ಪರಂಪರೆಯೂ ಕೂಡ ಶೋಷಣೆ ಮಾಡುವ ವರ್ಗವಾಗಿತ್ತು. ವರ್ಣಾಶ್ರಮ ಪದ್ಧತಿಯನ್ನು

ನಂಬಿ, ಬದುಕು ಸಾಗಿಸುತ್ತಿತ್ತು, ಇದರಿಂದ ಶೂದ್ರ ಮತ್ತು ಕೆಳವರ್ಗವನ್ನು ತಮ್ಮ ಹಿತಕ್ಕಾಗಿಯೇ ದುಡಿಸಿಕೊಳ್ಳುತ್ತಿತ್ತು. ಇಂತಹ ಸಂದರ್ಭದಲ್ಲಿ ಬಂದ ಭಕ್ತಿ ಚಳುವಳಿ ಹೊಸ ಪಂಥವನ್ನು ನಿರ್ಮಿಸಿಕೊಂಡಿತು. ಸಮಾಜದ ಭಾಗವಾಗಿ ದುಡಿಯುತ್ತಿದ್ದ ವೃತ್ತಿನಿರತರನ್ನು, ಕೆಳವರ್ಗದವರನ್ನು, ಅಸ್ಪರ್ಶರನ್ನು ಸೇರಿಸಿಕೊಂಡು ಸಮಾನತೆಯ ತತ್ವವನ್ನು ಪ್ರತಿಪಾದಿಸುವ ಕೆಲಸದಲ್ಲಿ ತೊಡಗಿಕೊಂಡಿತ್ತು. ಇಂತಹ ಬೆಳವಣಿಗೆಯನ್ನು ಸಹಿಸದ ಮೇಲ್ವರ್ಗ, ಮತ್ತು ಪ್ರಭುತ್ವ ಒಟ್ಟಾಗಿ, ಚಳುವಳಿಯನ್ನು ಶಮನ ಮಾಡಲು ಹವಣಿಸುತ್ತಿದ್ದವು. ಅದರ ಫಲವಾಗಿ ಶರಣರ ಭಕ್ತಿ ಪಂಥಕ್ಕೂ ಪ್ರಭುತ್ವಕ್ಕೂ ಘರ್ಷಣೆಗಳಾದವು. ಇಂತಹ ಘರ್ಷಣೆ, ಕಾಳಗದಿಂದ ಶರಣ ಸಮೂಹ ವಿಚಲಿತಗೊಂಡು, ನೆಲೆ ಕಳೆದುಕೊಂಡಿತು. ಅನಿವಾರ್ಯವಾಗಿ ಪ್ರಭುತ್ವದ ವಿರುದ್ಧ ನೇರ ಕಾಳಗಕ್ಕೆ ಇಳಿಯಬೇಕಾಗುತ್ತಿತ್ತು. ಈ ರೀತಿಯ ಕಾಳಗದಲ್ಲಿ ಅನೇಕ ವಚನಕಾರರೇ ಭಾಗವಹಿಸಿ ತಮ್ಮನ್ನು ಕಾಪಾಡಿಕೊಳ್ಳಬೇಕಾಗಿತ್ತು. ಇಂತಹ ಸಂದರ್ಭದಲ್ಲಿ ಬಿಜ್ಜಳನ ಸೈನ್ಯ ದಾಳಿ ಮಾಡಲು ಬರುತ್ತಿದ್ದಂತೆ ಕಾವಲು ಕಾದು ಯುದ್ಧ ಸೂಚನೆ ನೀಡಲು ಒಬ್ಬ ಸೇನಾನಿ ಇರುತ್ತಿದ್ದ. ಕೂಗಿನ ಮೂಲಕ ಶರಣ ಸೈನ್ಯವನ್ನು ಎಚ್ಚರಿಸುವ ಕಾಯಕದಲ್ಲಿ ನಿರತನಾದವನು ಮಾರಯ್ಯ ಎಂದು ಗುರುತಿಸಲಾಗಿದೆ. ಈತ ಕೇವಲ ಕಾವಲು ಕಾಯುವ ಆಳು ಮಾತ್ರವಲ್ಲ ಒಬ್ಬ ಅನುಭಾವಿಯಾಗಿ ವಚನಕಾರರ ಸಮೂಹದಲ್ಲಿ ಗುರುತಿಸಿಕೊಂಡಿದ್ದವನಾಗಿದ್ದಾನೆ. ಜೀವನದಲ್ಲಿ ಕಂಡ ಅನುಭವಗಳನ್ನು ಅನುಭಾವವನ್ನಾಗಿಸಿ ಆಧ್ಯಾತ್ಮದ ಸಾಧಕನಾಗಿದ್ದಾನೆ. 'ಮಹಾಮಹಿಮ ಮಾರೇಶ್ವರ' ಎಂಬ ಅಂಕಿತದಲ್ಲಿ ಹನ್ನೊಂದು ವಚನಗಳನ್ನು ರಚಿಸಿದ್ದಾನೆ. ತನ್ನ ವೃತ್ತಿಯ ಬಗ್ಗೆ ಹೆಚ್ಚಿನದಾಗಿ ಎಲ್ಲಿ ಸಾಕ್ಷ್ಯಗಳನ್ನು ನೀಡದ ಈತ ವಚನದ ಕೊನೆಗೆ 'ಕೂಗಿನದನಿಗೆ ಹೊರತು', 'ಕೂಗಿನ ಕುಲವಿಲ್ಲ', 'ಕೂಗಿನ ಕುಲಕ್ಕೆ ಹೊರತು' ಎಂದು ಹೇಳುವುದನ್ನು ಗಮನಿಸಿ ಈತನ ವೃತ್ತಿಯನ್ನು ನಿರ್ಧರಿಸಲಾಗಿದೆ.

ಮಾರಯ್ಯನ ವಚನಗಳು ಅನುಭಾವಿಕ ನೆಲೆಯ ಆಳವನ್ನು ತಿಳಿಸುತ್ತವೆ. ಆಧ್ಯಾತ್ಮ ಸಾಧನೆಯ ನೀತಿ ಬೋಧನೆಯನ್ನು ಮಾಡುತ್ತವೆ. ಭಕ್ತ, ಮಾಹೇಶ್ವರ, ಪ್ರಾಸಾದ ತತ್ವದ ಪ್ರತಿಪಾದನೆಗಳಾಗಿ ಮೂಡಿವೆ, ಶಿವನಿಷ್ಠೆಯನ್ನು, ಜಂಗಮ ನಿಷ್ಠೆಯನ್ನು ಪ್ರತಿಪಾದಿಸುವ ಪ್ರಯತ್ನ ವಚನಗಳಲ್ಲಿದೆ.

ಸೂಕ್ಷ್ಮ ಸಂವೇದನಶೀಲನಾದ ಮಾರಯ್ಯನು ವಚನಗಳನ್ನು ಅತ್ಯಂತ ಜ್ಞಾನಪೂರ್ಣವಾಗಿ ಅರಿವಿನ ಪ್ರಜ್ಞೆಯ ಆಳದಿಂದ ರಚಿಸಿದ್ದಾನೆ. ಇನ್ನೂ ಸಾಹಿತ್ಯದ ದೃಷ್ಟಿಯಿಂದ ವಾಕ್ಯಗಳ ರಚನೆಯ ಬಂದ ಒಂದಕ್ಕೊಂದು ಬೆಳೆಸಿಕೊಂಡೆ ಬರುತ್ತವೆ. ತನ್ನ ನಂಬಿಕೆ, ತತ್ವಸಿದ್ಧಾಂತವನ್ನು ಎಲ್ಲಿಯೂ ಹೇರುವ ಪ್ರಯತ್ನ ಮಾಡುವುದಿಲ್ಲ. ಓದುಗರ ಗ್ರಹಿಕೆಗೆ ಅರ್ಥದ ಹೊಳವುಗಳನ್ನು ನೀಡುತ್ತವೆ. ರೂಪಕ, ಪ್ರತಿಮೆಗಳು ವಚನಗಳಲ್ಲಿ ಬರುವುದರಿಂದ ಹೇಳುವಿಕೆಗೆ ಒಂದು ತೀವ್ರತೆಯನ್ನು ಒದಗಿಸುತ್ತವೆ. ಕೆಲವೊಮ್ಮೆ ಚಮತ್ಕಾರಯುತವಾಗಿ ಭಾಷೆ ಬಳಕೆಗೊಂಡಿರುವುದನ್ನು ನೋಡುತ್ತೇವೆ.

ನಾರಿಯೂ ಮರನೂ ಕೂಡಿ ಬಾಗಲಿಕ್ಕಾಗಿ
ಶರ ಚರಿಸುವುದಕ್ಕೆಡೆಯಾಯಿತ್ತು.

ಭಕ್ತಿಯೂ ವಿರಕ್ತಿಯೂ ಕೂಡಲಿಕ್ಕಾಗಿ.
ವಸ್ತುವನರಿವುದಕ್ಕೆ ಒಡಲಾಯಿತ್ತು.
ಆ ವಸ್ತು ತ್ರಿಕರಣವ ಭೇದಿಸಿದ ಮತ್ತೆ ತ್ರಿಗುಣ ನಷ್ಟ.
ಆ ನಷ್ಟದಲ್ಲಿ ಪಂಚೇಂದ್ರಿಯ ನಾಶನ.
ಸಪ್ತದಾತು ವಿಸರ್ಜನ, ಅಷ್ಟಮದ ಹುಟ್ಟುಗೆಟ್ಟಿತ್ತು.
ಸದ್ಭಾವದ ನಿಷ್ಠೆ ನಷ್ಟವಾಯಿತ್ತು.
ಇಂತಿವರೊಳಗಾದ ಕುಲವಾಸನೆ ಹೊಲಬುಗೆಟ್ಟಿತ್ತು.
ನಾನಾರೆಂಬುದ ತಿಳಿದಲ್ಲಿ
ಕೂಗಿನ ಕುಲಕ್ಕೆ ಹೊರಗಾಯಿತ್ತು.
ಮಹಾ ಮಹಿಮ ಮಾರೇಶ್ವರನನರಿಯಲಾಗಿ.

(ಸಂಕೀರ್ಣ ವಚನ ಸಂಪುಟ ೨, ವಚನ ಸಂಖ್ಯೆ: ೮೦)

ದಾಸೋಹ ಸಂಗಣ್ಣ

ವೃತ್ತಿ ಯಾವುದಾದರೂ ಸರಿ ಆತ್ಮದ ಅರಿವನ್ನು ನೆಲೆಗೊಳಿಸುವಂತಿರಬೇಕು. ವೃತ್ತಿ ಅನುಭವಗಳಿಗೆ ಮಾನ್ಯ ಮಾಡುವಂತಹ ಸಮಾಜವೊಂದನ್ನು ನಿರ್ಮಿಸಬೇಕು ಎಂಬ ಆಕಾಂಕ್ಷೆ ವೃತ್ತಿನಿರತ ವಚನಕಾರರದು. ಹಾಗಾಗಿ ವಿವಿದ ವೃತ್ತಿಗಳನ್ನು ಕೈಗೊಂಡವರು ತಮ್ಮ ಅನುಭವವನ್ನು ಆಧ್ಯಾತ್ಮದ ಕುರುಹನ್ನಾಗಿ ಮಾರ್ಪಡಿಸಿದ್ದಾರೆ. ಅಂತಹ ಅನುಭವವನ್ನು ವಚನಗಳ ಮೂಲಕ ಕಟ್ಟಿಕೊಟ್ಟಿದ್ದಾರೆ.

ಬಸವಣ್ಣ ನಿರ್ಮಿಸಿದ ಮಹಾಮನೆ, ಅನುಭವ ಮಂಟಪ ವಚನಕಾರರನ್ನು ವಿಚಾರವಂತರನ್ನಾಗಿ ಮಾಡುವ ಕೆಲಸ ಮಾಡಿದ್ದು ನಿಜ. ಅದೊಂದು ಆಧ್ಯಾತ್ಮವನ್ನು ತರಬೇತುಗೊಳಿಸುವ ಕೇಂದ್ರವು ಆಗಿತ್ತು. ಮಾನವನು ಬದುಕನ್ನು ಸಾರ್ಥಕವಾಗಿ ಕಟ್ಟಿಕೊಳ್ಳಲು ಪ್ರೇರಣಾತ್ಮಕವಾಗಿ ಕಾರ್ಯನಿರ್ವಹಿಸಿತು. ಇಲ್ಲಿ ಚರ್ಚೆಗೊಳ್ಳದ ವಿಷಯವೇ ಇಲ್ಲ. ಹಾಗಾಗಿ ಕಾಯಕ–ದಾಸೋಹ ಎಂಬ ಮಹತ್ವವಾದ ಸಿದ್ಧಾಂತವು ಬೆಳೆದು ಬಂದಿತು. ಇಂತಹ ಮಹಾಮನೆಯಲ್ಲಿ ಕೆಲಸ ಮಾಡುವವರು ಅನುಭಾವಿಗಳಾದರು. ಅವರಲ್ಲಿ ದಾಸೋಹದ ಸಂಗಣ್ಣ ಒಬ್ಬ. ಈತನು ವಚನಗಳನ್ನು ರಚಿಸಿದ್ದು, ತನ್ನ ಆಧ್ಯಾತ್ಮ ಸಾಧನೆಯ ಸ್ಪಷ್ಟ ಕುರುಹನ್ನು ನೀಡುತ್ತಾನೆ. ಒಬ್ಬ ಅನುಭಾವಿಯಾಗಿ ವೃತ್ತಿನಿರತನಾಗಿ ತನ್ನ ವೃತ್ತಿಯ ಮಹತ್ವವನ್ನು ಹೇಳುವ ಮೂಲಕ ಅರಿವಿನ ಆಳವನ್ನು ವಿಸ್ತಾರಗೊಳಿಸಿಕೊಳ್ಳುವ ಅರಿವಿನ ಹುಡುಕಾಟದಲ್ಲಿರುವವರಿಗೆ ಮಾರ್ಗದರ್ಶಕನ ಸ್ಥಾನದಲ್ಲಿ ನಿಲ್ಲುತ್ತಾನೆ. ಈತನ ಅನೇಕ ವಚನಗಳಲ್ಲಿ ಲಿಂಗಾಚಾರ, ಸದಾಚಾರ, ಲಿಂಗಾಯಿತ ಸಿದ್ಧಾಂತ, ಏಕದೇವೋಪಾಸನೆ, ವೃತ್ತಿ ನಿಷ್ಠತೆ, ಕಾಯಕ–ದಾಸೋಹ ತತ್ವದ ಪ್ರತಿಪಾದನೆಗಳಿರುವುದನ್ನು ನೋಡುತ್ತೇವೆ. ವೃತ್ತಿಯ ಜೊತೆಗೆ ಬದುಕನ್ನು ಕಟ್ಟಿಕೊಳ್ಳುವ ಬಗ್ಗೆ ಚಿಂತನೆಗೆ ತೊಡಗಿರುವುದನ್ನು ಕಾಣುತ್ತೇವೆ. ವಚನಗಳಲ್ಲಿ ತನ್ನ ದಾಸೋಹ ವೃತ್ತಿಗೆ ಸಂಬಂಧಿಸಿದ ಪರಿಭಾಷೆಯಲ್ಲಿ ವಚನಗಳನ್ನು ರಚಿಸಿದ್ದಾನೆ. ಅನ್ನ ದಾಸೋಹದ ವೃತ್ತಿಯ ಜೊತೆಗೆ ಜ್ಞಾನ ದಾಸೋಹವನ್ನು ಮಾಡಿದ್ದಾನೆ. ತನ್ನ ವೃತ್ತಿಯ ಪರಿಭಾಷೆಯಲ್ಲಿ ಒಂದು ವಚನವನ್ನು ರಚಿಸಿದ್ದು,

ಅದರ ಮೂಲಕ ಅನುಭಾವಿಕ ಸಿದ್ಧಾಂತವನ್ನು ಭೋದನೆ ಪ್ರತಿಪಾದನೆಯನ್ನು ಮಾಡುತ್ತಾನೆ. ಆ ವಚನ ಹೀಗಿದೆ.

ಕುಂಭದಲ್ಲಿ ಬೆಂದ ಅಶನಕ್ಕೆ ಒಂದಗುಳಲ್ಲದೆ
ಹಿಂಗಿ ಹಿಂಗಿ ಹಿಸುಕಲುಂಟೆ?
ಗುರು ತಪ್ಪುಕನ ಲಿಂಗಬಾಹ್ಯನ ಜಂಗಮ ನಿಂದಕನ
ಆಚಾರ ಭ್ರಷ್ಟರ ಜ್ಞಾನ ಹೀನನ
ಅರಿತು ಕಂಡು ಕೂಡಿದರೆ
ತನ್ನವನೆಂದು ಅಂಗೀಕರಿಸಿದಡೆ
ಖಂಡವ ಬಿಟ್ಟು ಮತ್ಸ್ಯಕ್ಕೆಹರಿದ ಜಂಬುಕನಂತೆ ಆಗದೆ?
ಸದಾಚಾರದಲ್ಲಿ ಸಂದಿರಬೇಕು.
ಕಟ್ಟಾಚಾರದಲ್ಲಿ ನಿಂದಿರಬೇಕು.
ಶಂಬುವಿನಿಂದಿತ್ತ ಸ್ವಯಂಬುವಿನಿಂದತ್ತ ಅತಿಬಳನೋಡಾ
ಮಾತುಳಂಗ ಮಧುಕೇಶ್ವರನು

(ಸಂಕೀರ್ಣ ವಚನ ಸಂಪುಟ ೨, ವಚನ ಸಂಖ್ಯೆ: ೧೧೦೧)

ಈ ವಚನದಲ್ಲಿ ಬಳಕೆಗೊಂಡಿರುವ ಕುಂಭ, ಬೆಂದ ಅನ್ನ, ಅಶನ, ಒಂದಗಳು ಪದಗಳು ಬಳಕೆಗೊಂಡಿರುವುದನ್ನು ಗಮನಿಸಿ ಮಹಾಮನೆಯಲ್ಲಿ ದಾಸೋಹದ ವೃತ್ತಿಯನ್ನು ಮಾಡುತ್ತಿದ್ದನೆಂದು ಸಂಗಣ್ಣನನ್ನು ಗುರುತಿಸಿರುವುದು ಕಾಣುತ್ತೇವೆ. ಆದರೆ ವೃತ್ತಿಯ ಸ್ವರೂಪದ ಬಗ್ಗೆ ಅಷ್ಟಾಗಿ ಮಾಹಿತಿ ಸಿಗುವುದಿಲ್ಲ. ಅಡುಗೆ ಮಾಡುವುದೊ? ನೀಡುವುದೊ? ಅಥವಾ ಮೇಲ್ವಿಚಾರಣೆ, ವ್ಯವಸ್ಥೆಯ ಪಾಲಕನೊ? ಇಲ್ಲಿ ಆತನ ವಚನದ ಅಭಿವ್ಯಕ್ತಿಯ ಚರ್ಚೆ ಅವಶ್ಯ ಇರಲಿ. ವೃತ್ತಿಯ ಸ್ವರೂಪದ ಚರ್ಚೆ ಬೇರೆ ವಿಷಯ.

ವಚನದ ಮೊದಲ ಸಾಲಿನಲ್ಲಿ ಪ್ರಶ್ನೆಯಿರುವುದನ್ನು ನೋಡುತ್ತೇವೆ. ಮತ್ತು ಈ ಪ್ರಶ್ನೆಯನ್ನು ಕೇಳುವ ಮೂಲಕ ಮುಂದಿನ ಸಾಲುಗಳಲ್ಲಿ ಕ್ರಿಯಾ ಪದಗಳ ಮೂಲಕ ಉತ್ತರವನ್ನು ನೀಡುತ್ತ, ಪ್ರಶ್ನೆಯನ್ನು ಕೇಳುತ್ತಾನೆ. ವಚನ ಚಳವಳಿಯ ಮುಖ್ಯ ಸಿದ್ಧಾಂತವಾದ 'ಗುರು ಲಿಂಗ ಜಂಗಮ'ದ ಪ್ರತಿಪಾದನೆ ಇದ್ದು, ಯಾರು ಈ ತತ್ವಕ್ಕೆ ಬದ್ದರಲ್ಲದೆ ಬದುಕುತ್ತಾರೊ? ಅಂತ 'ಆಚಾರ ಭ್ರಷ್ಟ'ರನ್ನು ಹೀನರೆಂದು ಜರಿದು. ಅರಿವಿಗೆ ಒಳಗಾಗಿ, ಮರೆತು ಬದುಕುವವರನ್ನು, ಡಂಭಾಚಾರದ ವ್ಯಕ್ತಿತ್ವವುಳ್ಳ ಹೀನಮತಿಗಳನ್ನು ಬಾಯಿಯೊಳಗಿದ್ದ ಮಾಂಸದ ತುಂಡು ಬಿಟ್ಟು ನೀರಿನೊಳಗಿನ ಮೀನ ಹಿಡಿಯಲು ಹೊರಟ ನರಿಯಂತೆ ಎನ್ನುತ್ತಾನೆ. ಇಲ್ಲಿ ಯಾರು ಬದುಕಿನಲ್ಲಿ ಬದ್ಧತೆಯನ್ನು ಹೊಂದಿಲ್ಲವೋ, ಲಿಂಗಧರಿಸಿ ಶರಣ ಆಶಯಕ್ಕೆ ವಿರುದ್ಧ ಬದುಕನ್ನು ನಡೆಸುತ್ತಾರೋ ಅಂತವರನ್ನು ಕುರಿತೆ ಸಂಗಣ್ಣ ನುಡಿಯುತ್ತಾನೆ. ಮತ್ತು ಮೇಲಿನ ಪ್ರಶ್ನೆಗೆ ವಚನದ ಕೊನೆಯ ಭಾಗದಲ್ಲಿ ಉತ್ತರವಿರುವುದನ್ನು ನೋಡುತ್ತೇವೆ. ಜೀವನವನ್ನು ಕುಂಭಕ್ಕೆ, ಮಾನವನನ್ನು ಬೆಂದ ಅನ್ನಕ್ಕೆ ಹೋಲಿಸಿರುವುದು ರೂಪಕವಾಗಿ ಬರುತ್ತದೆ. ಅರಿವಿನ ಮೂಲಕ ಆತ್ಮವನ್ನು ತೊಳೆದುಕೊಳ್ಳಬೇಕು. ಹೀಗೆ ತೊಳೆದುಕೊಂಡ ಆತ್ಮವನ್ನು ಪರೀಕ್ಷಿಸುವ ಅವಶ್ಯಕತೆಯೆ ಇಲ್ಲ. ಅದು ಬಯಲನ್ನು

ಆಶ್ರಯಿಸಿದ ಬಯಲಾಗಿರುತ್ತದೆ. ತನ್ನ ವೃತ್ತಿ ಪದಗಳ ಮೂಲಕ ಹೆಚ್ಚು ವಚನಗಳನ್ನು ಅಭಿವ್ಯಕ್ತಿಸಿರದ ಸಂಗಣ್ಣನ ವಚನಗಳಲ್ಲಿ ಬಹಳಷ್ಟು ವಚನಗಳು ಗುರು-ಲಿಂಗ-ಜಂಗಮ ತತ್ವದ ಪ್ರತಿಪಾದನೆ, ಸಮಾಜದ ವಿಡಂಬನೆ, ಸಮಾಜ ವಿಮರ್ಶೆ, ಲಿಂಗ ನಿಷ್ಠೆ, ಷಟ್‌ಸ್ಥಲ ಸಿದ್ಧಾಂತದ ಕುರಿತೆ ವಚನಗಳು ರಚನೆಗೊಂಡಿದ್ದು, ಕಾವ್ಯಾತ್ಮಕ ಬಂದದೊಂದಿಗೆ ಅಭಿವ್ಯಕ್ತಗೊಳ್ಳುತ್ತವೆ.

ಸೂಜಿ ಕಾಯಕದ ರಾಮಿತಂದೆ

ಹನ್ನೆರಡನೆಯ ಶತಮಾನ ಕರ್ನಾಟಕದ ಭಕ್ತಿ ಚಳುವಳಿಯ ಆರಂಭದ ಕಾಲಘಟ್ಟ, ಇಂತಹ ಕಾಲಘಟ್ಟದ ಉಪಯೋಗ ಪಡೆದು ಬೆಳದು ಬಂದವರು ವಚನಕಾರರು. ಇವರು ಕನ್ನಡದ ಉಸಿರನ್ನು ಶುದ್ಧಗೊಳಿಸಿದರು. ವಚನ ಎಂಬ ಅಸ್ತ್ರವನ್ನು ಬಳಸುವ ಮೂಲಕ ಇಡಿ ಸಮಾಜದಲ್ಲಿ ನೆಲೆಸಿದ್ದ ವಿದ್ರೋಹಿ ಚಟುವಟಿಕೆಗಳನ್ನು ನಾಶ ಮಾಡುವ ಪ್ರಯತ್ನ ಮಾಡಿದರು. ಇವರ ಹೋರಾಟ ಮನುಷ್ಯನ ಉನ್ನತಿಗಾಗಿ ನಡೆದಂತಹುದು. ಆ ಮೂಲಕ ಇಡಿ ಲೋಕಕ್ಕೆ ಮಾನವತಾವಾದವನ್ನು ಪ್ರತಿಪಾದಿಸಿದರು. ಇಂತಹ ಹೋರಾಟದ ನೇತಾರ ಬಸವಣ್ಣ, ಅನೇಕ ಕುಲ ಮೂಲದ ವಚನಕಾರರನ್ನು ಕಟ್ಟಿಕೊಂಡು ಸಮಾಜಿಕ ಹೋರಾಟವನ್ನು ರೂಪಿಸಿ ಕರ್ನಾಟಕಕಷ್ಟೇ ಅಲ್ಲ ಇಡಿ ವಿಶ್ವಕ್ಕೆ ತತ್ವ ಸಿದ್ಧಾಂತದ ಬದುಕನ್ನು ರೂಪಿಸಿಕೊಟ್ಟ. ಇದರ ಸಹಭಾಗಿತ್ವವನ್ನು ಅನೇಕ ವಚಕಾರರು ವಹಿಸಿಕೊಂಡು ತಮ್ಮೊಳಗಿನ ಶಕ್ತಿಯನ್ನು, ಚೈತನ್ಯವನ್ನು ಕಂಡುಕೊಂಡರು. ಕನ್ನಡದ ಬರಹದ ಮೂಲಕ ಕನ್ನಡಿಗರನ್ನು, ಅದರಲ್ಲೂ ಓದು, ವಿದ್ಯೆಯಿಂದ ವಂಚಿತರಾದವರಿಗೆ ತಮ್ಮ ಜನನುಡಿಯಿಂದ ತಿಳುವಳಿಕೆಯನ್ನು ಮೂಡಿಸುವ ಕೆಲಸ ಮಾಡಿದರು. ಇಂತಹ ತಿಳುವಳಿಕೆಯು ಹಲವು ಆಯಾಮಗಳಲ್ಲಿದ್ದು, ಅಂತರಂಗದ ಅರಿವಿನ ಜಾಗೃತಿಯನ್ನು ಒಳಗೊಂಡಿದೆ. ವಚನಕಾರರ ಆಂದೋಲನದಲ್ಲಿ ಭಾಗವಹಿಸುವ ವಚನಕಾರರೆಲ್ಲರೂ ಕಾಯಕ ಜೀವಿಗಳಾಗಿದ್ದಾರೆ. ಮತ್ತು ಆಧ್ಯಾತ್ಮ ಸಾಧಕರು ಆಗಿದ್ದಾರೆ. ಇಂತವರು ತಮ್ಮ ತಮ್ಮ ತಿಳುವಳಿಕೆಯನ್ನು ಹೇಳುವ, ಚರ್ಚಿಸುವ ಪ್ರಯತ್ನದ ಫಲವಾಗಿ ವಚನಗಳು ರಚನೆಗೊಂಡು ತಮ್ಮದೇ ಆದ ಅಭಿವ್ಯಕ್ತಿಯನ್ನು ಪಡೆದಿವೆ. ಹೀಗೆ ವೃತ್ತಿಯನ್ನು ಮಾಡುತ್ತ ಅನುಭಾವದಲ್ಲಿ ತೊಡಿಗಿಕೊಂಡ ವಚನಕಾರರ ವಚನಗಳಲ್ಲಿ ತಮ್ಮ ವೃತ್ತಿಯ ಪದಗಳೇ ಹೇಳುವಿಕೆಯ ದಾರಿಗಳಾಗಿವೆ. ತಮ್ಮದೇ ಆದ ಕುಲಕಸಬನ್ನು ಮಾಡುತ್ತಿದ್ದ ರಾಮಿತಂದೆಯು ವೃತ್ತಿಯಲ್ಲಿ ಬಟ್ಟೆ ಹೋಲಿಯುವನಾಗಿದ್ದು, ತನ್ನ ವಚನಗಳಲ್ಲಿ ಬಟ್ಟೆ ಹೊಲಿಯುವ ಸಾಧನಗಳನ್ನು ಬಳಸಿಕೊಂಡು ವಚನ ರಚನೆ ಮಾಡಿದ್ದಾನೆ. ಈತನ ವಚನಗಳು ತುಂಬಾ ಗಮನಾರ್ಹವಾಗಿದ್ದು, ಬೆಡಗಿನ ರೂಪದಲ್ಲಿ ಅಭಿವ್ಯಕ್ತಿಗೊಂಡು ಸರಳ ಗ್ರಾಹ್ಯಕ್ಕೆ ಸಿಗದ ಕಠಿಣತೆಯನ್ನು ಪಡೆದುಕೊಂಡಿವೆ.

ಏತ್ವದಲ್ಲಿ ಚುಚ್ಚಿ, ಓತ್ವದಲ್ಲಿ ತೆಗೆದು,
ಔತ್ವದಲ್ಲಿ ಒಡಗೂಡಿ, ಕುರಿಕಿನಲ್ಲಿ ಸುಳಿದು,
ಸೊನ್ನೆಯಲ್ಲಿ ಸಂಜ್ಞೆಗೆಟ್ಟು,, ಸೂಜಿಯ ಮೊನೆಯೊಡಗೂಡುವುದಕ್ಕೆ ಎರಡಿಲ್ಲ.
ದಾರಕ್ಕೆ ಉರಿಯಿಲ್ಲ, ಇದನಾರು ಬಲ್ಲರು.
ಇಂತಿವನಾರಯ್ಯ ಬಲ್ಲಡೆ,
ಪ್ರಸನ್ನ ಕಪಿಲಸಿದ್ಧ ಮಲ್ಲಿಕಾರ್ಜುನಲಿಂಗವ ಬಲ್ಲವ.

(ಸಂಕೀರ್ಣ ವಚನ ಸಂಪುಟ ೪, ವಚನ ಸಂಖ್ಯೆ: ೭೧೬)

ಈ ವಚನದಲ್ಲಿ ಬಳಕೆಗೊಂಡಿರುವ ಭಾಷೆಯು ಕ್ಲಿಷ್ಟವಾಗಿದ್ದು, ಸರಳ ಓದಿಗೆ ನಿಲುಕದೇ ಇರಬಹುದು. ಬೆಡಿಗನ ಶೈಲಿಯಲ್ಲಿ ರೂಪಗೊಂಡಂತಿರುವ ಈ ವಚನ ರಾಮಿತಂದೆಯ ವೃತ್ತಿಯ ಚಿತ್ರಣವನ್ನು ನೀಡುತ್ತದೆ.

ರಾಮಿತಂದೆಯು ವಚನದಲ್ಲಿ ಬಳಸಿರುವ ಪದಗಳ ಬಂದ ಕಾವ್ಯಗುಣವಿಲ್ಲದಿದ್ದರೂ, ಅಭ್ಯಾಸ ಸೂಚಿ ಎನ್ನಿಸುತ್ತವೆ. ವಚನ ರಚನಾ ಕ್ರಮದಲ್ಲಿ ಪ್ರಶ್ನಾರ್ಥಕ ಚಿಹ್ನೆಗಳಿಲ್ಲದಿದ್ದರೂ, 'ದಾರಕ್ಕೆ ಹುರಿಯಿಲ್ಲ ಇದನಾರು ಬಲ್ಲರು' ಎಂಬ ಸಾಲಿನಲ್ಲಿ ಪ್ರಶ್ನೆಯಿರುವುದನ್ನು ನೋಡುತ್ತೇವೆ. ಮತ್ತು ಮುಂದಿನ ಸಾಲಿನಲ್ಲಿ ಇದೇ ಭಾವ ಇರುವುದು. ಇಂತಹ ಪ್ರಶ್ನೆಯನ್ನು ಕೇಳಿ, ವಚನಾಂಕಿತದ ನಂತರ 'ಬಲ್ಲವ' ಎಂಬ ಪದ ಬಳಕೆಯೇ ಉತ್ತರವಾಗಿ ನಿಲ್ಲುವಂತೆ ಕಾಣುತ್ತದೆ. ರಾಮಿತಂದೆ ಪದಗಳನ್ನು ಕಟ್ಟುವಲ್ಲಿ ವಿಶೇಷ ಜ್ಞಾನವೊಂದಿರುವುದನ್ನು, ಪ್ರಾವಿಣ್ಯತೆಯನ್ನು ಪಡೆದಿರುವುದನ್ನು, ಏತ್ವ, ಓತ್ವ, ಜೌತ್ವ ಎಂಬ ಪ್ರಾಸ ಪದಗಳನ್ನು ಬಳಸುವ ಮೂಲಕ ವಚನಕ್ಕೆ ಒಂದು ಅನನ್ಯತೆಯನ್ನು ತಂದಿದ್ದಾನೆ. ಇನ್ನು ಬಟ್ಟೆ ಹೊಲಿಯುವುದು ರೂಪಕವಾಗಿ ಇಲ್ಲಿ ಬಂದಿದೆ. ಬಟ್ಟೆ ಹೊಲಿಯುವಿಕೆಯನ್ನು ಅನುಭಾವಿಕ ನೆಲೆಯಲ್ಲಿ ಚರ್ಚೆಗೊಳಪಡಿಸುವುದು ನಡೆದಿದೆ.

ಕಾಲು ಕುಪ್ಪಸವ ಮೇಲಾಗಿ ಹೊಲಿದೆ.
ಅಂಗದ ಕುಪ್ಪಸವ ಮಂಡೆಗೆ ಹೊಲಿದೆ.
ಮಂಡೆಗೆ ಒಂಬತ್ತು ಚಿಪ್ಪು ಸರ್ವಾಂಗಕ್ಕೆ ತೊಡಿಸುವೆ.
ಇದರ ಸಂದಿನ ಕೂಟವ ಬಲ್ಲಡೆ,
ಪ್ರಸನ್ನ ಕಪಿಲಸಿದ್ಧ ಮಲ್ಲಿಕಾರ್ಜುನ ಲಿಂಗವ ಬಲ್ಲವ.

(ಸಂಕೀರ್ಣ ವಚನ ಸಂಪುಟ ೪, ವಚನ ಸಂಖ್ಯೆ: ೭೧)

ಇದಲ್ಲದೆ ಹಲವು ಆಯಾಮಗಳಲ್ಲಿ ನೋಡಬಹುದಾದ ವಚನ ಹೀಗಿದೆ.

ತಲೆಗೆ ಮೂರು ಚಿಪ್ಪು, ಅಂಗಕ್ಕೆ ಆರು ಚಿಪ್ಪು,
ಮಿಕ್ಕಾದ ಸರ್ವಾಂಕ್ಕೆಲ್ಲಕ್ಕೂ ಒಂದೆ ಚಿಪ್ಪಿನ ಕುಪ್ಪಸ
ಇದರಂಗದ ಆಚರಣೆಯ ಬಲ್ಲವ,
ಪ್ರಸನ್ನ ಕಪಿಲಸಿದ್ಧ ಮಲ್ಲಿಕಾರ್ಜುನಲಿಂಗವ ಬಲ್ಲವ.

(ಸಂಕೀರ್ಣ ವಚನ ಸಂಪುಟ ೪, ವಚನ ಸಂಖ್ಯೆ: ೭೨)

ಮನುಷ್ಯ ತನ್ನನ್ನು ಅರಿಯಬೇಕು. ಅರಿಯಲು ಅವನು ಮಾಡಬೇಕಾದ ಕೆಲಸವನ್ನು ಈ ವಚನ ಹೇಳುತ್ತದೆ. ಸತ್ಯದ ಸೂಜಿಯಿಂದ ಚುಚ್ಚಿ, ಅರಿವಿನಲ್ಲಿ ಹೊರತೆಗದಾಗ ಶಿವನಲ್ಲಿ ಒಡಗೂಡುವ ಪರಿಕಲ್ಪನೆಯೊಂದಿದೆ, ಲೌಕಿಕ ಬದುಕನ್ನು ಬಿಟ್ಟು ಅಂತರಂಗ ಸಾಧನೆಯಲ್ಲಿ ತೊಡಗಿಕೊಳ್ಳುವವರು ಶಿವ–ಜೀವ ಸಂಬಂಧ ಒಂದಾಗಬೇಕು. ಇದರಿಂದ ಆಧ್ಯಾತ್ಮದ ಸುಖ ಲಭಿಸುವುದು ಎಂಬುದು ಆತನ ತಿಳುವಳಿಕೆಯಾಗಿದೆ.

ಕಾಮಾಟದ ಭೀಮಣ್ಣ

ಸಮಾಜದಲ್ಲಿ ನಗಣ್ಯವೆಂದು ತಿಳಿಯಲಾಗಿದ್ದ ವೃತ್ತಿಗಳಿಗೆ, ಉನ್ನತವಾದ ಸ್ಥಾನಮಾನವನ್ನು ದೊರಕಿಸಿಕೊಟ್ಟವರು ವೃತ್ತಿನಿರತ ವಚನಕಾರರು. ತಮ್ಮ ವೃತ್ತಿಗಳ ಅವಶ್ಯಕತೆಯನ್ನು ಅದರಿಂದ

ದೊರಕುವ ಉಪಯೋಗವನ್ನು, ತಿರಸ್ಕಾರದಿಂದ ಕಾಣುವಂತವರೆಲ್ಲರಿಗೂ ತಿಳಿಸಿದರು. ಯಾವುದೇ ವೃತ್ತಿಯಿರಲಿ ಅದಕ್ಕೆ ಅದರದೇ ಆದ ಮಹತ್ವವಿದ್ದು, ಅದನ್ನು ಸಾಧನವಾಗಿ ಪರಿವರ್ತಿಸಿದರು. ವೃತ್ತಿಯನ್ನು ಮತ್ತು ವೃತ್ತಿನಿರತರನ್ನು ಕೇವಲವಾಗಿ ಕಾಣುವಂತ ವರ್ಗವನ್ನು, ಪರಂಪರೆಯನ್ನು ವಿರೋಧಿಸುವ ಮೂಲಕ ತಮ್ಮ ಅಭಿಮಾನವನ್ನು ಮೆರೆದರು. ವಚನಕಾರರ ಕಾಯಕದ ಪರಿಕಲ್ಪನೆಗೆ ವೃತ್ತಿಯನ್ನು ಒಳಗು ಮಾಡಿ ಅದರ ವಿಶೇಷತೆಯನ್ನು ತಿಳಿಸತೊಡಗಿದರು. ಇದರಿಂದ ವೃತ್ತಿ ಗೌರವವನ್ನು, ಶ್ರಮದ ಬದುಕನ್ನು ಒಪ್ಪಿಕೊಳ್ಳುವಂತೆ ಮಾಡಿದರು. ಇದೊಂದು ಹೋರಾಟವಾಗಿ ಸಮಾಜದ ಮೇಲೆ ಬೀರಿರುವ ಪ್ರಭಾವ ತುಂಬ ಶಕ್ತಿಶಾಲಿಯಾದುದು. ಹನ್ನೆರಡನೇ ಶತಮಾನದ ಕಾಯಕ ಜೀವಿಗಳ ಚಳುವಳಿಗೆ ಬಂದು ಸೇರಿದ ವೃತ್ತಿನಿರತರು ಅನೇಕರು. ಇವರು ವಚನಕಾರ ಅನುಭವಿಗಳಾಗಿ ಆಧ್ಯಾತ್ಮದ ಸಾಧನೆಯನ್ನು ಮಾಡಿದವರಾಗಿದ್ದಾರೆ. ವಚನಗಳನ್ನು ರಚಿಸಿ ಸಮಾಜದ ಸುಧಾರಣೆಗೆ ತೊಡಗಿಕೊಂಡವರಾಗಿದ್ದಾರೆ. ಇವರಲ್ಲಿ ಕಾಮಾಟದ ಭೀಮಣ್ಣ ಒಬ್ಬ ವಚನಕಾರ ನಾಗಿದ್ದಾನೆ. ಈತನ ಕುಲಮೂಲದ ಬಗ್ಗೆ, ಜೀವನದ ಬಗ್ಗೆ, ವೃತ್ತಿಯ ಬಗ್ಗೆ ಅಷ್ಟಾಗಿ ಮಾಹಿತಿಗಳು ಚರಿತ್ರೆಯಲ್ಲಿ ಅಲಭ್ಯವಿದೆ. ಈತನು ರಚಿಸಿರುವ ವಚನದ ಸಾಕ್ಷಿತ್ವದ ಮೇಲೆ ಈತನ ಬದುಕನ್ನು ನಿರ್ಧರಿಸಬೇಕಿದೆ. ಅದರಂತೆ ವೃತ್ತಿಯನ್ನು ಕೂಡ ಈತನ ವಚನಗಳಲ್ಲಿ ಬಳಕೆಗೊಂಡಿರುವ ಪರಿಭಾಷೆಗಳಲ್ಲಿ, ಪದಗಳಲ್ಲಿ ಗುರುತಿಸುವ ಪ್ರಯತ್ನವನ್ನು ಅನೇಕ ಕವಿ ಚರಿತೆಕಾರರು, ವಿದ್ವಾಂಸರು ಮಾಡಿದ್ದಾರೆ. ಈತನ ವಚನಗಳಲ್ಲಿ ಮನೆ ಕಟ್ಟುವ ಸಾಮಾಗ್ರಿಗಳು ಪದೇ ಪದೇ ಬರುವುದರಿಂದ, ಮುಖ್ಯವಾಗಿ ಅವುಗಳೇ ಅಭಿವ್ಯಕ್ತಿಯ ಮಾಧ್ಯಮಗಳಾಗಿರುವುದರಿಂದ ಈತ ಮನೆಕಟ್ಟುವ ವೃತ್ತಿಯವನೆಂದು ತಿಳಿಯಲಾಗಿದೆ. ಆಧ್ಯಾತ್ಮವನ್ನು ವಿವರಿಸುವ ವಚನಗಳನ್ನೇ ಹೆಚ್ಚಾಗಿ ರಚಿಸಿದ್ದಾನೆ. ವೃತ್ತಿಪರಿಭಾಷೆಯನ್ನು ಬಳಸಿಕೊಂಡು ರಚಿಸಿರುವ ವಚನದ ಅಭಿವ್ಯಕ್ತಿ ಹೀಗಿದೆ.

ಐಗ್ಯೆ ಮನೆ ನಾಗ್ಯೆಕಂಬ ಮೂಗ್ಯೆ ತೊಲೆ
ಭೇದ ಕರವಳವ ಹಾಕಿ ನೋಡಿ ಅರಿದಡೆ ಆಯ ಬಂದಿತ್ತು.
ಮಸದಡೆ ಆಯ ಹೋಯಿತ್ತು.
ಮೂಗೆಯ್ಯ ಕರದಲ್ಲಿ ಇದರರಿಕೆಯಾಗಿ
ಹೇಳಾ ಧಾರೇಶ್ವರಾ ನಿನ್ನಾಲಯಕ್ಕೆ.

(ಸಂಕೀರ್ಣ ವಚನ ಸಂಪುಟ ೨, ವಚನ ಸಂಖ್ಯೆ: ೪೪)

ಈ ವಚನದಲ್ಲಿ ಬೆಡಗಿನ ರೂಪದ ರಚನಶೈಲಿ ಇರುವುದನ್ನು ನೋಡುತ್ತೇವೆ. ಕಾಮಾಟದ ಭೀಮಣ್ಣ ಮನೆ ಕಟ್ಟುವುದಕ್ಕೆ ಸಂಬಂಧಪಟ್ಟಂತೆ ವಿವರಗಳನ್ನು ಈ ವಚನದಲ್ಲಿ ನೀಡಿದ್ದಾನೆ.

ಮನೆ, ಕಂಬ, ತೊಲೆ, ಆಯ, ಆಲಯ ಮುಂತಾದ ಮನೆಕಟ್ಟುವ ಸಾಮಾಗ್ರಿಗಳ ಬಳಕೆ ಯನ್ನು ಕಾಣುತ್ತೇವೆ. ಇವುಗಳು ಕೇವಲ ವಿವರಗಳಾಗಿ ಬರುವುದಿಲ್ಲ. ಒಂದು ಪ್ರತಿಪಾದಕತೆಯನ್ನು ಒಳಗೊಂಡು ಪ್ರಯೋಗಗೊಳ್ಳುತ್ತವೆ. ಭೀಮಣ್ಣ ಹೇಳಬೇಕಾಗಿರುವ ತತ್ವವನ್ನು ಸ್ಪಷ್ಟಪಡಿಸಲು ಐದು ಸಾಲಿನ ವಚನ ಸಾಕಾಗಿದೆ. ಮನೆಯನ್ನು ಕಟ್ಟಲು ಆಯವೊಂದು ಬೇಕು. ಅದು ಮನುಷ್ಯನ ಬದುಕಿಗೂ ಆಯಬೇಕು ಎಂದು ಹೇಳುವಂತಿದೆ. ಬದುಕಿನ ಜಂಜಡದಲ್ಲಿ ಲೀನವಾಗಿ ಮರೆಯಾಗುವ ಮನುಷ್ಯನು ಇಲ್ಲಿ ಆಯವನ್ನು ತಪ್ಪಿದವನಾಗಿದ್ದಾನೆ. ಮನದ ಅರಿವಿನಿಂದ ಆಧ್ಯಾತ್ಮದ ಅನುಸಂಧಾನ

ಸಾಧ್ಯ. ಅದೇ ಬದುಕು ಭದ್ರವಾಗಿ ನಿಲ್ಲುವ ಆಯವಾಗಿದೆ. ವಚನದ ಮೊದಲ ಸಾಲಿನಲ್ಲಿ ಒಂದು ಪ್ರತಿಪಾದನೆಯಿದೆ. ಅದು ಮನೆ, ಕಂಬ, ತೊಲೆಯ ರೂಪಕದಲ್ಲಿ ಬರುತ್ತದೆ. ಶರಣತತ್ವದ ಆಚರಣೆಯಲ್ಲಿ ನಿರತನಾದವನಿಗೆ ಮಾತ್ರ ಅರಿವು ದೊರಕುತ್ತದೆ ಎಂಬ ಸ್ಪಷ್ಟ ಅಭಿಪ್ರಾಯ ಬರುತ್ತದೆ. ವಚನದ ಕೊನೆಗೆ ತನ್ನ ದೈವವನ್ನೆ ಪ್ರಶ್ನಿಸುತ್ತಾನೆ. ಇಲ್ಲಿ ಕೊನೆಗೆ ಪ್ರಶ್ನೆ ಇದ್ದರೆ, ಮೊದಲಿಗೆ ಉತ್ತರವನ್ನು ಸ್ಪಷ್ಟಪಡಿಸಿರುವುದನ್ನು ನೋಡುತ್ತೇವೆ.

ಬೋದಿಗೆ ನಾಲ್ಕು, ಕಂಬವೆಂಟು, ಅರುಗುಗಾಲು ಹತ್ತು,
ತೊಲೆಯೊಂದೇ ಏರಿತ್ತು.
ಮುಚ್ಚಳವಲಗಿಗೆ ದಿಕ್ಕು ಕಾಣದೆ
ಕರ್ಮಕಾಂಡಿಗಳೆಲ್ಲರು ಕಾಮನ ಕಾಮಾಟಕ್ಕೆ ಒಳಗಾಗಿ ಹೋದರು.
ಈ ಗುಣವ ನಾನು ನೀನೆಂಬುದ ತಿಳಿದುನೋಡು
ಧಾರೇಶ್ವರಲಿಂಗವನರಿವುದಕ್ಕೆ

(ಸಂಕೀರ್ಣ ವಚನ ಸಂಪುಟ ೨, ವಚನ ಸಂಖ್ಯೆ: ೪೬)

ಭೀಮಣ್ಣನು ತನ್ನ ವಚನಗಳಲ್ಲಿ ಪದ ರಚಿಸಿಕೊಳ್ಳುವ ರೀತಿಯೇ ವಿಶೇಷವಾದುದ್ದು. ನಾಲ್ಕು, ಎಂಟು, ಹತ್ತು, ಒಂದು ಎಂಬ ಸಂಖ್ಯಾವಾಚಕ ಪದಗಳಿಂದಲೇ ವಚನವನ್ನು ನಿರ್ಮಿಸಿದ್ದಾನೆ. ಇವುಗಳಿಗೆ ವಿಶೇಷ ಅರ್ಥವ್ಯಾಪ್ತಿಯ ಹರವು ಇರುವುದನ್ನು, ಆಧ್ಯಾತ್ಮದ ವಿಷಯ ಮಂಡನೆಗೆ ಬಳಕೆಗೊಳ್ಳುವ ಸಂಕೇತಗಳಾಗಿವೆ. 'ಕರ್ಮ ಕಾಂಡಿಗಳೆಲ್ಲರು ಕಾಮನ ಕಾಮಾಟಕ್ಕೆ ಒಳಗಾಗಿ ಹೋದರು' ಶ್ಲೇಷಾರ್ಥವನ್ನು ಒಳಗೊಂಡಿದೆ. ತನ್ನತನದ ಅಭಿಮಾನವನ್ನು ಹೇಳುತ್ತಿದ್ದರೆ, ಜಗದಲ್ಲಿರುವ 'ಭವಿ'ಗಳು ಪರಮಾತ್ಮ ಇರುವುದನ್ನು ಕಾಣದೆ. ಆತ್ಮದ ಅರಿವನ್ನು ಕಾಣದೇ ತೊಳುತ್ತಿರುವವರನ್ನು ಕುರಿತೇ ವಿಷಾದ ವ್ಯಕ್ತಿಪಡಿಸುತ್ತಾನೆ. ಜೀವನದ ಮೋಹದಲ್ಲಿಯೇ ಬಂದಿಗಳಾಗಿರುವವರನ್ನು, ಸಂಸಾರದಲ್ಲಿ ಮುಳುಗಿ ಸಾಯುವವರನ್ನು ಕರ್ಮ ಕಾಂಡಿಗಳು ಎನ್ನುತ್ತಾನೆ. ಶಿವ ಮತ್ತು ನರನ ಮಧ್ಯದ ಸಂಬಂಧ ಹೇಳುತ್ತಾನೆ. 'ನಾನು ನೀನೆಂಬುದು ತಿಳಿದುನೋಡು' ಎನ್ನುವಲ್ಲಿ ಆಧ್ಯಾತ್ಮದ ತತ್ವವಡಗಿರುವುದು. ಮಾನವ ತನ್ನನ್ನು ತಾನು ಅರಿತು ಕೊಳ್ಳಬೇಕು. ಈ ಭೂಮಿಗೆ ಬಂದದ್ದು ನಾನೋ, ತಂದದ್ದು ಶಿವನೋ ಎಂಬ ಪ್ರಶ್ನೆಗಳೇಳಬೇಕು. ಹಾಗಾದಾಗ ಶಿವನ ಅರಿವು ಮೂಡುತ್ತದೆ. ನಾನು ಎಂಬುದು ಹೋಗಿ ನೀನು ಶಿವ ಎಂಬುದು ನೆಲೆ ನಿಲ್ಲುತ್ತದೆ. ನಿಜತತ್ವದ ತಿಳುವಳಿಕೆ ಬಂದಾಗ ಶಿವನನ್ನು ಕಾಣುತ್ತಾನೆ. ಎಂದು ಲೋಕದಲ್ಲಿ ಹುಟ್ಟಿ ಸಾಯುವ ಸಾಮಾನ್ಯರಿಗೆ ಅರಿವಿನ ಜ್ಞಾನವನ್ನು, ಶಿವನ ಸತ್ಯವನ್ನು ಹೇಳುತ್ತಾನೆ. ಅರಿವಿಗಾಗಿ ಬದುಕನ್ನು ತಿಳಿದು ನೋಡು ಸತ್ಯ, ಅಸತ್ಯಗಳ ಬಗ್ಗೆ ತಿಳಿದು ನೋಡು ಎಂದು ನಿರ್ದೇಶನ ನೀಡುತ್ತಾನೆ. ಭೀಮಣ್ಣ ಈ ವಚನದಲ್ಲಿ ತನ್ನ ವೃತ್ತಿಯ ಪದಬಳಕೆಯಲ್ಲಿ ತನ್ನ ತಿಳುವಳಿಕೆಯನ್ನು ಭೋಧಿಸುವ ಕ್ರಮವಂತೂ ಗಮನೀಯವೇ ಸರಿ. ತಾನು ಹೇಳಬೇಕಾಗಿರುವುದು ಏನನ್ನು ಎಂಬ ಸ್ಪಷ್ಟತೆ ಇರುವುದನ್ನು ವಚನಗಳಲ್ಲಿ ಕಾಣುತ್ತದೆ. ವೃತ್ತಿಯ ಅನುಭವವನ್ನು, ವೃತ್ತಿಯ ಪರಿಕರಗಳನ್ನು ತತ್ವ ಪ್ರತಿಪಾದನೆಗೆ ದುಡಿಸಿಕೊಳ್ಳುತ್ತಿರುವುದರಿಂದ ವಚನದ ಅಭಿವ್ಯಕ್ತಿಗೆ ಗಟ್ಟಿತನವೊಂದು ದೊರಕಿದೆ ಎಂದೆನಿಸುತ್ತದೆ.

ನಗೆಯ ಮಾರಿತಂದೆ

ವಚನ ಚಳುವಳಿಗೆ ಸೇರಿಕೊಂಡ ಅನೇಕ ವೃತ್ತಿ ಮೂಲದವರಲ್ಲಿ ಜನಪದ ಕಲೆಗಾರಿಕೆಯ ಹಿನ್ನೆಲೆಯುಳ್ಳವರು ಸೇರಿಕೊಂಡು, ಸಾಧನೆ ಮಾಡಲು ತೊಡಗಿದರು. ಅವರಲ್ಲಿ ನಗೆಯ ಮಾರಿತಂದೆ ಒಬ್ಬ. ಈತನ ನೂರಾ ಒಂದು ವಚನಗಳು ಲಭ್ಯವಿವೆ. ವೃತ್ತಿ ಮತ್ತು ಶರಣತ್ವ ಎರಡನ್ನು ಏಕ ದೃಷ್ಟಿಯಲ್ಲಿ ಕಂಡವನು ನಗೆಯ ಮಾರಿತಂದೆ.

ವಚನಕಾರರ ಚಳವಳಿಯಲ್ಲಿ ವೃತ್ತಿಗೆ ಮಹತ್ವದ ಸ್ಥಾನ ನೀಡಲಾಗಿದೆ. ವೃತ್ತಿನಿಷ್ಠೆ ಪ್ರಾಮಾಣಿಕತೆ ಯನ್ನೊಳಗೊಂಡು ಚಿತ್ತಶುದ್ಧಿಯಿಂದ ಮಾಡುವಂತಹದ್ದಾಗಿರಬೇಕು. ಬದುಕು ಮತ್ತು ಅರಿವು, ಶ್ರಮ ಮತ್ತು ಜ್ಞಾನ ಇವು ಒಂದಕ್ಕೊಂದು ಹೊಂದಿಕೊಂಡೆ ನಡೆಯಬೇಕು. ಬದುಕು ಅಥವಾ ಕ್ರಿಯೆ, ಜ್ಞಾನದಿಂದ, ಅರಿವಿನಿಂದ ತಿಳುವಳಿಕೆಯನ್ನು ಹೊಂದಿ, ಬದುಕುವುದು ಇದು ವೃತ್ತಿನಿರತ ವಚನಕಾರರ ನಿಲುವು. ಕಾಯಕತತ್ವ, ವೃತ್ತಿ ಯಾವುದೇ ಇರಲಿ, ಕಾಯದಂಡೆನೆಯಿಂದಾದರೂ ಸರಿ, ಬುದ್ಧಿಯ ಪ್ರಯೋಗದಿಂದಾದರೂ ಸರಿ. ಸತ್ಯಶುದ್ಧವಾಗಿರಬೇಕು ನಿಜತತ್ವವನೊಡಗೂಡಿರಬೇಕು.

ಹರಿಗೋಲು ಹರಿವ ಮತ್ತೆ ಹೊಳೆಯೇನು ಮಾಡುವುದು?
ಇರಿದವನಿದ್ದಂತೆ ಕೈದೇನ ಮಾಡುವುದು?
ಎಚ್ಚವನಿದ್ದಂತೆ ಅಂಬಿಗೆ ಮುನಿವರೆ?
ಎನ್ನ ಚಿತ್ತದಲ್ಲಿ ಕಲೆದೋರಿ, ನೀನಾಡಿಸಿದಂತೆ ಆಡಿದೆ.
ನೀ ಕೊಟ್ಟ ಕಾಯಕವ ಹೊತ್ತೆ, ನೀ ಹೇಳಿದ ಬಿಟ್ಟಿಯ ಮಾಡಿದೆ.
ಕುಳದವನಾದ ಮತ್ತೆ ಮಾನ್ಯರ ಒಲವರ ಎನಗೊಂದು ಗುಣವಿಲ್ಲ.
ನೀನಾಡಿಸಿದಂತೆ ಆಡಿದೆ, ಆತುರವೈರಿ ಮಾರೇಶ್ವರಾ.

(ಸಂಕೀರ್ಣ ವಚನ ಸಂಪುಟ ೨, ವಚನ ಸಂಖ್ಯೆ: ೧೨೬೬)

ಮಾರಿತಂದೆಯ ಈ ವಚನ ಆತನ ಅನುಭಾವವನ್ನು ಕಟ್ಟಿಕೊಟ್ಟಿದೆ. ವಚನದ ಮೊದಲ ಮೂರು ಸಾಲುಗಳಲ್ಲಿ ಪ್ರಶ್ನೆಯಿದೆ. ಮತ್ತೆ ಮುಂದಿನ ಸಾಲುಗಳಲ್ಲಿ ಉತ್ತರವನ್ನು ಕಂಡುಕೊಳ್ಳುತ್ತಾನೆ. ಇದೊಂದು ಅಂತರಂಗದ ಶೋಧವನ್ನು ಮಾಡುತ್ತಿರುವ ವಚನವಾಗಿದೆ.

'ಮಾಡಿದೆನೆಂಬುದು ಮನದಲ್ಲಿ ಹೊಳೆದಡೆ ಏಡಿಸಿ ಕಾಡಿತ್ತು ಶಿವನ ಡಂಗುರ' ಎಂಬ ಬಸವಣ್ಣನ ಮಾತನ್ನು ನೆನಪಿಸಿ ಬಿಡುತ್ತದೆ. ನುಡಿಗಟ್ಟು, ಗಾದೇ ಮಾತುಗಳು ಪ್ರಶ್ನೆಗಳಾಗಿ ಬಳಕೆಗೊಂಡು ವಚನದ ತಾತ್ವಿಕತೆಯನ್ನು ಹೆಚ್ಚಿಸಿವೆ. ಮಾರಿತಂದೆ ನಾ ಮಾಡುವ ಕಾಯಕ ನನ್ನದಲ್ಲ. ಏಕೆಂದರೆ ನನ್ನ ಅಂತಹ ಕಲೆಯನ್ನು ತುಂಬಿಸಿದವನೇ ನೀನು. ಈ ಲೋಕದಲ್ಲಿ ನಾನೊಂದು ರೂಪ. ನೀನಿರಿಸಿದಂತೆ ನಾನಿರುವೆ. ನೀನಾಡಿಸಿದಂತೆ ನಾನಾಡುವೇ ಎಂಬ ಮಾತು ಮಾರಿತಂದೆಯದು. ಬದುಕನ್ನು ಕೊಟ್ಟಾತ ನೀನು ಹಾಗಾಗಿ ನೀಕೊಟ್ಟ ಕಾಯಕ ಮಾಡಬೇಕಾದುದು ನನ್ನ ಕರ್ತ್ಯವ್ಯ. ನೀ ಹೇಳಿದ ಸೇವೆ ಮಾಡುವ ಸೇವಕ ಎಂದು ಹೇಳುತ್ತಾನೆ. ಆತನ ನಿಷ್ಠೆ, ಪ್ರಾಮಾಣಿಕತೆ, ಒಡೆಯಂಗೆ ಅರ್ಪಿತ. ಶಿವನಿಗೆ ಅರ್ಪಿತ ಇದೂ ಸಾಧಕನ

ಗುಣವಾಗಿದೆ. ನಾನು ನನ್ನದು, ನಾಮಾಡಿದ್ದು ಎಂಬ ಮಾಯೆಗೊಳಗಾದರೆ ಅರಿವು ದೂರದ ಮಾತೇ ಸರಿ. ಹಾಗಾಗಿ ಅರವಿನ ಹುಡಕಾಟ ನಡೆಸಿದವರು ಶಿವನಿಗೆ ಅರ್ಪಣೆಗೊಂಡಿರುತ್ತಾರೆ. ಅವರು ನಿಮಿತ್ತ ಮಾತ್ರವಾಗಿರುತ್ತಾರೆ. ಅಂತರಂಗ ಸಾಧನೆಯನ್ನು, ಕಾಯಕದೊಳಗಾಗಿ ಮಾಡುವುದು ಶರಣರಿಗೆ ಮಾತ್ರ ಸಾಧ್ಯ ಎಂಬ ಭಾವ ಸ್ಪುರಿಸುತ್ತದೆ.

ಭಕ್ತನಾಗಿ ಹುಟ್ಟಿ ಮತ್ತೊಬ್ಬನಲ್ಲಿ ಬೇಡುವುದೆ ಕಷ್ಟ.
ಹೊತ್ತು ಹೋರಿ ಭೂಮಿಯ ಅಗೆವಲ್ಲಿ
ಮೊತ್ತದ ಜೀವಂಗಳು ಸತ್ತುದ ದೃಷ್ಟವ ಕಂಡಲ್ಲಿಯೆ
ಮಾಡುವ ಮಾಟ ನಷ್ಟ.
ಇದನರಿತು ವಿರಕ್ತರಾಗಿ ಹೋದಲ್ಲಿ,
ಮತ್ತೊಬ್ಬರ ಅಪ್ಪಾ, ಅಣ್ಣಾ ಎಂದು ಚಿತ್ತ ಕಲಕುವುದು ಕಷ್ಟ.
ಈ ಹೊತ್ತ ದೇಹಕ್ಕೆ ನಗೆಯ ಬೆತ್ತದ ಕಾಯಕ, ಇದನೊಪ್ಪುಗೊ
ಆತುರವೈರಿ ಮಾರೇಶ್ವರಾ.

(ಸಂಕೀರ್ಣ ವಚನ ಸಂಪುಟ ೨, ವಚನ ಸಂಖ್ಯೆ: ೧೨೪೭)

ಭಕ್ತನಾದವನು ಶಿವನಿಷ್ಠೆಯುಳ್ಳವನು. ಅವನು ಪರರ ಹಂಗಿಗೆ ಸಿಲುಕದ ಸ್ವಾಭಿಮಾನಿ. ಅವನು ಕಾಯಕದಿಂದ ಬಂದುದರಲ್ಲಿಯೇ ತೃಪ್ತಿಗೊಳ್ಳುವುನು. ಆಸೆ, ಆಮೀಷಕ್ಕೆ ಬಲಿಯಾಗಿ ತನ್ನತನವನ್ನು ಎಂದಿಗೂ ಕಳೆದುಕೊಳ್ಳುವುದಿಲ್ಲ. ಒಂದು ವೇಳೆ ಅವನು ಬೇಡಿ ಬದುಕಿದನಾದರೆ ಅವನು ಭಕ್ತನಲ್ಲ. ಮುಖ್ಯವಾಗಿ ವಚನಕಾರರ ತತ್ವ ಬೇಡುವುದನ್ನು ಒಪ್ಪುವುದಿಲ್ಲ. ಎಲ್ಲವು ಶಿವನದಾನ, ಹಾಗಾಗಿ ಮನುಷ್ಯನನ್ನು ಬೇಡಿ ಬದುಕುವುದು ಕಷ್ಟ. ಭಕ್ತನಾದವನು ನಂಬ ಬೇಕಾದುದು ಕಾಯಕವನ್ನು ಮಾತ್ರ ಎಂಬುದು ಮಾರಿತಂದೆಯ ನಿಲುವು. ಕಾಯಕನಿಷ್ಠೆ ಮುಖ್ಯಚಿಂತನೆಯಾಗಿ ಇಲ್ಲಿದೆ.

ಕೋಡಗಕ್ಕೆ ಏಡಿಸುವ ಭ್ರಾಂತು,
ಹುಲಿಗೆ ಹೊಯಿವ ಗದಕ, ಬಲಿಗೆ ಬಂಟನ ಚಿಂತೆ.
ಎನಗೆ ಎಲ್ಲರ ಗೆಲ್ಲುವ ಚಿಂತೆ, ನೀ ಕೊಟ್ಟ ಕಾಯಕ.
ಆತುರವೈರಿ ಮಾರೇಶ್ವರಾ.

(ಸಂಕೀರ್ಣ ವಚನ ಸಂಪುಟ ೨, ವಚನ ಸಂಖ್ಯೆ: ೧೨೧೨)

ನಿಷ್ಠಾಪೂರ್ಣ ವೃತ್ತಿಯೇ ಶಿವನ ಪ್ರಸಾದ. ಅದು ನೀ ಕೊಟ್ಟದ್ದು ಎಂದು ಶಿವನಿಗೆ ತನ್ನ ನಿಷ್ಠೆಯನ್ನು ಮಾರಿತಂದೆ ಒಪ್ಪಿಸುವಂತಿದೆ. ಸಮಕಾಲೀನ ಜನರ ಬದುಕಿನ ಅರಿವಿದ್ದ ಮಾರಿತಂದೆಗೆ ತನ್ನ ನಿಲುವುಗಳ ಸ್ಪಷ್ಟತೆಯು ಇದೆ. ಈ ವಚನದ ಮೂಲಕ ಸಮಾಜದ ಜಡ ಬದುಕನ್ನು ಅನುಸರಿಸುವವರನ್ನು ಕುರಿತೆ ಹೇಳಿದಂತಿದೆ. ಜೀವನದ ಜಂಜಡದಲ್ಲಿ ಮುಳುಗಿದವರನ್ನು ಕೋಡಗ, ಹುಲಿ ಬಂಟ ಮುಂತಾಗಿ ಹೋಲಿಸಿ ನುಡಿದ್ದಾನೆ. ಮುಖ್ಯವಾಗಿ ವಿಡಂಬನಾತ್ಮಕವಾಗಿಯೇ ಈ ವಚನ ಆರಂಬಗೊಂಡು, ವೃತ್ತಿ ನಿಷ್ಠೆಯಲ್ಲಿ ಪ್ರತಿಪಾದನೆಗೊಂಡು ಕೊನೆಗೊಳ್ಳುತ್ತದೆ. ಮನುಷ್ಯನನ್ನು

ಕೋಡಗಕ್ಕೆ ಹೋಲಿಸುತ್ತಾ ಅವನು ಸಂಸಾರ ಭ್ರಾಂತಿಯಲ್ಲಿ ಮುಳುಗಿ ತನ್ನನ್ನೆ ತಾನು ಅರಿಯದವನಾಗಿದ್ದಾನೆ. ವಚನಕಾರರ ಇಂತವರನ್ನು ಕಂಡು ಮರುಗುತ್ತಾನೆ. ಮತ್ತು ಮೋಸ, ವಂಚನೆ, ಅಪ್ರಾಮಾಣಿಕತೆಯನ್ನು ಬದುಕಾಗಿಸಿಕೊಂಡು ಜೀವನ ಮಾಡುವ ಜನರನ್ನು ಒಪ್ಪಿಸಿ ಬದುಕಬೇಕಲ್ಲ ಎಂಬ ಚಿಂತೆ ಕಾಡಿದೆ. ಹಂತವರಿಗೆ ಅರಿವು ಮೂಡುವುದು ಹೇಗೆ ಎಂದು ವಿಷಾದ ಪಡುತ್ತಾನೆ. ಭ್ರಾಂತಿಗೆ ಬಲಿಯಾದವರನ್ನು ಗೆಲ್ಲುತ್ತೇನೆ. ಇದು ನೀ ಕೊಟ್ಟ ಕಾಯಕ ನಾನು ಮಾಡುತ್ತೇನೆಂಬ ವಿಶ್ವಾಸ ಆತನದು.

ಎನ್ನ ಕೈಯಲ್ಲಿ ಕೊಟ್ಟುದ ದೇವರೆಂದಿದ್ದೆ.
ಇದು ಮೆಲ್ಲ ಮೆಲ್ಲನೆ ಕಲ್ಲಾಗಿ ಬರುತ್ತಿದೆ; ಇದ ನಾನೊಲ್ಲೆ
ಬಲ್ಲವರು ಹೇಳಿ; ಉಂಬಡೆ ಬಾಯಿಲ್ಲ, ನೋಡುವಡೆ ಕಣ್ಣಿಲ್ಲ.
ಎನ್ನ ಬಡತನಕ್ಕೆ ಬೇಡುವಡೆ ಏನೂ ಇಲ್ಲ.
ಆರುತವೈರಿ ಮಾರೇಶ್ವರಾ.

(ಸಂಕೀರ್ಣ ವಚನ ಸಂಪುಟ ೨, ವಚನ ಸಂಖ್ಯೆ: ೧೧೯೧)

ವಚನಕಾರರ ಮುಖ್ಯ ನಿಲುವು ಅರಿವಿನೆಡೆಗೆ ಸಾಗುವುದು. ಹೀಗೆ ಸಾಗುವಲ್ಲಿ ಕುರುಹಾಗಿ ಲಿಂಗವನ್ನು ಕಂಡಿದ್ದಾರೆ. ಅರಿವು ಮೂಡಿದ ಮೇಲೆ ಲಿಂಗದ ಹಂಗೇಕೆ? ಎಂದು ಕೆಲವು ವಚನಕಾರರು ಅಭಿಪ್ರಾಯಕ್ಕೆ ಬರುತ್ತಾರೆ. ಅದರಂತೆಯೇ ಮಾರಿತಂದೆಯು ಲಿಂಗವನ್ನು ಜಡತ್ವದಲ್ಲಿ ಕಾಣಲು ಇಷ್ಟಪಡುತ್ತಿಲ್ಲ. ಹಾಗಾಗಿ ಲಿಂಗವನ್ನೆ ನಿರಾಕರಿಸುತ್ತಾನೆ. ಮುಖ್ಯವಾಗಿ ಕಾಯಕ ತತ್ವವನ್ನು ಅನುಸರಿಸಿರುವ ವಚನಕಾರರಿಗೆ ಜಡತ್ವದ ದೈವಕ್ಕಿಂತ ಶ್ರಮದ ದೇವರನ್ನು ನಂಬಿದವರು. ಅವರಿಗೆ ವೃತ್ತಿ ದೇವರು. ಕಾಯಕವೇ ಅರಿವಿನ ಸಾಧನ. ನಿಷ್ಠೆಯೇ ಆಧಾರ. ಹಾಗಾಗಿ ವೃತ್ತಿನಿರತರು ಶಿವನನ್ನು ಸೇರುವುದು ವೃತ್ತಿನಿರತತೆಯಿಂದಲೇ. ಮಾರಿತಂದೆಯ ವಚನದ ಅಭಿವ್ಯಕ್ತಿಯ ನಿಲುವು ಇದಾಗಿದೆ.

ತಳವಾರ ಕಾಮಿದೇವಯ್ಯ

ಹನ್ನೆರಡನೇ ಶತಮಾನ ಅನಕ್ಷರಸ್ಥರನ್ನು ಸಾಹಿತ್ಯದೆಡೆಗೆ ಬರುವಂತೆ ಮಾಡಿತು. ಇದಕ್ಕೆ ವಚನಕಾರರ ಕಲ್ಯಾಣದ ಮಹಾಮನೆ ದೊಡ್ಡ ವೇದಿಕೆಯಾಗಿತ್ತು. ಕೇವಲ ಶಾಸ್ತ್ರ, ಪುರಾಣ ಬಲ್ಲಂತವರು, ಅಕ್ಷರವನ್ನು ಸ್ವಂತ ಸ್ವತ್ತಾಗಿಸಿಕೊಂಡಿದ್ದ ಸಮುದಾಯದವರು ಮಾತ್ರ ಸಾಹಿತ್ಯ ರಚಿಸುವ, ಓದುವುದನ್ನು ಮಾಡುತ್ತಿದ್ದರು. ಸಮಾಜ ನಾನಾ ವರ್ಗವರ್ಣದ ಜನರಿಗೆ ಅಕ್ಷರದ ವಾಸನೆಯನ್ನು ಸವಿಯಲು ಬಿಡುತ್ತಿರಲಿಲ್ಲ. ಅಂತಹ ಸಂದರ್ಭದಲ್ಲಿ ಹುಟ್ಟಿಕೊಂಡು ಜನಾಂದೋಲನ ವಾಗಿದ್ದುದು, ವಚನ ಚಳುವಳಿ. ಅಕ್ಷರ ಬಲ್ಲವರು, ಬಲ್ಲದೇ ಇರುವವರು ಸಾಹಿತ್ಯದ ಭಾಗವಾಗಿ ನಿಲ್ಲಲು ಅವಕಾಶ ಮಾಡಿಕೊಟ್ಟವರು ವಚನಕಾರರು, ಈ ದಿಸೆಯಲ್ಲಿ ಕೆಳಸಮುದಾಯದ ಕಾಮಿದೇವಯ್ಯ ಈ ಸಮೂಹವನ್ನು ಸೇರಿಕೊಂಡು, ಅನುಭಾವದಲ್ಲಿ ತೊಡಗಿಕೊಂಡವನಾಗಿದ್ದಾನೆ. ಅನುಭವ ಮಂಟಪದ ಚರ್ಚಾಕೂಟಗಳು ಜ್ಞಾನ ವಿಸ್ತರಣ, ಪ್ರಸರಣ ಕಾರ್ಯ ಮಾಡಿದ್ದು ನಿಜ. ಅದರ ಫಲವಾಗಿ ವಚನ ಸಾಹಿತ್ಯದ ವಿಫುಲ ಉಪಲಬ್ಧತೆ ಇದೆ.

ತಳವಾರ ವೃತ್ತಿಯನ್ನು ಮಾಡುತ್ತಿದ್ದ ಕಾಮಿದೇವಯ್ಯನು ವಚನಕಾರನಾಗಿ ಹೊರ ಹೊಮ್ಮಿದ್ದಾನೆ. ಈತನ ಹತ್ತು ವಚನಗಳಿದ್ದು, ಸರಳವಾದ ರಚನೆಯಿಂದ ಮೂಡಿಬಂದಿವೆ. ಕೆಲವು ವಚನಗಳಲ್ಲಿ ತನ್ನ ಅನುಭವವನ್ನು ಕಟ್ಟಿಕೊಟ್ಟಿದ್ದಾನೆ. ತನ್ನ ವೃತ್ತಿಯ ಬಗೆಗಿನ ಮಾಹಿತಿ ಆತನ ವಚನಗಳಿಂದಲೇ ಕಾಣುವುದು ಕಷ್ಟ. ಸಾಮಾಜಿಕವಾಗಿ ಅಭಿವ್ಯಕ್ತಗೊಳ್ಳುವುದನ್ನು ನೋಡುತ್ತೇವೆ. ಭೃತ್ಯಾಚಾರ, ಗುರು, ಲಿಂಗ, ಜಂಗಮ ನಿಷ್ಠೆ, ಶಿವಸಿದ್ಧಾಂತದ ಪ್ರತಿಪಾದನೆಯೇ ಹೆಚ್ಚಾಗಿ ವಚನಗಳಲ್ಲಿ ಕಾಣಿಸಿಕೊಳ್ಳುತ್ತದೆ. ತಾನು ಸಮಾಜವನ್ನು ತಿದ್ದುವ ಜವಾಬ್ದಾರಿ ಹೊತ್ತವನು ಎಂಬ ಭಾವದ ವಚನಗಳು ಇವೆ. ಸಮಾಜದ ವಿಡಂಬನೆ. ಸಮಾನತೆಯ ತತ್ವವು ಸೇರಿರುವುದನ್ನು ನೋಡುತ್ತೇವೆ. ಇನ್ನು ತನ್ನತನವನ್ನು ಹೇಳುವ ಪ್ರಯತ್ನ ಕಂಡರೂ, ಅದು ಅಸ್ಪಷ್ಟ ಅಂತೇನು ಅನಿಸುವುದಿಲ್ಲ. ಸೇವಾ ವೃತ್ತಿಯನ್ನು ಕೈಗೊಂಡಿದ್ದರಿಂದ, ಸಹಜವಾಗಿ ಸೇವಾ ಮನೋಭಾವನೆ ಉಳ್ಳವನಾಗಿದ್ದಾನೆ.

> ಮನೆಯನೊಪ್ಪಿಸಿ ಕೊಟ್ಟುವಂಗೆ ಹಿಂದೆಸೆಯ ಹಂಗೇಕೆ?
> ಮಾಡಿಹೆನೆಂಬ ಮಾಟ ಉಳ್ಳವಂಗೆ ಅವರಿವರಾಡಿಹೆರೆಂಬ ಸಂದೇಹವೇಕೆ?
> ಗುಡಿಯ ಕಟ್ಟದ ಮತ್ತೆ ಹಡಹಲ್ಲದೆ ಅವರಡಿಯನರಸಲೇಕೆ?
> ಕಾಮಹರ ಪ್ರಿಯ ರಾಮನಾಥಾ.
>
> (ಸಂಕೀರ್ಣ ವಚನ ಸಂಪುಟ ೨, ವಚನ ಸಂಖ್ಯೆ: ೯೧೮)

ಈ ವಚನದಲ್ಲಿ ಪ್ರಶ್ನೆಗಳೇ ಇರುವುದು ಕಾಣುತ್ತದೆ. ಎಲ್ಲಿಯು ವಚನಕಾರ ಉತ್ತರವನ್ನು ಹೇಳುವುದಿಲ್ಲ. ಆದರೆ ಆ ಪ್ರಶ್ನೆಗಳ ಒಳಗಿನ ಭಾವಾರ್ಥದಲ್ಲಿಯೇ ಉತ್ತರ ಅಡಗಿರುವುದನ್ನು ನೋಡುತ್ತೇವೆ. ಓದುಗರಿಗೆ ಉತ್ತರ ತಮ್ಮ ಒಳಗೆ ಕಂಡುಕೊಳ್ಳುವಂತೆ ರಚನೆಗೊಂಡಿದೆ. ಇಲ್ಲೊಂದು ನೋವಿನ ನುಡಿಯಾಗಿ ಕಾಣುತ್ತದೆ. ಮತ್ತು ಎರಡನೇ ಸಾಲಿನಲ್ಲಿ ನಿಷ್ಠೆಯನ್ನು ಹೇಳುಕೊಳ್ಳುತ್ತಿರುವುದು ಕಾಣುತ್ತದೆ. ಮುಂದುವರೆದು ನಿಷ್ಠೆಯಿಂದ ವೃತ್ತಿಯನ್ನು ಮಾಡುವವನಿಗೆ, ಲೋಕದ ಜನರು ಸಿಕ್ಕ ಸಿಕ್ಕಂತೆ ಮಾತಾಡಿದರೇ, ನಿಜತತ್ವದ ಅಡಿಯಲ್ಲಿ ಬದುಕುವ ಶರಣಂಗೆ ಈ ಜಗದ ಜಂಜಡ ಜೀವಿಗಳ ಹಂಗೇಕೆ ಎಂದು ಕೇಳುತ್ತಾನೆ. 'ಜಯ ಜೀಯಾ' ಎಂದು ಕೇಳಬೇಕಾದುದು ಶಿವನನ್ನು, 'ಜಯ ಜೀಯಾ' ಎಂದು ಬೇಡ ಬೇಕಾದುದು ಶಿವನನ್ನು, ಶಿವನನ್ನು ಹೊರತು ಪಡಿಸಿ ಮಾನವರ ಹಂಗು ತೊರೆದವರು ವಚನಕಾರರು. ಇದು ಶಿವನಿಷ್ಠೆ. ಕೊಡುವುದೆಲ್ಲವು ಶಿವನದೆ. ಆದರೆ ಮಾಡಬೇಕಾದುದು ನಾನು ಅದನ್ನು ಮಾಡಲೇಬೇಕು. ಆಳಾಗಿ, ತೊತ್ತಾಗಿ, ಡಿಂಗರಿಗನಾಗಿ, ನಿಷ್ಠೆ, ಪ್ರಾಮಾಣಿಕತೆ ಮುಖ್ಯವಾದಾಗ ಬದುಕು ಅನುಭಾವವಾಗುತ್ತದೆ. ಅರಿವಿನ ಲೋಕ ಕಾಣುತ್ತದೆ. ಈ ಹಂಬಲದ ಆಧ್ಯಾತ್ಮದ ಜೀವಿಯಾಗಿ ತಳವಾರ ಕಾಮಿದೇವಯ್ಯ ನಿಲ್ಲುತ್ತಾನೆ.

ಜೋದರ ಮಾಯಣ್ಣ

ನಿಷ್ಠೆ, ಪ್ರಾಮಾಣಿಕತೆಯಿಂದಲೇ ವೃತ್ತಿನಿರತರು ತಮ್ಮ ಸಾಧನೆಯ ಮೂಲವನ್ನು ವೃತ್ತಿಯಲ್ಲಿ ಕಂಡು ಕೊಂಡವರು. ಇವರಿಗೆ ವೃತ್ತಿಯೇ ಕೈಲಾಸ. ವೃತ್ತಿ ಮಾಡುವಾಗ ಪರಶಿವನೂ ಇವರಿಗೆ

ಲೆಕ್ಕಕ್ಕಿಲ್ಲ. ಅಂತಹ ವೃತ್ತಿನಿಷ್ಠರು. ಅವರ ಅನುಭವಗಳು ವೃತ್ತಿಯಿಂದಲೇ ಮೂಡಿದವುಗಳಾಗಿವೆ. ಅಂತಹ ಅನುಭವವನ್ನು ಕಟ್ಟಿರುವುದು ವಚನಗಳಲ್ಲಿ. ಬದುಕು, ಆಧ್ಯಾತ್ಮ ಗುರು-ಲಿಂಗ ಎಲ್ಲವೂ ಇವರಿಗೆ ವೃತ್ತಿಯಿಂದಲೇ ಲಭಿಸಿದೆ. ಅನೇಕ ವಚನಕಾರರು ತಮ್ಮ ವೃತ್ತಿಯ ಅನುಭವವನ್ನು ವಚನಗಳ ಮೂಲಕ ಅಭಿವ್ಯಕ್ತಿಸಿದ್ದಾರೆ. ಇನ್ನು ಕೆಲವು ವಚನಕಾರರಿಗೆ ಅದು ಸಾಧ್ಯವಾಗಿಲ್ಲ ಎಂದೇ ಕಾಣುತ್ತದೆ. ತಮ್ಮ ಚರಿತ್ರೆಯನ್ನು ಹೇಳಿಕೊಳ್ಳಲು ಬಯಸದ ವಚನಕಾರರು, ತಮ್ಮ ವೃತ್ತಿಯ ಪರಿಕರಗಳ ಮೂಲಕ ವಚನಗಳನ್ನು ರಚಿಸಿ, ವೃತ್ತಿ ಬಗ್ಗೆ ತಿಳಿಸಿದ್ದಾರೆ. ಆದರೆ, ಕೆಲವು ವಚನಕಾರರ, ಕೆಲವೇ ಕೆಲವು ವಚನಗಳು ಉಪಲಬ್ದವಿದ್ದು, ಅಂತವರ ವೃತ್ತಿಯ ಬಗ್ಗೆ ಮಾಹಿತಿ ಅಷ್ಟಾಗಿ ದೊರೆಯುವಿದಿಲ್ಲ. ಅಂತವರಲ್ಲಿ ಜೋದರ ಮಾಯಣ್ಣ ಒಬ್ಬ ವಚನಕಾರ. ಈತ ತಾನು ಮಾಡುತ್ತಿದ್ದ ಆನೆಪಡೆಯ ಮೇಲಾಧಿಕಾರಿಯ ಕೆಲಸ ಮತ್ತು ಪ್ರಭುತ್ವದ ಕೈಯಲ್ಲಿ ಕೆಲಸ ಮಾಡಿದ ಅನುಭವವನ್ನು ಅಧಿಕಾರ ವರ್ಗದ ರೂಪಕವನ್ನು ಬಳಸಿಕೊಂಡೆ ವಚನವನ್ನು ರಚಿಸಿದ್ದಾನೆ.

ಎನ್ನ ಪ್ರಾಣ ಮನ ಬುದ್ಧಿ ಚಿತ್ತಂಗಳು ನಿಮ್ಮ ತೊತ್ತಿರಯ್ಯಾ.
ಸತ್ವ ರಜ ತಮಂಗಳು ನಿಮ್ಮ ಭೃತ್ಯರಯ್ಯಾ,
ಅಂತಃಕರಣ ಚತುಷ್ಟಯಂಗಳು ನಿಮ್ಮ ಮಂತ್ರಿಗಳಯ್ಯಾ.
ಪಂಚೇಂದ್ರಿಯಂಗಳು ನಿಮ್ಮ ಪಡಿಹಾರರಯ್ಯಾ.
ಅರಿಷಡ್ವರ್ಗಗಳು ನಿಮ್ಮ ಲೆಂಕರಯ್ಯಾ.
ಸಪ್ತದಾತುಗಳು ನಿಮ್ಮ ಬಾಣಸಿಗರಯ್ಯಾ.
ಅಷ್ಟಮದಂಗಳು ನಿಮ್ಮ ಧಳವಾಯಿಗಳಯ್ಯ.
ನವರಸಂಗಳು ನಿಮ್ಮ ಭಂಡಾರಿಗಳಯ್ಯಾ.
ದಶವಾಯಗಳು ನಿಮ್ಮ ಛತ್ರ ಚಾಮರ ಸೀಗುರಿಗಳಯ್ಯಾ.
ಷೋಡಶ ಕಳೆಗಳು ನಿಮ್ಮ ರಾಣಿವಾಸವಯ್ಯಾ.
ಶಂಭು ಸೋಮನಾಥಲಿಂಗ,
ನಿಮಗೆನ್ನ ಕಾಯ ಮುಂತಾಗಿ ಬಾಹತ್ತರ ಡಿಂಗರಿಗರಯ್ಯಾ!

(ಸಂಕೀರ್ಣ ವಚನ ಸಂಪುಟ ೨, ವಚನ ಸಂಖ್ಯೆ: ೮೯೪)

ಮಾಯಣ್ಣ ಪ್ರಭುತ್ವದ ಸೇವೆಯಲ್ಲಿದ್ದರೂ, ಅವನಿಗೆ ಶಿವನು ಪ್ರಭುವಾಗಿ ಕಾಣುತ್ತಾನೆ. ಇಡಿ ಲೋಕಕ್ಕೆ ಪ್ರಭುವಾದವನೆ ಅವನು. ಕೇವಲ ಆಳುಕಾಳು, ಆನೆ, ಕುದುರೆ, ಸಿರಿಸಂಪತ್ತುಗಳಿಂದ ಭೂಮಿಯನ್ನು ಆಳುವವರು ಮನುಜರು ಮಾತ್ರ, ಮಾನವನ ದೇಹವನ್ನು ಮಾನವನ ಸಂಸಾರಿಕ ಜಂಜಡದ ಬದುಕನ್ನು ತಿಳಿಸುತ್ತಾನೆ. ಪ್ರಭುತ್ವದ ಅಧಿಕಾರಿ ವರ್ಗವನ್ನು ತಿಳಿಸುತ್ತಾನೆ. ಇವೆರಡನ್ನು ರೂಪಕವಾಗಿ ಬಳಸಿಕೊಂಡು ವಚನವನ್ನು ಅಭಿವ್ಯಕ್ತಿಸಿದ್ದಾನೆ. ಮನುಷ್ಯ ಐಹಿಕ ಸುಖದಲ್ಲಿ ಮುಳುಗಿ, ಪಂಚೇಂದ್ರಿಯ, ಅರಿಷಡ್ವರ್ಗ, ಸಪ್ತದಾತು, ಅಷ್ಟಮದ ಇವುಗಳಿಗೆ ಸಿಕ್ಕು ನಲುಗುತ್ತಿದ್ದಾನೆ. ಇವುಗಳೆಲ್ಲವನ್ನು ನಿಯಂತ್ರಿಸುವ ಪ್ರಭು ನೀನೆ ಎಂದು ಹೇಳುವ ಸಮರ್ಪಣ ಭಾವವಿರುವುದನ್ನು

ನೋಡುತ್ತೇವೆ. ನಿನ್ನಿಂದಾದ ಕಾಯ, ಇದು ನಿನ್ನ ಸೇವೆಗೆ ಮೀಸಲಾಗಿರಬೇಕಾಗುದುದು ಎಂಬ ಮಹೇಶ್ವರ ನಿಷ್ಠೆ ಆತನದು. ಅಲ್ಲದೆ ಬಾಹ್ಯ ಪ್ರಭುತ್ವದ ವಿಡಂಬನೆಯಾಗಿಯೂ, ಪ್ರಭುತ್ವದ ನಿರಾಕರಣೆಯಾಗಿಯೂ ಈ ವಚನವನ್ನು ಗ್ರಹಿಸಬಹುದಾಗಿದೆ.

ರಾಜನ ಆಸ್ಥಾನದಲ್ಲಿರುವ ಸೇವಾ ವರ್ಗದ ಪರಿಚಯವಿದ್ದು, ಸ್ವತಃ ತಾನು ಸೇವಾ ವೃತ್ತಿಯನ್ನು ಕೈಗೊಂಡಿದ್ದು, ಅಧಿಕಾರಿ ವರ್ಗ, ಸೇವಾ ವರ್ಗವನ್ನು ತನ್ನ ಅನುಭವಕ್ಕೆ ಹೋಲಿಸಿಕೊಂಡು ಅದರ ಮೂಲಕ ಅನುಭಾವವೊಂದನ್ನು ಈ ವಚನದಲ್ಲಿ ಮಾಯಣ್ಣ ಕಟ್ಟಿಕೊಟ್ಟಿದ್ದಾನೆ. ನಡೆ-ನುಡಿಯಲ್ಲಿ ಶುದ್ಧತೆಯನ್ನು ಹೊಂದಿ ಅದರ ಮೂಲಕವೇ ಆಧ್ಯಾತ್ಮದ ನೆಲೆಗೆ ತಲುಪುವ ಸ್ಪಷ್ಟತೆಯನ್ನು ಈತನ ವಚನಗಳು ಅಭಿವ್ಯಕ್ತಪಡಿಸುತ್ತವೆ.

ದಸರಯ್ಯ

ಭಕ್ತಿಪಂಥಕ್ಕೆ ಸೇರಿದವರೆಲ್ಲರೂ ಅನುಭಾವಿಗಳಾಗಿದ್ದುದು ಹನ್ನೆರಡನೇ ಶತಮಾನದ ವಚನ ಚಳವಳಿಯಲ್ಲಿ. ಅತ್ಯಂತ ಸೂಕ್ಷ್ಮ ವಿಷಯಗಳನ್ನು ಚರ್ಚಿಸಿ ಒಂದು ತಾತ್ವಿಕತೆಯನ್ನು ಕಟ್ಟಿಕೊಟ್ಟು ಹೊಸ ಸಮಾಜವೊಂದನ್ನು ನಿರ್ಮಿಸಿದರು. ಅದು ಭಕ್ತ ಸಮುದಾಯವಾಯಿತು ಇಲ್ಲಿ ಎಲ್ಲರು ಭಕ್ತರೇ, ಶಿವನು ದೈವ. ಶಿವನಲ್ಲದೇ ಅನ್ಯದೈವದ ಭಕ್ತಿ ಇಲ್ಲ ಎಂದು ಏಕದೇವೋಪಾಸನೆಯನ್ನು ಪ್ರಚಲಿತಗೊಳಿಸಿದರು. ಭಾಗವಹಿಸಿದ ಶರಣರು ವಚನಗಳನ್ನು ರಚಿಸಿದರು. ಸಾಮಾಜದಲ್ಲಿ ನಡೆಯುತ್ತಿದ್ದ ಸಂಗತಿಗಳನ್ನು ಪ್ರಶ್ನಿಸಿ, ಹೊಸ ನಿಯಮಗಳನ್ನು, ಮೌಲ್ಯಗಳನ್ನು ತಿಳಿಸಿದರು. ಮೂಡ ಆಚರಣೆಗಳನ್ನು ನಿರಾಕರಿಸಿ, ಅಹಿಂಸಾತ್ಮಕ ಬದುಕನ್ನು, ಬದುಕಲು ಪ್ರೇರೇಪಿಸಿದರು. ಅನೇಕ ವೃತ್ತಿಗಳಲ್ಲಿ ತೊಡಗಿದ್ದಂತವರೆಲ್ಲರ ಬದುಕನ್ನು ಉನ್ನತ ಮಟ್ಟಕ್ಕೇರಿಸುವ ಕೆಲಸ ಮಾಡಿದರು. ಹಿಂದಿನಿಂದ ನಡೆದು ಬಂದಿದ್ದ ಸನಾತನ ಪರಂಪರೆಯನ್ನು ಟೀಕಿಸುವ ಪ್ರಯತ್ನ ಮಾಡಿ, ಸತ್ಯಶುದ್ಧ ಧಯಾ ಧರ್ಮದ ಪರಂಪರೆಯನ್ನು ಕಟ್ಟಿದರು. ಇದಕ್ಕೆ ಅನೇಕ ವರ್ಗ ಮೂಲದಿಂದ, ವೃತ್ತಿ ಮೂಲದಿಂದ ಬಂದ ವಚನಕಾರರು ಶ್ರಮವಹಿಸಿದರು. ಇಂತವರಲ್ಲಿ ದಸರಯ್ಯಾ ಒಬ್ಬ ವಚನಕಾರನಾಗಿದ್ದಾನೆ. ಪೂಜೆಗೆ ಹೂ ತರುವ ವೃತ್ತಿಯಲ್ಲಿ ನಿರತನಾಗಿದ್ದನೆಂದು ತಿಳಿಯಲಾಗಿದೆ. ಈತನು ವಚನ ಕೃಷಿ ಮಾಡಿ ಸುಮಾರು ಹತ್ತು ವಚನಗಳನ್ನು ರಚಿಸಿದ್ದಾನೆಂದು ತಿಳಿದಿದೆ. ವಚನಕಾರರೆಲ್ಲ ಲಿಂಗವಂತರಾಗಿ, ಲಿಂಗತತ್ವದಲ್ಲಿಯೇ ಬಾಳಿ ಬದುಕಿದವರು. ಹಾಗಾಗಿ ಅಂದಿನ ಹೋರಾಟದ ಫಲವಾಗಿ, ಲಿಂಗತತ್ವ, ಲಿಂಗಾಯತ ಧರ್ಮದ ಅನುಸರಣೆ ಇದ್ದೆ ಇದೆ. ಮುಖ್ಯವಾಗಿ ಈತನ ವಚನಗಳಲ್ಲಿ ಭಕ್ತಿಯ ಕುರಿತಾದ ಚಿಂತನೆಗಳು, ಜ್ಞಾನದ ಕುರಿತಾದ ಚಿಂತೆನಗಳು, ಲಿಂಗನಿಷ್ಠೆ, ಹೆಚ್ಚಾಗಿ ಕಾಣಬರುತ್ತದೆ. ಅನುಭಾವಿಯಾದ ಈತನ ಒಳಗಿನ ತುಮುಲವನ್ನು ಅಭಿವ್ಯಕ್ತ ಪಡಿಸುವ ವಚನಗಳು ಇವೆ. ಅಹಿಂಸೆಯನ್ನೆ ನಂಬಿ, ಬದುಕುವ ಈತನ ಬದುಕು ಸಾತ್ವಿಕತೆಯನ್ನೊಳಗೊಂಡುದಾಗಿದೆ. ಈತನ ಮೇಲಿರುವ ಕಥೆಗಳು ಪೂರಕವಾಗಿ ಕಾಣುತ್ತವೆ.

ದಸರಯ್ಯ ದಿನನಿತ್ಯ ಹೂ ಹರಿದು ತಂದು ಪೂಜೆಗೆ ನೀಡುವುದು ಮಾಡುತ್ತಿದ್ದ. ಒಂದು ದಿನ ಹೂ ಹರಿಯಲು ಹೋದಾಗ 'ಅಯ್ಯೋ ನಾನು ನೊಂದೆನು' ಎಂಬ ಧನಿ ಕೇಳುಬರುತ್ತದೆ.

ಅಂದಿನಿಂದ ಹೂವನ್ನು ಹರಿದು ತರುವ ಬದಲು ಕೆಳಗೆ ಉದುರಿಬಿದ್ದ ಹೂಗಳನ್ನೇ ತಂದು ಪೂಜೆ ಮಾಡುತ್ತಾನೆ. ಈ ಕತೆಯಲ್ಲಿನ ತಿರುಳು, ದಸರಯ್ಯಾನ ಮನೋವೃತ್ತಿಯನ್ನು, ಮಾನವೀಯತೆಯನ್ನು, ಅಹಿಂಸೆಯ ಗುಣವನ್ನು ಹೇಳುತ್ತದೆ. ಇರಲಿ. ಈತನ ಕೆಲವು ವಚನಗಳಲ್ಲಿ ಆತನ ವೃತ್ತಿ ಭಾಷೆ ಬಳಕೆಗೊಂಡಿದ್ದು, ಅವು ಬಹು ವಿರಳವಾಗಿವೆ. ಅವುಗಳ ಮೂಲಕವೇ ಆತನ ಚರಿತ್ರೆಯನ್ನು, ವೃತ್ತಿಯನ್ನು ಹುಡುಕುವ ಪ್ರಯತ್ನ ನಡೆದಿದೆ. ದಸರಯ್ಯನ ಆಧ್ಯಾತ್ಮಕತೆಯನ್ನು ಈ ವಚನದಿಂದ ಅರಿಯಬಹುದು.

ಉದರಿ ಬೀಳುವನ್ನಕ್ಕ ನಿನ್ನ ಹಂಗು
ಉದುರಿ ಬಿದ್ದಲ್ಲಿ ಎನ್ನೊಡವೆ
ನಾ ಪೂಜಸದನ್ನಕ್ಕ ದೇವ.
ಎನ್ನ ಪೂಜೆಗೊಳಗಾದಲ್ಲಿ ನೀ ಭಕ್ತ, ನಾ ನಿತ್ಯ.
ಇಂತೀ ಸರ್ವರ ದಯವಸ್ತು ಬೀಜವಲಾ.
ಸರ್ವಮಲತ್ರಯ ದೂರ,
ಸರ್ವಾಂಗ ಸಂತೋಷನಿಗರ್ವಿ
ದಸರೇಶ್ವರಲಿಂಗವು ತಥ್ಯಮಿಥ್ಯದವನಲ್ಲಾ.

(ಸಂಕೀರ್ಣ ವಚನ ಸಂಪುಟ ೨, ವಚನ ಸಂಖ್ಯೆ: ೧೦೬೨)

ದಸರಯ್ಯಾ ಈ ವಚನದಲ್ಲಿ ಪರಮಾತ್ಮನನ್ನು ಪೂಜಿಸಲು, ಆತನ ಹಂಗನ್ನು ನಿರಾಕರಿಸುವುದನ್ನು, ಅವು ಶಿವನ ಸ್ವತ್ತಾಗಿರುವುವು, ಅವುಗಳಿಂದಲೇ ಮಾಡಿದ ಪೂಜೆ ಮಿಥ್ಯೆ ಎಂಬ ಅಭಿಪ್ರಾಯದಲ್ಲಿ ಹೇಳುತ್ತಾನೆ. ಹಾಗಾಗಿ 'ಉದುರಿ ಬಿದ್ದಲ್ಲಿ ಎನ್ನೊಡವೆ' ಎನ್ನುತ್ತಾನೆ. ಮನುಷ್ಯನು ಮಾವೀಯತೆಯನ್ನು ಬಿಟ್ಟು ತನ್ನ ಇಷ್ಟ ಸಾಧನೆಗೆ ಬಲತ್ಕಾರವಾಗಿಯೇ ಬಳಸಿಕೊಳ್ಳುವುದನ್ನು ಕಂಡೆ ಅದರ ಗುಣವನ್ನು ಕುರಿತು ಹೇಳುತ್ತಾನೆ. ಮತ್ತು ನನ್ನಿಂದ 'ಪೂಜೆಗೊಳ್ಳುವ ನೀನು ಭಕ್ತ' ಎಂದು ಶಿವನನ್ನೆ ಭಕ್ತನಾಗಿಸಿ, ತನ್ನ ತನವನ್ನೇ ನಿತ್ಯವಾಗಿಸುವ ಆತ್ಮಭಿಮಾನ ದಸರಯ್ಯನದು. ಇಷ್ಟಕ್ಕೆ ಈ ವಚನ ಸೀಮಿತಗೊಳ್ಳದೆ ಆಧ್ಯಾತ್ಮದ ಭಾಷೆಯ ಅಭಿವ್ಯಕ್ತಿಯಾಗಿ ನಿಲ್ಲುತ್ತದೆ. ಮನುಷ್ಯ ಬಿಡಬೇಕಾಗಿದ್ದನ್ನೆಲ್ಲ ಬಿಟ್ಟಾಗ, ಅವನ ಅಂತರಂಗ ಕಾಣುತ್ತದೆ. ಅರಿವು ಮೂಡುತ್ತದೆ. ಆ ಅರಿವಿನಲ್ಲಿ ಇರವನ್ನು ಪಡೆದವನು 'ಸರ್ವಾಂಗ ಸಂತೋಷಿಯಾಗಿ' ನಿಗರ್ವಿಯಾಗಿರುತ್ತಾನೆ ಎನ್ನುವ ಭಾವ ಕಾಣುತ್ತದೆ.

ಸರ್ವಮಯ ನಿನ್ನ ಬಿಂದುವಾದಲ್ಲಿ
ಅವುದನಹುದೆಂಬೆ, ಆವುದನಲ್ಲಾಯೆಂಬೆ?
ಸರ್ವಚೇತನ ನಿನ್ನ ತಂತ್ರಗಳಿಂದ ಆಡುವವಾಗಿ
ಇನ್ನಾವುದ ಕಾಯುವೆ, ಇನ್ನಾವುದ ಕೊಲುವೆ?
ತರುಲತೆ ಸ್ಥಾವರ ಜೀವಂಗಳೆಲ್ಲಾ
ನಿನ್ನ ಕಾರುಣ್ಯದಿಂದೊಗೆದವು.
ಆರ ಹರಿದು ಇನ್ನಾರಿಗೆ ಅರ್ಪಿಸುವೆ?

ತೊಟ್ಟು ಬಿಡುವನ್ನಕ್ಕ ನೀ ತೊಟ್ಟು ಬಿಟ್ಟ ಮತ್ತೆ
ನೀ ಬಿಟ್ಟರೆಂದು ಎತ್ತಿ ಪೂಜಿಸುತಿರ್ದೆ
ದಸರೇಶ್ವರನೆಂದು.

(ಸಂಕೀರ್ಣ ವಚನ ಸಂಪುಟ ೨, ವಚನ ಸಂಖ್ಯೆ: ೧೦೭೦)

ಮೇಲಿನ ವಚನದಲ್ಲಿರುವ ಚಿಂತನೆಯ ಮುಂದುವರಿಕೆಯಾಗಿಯೇ ಈ ವಚನ ಕಾಣುತ್ತದೆ. ಈ ವಚನದಲ್ಲಿ ಶಿವನಿಷ್ಠೆಯ ಪ್ರತಿಪಾದನೆ ಇದೆ. ಸರ್ವರ ಸೃಷ್ಟಿ ಕರ್ತನು ಶಿವನೇ ಆಗಿದ್ದಾನೆ. ಎಲ್ಲವು ಅವನ ಅಪ್ಪಣೆಯ ಮೇಲೆಯೇ ನಡೆಯುವುದು ಎಂಬ ಸಾರಂಶವುಳ್ಳದ್ದಾಗಿದೆ ಈ ವಚನ.

ಪ್ರಕೃತಿಯ ಶಕ್ತಿಯನ್ನು ಅರಿತಿರುವ ವಚನಕಾರರು ಅದರ ಹಿಂದಿನ ಶಕ್ತಿಯನ್ನು ಶಿವ, ದೈವ ಎಂಬ ಭಾವನೆಯಿಂದಲೇ ಕಾಣುತ್ತಾರೆ. ಪ್ರಕೃತಿಯ ಜೀವ ಚೈತನ್ಯವನ್ನು ದೇವರು ಎಂದು ಸೃಷ್ಟಿಸಿಕೊಂಡಿದ್ದಾರೆ. ಹೀಗೆ ಸೃಷ್ಟಿಸಿಕೊಂಡ ದೈವಕ್ಕೆ ತಾವೇ ಶರಣಾಗುತ್ತಾರೆ. ಎಲ್ಲವು ಆ ದೈವದ ಒಲುಮೆಯಿಂದಲೇ ನಡೆಯುತ್ತದೆ ಎಂದು ನಂಬಿದ್ದಾರೆ. ಅದರಿಂದ ಮಾನವ ನಿಮಿತ್ತ ಮಾತ್ರವಾಗಿದ್ದಾನೆ. ಜೀವ ಚೈತನ್ಯದ ಆದೇಶ ಮನಸ್ಸಿಗೆ ಮೂಡಿ ಕಾರ್ಯ ಪ್ರವೃತ್ತತೆಯನ್ನು ಕಾಣುತ್ತದೆ ಎಂದೇ ಭಾವಿಸುತ್ತಾರೆ. ತರುಲತೆ, ಸ್ಥಾವರ, ಚರಾ ಚರಾ ಎಲ್ಲವು ಅದರಿಂದಲೇ ಸೃಷ್ಟಿ, ಸ್ಥಿತಿ, ಲಯ ಹೀಗಾದಲ್ಲಿ ಎಲ್ಲವು ನಿನಗರ್ಪಿತವಲ್ಲವೆ? ಎಂಬ ಪ್ರಶ್ನೆ ವಚನಕಾರನದು. ತಾಮಾಡುವ ಪೂಜೆ ನಿಮಿತ್ತ ಮಾತ್ರ ಎಂದು ಹೇಳುತ್ತಾನೆ. ಈ ವಚನ ಭಕ್ತನ ಭಾವವನ್ನು ಹಿಡಿದಿಡುವ ಕೆಲಸ ಮಾಡಿದೆ ಎಂದೆನಿಸುತ್ತದೆ.

ಈ ಮೇಲಿನ ವಚನದಲ್ಲಿ ಮೊದಲನೆ ಸಾಲಿನಲ್ಲಿ ಶಿವನನ್ನು, ಸೃಷ್ಟಿಯನ್ನು ಒಪ್ಪಿಕೊಂಡು ಬಿಡುತ್ತಾನೆ. ಎರಡನೆ ಸಾಲಿನಲ್ಲಿ 'ಆವುದನಹುದೆಂಬೆ, ಆವುದನಲ್ಲಾಯೆಂಬೆ' ಎಂದು ಶಿವನನ್ನೆ ಪ್ರಶ್ನಿಸುತ್ತಾನೆ. ಇಲ್ಲಿ ಶಿವತತ್ವವನ್ನು ಒಪ್ಪಿಕೊಂಡಂತೆ ಕಾಣುತ್ತದೆ. ಸರ್ವ ಚೇತನನ್ನು ಒಪ್ಪಿಕೊಂಡು, ಮನುಷ್ಯನ ಇರುವಿಕೆಯನ್ನು ಪ್ರಶ್ನಿಸುತ್ತಾನೆ. ಕಾಯುವವ ನೀನು, ಕೊಲ್ಲುವವ ನೀನು, ಹೀಗಾದಲ್ಲಿ ಮನುಜನೇನು ಮಾಡುತ್ತಾನೆ. ಎಲ್ಲಕ್ಕೂ ಒಡೆಯ ನೀನಾದಾಗ ಎಲ್ಲವು ನಿನಗರ್ಪಿತ ಎನ್ನುತ್ತಾನೆ. ಸಾಧಕನಾದವನ ಮನಸ್ಥಿತಿ ಇದು. ಭಕ್ತನ ತಳಮಳವನ್ನು ಪ್ರತಿನಿಧಿಸುವ ಬರಹವಾಗಿ ಈ ವಚನ ವನ್ನು ಕಾಣುತ್ತೇವೆ. ತನ್ನನ್ನು ಬಿಟ್ಟು ನಡೆದಾಗ ಮುಕ್ತಿ ಕಾಣುತ್ತದೆ. ಎಂದು ನಂಬಿದವರು ವಚನಕಾರರು. ಸರಳ ಗ್ರಹಿಕೆಗೆ ನಿಲುಕುವಂತ ವಚನಗಳನ್ನೆ ರಚಿಸಿದ್ದಾನೆ ದಸರಯ್ಯಾ. ಹೆಚ್ಚು ಕಾವ್ಯಗುಣವಿಲ್ಲದೆ ಅಭಿವ್ಯಕ್ತಿಗೊಳ್ಳುತ್ತವೆ. ಅವನ ಉದಾರವಾದ ಸಿದ್ಧಾಂತ, ಅವನ ತಿಳುವಳಿಕೆ, ಅಹಿಂಸಾ ಬದುಕು ಹೆಚ್ಚು ಸಂಘರ್ಷವನ್ನು ಹುಟ್ಟಿಸುವುದಿಲ್ಲ. ಹಾಗೆಂದು ಮಾತ್ರಕ್ಕೆ ತುಂಬಾ ನಿರಾಶೆಯ ಅಭಿವ್ಯಕ್ತಿ ಎಂದೆನಿಸುವುದಿಲ್ಲ. ತನ್ನ ಪಾಡಿಗೆ ತಾನು ಹೇಳಿಕೊಂಡು ಅನುಭಾವವನ್ನು ಕೈಗೊಳ್ಳುತ್ತಾನೆ. ಈತನ ವಚನಗಳಲ್ಲಿ ಹೆಚ್ಚು ಪ್ರತಿಪಾದನಗೊಳ್ಳುವುದು ಭಕ್ತಿ, ಅರಿವು, ಜ್ಞಾನ, ವೈರಾಗ್ಯ. ಇನ್ನು ಅಂತರಂಗದ ಶೋಧ ಕಾರ್ಯದಲ್ಲಿ ತೊಡಗಿಕೊಳ್ಳಲು ಕಷ್ಟವಾಗಿದೆ ಎಂದೇ ಹೇಳಬಹುದಾದರೂ, ಸದ್ದಿಲ್ಲದೆ ಆ ಕೆಲಸ ನಡೆದಿದೆ. ಆದರೂ ಅದನ್ನು ಅರಿವಿನ ಹುಡುಕಾಟದ

ನೆಲೆಯಲ್ಲಿ ಗುರುತಿಸಬಹುದಾಗಿದೆ. ಒಟ್ಟಿನಲ್ಲಿ ಈತನ ವಚನಗಳನ್ನು ಓದಿದಾಗ ಆತನ ಸಂತೃಪ್ತ ಭಾವ ಕಾಣುತ್ತದೆ. ಆಧ್ಯಾತ್ಮಿಕ ನೆಲೆಯೊಂದನ್ನು ಮುಟ್ಟುವ ದೆಸೆಯಲ್ಲಿ ಶಿವನಿಗೆ ಸರ್ವ ಸಮರ್ಪಿತ ಭಾವದಲ್ಲಿ ತೊಡಗಿಕೊಂಡಿರುವುದು ಕಾಣುತ್ತದೆ. ಇತರೇ ವೃತ್ತಿನಿರತ ವಚನಕಾರರಂತೆ. ವೃತ್ತಿಯ ಮೊನಚುತನವು ಇಲ್ಲಿ ಕಾಣುವುದಿಲ್ಲ. ಒಬ್ಬ ಅನುಭಾವಿಯೂ, ಆಧ್ಯಾತ್ಮ ಸಾಧಕನಾಗಿ ತಳಮಳಗೊಳ್ಳುವುದು ಈತನ ವಚನಗಳ ಅಭಿವ್ಯಕ್ತಿಯಾಗಿ ಕಾಣುತ್ತೇವೆ.

ವೈದ್ಯ ಸಂಗಣ್ಣ

ಅನುಭಾವಿಗಳಾದ ವಚನಕಾರರು ತಮ್ಮ ಕಾಯಕದಿಂದಲೇ ಗುರುತಿಸಿಕೊಂಡವರಾಗಿದ್ದಾರೆ. ಅವರ ವಚನಗಳಲ್ಲಿ ಕಾಯಕ ಸಿದ್ಧಾಂತದ ಪ್ರತಿಪಾದನೆ, ಅವರ ಅನುಭಾವಿಕ ನೆಲೆಯನ್ನು ಓದುಗರು ಕಂಡುಕೊಳ್ಳಬಹುದು. ಸಮಾಜಕ್ಕೆ ತಮ್ಮ ವೃತ್ತಿಯ ಮಹತ್ವವನ್ನು ತೋರಿಸಿಕೊಟ್ಟರು. ವೃತ್ತಿಗಳನ್ನು ತಮ್ಮ ಸೇವೆಗಾಗಿಯೇ ಇವೆ ಎಂಬ ಪುರಾತನ ಸಂಸ್ಥೆಗೆ, ವೃತ್ತಿಯ ಅವಶ್ಯಕತೆಯನ್ನು, ವೃತ್ತಿನಿರತರ ಆತ್ಮಭಿಮಾನವನ್ನು ತಿಳಿಸಿಕೊಟ್ಟರು. ವೃತ್ತಿಯಲ್ಲಿನ ತಿಳುವಳಿಕೆಯನ್ನು ಸಮಾಜದ ಶೋಷಿತವರ್ಗದ ಉದ್ಧಾರಕ್ಕಾಗಿ ಹೇಳುವ ಪ್ರಯತ್ನ ಮಾಡಿದರು. ವೃತ್ತಿಯನ್ನು, ವೃತ್ತಿ ನಿರತರನ್ನು ಕಡೆಗಣ್ಣಿನಲ್ಲಿ ಕಾಣುತ್ತಿದ್ದ ವರ್ಗವನ್ನು ಪ್ರತಿಭಟಿಸುವ ಅಸ್ತ್ರವಾಗಿ ವಚನಗಳನ್ನು ವಚನಕಾರರು ಬಳಸಿದರು. ವೃತ್ತಿಯನ್ನು ವಿಭಾಗಿಸಿ, ವೃತ್ತಿನಿರತರನ್ನು ನೋಡುವುದು ಅಸಾಧ್ಯವೆ ಸರಿ. ನಾನಾ ಬಗೆಯ ವೃತ್ತಿಯನ್ನು ಕೈಗೊಂಡ ಅನೇಕ ವಚನಕಾರರಲ್ಲಿ ವೈದ್ಯ ಸಂಗಣ್ಣ ಒಬ್ಬ. ಈತ ವೈದ್ಯ ವೃತ್ತಿಯನ್ನು ಮಾಡುತ್ತಿದ್ದು, ಆ ವೃತ್ತಿಯನ್ನೆ ಶಿವನನ್ನು ಕಾಣುವ ದಾರಿಯನ್ನಾಗಿಸಿಕೊಂಡಿದ್ದಾನೆ. ಅರಿವಿನ ತಿಳುವಳಿಕೆಯಾಗಿ ಕಂಡುಕೊಂಡಿದ್ದಾನೆ. ತನ್ನ ವೈದ್ಯ ವೃತ್ತಿಯೂ ವಚನಗಳಲ್ಲಿ ಪರಿಣಾಮ ಕಾರಿಯಾದ ರೂಪಕವಾಗಿ ಬಳಕೆಗೊಂಡಿದೆ. ಆತನ ವೃತ್ತಿ ಪದಗಳು ವಚನಗಳಿಗೆ ಗಟ್ಟಿತನವನ್ನು ಒದಗಿಸಿವೆ. ಹೇಳುವಿಕೆಗೆ ಮಾಧ್ಯಮವಾಗಿ ಬಳಕೆಗೊಂಡ ವೃತ್ತಿ ಪರಿಕರಗಳು, ಸಮಾಜವನ್ನು ನೋಡುವ ಕ್ರಮವನ್ನು, ಸಮಾಜಕ್ಕೆ ಹಿಡಿದ ರೋಗಕ್ಕೆ ಔಷಧಿಯಂತೆ ಕೆಲಸ ಮಾಡುವ ರೀತಿಯಲ್ಲಿ ಅಭಿವ್ಯಕ್ತಗೊಳ್ಳುತ್ತವೆ. ಸಂಗಣ್ಣ ವೈದ್ಯ ವೃತ್ತಿಯನ್ನು ಈ ವಚನದಲ್ಲಿ ಹಿಡಿದಿಟ್ಟಿದ್ದಾನೆ.

ಹೊರನಾಳ ಎಂಟುಕೋಟಿ, ಒಳನಾಳ ನೂರೆಂಟು.
ಹೊರದ್ವಾರ ಒಂಭತ್ತು, ಒಳದ್ವಾರ ಸರ್ವಾಂಗಮಯ.
ಇಂತೀ ಪಂಚತತ್ವ, ಅಷ್ಟಗುಣಂಗಳು ಕೂಡಿ.
ಘಟ್ಟಿಗೊಂಡ ತನು ಶುಕ್ಲ ಶೋಣಿತ ಮಜ್ಜೆಮಾಂಸ.
ಎಲವು ನರ ಚರ್ಮರೋಮ.
ಇಂತೀ ಅಷ್ಟಗುಣಂಗಳ ಕಷ್ಟೋತ್ತರಗಳಲ್ಲಿ ಸಿಕ್ಕಿದ ಆತ್ಮಂಗೆ,
ಇಂದ್ರಿಯಂಗಳ ರೋಗ ವಿಡಿದು ಬಂಧ ಮೋಕ್ಷ ಕರ್ಮಂಗಳೆಂಬ
ಶೀತ ಜ್ವರ ತಾಪಂಗಳಲ್ಲಿ ವ್ಯವಹರಿಸುವ ಆತ್ಮಂಗೆ,
ನಾನೊಂದ ನಿಹಿತದ ಮದ್ದಕಂಡೆ.
ಅದು ಅರೆವಡೆ ಅಸಾಧ್ಯ. ಸುಮ್ಮನೆ ಮೆಲುವಡೆ ಸವಯದು.

ದೃಷ್ಟಿ ನಟ್ಟು ಮುಚ್ಚಿರಲಿಕ್ಕಾಗಿ ರೋಗ ರುಜೆ ಬಚ್ಚ ಬಯಲು,
ಮರುಳ ಶಂಕರಪ್ರಿಯ ಸಿದ್ಧರಾಮೇಶ್ವರಲಿಂಗವನರಿಯಲಾಗಿ.

(ಸಂಕೀರ್ಣ ವಚನ ಸಂಪುಟ ೪, ವಚನ ಸಂಖ್ಯೆ: ೧೭೨)

ಈ ವಚನದಲ್ಲಿ ವೈದ್ಯ ಸಂಗಣ್ಣ ಕಟ್ಟಿಕೊಟ್ಟಿರುವ ಅರ್ಥ ಆಧ್ಯಾತ್ಮದ ಚಿಂತನೆಯಾಗಿದೆ. ಮಾನವನ ದೇಹ ರಚನೆಗೊಂಡಿರುವ ಕ್ರಮದ ಬಗ್ಗೆ ವಿವರಣೆಯನ್ನು ನೀಡುತ್ತಿರುವಂತೆ ಕಂಡರೂ, ಆತ್ಮದ ಸಾಧನೆಗೆ ಪ್ರೇರೆಪಿಸುವ ಶಕ್ತಿಯನ್ನು ಹೊಂದಿದೆ. ವಚನಕಾರರು ದೇಹ ಮತ್ತು ಆತ್ಮವನ್ನು ಬೇರೆ ಬೇರೆಯಾಗಿ ಕಂಡವರಲ್ಲ. ದೇಹವಿಡಿದು ಸಾಧನೆ ಮಾಡುವ ಪ್ರಯತ್ನದಲ್ಲಿ ತೊಡಗಿದವರು. ದೇಹದ ಪಂಜರದಲ್ಲಿ ಸಿಕ್ಕಿ ಬಿದ್ದು ಒದ್ದಾಡುತ್ತಿರುವ, ನರಳಾಡುತ್ತಿರುವ ಆತ್ಮದ ಅಸಹಾಯಕ ಸ್ಥಿತಿಯ ಅಭಿವ್ಯಕ್ತಿ ಈ ವಚನದಲ್ಲಿದೆ. ವಚನದ ಮೊದಲನೆ ಭಾಗದಲ್ಲಿ ದೇಹದ ಮತ್ತು ದೇಹದೊಳಗಿನ ನರನಾಡಿಗಳ ಚಿತ್ರಣ ವಚನಕಾರನು ನೀಡುತ್ತಾನೆ. ದೇಹದ ಸ್ಥಿತಿಯಿಂದ ಒಂದು ಅಂತರವನ್ನು ಕಾಯ್ದುಕೊಂಡು, ಕಾಪಾಡಿಕೊಂಡಿರುವನೆಂಬಂತೆ ಮಾಡುತ್ತದೆ. ಇವುಗಳು 'ಕಷ್ಟೋತ್ತರ'ವಾಗಿಯೇ ಕಾಣುತ್ತವೆ. ಅದಕ್ಕೆ 'ಒಂದು ಮದ್ದ ಕಂಡೆ' ಎಂದು ವಿಶ್ವಾಸದ ನಡೆಯಿಂದ ರೋಗರುಜೆಗೆ ಒಳಗಾದ ಆತ್ಮಕ್ಕೆ ಚಿಕಿತ್ಸೆ ನಡೆಯುತ್ತದೆ. ಮದ್ದು ಯಾವುದು? ಎಂಬ ಪ್ರಶ್ನೆ ಕಂಡು, ಅರಿವು ಎಂಬ ಉತ್ತರವನ್ನು ದೊರಕಿಸಿ ಬಿಡುತ್ತದೆ. 'ನಾನೊಂದ ನಿಹಿತದ ಮದ್ದ ಕಂಡೆ' ಎಂಬ ಉಕ್ತಿಯಂತೂ ಇಲ್ಲಿನ ಮನೋಧರ್ಮವನ್ನು ಮೂರ್ತರೂಪದಲ್ಲಿ ನಿಲ್ಲಿಸಿ ಬಿಡುತ್ತದೆ. ಸಾಮಾನ್ಯವಾಗಿ ಮೂರ್ತತೆಗಿಂತ ಅಮೂರ್ತತತೆಯನ್ನೆ ಈ ವಚನ ಹೇಳುತ್ತದೆ.

ಅಂಗಾಲ ಮೇಲಣ ದೊಡ್ಡಂಗುಷ್ಟು ಮಧ್ಯದಲ್ಲಿ ಪೃಥ್ವಿನಾಡಿ,
ನಾಭಿ ಮೂತ್ರನಾಳದ ನಾಲ್ಕಂಗುಲ ಮಧ್ಯದಲ್ಲಿ ಅಪ್ಪುನಾಡಿ,
ಉಡಸೂತ್ರ ನಾಭಿ ಮೊದಲಾದ
ಪಂಚಾಂಗುಲ ಮಧ್ಯದ ಮೇಲ್ದೆಸೆಯಲ್ಲಿ (ತೇಜನಾಡಿ),
ಇಡಾ ಪಿಂಗಳ ಮಧ್ಯದಲ್ಲಿ ವಾಯುನಾಡಿ,
ಸುಷುಮ್ನನಾಳದ ಅಂಗುಲ ನಡುಮಧ್ಯದಲ್ಲಿ ಆಕಾಶಕೈದಿದನಾಡಿ,
ಇಂತೀ ಪಂಚಪಥವನೈದುವ ನಾಡಿಯಲ್ಲಿ ಆಡುವ
ಆತ್ಮನ ವಿವರದ ದೆಸೆಯನರಿದು,
ಇಂತೀ ಐದು ಮುಚ್ಚಿ ಮೇಗಳ ಬ್ರಹ್ಮರಂಧ್ರದಲ್ಲಿಯೆಯ್ದಿದರೆಮ್ಮ ವೈದ್ಯರು,
ನಾದ ಬಿಂದು ಕಳೆಗತೀತ ನೋಡಾ,
ಮರಳಶಂಕರಪ್ರಿಯ ಸಿದ್ಧರಾಮೇಶ್ವರಲಿಂಗವು.

(ಸಂಕೀರ್ಣ ವಚನ ಸಂಪುಟ ೪, ವಚನ ಸಂಖ್ಯೆ: ೧೦೭)

ಈ ವಚನದ ಸಾಲುಗಳು ಮಾನವನ ದೇಹ ಪಂಚಭೂತಗಳಿಂದಾಗಿರುವುದರ ವಿವರಣೆಯನ್ನು ನೀಡುತ್ತ, ಅದರೊಳಗಿನ ಆತ್ಮದ ಪರಿಚಯವನ್ನು ಮಾಡಿಕೊಡುತ್ತದೆ. ದೇಹ ರಚನೆಗೊಂಡಿರುವ ಕ್ರಮವನ್ನು ವಿವರಿಸುವುದಷ್ಟೇ ವಚನಕಾರನ ಉದ್ದೇಶವಲ್ಲ. ಎಂಬುದು ವಿವರಣೆಯ ನಂತರದಲ್ಲಿ ಬರುವ ಸಾಲುಗಳು ಸ್ಪಷ್ಟಪಡಿಸಿಬಿಡುತ್ತವೆ. ಸಾಮಾನ್ಯವಾಗಿ ಸಂದೇಶವೊಂದನ್ನು ಸ್ಪಷ್ಟಪಡಿಸಲು,

ಮನದಟ್ಟು ಮಾಡಲು, ಮೂಡಿಸಲು, ವಿಸ್ತರಿಸಲು ಹೋಲಿಕೆಯನ್ನು ಬಳಸುವುದು ಸರಿಯಷ್ಟೆ? ಈ ಅರ್ಥದಲ್ಲಿ ಹೋಲಿಕೆಗಳು ದಾರಿ. ಪಠ್ಯದ ಸಂದೇಶ ಗುರಿ. ಆದರೆ ಕೆಲವೊಮ್ಮೆ ದಾರಿಯೂ ತನ್ನಷ್ಟಕ್ಕೇ ಬೇರೆಯಾಗಿ ಗಮನಸೆಳೆಯುವ ಸಾಧ್ಯತೆಗಳುಂಟು. ಅವುಗಳು ತಮ್ಮದೇ ಆದ ಬೇರೊಂದು ಲೋಕದ ಕಡೆಗೆ ಕರೆದುಕೊಂಡು ಹೋಗಿಬಿಡುತ್ತವೆ. ಆದರೆ ವಚನ ವಿಸ್ತರಣೆಯನ್ನು ಆಶಯವನ್ನು ನಿಲ್ಲಿಸಬಾರದೆಂಬ ಅಭಿಪ್ರಾಯವು ಇದೆ. ಆತ್ಮ ತತ್ವದ, ಆಧ್ಯಾತ್ಮದ ನಿಲುವೊಂದನ್ನು ಮಂಡಿಸುವುದು ಈ ವಚನದ ಉದ್ದೇಶವಾಗಿದೆ. ಪಂಚತತ್ವದ ಅಡಿಯಲ್ಲಿ ನಿರ್ಮಾಣಗೊಂಡ ದೇಹವನ್ನು, ಪಂಚಭೂತಗಳನ್ನು ಮುಚ್ಚಿಕೊಂಡಾಗ ಮಾತ್ರ ಅರಿವು ಕಾಣುತ್ತದೆ. ಆತ್ಮನ ವಿವರ ಸಿಗುತ್ತದೆ. ಎಂಬ ವ್ಯಾಖ್ಯಾನವಿದೆ ಎನ್ನಬಹುದು.

ಐದು ತತ್ವಗಳಿಂದಾದ ದೇಹಕ್ಕೆ ರೋಗರುಜೆಯಹುದೆ?
ಕಾರ್ಯತತ್ವಂಗಳ ಗೊತ್ತಿನಲ್ಲಿ ನಿಂದು,
ಅವರವರ ಚಿಕಿತ್ಸೆಯಲ್ಲಿ ಹೊತ್ತು ನಿತ್ತರಿಸುವುದೆ ಕ್ರಮ.
ಅದೆಂತೆಂದಡೆ:
ಭಕ್ತಿನಿಷ್ಠೆ, ವಿಶ್ವಾಸನಿಷ್ಠೆ, ಜ್ಞಾನ ನಿಷ್ಠೆ.
ಇಂತಿ ಸದ್ಭಾವ ನೆಲೆಗೊಳ್ಳದ ಕಾರಣ,
ತನುವಿಂಗೆ ಅನುಪಾನವ ಪಾನವ ಮಾಡಬೇಕು.
ಮೇಲೆ ಅರಿದಡೆ, ಮನಹು ಮಹದಲ್ಲಿ ನಿಲಬೇಕು.
ಮರುಳಶಂಕರಪ್ರಿಯ ಸಿದ್ಧರಾಮೇಶ್ವರಲಿಂಗವನೊಡಗೂಡಬೇಕು.

(ಸಂಕೀರ್ಣ ವಚನ ಸಂಪುಟ ೪, ವಚನ ಸಂಖ್ಯೆ: ೧೧೪)

ಮೇಲಿನ ವಚನದ ವಿಷಯದ ಮುಂದುವರಿಕೆಯಂತೆ ಕಾಣುತ್ತದೆ. ಈ ವಚನದ ಮೊದಲನೆ ಸಾಲಿನಲ್ಲಿ ಪ್ರಶ್ನೆಯಿದೆ. ಪಂಚಭೂತದಿಂದ ನಿರ್ಮಿತಗೊಂಡ ದೇಹಕ್ಕೆ ಕಾಯಿಲೆಗಳೇ ವಿನಃ ಆತ್ಮಕ್ಕೆ ಅಲ್ಲ. ಆದರೆ ದೇಹ ವಿಲ್ಲದೆ ಆತ್ಮವನ್ನು ಹುಡುಕಲು ಅಸಾಧ್ಯ. ಹಾಗಾಗಿ ದೇಹದ ರೋಗರುಜೆಗಳಿಗೆ ಚಿಕಿತ್ಸೆಬೇಕು. ರೋಗವಾದರೂ ಯಾವುದು? ಜೀವನದ ಜಂಜಡ ಎಂಬ ಅಭಿಪ್ರಾಯ ತಟ್ಟನೆ ಹಿನ್ನೆಲೆಯಲ್ಲಿ ಮೂಡಿಬಿಡುತ್ತವೆ. 'ಭಕ್ತಿ ನಿಷ್ಠೆ, ವಿಶ್ವಾಸ ನಿಷ್ಠೆ, ಜ್ಞಾನ ನಿಷ್ಠೆ' ಎಂಬ ಉತ್ತರ ವಚನದಲ್ಲಿ ನಿರೂಪಿತಗೊಂಡು ಬಿಡುತ್ತದೆ. ಭಕ್ತನಾದವನಲ್ಲಿ ನಿಷ್ಠೆ ಕಾಣದಿದ್ದಾಗ ಅಂತವರಿಗೆ ಚಿಕಿತ್ಸೆ ಅಗತ್ಯ. ಅವರು ಔಷಧ ಕುಡಿಯಲೇ ಬೇಕು. ಆಗ ಅರಿವು ನೆಲೆನಿಲ್ಲುವುದು ಸಾಧ್ಯ ಎಂಬ ಅಭಿಪ್ರಾಯ ಸಂಗಣ್ಣನ ವಚನದ್ದು. ವಚನಕಾರರ ದೇಹವಿಡಿದೇ ಸಾಧಿಸಬಹುದಾ ದಂತಹ ಚಿಂತನೆಯು ಇಲ್ಲಿ ಕೆಲಸ ಮಾಡುತ್ತಿದೆ.

ವೀರ ಗೊಲ್ಲಾಳ

ಕುರಿ ಕಾಯುವ ವೃತ್ತಿಯಲ್ಲಿ ನಿರತನಾಗಿದ್ದ ವೀರ ಗೊಲ್ಲಾಳನ ಮುಗ್ಧಭಕ್ತಿ, ವೀರಶೈವ ನಿಷ್ಠೆ, ಶಿವನಿಷ್ಠೆ ಅನೇಕ ಜನಪದ ಕಥೆಗಳಲ್ಲಿ ಬರುತ್ತದೆ. ಅನೇಕ ವೀರಶೈವ ಕೃತಿಗಳಲ್ಲಿ ಈತನ ವಿಷಯ ಬರುತ್ತದೆ. ಈತನ ಹತ್ತು ವಚನಗಳು ದೊರೆತಿದ್ದು ಅವುಗಳು ವಿಶೇಷವಾಗಿ ಬೆಡಗಿನ

ಶೈಲಿಯನ್ನು ಒಳಗೊಂಡಿವೆ. ತನ್ನ ವೃತ್ತಿಯ ಉಪಕರಣಗಳನ್ನು ಬಳಸಿಯೇ ಅನೇಕ ವಚನಗಳನ್ನು ಈತ ಕಟ್ಟಿಕೊಟ್ಟಿದ್ದಾನೆ.

ಹೋತನ ಹೊಡದು, ಆಡ ಕೂಡಿ, ಕುರಿಯ ನಲಿಸಿ,
ತಗರ ತಡದು, ಹಿಂಡನೊಬ್ಬುಳಿತೆ ಮಾಡಿ,
ಹುಲಿ ತೋಳ ಚೋರ ಭಯಮಂ ಕಳೆದು,
ಹಿಂಡಿಗೊಡೆಯನಾಗಿ ಕಾವ ಗೊಲ್ಲಾಳ ನಣನೆ ವೀರಬೀರೇಶ್ವರಾ

(ಸಂಕೀರ್ಣ ವಚನ ಸಂಪುಟ ೨, ವಚನ ಸಂಖ್ಯೆ:)

ಈ ವಚನ ಕುರಿ ಕಾಯುವ ಹೊತ್ತಿನಲ್ಲಿ ಹೋತ ಆಡು ಕುರಿ ತಗರುಗಳನ್ನು ತರುಬಿ ನಿಲ್ಲಿಸುವ ಅನುಭವ ವಿಶೇಷವನ್ನು ಪ್ರಸ್ತಾಪಿಸುತ್ತಿದೆ. ಇದು ಕುರಿ ಕಾಯುವ ಅನುಭವ ಜ್ಞಾನಿಗೆ ವೇದ್ಯವಾಗುವ ಪರಿಜ್ಞಾನ. ಇಲ್ಲಿ ಹೋತ ತಗರುಗಳ ಆಟ ಚಿನ್ನಾಟಗಳನ್ನು ನಿಯಂತ್ರಿಸುವಲ್ಲಿ ಬಳಸಿರುವ, ಹೊಡೆದು ತಡೆದು ಎಂಬ ಪದಗಳು ಹಾಗೂ ಆಡು ಕುರಿಗಳನ್ನು ಸಂಭಾಳಿಸುವಲ್ಲಿ ಬಳಸಿರುವ ಕೂಡಿ ನಿಲಿಸಿ ಎಂಬ ಪದಗಳು ಅನುಭವದಿಂದ ಹುಟ್ಟಿ ಅದರ ಸ್ವರೂಪವನ್ನು ಹೇಳುತ್ತಿವೆ. ಹೋತ, ತಗರು, ಕುರಿ, ಆಡು ಎಲ್ಲ ಒಂದೇ ಅಲ್ಲ. ಅವುಗಳ ಸ್ವಭಾವ, ಅವುಗಳನ್ನು ಕಾಯುವ ಹೊತ್ತಿನಲ್ಲಿ ಅನುಸರಿಸಬೇಕಾದ ಕ್ರಮಗಳನ್ನು, ವಿಧಿ-ವಿಧಾನಗಳನ್ನು ಇಲ್ಲಿ ಬಳಕೆಯಾಗಿರುವ ಪದಗಳು ಅಭಿವ್ಯಕ್ತಿಸುತ್ತವೆ.

ಹೋತನ ಕೊಯ್ದು, ಕುರಿಯ ಸುಲಿದು
ಮರಿಯ ಕೊರಳನೊತ್ತಿ, ಕಾವಲ ಕುನ್ನಿಯ ಕೆಡಹಿ,
ತೋಳನ ಕುಲವಗೆದ್ದು, ಕುರುಬನ ಕುರುಹಿನ ಕುಲವಡಗಿ
ನೆರೆ ಅರಿವಿನ ಕುಲದಲ್ಲಿ ಅಡಗಬೇಕು,
ವೀರಬೀರೇಶ್ವರಲಿಂಗವನರಿದ ಶರಣ

(ಸಂಕೀರ್ಣ ವಚನ ಸಂಪುಟ ೨, ವಚನ ಸಂಖ್ಯೆ: ೯೩)

ಈ ವಚನ ದೇಹ ಮತ್ತು ಆತ್ಮದ ಸಂಬಂಧದ ಅನುಭವ ಬಂಧದಿಂದ ಕೂಡಿದೆ. ಈ ಅನುಭವದ ದ್ರವ್ಯಮೂಲದಲ್ಲಿ ಜಿಜ್ಞಾಸೆಗೆ ಒಳಗಾದ ಧಾರ್ಮಿಕ ಚಿಂತನೆ ಅನುಭಾವಿಕ ವಿಸ್ತರಣೆಯಲ್ಲಿ ಪ್ರಸಾದಭಾವ ಪಡೆಯುವುದು ಸಹಜವಿದೆ. ಕಾಯಕ ಮೂಲದ ಈ ಪರಿಭಾಷೆಗಳು ಅನುಭಾವಿಕ ವಿಸ್ತರಣೆಯ ಸೂಕ್ಷ್ಮತೆಯಾಗಿ ಅರಿವಿಗೆ ಬರುತ್ತವೆ.

ಗೊಲ್ಲಾಳನ ಈ ವಚನದಲ್ಲಿ ಹೋತ, ತಗರು, ಕುರಿ, ಆಡುಗಳನ್ನು ಕೂಡಿಕೊಂಡ ಹಿಂಡನ್ನು ಸಲುಹುವ ಪಶುಪಾಲನಾ ಧರ್ಮ ಅನುಭವಪ್ರಣೀತ ವಚನ ಧರ್ಮವಾಗಿದೆ. ಕುರಿ ಕಾಯುವ ಅನುಭವ ಕುರಿಯ ಹಿಂಡನ್ನು ಕಾಪಾಡುವಲ್ಲಿ ಹಿಂಡಿನೊಳಗಿನ ಕಾಮಪೀಡಿತ ಆಕ್ರಮಣ ಶಕ್ತಿಗಳನ್ನು ಹೊಡೆದು ತಡೆದು ನಿಯಂತ್ರಿಸುವ ಕಡೆ ಗಮನಹರಿಸ ಬೇಕಿರುವುದನ್ನು ಹೇಳುತ್ತಿದೆ. ಇದು ದೊಡ್ಡಿಯೊಳಗೆ ಹಿಂಡನ್ನು ನಿಲ್ಲಿಸುವಾಗ ಹಾಗೂ ದೊಡ್ಡಿಯಿಂದ ಹೊರಗೆ

ಹಿಂಡನ್ನು ಬಿಡುವಾಗ ಎರಡೂ ಸಂದರ್ಭದಲ್ಲಿ ತೋರುವ ಎಚ್ಚರಿಕೆಗೆ ಸಂಬಂಧಿಸಿದ ಅನುಭವ ವಿಶೇಷ. ಹಾಗೆಯೇ ಹೊರಗಿನ ಹುಲಿ, ತೋಳ, ಕಳ್ಳರಿಂದ ಹಿಂಡನ್ನು ರಕ್ಷಿಸುವ ಕುರುಬನ ಶಕ್ತಿಯನ್ನು ಧ್ವನಿಸುವ ಅನುಭವ ವಿಶೇಷತೆಯ ಕಡೆ ಅರ್ಥವನ್ನು ದೊರೆಯುವಂತೆ ಮಾಡಿದೆ. ಈ ವಚನದ ಅನುಭವ ವಿಶೇಷವನ್ನು ವಿವರಣಾತ್ಮಕ ಭಾವದಲ್ಲಿ ಹಿಡಿದಿಟ್ಟುಕೊಂಡಿರುವ ಇವನ ಇನ್ನೊಂದು ವಚನವನ್ನು ಇಲ್ಲಿ ಗಮನಿಸಬಹುದು.

ಹೋತು ಹುಸಿ ಆಡು ಬಹುಮಾತಿನ ನೀತಿ,
ಕುರಿ ಸಕಲೇಂದ್ರಿಯದ ನೆಲ ಹೊಲ, ತಗರು ತಥ್ಯಮಿಥ್ಯದ ಹೋರಟೆ,
ಹುಲಿ ದ್ವೇಷದಾಗರ, ತೋಳ ಕೊಂದು ತಿಂಬ ಕಾಟ
ಚೋರ ಮೃತ್ಯು ಇಂತಿವು ಮೊದಲಾದ
ಬಹುವಿಧದ ಪ್ರಕೃತಿಗಳಲ್ಲಿ ಕಾಯದ ನೆಲಹೊಲನಲ್ಲಿ,
ಸಕಲೇಂದ್ರಿಯವೆಂಬ ಹಿಂಡು ಮಂದೆಯಾಗಿವೇಕೋ?
ಇದರ ಸಂಗವ ಬಿಡಿಸು, ನಿಮ್ಮ ನಿಜದಂಗವ ತೋರಿ,
ಭವಪಾಶದಂಗವ ಹರಿದು, ನಿಮ್ಮ ಘನಲಿಂಗದಲ್ಲಿರಿಸು
ನೆರೆ ವೀರಬೀರೇಶ್ವರಾ

(ಸಂಕೀರ್ಣ ವಚನ ಸಂಪುಟ ೨, ವಚನ ಸಂಖ್ಯೆ: ೯೪)

ಇಲ್ಲಿ ಇಡೀ ವಚನ ನೇತ್ಯಾತ್ಮಕ ಭಾವದಲ್ಲಿ ಕಾಯಕವನ್ನು ಗುರುತಿಸಿದಂತೆ ಕಾಣುತ್ತದೆ. ಇದು ಮೇಲುನೋಟದ ತೋರಿಕೆ. ಆದರೆ ಇಡೀ ವಚನವು ಅಲೌಕಿಕತೆಯನ್ನು ಹೇಳುವ ಪ್ರಯತ್ನ ಮಾಡಿದೆ. ಆದರೆ ಇಡೀ ವಚನವನ್ನು ಧ್ಯಾನದ ಪರಿಭಾವನೆಗೆ ಒಳಗು ಮಾಡಿದಾಗ ಹಿಂದಿನ ವಚನದ ಭಾವಾರ್ಥವೇ ಇಲ್ಲಿ ಮುಂದುವರಿಕೆಯ ಸ್ವರೂಪವನ್ನು ಪಡೆದು ಕಾಯಕ ಧರ್ಮವನ್ನು ಮನಗಾಣಿಸುತ್ತಿದೆ. ಇಲ್ಲಿನ ಧರ್ಮ ಕುರಿ ಕಾಯುವ ಕಾಯಕದೊಳಗೆ ಕುರುಬನೊಬ್ಬನು ಪಾಲಿಸ ಬೇಕಾದ ನೀತಿ-ನಿಯಮಗಳ ಸತ್ಯ ಶುದ್ಧದ ನಡೆಯನ್ನು ತಿಳಿಸುವಂಥದ್ದು. ಹೋತ, ಟಗರು, ಕುರಿ, ಆಡುಗಳ ಸ್ವಭಾವಗಳನ್ನು ಈ ವಚನ ಹೇಳುತ್ತಿದೆ. ಹಿಂದಿನ ವಚನದಲ್ಲಿ ಕ್ರಿಯೆಯಾಗಿ ಪದವಾಗಿ ಹೇಳಿದ್ದು, ಇಲ್ಲಿ ವಸ್ತುವಾಗಿ ನಿರೂಪಿತಗೊಂಡಿದೆ.

ಬಹುವಿಧದ ಪ್ರಕೃತಿಗಳಲ್ಲಿ ಕಾಯದ ನೆಲಹೊಲದಲ್ಲಿ
ಸಕಲೇಂದ್ರಿಯವೆಂಬ ಹಿಂಡು ಮುಂದೆಯಾಗಿವೇಕೋ?
ಇದರ ಸಂಗವ ಬಿಡಿಸು, ನಿಮ್ಮ ನಿಜದಂಗವ ತೋರಿ,
ಭವಪಾಶದಂಗವ ಹರಿದು, ನಿಮ್ಮ ಘನಲಿಂಗದಲ್ಲಿರಿಸು
ನೆರೆ ವೀರಬೀರೇಶ್ವರಾ

(ಸಂಕೀರ್ಣ ವಚನ ಸಂಪುಟ ೨, ವಚನ ಸಂಖ್ಯೆ: ೯೫)

ವಚನದ ಈ ಸಾಲುಗಳು ವೃತ್ತಿ ಅನುಭವದ ವಸ್ತುವನ್ನು ಕಾಯಕ ಧರ್ಮದ ಅನುಭಾವಿಕ ನೆಲೆಗೆ ಸಮ್ಮಿಳಿತಗೊಳಿಸಿದೆ. ಭವದಲ್ಲಿನ ಭವಿಯ ರೂಪದಿಂದ ಬಿಡಿಸಿ ಲಿಂಗ ಸ್ವರೂಪಿಯಾಗಿಸುವಲ್ಲಿನ

ನೆರೆಯುವ ಪರಿಯನ್ನು ಇದು ಅಭಿವ್ಯಕ್ತಿಸುತ್ತದೆ. ಈ ಪ್ರಸಾದ ಗುಣವನ್ನು ಈ ವಚನ ವಸ್ತು ರೂಪದಲ್ಲಿ ಹೇಳುತ್ತಿದೆ. ಹಿಂದಿನ ವಚನವು ಮತ್ತು ಈ ವಚನವು ಪೂರಕ ಅಭಿವ್ಯಕ್ತಿ ಸ್ವರೂಪವನ್ನು ಹೊಂದಿವೆ.

"ಇಡೀ ವಚನ ರಾಸಿಯನ್ನು ಪರಿಭಾವಿಸಿದಾಗ ತಿಳಿದುಬರುವ ಸಂಗತಿ. ಕಾಯಕ ಮೂಲದಿಂದ ಬಂದ ವಚನಕಾರರ ರಚನೆಗಳಲ್ಲಿ ಅವರ ವೃತ್ತಿ ಧರ್ಮ ಮತ್ತು ವೃತ್ತಿ ಧರ್ಮದ ಪರಿಭಾಷೆ, ಧಾರ್ಮಿಕ ಆಧ್ಯಾತ್ಮಿಕ ಚಿಂತನೆಗೆ ಪರಿಕರ ವಸ್ತುವಾಗಿ ಪರಿಭಾಷೆಯಾಗಿ ಬಳಕೆಯಾಗಿರುವುದು. ಆದರೆ, ಕಾಯಕ ಜೀವಿಗಳಲ್ಲದವರ ವಚನದ ಭಾಷೆ ಪರಿಭಾಷೆ ಲೋಕೋಪಯೋಗಿ ಸಾಮಾನ್ಯತಾ ಪ್ರಮಾಣುವಿನಲ್ಲಿ ಪರಿಚಲನೆಗೊಂಡಿರುವುದು. ಅದರಲ್ಲೂ ಬಸವಣ್ಣ, ಅಕ್ಕ, ಅಲ್ಲಮ, ನೀಲಾಂಬಿಕೆ, ಗಂಗಾಂಬಿಕೆ ಮುಂತಾದ ಮೇಲುಸ್ತರದ ವಚನಕಾರರಲ್ಲಿ ವೀರಶೈವ ಧರ್ಮದ ಗುರುಲಿಂಗಜಂಗಮ ಪಾದೋದಕ ಪ್ರಸಾದ ಇತ್ಯಾದಿ ಯಾವುದೇ ಸಿದ್ಧಾಂತಗಳ ಜಿಜ್ಞಾಸೆಯೆಂಬುದು ಬದುಕಿನ ನಡಾವಳಿಯ ವ್ಯಾಪ್ತಿಯಲ್ಲಿ ಸಾಮಾನ್ಯೀಕರಣಗೊಂಡ ಚಿಂತನೆಯಾಗಿದೆ."[೫] ಹೀಗಾಗಿ ವೃತ್ತಿನಿರತ ವಚನಕಾರರ ವಚನಗಳಲ್ಲಿ ವೃತ್ತಿ ಮತ್ತು ನಿತ್ಯದ ಬದುಕು, ಜೀವನ ಬೇರೆ ಬೇರೆಯಾಗದೆ ಒಂದೇ ಆಗಿದೆ. ನಿತ್ಯದ ಜೀವನವೇ ಭಕ್ತಿಯಾಗಿ ನಿರ್ಮಿತಗೊಂಡಿದೆ. ಅದು ಅವರ ಕಾಯಕದಿಂದ ಬಂದು ವಚನಗಳಲ್ಲಿ ಪ್ರಕಟಗೊಂಡಿದೆ.

"ಇಲ್ಲಿ ಕಾಯಕ ಮೂಲದ ಪರಿಭಾಷೆ, ಧಾರ್ಮಿಕ ಜಿಜ್ಞಾಸೆಯ ಸಲಕರಣೆಗಳಂತೆ ಬಳಕೆಯಾಗುತ್ತಿವೆ. ವೃತ್ತಿಯೆಂಬುದು ವಸ್ತುರೂಪಿ ಭಿತ್ತಿಯಾಗಿ ನಿರೂಪಿತವಾಗುತ್ತದೆ. ಅನುಕೂಲತ್ವದಲ್ಲಿ ಆಗುವ ಕ್ರಿಯೆಯೋ ಅದೇ ರೀತಿ ಇಲ್ಲಿನ ಚಿಂತನ ಮತ್ತು ವ್ಯಕ್ತಿ ಧರ್ಮದ ಪರಿಭಾಷೆಗಳ ಪದ ಮೈತ್ರಿಯ ಸಂಬಂಧ. ಇನ್ನೂ ವಿಸ್ತರಿಸಿ ಹೇಳುವುದಾದರೆ, ವೃತ್ತಿಧರ್ಮದ ಅನುಭವ ಸಾಮಾನ್ಯತೆ ಧಾರ್ಮಿಕ ಜಿಜ್ಞಾಸೆಯ ಅನುಭವ ವಿಶೇಷತೆಯನ್ನು ವ್ಯಂಜಿಸುವುದಕ್ಕೆ ವಾಹಕ ವಸ್ತುರೂಪವಾಗಿ ಒದಗಿ ಬರುತ್ತದೆ, ಕಾಯಕ-ಕಾಯಕದಂತೆ ಪದ-ಪದಾರ್ಥಗಳ ಸಂಬಂಧದಂತೆ. ಹೀಗಾಗಿ ಗೊಲ್ಲಾಳನ ವಚನಗಳಲ್ಲಿ ಪದ-ಪದಾರ್ಥಗಳೆಂಬ ಎರಡೂ ರೀತಿಯ ರಚನೆಗಳನ್ನು ಕಾಣಬಹುದು."[೬] ಕಾಯಕ ತತ್ವವನ್ನು ಅರಿಯಲು ವೃತ್ತಿನಿರತ ವಚನಕಾರರ ವಚನಗಳು ಕನ್ನಡಿಯಾಗಿವೆ. ಇಡೀ ವೃತ್ತಿ ಸಮುದಾಯವೇ ಒಟ್ಟಾಗಿ ಭಾಗವಹಿಸುವುದರ ಜತೆಗೆ ತಮ್ಮ ತಮ್ಮ ವೃತ್ತಿಗಳನ್ನು ವಚನಗಳಲ್ಲಿ ತರುವ, ವಚನಗಳನ್ನು ವೃತ್ತಿಯ ಉಪಕರಣಗಳ ಮೂಲಕ ಅಭಿವ್ಯಕ್ತಿಸಿರುವ ಬಗೆ ಹೋರಾಟದ ಸ್ವರೂಪವನ್ನು ತಿಳಿಸುತ್ತದೆ. ವಚನಕಾರರಿಗೂ ಮತ್ತು ವೃತ್ತಿಗೂ, ವೃತ್ತಿಗೂ ಮತ್ತು ಬದುಕಿಗೂ ಅಂತರ್‌ಸಂಬಂಧವನ್ನು ಕಲ್ಪಿಸಿದೆ.

ಕೊನೆಟಿಪ್ಪಣಿ

೧. ಎಂ. ಚಿದಾನಂದಮೂರ್ತಿ, ವಚನ ಸಾಹಿತ್ಯ, ಪು.ಸಂ. ೯೨, ಸಪ್ನ ಬುಕ್‌ಹೌಸ್, ಬೆಂಗಳೂರು, ೨೦೧೦.

೨. ಮ.ನ. ಜವರಯ್ಯ, ದಲಿತ ವರ್ಗದ ಶರಣರು ಮತ್ತು ಶರಣೆಯರು : ಒಂದು ಅಧ್ಯಯನ, ಪು.ಸಂ. ೧೫೨, ಸಿದ್ಧಾರ್ಥ ಗ್ರಂಥಮಾಲೆ, ಮೈಸೂರು, ೧೯೯೭.

೩. ಚನ್ನಪ್ಪ ಅಂಗಡಿ, ಎದೆಯ ಒಕ್ಕಲಿಗ, ಪು.ಸಂ. ೬೩, ಶ್ರೀ ಚನ್ನಬಸವೇಶ್ವರ ಸಂಸ್ಥಾನ ಹಿರೇಮಠ, ಹಾರಕೂಡ, ೨೦೧೪.

೪. ಅದೇ, ಪು.ಸಂ. ೬೬.

೫. ಎಸ್.ಜಿ. ಸಿದ್ಧರಾಮಯ್ಯ (ಲೇ.), ವಚನಕಾರ ವೀರಗೊಲ್ಲಾಳ, ಪು.ಸಂ. ೮, ಸಾಹಿತ್ಯ ವಿಮರ್ಶೆ, ಬಿ.ಎಸ್. ನಾಗರತ್ನಕುಮಾರಿ (ಸಂ.), ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೬. ಅದೇ, ಪು.ಸಂ. ೯.

ಅಧ್ಯಾಯ : ಎಂಟು

ಉಪಸಂಹಾರ

ಉಪಸಂಹಾರ

ವಚನಕಾರರು ಲೋಕಾನುಭಗಳಿಂದ ಮನುಷ್ಯನ ಬದುಕನ್ನು ವ್ಯಾಖ್ಯಾನಿಸುವ ತಾತ್ವಿಕತೆಯನ್ನು ಕಟ್ಟಿಕೊಳ್ಳುತ್ತಾರೆ. ಲೋಕದ ಅನುಭವಗಳ ಒಡಲಿನಿಂದಲೇ ವಚನಗಳನ್ನು ಕಟ್ಟಿದರೆ ವಚನಗಳಲ್ಲಿ ಪ್ರಾದೇಶಿಕತೆಯನ್ನು ಕಾಣಬಹುದು. ವಚನಕಾರರು ವಚನಗಳನ್ನು ಕಟ್ಟಲು ಅದಕ್ಕೆ ಬೇಕಾದ ಪರಿಕರಗಳನ್ನು ಅಂದರೆ ಅನುಭವವನ್ನು ಸೃಷ್ಟಿಸಿಕೊಳ್ಳುತ್ತಾರೆ. ಅದರಲ್ಲೂ ಅನುಭವಗಳನ್ನು ಅನುಭವಿಸಿಯೇ ಪಡೆದಿದ್ದಾರೆ. ಇಂತಹ ಅನುಭವಗಳು ತಮ್ಮ ವೃತ್ತಿ ಮೂಲದಿಂದಲೇ ಕಂಡುಕೊಂಡಂತಹವು ಆಗಿವೆ. ಹೀಗಾದಗ ಅವರು ಹೇಳಬಯಸಿದ ಆಶಯ, ತತ್ವ, ಸಿದ್ಧಾಂತ ಅನುಭವ ಮೂಲವಾಗಿ ಬಂದು, ತಮ್ಮ ವೃತ್ತಿ ಉಪಕರಣಗಳ ಮೂಲಕ ಅಭಿವ್ಯಕ್ತಗೊಳ್ಳುತ್ತವೆ. ಇಲ್ಲಿ ಮುಖ್ಯವಾಗಿ ವಚನಕಾರರ ಲೋಕದೃಷ್ಟಿಯೇ ಎದ್ದುಕಾಣುತ್ತದೆ.

ಆಯಾ ಕಾಲದಲ್ಲಿ ಹುಟ್ಟಿಕೊಂಡ ಸಾಹಿತ್ಯ ಚಳುವಳಿಗಳು ಒಂದು ತಾತ್ವಿಕತೆಯನ್ನು ರೂಪಿಸಿಕೊಂಡಿರುತ್ತವೆ. ಆಯಾಕಾಲದಲ್ಲಿ ಬರೆಯಲು ತೊಡಗುವವರು ಆಗ ಪ್ರಸ್ತುತವಿರುವ ಚಳುವಳಿಗಳ ತಾತ್ವಿಕತೆಯನ್ನು ಸ್ವೀಕಾರ ಮಾಡಿಕೊಂಡಿರುತ್ತಾರೆ. ಇದು ಸಹಜವೇ ಆಗಿರುತ್ತದೆ. ಇದು ವಚನಕಾರರಿಗೂ ಅನ್ವಯಿಸುವಂತಹದ್ದು ಎಂಬುದು ಒಪ್ಪಿತವಾದದ್ದೇ. ಆದರೆ ಇಂತಹ ತಾತ್ವಿಕತೆಯನ್ನು ಒಪ್ಪಿಕೊಂಡು ಅನೇಕ ವಚನಕಾರರು ತಮ್ಮ ಅನನ್ಯತೆಯನ್ನು ತಮ್ಮ ವಚನಗಳಲ್ಲಿ ನಿರೂಪಿಸಿದ್ದಾರೆ.

ದೃಷ್ಟಿಕೋನವೆಂಬ ತಾತ್ವಿಕತೆಯು ವಚನಕಾರರಿಗೆ ತಾವು ಇದ್ದ ಪರಿಸರದ ಸಂಸ್ಕೃತಿಯಿಂದಲೂ ಪಡೆದಿದ್ದಾರೆ. ಸಾಮಾಜಿಕ ಅನುಭವದಿಂದಲೂ ರೂಪಗೊಳ್ಳಬಹುದು. ಲೋಕಾನುಭವದಿಂದ ಬದುಕಿನ ಅರಿವೆಯೇ ತಾತ್ವಿಕತೆಯಾಗಿ ಸಿಗಬಹುದು. ಸಾಮಾಜಿಕ, ಧಾರ್ಮಿಕ, ರಾಜಕೀಯ ಚಿಂತನೆಗೆ ತೊಡಗುವಂತವರಿಂದಲೂ ಅಥವಾ ಸಾಮಾಜಿಕ, ಧಾರ್ಮಿಕ ಚಳುವಳಿಯಿಂದ

ಅಧ್ಯಾಯ ೮

ಉಪಸಂಹಾರ

- ಉಪಸಂಹಾರ
- ಅಧ್ಯಯನದ ಫಲಿತಗಳು

ಲಭಿಸುವ ಆಶಯವನ್ನು ಪಡೆದುಕೊಂಡು ನೋಡುವ, ಗ್ರಹಿಸುವ ದೃಷ್ಟಿಕೋನವೊಂದನ್ನು ಪಡೆದುಕೊಳ್ಳಬಹುದು.

ವಚನಕಾರರ ಮುಂದೆ ಸಮಾಜವೊಂದು ಇರುತ್ತದೆ. ಆ ಸಮಾಜದಲ್ಲಿ ಓರೆಕೋರೆಗಳು ದಿಕ್ಕು ತಪ್ಪಿದನಡೆ, ಅಂದ ಆಚರಣೆಗಳು ಸಮಸ್ಯೆಗಳಾಗಿ ಪರಿಣಮಿಸಿದ್ದರೂ ಅವುಗಳನ್ನು ನೋಡಿಯು ನೋಡದಂತೆ ಕುಳಿತುಕೊಳ್ಳುವ ಸ್ವಭಾವದಿಂದ ಬೇರ್ಪಟ್ಟು ತಾವು ನಂಬಿರುವ ಪ್ರಣಾಳಿಕೆಯನ್ನು ಧಾರ್ಮಿಕವಾಗಿಯಾದರೂ ಸರಿ, ರಾಜಕೀಯವಾಗಿ, ಸಾಮಾಜಿಕ, ಆರ್ಥಿಕ ಹೀಗೆ ವಿವಿಧ ಕ್ಷೇತ್ರಗಳ ನ್ನೊಳಗೊಂಡಂತೆ ತಾತ್ವಿಕವಾಗಿ ವಿಶ್ಲೇಷಣೆಗೆ ಒಳಪಡಿಸುವುದನ್ನು ನಾವು ಗಮನಿಸಬಹುದು.

ತಮ್ಮ ವೃತ್ತಿಯನ್ನು ವಸ್ತುವಾಗಿ, ತಾವು ಮಾಡುವ ವೃತ್ತಿಯಲ್ಲಿ ಬಳಕೆ ಮಾಡುವ ಸಲಕರಣೆಗಳನ್ನು ಅವುಗಳ ಮೂಲಕ ವಚನಗಳನ್ನು ಬರೆದವರು ಸಮಾಜದಲ್ಲಿ ವಿವಿಧ ಕುಲವೃತ್ತಿಗಳನ್ನು ಮಾಡುತ್ತ ಬಂದು ತಾವು ಅದೇ ವೃತ್ತಿಯಲ್ಲಿ ಮುಂದುವರೆದ ವಚನಕಾರರು. ಉಳಿದ ವಚನಕಾರರಂತೆ ಅಂತರಂಗವನ್ನು ಮತ್ತು ಬಹಿರಂಗವನ್ನು ಶುದ್ಧಗೊಳಿಸಿಗೊಳ್ಳುವ ಕೆಲಸವನ್ನು ಮಾಡದ ಪ್ರಯತ್ನವನ್ನು ನೋಡಬಹುದು. ಜೊತೆಗೆ ಸಮಾಜವನ್ನು ತಿದ್ದುವ ಅಂಶಗಳು ಪ್ರಕಟಗೊಂಡಿರುವುದನ್ನು ನೋಡಿದರೆ ಇವರ ಅಭಿವ್ಯಕ್ತಿಯ ಉದ್ದೇಶಗಳು ಆಶಯಗಳು ಸ್ಪಷ್ಟವಾಗುತ್ತದೆ. ಅಲ್ಲದೆ ಕಾಯಕ ನಿಷ್ಠೆಯನ್ನೊಳಗೊಂಡ ಜೀವನವೊಂದು ಕಾಣುತ್ತದೆ. ಮತ್ತು ವಚನಗಳ ರಚನೆ, ಅಭಿವ್ಯಕ್ತಿಯಲ್ಲಿ ಅವರ ಒಳಜೀವನದ ನಿಲುವುಗಳು, ತುಡಿತ, ಮಿಡಿತ, ತಾಕಲಾಟಗಳು, ಚಿಂತನೆಗಳು, ಆಶಯಗಳು, ಶುದ್ಧ ಸಮಾಜದ ಸ್ವಾತಂತ್ರ್ಯ ಬದುಕಿನ ಕನಸನ್ನು ಕಾಣುವ ಮನಸ್ಸು ಕಾಣಿಸಿಕೊಳ್ಳುತ್ತದೆ. ತಾವು ಮಾಡುತ್ತಿದ್ದ ವೃತ್ತಿಯ ಅನುಭವದಿಂದ ರಚನೆಗೊಂಡಿರುವಂತಹ ವಚನಗಳು ಅವರ ಜೀವನದ ಸಾಧನೆಯ ಚಿತ್ರಗಳನ್ನು ಅನಾವರಣಗೊಳಿಸುತ್ತವೆ.

ಈ ವಚನಕಾರರು ತಮ್ಮ ವೃತ್ತಿಯಲ್ಲಿ ಪಡೆದ ಅನುಭವಗಳನ್ನು, ಪಡೆದ ಚಿಂತನೆ, ಆಲೋಚನೆಯನ್ನು ತಮ್ಮ ನಿತ್ಯದ ಬದುಕಿನಲ್ಲಿ ಬಳಸುವ ಸಾಮಾಗ್ರಿಗಳ ಮೂಲಕವೇ ಅಭಿವ್ಯಕ್ತಿಪಡಿಸಿರುವುದು ವಿಶೇಷ ಮತ್ತು ವೈಶಿಷ್ಟ್ಯವಾಗಿದೆ. ಯಾಕೆಂದರೆ ಅದುವರೆಗೆ ಹುಟ್ಟಿದ ಸಾಹಿತ್ಯ ಅನುಭವವನ್ನೊಳಗೊಂಡಿರುವದು ಬಹಳಷ್ಟು ಕಡಿಮೆ. ಇದ್ದರೂ ಹೀಗೆ ತಾವು ಮಾಡುತ್ತಿದ್ದ ಕಾಯಕವನ್ನು ಬದಿಗಿಟ್ಟು ತಮ್ಮ ಚಿಂತನೆಗಳಿಗೂ ಕಾಯಕಕ್ಕೂ ಸಂಬಂಧವನ್ನೇ ಮರೆತು ಕಾವ್ಯ, ಕೃತಿ ರಚನೆಗೆ ತೊಡಗಿರುವುದನ್ನೂ ನಾವು ಹನ್ನೆರಡನೆ ಶತಮಾನ ಮತ್ತು ಅದಕ್ಕೂ ಮುಂಚೆ ಬಂದ ಸಾಹಿತ್ಯವನ್ನು ಗಮನಿಸಿ ತಿಳಿಯಬೇಕಾಗುತ್ತದೆ. ಇದು ವಚನಕಾರರ ಸಾಮಾಜಿಕ ಹೋರಾಟದ ಫಲವು ಆಗಿದೆ ಎಂದೇ ಹೇಳಬೇಕಾಗುತ್ತದೆ. ಅದು ವಚನಕಾರರು ಅನುಭಾವಕ್ಕೆ ಬಾರದ ವಿಷಯದ ಗೊಡವೆಗೆ ಹೋಗದಿರುವುದನ್ನು ನೋಡಿ ಹೇಳಬಹುದು. ಮತ್ತು ಅವರು ಅನುಭಾವದಿಂದ ತಾವು ಕಂಡುಕೊಂಡಿದ್ದ ಸತ್ಯವನ್ನೇ ಹೇಳುವ ಪ್ರಯತ್ನ ಮಾಡಿರುವುದು ವಿಶೇಷ. ಬಹುಶ ಅವರು ತಮ್ಮ ವೃತ್ತಿಗೆ ನೀಡುತ್ತಿದ್ದ ಗೌರವ, ಮಹತ್ವದಿಂದ ಇದೂ ಸಾಧ್ಯವಾಗಿರಬಹುದು ಮತ್ತು

ತಮ್ಮ ವೃತ್ತಿಯೇ ಅವರ ಅನುಭಾವಿಕ ನೆಲೆಯ ಮಾರ್ಗದರ್ಶಿತ್ವ, ಆಧ್ಯಾತ್ಮಿಕ ಸಾಧನೆಯ ಹಾದಿಯನ್ನಾಗಿ ಮಾಡಿಕೊಂಡಿದ್ದಾರೆ.

ಕುಲ ಮೂಲದ ವೃತ್ತಿಯನ್ನು ಅನುಸರಿಸಿದವರಲ್ಲಿ ಪುರುಷರು ಮತ್ತು ಸ್ತ್ರೀಯರು ಇರುವುದನ್ನು ಗುರುತಿಸಬಹುದು. ಇವರಲ್ಲಿ ಅನೇಕರು ತಮ್ಮ ವಂಶ ಪಾರಂಪರ್ಯ ವೃತ್ತಿಯನ್ನು ಕೈಗೊಂಡು ಮುಂದುವರೆಸಿದರೆ, ಇನ್ನೂ ಕೆಲವರು ತಮ್ಮ ಇಚ್ಛೆ ಅನುಸಾರ ತಮ್ಮ ಆಯ್ಕೆಯ ವೃತ್ತಿಯನ್ನು ಕೈಗೊಂಡಿದ್ದಾರೆ ಎಂಬುದು ಕೆಲವು ವಚನಕಾರರ ಜೀವನ ಸಂಗತಿಯಿಂದ ತಿಳಿದು ಬರುತ್ತದೆ. ಹೀಗೆ ವೃತ್ತಿಯನ್ನು ಅವಲಂಬಿಸಿದವರಲ್ಲಿ ಪುರುಷರು ಮತ್ತು ಮಹಿಳಾ ವಚನಕಾರರು ಕಾಣಬರುತ್ತಾರೆ.

ಅಧ್ಯಯನದ ಫಲಿತಗಳು

೧. ವೃತ್ತಿನಿರತ ವಚನಕಾರರು ಎಂದು ಗುರುತಿಸಿಕೊಳ್ಳುವವರು ಭಕ್ತಿ ಚಳುವಳಿಯಲ್ಲಿ ತಮ್ಮನ್ನು ತೊಡಗಿಸಿಕೊಂಡು ಭಕ್ತರಾಗಿ ಬೆಳೆದವರಾಗಿದ್ದಾರೆ. ಭಕ್ತಿ ಚಳುವಳಿಯ ಗುಣಲಕ್ಷಣಗಳನ್ನು ಮೈಗೂಡಿಸಿಕೊಂಡು ತಮ್ಮ ವ್ಯಕ್ತಿತ್ವನ್ನು ರೂಪಿಸಿಕೊಂಡು ಬಾಳಿದ್ದಾರೆ.

೨. ಭಕ್ತಿ ಚಳುವಳಿಯ ಪ್ರಧಾನ ಗುಣಗಳಲ್ಲಿ ಕಾಯಕವು ಪ್ರಧಾನವಾದದ್ದು. ಪ್ರತಿಯೊಬ್ಬ ವ್ಯಕ್ತಿ ತನ್ನ ದೇಹ ಮತ್ತು ಮನಸ್ಸಿಗೆ ಅನುಗುಣವಾಗಿ ಒಂದು ವೃತ್ತಿಯನ್ನು ಅನುಸರಿಸಿ ಕಾಯಕ ನಿರತನಾಗಿರುತ್ತಾನೆ.

೩. ಕಾಯಕತತ್ವ ವಚನಕಾರರಲ್ಲಿ ಬಹುವಿಸ್ತಾರವಾದ, ಆಳವಾದ ನೆಲೆಯನ್ನು ಹೊಂದಿದೆ. ದೇಹ ಮತ್ತು ಮನಸ್ಸು ತೊಡಗಿಕೊಂಡು ದುಡಿಯುವ ಮೂಲಕ ಆಗುವ ಉತ್ಪನ್ನ ಮತ್ತು ಅದರ ಬಳಕೆ ಪ್ರಾಮಾಣಿಕವಾಗಿರಬೇಕು ಎಂಬುದನ್ನು ಅನೇಕ ವಚನಕಾರರು ಮತ್ತು ವಚನಕಾರ್ತಿಯರು ತಮ್ಮ ವಚನಗಳಲ್ಲಿ ವ್ಯಕ್ತಪಡಿಸಿದ್ದಾರೆ.

೪. ಕಾಯಕ ಅಥವಾ ದುಡಿಮೆ ಈ ವಚನಕಾರರಿಗೆ ಕೇವಲ ಲೌಕಿಕ ನೆಲೆಯದ್ದು ಮಾತ್ರ ಅಲ್ಲ. ಅಲೌಕಿಕವಾದದ್ದು ಹೌದು. ಹೀಗೆ ಕಾಯಕದ ಮೂಲಕ ಸಾಮಾಜಿಕ, ಆರ್ಥಿಕ, ರಾಜಕೀಯ ಆಯಾಮವನ್ನು ಕಲ್ಪಿಸಿದ್ದಾರೆ.

೫. ದುಡಿಮೆ ಅಥವಾ ವೃತ್ತಿ ಈ ವಚನಕಾರರಿಗೆ ಉದರಪೋಷಣೆಗೆ ಮಾತ್ರ ಸೀಮಿತವಾದುದಲ್ಲ. ಅದನ್ನು ಆಧ್ಯಾತ್ಮದ ನೆಲೆಗೆ ಒಯ್ಯುತ್ತಾರೆ. ಉದಾ. ಅಂಬಿಗರ ಚೌಡಯ್ಯನ ಈ ವಚನವನ್ನು ನೋಡಬಹುದು.

> ಅಂಬಿಗ ಅಂಬಿಗ ಎಂದು ಕುಂದು ನುಡಿಯದಿರು
> ನಂಬಿದರೆ ಒಂದೇ ಹುಟ್ಟಲಿ
> ಕಡೆಯ ಹಾಯಿಸುವನಂಬಿಗರ ಚೌಡಯ್ಯ.

ಈ ನೆಲೆ ಅನೇಕ ವೃತ್ತಿನಿರತ ವಚನಕಾರರಲ್ಲಿ ಕಾಣುತ್ತೇವೆ.

೬. ವೃತ್ತಿನಿರತ ವಚನಕಾರರಿಗೆ ತಮ್ಮ ದುಡಿಮೆಯ ಉತ್ಪನ್ನ ತಮಗೆ ಮಾತ್ರ ಸಲ್ಲುವಂತಹದ್ದು ಎಂದು ಭಾವಿಸುವುದಿಲ್ಲ. ಅಂದರೆ ಸಂಗ್ರಹ ಗುಣದಿಂದ ಮುಕ್ತರಾಗಲು ದಾಸೋಹಕ್ಕೆ ಬಳಸುತ್ತಾರೆಂದು ವಚನಗಳಿಂದ ತಿಳಿಯುತ್ತದೆ. ವಚನ ಸಾಹಿತ್ಯದಲ್ಲಿ ಕಾಯಕದ ಜೊತೆ ಜೊತೆಗೆ ದಾಸೋಹ ಪ್ರಮುಖವಾಗಿ ಕಾಣಿಸಿಕೊಳ್ಳುತ್ತದೆ. ಜಂಗಮ ದಾಸೋಹಕ್ಕೆ ಎನ್ನುವ ಎರಡು ಪದಗಳಲ್ಲಿ ವ್ಯಕ್ತವಾಗುವ ಭಾವ, ಅರ್ಥ, ಸಮಾಜ ಎಂದು ಗ್ರಹಿಸಬೇಕು. ಸಮಾಜ ಮುಖ್ಯ ಎಂದು ವೃತ್ತಿನಿರತ ವಚನಕಾರರು ಭಾವಿಸಿದ್ದರು.

೭. ವೃತ್ತಿನಿರತ ವಚನಕಾರರು ತಮ್ಮ ವೃತ್ತಿಸೂಚಕ ವಚನಗಳನ್ನು ಸಹಜವಾಗಿ ಅಭಿವ್ಯಕ್ತಿಸಿದ್ದಾರೆ. ಈ ವಚನಗಳು ವೃತ್ತಿಯನ್ನು ಸೂಚಿಸುವುದರ ಜೊತೆಗೆ ಆ ವೃತ್ತಿಯ ಜೊತೆಗೆ ಇರುವ ಸಂಬಂಧಗಳನ್ನು ಅಂದರೆ ವೃತ್ತಿ, ದಾಸೋಹ, ಆಧ್ಯಾತ್ಮ ಮತ್ತು ಅರ್ಪಣೆಯ ಸಂಬಂಧವನ್ನು ಸೂಚಿಸುತ್ತವೆ. ಉದಾ.

ನಾ ತಿರುಹುವ ರಾಟೆಯ ಕುಲಜಾತಿ ಕೇಳಿರಣ್ಣ
ಅಡಿಯ ಅಲಗೆ ಬ್ರಹ್ಮ, ತೋರಣ ವಿಷ್ಣು, ನಿಂದ ಬೊಂಬೆ ಮಹಾರುದ್ರ
ರುದ್ರನ ಬೆಂಬಳಿಯವೆರಡು ಸೂತ್ರಕರ್ಣ
ಅರಿವೆಂಬ ಕದಿರು, ಭಕ್ತಿಯೆಂಬ ಕೈಯಲ್ಲಿ ತಿರುಹಲಾಗಿ
ಸುತ್ತಿತ್ತು ನೂಲು, ಕದಿರು ತುಂಬಿತ್ತು
ರಾಟೆಯ ತಿರುಹಲಾರೆ, ಎನ್ನಗಂಡ ಕುಟ್ಟಿಹ
ಇನ್ನೇವೆ ಕದಿರರೆಮ್ಮಿಯೊಡೆಯ ಗುಮ್ಮೇಶ್ವರಾ?

೮. ವೃತ್ತಿನಿರತ ವಚನಕಾರರು ಸ್ತ್ರೀ ಸಮಾನತೆ, ಜಾತ್ಯಾತೀತತೆ, ಲಿಂಗ ತಾರತಮ್ಯ, ಜಾತಿ ಶೋಷಣೆ ಮುಂತಾದ ತಮ್ಮ ಕಣ್ಣ ಮುಂದಿನ ವಿಷಮ ಜಗತ್ತನ್ನು ಪ್ರತಿಭಟನಾತ್ಮಕವಾಗಿ ವಿರೋಧಿಸುವ ಗುಣವನ್ನು ಹೊಂದಿದವರು. ಈ ವಚನಕಾರರು ಅಲ್ಲಮ, ಬಸವಣ್ಣ, ಅಕ್ಕಮಹಾದೇವಿ ಮುಂತಾದ ಪ್ರಧಾನ ಚರ್ಚೆಯಲ್ಲಿ ಕಾಣಿಸಿಕೊಳ್ಳುವ ವಚನಕಾರರಿಗಿಂತ ಭಿನ್ನವಾಗಿ ಕಾಣುತ್ತಾರೆ. ತಮ್ಮ ಅನುಭವದ ಪರಿದಿಯೊಳಗೆ ಸೀಮಿತ ನೆಲೆಯಲ್ಲಿ ವಚನ ರಚನೆ ಮಾಡಿದ್ದರೂ ಆ ವಚನಗಳಿಗೆ ಮಹತ್ವವಿದೆ ಎಂದು ಅರಿವಿಗೆ ಬರುತ್ತದೆ.

೯. ವೃತ್ತಿನಿರತ ವಚನಕಾರರಲ್ಲಿ ಮಹಿಳೆಯರು ಇದ್ದಾರೆ. ಅವರ ಸಂಖ್ಯೆ ಹದಿನೈದಕ್ಕೂ ಹೆಚ್ಚು. ಈ ಮಹಿಳೆಯರು ಇಷ್ಟು ಪ್ರಮಾಣದಲ್ಲಿದ್ದು, ಅವರ ಹೆಸರಿನ ಹಿಂದೆ ವೃತ್ತಿ ಸೂಚಕ ಪದ ಇವೆ. ಆದರೂ ಆ ವೃತ್ತಿಯ ಸ್ವರೂಪ ಏನೆಂದು ಸಾಮಾಜಿಕವಾಗಿ ಅರಿಯಬಹುದು. ಆದರೆ ಅನೇಕ ಮಹಿಳೆಯರು ಬರೆದ ವಚನಗಳ ಪ್ರಮಾಣ ಕಮ್ಮಿ. ಅನೇಕ ಮಹಿಳೆಯರು ವ್ರತ ಮತ್ತು ಅದರ ಪಾಲನೆಗೇ ಹೆಚ್ಚು ಹೊತ್ತು ಕೊಟ್ಟವರಿದ್ದಾರೆ. ಆದರೂ ಈ ಮಹಿಳೆಯರು ಕೂಡ ಕಾಯಕ ತತ್ವವನ್ನು ಬಲ್ಲವರಾಗಿದ್ದರು ಎನ್ನುವ ಸೂಚನೆಗಳು ಸಿಗುತ್ತವೆ.

ಮೂಲಆಕರ ಪಠ್ಯಗಳು

೧. ಅಂಬಿಗರ ಚೌಡಯ್ಯ, ಸಂಕೀರ್ಣ ವಚನ ಸಂಪುಟ ೧, (ಸಂ.) ಕಲಬುರ್ಗಿ ಎಂ.ಎಂ., ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ೧೯೯೩.

೨. ಅಮುಗೆದೇವ, ಸಂಕೀರ್ಣ ವಚನ ಸಂಪುಟ ೧, (ಸಂ.) ಕಲಬುರ್ಗಿ ಎಂ.ಎಂ., ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ೧೯೯೩.

೩. ಆಯ್ದಕ್ಕಿ ಲಕ್ಕಮ್ಮ, ಶಿವಶರಣೆಯರ ವಚನ ಸಂಪುಟ, (ಸಂ.) ವೀರಣ್ಣ ರಾಜೂರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ೧೯೯೩.

೪. ಆಯ್ದಕ್ಕಿ ಮಾರಯ್ಯ, ಅಗ್ಗವಣಿ ಹಂಪಯ್ಯ, ಸಂಕೀರ್ಣ ವಚನ ಸಂಪುಟ ೧, (ಸಂ.) ಕಲಬುರ್ಗಿ ಎಂ.ಎಂ., ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ೧೯೯೩.

೫. ಉಗ್ಗಡಣೆ ಗುಬ್ಬಿದೇವಾರ್ಯ, ಸಂಕೀರ್ಣ ವಚನ ಸಂಪುಟ ೧, (ಸಂ.) ಕಲಬುರ್ಗಿ ಎಂ.ಎಂ., ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ೧೯೯೩.

೬. ಎಚ್ಚರಿಕೆ ಕಾಯಕದ ಮುಕ್ತಿನಾಥಯ್ಯ, ಸಂಕೀರ್ಣ ವಚನ ಸಂಪುಟ ೧, (ಸಂ.) ಕಲಬುರ್ಗಿ ಎಂ.ಎಂ., ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ೧೯೯೩.

೭. ಎಲೆಗಾರ ಕಾಮಣ್ಣ, ಸಂಕೀರ್ಣ ವಚನ ಸಂಪುಟ ೧, (ಸಂ.) ಕಲಬುರ್ಗಿ ಎಂ.ಎಂ., ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ೧೯೯೩.

೮. ಒಕ್ಕಲಿಗ ಮುದ್ದಣ್ಣ, ಸಂಕೀರ್ಣ ವಚನ ಸಂಪುಟ ೧, (ಸಂ.) ಕಲಬುರ್ಗಿ ಎಂ.ಎಂ., ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ೧೯೯೩.

೯. ಕದಿರೆ ಕಾಳವ್ವೆ, ಶಿವಶರಣೆಯರ ವಚನ ಸಂಪುಟ, (ಸಂ.) ವೀರಣ್ಣ ರಾಜೂರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ೧೯೯೩.

೧೦. ಕಂಬದ ಮಾರಿತಂದೆ, ಸಂಕೀರ್ಣ ವಚನ ಸಂಪುಟ ೨, (ಸಂ.) ವಿದ್ಯಾಶಂಕರ ಎಸ್., ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ೧೯೯೩.

೧೧. ಕಲಕೇತ ಬ್ರಹ್ಮಯ್ಯ, ಸಂಕೀರ್ಣ ವಚನ ಸಂಪುಟ ೨, (ಸಂ.) ವಿದ್ಯಾಶಂಕರ ಎಸ್., ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ೧೯೯೩.

೧೨. ಕದಿರೆ ರೆಮ್ಮವ್ವೆ, ಶಿವಶರಣೆಯರ ವಚನ ಸಂಪುಟ, (ಸಂ.) ವೀರಣ್ಣ ರಾಜೂರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ೧೯೯೩.

೧೩. ಕನ್ನಡಿ ಕಾಯಕದ ರೇವಮ್ಮ, ಶಿವಶರಣೆಯರ ವಚನ ಸಂಪುಟ, (ಸಂ.) ವೀರಣ್ಣ ರಾಜೂರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ೧೯೯೩.

೧೪. ಕಿಲಾರದ ಭೀಮಣ್ಣ, ಸಂಕೀರ್ಣ ವಚನ ಸಂಪುಟ ೨, (ಸಂ.) ವಿದ್ಯಾಶಂಕರ ಎಸ್., ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ೧೯೯೩.

೧೫. ಕಾಲಕಣ್ಣಿಯ ಕಾಮಮ್ಮ, ಶಿವಶರಣೆಯರ ವಚನ ಸಂಪುಟ, (ಸಂ.) ವೀರಣ್ಣ ರಾಜೂರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ೧೯೯೩.

೧೬. ಕೂಗಿನ ಮಾರಯ್ಯ, ಸಂಕೀರ್ಣ ವಚನ ಸಂಪುಟ ೨, (ಸಂ.) ವಿದ್ಯಾಶಂಕರ ಎಸ್., ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ೧೯೯೩.

೧೭. ಕೊಟ್ಟಣದ ಸೋಮವ್ವ, ಶಿವಶರಣೆಯರ ವಚನ ಸಂಪುಟ, (ಸಂ.) ವೀರಣ್ಣ ರಾಜೂರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ೧೯೯೩.

೧೮. ಗಾಣದ ಕಣ್ಣಪ್ಪ, ಸಂಕೀರ್ಣ ವಚನ ಸಂಪುಟ ೨, (ಸಂ.) ವಿದ್ಯಾಶಂಕರ ಎಸ್., ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ೧೯೯೩.

೧೯. ಜೋದರ ಮಾಯಣ್ಣ, ಸಂಕೀರ್ಣ ವಚನ ಸಂಪುಟ ೨, (ಸಂ.) ವಿದ್ಯಾಶಂಕರ ಎಸ್., ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ೧೯೯೩.

೨೦. ಡಕ್ಕೆಯ ಬೊಮ್ಮಣ್ಣ, ಸಂಕೀರ್ಣ ವಚನ ಸಂಪುಟ ೨, (ಸಂ.) ವಿದ್ಯಾಶಂಕರ ಎಸ್., ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ೧೯೯೩.

೨೧. ತುರುಗಾಹಿ ರಾಮಣ್ಣ, ಸಂಕೀರ್ಣ ವಚನ ಸಂಪುಟ ೨, (ಸಂ.) ವಿದ್ಯಾಶಂಕರ ಎಸ್., ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ೧೯೯೩.

೨೨. ಫಲಹಾರ ಕಾಯಕದ ಚಿಕ್ಕದೇವಯ್ಯ, ಸಂಕೀರ್ಣ ವಚನ ಸಂಪುಟ ೩, (ಸಂ.) ಹಿರೇಮಠ ಬಿ.ಆರ್., ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ೧೯೯೩.

೨೩. ಬಹುರೂಪಿ ಚೌಡಯ್ಯ, ಸಂಕೀರ್ಣ ವಚನ ಸಂಪುಟ ೩, (ಸಂ.) ಹಿರೇಮಠ ಬಿ.ಆರ್., ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ೧೯೯೩.

೨೪. ಮಡಿವಾಳ ಮಾಚಯ್ಯ, ಸಂಕೀರ್ಣ ವಚನ ಸಂಪುಟ ೩, (ಸಂ.) ಹಿರೇಮಠ ಬಿ.ಆರ್., ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ೧೯೯೩.

೨೫. ಮಾದಾರ ಚನ್ನಯ್ಯ, ಸಂಕೀರ್ಣ ವಚನ ಸಂಪುಟ ೩, (ಸಂ.) ಹಿರೇಮಠ ಬಿ.ಆರ್., ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ೧೯೯೩.

೨೬. ಮಾದಾರ ದೂಳಯ್ಯ, ಸಂಕೀರ್ಣ ವಚನ ಸಂಪುಟ ೩, (ಸಂ.) ಹಿರೇಮಠ ಬಿ.ಆರ್., ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ೧೯೯೩.

೨೭. ಮೇದಾರ ಕೇತಯ್ಯ, ಸಂಕೀರ್ಣ ವಚನ ಸಂಪುಟ ೩, (ಸಂ.) ಹಿರೇಮಠ ಬಿ.ಆರ್., ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ೧೯೯೩.

೨೮. ಮೋಳಿಗೆ ಮಾರಯ್ಯ, ಸಂಕೀರ್ಣ ವಚನ ಸಂಪುಟ ೩, (ಸಂ.) ಹಿರೇಮಠ ಬಿ.ಆರ್., ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ೧೯೯೩.

೨೯. ವೀರಗೊಲ್ಲಾಳ, ಸಂಕೀರ್ಣ ವಚನ ಸಂಪುಟ ೪, (ಸಂ.) ಹಿರೇಮಠ ಬಿ.ಆರ್., ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ೧೯೯೩.

೨೦. ವೈದ್ಯ ಸಂಗಣ್ಣ, ಸಂಕೀರ್ಣ ವಚನ ಸಂಪುಟ ೪, (ಸಂ.) ಹಿರೇಮಠ ಬಿ.ಆರ್., ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ೧೯೯೩.

೩೧. ಶಿವಲೆಂಕ ಮಂಚಣ್ಣ, ಸಂಕೀರ್ಣ ವಚನ ಸಂಪುಟ ೪, (ಸಂ.) ಹಿರೇಮಠ ಬಿ.ಆರ್., ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ೧೯೯೩.

೩೨. ಸತ್ತಿಗೆ ಕಾಯಕದ ಮಾರಯ್ಯ, ಸಂಕೀರ್ಣ ವಚನ ಸಂಪುಟ ೪, (ಸಂ.) ಹಿರೇಮಠ ಬಿ.ಆರ್., ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ೧೯೯೩.

೩೩. ಸುಂಕದ ಬಂಕಣ್ಣ, ಸಂಕೀರ್ಣ ವಚನ ಸಂಪುಟ ೪, (ಸಂ.) ಹಿರೇಮಠ ಬಿ.ಆರ್., ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ೧೯೯೩.

೩೪. ಸೂಜಿ ಕಾಯಕದ ರಾಮಿತಂದೆ, ಸಂಕೀರ್ಣ ವಚನ ಸಂಪುಟ ೪, (ಸಂ.) ಹಿರೇಮಠ ಬಿ.ಆರ್., ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ೧೯೯೩.

೩೫. ಸೂಳೆ ಸಂಕವ್ವೆ, ಶಿವಶರಣೆಯರ ವಚನ ಸಂಪುಟ, (ಸಂ.) ವೀರಣ್ಣ ರಾಜೂರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ೧೯೯೩.

೩೬. ಸೊಡ್ಡಳ ಬಾಚರಸ, ಸಂಕೀರ್ಣ ವಚನ ಸಂಪುಟ ೪, (ಸಂ.) ಹಿರೇಮಠ ಬಿ.ಆರ್., ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ೧೯೯೩.

೩೭. ಹಡಪದ ಅಪ್ಪಣ್ಣ, ಸಂಕೀರ್ಣ ವಚನ ಸಂಪುಟ ೪, (ಸಂ.) ಹಿರೇಮಠ ಬಿ.ಆರ್., ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ೧೯೯೩.

೩೮. ಹಾದರದ ಗಂಗವ್ವ, ಶಿವಶರಣೆಯರ ವಚನ ಸಂಪುಟ, (ಸಂ.) ವೀರಣ್ಣ ರಾಜೂರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ೧೯೯೩.

ಪರಾಮರ್ಶನ ಕೃತಿಗಳು

೧. ಅಮರೇಶ ನುಗಡೋಣಿ, (ಸಂ.) ಬಸವಣ್ಣನವರ ವಚನಗಳು:ಸಾಂಸ್ಕೃತಿಕ ಮುಖಾಮುಖಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨. ಅಂಗಡಿ ಎಸ್.ಎಸ್., ವಚನ ಸಾಹಿತ್ಯ ಭಾಷೆ, ಲಿಂಗಾಯತ ಅಧ್ಯಯನ ಅಕಾಡೆಮಿ, ನಾಗನೂರು ಶ್ರೀರುದ್ರಾಕ್ಷಿಮಠ, ಬೆಳಗಾವಿ.

೩. ಉಪಾಧ್ಯ ಜಿ.ಎನ್., ಏಲೇಶ್ವರ ಕೇತಯ್ಯ, ಶ್ರೀ ಬಸವ ಅಧ್ಯಯನ ಪೀಠ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೨೦೦೪

೪. ಕಲಬುರ್ಗಿ ಎಂ.ಎಂ. (ಸಂ.), ಸಂಕೀರ್ಣ ವಚನ ಸಂಪುಟ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೧೯೯೩.

೫. ಕರಿಯಪ್ಪ ಮಾಳಿಗೆ ಜೆ., ಮೋಳಿಗೆ ಮಾರಯ್ಯ, ಶ್ರೀ ಬಸವ ಅಧ್ಯಯನ ಪೀಠ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೨೦೧೫

೬. ಚನ್ನಪ್ಪ ಅಂಗಡಿ, ಎದೆಯ ಒಕ್ಕಲಿಗ, ಶ್ರೀ ಚನ್ನಬಸವೇಶ್ವರ ಸಂಸ್ಥಾನ ಹಿರೇಮಠ, ಹಾರಕೂಡ, ೨೦೧೪.

೭. ಚಂದ್ರಶೇಖರ ಟಿ.ಆರ್., ವಚನ ಸಂಸ್ಕೃತಿಯ ಸಾಮಾಜಿಕ ಆಯಾಮಗಳು, ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು, ೨೦೦೪.

೮. ಚಿಕ್ಕಣ್ಣ ಯಣ್ಣೆಕಟ್ಟೆ, ಬಹುರೂಪಿ ಚೌಡಯ್ಯ, ಶ್ರೀ ಬಸವ ಅಧ್ಯಯನ ಪೀಠ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೨೦೧೫

೯. ಚಿದಾನಂದಮೂರ್ತಿ ಎಂ., ಮಧ್ಯಕಾಲೀನ ಕರ್ನಾಟಕ ಮತ್ತು ಅಸ್ಪೃಶ್ಯತೆ, ಸಪ್ನ ಬುಕ್‌ಹೌಸ್, ಬೆಂಗಳೂರು.

೧೦. ಚಿದಾನಂದಮೂರ್ತಿ ಎಂ., ವಚನ ಸಾಹಿತ್ಯ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೧೧. ಚಿದಾನಂದಮೂರ್ತಿ ಎಂ., ಬಸವಣ್ಣ ಕರ್ನಾಟಕ ಭಾರತ, ಸ್ವಪ್ನ ಬುಕ್‌ಹೌಸ್, ಬೆಂಗಳೂರು, ೨೦೦೪.

೧೨. ಜವರಯ್ಯ ಮ.ನ. ದಲಿತ ವರ್ಗದ ಶರಣರು ಮತ್ತು ಶರಣೆಯರು ಒಂದು ಅಧ್ಯಯನ, ಸಿದ್ಧಾರ್ಥ ಗ್ರಂಥಮಾಲೆ, ಮೈಸೂರು, ೧೯೯೭.

೧೩. ಜವರೇಗೌಡ ದೇ, ವಚನಗಳಲ್ಲಿ ಸಮಾಜವಾದ, ಬೆಂಗಳೂರು ವಿಶ್ವವಿದ್ಯಾಲಯ, ೧೯೯೭.

೧೪. ತಿಪ್ಪೇರುದ್ರಸ್ವಾಮಿ ಎಚ್., ವಚನ ಸಾಹಿತ್ಯ ವೈಚಾರಿಕ ಅಧ್ಯಯನ, ಧಾರವಾಡ, ೧೯೭೭.

೧೫. ದಸ್ತಗೀರ್‌ಸಾಬ್ ದಿನ್ನಿ, ಆದಯ್ಯ, ಶ್ರೀ ಬಸವ ಅಧ್ಯಯನ ಪೀಠ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೨೦೧೫

೧೬. ನಂಜಯ್ಯ ಹೊಂಗನೂರು, ಡಕ್ಕೆಯ ಬೊಮ್ಮಣ್ಣ, ಶ್ರೀ ಬಸವ ಅಧ್ಯಯನ ಪೀಠ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೨೦೧೫

೧೭. ನಾಗರಾಜ ಪಿ., ಚನ್ನಬಸವಣ್ಣ, ಶ್ರೀ ಬಸವ ಅಧ್ಯಯನ ಪೀಠ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೨೦೧೫

೧೮. ನಾಗಭೂಷಣ ಸ್ವಾಮಿ ಓ.ಎಲ್. (ಸಂ.), ವಚನ ಸಾವಿರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೯. ನಾಗಭೂಷಣ ಸ್ವಾಮಿ ಓ.ಎಲ್., ವಚನ ವಿಚಾರ, ಅಲ್ಲಮ ಪ್ರಕಾಶನ, ಬೆಂಗಳೂರು.

೨೦. ನಾರಾಯಣ ಪಿ.ವಿ., ವಚನ ಸಮಗ್ರ, ವಸಂತ ಪ್ರಕಾಶನ, ಬೆಂಗಳೂರು, ೨೦೦೫.

೨೧. ನಾರಾಯಣ ಪಿ.ವಿ., ವಚನಗಳಲ್ಲಿ ಕಾಯಕ ಮತ್ತು ದಾಸೋಹ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ, ೨೦೦೧.

೨೨. ನಾರಾಯಣ ಪಿ.ವಿ., ವಚನ ಪರಿಸರ, ತಂಗಾಳಿ ಬೆಂಗಳೂರು, ೧೯೯೪.

೨೩. ನಾರಾಯಣ ಪಿ.ವಿ., ವಚನ ಸಾಹಿತ್ಯ ಒಂದು ಸಾಂಸ್ಕೃತಿಕ ಅಧ್ಯಯನ, ವೀರಶೈವ ಅಧ್ಯಯನ ಅಕಾಡೆಮಿ ಸಂಸ್ಥೆ, ಡಂಬಳ ಗದಗ, ೧೯೮೩.

೨೪. ಪುಟ್ಟಣ್ಣ ಎಂ., ಆಯ್ದಕ್ಕಿ ಮಾರಯ್ಯ-ಲಕ್ಕಮ್ಮ, ಶ್ರೀ ಬಸವ ಅಧ್ಯಯನ ಪೀಠ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೨೦೧೫

೨೫. ಪ್ರಶಾಂತ ನಾಯಕ ಜಿ., ಘಟ್ಟಿವಾಳಯ್ಯ, ಶ್ರೀ ಬಸವ ಅಧ್ಯಯನ ಪೀಠ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೨೦೧೫

೨೬. ಪ್ರೀತಿ ಶುಭಚಂದ್ರ, ಸೊಡ್ಡಳ ಬಾಚರಸ, ಶ್ರೀ ಬಸವ ಅಧ್ಯಯನ ಪೀಠ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೨೦೧೫

೨೭. ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು ಸಂ., ನಿಜದ ದಾರಿ, ಸಾಣೇಹಳ್ಳಿ, ೨೦೧೪.

೨೮. ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು, ಕಾಯಕ ದಾಸೋಹ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೧೯೯೪.

೨೯. ಬಸವರಾಜ ಕಲ್ಗುಡಿ, ಅನುಭಾವ ಸಾಂಸ್ಕೃತಿಕ ಸಮಸ್ಯೆ ಮತ್ತು ಹುಡುಕಾಟ, ಶ್ರೀ ಮುರುಘಾ ಮಠ, ಚಿತ್ರದುರ್ಗ, ೨೦೧೬

೩೦. ಬೈರಮಂಗಲ ರಾಮೇಗೌಡ, ಹಡಪದ ಅಪ್ಪಣ್ಣ, ಶ್ರೀ ಬಸವ ಅಧ್ಯಯನ ಪೀಠ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೨೦೧೫

೩೧. ಮಂಜುನಾಥ ಸಿ.ಯು., ವೀರಪ್ಪ ಬಿ.ಸಿ.(ಸಂ.), ವಚನಕಾರರು: ವ್ಯಕ್ತಿ ಹಾಗೂ ಅಭಿವ್ಯಕ್ತಿ.

೩೨. ಯಲ್ಲಪ್ಪ ಟಿ., ಮಡಿವಾಳ ಮಾಚಯ್ಯ, ಶ್ರೀ ಬಸವ ಅಧ್ಯಯನ ಪೀಠ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೨೦೧೫

೩೩. ಯಲ್ಲಪ್ಪ ಹಿಮ್ಮಡಿ, ನುಲಿಯ ಚಂದಯ್ಯ, ಶ್ರೀ ಬಸವ ಅಧ್ಯಯನ ಪೀಠ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೨೦೧೫

೩೪. ರಮಾಕುಮಾರಿ ಬಾ.ಹ.-ಅಮುಗೆ ರಾಯಮ್ಮ-ದೇವಯ್ಯ, ರಾಯಸದಮಂಚಣ್ಣ ರಾಯಮ್ಮ, ಶ್ರೀ ಬಸವ ಅಧ್ಯಯನ ಪೀಠ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೨೦೧೫

೩೫. ರಾಮಚಂದ್ರಪ್ಪ ಎ.ಬಿ., ಜೇಡರ ದಾಸಿಮಯ್ಯ, ಶ್ರೀ ಬಸವ ಅಧ್ಯಯನ ಪೀಠ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೨೦೧೫

೩೬. ಲಕ್ಷ್ಮಿ ನಾರಾಯಣ ಎ.ವಿ., ಅಂಬಿಗರ ಚೌಡಯ್ಯ, ಶ್ರೀ ಬಸವ ಅಧ್ಯಯನ ಪೀಠ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೨೦೧೫

೩೭. ಲೋಲಾಕ್ಷಿ ಎನ್.ಕೆ., ಹಡಪದ ಲಿಂಗಮ್ಮ, ಶ್ರೀ ಬಸವ ಅಧ್ಯಯನ ಪೀಠ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೨೦೧೫

೩೮. ವಿನಯಾ, ಮುಕ್ತಾಯಕ್ಕ ಮತ್ತು ಸತ್ಯಕ್ಕ, ಶ್ರೀ ಬಸವ ಅಧ್ಯಯನ ಪೀಠ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೨೦೧೫

೩೯. ವಿದ್ಯಾಶಂಕರ ಎಸ್. (ಸಂ.), ಸಂಕೀರ್ಣ ವಚನ ಸಂಪುಟ ೨, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೧೯೯೩.

೪೦. ವಿದ್ಯಾಶಂಕರ ಎಸ್., ಶಬ್ದದೊಳಗಣ ನಿಶ್ಯಬ್ದ, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು, ೨೦೧೦.

೪೧. ವೀರಣ್ಣ ಸಿ., ಕನ್ನಡ ಸಾಹಿತ್ಯ ಚಾರಿತ್ರಿಕ ಬೆಳವಣಿಗೆ, ಮಧ್ಯಕಾಲೀನ ಸಾಹಿತ್ಯ, ನವಕರ್ನಾಟಕ ಪ್ರಕಾಶನ, ಬೆಂಗಳೂರು.

೪೨. ವೀರಣ್ಣ ರಾಜೂರ (ಸಂ.), ಶಿವಶರಣೆಯರ ವಚನ ಸಂಪುಟ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೧೯೯೩.

೪೩. ವೀರಣ್ಣ ಸಿ. ಪ್ರ.ಸಂ., ತವನಿಧಿ, ಗೊ.ರು. ಚನ್ನಬಸಪ್ಪ, ಅಭಿನಂದನ ಗ್ರಂಥ, ಶರಣ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೧೪.

೪೪. ವೀರೇಶ ಬಡಿಗೇರ, ಬಾಚಿಕಾಯಕದ ಬಸವಯ್ಯ ವೃತ್ತಿ ಹಾಗೂ ತತ್ವ ಮೀಮಾಂಸೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೭.

೪೫. ವೇದಾ ಎಂ.ಎಸ್., ವಚನಕಾರ್ತಿಯರು, ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು, ೨೦೧೧.

೪೬. ಶ್ರೀನಿವಾಸಮೂರ್ತಿ ಎಂ.ಆರ್. ವಚನ ಧರ್ಮಸಾರ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೨೦೧೪.

೪೭. ಸರ್ಫ್ರಾಜ್, ಚಂದ್ರಗುತ್ತಿ ಅರಿವಿನ ಮಾರಿತಂದೆ, ಶ್ರೀ ಬಸವ ಅಧ್ಯಯನ ಪೀಠ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೨೦೧೫

೪೮. ಸಿದ್ದರಾಮ, ಹೊನ್ಕಲ್-ಸಕಲೇಶ ಮಾದರಸ, ಶ್ರೀ ಬಸವ ಅಧ್ಯಯನ ಪೀಠ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೨೦೧೫

೪೯. ಹಂಪಣ್ಣ ಎ.ಕೆ., ಮಾದಾರ ಚನ್ನಯ್ಯ ಧೂಳಯ್ಯ, ಶ್ರೀ ಬಸವ ಅಧ್ಯಯನ ಪೀಠ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೨೦೧೫

೫೦. ಹಿರೇಮಠ ಬಿ.ಕೆ. (ಪ್ರ.ಸಂ ಮತ್ತು ಇತರರು), ಬೆಳಗಿನೊಳಗಣ ಬೆಳಗು, ಕೊಟ್ಟೂರುಸ್ವಾಮಿ ಕಲ್ಯಾಣ ಕೇಂದ್ರ, ಹೊಸಪೇಟೆ, ೨೦೧೦.

೫೧. ಹೊನ್ನಗಾನಹಳ್ಳಿ ಕರಿಯಣ್ಣ, ಸೂಳೆ ಸಂಕವ್ವೆ ಕಾಳವ್ವೆ ಮತ್ತು ಇತರರು, ಶ್ರೀ ಬಸವ ಅಧ್ಯಯನ ಪೀಠ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೨೦೧೫

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ